ಕರ್ನಾಟಕ ಸರ್ಕಾರ

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು

# ಯಕ್ಷೋಪಾಸಕರು

## ಭಾಗ - ೧

ಯಕ್ಷೋಪಾಸಕರು ಭಾಗ 1
JNANA001065



ಯಕ್ಷೋಪಾಸಕರು

# ಯಕ್ಷೋಪಾಸಕರು

**(ತೆಂಕು-ಬಡಗು ಯಕ್ಷ ಕಲಾವಿದರ ಪರಿಚಯ)**

## ಭಾಗ-೧

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

2010

YAKSHOPASAKARU: Introduction of Yakshagana Artistes

Published by: Padmaja Kumari N.

Registrar

Karnataka Yakshagana Bayalata Academy, 2nd Floor, Kannada Bhavana,

J.C. Road, Bangalore - 560 002

Edition : 2011
Pages : xvi+300
Copies:1000
Price: Rs. 100/-
ಹಕ್ಕುಗಳು:ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಮುದ್ರಣ:೨೦೧೧

ಪುಟಗಳು:xvi+300

ಪ್ರತಿಗಳು: 0000

ಬೆಲೆ: ರೂ. ೧೦೦/-

ಪ್ರಧಾನ ಸಂಪಾದಕರು :

**ಕುಂಬಳೆ ಸುಂದರ ರಾವ್**

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಪ್ರಕಾಶಕರು

**ಶ್ರೀಮತಿ ಪದ್ಮಜ ಕುಮಾರಿ ಎನ್.**

ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

೨ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ,

ಬೆಂಗಳೂರು-೫೬೦ ೦೦೨

ಮುದ್ರಕರು :

**ಸುಮ ಪ್ರಿಂಟ್ಸ್**

ನಂ.12, 2ನೇ ಮುಖ್ಯ ರಸ್ತೆ, ವಿನಾಯಕನಗರ,

ಆಡುಗೋಡಿ ಪೋಸ್ಟ್, ಬೆಂಗಳೂರು 560 030

ದೂರವಾಣಿ 080-22115218- 91644 52451

# ಇರುಳು ಬೆಳಗುವ ಕಲಾವಿದರತ್ತ ಅಕ್ಷರದ ಬೆಳಕು!

ಕಾಲ ಬದಲಾದಂತೆ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸುವ ವಿಧಾನವೂ ಬದಲಾಗಿದೆ. ಮೌಖಿಕ ರೂಪದಲ್ಲಿದ್ದ ಕಲೆ - ಸಂಸ್ಕೃತಿ, ಆಧುನಿಕವಾದ ಈ ಕಾಲದಲ್ಲಿ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಅಕ್ಷರರೂಪದಲ್ಲಿ, ಧ್ವನಿರೂಪದಲ್ಲಿ, ದೃಶ್ಯರೂಪದಲ್ಲಿ ದಾಖಲುಗೊಂಡು ಪರಂಪರೆಯ ಹೊಸವಾಹಿನಿಗಳಾಗಿ ಸಾಗುತ್ತಿವೆ. ಇಂಥ ಸಂದರ್ಭದಲ್ಲಿ, ಕರೆನಾಡು - ಮಲೆನಾಡುಗಳ ಇರುಳುಗಳನ್ನು ಬೆಳಗಿಸುತ್ತಾ ಯಕ್ಷಗಾನ ಕಲೆಯನ್ನು ಜೀವಂತವಾಗಿರಿಸಿರುವ ಕಲಾವಿದರ ವಿವರಗಳನ್ನು ಅಕ್ಷರರೂಪದಲ್ಲಿ ದಾಖಲಿಸುವುದು ಅಗತ್ಯವಲ್ಲವೆ, ಎಂಬ ಯೋಚನೆ ಯಕ್ಷಗಾನ ಬಯಲಾಟ ಅಕಾಡೆಮಿಗೆ ಬಂದದ್ದೇ ಈ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ದಾರಿಯಾಯಿತು.

ಅದರ ಫಲವಾಗಿ ಈ ಸಂಪುಟ ನಿಮ್ಮ ಕೈಯಲ್ಲಿದೆ. ಎರಡನೆಯ ಸಂಪುಟ ಈಗ ಮುದ್ರಣ ಹಂತದಲ್ಲಿದೆ.

ಎಲ್ಲ ಕಲಾವಿದರಂತೆ ಮೇಳದ ಚೌಕಿಯಲ್ಲಿದ್ದು, ಮುಂದೆ ರಾಜಕೀಯ ಕ್ಷೇತ್ರ ಸೇರಿ, ಯಕ್ಷಗಾನ ಬಯಲಾಟಕ್ಕೆ ಒಂದು ಪ್ರತ್ಯೇಕ ಅಕಾಡೆಮಿ ಬೇಕು ಎಂದು ಕನಸು ಕಾಣುತ್ತಿದ್ದ ನನ್ನ ಹೆಸರು ಕೂಡ ಈ ಸಂಪುಟದಲ್ಲಿ ಉಲ್ಲೇಖವಾಗಿರುವುದು ನನಗೆ ಹೆಮ್ಮೆಯೆನಿಸಿದೆ. ನನ್ನದೇನು, ಈ ನಾಡಿನ ಸಾವಿರಾರು ಕಲಾವಿದರ ಮತ್ತು ಕಲಾರಸಿಕರ ಹಾರೈಕೆಯ ಫಲವಾಗಿ, ಘನ ಸರಕಾರ ಯಕ್ಷಗಾನದ ಪರಂಪರೆಗೆ ಸಂಬಂಧಿಸಿದ ವಿವಿಧ ಪ್ರಕಾರಗಳನ್ನು ಸೇರಿಸಿ 'ಯಕ್ಷಗಾನ ಬಯಲಾಟ ಅಕಾಡೆಮಿ'ಯನ್ನು ಘೋಷಿಸಿದ ದಿನ ಯಕ್ಷ ಪ್ರಪಂಚದ ಎಲ್ಲರೂ ಪುಳಕಿತರಾದರು. ಮುಂದೆ, ಅಕಾಡೆಮಿಗೆ ಅಧ್ಯಕ್ಷರು, ಸದಸ್ಯರು ನೇಮಕವಾಗಿ ವಿಧ್ಯುಕ್ತವಾಗಿ ಚಟುವಟಿಕೆಗಳು ಆರಂಭವಾಗಿಯೇ ಬಿಟ್ಟಿತು.

ನಾವು ಕಾರ್ಯೋನ್ಮುಖರಾದಾಗ, ಜಾನಪದ ಅಕಾಡೆಮಿಯ ಜೊತೆಗಿದ್ದ ಯಕ್ಷಗಾನ ಕಲೆಗೆ ಪ್ರತ್ಯೇಕ ಸ್ವರೂಪದ ಸಾಂಸ್ಥಿಕ ಆಯಾಮ, ಕಾರ್ಯ ವೈಖರಿ ಇರಬೇಕಾದ ಅಗತ್ಯ ಕಂಡುಬಂತು. ಅಸಾಮಾನ್ಯರು ಪೋಷಿಸಿಕೊಂಡು ಬಂದ ಈ ರಂಗವೃತ್ತಿ, 'ರಂಗಭೂಮಿ'ಯಾಗಿ, ವ್ಯಾಪಕವಾದ ಹರವನ್ನು ಹೊಂದಿದ್ದು, ಅದಕ್ಕೆ ತಕ್ಕಂತೆ ಕಾರ್ಯಸೂಚಿಯನ್ನು ಹಾಕಿಕೊಳ್ಳುವುದು ಅನಿವಾರ್ಯವೆನಿಸಿತು. ಅದಕ್ಕಾಗಿ ಸದಸ್ಯರ ಸಹಮತದೊಂದಿಗೆ ಕರ್ನಾಟಕದ ಕರಾವಳಿಯಿಂದ ತೊಡಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ಚಟುವಟಿಕೆಯನ್ನು ವಿಸ್ತರಿಸಬೇಕಾದ ಅಗತ್ಯ ಉಂಟಾಯಿತು. ಸರಕಾರದ ಅನುದಾನದ ಹೆಚ್ಚಳ, ಸದಸ್ಯರ ಉತ್ಸಾಹ ಜೊತೆ ಸೇರಿ, ಪ್ರದರ್ಶನಗಳು, ಶಿಬಿರಗಳು, ಅಭ್ಯಾಸ ವರ್ಗಗಳು ಏರ್ಪಾಟಾಗತೊಡಗಿದವು. ಹಿಂದೆ ಅಕಾಡೆಮಿ ವತಿಯಿಂದ ವರ್ಷಕ್ಕೆ ಮೂರು ಮಂದಿಗೆ ಇದ್ದ ಅಕಾಡೆಮಿ ಪ್ರಶಸ್ತಿಯನ್ನು ಹತ್ತು ಮಂದಿಗೆ ಹೆಚ್ಚಿಸುವುದಕ್ಕೆ ಮತ್ತು ಯಕ್ಷಗಾನದ ಸೀಮಾ ಪುರುಷನೆಂಬ ಕೀರ್ತಿಗೆ ಪಾತ್ರನಾದ ಪಾರ್ತಿಸುಬ್ಬನ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳ ಪ್ರಶಸ್ತಿಯನ್ನು ಪ್ರಕಟಿಸುವಂತೆ ಸರಕಾರವನ್ನು

ಕೇಳಿಕೊಳ್ಳಲಾಯಿತು. ಈ ಹೊಸ ಯೋಜನೆಗೆ ಒಪ್ಪಿಗೆ ದೊರೆತು ಅಕಾಡೆಮಿಯ ಎರಡು ವರ್ಷಗಳ ಪ್ರಶಸ್ತಿಯನ್ನು ಇಪ್ಪತ್ತು ಮಂದಿಗೆ ಹಾಗೂ ಪಾರ್ತಿಸುಬ್ಬ ಪ್ರಶಸ್ತಿಯನ್ನು ಇಬ್ಬರಿಗೆ ಪ್ರದಾನ ಮಾಡಿದವು.

ಯಕ್ಷಗಾನ ರಂಗದಲ್ಲಿ ಕಲಾವಿದರ ಕ್ಷೇಮಕ್ಕಾಗಿ ಕಲೆಯ ಪ್ರಗತಿಗಾಗಿ ಎಲ್ಲೆಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆಯೋ ಅಲ್ಲೆಲ್ಲ ಅಕಾಡೆಮಿಯ ಸಹಾಯಹಸ್ತ ಚಾಚಲ್ಪಡುತ್ತಿದೆ.

“ಶಿಕ್ಷಣದಲ್ಲಿ ಯಕ್ಷಗಾನ - ಯಕ್ಷಗಾನ ಶಿಕ್ಷಣ' ಕುರಿತ ರಾಜ್ಯಮಟ್ಟದ ಸಮ್ಮೇಳನವು ಸುಳ್ಯದಲ್ಲಿ ನಡೆಯಿತು. ಯಕ್ಷ ಶಿಕ್ಷಣಕ್ಕೆ ಬೇಕಾದ ಚೌಕಟ್ಟನ್ನು ನಿರ್ಧರಿಸಲಾಯಿತು. ಶಿವಮೊಗ್ಗದಲ್ಲಿ ಎಲ್ಲಾ ಕಲಾ ಪ್ರಕಾರದ ಪ್ರದರ್ಶನ, ಯಕ್ಷರಂಗ ದರ್ಶನ ಕಾರ್ಯಕ್ರಮ, ಕಿನ್ನಿಗೋಳಿಯಲ್ಲಿ ಯಕ್ಷಗಾನ ಆಂಗಿಕ ಅಭಿನಯದ ಬಗ್ಗೆ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆ, ಉಜಿರೆಯಲ್ಲಿ ಏಳು ದಿನಗಳ 'ಯುವ ವೃತ್ತಿಪರ ಯಕ್ಷಗಾನ ಕಲಾವಿದರ ಪುನಶ್ಚೇತನ ಶಿಬಿರ ಮಂಗಳೂರಿನಲ್ಲಿ 'ಸರಣಿ ಯಕ್ಷಗಾನ ತಾಳಮದ್ದಳೆ" ಕಾರ್ಯಕ್ರಮ, ಬೆಂಗಳೂರಿನಲ್ಲಿ ಯಕ್ಷಗಾನ ಮುಖವರ್ಣಿಕೆ

ಕಾರ್ಯಾಗಾರ ಪ್ರಾತ್ಯಕ್ಷಿಕೆ, ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಮೂಡಲಪಾಯ ಯಕ್ಷಗಾನದ ಪ್ರಾತ್ಯಕ್ಷಿಕೆ ಮತ್ತು ದಾಖಲಾತಿ, ಅರಳುಗುಪ್ಪೆಯಲ್ಲಿ ಮೂಡಲಪಾಯ ದೊಡ್ಡಾಟ ಯಕ್ಷಗಾನ ಸಮ್ಮೇಳನ-ವಿಚಾರ ಸಂಕಿರಣ ಕಾರ್ಯಕ್ರಮ, ಕಾರ್ಕಳದಲ್ಲಿ 'ಎರಡು ದಿನಗಳ ಯಕ್ಷಗಾನ ಪ್ರಾತ್ಯಕ್ಷಿಕೆ ಮತ್ತು ಹಿರಿಯ ವಿದ್ವಾಂಸರು/ ತಜ್ಞರಿಂದ ಯಕ್ಷಗಾನ ವಿಚಾರ ಗೋಷ್ಠಿ', ಮುಂಬೈನಲ್ಲಿ ಯಕ್ಷಗಾನೋತ್ಸವ, ಕಾಸರಗೋಡಿನಲ್ಲಿ 'ಯಕ್ಷಮನರ್ನವ, ಮಂಗಳೂರಿನಲ್ಲಿ 'ವಿದ್ಯಾರ್ಥಿ ಯಕ್ಷಗಾನ ಸಂಭ್ರಮ'. ಬೆಂಗಳೂರಿನಲ್ಲಿ 'ಯಕ್ಷಗಾನದಲ್ಲಿ ಅಭಿನಯ ಹಾಗೂ ಪ್ರಯೋಗ', ಉಜಿರೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗಡೆಯವರ ಅನುಗ್ರಹದೊಂದಿಗೆ ತೆಂಕು-ಬಡಗುತಿಟ್ಟಿನ ಕಲಾವಿದರನ್ನು ಕಲೆ ಹಾಕಿ ಒಂದು ವಾರದ ಮನಶ್ಚೇತನ ಶಿಬಿರವನ್ನು ಏರ್ಪಡಿಸಿದ್ದಾಯಿತು. ಉಡುಪಿಯಲ್ಲಿ ಪ್ರಸಂಗ ರಚನಾ ಕಮ್ಮಟವನ್ನು ಏರ್ಪಡಿಸಿ ಅನೇಕ ಕವಿಗಳ ಛಂದಸ್ಸಿನ ವಿದ್ವಾಂಸರ ಸಹಯೋಗವನ್ನು ಏರ್ಪಡಿಸಿದ್ದಾಯಿತು. ಅಂದು ಮಂಡಿಸಲ್ಪಟ್ಟ ಪ್ರಬಂಧಗಳು ಮುದ್ರಣ ಯೋಗ್ಯವಾಗಿರುವುದು ವಿಶೇಷ ಸಂಗತಿಯಾಗಿದ್ದು, ಅವುಗಳನ್ನು ಸಂಕಲನ ರೂಪದಲ್ಲಿ ದಾಖಲೆಗೊಳಿಸುವ ಚಿಂತನೆಯು ಅಕಾಡೆಮಿಯಲ್ಲಿ ನಡೆದಿದೆ. ಈ ಮಧ್ಯೆ ಶೇಣಿಯವರ 'ಶೇಣಿ ಭಾರತ'ವನ್ನು ಪುನರ್ ಮುದ್ರಣಕ್ಕೆ ಅಣಿಗೊಳಿಸುವ ಯೋಜನೆಯು ಸಿದ್ಧವಾಗಿದೆ.

ಯಕ್ಷಗಾನದ ಉಭಯ ತಿಟ್ಟುಗಳ ಕಲಾವಿದರ ದಾಖಲೀಕರಣದ ಯೋಜನೆ ಹಿಂದೆಯೇ ಅನುಮೋದನೆ ಪಡೆದಿತ್ತು. ಈಗ ಅದು ಈ ಪುಸ್ತಕದ ರೂಪದಲ್ಲಿ ಕಾರ್ಯರೂಪಕ್ಕೆ ಬರುತ್ತಿದೆ. ಮೊದಲನೆ ಯೋಜನೆಯಡಿ ಎರಡು ಸಂಪುಟಗಳನ್ನು ಹೊರತರಲಾಗುತ್ತಿದ್ದು ಒಟ್ಟು ಆರು ನೂರು ಕಲಾವಿದರ ವಿವರಗಳು ಇವುಗಳಲ್ಲಿ ದಾಖಲಾಗಿವೆ. ಇವುಗಳಲ್ಲಿ ಪರಿಗಣಿಸಲಾಗಿರುವ ಹೆಚ್ಚಿನ ಕಲಾವಿದರು ಈಗಲೂ ಕಲಾ ವ್ಯವಸಾಯ ಮಾಡುತ್ತಿರುವವರು. ಕೆಲವರು

ನಿವೃತ್ತರಾಗಿದ್ದರೆ, ಇನ್ನು ಕೆಲವರು ಹವ್ಯಾಸಿ ರಂಗದಲ್ಲಿ ಪ್ರವೃತ್ತರಾಗಿರುವವರು. ಒಂದು ಸಂಪುಟದಲ್ಲಿ ಪ್ರತೀ ತಿಟ್ಟಿನ ಒಟ್ಟು ಮುನ್ನೂರು ಕಲಾವಿದರ ಸಂಕ್ಷಿಪ್ತ ಪರಿಚಯವಿದೆ.

ಈ ಸಂಪುಟಗಳು ಕನಿಷ್ಠ ಹತ್ತು ವರ್ಷ ಮೇಳದ ತಿರುಗಾಟವನ್ನು ಹೊಂದಿರುವ ಕಲಾವಿದರ ವಿವರಗಳನ್ನಷ್ಟೇ ಒಳಗೊಂಡಿದೆ. ಆದಾಗ್ಯೂ ಈ ಸಂಪುಟಗಳು ಸಮಗ್ರವಾಗಿವೆಯೆಂದು ಹೇಳುವ ಧೈರ್ಯ ನಮಗಿಲ್ಲ. ವಿಸ್ತಾರವಾದ ಭೌಗೋಳಿಕ ಪರಸರದಲ್ಲಿ ಹರಡಿಕೊಂಡಿರುವ ಈ ಕಲೆಯಲ್ಲಿ ನಿಡುಗಾಲ ದುಡಿದ ಕೆಲವು ಕಲಾವಿದರಾದರೂ ನಮ್ಮ ಪರಿಗಣನೆಯಿಂದ ಹೊರಗುಳಿದಿರಬಹುದು. ಕೆಲವರು ಪ್ರಸಿದ್ಧಿಯ ಬೆಳಕಿನ ಮರೆಯಲ್ಲಿರಬಹುದು. ಇನ್ನೂ ಕೆಲವರು ದೂರದ ಊರುಗಳಲ್ಲಿರಬಹುದು. ಹಾಗಾಗಿ ಹೆಸರು ಬಿಟ್ಟು ಹೋಗಿರುವುದು ಉದ್ದೇಶಪೂರ್ವಕವಲ್ಲ. ತಾಂತ್ರಿಕ ಕಾರಣದಿಂದಾದ ಪ್ರಮಾದವೆಂದು ತಿಳಿಯಬೇಕೆಂದು ಕೋರಿಕೆ. ಮುಂದಿನ ಸಂಪುಟಗಳಲ್ಲಿ ಅಂಥವರ ವಿವರಗಳು ಬರುವಂತೆ ನೋಡಿಕೊಳ್ಳುತ್ತೇವೆ ಎಂದಷ್ಟೇ ಇಲ್ಲಿ ಹೇಳಬಹುದು.

ಈ ಕೃತಿ ಮೈದಳೆಯುವಲ್ಲಿ ಮಾರ್ಗದರ್ಶಕರಾಗಿ ಸಹಕರಿಸಿದ ಈ ಸಂಗ್ರಹದ ಕನಸನ್ನು ಹೊತ್ತು, ಗ್ರಂಥ ಹೊರಬರುವಲ್ಲಿ ಮಾರ್ಗದರ್ಶಕರಾಗಿ ಸಹಕರಿಸಿದ ಅಕಾಡೆಮಿಯ ಸದಸ್ಯರಾದ ಮುರಳಿ ಕಡೆಕಾರ್ ಮತ್ತು ಡಾ. ಸುಂದರ್ ಕೇನಾಜೆಯವರ ಹೆಸರುಗಳನ್ನು ನಾನಿಲ್ಲಿ ಉಲ್ಲೇಖಿಸಲೇಬೇಕು ಹಾಗೂ ಅಭಿನಂದಿಸಲೇಬೇಕು. ಈ ಕಾರ್ಯದಲ್ಲಿ ಸಂಗ್ರಹಕಾರರಾಗಿ ಶ್ರಮಿಸಿದ ಕಲಾವಿದರೂ, ಯಕ್ಷಗಾನದ ಕುರಿತು ಆಳವಾದ ಅಸ್ಥೆಯುಳ್ಳವರೂ ಆದ ಡಾ. ದಿನಕರ ಎಸ್. ಪಚ್ಚನಾಡಿ ಮತ್ತು ಪ್ರಸಾದ ಕುಮಾರ್ ಮೊಗೆಬೆಟ್ಟು ಅಭಿನಂದನೆಗೆ ಅರ್ಹರಾಗಿದ್ದಾರೆ. ಈ ಪುಸ್ತಕ ಹೊರಬರಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಪದ್ಮಜಕುಮಾರಿ ಎನ್. ಅವರಿಗೂ, ಅಕಾಡೆಮಿಯ ಸಿಬ್ಬಂದಿಯವರಿಗೂ ಅಭಿನಂದನೆಗಳು.

ಕಲೆಗೆ ಮತ್ತು ಕಲಾವಿದರಿಗೆ ಸಂಬಂಧಿಸಿದ ದಾಖಲಾತಿ ಕೆಲಸಗಳನ್ನು ಮುಂದುವರಿಸುವ ಹೆಬ್ಬಯಕೆ ಅಕಾಡೆಮಿಗಿದೆ. ಸಹೃದಯರಾದ ನಿಮ್ಮ ಸಲಹೆ – ಸಹಕಾರ ನಮ್ಮ ಮಾರ್ಗವನ್ನು ಇನ್ನಷ್ಟು ಸ್ಪಷ್ಟವಾಗಿರಸುತ್ತದೆಂಬ ವಿಶ್ವಾಸ.

**(ಕುಂಬಳೆ ಸುಂದರ ರಾವ್)**

ಅಧ್ಯಕ್ಷರು

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

# ಪರಿವಿಡಿ

| ಕ್ರ.ಸಂ. | ವಿವರ | ಪುಟ |
|---|---|---|

## ತೆಂಕುತಿಟ್ಟು ಕಲಾವಿದರು


| | | |
|---|---|---|
| 1. | ಅಣ್ಣಪ್ಪ ಮಿಜಾರು | 1 |
| 2. | ಅಶೋಕ ಶೆಟ್ಟಿ ಸರಪಾಡಿ | 2 |
| 3. | ಅಪ್ಪ ಕುಂಞ ಮಣಿಯಾಣಿ | 3 |
| 4. | ಅಂಬಾ ಪ್ರಸಾದ್ ಪಾತಾಳ | 4 |
| 5. | ಅಶೋಕ ಆಚಾರ್ಯ ವೇಣೂರು | 5 |
| 6. | ಆನಂದ ಪಡ್ರೆ | 6 |
| 7. | ಉಮೇಶ ಶೆಟ್ಟಿ, ಉಬರಡ್ಕ | 7 |
| 8. | ಉಮಾಮಹೇಶ್ವರ ಶರ್ಮ ಎಚ್. | 8 |
| 9. | ಐತಪ್ಪ ಗೌಡ | 9 |
| 10. | ಕರುಣಾಕರ ಶೆಟ್ಟಿಗಾರ, ಕಾಶೀಪಟ್ಣ | 10 |
| 11. | ಕುಮಾರ ಪಡ್ರೆ | 11 |
| 12. | ಕೊರಗಪ್ಪ ಮಾಡವು | 12 |
| 13. | ಕೊರಗಪ್ಪ ಶೆಟ್ಟಿ ಅರುವ | 13 |
| 14. | ಕೃಷ್ಣ ಮೂಲ್ಯ ಎ. ಕೈರಂಗಳ | 14 |
| 15. | ಕೃಷ್ಣ ನಾಯ್ಕ ಪಕಳ ಕುಂಜ | 15 |
| 16. | ಗಣಪತಿ ಶಾಸ್ತ್ರಿ ಕುರಿಯ | 16 |

17. ಗಣಪತಿ ಭಟ್ ಪದ್ಯಾಣ 17

18. ಗಣೇಶ್ ರಾವ್ ಅಡೂರು 18

19. ಗಣೇಶ್ ಕುಂದರ್, ಕೊಳಂಬೆ 19

20. ಗಣೇಶ್ ಭಟ್ ಟಿ.ಕೆ. ಹಳುವಳ್ಳಿ 20

21. ಗಂಗಯ್ಯ ಶೆಟ್ಟಿ ಗೇರುಕಟ್ಟೆ 21

22. ಗಂಗಾಧರ ಶೆಟ್ಟಿ, ನಾವೂರು 22

23. ಗಂಗಾಧರ ಪುತ್ತೂರು 23

24. ಗೋವಿಂದ ಭಟ್ ಕೆ. ಸೂರಿಕುಮೇರಿ 24

25. ಗೋಪಾಲ ಕೃಷ್ಣ ಭಟ್ ಗುಂಡಿಮಜಲು 25

26. ಗೋವಿಂದ ಭಟ್ ನಿಡ್ಲೆ 26

27. ಗೋಪಾಲ ಭಟ್ ಕೋಳ್ಯೂರು 27

28. ಗೋಪಾಲಕೃಷ್ಣ ಬೆಳ್ಯಾರೆ 28

29. ಚಂದ್ರಶೇಖರ ಧರ್ಮಸ್ಥಳ 29

30. ಚಂದ್ರಶೇಖರ, ಕೊಂಕಣಾಜೆ 30

31. ಚಂದ್ರಶೇಖರ ಬನಾರಿ 31

32. ಚಿದಂಬರ ಬಾಬು 32

33. ಚೆನ್ನಪ್ಪ ಶೆಟ್ಟಿ ಆರ್. ಸಿದ್ಧಕಟ್ಟೆ 33

34. ಜಯರಾಮ್ ಭಟ್ ಕೆದಿಲ 34

35. ಜಯಪ್ರಕಾಶ್ ಶೆಟ್ಟಿ ಪೆರ್ಮುದೆ 35

36. ಜಯರಾಮ ಭಟ್ ಪದ್ಯಾಣ 36

37. ಜಯರಾಮ ಆಚಾರ್ಯ ಬಂಟ್ವಾಳ್ 37

38. ಜನಾರ್ಧನ ಜೋಗಿ ಮಂಜೇಶ್ವರ 38

39. ಜಯಕುಮಾರ್ ಉದ್ಯಾವರ 39

40. ಜನಾರ್ಧನ ಎನ್, ಕಾರ್ವಿ 40

41. ಜಯಾನಂದ ಸಂಪಾಜೆ 41

42. ಜಗನ್ನಾಥ ಶೆಟ್ಟಿ ಪೆರ್ಲ 42

43. ಜಯರಾಮ ಶೆಟ್ಟಿ ಬೋಳಂತೂರು 43

44. ಜನಾರ್ಧನ ಬಜಾಲ್ 44

45. ತಾರಾನಾಥ ವರ್ಕಾಡಿ 45

46. ತಿಮ್ಮಪ್ಪ ಮಿಜಾರು 46

47. ದಯಾನಂದ ಶೆಟ್ಟಿ ಜಪ್ಪು 47

48. ದಾಸಪ್ಪ ರೈ, ಕೆ.ಎಚ್. 48

49. ದಿನೇಶ ಅಮ್ಮಣ್ಣಾಯ 49

50. ದಿನೇಶ ಶೆಟ್ಟಿ ಕಾವಳಕಟ್ಟೆ 50

51. ದಿನಕರ ಆರ್. ಗೋಖಲೆ 51

52. ದಿವಾಕರ ರೈ ಸಂಪಾಜೆ 52

53. ದಿನೇಶ ರೈ ಕಡಬ 53

54. ನಾರಾಯಣ ಭಾಗವತ ಬಲಿಪ 54

55. ನಾರಾಯಣ ಹಾಸ್ಯಗಾರ ನೆಲ್ಲಿಕಟ್ಟೆ 55

| | | |
|---|---|---|
| 56. | ನಾರಾಯಣ ಗೌಡ ಕೊಳಿಗೆ | 56 |
| 57. | ನಾರಾಯಣ ಭಟ್ ಪೆರುವಾಡಿ | 57 |
| 58. | ನಾರಾಯಣ ಶೆಟ್ಟಿ ಕೆ.ಪಿ. ಪೆರುವಾಯಿ | 58 |
| 59. | ನಾರಾಯಣ ಕುಲಾಲ್ | 59 |
| 60. | ನಾರಾಯಣ ಪಾಟಾಳಿ ಪಡುಮಲೆ | 60 |
| 61. | ನಾರಾಯಣ ಶೆಟ್ಟಿ, ಅರುವ | 61 |
| 62. | ನಾರಾಯಣ ಸುವರ್ಣ | 62 |
| 63. | ಪದ್ಮನಾಭ ಉಪಾಧ್ಯ | 63 |
| 64. | ಪದ್ಮನಾಭ ಶೆಟ್ಟಿಗಾರ್ ಎಸ್. | 64 |
| 65. | ಪ್ರಭಾಕರ ಗೋರೆ ಎಂ. | 65 |
| 66. | ಪ್ರಜ್ವಲ್ ಕುಮಾರ್ ಶೆಟ್ಟಿ | 66 |
| 67. | ಪ್ರಸಾದ ಭಟ್ಬಲಿಪ | 67 |
| 68. | ಪುರುಷೋತ್ತಮ ಭಟ್ ಕಡಂದೇಲು | 68 |
| 69. | ಪುಂಡರೀಕಾಕ್ಷ ಉಪಾಧ್ಯಾಯ | 69 |
| 70. | ಪುರುಷೋತ್ತಮ ಪೂಂಜ ಬೊಟ್ಟಿಗೆರೆ | 70 |
| 71. | ಬಾಲಕೃಷ್ಣ ಕಾಟುಕುಕ್ಕೆ | 71 |
| 72. | ಬಾಬು ಕುಲಾಲ್ | 72 |
| 73. | ಬಾಲಕೃಷ್ಣ ಶೆಟ್ಟಿ, ತಾರಿಯಡ್ಕ | 73 |

| ಕ್ರ.ಸಂ. | ವಿವರ | ಪುಟ |
|---|---|---|
| 74. | ಬಾಬು ಕುದ್ತಡ್ಕ | 74 |
| 75. | ಬಾಲಕೃಷ್ಣ ಮಣಿಯಾಣಿ ಮವ್ವಾರು | 75 |
| 76. | ಮನೋಹರ ಕುಮಾರ್ ಡಿ. | 76 |
| 77. | ಮಹೇಶ ಮಣಿಯಾಣಿ | 77 |
| 78. | ಮಹಾಬಲ ರೈ ನಗ್ರಿ | 78 |
| 79. | ಮಹಾಬಲ ಶೆಟ್ಟಿ ಪಟ್ಲಗುತ್ತು | 79 |
| 80. | ಮಹಾಲಿಂಗ ಭಟ್ ಹೊಸಹಿತ್ತು | 80 |
| 81. | ಮುರಳೀಧರ ಶೆಟ್ಟಿಗಾರ್ ಕನ್ನಡಿಕಟ್ಟೆ | 81 |
| 82. | ಮೋಹನ್ ಶೆಟ್ಟಿಗಾರ್, ಮಿಜಾರು | 82 |
| 83. | ಮೋಹನ ಕುಮಾರ್ ಅಮ್ಮುಂಜೆ | 83 |
| 84. | ಮಹಾಬಲ ಶೆಟ್ಟಿ, ಮಂಗಲ್ಪಾಡಿ | 84 |
| 85. | ರಘರಾಮ ಹೊಳ್ಳ ಮುತ್ತಿಗೆ | 85 |
| 86. | ರಘುನಾಥ ಶೆಟ್ಟಿ ಬಾಯಾರು | 86 |
| 87. | ರಮೇಶ ಭಟ್ ಸರವು | 87 |
| 88. | ರವಿಚಂದ್ರ ಕನ್ನಡಿಕಟ್ಟೆ | 88 |
| 89. | ರಾಮಚಂದ್ರ ರಾವ್ ಕೋಳ್ಯೂರು | 89 |
| 90. | ರಾಮಕೃಷ್ಣ ರಾವ್ ರೆಂಜಾಳ | 90 |
| 91. | ರಾಮಕೃಷ್ಣ ಶೆಟ್ಟಿಗಾರ್ | 91 |
| 92. | ರಾಮಕೃಷ್ಣ ಮಯ್ಯ ಸಿರಿಬಾಗಿಲು | 92 |

| | | |
|---|---|---|
| 93. | ರಾಮ ಕುಲಾಲ್, ದಾಸನಡ್ಕ | 93 |
| 94. | ರಾಘವ ಜೋಡುಕಲ್ಲು | 94 |
| 95. | ರಾಜಾರಾಮ್ ಕುಲಾಲ್, ಬಂದಾರು | 95 |
| 96. | ಲಕ್ಷಣ ಗೌಡ ಬೆಳಾಲು | 96 |
| 97. | ಲಕ್ಷ್ಮಣ ಕಲ್ಲುಗುಡ್ಡೆ | 97 |
| 98. | ಲಕ್ಷ್ಮೀಶ ಅಮ್ಮಣ್ಣಾಯ | 98 |
| 99. | ಲಕ್ಷ್ಮಣ ಕೋಟ್ಯಾನ್ | 99 |
| 100. | ಲೀಲಾವತಿ ಬೈಪಾಡಿತ್ತಾಯ | 100 |
| 101. | ವೆಂಕಟೇಶ ಆಚಾರ್ಯ ಕಲ್ಲುಗುಂಡಿ | 101 |
| 102. | ವೆಂಕಟರಮಣ ಭಟ್ ಪಾತಾಳ | 102 |
| 103. | ವಿಶ್ವನಾಥ ಶೆಟ್ಟಿ ಸಿದ್ದಕಟ್ಟೆ | 103 |
| 104. | ವಿಶ್ವನಾಆಥ ನಾಯಕ್ ಕಾರಿಂಜ | 104 |
| 105. | ವಿಶ್ವನಾಥ ರೈ ಕೆ. ಬೆಳ್ಳಾರೆ | 105 |
| 106. | ವಿಶ್ವೇಶ್ವರ ಭಟ್ ಕೆ. ಸುಣ್ಣಂಬಳ | 106 |
| 107. | ವಿಶ್ವನಾಥ ಗೌಡ ತೋಡಿಕಾನ | 107 |
| 108. | ವಿಷ್ಣುಶರ್ಮ ವಾಟೆಪಡ್ಡು | 108 |
| 109. | ವಿನೋದ ರೈ ಸೊರಕೆ | 109 |
| 110. | ವಿಠಲ ಸರಪಾಡಿ | 110 |
| 111. | ಶಂಕರನಾರಾಯಣ ಭಟ್ ಪದ್ಯಾಣ | 111 |

| ಕ್ರ.ಸಂ. | ವಿವರ | ಪುಟ |
|---|---|---|
| 112. | ಶಂಭಯ್ಯ ಕಂಜರ್ಪಣೆ | 112 |
| 113. | ಶೀನ ಭಂಡಾರಿ ಪುತ್ತೂರು | 113 |
| 114. | ಶೀನಪ್ಪ ರೈ, ಸಂಪಾಜೆ | 114 |
| 115. | ಶಿವರಾಜ ಜೋಗಿ ಬಿ.ಸಿ. ರೋಡ್ | 115 |
| 116. | ಶಿವ ಪ್ರಸಾದ್ ಭಟ್ | 116 |
| 117. | ಶಿವರಾಮ ಶೆಟ್ಟಿ | 117 |
| 118. | ಶ್ರೀಧರ ರಾವ್ ಕುಬಣೂರು | 118 |
| 119. | ಶ್ರೀಧರ ರಾವ್ ಕುಂಬ್ಳೆ | 119 |
| 120. | ಶ್ರೀಧರ ಭಂಡಾರಿ ಪುತ್ತೂರು | 120 |
| 121. | ಶ್ರೀನಿವಾಸ ಜಿ. ಬಳ್ಳಮಂಜ | 121 |
| 122 | .ಶ್ರೀಧರ ಪೂಜಾರಿ ಪಂಜಾಜೆ | 122 |
| 123. | ಶ್ರೀಧರ ಪಡೆ | 123 |
| 124. | ಶೇಖರ ಭಂಡಾರಿ | 124 |
| 125. | ಸದಾಶಿವ ಶೆಟ್ಟಿ ಮುಂಡಾಜೆ | 125 |
| 126. | ಸತೀಶ್ ಶೆಟ್ಟಿ ಪಟ್ಲ | 126 |
| 127. | ಸತೀಶ್ ಕುಮಾರ್ ಎನ್. | 127 |
| 128. | ಸಂಜೀವ ರೈ ಕಾಂಚನ | 128 |
| 129. | ಸಂಜಯ ಕುಮಾರ್ ಶೆಟ್ಟಿ | 129 |
| 130. | ಸಂಜೀವ ಬಳೆಗಾರ ಎಸ್. | 130 |

| | | |
|---|---|---|
| 131. | ಸದಾಶಿವ ಶೆಟ್ಟಿ ಸಿದ್ಧಕಟ್ಟೆ | 131 |
| 132. | ಸದಾಶಿವ ಆಚಾರಿ ಕೆ. | 132 |
| 133. | ಸದಾಶಿವ ಕುಲಾಲ್ ವೇಣೂರು | 133 |
| 134. | ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆ | 134 |
| 135. | ಸಂತೋಷ್ ಕುಮಾರ್ ಡಿ. | 135 |
| 136. | ಸತೀಶ ನೈನಾಡು | 136 |
| 137. | ಸೀತಾರಾಮ ಕುಮಾರ್ ಕಟೀಲು | 137 |
| 138. | ಸುಂದರ ರಾವ್ ಕುಂಬ್ಳೆ | 138 |
| 139. | ಸುರೇಶ್ ಹೆಗ್ಡೆ | 139 |
| 140. | ಸುಬ್ಬಯ್ಯ ಶೆಟ್ಟಿ ಬೋಳಾರ | 140 |
| 141. | ಸುಬ್ರಹ್ಮಣ್ಯ ಭಟ್ ಮಾಂಬಾಡಿ | 141 |
| 142. | ಸುಬ್ರಹ್ಮಣ್ಯ ಶಾಸ್ತ್ರಿ | 142 |
| 143. | ಸುಕುಮಾರ್ ಬಳ್ಳಾಲ್ | 143 |
| 144 | .ಸುಬ್ರಾಯ ಹೊಳ್ಳ ಎನ್. ಕಾಸರಗೋಡು | 144 |
| 145. | ಸುರೇಶ ಕುಪ್ಪೆಪದವು | 145 |
| 146. | ಸುಬ್ರಾಯ ಸಂಪಾಜೆ | 146 |
| 147. | ಸುಬ್ರಹ್ಮಣ್ಯ ವಿಷ್ಣ ಹೆಗಡೆ ಯಲಗುಪ್ಪ | 147 |
| 148. | ಸೂರ್ಯ ನಾರಾಯಣ ಭಟ್, ಕಣಿಯೂರು | 148 |
| 149. | ಹರಿನಾರಾಯಣ ಭಟ್ ಎಡನೀರು | 149 |
| 150. | ಹರಿನಾರಾಯಣ ಬೈಪಡಿತ್ತಾಯ | 150 |

| ಕ್ರ.ಸಂ. | ವಿವರ | ಪುಟ |
|---|---|---|

# ಬಡಗುತಿಟ್ಟು ಕಲಾವಿದರು


| | | |
|---|---|---|
| 1. | ಅಣ್ಣಪ್ಪ ಕುಲಾಲ್, ಶಿರೂರು | 151 |
| 2. | ಅನಂತ ಕುಲಾಲ್, ಕಕ್ಕುಂಜೆ | 152 |
| 3. | ಅನಂತ ಪದ್ಮನಾಭ, ಎಚ್. ಎಸ್. | 153 |
| 4. | ಅರುಣಕುಮಾರ ಶೆಟ್ಟಿ, ಆಜ್ರಿ | 154 |
| 5. | ಆನಂದ ಶೆಟ್ಟಿ, ಐರಬೈಲು | 155 |
| 6. | ಅಶೋಕ ಭಟ್, ಸಿದ್ದಾಪುರ | 156 |
| 7. | ಆನಂದ ಶೆಟ್ಟಿ, ಮಜ್ಜಿಗೆಬೈಲು | 157 |
| 8. | ಉಮೇಶ ಸುವರ್ಣ, ಗೋಪಾಡಿ | 158 |
| 9. | ಎಂ. ಎ ನಾಯ್ಕ | 159 |
| 10. | ಕುಷ್ಟ ಮಡಿವಾಳ, ವಾಲ್ಲೂರು | 160 |
| 11. | ಕೃಷ್ಣ ಕೊಡೇರಿ | 161 |
| 12. | ಕೃಷ್ಣ, ಕೊಳಲಿ | 162 |
| 13. | ಕೃಷ್ಣ ಗಾಣಿಗ, ಹೊಸಂಗಡಿ | 163 |
| 14. | ಕೃಷ್ಣ, ಚಕ್ರಮೈದಾನ | 164 |
| 15. | ಕೃಷ್ಣ ಜಿ. ಬೇಡ್ಕಣಿ | 165 |
| 16. | ಕೃಷ್ಣ ನಾಯ್ಕ, ಹಳ್ಳಾಡಿ | 166 |
| 17. | ಕೃಷ್ಣ ಪರಮೇಶ್ವರ ಹೆಗಡೆ (ಕೆ. ಪಿ ಹೆಗಡೆ) | 167 |
| 18. | ಕೃಷ್ಣಯಾಜಿ, ಬಳ್ಕೂರು | 168 |

| | | |
|---|---|---|
| 19. | ಕೃಷ್ಣ ಹಾಲಾಡಿ | 169 |
| 20. | ಕೇಶವ ಬಳೆಗಾರ್, ಕೋಟ | 170 |
| 21. | ಕೇಶವ ಹೆಗಡೆ, ಕೊಳಗಿ | 171 |
| 22. | ಕೊಗ್ಗ ಆಚಾರ್, ಕೊಲ್ಲೂರು | 172 |
| 23. | ಗಣಪತಿ ಭಟ್, ಕಣ್ಣಿಮನೆ | 173 |
| 24. | ಗಣಪತಿ ರಾಮಚಂದ್ರ ಭಾಗವತ್, ಕವ್ವಾಳೆ | 174 |
| 25. | ಗಣಪತಿ ಹೆಗಡೆ, ತೋಟಿಮನೆ | 175 |
| 26. | ಗೋಪಾಲ ಆಚಾರ್ಯ, ತೀರ್ಥಹಳ್ಳಿ | 176 |
| 27. | ಗೋಪಾಲ ಗಾಣಿಗ, ಆದ್ರೆ | 177 |
| 28. | ಗೋಪಾಲ ಗಾಣಿಗ, ಹೆರಂಜಾಲು | 178 |
| 29. | ಗೋಪಾಲ ರಾವ್, ಹಿರಿಯಡಕ | 179 |
| 30. | ಗೋವಿಂದಪ್ಪ, ಐರೋಡಿ | 180 |
| 31. | ಗೋವಿಂದ ಶೇರಿಗಾರ್, ಮಾರ್ಗೋಳಿ | 181 |
| 32. | ಚಂದ್ರ ಆಚಾರ್ಯ, ಹಾಲಾಡಿ | 182 |
| 33. | ಚಂದ್ರಕುಮಾರ್, ನೀರ್ಜಡ್ಡು | 183 |
| 34. | ಚಂದ್ರ ಕುಲಾಲ್, ಹಾಲಾಡಿ | 184 |
| 35. | ಚಂದ್ರಗೌಡ, ಗೋಳಿಕೆರೆ | 185 |
| 36. | ಜಗದೀಶ ಹೆಗಡೆ, ಮಾಳ್ಕೊಡು | 186 |

| ಕ್ರ.ಸಂ. | ವಿವರ | ಪುಟ |
|---|---|---|
| 37. | ಜಗನ್ನಾಥ ಆಚಾರಿ, ಎಳ್ಳಂಪಳ್ಳಿ | 187 |
| 38. | ಜನಾರ್ದನ ಆಚಾರ, ಹಳ್ಳಾಡಿ | 188 |
| 39. | ಜನಾರ್ದನ ಗುಡಿಗಾರ, ಬಂಗಾಡಿ | 189 |
| 40. | ಜಯರಾಮ ಶೆಟ್ಟಿ, ಹಳ್ಳಾಡಿ | 190 |
| 41. | ಜಯಾನಂದ, ಹೊಳೆಕೊಪ್ಪ | 191 |
| 42. | ಜೋಗು ಕುಲಾಲ್ | 192 |
| 43. | ತಿಮ್ಮಪ್ಪ ನಾರಾಯಣ ಹೆಗಡೆ, ಶಿರಳಗಿ | 193 |
| 44. | ದಯಾನಂದ, ನಾಗೂರು | 194 |
| 45. | ದಿವಾಕರ, ಆವರ್ಸೆ | 195 |
| 46. | ದೇವದಾಸ ಶೆಣೈ, ಆಗೋ೯ಡು | 196 |
| 47. | ನರಸಿಂಹ ನಾಯ್ಕ, ಬೆದ್ರಾಡಿ | 197 |
| 48. | ನರಸಿಂಹ, ಮಾನ್ಯ | 198 |
| 49. | ನರಸಿಂಹ ಶೆಟ್ಟಿ, ಮತ್ಯಾಡಿ | 199 |
| 50. | ನಾಗಪ್ಪ ಗೋವಿಂದ ಗೌಡ, ಗುಣವಂತೆ | 200 |
| 51. | ನಾಗಪ್ಪ ಹಾಸ್ಯಗಾರ, ಹೊಳೆಮಗೆ | 201 |
| 52. | ನಾಗಯ್ಯ ಶೆಟ್ಟಿ, ವಂಡ್ಸೆ | 202 |
| 53. | ನಾಗು ಗೌಡ, ಕೆಂಜಿಮನೆ | 203 |
| 54. | ನಾಗೇಶ್ ಎ. ಎಸ್, ಕಮ್ಮರಡಿ | 204 |

| | | |
|---|---|---|
| 55. | ನಾಗೇಶ ಕುಲಾಲ | 205 |
| 56. | ನಾಗೇಶ ಗಾಣಿಗ, ಕೋಣಿ | 206 |
| 57. | ನಾಗೇಂದ್ರ ರಾವ್, ಉಪ್ಪುಂದ | 207 |
| 58. | ನಾರಾಯಣ ಗಾಣಿಗ, ವಂತ್ಸೆ | 208 |
| 59. | ನಾರಾಯಣ ದೇವಾಡಿಗ, ಚಿತ್ತೂರು | 209 |
| 60. | ನಾರಾಯಣ ಭಾಗವತ್, ನೆಲ್ಲೂರು | 210 |
| 61. | ನಾರಾಯಣ, ಸುಳಗೋಡು | 211 |
| 62. | ನಾರಾಯಣ ಹೆಗಡೆ, ಗೋಡೆ | 212 |
| 63. | ಪದ್ಮನಾಭ ಶೆಟ್ಟಿಗಾರ್, ಬೇಗಾರು | 213 |
| 64. | ಪರಮೇಶ್ವರ ನಾಯ್ಕ, ಕಾನಗೋಡ | 214 |
| 65. | ಪರಮೇಶ್ವರ ಪ್ರಭಾಕರ ಭಂಡಾರಿ, ಕರ್ಕಿ | 215 |
| 66. | ಪ್ರಭಾಕರ ಪಾಂಡುರಂಗ ಭಂಡಾರಿ, ಕರ್ಕಿ | 216 |
| 67. | ಪ್ರಶಾಂತ ವೆಂಕಟರಮಣ ಭಂಡಾರಿ | 217 |
| 68. | ಪುರಂದರ ಹೆಗಡೆ .ಎಚ್.ಜಿ | 218 |
| 69. | ಪೂವಪ್ಪ, ಕಡಬ | 219 |
| 70. | ಬಾಲಕೃಷ್ಣ ಗಾಣಿಗ, ಹೆರಂಜಾಲು | 220 |
| 71. | ಭಾಸ್ಕರ ಜೋಶಿ, ಶಿರಳಗಿ | 221 |
| 72. | ಭಾಸ್ಕರ ದೇವಾಡಿಗ, ಕುಪ್ಪಾರುಜಡ್ಡು | 222 |
| 73. | ಭಾಸ್ಕರ ತುಂಬ್ರಿ, ಎಚ್. ಬಿ. | 223 |
| 74. | ಭೋಜರಾಜ ಶೆಟ್ಟಿ, ನರಾಡಿ | 224 |

| ಕ್ರ.ಸಂ. | ವಿವರ | ಪುಟ |
| --- | --- | --- |
| 75. | ಮಹಾದೇವ ಈಶ್ವರ ಹೆಗಡೆ, ಕಪ್ಪೆಕೆರೆ | 225 |
| 76. | ಮಹಾದೇವ ನಾಯ್ಕ, ಅರಳಗೋಡು | 226 |
| 77. | ಮಹಾಬಲ ಗಾಣಿಗ, ನಾವುಂದ | 227 |
| 78. | ಮಹಾಬಲ ನಾಯ್ಕ, ಬೇಳಂಜೆ | 228 |
| 79. | ಮಹಾಬಲ ದೇವಾಡಿಗ, ಕಮಲಶಿಲೆ | 229 |
| 80. | ಮಹಾಬಲ ಶೆಟ್ಟಿ, ನೀಲಾವರ | 230 |
| 81. | ಮಾಧುನಾಯ್ಕ, ಪೇತ್ರಿ | 231 |
| 82. | ಮುಖ್ಯಪ್ರಾಣ, ಕಿನ್ನಿಗೋಳಿ | 232 |
| 83. | ಮೋಹನದಾಸ ಶೆಣೈ, ಆರ್ಗೋಡು | 233 |
| 84. | ಮಂಜಯ್ಯ ಶೆಟ್ಟಿ, ಹಳ್ಳಾಡಿ | 234 |
| 85. | ಮಂಜುನಾಥ, ಅರಾಟೆ | 235 |
| 86. | ರಘುರಾಮ ಎಂ. ಮಡಿವಾಳ | 236 |
| 87. | ರಮೇಶ ಆಚಾರ್ಯ ಎಂ. ಕೆ. | 237 |
| 88. | ರಮೇಶ್, ಬೇಲೂರು | 238 |
| 89. | ರಮೇಶ ಶಂಕರ ಭಂಡಾರಿ, ಕಡತೋಕ | 239 |
| 90. | ರವಿಕುಮಾರ್, ಸೂರಾಲು | 240 |
| 91. | ರಾಕೇಶ ಮಲ್ಯ, ಹಳ್ಳಾಡಿ | 241 |
| 92. | ರಾಘವೇಂದ್ರ ಮಯ್ಯ ಜಿ. | 242 |

| | | |
|---|---|---|
| 93. | ರಾಜೀವ ಶೆಟ್ಟಿ, ಹೊಸಂಗಡಿ | 243 |
| 94. | ರಾಧಾಕೃಷ್ಣ ನಾಯ್ಕ, ಚೇರ್ಕಾಡಿ | 244 |
| 95. | ರಾಮಕೃಷ್ಣ ಕುಂಜಾಲು | 245 |
| 96. | ರಾಮಕೃಷ್ಣ, ಮಂದಾರ್ತಿ | 246 |
| 97. | ರಾಮ ಚಂದನ್, ಹೆಮ್ಮಾಡಿ | 247 |
| 98. | ರಾಮಚಂದ್ರ ಶಾನುಭಾಗ, ಜಂಬೂರು | 248 |
| 99. | ರಾಮಚಂದ್ರ ಹೆಗಡೆ, ಕೊಂಡದಕುಳಿ | 249 |
| 100. | ರಾಮಚಂದ್ರ ಹೆಗಡೆ, ಚಿಟ್ಟಾಣಿ | 250 |
| 101. | ರಾಮದಾಸ್, ಮರವಂತೆ | 250 |
| 102. | ರಾಮಭಂಡಾರಿ, ಕರ್ಕಿ | 251 |
| 103. | ಲಕ್ಷಣ ಭಂಡಾರಿ, ಹೊಸಂಗಡಿ | 252 |
| 104. | ಲಕ್ಷ್ಮೀನಾರಾಯಣಯ್ಯ, ಸಕ್ಕಟ್ಟು | 253 |
| 105. | ಲಕ್ಷ್ಮೀನಾರಾಯಣ ಹೆಗಡೆ, ಎಸ್. ವಿ | 254 |
| 106. | ವಾಸುದೇವ ವಿಷ್ಣು ಭಟ್ | 255 |
| 107. | ವಿದ್ಯಾಧರ, ಜಲವಳ್ಳಿ | 256 |
| 108. | ವಿಶ್ವನಾಥ ಗಾಣಿಗ, ಕೋಡಿ | 257 |
| 109. | ವಿಶ್ವೇಶ್ವರ ಸೋಮಯಾಜಿ, ಎಂ. | 258 |
| 110. | ವಿಷ್ಣುಭಟ್, ಮೂರೂರು | 259 |
| 111. | ವಿಷ್ಣುಮೂರ್ತಿ ಬಾಸಿ ಕೆ. ಎಸ್. | 260 |
| 112. | ವಿಷ್ಣು ಸುಬ್ರಾಯ ಹೆಗಡೆ, ಹಿರೇಮಕ್ಕಿ | 261 |

| ಕ್ರ.ಸಂ. | ವಿವರ | ಪುಟ |
|---|---|---|


| | | |
|---|---|---|
| 113 | .ವೆಂಕಟೇಶ ರಾವ್, ಜಲವಳ್ಳಿ | 263 |
| 114. | ವೆಂಕಟರಮಣ ಗಾಣಿಗ, ಹೇರಂಜಾಲು | 264 |
| 115. | ಶಶಿಕಾಂತ ಶೆಟ್ಟಿ, ಕಾರ್ಕಳ | 265 |
| 116. | ಶಂಕರ ಗಾಣಿಗ, ಕೋಡಿ | 266 |
| 117. | ಶಂಕರ ದೇವಾಡಿಗ, ಉಳ್ಳೂರು | 267 |
| 118. | ಶಂಕರ ಭಾಗವತ, ಯಲ್ಲಾಪುರ | 268 |
| 119. | ಶಿವರಾಮ ಶೆಟ್ಟಿ, ಕಟ್ಟಿನಬೈಲು | 269 |
| 120. | ಶಿವಾನಂದ, ಕೋಟ | 270 |
| 121. | ಶಿವಾನಂದ ಹೆಗಡೆ, ಕೆರೆಮನೆ | 271 |
| 122. | ಶೀನ ಕುಲಾಲ್, ಗಾವಳಿ | 272 |
| 123. | ಶೀನ ನಾಯ್ಕ, ಜಮದಗ್ನಿ | 273 |
| 124. | ಶೀನ ನಾಯ್ಕ, ಬ್ರಹ್ಮರಿ | 274 |
| 125. | ಶ್ರೀಕಂಠ ಭಟ್ ಎಚ್. ಎಸ್. | 275 |
| 126. | ಶ್ರೀಧರ ನಾರಾಯಣ ಹೆಗಡೆ, ಚಪ್ಪರಮನೆ | 276 |
| 127. | ಶ್ರೀನಿವಾಸ ದೇವಾಡಿಗ, ನಾಗೂರು | 277 |
| 128. | ಶ್ರೀನಿವಾಸ ಭಟ್, ನಾಗರಕೊಡಿಗೆ | 278 |
| 129. | ಶ್ರೀಪಾದ ಭಟ್, ಥಂಡಿಮನೆ | 279 |
| 130. | ಶ್ರೀಪಾದ ಹೆಗಡೆ, ಹಡಿನಬಾಳ | 280 |

131. ಶೇಖರ ಶೆಟ್ಟಿ, ಎಳಬೇರು 281

132. ಸತ್ಯನಾರಾಯಣ ಪಾಂಡುರಂಗ ಭಂಡಾರಿ 282

133. ಸದಾನಂದ ಪ್ರಭು ವೈ. 283

134. ಸದಾಶಿವ ಹೆಗ್ಡೆ, ಇಳಲಿ 284

135. ಸರ್ವೋತ್ತಮ ಗಾಣಿಗ, ಹಾರಾಡಿ 285

136. ಸಂಜೀವ ಕೊಠಾರಿ 286

137. ಸಂಜೀವ ಶೆಟ್ಟಿ, ಹೆನ್ನಾಬೈಲು 287

138. ಸಾಧುಕುಮಾರ್ ಸಿ. ಬಾರ್ಕೂರು 288

139. ಸೀತಾರಾಮ ಶ್ರೀಧರ ಹೆಗಡೆ, ಶಿರಗುಣಿ 289

140. ಸುಂದರ ನಾಯ್ಕ, ಬೇಳಂಜೆ 290

141. ಸುಬ್ರಹ್ಮಣ್ಯ ಧಾರೇಶ್ವರ 291

142. ಸುಬ್ರಹ್ಮಣ್ಯ ಭಟ್ಟ, ಗುಡ್ಡೆಹಿತ್ತು 292

143. ಸುಬ್ರಹ್ಮಣ್ಯ ಹೆಗಡೆ, ಚಿಟ್ಟಾಣಿ 293

144. ಸುಬ್ರಾಯ ಈಶ್ವರ ಹೆಗಡೆ, ಕಪ್ಪೆಕೆರೆ 294

146. ಸುಕ್ರಪ್ಪ ನಾಯ್ಕ, ಬಾಡ 295

146. ಸುರೇಶ ಬಂಗೇರ, ಕೋಟ 296

147. ಸುರೇಶ ಶೆಟ್ಟಿ, ಶಂಕರನಾರಾಯಣ 297

148. ಸುರೇಂದ್ರ, ಆಲೂರು 298

149. ಹೆರಿಯ ನಾಯ್ಕ, ಮೊಗೆಬೆಟ್ಟು 299

150. ಹೆರಿಯ ನಾಯ್ಕ, ಮೊಳಹಳ್ಳಿ 300

# ತೆಂಕುತಿಟ್ಟಿನ ಕಲಾವಿದರು




ಅಣ್ಣಪ್ಪ ಮಿಜಾರು

*ಕಿಂಡೇಲು ಬಡಗಎಡಪದವು ಗ್ರಾಮ, ಮಿಜಾರು,*
*ಮಂಗಳೂರು ತಾಲೂಕು, ದ. ಕನ್ನಡ ಜಿಲ್ಲೆ,*
*ಮೊಬೈಲ್; 9632954224*

ನಾಲ್ಕು ದಶಕಗಳಿಗೂ ಮಿಕ್ಕಿ ಮೇಳ ತಿರುಗಾಟವನ್ನು ಮಾಡಿದ್ದು, ಹಾಸ್ಯದ ಮೂಲಕ ಜನ ಮನವನ್ನು ರಂಜಿಸಿದ ಹಿರಿಯ ಹಾಸ್ಯಗಾರ ಶ್ರೀ ಮಿಜಾರು ಅಣ್ಣಪ್ಪರವರು ಪ್ರಸ್ತುತ ನಿವೃತ್ತ ಕಲಾವಿದರಾಗಿದ್ದು ವಿಶೇಷ ಆಹ್ವಾನದ ಮೇರೆಗೆ ಕಾರ್‍ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಕೊರಗ ಗೌಡ ಹಾಗೂ ಪಾರ್ವತಿ ದಂಪತಿಯ ಸುಪುತ್ರರಾಗಿ 1924ನೇ ಇಸವಿಯಲ್ಲಿ ಮಿಜಾರಿನ ಕಿಂಡೇಲು ಎಂಬಲ್ಲಿ ಅಣ್ಣಪ್ಪರು ಜನಿಸಿದರು. ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬಗ್ಗೆ ಆಸಕ್ತರಾಗಿದ್ದ ಇವರು ಮೂಡಬಿದ್ರೆ ಸಣ್ಣಪ್ಪ ರಾಯರಲ್ಲಿ ನಾಟ್ಯ ಮತ್ತು ಅರ್ಥಗಾರಿಕೆಯ ಅಭ್ಯಾಸವನ್ನು ಮಾಡಿದರು. ಪಾತ್ರಗಳ ಸ್ವಭಾವ, ನುಡಿಗಟ್ಟುಗಳ ಬಗ್ಗೆ ಅಧ್ಯಯನ ಮಾಡಿರುವ ಇವರು ನಿಷ್ಠೆ ಇದ್ದು, ಬೆಳೆದು ಬಂದ ಸಾಧಕರಾಗಿದ್ದಾರೆ. ಇದಿರು ಪಾತ್ರವು ಒಳ್ಳೆಯದಾದರೆ ತನ್ನ ಪಾತ್ರ ಒಳ್ಳೆಯದಾಗುತ್ತದೆ ಎಂಬ ದೃಷ್ಟಿ ಧೋರಣೆವುಳ್ಳ ಇವರು ಇದಿರು ಪಾತ್ರದ ಕಲಾವಿದರೊಂದಿಗೆ ನಿರ್ವಹಣೆಯ ಬಗ್ಗೆ ಚರ್ಚಿಸುತ್ತಾರೆ.

ಕೂಡ್ಲು - 1 ವರ್ಷ, ಕಟೀಲು 2 ವರ್ಷ, ಕರ್ನಾಟಕ- 35 ವರ್ಷ, ಮಂಗಳಾದೇವಿ 2 ವರ್ಷ ಹೀಗೆ ತಿರುಗಾಟವನ್ನು ಮಾಡಿರುವ ಇವರು ಪಯ್ಯಬೈದ, ಲಿಂಗಪ್ಪ ಆಚಾರಿ, ಮಂಥರೆ, ಗುಹ, ಕಾಶೀಮಾಣಿ ಮುಂತಾದ ಪಾತ್ರಗಳನ್ನು ಮಾಡಿದ್ದಾರೆ. ಸೌಮ್ಯ ಸ್ವಭಾವದ ಗಂಭೀರ ಹಾಸ್ಯದಲ್ಲಿ ತನ್ನದೇ ಆದ ಶೈಲಿಯನ್ನು ಮೆರೆಸಿದ್ದಾರೆ. ತುಳು ಭಾಷೆಯ ಪ್ರಸಂಗಗಳಲ್ಲಿ ಪಾತ್ರಕ್ಕೆ ತಕ್ಕಂತೆ ಮಾತನಾಡುವ ಇವರು ತುಳುನಾಡಿನ ಐತಿಹಾಸಿಕ ಕಥೆಗಳ ಜ್ಞಾನವವಂತರಾಗಿದ್ದಾರೆ.

ಶ್ರಮಜೀವಿಯಾಗಿರುವ ಇವರು ಕೃಷಿ ಕೆಲಸದಲ್ಲಿಯೂ ಪಳಗಿದವರಾಗಿದ್ದಾರೆ. ಶ್ರೀಮತಿ ಹೊನ್ನಮ್ಮ ಎಂಬವರನ್ನು ವರಿಸಿ ಈರ್ವರು ಸುಪುತ್ರರು ಹಾಗೂ ಈರ್ವರು ಹೆಣ್ಣು ಮಕ್ಕಳನ್ನು ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳಿಗೆ ಅರ್ಹರಾಗಿರುವ ಇವರು ದುಬಾಯಿ, ಬೆಹರನ್, ಮುಂಬಯಿ ಮುಂತಾದೆಡೆಯಲ್ಲಿ ಅಭಿಮಾನಿಗಳಿಂದ ಗೌರವಕ್ಕೆ ಒಳಗಾಗಿದ್ದಾರೆ.

ಹಾಸ್ಯ ಕಲಾವಿದರಲ್ಲಿ ಅಗ್ರಮನ್ನಣೆಗೆ ಏರಿರುವ ಇವರ ಸಾಧನೆಯ ವರ್ಚಸ್ಸು ಸಾರ್ವತ್ರಿಕವಾದ ಪ್ರಶಂಸೆಗೆ ಒಳಗಾಗಿದೆ.



**ಅಶೋಕ ಶೆಟ್ಟಿ ಸರಪಾಡಿ**

*ಅಜಿಲ ಮೊಗರು ಮನೆ, ಅಂಚೆ:*
*ಅಜಿಲ ಮೊಗರು, ಮಣಿ ನಾಲ್ಕೂರು ಗ್ರಾಮ*
*ಬಂಟ್ವಾಳ್ ತಾಲೂಕು, ದ. ಕ. 574211*

ತುಳು ಪ್ರಸಂಗಗಳ ಪಾತ್ರ ನಿರ್ವಹಣೆಯಲ್ಲಿ  ತುಳು ಪ್ರಸಂಗಗಳ ಪಾತ್ರ ನಿರ್ವಹಣೆಯಲ್ಲಿ  ತನ್ನದೇ ಸ್ವಂತಿಕೆಯನ್ನು ಮೆರೆಸಿ ಜನಮನ್ನಣೆಯನ್ನು ಪಡೆದಿರುವ ಶ್ರೀ ಸರಪಾಡಿ ಅಶೋಕ ಶೆಟ್ಟರು ಪ್ರಸ್ತುತ  ಹೇಳಿಕೆಯ ಮೇರೆಗೆ ಅತಿಥಿ ಕಲಾವಿದರಾಗಿ ಭಾಗವಹಿಸುತ್ತಾ ಇದ್ದಾರೆ (ಐಬಿ.ಬಿಎಂ), ರಮ್ಯ ಶೆಟ್ಟಿ (9ನೇ ತರಗತಿ) ಎಂಬ ನಾರಾಯಣ ಶೆಟ್ಟಿ ಮತ್ತು ಸಂಕಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಅಶೋಕ ಶೆಟ್ಟರು 6/4/1961ರವರ್ಷ ಅಜಿಲ ಮೊಗರು ಎಂಬಲ್ಲಿ ಜನಿಸಿದರು. 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕೃಷಿಕ ಮನೆತನದವರಾಗಿದ್ದಾರೆ.

ಯಕ್ಷಗಾನದ ಪರಿಸರದಲ್ಲಿ ಬೆಳೆದಿರುವ ಇವರು ಯಕ್ಷಗಾನ ಕಲೆಯ ಬಗ್ಗೆ ಪ್ರಭಾವಿತರಾಗಿ ಪಡೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು. 16ನೇ ವರ್ಷದಿಂದಲೇ ಯಕ್ಷಗಾನ ಕಲಾಸೇವೆಯನ್ನು ಪ್ರಾರಂಭಿಸಿದ ಇವರು ರಾಜವೇಷ, ನಾಟಕೀಯ ವೇಷ, ಮತ್ತು ಪುಂಡು ವೇಷಗಳನ್ನು ಮಾಡುತ್ತಿದ್ದಾರೆ. ಆರಂಭದಲ್ಲಿ ಸ್ತ್ರೀ ವೇಷಗಳನ್ನು ಮಾಡಿದ ಅನುಭವ ಕೂಡಾ ಇವರಿಗಿದೆ.

ಕಟೀಲು ಮೇಳ-3 ವರ್ಷ, ಅಳದಂಗಡಿ ಮೇಳ-1 ವರ್ಷ, ಬಪ್ಪನಾಡು ಮೇಳ-2 ವರ್ಷ, ಎಡನೀರು ಮೇಳ-1 ವರ್ಷ, ಬೆಳಣ್ ಮೇಳ-1 ವರ್ಷ, ಕದ್ರಿ ಮೇಳ-2 ವರ್ಷ, ಕುಂಬ್ಳೆ ಮೇಳ- 1 ವರ್ಷ, ಕದ್ರಿ ಮೇಳ-7 ವರ್ಷ, ಕಾಂತಾವರ ಮೇಳ- 2 ವರ್ಷ, ಮಂಗಳಾದೇವಿ ಮೇಳ-8 ವರ್ಷ, ಕರ್ನಾಟಕ ಮೇಳ-1 ವರ್ಷ, ಪುತ್ತೂರು ಮೇಳ-1 ವರ್ಷ, ಕದ್ರಿ ಮೇಳ (ಸ್ವಂತ ಮೇಳವಾಗಿ)-1 ವರ್ಷ, ಚೇರುಂಭ ಭಗವತಿ ಮೇಳ- 2 ವರ್ಷ, ಶ್ರೀ ಕೊಲ್ಲಂಗಾನ ಮೇಳ-1 ವರ್ಷ ಹೀಗೆ ತಿರುಗಾಟದ ಹಿನ್ನೆಲೆ ಇದೆ.

ಸುಯೋಧನ, ದೇವೇಂದ್ರ, ಕೌಂಹಾಸುರ, ಶಿಶುಪಾಲ, ರಕ್ತಬೀಜ, ಕಂಸ, ಹಿರಣ್ಯಾಕ್ಷ, ದಕ್ಷ, ಭೀಮ, ಅರ್ಜುನ, ಪೆರುಮಳ, ಕೋಟಿ-ಚೆನ್ನಯ, ಚಂದುಗಿಡಿ, ದೇವು ಪೂಂಜ, ದುಗ್ಗಣ್ಣ ಕೊಂಡೆ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ. ಇಷ್ಟಲ್ಲದೆ ಸರಪಾಡಿದ ಸರ್ಪೆ, ಸತ್ಯ ದೈವ ಚಾಮುಂಡಿ, ವಿಜಯ ಪುಷ್ಪ ಮೊದಲಾದ ಪ್ರಸಂಗಗಳನ್ನು ರಚಿಸಿರುವರು.

ಅಲ್ಲಿಪಾದೆ, ಮಣಿನಾಲ್ಕೂರು ಕಲ್ಲಡ್ಕ ಮೊದಲಾದೆಡ ಶಾಲೆಗಳಲ್ಲಿ ತರಬೇತಿ ನೀಡಿರುವ ಇವರು ಶ್ರೀಮತಿ ಮೀನಾ ಎಂಬವರನ್ನು ವರಿಸಿದ್ದಾರೆ. ವಿಕ್ರಮ್ ಶೆಟ್ಟಿ(ಐಬಿ.ಬಿಎಂ), ರಮ್ಯ ಶೆಟ್ಟಿ (9ನೇ ತರಗತಿ) ಎಂಬ ಇಬ್ಬರು ಮಕ್ಕಳಿದ್ದಾರೆ. ಮುಂಬಯಿ, ಚೆನ್ನೈ,  ಅಹಮದಾಬಾದ್, ದೆಹಲಿ ಮೊದಲಾದ ನಗರಗಳು ಸೇರಿದಂತೆ ನಾಡಿನ ಪರಿಸರದಲ್ಲಿ 54 ಸಂಮಾನಗಳು ಇವರ ಪ್ರತಿಭೆಗೆ ಸಂದಿವೆ.




**ಅಪ್ಪ ಕುಂಞ ಮಣಿಯಾಣಿ**

*ಮಿಂಚಿಪದವು, ಮಗ್ಗ ಅಪ್ಪು ಮನೆ, ಕಕ್ಕೆಬೆಟ್ಟು ಅಂಚೆ,*
*ವಯಾ: ಮುಳ್ಳೇರಿಯಾ, ಕಾಸರಗೋಡು ತಾಲೂಕು,*
*ಮೊಬೈಲ್: 9900798135*


ಕಳೆದ ೧೬ ವರ್ಷಗಳಿಂದ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿರುವ ಶ್ರೀ ಅಪ್ಪ ಕುಂಞ ಮಣಿಯಾಣಿಯವರು ಅರ್ಜುನ, ದೇವೇಂದ್ರ, ಶತ್ರುಘ್ನ, ದಕ್ಷ, ವಿಶ್ವಾಮಿತ್ರ, ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

೧೯೫೯ ರಲ್ಲಿ ಅಚ್ಯುತ ಮಣಿಯಾಣಿ ಮತ್ತು ಪಾಚಮ್ಮ ದಂಪತಿಯ ಸುಪುತ್ರರಾಗಿ ಮಿಂಚಿಪದವು ಎಂಬಲ್ಲಿ ಮಣಿಯಾಣಿಯವರು ಹುಟ್ಟಿದರು. ೧೦ನೇ ತರಗತಿಯ ತನಕ ವಿದ್ಯಾಭ್ಯಾಸ ಪೂರೈಸಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿದ್ದರು. ಮನೆಯ ಪರಿಸರದಲ್ಲಿ ಸುತ್ತಮುತ್ತ ಯಕ್ಷಗಾನದ ಪ್ರಭಾವ ನಿಚ್ಚಳವಾಗಿದ್ದುದರಿಂದ ತಾನೂ ಯಕ್ಷಗಾನವನ್ನು ಕಲಿಯಲೇಬೇಕೆಂಬ ಹಂಬಲದಿಂದ ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದ ಕೆ. ಗೋವಿಂದ ಭಟ್ ಇವರ ಮಾರ್ಗದರ್ಶನವನ್ನು ಪಡೆದು ನಾಟ್ಯಾಭ್ಯಾಸ ಮಾಡಿದರು.

೧೮ನೇ ವರ್ಷದಿಂದಲೇ ಯಕ್ಷಗಾನದ ರಂಗಪ್ರವೇಶ ಮಾಡಿದ ಇವರು ಆರಂಭದಲ್ಲಿ ಹವ್ಯಾಸಿಯಾಗಿ ಪಾತ್ರನಿರ್ವಹಣೆಯನ್ನು ಮಾಡಿದ್ದರು. ಮುಂದೆ ಧರ್ಮಸ್ಥಳ ಮೇಳ - ೧ ವರ್ಷ, ಪುತ್ತೂರು ೧ ವರ್ಷ, ಕದ್ರಿ ಮೇಳ ೨ ವರ್ಷ, ಹೀಗೆ ೫ ವರ್ಷಗಳವರೆಗೆ ಬೇರೇ ಮೇಳಗಳಲ್ಲಿ ತಿರುಗಾಟ ಪೂರೈಸಿ, ಕಟೀಲು ಮೇಳಕ್ಕೆ ಸೇರಿದರು.

ಶ್ರೀಮತಿ ಪದ್ಮಾವತಿ ಎಂಬವರನ್ನು ವರಿಸಿರುವ . ಅಪ್ಪ ಕುಂಞ ಮಣಿಯಾಣಿಯವರಿಗೆ ಈರ್ವರು ಸುಪುತ್ರರು. ಹಿರಿಯ ಮಗ ನಿತಿನ್ ಕುಮಾ ವೆಲ್ಡಿಂಗ್ ಉದ್ಯೋಗಿಯಾಗಿದ್ದಾರೆ. ಕಿರಿಯ ಮಗ ಯೋಗೀಶ್ ವಿದ್ಯಾರ್ಥಿಂತಾಗಿದ್ದು ಪದವಿಪೂರ್ವವಿದ್ಯಾರ್ಹತೆಯ ಪ್ರಥಮ ವರ್ಷದ ವಿದ್ಯಾರ್ಥಿಯಾಗಿದ್ದಾರೆ. ಬೇಸಿಗೆಯಲ್ಲಿ ತಿರುಗಾಟವನ್ನು ಮಾಡುವ ಅಪ್ಪ ಕುಂಞ ಮಣಿಯಾಣಿಯವರು ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುತ್ತಾರೆ.

ಮಣಿಯಾಣಿಯವರ ಮಾತುಗಾರಿಕೆಯಲ್ಲಿ ತಾಳಮದ್ದಳೆಯ ಪ್ರಭಾವ ಕಂಡುಬರುತ್ತದೆ. ತರ್ಕ, ವಿತರ್ಕಗಳಿಗೆ ಸ್ಪಂದಿಸುವ ಮನೋಭಾವನೆ ಇವರದ್ದಾಗಿದೆ. ಪುರಾಣ ಜ್ಞಾನ ದಲ್ಲಿ ಪ್ರವೀಣರಾಗಿರುವ ಇವರ ಮಾತು ಮತ್ತು ನಾಟ್ಯದ

ಶೈಲಿ ಪೀಠಿಕೆ ವೇಷಗಳ ಸ್ವಭಾವಕ್ಕೆ ಪೂರಕವಾಗಿದೆ. ತನ್ನ ಅನುಭವವನ್ನು ಇತರರೊಂದಿಗೆ ವಿನಿಯೋಗಿಸುವ ಗುಣಧರ್ಮದವರಾದ ಇವರು ಹವ್ಯಾಸಿ ಕಲಾವಿದರಿಗೆ ಮಾರ್ಗದರ್ಶನವನ್ನು ಕೂಡಾ ಮಾಡಿದ್ದಾರೆ.



ಅಂಬಾ ಪ್ರಸಾದ್ ಪಾತಾಳ

"ಪಾತಾಳ ಮನೆ", ಪುತ್ತೂರು
ತಾಲೂಕು – 574241 ದ.ಕ.
ಮೊಬೈಲ್: 9449957303

ಕನ್ನಡ ಮತ್ತು ತುಳು ಭಾಷೆಯ ಪ್ರದರ್ಶನಗಳಲ್ಲಿ ಮುಖ್ಯ ಸ್ತ್ರೀಪಾತ್ರವನ್ನು ನಿರ್ವಹಿಸುತ್ತಿರುವ ಶ್ರೀ ಅಂಬಾ ಪ್ರಸಾದ್ ಪಾತಾಳ ಇವರು ಪ್ರಸ್ತುತ ಹೊಸನಗರ ಶ್ರೀ ರಾಮಚಂದ್ರ ಕೃಪಾಪೋಷಿತ ಯಕ್ಷಗಾನ ಮಂಡಳಿಯಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪಾತಾಳ ವೆಂಕಟರಮಣ ಭಟ್ ಮತ್ತು ಪರಮೇಶ್ವರಿ ಅಮ್ಮ ದಂಪತಿಯ ಸುಪುತ್ರರಾಗಿ 22- 2-1963ರಂದು ಪಾತಾಳ ಮನೆಯಲ್ಲಿ ಜನಿಸಿದರು.

9ನೇ ತರಗತಿಯವರೆಗೆ ಶಾಲೆಗೆ ಹೋಗಿರುವ ಇವರು ತಂದೆಯವರ ಆದರ್ಶವನ್ನು ಅನುಸರಿಸಿದರು. ಉತ್ತಮ ಸ್ತ್ರೀ ಪಾತ್ರಧಾರಿಯಾಗಿ ಹೆಸರು ಮಾಡಿರುವ ತಂದೆಯ ಅನುಭವದ ಬೋಧನೆಯೊಂದಿಗೆ ಕೆ. ಗೋವಿಂದ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿ ನೆಡ್ಲೆ ನರಸಿಂಹ ಭಟ್ಟರಿಂದ ರಂಗದಲ್ಲಿ ಕುಣಿಯುವ ರೀತಿ ನೀತಿಗಳ ಕ್ರಮವನ್ನರಿತರು.

ಧರ್ಮಸ್ಥಳ ಮೇಳ – 1 ವರ್ಷ, ಸುಂಕದಕಟ್ಟೆ ಮೇಳ – 4 ವರ್ಷ, ಪುತ್ತೂರು ಮೇಳ -1, ವರ್ಷ ಕದ್ರಿ ಮೇಳ – 8 ವರ್ಷ, ಕಾಟಿಪಳ್ಳ ಮೇಳ -1 ವರ್ಷ, ಕರ್ನಾಟಕ ಮೇಳ-3 ವರ್ಷ,ಸುರತ್ಕಲ್ ಮೇಳ -1 ವರ್ಷ, ಮಂಗಳಾದೇವಿ ಮೇಳ -7 ವರ್ಷ, ಮಧೂರು ಮೇಳ-3ವರ್ಷ, ಬಡಗಿನ ಶಿರಸಿ ಮೇಳ- 2 ವರ್ಷ, ಎಡನೀರು ಮೇಳ -1 ವರ್ಷ, ಹೊಸನಗರ ಮೇಳ - 4 ವರ್ಷ ಹೀಗೆ ಮೇಳ ತಿರುಗಾಟವನ್ನು ಮಾಡಿದ್ದಾರೆ.

ಅಂಬಾ ಪ್ರಸಾದರು ಸ್ತ್ರೀ ಪಾತ್ರಗಳಲ್ಲದೆ ವಿಷ್ಣು, ಕೃಷ್ಣ, ದ್ರೋಣ, ಈಶ್ವರ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾರೆ. ದಮಯಂತಿ, ಶ್ರೀದೇವಿ, ದಾಕ್ಷಾಯಿನಿ, ಶಶಿಪ್ರಭೆ, ಭ್ರಮರಕುಂತಳೆ, ಪ್ರಮೀಳೆ ಇತ್ಯಾದಿ

ಪಾತ್ರಗಳನ್ನು ಮಾಡಿರುವ ಇವರಿಗೆ "ಗೆಜ್ಜೆದ ಪೂಜೆ" ಎಂಬ ತುಳು ಪ್ರಸಂಗದ ತುಳಸಿಯ ಪಾತ್ರವು ಹೆಚ್ಚಿನ ಕೀರ್ತಿಯನ್ನು ತಂದುಕೊಟ್ಟಿದೆ.

ಶ್ರೀಮತಿ ಜಯಂತಿ ಎಂಬವರನ್ನು ವರಿಸಿರುವ ಅಂಬಾ ಪ್ರಸಾದರು ವೆಂಕಟೇಶ್ವರ ಪ್ರಣವ ಪ್ರಸನ್ನ, ಕುಮಾರಿ ಪೌಷ, ತಿರುಮಲ ಪ್ರದೀಪ, ಪೂರ್ಣ ಶ್ರೀ ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ.

ಬೇಸಗೆ ಮತ್ತು ಮಳೆಗಾಲದ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿರುವ ಇವರು ಹವ್ಯಾಸಿ ಕಲಾವಿದರಿಗೆ ತರಬೇತಿಯನ್ನು ನೀಡಿದ್ದಾರೆ. ಮೂಡಬಿದ್ರೆ, ವರ್ಕಾಡಿ, ಅಡೂರು, ಕದ್ರಿ ಮುಂತಾದೆಡೆಯಲ್ಲಿ ಇವರ ಪ್ರತಿಭೆಗೆ ಫಲವಾಗಿ ಸಂಮಾನಗಳು ನಡೆದಿವೆ.



## ಅಶೋಕ ಆಚಾರ್ಯ ವೇಣೂರು

"ಹೊಸಮನೆ, ಕರಿಮಣೇಲು ಗ್ರಾಮ,

ವೇಣೂರು ಅಂಚೆ, ಬೆಳ್ತಂಗಡಿ ತಾಲೂಕು,

ಮೊಬೈಲ್: 9449105505

ಪುಂಡು ವೇಷದ ಮೂಲಕ ಪ್ರಸಿದ್ಧಿಗೆ ಬಂದಿರುವ ವೇಣೂರು ಅಶೋಕ ಆಚಾರ್ಯರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ವಾಸುದೇವ ಆಚಾರ್ಯ ಮತ್ತು ಕಲ್ಯಾಣಿ ದಂಪತಿಯ ಸುಪುತ್ರರಾಗಿ ವೇಣೂರಿನಲ್ಲಿ 2-8- 1970ರಂದು ಜನಿಸಿದರು. 7ನೇ ತರಗತಿಯ ತನಕ : ವಿದ್ಯಾಭ್ಯಾಸವನ್ನು ಪಡೆದಿರುವ ಇವರು ತಂದೆ ತಾಯಿಯವರ ಆಸಕ್ತಿ ಮತ್ತು ಪ್ರೇರಣೆಯ ಮೇರೆಗೆ ಯಕ್ಷಗಾನದ ಅಭ್ಯಾಸವನ್ನು ಮಾಡಿದರು.

ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿದ ಇವರು ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿ ಚಿಕ್ಕಪ್ಪನಾದ ವೇಣೂರು ಸುಂದರ ಆಚಾರ್ಯರ ಪ್ರೋತ್ಸಾಹದೊಂದಿಗೆ ಮೇಳ ತಿರುಗಾಟವನ್ನು ಆರಂಭಿಸಿದರು.

ಧರ್ಮಸ್ಥಳ ಮೇಳ – 5 ವರ್ಷ, ಕದ್ರಿ ಮೇಳ - 2 ವರ್ಷ, ಕುಂಬ್ಳೆ ಮೇಳ - 2 ವರ್ಷ, ಬಪ್ಪನಾಡು ಮೇಳ- 2ವರ್ಷ, ಸುರತ್ಕಲ್ ಮೇಳ - 8 ವರ್ಷ, ಕರ್ನಾಟಕ ಮೇಳ - 3 ವರ್ಷ ಹಾಗೂ ಕಟೀಲು ಮೇಳ 7 ವರ್ಷ ಹೀಗೆ ಒಟ್ಟು 29 ವರ್ಷಗಳ ತಿರುಗಾಟವನ್ನು ನಡೆಸಿರುವರು.

ವಾಮನ, ವಿಷ್ಣು, ಕೃಷ್ಣ, ಬಭ್ರುವಾಹನ, ಬ್ರಹ್ಮ, ಚಂಡ-ಮುಂಡರು, ರಾಮ, ಸುಪಾರ್ಶ್ವಕ, ಅಭಿಮನ್ಯು, ಪರಶುರಾಮ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ವೇಣೂರು ಮೂಡಬಿದ್ರೆ, ಕೊಡ್ಯಡ್ಕ ಮೊದಲಾದೆಡೆಯಲ್ಲಿ ಯಕ್ಷಗಾನದ ಬಗ್ಗೆ ತರಬೇತಿಯನ್ನು ನೀಡಿರುವ ಇವರು ಇಲ್ಲೆಲ್ಲಾ ಶಿಷ್ಯಂದಿರ ಸಂಮಾನದಿಂದ ಗೌರವಿಸಲ್ಪಟ್ಟಿದ್ದಾರೆ.



**ಆನಂದ ಪಡ್ರೆ**

"ಎಳಿಕ್ಕಳ ಮನೆ", ಅಡೂರು ಅಂಚೆ,

ಕಾಸರಗೋಡು ತಾಲೂಕು, ಜಿಲೆ 67 ಜಿಲ್ಲೆ 671543

ಮೊಬೈಲ್:09946620886

ಶ್ರೀ ಮಂಗಳಾದೇವಿ ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಆನಂದ ಪಡೆಯವರು ಚೆಂಡೆ-ಮದ್ದಳೆಯ ಬಾರಿಸುವಿಕೆಯಲ್ಲಿ ಸಾಧನೆಯನ್ನು ಮಾಡಿ, ಕಲಾವಿದರಿಗೆ ತಕ್ಕಂತೆ ಸ್ಪಂದಿಸಿ ಪ್ರಭಾವ ಬೀರಿದ ಯುವ ಕಲಾವಿದರಾಗಿದ್ದಾರೆ.

1976ನೇ ವರ್ಷ ಜನವರಿ 26ರಂದು ಕೃಷ್ಣ ನಾಯಕ್ ಮತ್ತು ಸರಸ್ವತಿ ದಂಪತಿಯ ಸುಪುತ್ರರಾಗಿ ಪಡೆಯಲ್ಲಿ ಹುಟ್ಟಿದರು. ಪದವಿಪೂರ್ವ ಹಂತದವರೆಗೆ ವಿದ್ಯಾಭ್ಯಾಸವನ್ನು ಮಾಡಿರುವ ಪಡ್ರೆ ಆನಂದರು ಯಕ್ಷಗಾನ ಪರಿಸರದಲ್ಲಿ ಹುಟ್ಟಿ ಪರ ಬೆಳೆದವರಾಗಿದ್ದುದರಿಂದ ಕಲಾ ಪ್ರಭಾವಕ್ಕೆ ನಾಟ ಒಳಗಾದರು. ಮನೆತನದಲ್ಲಿ ಕಲಾಸೇವೆ ಮಾಡುತ್ತಾ ಬೆಳೆದಿದ್ದ ಅಜ್ಜ ಕುಂಞಪ್ಪ ನಾಯ್ಕ ಹಾಗೂ ಮಾವ ಪಡ್ರೆ ಶ್ರೀಧರ ಇವರ ಕಲಾಜೀವನದಂತೆ ತಾನು ಕೂಡಾ ವೃತ್ತಿ ಜೀವನಕ್ಕೆ ಕಲೆಯನ್ನೇ ಆಶ್ರಯಿಸಬೇಕೆಂದು ಭಾವಿಸಿದರು.

ತೆಂಕುತಿಟ್ಟಿನಲ್ಲಿ ಹೆಸರುವಾಸಿಯಾಗಿರುವ ಹಿರಿಯ ಮದ್ದೆಗಾರ ಶ್ರೀ ಪುಂಡಿಕಾಯಿ ಕೃಷ್ಣ ಭಟ್ ಇವರಲ್ಲಿ ಚೆಂಡೆ ಮದ್ದಳೆಯ ಅಭ್ಯಾಸವನ್ನು ಮಾಡಿದ ಪಡ್ರೆ ಆನಂದರು ಶ್ರೀ ಕರ್ನಾಟಕ ಮೇಳದಲ್ಲಿ ಒಂದು ವರ್ಷ, ಶ್ರೀ ಎಡನೀರು ಮೇಳದಲ್ಲಿ 3 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ. ಈಗಿರುವ ಶ್ರೀ ಮಂಗಳಾದೇವಿ ಮೇಳದಲ್ಲಿ 9 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಮಳೆಗಾಲದಲ್ಲಿ ಕೃಷಿ ಜೀವನವನ್ನು ಅವಲಂಬಿಸಿರುವ ಇವರು ಶ್ರೀಮತಿ ನಳಿನಿ ಎಂಬವರನ್ನು ವರಿಸಿ ದೀಪಕ್ ಕುಮಾರನೋರ್ವನನ್ನು ಪಡೆದಿದ್ದಾರೆ.

ಅವಕಾಶವಾದಿಯಾಗದೆ ಸಿಕ್ಕಿದ ಅವಕಾಶದಲ್ಲಿ ತನ್ನ ಪ್ರತಿಭೆಯನ್ನು ತೋರುತ್ತಾ 13 ವರ್ಷಗಳ ಕಲಾಜೀವನವನ್ನು ಮಾಡಿದ ಇವರಿಗೆ ಶ್ರೀ ಕಿಶನ್ ಹೆಗ್ಗಡೆ ಇವರ ಯಜಮಾನಿಕೆಯ ಮಂಗಳಾದೇವಿ ಮೇಳವು ಪ್ರತಿಭೆಯ ಬೆಳವಣಿಗೆಗೆ ಒಳ್ಳೆಯ ಅವಕಾಶವನ್ನು ಮಾಡಿಕೊಟ್ಟಿತು. ಪ್ರಸ್ತುತ ಮಂಗಳಾದೇವಿ ಮೇಳದ ಪ್ರಧಾನ ಭಾಗವತರಾಗಿರುವ ಶ್ರೀ ರವಿಚಂದ್ರ ಕನ್ನಡಿಕಟ್ಟೆಯವರ ಸುಶ್ರಾವ್ಯ ಹಾಡಿಗೆ ನುಡಿತ-ಬಡಿತಗಳ ಮಧುರತೆಯಿಂದ ಕೈಚಳಕವನ್ನು ತೋರುತ್ತಾ ಬೆಳೆಯುತ್ತಿದ್ದಾರೆ.



## ಉಮೇಶ ಶೆಟ್ಟಿ, ಉಬರಡ್ಕ

ಕಲಾ ಕೌಸ್ತುಭ, ಮಣ್ಣ ಅಪ್ಪು ಮನೆ,

ಅಂಚೆ ನೆಡೆ, ವಯಾ ಧರ್ಮಸ್ಥಳ ಗಳಿ

ಬೆಳ್ತಂಗಡಿ ತಾಲೂಕು-574216

ಮೊಬೈಲ್ : 9449225167

ರಾಜವೇಷ ಮತ್ತು ನಾಟಕೀಯ ವೇಷಗಳಲ್ಲಿ ಪ್ರೌಢಿಮೆಯನ್ನು ತೋರುತ್ತಿರುವ ಶ್ರೀ ಉಮೇಶ ಶೆಟ್ಟಿ ಉಬ್ಬರಡ್ಕರವರು ಧರ್ಮಸ್ಥಳ ಮೇಳದ ಹಿರಿಯ ಕಲಾವಿದರಲ್ಲಿ ಓರ್ವರಾಗಿದ್ದಾರೆ.

ಯು, ಕಿಟ್ಟಣ್ಣ ಶೆಟ್ಟಿ ಮತ್ತು ಯಮುನಾ ದಂಪತಿಯ ಸುಪುತ್ರರಾಗಿರುವ ಇವರು ಪ್ರಾಥಮಿಕ ಹಂತದ ಶಾಲಾ ವಿದ್ಯಾಭ್ಯಾಸವನ್ನು ಪೂರೈಸಿರುವರು. ತೆಂಕುತಿಟ್ಟಿನ ಮೇರು ಕಲಾವಿದ ಅಳಿಕೆ ರಾಮಯ್ಯ ರೈ ಸಂಬಧದಲ್ಲಿ ಮಾವ ಆಗಿದ್ದು ಪ್ರೇರಣೆಯಿಂದ ಯಕ್ಷಗಾನ ಕಲೆಯತ್ತ ಆಕರ್ಷಿತರಾದ ಉಮೇಶ ಶೆಟ್ಟರು ಪಡ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದ್ದಾರೆ. ಯಕ್ಷಗಾನದಲ್ಲಿ ಗುರುತಿಸಲ್ಪಟ್ಟಿರುವ ಅಳಿಕೆ ಮೋನಪ್ಪ ಶೆಟ್ಟರು ಕೂಡಾ ಇವರ ಅಜ್ಜ ಆಗಿದ್ದು ಅವರ ಆದರ್ಶವು ಕೂಡಾ ಇವರಲ್ಲಿ ಮೈಗೂಡಿದೆ.

ಅರ್ಜುನ, ದೇವೇಂದ್ರ, ಕಂಸ, ತ್ರಿಶಂಕು, ದ್ರೋಣ, ಮಾಗಧ, ತಾಮ್ರಧ್ವಜ, ಇಂದ್ರಜಿತು ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿರುವ ಇವರು ೧೯೭೨ರಿಂದ ಧರ್ಮಸ್ಥಳ ಮೇಳವನ್ನು ಸೇರಿದರು. ಆಮೇಲೆ ಅದೇ ಮೇಳದಲ್ಲಿ ನಿರಂತರವಾಗಿ ಕಲಾ ಸೇವೆಯನ್ನು ಮಾಡುತ್ತಾ ಪ್ರಸ್ತುತ ೩೮ನೇ ವರ್ಷದ ಕಲಾ ಸೇವೆಯನ್ನು ಪೂರೈಸಿದ್ದಾರೆ. ಪುಂಡು ವೇಷದಲ್ಲೂ ಪ್ರವೀಣರಾಗಿರುವ ಇವರು ಚಂಡ- ಮುಂಡರು, ಬಬ್ರುವಾಹನ, ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಉಷಾ ಎಂಬವರನ್ನು ವರಿಸಿರುವ ಇವರು ಇಬ್ಬರು ಮಕ್ಕಳನು, ಪಡೆದಿದ್ದಾರೆ. - ಹಿರಿಯವರಾದ ಅವಿನಾಶ್ ಎಂ.ಎಸ್ಸಿ. ಪಧವೀದರರಾಗಿದ್ದು, ಉದ್ಯೋಗಸ್ಥರಾಗಿದ್ದಾರೆ. ಕಿರಿಯವರಾದ ಆದರ್ಶ್ ಸಿ.ಎ. ಪದವಿಯ ಅಧ್ಯಯನವನ್ನು ಮಾಡುತ್ತಿದ್ದಾರೆ.

ನೆಡ್ಲೆ ಪ್ರಾಥಮಿಕ ಶಾಲೆ, ಅಳಿಕೆ ಲೋಕ ಸೇವಾ ವೃಂದ ಶಾಲೆಗಳಲ್ಲಿ ಯಕ್ಷಗಾನದ ತರಬೇತಿಯನ್ನು ಮಾಡುತ್ತಿರುವ ಉಬರಡ್ಕ ಉಮೇಶ ಶೆಟ್ಟರು ಮಳೆಗಾಲದಲ್ಲೂ ಬೇಡಿಕೆಯ ಕಲಾವಿದರಾಗಿದ್ದು ಪಾತ್ರ ನಿರ್ವಹಣೆಯಲ್ಲಿ ಯಶ್ ಸ್ಸನ್ನು ಸಂಪಾದಿಸಿಕೊಂಡಿದ್ದಾರೆ. ಇವರ ಕಲಾ ಸಾಧನೆಗೆ ದೆಹಲಿಯಲ್ಲಿ ಮಾಜಿ ರಾಷ್ಟ್ರಪತಿ ಶಂಕರ್ ದಯಾಳ್ ಕರ್ಮ ಅವರ ಅಧಿಕಾರಾವಧಿಯಲ್ಲಿ, ಸಹ ಕಲಾವಿದರೊಂದಿಗೆ ಪುರಸ್ಕಾರಕ್ಕೆ ಒಳಗಾಗಿದ್ದರು.

ಧರ್ಮಸ್ಥಳ ಹೆಗ್ಗಡೆಯವರ ಪಟ್ಟಾಭಿಷೇಕದ ವರ್ಧಂತಿ ಉತ್ಸವದ ಪ್ರಶಸ್ತಿ, ಸುಳ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಂಮಾನ, ಎಡನೀರು ಮಠದ ಸಂಮಾನ, ಬೆಹರನ್ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿಗಳೊಂದಿಗೆ ಗೌರವಿಸಲ್ಪಟ್ಟು ದೇಶ- ವಿದೇಶಗಳಲ್ಲಿ ಗುರುತಿಸಲ್ಪಟ್ಟಿದ್ದಾರೆ.



**ಉಮಾಮಹೇಶ್ವರ ಶರ್ಮ ಎಚ್.**

ಪೆಲ್ಲಜೆ ಮನೆ, ಮಚ್ಚಿನ ಗ್ರಾಮ ಮತ್ತು ಅಂಚೆ

ಬೆಳ್ತಂಗಡಿ ತಾಲೂಕು

ಮನೆ ದೂರವಾಣಿ: 08256 - 312366

ಪುಂಡುವೇಷ, ರಾಜವೇಷ, ನಾಟಕೀಯ ವೇಷ, ಬಣ್ಣದ ವೇಷ, ಮುಖ್ಯ ಪೋಷಕ ಪಾತ್ರಗಳು ಹೀಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡುತ್ತಾ ಬೆಳೆದು ಬಂದವರು ಶ್ರೀ ಎಚ್. ಉಮಾಮಹೇಶ್ವರ ಶರ್ಮ, ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ಎಚ್. ಗಣಪತಿ ಭಟ್ ಮತ್ತು ಎಚ್. ಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ 1968 ರ ಎಪ್ರಿಲ್ 2ರಂದು ಕಾಸರಗೋಡಿನಲ್ಲಿ ಜನಿಸಿದರು. 9ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಮಾಡಿರುವ ಇವರು 19ನೇ ವಯಸ್ಸಿನಿಂದ ಯಕ್ಷಗಾನ ಕಲೆಗೆ ಆಕರ್ಷಿತರಾಗಿ ರಂಗಪ್ರವೇಶ ಮಾಡಿದರು.

ಉದ್ಯೋಗದ ಅನಿವಾರತೆಯಿಂದ ಯಕ್ಷಗಾನದ ಕ್ಷೇತ್ರಕ್ಕೆ ಬಂದಿರುವ ಇವರು ಕೆ. ವಿಶ್ವೇಶ್ವರ ಭಟ್ ಮತ್ತು ಕೆ. ಗೋವಿಂದ ಭಟ್ ಇವರ ಮಾರ್ಗದರ್ಶನದೊಂದಿಗೆ ಧರ್ಮಸ್ಥಳದ ಲಲಿತಾ ಕಲಾ ಕೇಂದ್ರದಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು. ಮುಂದೆ ಮತ್ತೆಗಾರ ನೆಡ್ಲೆ ನರಸಿಂಹ ಭಟ್ಟರಿಂದ ರಂಗದ ಅನುಭವವನ್ನು ಪಡೆದರು.

ಮೇಳ ತಿರುಗಾಟವನ್ನು ಆರಂಭಿಸಿದ ಇವರು ಮೊದಲಾಗಿ ಸುಂಕದಕಟ್ಟೆಯ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಮೇಳದಲ್ಲಿ 8 ವರ್ಷಗಳ ತಿರುಗಾಟವನ್ನು ನಡೆಸಿದ ಮೇಲೆ ಕಟೀಲು ಶ್ರೀ ದುರ್ಗಾಪರಮೇಶ್ವರಿ ಮೇಳವನ್ನು ಸೇರಿ 16 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಈಗಾಗಲೇ ಬ್ರಹ್ಮ, ಮಧು-ಕೈಟಭ, ದೇವೇಂದ್ರ, ಅರ್ಜುನ, ಮಹಿಷಾಸುರ, ರಕ್ತಬೀಜ, ವಿಷ್ಣು, ರಾಮ, ಹನುಮಂತ, ವಿಶ್ವಾಮಿತ್ರ, ವಾಲ್ಮೀಕಿ ಮುಂತಾದ ವಿಭಿನ್ನ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಸ್ತ್ರೀ ವೇಷದಲ್ಲೂ ಪ್ರೌಢಿಮೆಯನ್ನು ಸಾಧಿಸಿರುವ ಇವರು ಶ್ರೀದೇವಿ, ಭ್ರಮರಕುಂತಳೆ ಇತ್ಯಾದಿ ಪಾತ್ರಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಸೌಮ್ಯ ಸ್ವಭಾವದ ಗುಣಧರ್ಮವನ್ನು ಹೊಂದಿರುವ ಇವರು ಎಲ್ಲಾ ಪಾತ್ರಗಳ ನಡೆ ನುಡಿಗಳ ಬಗೆಗೆ ಅನುಭವವನ್ನು ಸಂಪಾದಿಸಿರುವುದರಿಂದ ವಿಭಿನ್ನ ಪಾತ್ರಗಳ ನಿರ್ವಹಣೆಯಲ್ಲಿ ಕಂಡುಬರುತ್ತಾರೆ.

ಕುಬಣೂರು ಶ್ರೀಧರರಾವ್, ಮೋಹನ ಶೆಟ್ಟಿಗಾರ್, ಮಂಜೇಶ್ವರ ಜನಾರ್ಧನ ಜೋಗಿ, ಕುಮಾರಪಡ್ರೆ, ವಿಷ್ಣು ಶರ್ಮ ವಾಟೆಪಡ್ಡು, ಸುಬ್ರಾಯ ಹೊಳ್ಳ, ತೋಡಿಕಾನ ವಿಶ್ವನಾಥ ಗೌಡ ಮೊದಲದವರ ಒಡನಾಟದಲ್ಲಿ ತಿರುಗಾಟವನ್ನು ಮಾಡುತ್ತಿರುವ ಎಚ್. ಉಮಾಮಹೇಶ್ವರ ಶರ್ಮ ಪೌರಾಣಿಕ ಪ್ರಸಂಗದ ಪಾತ್ರಗಳ ನಿರ್ವಹಣೆಯಲ್ಲಿ ಹೆಚ್ಚಿನ ಸಾಧನೆಯನ್ನು ತೋರಬೇಕೆಂಬ ಹಂಬಲ ವ್ಯಕ್ತ ಪಡಿಸುತ್ತಾರೆ.



## ಐತಪ್ಪ ಗೌಡ

"ಬೊಮ್ಮಾರು ಮನೆ"

ಮರ್ಕಂಜ ಗ್ರಾಮ & ಅಂಚೆ, ಸುಳ್ಯ ತಾಲೂಕು

ಮನೆ ದೂರವಾಣಿ: 08257-316025

ಪರಂಪರೆಯ ಚೌಕಟ್ಟಿನಲ್ಲಿ ಬಣ್ಣ, ನಾಟ್ಯ ಮತ್ತು ಮಾತಿನ ಶೈಲಿಯನ್ನು ಹೊಂದಿರುವ ಐತಪ್ಪ ಗೌಡರು ಕಟೀಲು ಮೇಳದ ಬಣ್ಣದ ವೇಷಧಾರಿಯಾಗಿ ಮನ್ನಣೆಯನ್ನು ಪಡೆದಿದ್ದಾರೆ.

ಶೇಷಪ್ಪ ಗೌಡ ಮತ್ತು ಲಿಂಗಮ್ಮ ದಂಪತಿಯ ಸುಪುತ್ರರಾಗಿ ಉಬರಡ್ಕದಲ್ಲಿ ಜನಿಸಿದ ಐತಪ್ಪ ಗೌಡರು ೬೨ ವರ್ಷಗಳ ಹಿರಿತನಕ್ಕೆ ಬೆಳೆದು ನಿಂತಿದ್ದಾರೆ. ಕೀರ್ತಿ ಶೇಷರಾದ ಮಿತ್ತಡ್ಕ ರಾಮ ಕೃಷ್ಣ ಕಮ್ಮಿಯವರ ಪ್ರೇರಣೆಯಿಂದ, ಅವರಲ್ಲೇ ನಾಟ್ಯಾಭ್ಯಾಸವನ್ನು ಮಾಡಿ ಸ್ತ್ರೀವೇಷ, ಪುಂಡುವೇಷ, ಕಿರೀಟ ವೇಷಗಳನ್ನು ಹಂತ ಹಂತವಾಗಿ ಮಾಡುತ್ತಾ ಬಂದಿರುವರು. ಇತ್ತೀಚಿನ ಹಲವು ವರ್ಷಗಳಿಂದ ಬಣ್ಣದ ವೇಷಧರಿಯಾಗಿ ಪಾತ್ರ ನಿರ್ವಹಣೆ ಮಾಡುತ್ತಿದ್ದಾರೆ.

ಧರ್ಮಸ್ಥಳ ಮೇಳ ೨ ವರ್ಷ, ಬಳ್ಳಂಬೆಟ್ಟು ಮೇಳ ೬ ವರ್ಷ, ವೇಣೂರು ದೇಲಂಪುರಿ ಮೇಳ ೨ ವರ್ಷ, ಮಡಿಕೇರಿ ಚೌಡೇಶ್ವರಿ ಮೇಳ ೧ ವರ್ಷ, ಕಟೀಲು ಮೇಳ ೨೭ ವರ್ಷ, ಒಟ್ಟು 40 ವರ್ಷಗಳ ತಿರುಗಾಟವನ್ನು ಮಾಡಿರುವ ಐತಪ್ಪ ಗೌಡರು ರಾವಣ ಶುಂಭ, ಪುರುಷಾ ಮೃಗ, ಮತ್ಸ ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾರೆ. ಭೀಮ, ಶೂರ್ಪನಖಿ, ತಾಟಕಿ ಇತ್ಯಾದಿ ವಿಭಿನ್ನ ಮಾದರಿಯ ಪಾತ್ರಗಳನ್ನು ಶಕ್ತವಾಗಿ ನಿರ್ವಹಿಸುವ ಇವರು ಎಳೆಯ ಪ್ರಾಯದಲ್ಲಿ ಅಭಿಮನ್ಯು, ಬಭ್ರುವಾಹನ ಮೊದಲಾದ ಪುಂಡು ವೇಷದ ಮುಖ್ಯ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ.

ಶೈಕ್ಷಣಿಕವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿರುವ ಐತಪ್ಪ ಗೌಡರು ಅಕ್ಕಯ್ಯ ಎಂಬವರನ್ನು ವರಿಸಿ ತಿರುಮಲೇಶ್ವರಿ, ಸುಶೀಲಾ, ದಿನೇಶ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಕಿರಿಯ ಸುಪುತ್ರರಾದ ದಿನೇಶರು ಚಾಲಕ ವೃತ್ತಿಯನ್ನು ಮಾಡುತ್ತಿದ್ದಾರೆ.

ಹವ್ಯಾಸಿ ಭಾಗವತರಾಗಿ ಕಲಾ ಸೇವೆ ಮಾಡಿದ್ದ ಕೃಷ್ಣಪ್ಪ ಗೌಡ ಇವರ ಮಾವ ಆಗಿದ್ದು ಅವರ ಆದರ್ಶವನ್ನು ಕೂಡ ಇವರು ಅನುಸರಿಸಿದ್ದಾರೆ. ಮಳೆಗಾಲದಲ್ಲಿ ಕೃಷಿಗಾರರಾಗಿ ಶ್ರಮಿಸುವ ಇವರು ಬಾಲ್ಯದ 15 ನೇ ವರ್ಷದಿಂದಲೇ ಪಾತ್ರ ನಿರ್ವಹಣೆಯನ್ನು ಮಾಡುತ್ತಾ ಬೆಳೆದು ಬಂದಿದ್ದಾರೆ.

ಹವ್ಯಾಸಿ ಕಲಾವಿದರಿಗೆ ತರಬೇತಿಯನ್ನು ನೀಡಿರುವ ಐತಪ್ಪ ಗೌಡರು ಮಿತ್ತಡ್ಕ, ರೆಂಜಾಳ ಮೊದಲಾದೆಡೆಯಲ್ಲಿ ಅಭಿಮಾನಿಗಳಿಂದ ಸಂಮಾನಿತರಾಗಿದ್ದಾರೆ. ಹವ್ಯಾಸಿ ಬಳಗ ಕದ್ರಿಯು ತನ್ನ ದಶಮಾನ ಸಂಮಾನ ಶತಕದ ಆಯ್ಕೆಯಲ್ಲಿ ಇವರನ್ನು ಗುರುತಿಸಿ ಸಂಮಾನಿಸಿದೆ.



## ಕರುಣಾಕರ ಶೆಟ್ಟಿಗಾರ್, ಕಾಶೀಪಟ್ಣ


"ಪಣಿಲಾಜೆ ಮನೆ" ಕಾಶೀಪಟ್ಲ ಅಂಚೆ,

ಗ್ರಾಮ ಬೆಳ್ತಂಗಡಿ ತಾಲೂಕು 574236 2

ಮೊಬೈಲ್: 9008946706


ತುಳು ಹಾಗೂ ಪೌರಾಣಿಕ ಪ್ರಸಂಗಗಳ ಪ್ರದರ್ಶನಗಳಲ್ಲಿ ಭಾಗವತಿಕೆಯನ್ನು ಮಾಡುತ್ತಾ ಬೆಳೆದು ಬಂದ ಶ್ರೀ ಕರುಣಾಕರ ಶೆಟ್ಟಿಗಾರ್ ಕಾಶೀಪಟ್ಟ ಸುಂಕದಕಟ್ಟೆ ಮೇಳದ ಪ್ರಧಾನ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

ಗಂಗಯ್ಯ ಶೆಟ್ಟಿಗಾರ್ ಮತ್ತು ರುಕ್ಕಿಣಿ ಶೆಟ್ಟಿಗಾರಿ ಎಂಬವರ ಮಗನಾಗಿ ಸಿದ್ಧಕಟ್ಟೆಯಲ್ಲಿ ಹುಟ್ಟಿದ ಇವರಿಗೀಗ 38 ವರ್ಷ. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಕರುಣಾಕರ ಶೆಟ್ಟಿಗಾರರು 16ನೇ ವರ್ಷದಿಂದ ರಂಗ ಪ್ರವೇಶ ಮಾಡಿ ಹಾಡಿದ್ದಾರೆ.

ಬಾಲ್ಯದಲ್ಲಿ ಕರ್ನಾಟಕ ಮೇಳದಲ್ಲಿ ತಿರುಗಾಟವನ್ನು ಮಾಡಿದ್ದ ದಿನೇಶ್ ಅಮ್ಮಣ್ಣಾಯರ ಭಾಗವತಿಕೆಯನ್ನು ತಾನು ಭಾಗವತನಾಗಬೇಕೆಂಬ ಕನಸನ್ನು ಕಂಡರು. ಶಾಲೆಯಲ್ಲಿ ಅಧ್ಯಾಪಕರಿಂದಲೂ ಪೂರಕ ಪ್ರೋತ್ಸಾಹದೊರೆಯಿತು. ತತ್ಪರಿಣಾಮವಾಗಿ ಲೀಲಾವತಿಬೈಪಾಡಿತ್ತಾಯರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು. ಮಾತ್ರವಲ್ಲದೆ ಇದೇ ಸಮಯದಲ್ಲಿ . ತಿಗೆ –ಹರಿನಾರಾಯಣ ಬೈಪಾಡಿತ್ತಾಯರಿಂದಲೂ ಹೆಚ್ಚಿನ ಅನುಭವವನ್ನು ಸಂಪಾದಿಸಿದ್ದಾರೆ.

ಅರುವ ಮೇಳ - 1 ವರ್ಷ,ಬಪ್ಪನಾಡು-3 ವರ್ಷ, ಕದ್ರಿ ಮೇಳ-3 RF,ಕರ್ನಾಟಕ ಮೇಳ-5 ವರ್ಷ, ಮಂಗಳಾದೇವಿಮೇಳ - 1 ವರ್ಷ, ಸುಂಕದಕಟ್ಟೆ ಮೇಳ - 10 ವರ್ಷ ಹೀಗೆ ತಿರುಗಾಟದ ಹಿನ್ನೆಲೆ ಇದೆ. ಕರುಣಾಕರ ಶೆಟ್ಟಿಗಾರರು ಅವಕಾಶವಾದಿಯಾಗಿ ಬೆಳೆಯದೆ ಮೇಳದ ಕಲಾ ಸೇವೆಯಲ್ಲೇ ಸಂತೃಪ್ತರಾಗಿ ತಿರುಗಾಟವನ್ನು ಮುನ್ನಡೆಸುತ್ತಾ ಇದ್ದಾರೆ.

ಶ್ರೀಮತಿ ಪುಷ್ಪಾವತಿ ಎಂಬವರನ್ನು ವರಿಸಿದ ಇವರು ಯತೀಶ್ ಎಂಬ ಸುಪುತ್ರನನ್ನು ಪಡೆದಿದ್ದಾರೆ. ಕಟೀಲು ಮೇಳದ ಮಲ್ಲೆಗಾರ ಮಿಜಾರು ಮೋಹನ ಶೆಟ್ಟಿಗಾರ್, ಹಾಸ್ಯಗಾರ ಮಿಜಾರು ತಿಮ್ಮಪ್ಪ ಮೊದಲಾದವರು ಇವರ ಸಂಬಂಧಿಕರಾಗಿದ್ದು ಕಲಾ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆ.

ಕರುಣಾಕರ ಶೆಟ್ಟಿಗಾರರು ಆರಂಭದಲ್ಲಿ ಪೂರಕ ಪಾತ್ರದ ಪುಂಡು ವೇಷಗಳನ್ನು ಕೂಡಾ ಮಾಡುತ್ತಿದ್ದರು. ಹೀಗಾಗಿ ಪಾತ್ರಕ್ಕೆ ತಕ್ಕಂತೆ ಹಾಡುವ ಅನುಭವವನ್ನು ಮೈಗೂಡಿಸುತ್ತಾ ಬೆಳೆದಿದ್ದಾರೆ.



## ಕುಮಾರ ಪಡ್ರೆ

“ಭ್ರಾಮರಿ ನಿಲಯ”, ಜಲಕದ ಕಟ್ಟೆ 2535

ಅಜಾರು ಅಂಚೆ, ಕಟೀಲು

ಮೊಬೈಲ್:9964277885

ರಾಜವೇಷ, ಪುಂಡುವೇಷ, ನಾಟಕೀಯ, ಸ್ತ್ರೀವೇಷ ಮತ್ತು ಹಾಸ್ಯ ಹೀಗೆ ಎಲ್ಲಾ ವಿಧದ ಪಾತ್ರಗಳನ್ನು ನಿರ್ವಹಿಸುತ್ತಾ ಬೆಳೆದಿರುವ ಶ್ರೀ ಪಡ್ರೆ ಕುಮಾರ ಇವರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪಡ್ರೆ ಚಂದು ಮತ್ತು ಭಾಗೀರಥಿ ದಂಪತಿಯ ಸುಪುತ್ರರಾಗಿ 1961ನೇ ವರ್ಷ ಬಂಟ್ವಾಳದಲ್ಲಿ ಹುಟ್ಟಿದರು. ತಂದೆ ತೆಂಕುತಿಟ್ಟಿನ ಕೀರ್ತಿಶೇಷ ಕಲಾವಿದರಾಗಿದ್ದು ಅವರ ಆದರ್ಶವನ್ನು ಮೈಗೂಡಿಸಿದ್ದ ಕುಮಾರ ಪಡೆಯವರು ತಂದೆಯ ಕುಣಿತವನ್ನು ನೋಡಿ ಅಭ್ಯಾಸ ಮಾಡುತ್ತಾ ಪಾತ್ರ ನಿರ್ವಹಣೆ ಮಾಡಲು ಕಲಿತರು.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಹತ್ತನೇ ವರುಷದಿಂದಲೇ ನಟಿಸಲಾರಂಭಿಸಿ ಮೊದಲಿಗೆ ಕುಂಡಾವು ಮೇಳದಲ್ಲಿ 2 ವರ್ಷಗಳ ತಿರುಗಾಟವನ್ನು ಪೂರೈಸಿದರು. ಅನಂತರ ಕಟೀಲು ಮೇಳವನ್ನು ಸೇರಿದವರು ಈಗಾಗಲೇ 45 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ದೇವೇಂದ್ರ, ಅರ್ಜುನ, ಮಧು-ಕೈಟಭ, ವರಹ, ಚಂಡ-ಮುಂಡರು, ವಿಷ್ಣು ಕೃಷ್ಣ, ನಕ್ಷತ್ರಕ, ದಾರುಕ, ಲಕ್ಷ್ಮೀ, ಸೀತೆ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಮೇಳದ ಪ್ರಬಂಧಕರಾಗಿಯೂ ಕಾರ್ಯ ನಿರ್ವಹಿಸಿರುವ ಅನುಭವಿ ಕಲಾವಿದರಾಗಿರುವ ಇವರು ಮಳೆಗಾಲದಲ್ಲಿ ಯಕ್ಷಗಾನದ ಭೂಷಣಗಳ ತಯಾರಿ ಕೆಲಸದಲ್ಲಿ ಪ್ರವೃತ್ತರಾಗುತ್ತಾರೆ.

ಶ್ರೀಮತಿ ಸರಸ್ವತಿ ಎಂಬವರನ್ನು ವರಿಸಿ ಲಾವಣ್ಯ, ವಿನುತ, ಯೋಗೀಶ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಕಿನ್ನಿಗೋಳಿ, ಪಚ್ಚನಾಡಿ ಮುಂತಾದೆಡೆಯಲ್ಲಿ ಅಭಿಮಾನಿಗಳಿಂದ ಸಂಮಾನವನ್ನು ಪಡೆದಿರುವರು.



## ಕೊರಗಪ್ಪ ಮಾಡವು


“ಸಣ್ಣಂಗಳ ನಡುಮನೆ”, ಕೆಯೂರು,

ಅಂಚೆ ಮಾಡವು, ಪುತ್ತೂರು ತಾಲೂಕು

ಮೊಬೈಲ್ : 9008645445


ಪುಂಡುವೇಷದ ಮೂಲಕವೇ ಗುರುತಿಸಲ್ಪಟ್ಟು ಜನ ಮನ್ನಣೆಗೆ ಕಾರಣರಾಗಿರುವ ಮಾಡವು ಕೊರಗಪ್ಪನವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

26-12-1955ರಲ್ಲಿ ಮಹಾಬಲ ರೈ ಮತ್ತು ಕಮಲ ರೈ ದಂಪತಿಯ ಸುಪುತ್ರರಾಗಿ ಮಾಡವು ಎಂಬಲ್ಲಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತಾಸಕ್ತಿಯ ಮೇರೆಗೆ 17ನೇ ವಯಸ್ಸಿನಿಂದಲೇ ಪಾತ್ರ ನಿರ್ವಹಣೆ ಮಾಡಲು ಆರಂಭಿಸಿದರು.

ಯಕ್ಷಗಾನದ ಕೀರ್ತಿಶೇಷ ಕಲಾವಿದ ಪಡೆ ಚಂದುರವರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಕೊರಗಪ್ಪರು ಕರ್ನಾಟಕ ಮೇಳ - 5 ವರ್ಷ, ಬಪ್ಪನಾಡು ಮೇಳ 2 ವರ್ಷ, ಕದ್ರಿ ಮೇಳ 2 ವರ್ಷ, ಪುತ್ತೂರು ಮೇಳ ವರ್ಷ ಹಾಗೂ ಕಟೀಲು ಮೇಳದಲ್ಲಿ 17 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಅಭಿಮನ್ಯು, ಬಭ್ರುವಾಹನ, ಲಕ್ಷ್ಮಣ, ಚಂಡ- ಮುಂಡರು, ಕುಶ-ಲವರು, ಕೃಷ್ಣ, ಪ್ರಹ್ಲಾದ, ಹುಂಡ- ಪುಂಡರು ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿರುವರು. ಅನಿವಾರ ಸಂದರ್ಭಗಳಲ್ಲಿ ಹಾಸ್ಯ ಪಾತ್ರಗಳನ್ನು ಕೂಡಾ ಚೆ ನ್ನಾಗಿ ಮಾಡಬಲ್ಲವರಾಗಿದ್ದಾರೆ.

ಶ್ರೀಮತಿ ಹೇಮಾವತಿ ಎಂಬವರನ್ನು ವರಿಸಿರುವ ಭಾನುಪ್ರಕಾಶ್ ರೈ ಇವ ರು ಸುಪುತ್ರನ್ನೋರ್ವನನ್ನು ಪಡೆದು ಸಂತೃಪ್ತ ಜೀವನವನ್ನು ನಡೆಸುತ್ತಿದ್ದಾರೆ.



## ಕೊರಗಪ್ಪ ಶೆಟ್ಟಿ ಅರುವ


“ಋಷಿ ಮನೆ, ಬಡಗ ಕಾರಂದೂರು ಗ್ರಾಮ,

ಅಳದಂಗಡಿ ಅಂಚೆ, ಬೆಳ್ತಂಗಡಿ ತಾಲೂಕು

ಮನೆ ದೂರಾವಾಣಿ: 08256-272299

ಮೊಬೈಲ್: 9449282969


ಅಭಿನಯ ವಿಶಾರದ, ರಂಗಸ್ಥಳದ ರಾಜ ಮೊದಲಾದ ಬಿರುದುಗಳಿಂದ ತೆಂಕುತಿಟ್ಟಿನ ಪ್ರತಿನಾಯಕ ಪಾತ್ರದಾರಿಯಾಗಿ ತುಳು ಮತ್ತು ಕನ್ನಡ ಭಾಷೆಯ ಪ್ರದರ್ಶನಗಳಲ್ಲಿ ಕಂಡುಬರುವವರು ಅರುವ ಕೊರಗಪ್ಪ ಶೆಟ್ಟಿ, ಕಳೆದ 11 ವರ್ಷಗಳಿಂದ ಮಂಗಳಾದೇವಿ ಮೇಳದ ಕಲಾವಿದರಾಗಿ ಕಲಾಜೀವನವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 24-11-1940ರಲ್ಲಿ ಸುಬ್ಬಯ್ಯ ಶೆಟ್ಟಿ ಮತ್ತು ಕಾಂತಕ್ಕ ಶೆಟ್ಟಿ ದಂಪತಿಯ ಸುಪುತ್ರರಾಗಿ ಅರುವದಲ್ಲಿ ಹುಟ್ಟಿದ ಕೊರಗಪ್ಪ ಶೆಟ್ಟರು ಪ್ರಾಥಮಿಕ ಹಂತದವರೆಗೆ ಶಾಲೆಗೆ ಹೋಗಿರುವರು ಬಾಲ್ಯದಲ್ಲೇ ಯಕ್ಷಗಾನದತ್ತ ಆಕರ್ಷಿತರಾದ ಇವರು ಅಧ್ಯಾಪಕರಾಗಿದ್ದ ವೆಂಕಟರಮಣ ಭಟ್, ಕೃಷ್ಣರಾಜ ಅಜಿಲ, ಮುತ್ತಯ್ಯ ಹೆಗಡೆ

ಮೊದಲಾದವರ ಪ್ರೋತ್ಸಾಹದೊಂದಿಗೆ ಪದ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಯಕ್ಷಗಾನ ರಂಗಕ್ಕೆ ಪ್ರವೇಶಿಸಿದರು.

ಬಾಲಗೋಪಾಲ ವೇಷದಿಂದ ಎದುರು ವೇಷದವರೆಗೆ ಹಂತ ಹಂತವಾಗಿ ಬೆಳೆಯುತ್ತಾ ಬಂದ ಕೊರಗಪ್ಪ ಶೆಟ್ಟರು 55 ವರ್ಷಗಳ ಮೇಳ ತಿರುಗಾಟವನ್ನು ನಡೆಸಿದ್ದಾರೆ. ಕಟೀಲು ಮೇಳ - 3 ವರ್ಷ, ಶ್ರೀ ಕುತ್ಯಾಳ ಮೇಳ 2 ವರ್ಷ, ಕುಂಡಾವು ಮೇಳ 7 ವರ್ಷ, ಕರ್ನಾಟಕ ಮೇಳ-31 ವರ್ಷ, ಎಡನೀರು ಮೇಳ 1 ವರ್ಷ ಹೀಗೆ ಮೇಳಗಳಲ್ಲಿ ತಿರುಗಾಟವನ್ನು ಮಾಡುತ್ತಾ ಪ್ರಸಿದ್ಧಿಗೆ ಏರಿದವರು. ಪ್ರಸ್ತುತ ಮಂಗಳಾದೇವಿ ಮೇಳದ ನೂತನ ಪ್ರಸಂಗಳಲ್ಲಿ ಪಾತ್ರವನ್ನು ವೈಭವೀಕರಿಸುತ್ತಿದ್ದಾರೆ.

ಕಂಸ, ಕೌರವ, ಕರ್ಣ, ಇಂದ್ರಜಿತು ಇತ್ಯಾದಿ ಖಳನಾಯಕ ಪಾತ್ರಗಳನ್ನು ಮಾಡುವ ಇವರು ವಿಷ್ಣು, ಬಭ್ರುವಾಹನ, ಸುಧನ್ವ, ದ್ರೋಣ, ಕೃಷ್ಣ, ವಿಶ್ವಾಮಿತ್ರ, ರೂಕ್ಷ ಮೊದಲಾದ ಭಿನ್ನ ಸ್ವಭಾವದ ಪಾತ್ರಗಳನ್ನು ಕೂಡ ಉತ್ತಮವಾಗಿ ನಿರ್ವಹಿಸುತ್ತಾರೆ.

ಕರ್ನಾಟಕ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾಗ ಪ್ರತಿನಾಯಕ ಪಾತ್ರಗಳಿಗೆ ತನ್ನದೇ ಆದ ಶೈಲಿಯನ್ನು ತೋರಿದ ಇವರು ಅದ್ವಿತೀಯ ಸ್ಥಾನಕ್ಕೇರಿದರು. ಪಾತ್ರದ ಸ್ವಭಾವವನ್ನು ಅರಿತು ಅದಕ್ಕೆ ತಕ್ಕಂತೆ ನಟಿಸುವುದರಿಂದಲೇ ಇವರ ಕೋಟಿ, ಬೀರಣ್ಣ, ದೇವುಪೂಂಜ, ಕಾಂತುಪೂಂಜ ಮೊದಲಾದ ಪಾತ್ರಗಳೆಲ್ಲಾವೂ ಜನಮಾನಸಕ್ಕೆ ಮುಟ್ಟಿದೆ. ಅಕ್ಷಯಾಂಬರ ವಿಲಾಸ ಪ್ರಸಂಗದಲ್ಲಿ ಇವರು ಮಾಡುವ ದುಶ್ಯಾಸನನ ಪಾತ್ರ ಸರ್ವರಿಂದಲೂ ಮುಕ್ತ ಪ್ರಶಂಸೆಗೆ ಒಳಗಾಗಿದೆ.

ಮಳೆಗಾಲದಲ್ಲಿ ಕೃಷಿಯ ಬಗ್ಗೆ ಶ್ರಮಿಸುವ ಮನೋಧರ್ಮವುಳ್ಳ ಇವರು ಶ್ರೀ ಮಹಾಲಕ್ಷ್ಮೀ ಎಂಬವರನ್ನು ವರಿಸಿ ವತ್ಸಲ, ದೇವಿಪ್ರಸಾದ್ (ಸಿವಿಲ್ ಕಂಟ್ರಾಕ್ಟರ್) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಬೇಸಿಗೆ ಮತ್ತು ಮಳೆಗಾಲದ ಪ್ರದರ್ಶನಗಳಲ್ಲಿ ಬೇಡಿಕೆಯ ಕಲಾವಿದರಾಗಿರುವ ಇವರ ಸಾಧನೆಗೆ ಪ್ರತಿಫಲವಾಗಿ ರಾಜ್ಯ ಪ್ರಶಸ್ತಿ ಸಹಿತ 300ಕ್ಕೂ ಮಿಕ್ಕಿ ಸಂಮಾನಗಳು ಸಂದಿವೆ. ಎಡನೀರು ಪ್ರಶಸ್ತಿ, ಕೀಲಾರು ಗೋಪಾಲಕೃಷ್ಣ ಪ್ರಶಸ್ತಿ ಪಟ್ಲಾಜೆ ಪ್ರಶಸ್ತಿ, ಉಡುಪಿ ಕಲಾರಂಗದ ಪ್ರಶಸ್ತಿ ಮುಂತಾದುವುಗಳನ್ನು ಉಲ್ಲೇಖಿಸಬಹುದು. ಮಸ್ಕತ್, ದುಬಾಯಿ, ಬೆಹರಿನ್ ಮೊದಲಾದ ಕಡೆಗಳಲ್ಲೂ ಅಭಿಮಾನಿಗಳ ಸಂಘಟನೆಯಲ್ಲಿ ಸಂಮಾನಗಳು ಸಂದಿವೆ.



## ಕೃಷ್ಣ ಮೂಲ್ಯ ಎ. ಕೈರಂಗಳ

"ಆನೆಗುಂಡಿ ಮನೆ, ಕೈರಂಗಳ ಗ್ರಾಮ,

ಅಂಚೆ ಬಂಟ್ವಾಳ ತಾಲೂಕು- 574153

ಮಬೈಲ್: 9448152182

ಶ್ರೀ ಕಟೀಲು ಮೇಳದ ಒಂದನೇ ಪುಂಡುವೇಷಧಾರಿಯಾಗಿ ತಿರುಗಾಟವನ್ನು ಮಾಡುವ ಎ. ಕೃಷ್ಣ ಮೂಲ್ಯ ಕೈರಂಗಳ ಅವರು ವಿಷ್ಣು, ಕೃಷ್ಣ, ರಾಮ ಮೊದಲಾದ ಪಾತ್ರಗಳನ್ನು ಸ್ವಭಾವಕ್ಕೆ ಅನುಗುಣವಾಗಿ ಚಿತ್ರಿಸುವ ಮನೋಧರ್ಮವನ್ನು ಹೊಂದಿದ್ದಾರೆ.

13-2-1954ರಲ್ಲಿ ಮಾರು ಮೂಲ್ಯ ಮತ್ತು ಅಕ್ಕು ಮೂಲ್ಯೆದಿ ದಂಪತಿಯ ಸುಪುತ್ರರಾಗಿ ಕೈರಂಗಳದ ಆನೆಗುಂಡಿಯಲ್ಲಿ ಕೃಷ್ಣ ಮೂಲ್ಯರು ಜನಿಸಿದರು. ಪ್ರಾಥಮಿಕ ಹಂತದವರೆಗೆ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಆನೆಗುಂಡಿ ಗಣಪತಿ ಭಟ್ಟರ ಒತ್ತಡದ ಮೇರೆಗೆ ಹೊಸಹಿಷ್ಣು ಮಹಾಲಿಂಗ ಭಟ್ಟರಲ್ಲಿ ನಾಟ್ಯಾಭ್ಯಾಸ ಮಾಡಿದರು.

26ನೇ ವರ್ಷದಿಂದ ಯಕ್ಷಗಾನಕ್ಕೆ ಸೇರಿದ ಇವರು ಕಟೀಲು ಮೇಳವೊಂದರಲ್ಲೇ ತಿರುಗಾಟವನ್ನು ಮಾಡಿದ ಕಲಾವಿದರಾಗಿದ್ದಾರೆ. ಪ್ರಸ್ತುತ 30ನೇ ವರ್ಷದ ತಿರುಗಾಟವನ್ನು ಪೂರೈಸಿದ್ದಾರೆ. ಒಂದನೇ ಪುಂಡುವೇಷದ ಪಾತ್ರಗಳಲ್ಲದೆ ಭೀಷ್ಮ, ಜಾಬಾಲಿ, ತಾಮ್ರಧ್ವಜ ಇತ್ಯಾದಿ ಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ. ಇವರ ದೇವೇಂದ್ರ, ಅರ್ಜುನ, ಪರಂಪರೆಯ ಧರ್ಮರಾಯ ಮೊದಲಾದ ಪಾತ್ರಗಳು ಕೂಡಾ ಉತ್ತಮ ನಿರ್ವಹಣೆಯ ಪಾತ್ರಗಳೆಂದೆನಿಸಿವೆ. ಪುಂಡುವೇಷ ಮತ್ತು ರಾಜವೇಷವನ್ನು ನಿರ್ವಹಿಸುವ ಸಮರ್ಥ ಕಲಾವಿದನೆಂದು ಗುರುತಿಸಲ್ಪಟ್ಟ ಇವರು ಅನಿವಾರ ಸಂದರ್ಭಗಳಲ್ಲಿ ಬಾಹುಕ, ವಿಜಯ ಮೊದಲಾದ ಹಾಸ್ಯ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಲೀಲಾವತಿ ಎಂಬವರನ್ನು ವರಿಸಿರುವ ಕೃಷ್ಣ ಮೂಲ್ಯರು ಕಿರಣ್‌ರಾಜ್, ಕಿಶನ್‌ರಾಜ್, ದೇವಿಕಲಾ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಹೋದರರು ಯಕ್ಷಗಾನ ಪ್ರಿಯರು, ಅಣ್ಣ ನಾರಾಯಣ ಹವ್ಯಾಸಿ ಕಲಾವಿದರಾಗಿದ್ದು ಕಿರೀಟ ಕಟ್ಟುವ ರಾಜವೇಷದ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಶಾಲೆ, ಕಾಲೇಜು ಮತ್ತು ಸಂಘ ಸಂಸ್ಥೆಗಳ ಪ್ರದರ್ಶನಗಳಿಗೆ ನಿರ್ದೇಶನ ಮಾಡಿರುವ ಕೃಷ್ಣ ಮೂಲ್ಯರ ಸಾಧನೆಗೆ ತಕ್ಕಂತೆ ಸಸಿಹಿತ್ತು, ಕಣ್ಣೂರು, ಕೊಡಕಲ್ಲು, ಕೈರಂಗಳ ಮುಂತಾದ ಕಡೆಗಳಲ್ಲಿ ಅಭಿಮಾನಿಗಳಿಂದ ಸಂಮಾನಗಳು ಸಂದಿವೆ.



## ಕೃಷ್ಣ ನಾಯ್ಕ ಪಕಳ ಕುಂಜ

ಮುಂಡಾಜೆ ಅಂಚೆ

ಬೆಳ್ತಂಗಡಿ ತಾಲೂಕು

ಮನೆ ದೂರವಾಣಿ: 08256-288154

ಬಣ್ಣದ ವೇಷಗಳಲ್ಲಿ ಶಿಸ್ತು ಬದ್ಧವಾದ ನಟನೆಯೊಂದಿಗೆ, ಪರಂಪರೆಯ ಶೈಲಿಯನ್ನು ತೋರಿ ಪ್ರೇಕ್ಷಕರ ಮನ್ನಣೆಯನ್ನು ಪಡೆದಿದ್ದ ಪಕಳ ಕುಂಜ ಕೃಷ್ಣ ನಾಯ್ಕರು ಧರ್ಮಸ್ಥಳ ಮೇಳದಲ್ಲಿ ತಿರುಗಾಟವನ್ನು ನಡೆಸಿ ನಿವೃತ್ತರಾಗಿದ್ದಾರೆ.

ದಿನಾಂಕ 1-1-1935ರಲ್ಲಿ ಚೋಮ ನಾಯ್ಕ ಮತ್ತು ಕಾವೇರಿ ದಂಪತಿಯ ಸುಪುತ್ರರಾಗಿ ಬಂಟ್ವಾಳ ತಾಲೂಕಿನ ಪಕಳ ಕುಂಜದಲ್ಲಿ ಜನಿಸಿದರು. ಎಳವೆಯಲ್ಲಿಯೇ ಯಕ್ಷಗಾನದ ಪ್ರದರ್ಶನಗಳನ್ನು ನೋಡಿ ತಾನೂ ಕೂಡಾ ಪಾತ್ರ ನಿರ್ವಹಣೆ ಮಾಡಬೇಕೆಂಬ ಹಂಬಲದಿಂದ ಚಂದಗಿರಿ ಅಂಬು ಅವರ ಒಡನಾಟದಲ್ಲಿ ಬೆಳೆದು ಬಂದರು.

ಶ್ರೀ ಧರ್ಮಸ್ಥಳ ಮೇಳದಲ್ಲಿ ಸುದೀರ್ಘವಾದ ತಿರುಗಾಟವನ್ನು ಮಾಡಿರುವ ಇವರು ರಾವಣ, ಮೈರಾವಣ, ಮಹಿಷಾಸುರ, ಕುಂಭ ಕರ್ಣ, ಖರಾಸುರ ಮೊದಲಾದ ಬಣ್ಣದ ವೇಷಗಳಿಂದ ಪ್ರಸಿದ್ಧರಾಗಿದ್ದಾರೆ. ಇವರು ಧರ್ಮಸ್ಥಳ ಮೇಳದ ತಿರುಗಾಟವನ್ನು ನಿಲ್ಲಿಸಿದ ಮೇಲೆ ಹೇಳಿಕೆಯ ಮೇರೆಗೆ ಹಲವಾರು ಹವ್ಯಾಸಿ ಕಾರ್ಯ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದರು.

ಪ್ರಸಂಗ ಮತ್ತು ಪಾತ್ರಗಳ ಬಗ್ಗೆ ಆಸಕ್ತರಿಗೆ ಮಾರ್ಗದರ್ಶನವನ್ನು ಮಾಡುತ್ತಿದ್ದ ಇವರು ಕಳೆದ ನಾಲ್ಕಾರು ವರ್ಷಗಳಿಂದ ಅನಾರೋಗ್ಯದ ನಿಮಿತ್ತ ಮನೆಯಲ್ಲಿಯೇ ಇದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನವಲ್ಲದೇ ಹಲವಾರು ಸಂಘ ಸಂಸ್ಥೆಗಳ ಗೌರವ ಪುರಸ್ಕಾರಗಳು ಮತ್ತು ಸಹಾಯ ಧನವೂ ದೊರೆತಿದೆ.



## ಗಣಪತಿ ಶಾಸ್ತ್ರಿ ಕುರಿಯ


"ಕುರಿಯ ಮನೆ, ಪೈವಳಿಕೆ ಗ್ರಾಮ

ಕುರುಡಪದವು ಅಂಚೆ, ವಯಾ ಉಪ್ಪಳ, ಕಾಸರಗೋಡು

ಮೊಬೈಲ್: 9611497264

ಮನೆ ದೂರವಾಣಿ: 0499 - 8205359

ರಂಗತಂತ್ರ ಹಾಗೂ ಹಾಡುವಿಕೆಯಿಂದ ಪ್ರದರ್ಶನವನ್ನು ರಸವತ್ತಾಗಿಸಿ ಪ್ರೇಕ್ಷಕರ ಮೆಚ್ಚುಗೆಗೆ ಕಾರಣರಾಗಿರುವ ಪರಂಪರಾಗತ ಭಾಗವತ ಗಣಪತಿ ಶಾಸ್ತ್ರಿ ಕುರಿಯ ಇವರು ಕಟೀಲು ಮೇಳದ ಮುಖ್ಯ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

12-8-1952ರಲ್ಲಿ ಕುರಿಯ ರಾಮ ಶಾಸ್ತ್ರಿ ಮತ್ತು ಗಂಗಮ್ಮ ದಮಪತಿಯ ಸುಪುತ್ರರಾಗಿ ಕುರಿಯ ಮನೆಯಲ್ಲಿ ಹುಟ್ಟಿದರು.ಬಿ. ಎ. ಪದವೀದರರಾಗಿರುವ ಇವರು ಮನೆತನದ ಹಿನ್ನೆಲೆಯಿಂದ ಎಳವೆಯಿಂದಲೇ ಪ್ರಭಾವಿತರಾಗಿದ್ದರು. ತಂದೆ, ಅಜ್ಜ, ದೊಡ್ಡ ತಂದೆ ಕುರಿಯ ವಿಠಲ ಶಾಸ್ತ್ರಿ ಹೀಗೆ ಮನೆತನದವರು ಭಾಗವತಿಕೆ ಅಥವಾ ವೇಷಗಾರಿಕೆ ಇತ್ಯಾದಿ ಹಿನ್ನೆಲೆಯಿಂದ ಕೀರ್ತಿಶೇಷರಾಗಿದ್ದಾರೆ. ಹೀಗಾಗಿ ರಕ್ತಗತವಾಗಿ ಬಂದ ಪ್ರತಿಭೆಯಿಂದ 14ನೇ ವಯಸ್ಸಿನಿಂದಲೇ ನಾಟ್ಯಾಭ್ಯಾಸ ಮಾಡಿ ಹವ್ಯಾಸಿ ವೇಷಧಾರಿಯಾಗಿದ್ದರು.

ಕುರಿಯ ವಿಠಲ ಶಾಸ್ತ್ರಿಗಳೇ ಇವರಿಗೆ ನಾಟ್ಯಾಭ್ಯಾಸ ಮಾಡಿಸಿದ್ದರು. ಆ ಮೇಲೆ ಬಾಲ್ಯದಿಂದಲೇ ಹಾಡುತ್ತಿದ್ದ ಇವರಿಗೆ ಬಾಯಾರು ಸುಬ್ರಾಯ ಭಟ್ಟರು ಶೃತಿಗೆ ಹಾಡುವುದನ್ನು ಕಲಿಸಿದ್ದರು. ಮುಂದೆ ನೆಡ್ಲೆ ನರಸಿಂಹ ಭಟ್, ಚೆಪ್ಪಾರು ಕೃಷ್ಣಯ್ಯ ಬಲ್ಲಾಳ್ ಮುಂತಾದವರಿಂದ ಹೆಚ್ಚಿನ ರಂಗಾನುಭವವನ್ನು ಪಡೆದಿದ್ದಾರೆ.

ಉತ್ತಮ ಉದ್ಯೋಗದ ಅವಕಾಶವನ್ನು ತೊರೆದು ಕಟೀಲು ಮೇಳವೊಂದರಲ್ಲೇ 33 ವರ್ಷಗಳ ತಿರುಗಾಟವನ್ನು ನಡೆಸಿರುವ ಇವರು ಮಹಿಷಾಸುರ, ಮೈರಾವಣ, ವೀರಭದ್ರ, ಕಂಸ, ಕಾರ್ತವೀರ್ಯ, ಪರಶುರಾಮ ಮುಂತಾದ ವೇಷಗಳನ್ನು ನಿರ್ವಹಿಸಿದ್ದಾರೆ. ಬಾಲ್ಯದಲ್ಲೇ ನೀಲೇಶ್ವರದ ಕಲೋತ್ಸವದಲ್ಲಿ ಭಾಗವಹಿಸಿ ಕಂಸನ ಪಾತ್ರ ಮಾಡಿ ಜಿಲ್ಲಾ ಮಟ್ಟದ ವೈಯಕ್ತಿಕ ಬಹುಮಾನವನ್ನು ಪಡೆದವರು ಇವರಾಗಿದ್ದಾರೆ.

ದಶಾವತಾರ, ದುಶ್ಯಾಸನ ವಧೆ, ಕಿರಾತಾರ್ಜುನ, ದೇವಿ ಮಹಾತ್ಮ ಮುಂತಾದ ಹಲವಾರು ಪ್ರಸಂಗಗಳನ್ನು ತನ್ನದೇ ಆದ ವರ್ಚಸ್ಸಿನಿಂದ ಆಡಿ - ತೋರಿಸಿ ಯೋಗ್ಯತೆಯನ್ನು ಮೆರಿಸಿದ್ದಾರೆ. ಕಲಾವಿದರನ್ನು ಚೆನ್ನಾಗಿ ಕುಣಿಸಿ ಅವರ ಸತ್ವ ಪ್ರದರ್ಶನವನ್ನು ಮಾಡಬಲ್ಲ ಚಾಕಚಕ್ಯತೆ ಕೂಡಾಇವರಲ್ಲಿದೆ.

ಕೃಷಿಕ ಮನೆತನಕ್ಕೆ ಸೇರಿದ ಇವರು ಶ್ಯಾಮಲ ಎಂಬವರನ್ನು ವರಿಸಿದ್ದಾರೆ. ಇವರ ಕಲಾ ಸಾಧನೆಗೆ ಗೌರವವಾಗಿ ಕಟೀಲು ಭ್ರಾಮರಿ ಯಕ್ಷಗಾನದ ಸಂಮಾನ, ಮಚ್ಚಾರು ಅಭಿಮಾನಿಗಳ ಸಂಮಾನಗಳಲ್ಲದೆ ಮೈಲೊಟ್ಟು, ಕೈಕಂಬ, ಬಾಯಾರು ಮೊದಲಾದೆಡೆಯಲ್ಲಿ ಕಲಾಭಿಮಾನಿಗಳಿಂದ ಗೌರವ ಪುರಸ್ಕಾರಗಳು ಸಂದಿವೆ.



## ಗಣಪತಿ ಭಟ್ ಪದ್ಯಾಣ


"ಗಂಧರ್ವ" ಮನೆ, ಕಲ್ಮಡ್ಕ ಗ್ರಾವಡ

ಸುಳ್ಯ ತಾಲೂಕು 574257

(ಮೊಬೈಲ್) 9448152570

08257-270040


ಸುಶ್ರಾವ್ಯ ಭಾಗವತಿಕೆಯ ಮುಖೇನ ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದ ರಾಗಿ ಜನಮನ್ನಣೆಯನ್ನು ಪಡೆದಿರುವ ಪದ್ಯಾಣ ಗಣಪತಿ ಭಟ್ಟರು ಪ್ರಸ್ತುತ ಶ್ರೀ ಹೊಸನಗರ ರಾಮಚಂದ್ರಾಪುರ ಮೇಳದ ಮುಖ್ಯ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪದ್ಯಾಣ ತಿರುಮಲೇಶ್ವರ ಭಟ್ ಮತ್ತು ಪಿ. ಸಾವಿತ್ರಿ ಅಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 21-5-1955ರಂದು ಪೈವಳಿಕೆಯ ಕುಂಡೇರಿ ಎಂಬಲ್ಲಿ ಹುಟ್ಟಿದರು. ತಂದೆ ಹಿಮ್ಮೇಳ ವಾದಕರು, ಅಜ್ಜ ಪುಟ್ಟು ನಾರಾಯಣರು ಭಾಗವತರಾಗಿದ್ದರು. ಹೀಗಾಗಿ ಮನೆತನದ ಹಿನ್ನಲೆ ಪದ್ಯಾಣ ಗಣಪತಿ ಭಟ್ಟರಿಗಿದ್ದು ರಕ್ತಗತವಾದ ಪ್ರತಿಭೆಯಿಂದ ಕಲಾ ಸಾಧನೆಯನ್ನು ತೋರಿ ಮೆರೆದಿದ್ದಾರೆ.

ಮನೆತನದ ಮಾರ್ಗದರ್ಶನ ಹಾಗೂ ವಾಂಬಾಡಿ ನಾರಾಯಣ ಭಾಗವತರ ನಿರ್ದೇಶನದಿಂದ ಭಾಗವತರಾಗಿ ಬೆಳೆದ ಇವರು ಚೆಂಡೆ ಮದ್ದಳೆಗಳ ನುಡಿತ-ಬಡಿತಗಳಲ್ಲೂ ಪ್ರವೀಣರಾಗಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿದ್ದು 15ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದ ಇವರ ಅನುಭವ - ಸಾಧನೆ ಹಿರಿದಾದುದು.

ಆರಂಭದಲ್ಲಿ ಚೌಡೇಶ್ವರಿ, ಕುಂಡಾವು, ಸುರತ್ಕಲ್ ಮೇಳಗಳಲ್ಲಿ 2 ವರ್ಷಗಳ ತನಕ ಹೇಳಿಕೆಯ ಮೇರೆಗೆ ಭಾಗವಹಿಸುತ್ತಿದ್ದ ಇವರು ಮುಂದೆ ಕುಂಡಾವು ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿ ಸುರತ್ಕಲ್ ಮೇಳವನ್ನು ಸೇರಿದರು. ಅಲ್ಲಿ 26 ವರ್ಷಗಳ ತಿರುಗಾಟವನ್ನು ಮಾಡಿ ಕೀರ್ತಿ - ಸಂಪನ್ನರಾದರು. ಅನಂತರ ಮಂಗಳಾದೇವಿ

ಮೇಳ - 2 ವರ್ಷ, ಕರ್ನಾಟಕ ಮೇಳ - 1 ವರ್ಷ, ಎಡನೀರು ಮೇಳ 3 ವರ್ಷ, ಹೊಸನಗರ ಮೇಳ 4 ವರ್ಷ ಹೀಗೆ ತಿರುಗಾಟವನ್ನು ನಡೆಸಿದ್ದಾರೆ.

ಹಲವಾರು ಮಂದಿ ಶಿಷ್ಯರನ್ನು ಹೊಂದಿರುವ ಇವರು ತುಳು ಮತ್ತು ಕನ್ನಡ ಭಾಷೆಯ ಪ್ರಸಂಗಗಳನ್ನು ಸಮರ್ಥವಾಗಿ ಪ್ರದರ್ಶನಕ್ಕೊಳಪಡಿಸ ಬಲ್ಲ ಭಾಗವತರಾಗಿದ್ದಾರೆ. ಸಂಗೀತದ ಬಗ್ಗೆ ಜ್ಞಾನವುಳ್ಳ ಗಣಪತಿ ಭಟ್ಟರು ಯಕ್ಷಗಾನದ ಪದ್ಯಗಳಿಗೆ ಹೊಸರಾಗ ಸಂಯೋಜನೆಯನ್ನು ಮಾಡಿದ್ದಾರೆ. ಹಲವಾರು ಹೊಸರಾಗಗಳಿಂದ ಚೈತನ್ಯಯ - ಪೂರ್ಣವಾಗಿ ಹಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕೃಷಿಕ ಮನೆತಕ್ಕೆ ಸೇರಿರುವ ಇವರು ಶ್ರೀಮತಿ ಶೀಲಾ ಜಿ. ಭಟ್ ಎಂಬವರನ್ನು ವರಿಸಿ ಸ್ವಸ್ತಿಕ್ ಪದ್ಯಾಣ (ಬ್ಯಾಂಕ್ ಉದ್ಯೋಗಿ) ಮತ್ತು ಕಾರ್ತಿಕ್ ಪದ್ಯಾಣ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಸಾಧನೆಯ ಫಲವಾಗಿ ದೆಹಲಿ, ಮುಂಬಯಿ, ಬೆಂಗಳೂರು, ಕುವೈಟ್, ಮಸ್ಕತ್ ಮೊದಲಾದೆಡೆಯಲ್ಲಿ ಸಂಮಾನಗೊಳಗಾಗಿದ್ದಾರೆ. ಕೀಲಾರು ಪ್ರಶಸ್ತಿ, ಪಟ್ಲಾಜೆ ಪ್ರಶಸ್ತಿ, ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳು ಇವರಿಗೆ ಸಲ್ಲಲ್ಪಟ್ಟಿವೆ.



## ಗಣೇಶ್ ರಾವ್ ಅಡೂರು

ಪುತ್ತಿಲ ಮನೆ, ಅಂಚೆ: ಉರುಡೂರು

ಅಡೂರು ಗ್ರಾಮ, ಕಾಸರಗೋಡು ಜಿಲ್ಲೆ - 671543

ಮೊಬೈಲ್ : 9448152565

ಚೆಂಡೆ-ಮದ್ದಳೆಯ ಬಡಿತ ನುಡಿತಗಳಲ್ಲಿ ತೀವ್ರಗತಿಯ ಕೈಚಳಕವನ್ನು ತೋರುವ ಶ್ರೀ ಅಡೂರು ಗಣೇಶ ರಾವ್‌ರವರು ತೆಂಕುತಿಟ್ಟಿನ ಕ್ಷೇತ್ರದಲ್ಲಿ ಗುರುತಿಸಲ್ಪಡುವ ಪ್ರತಿಭಾನ್ವಿತ ಕಲಾವಿದರಾಗಿದ್ದು, ಪ್ರಸ್ತುತ ಧರ್ಮಸ್ಥಳ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿರುವರು.

೧೯೭೮ ನೇ ವರ್ಷದಲ್ಲಿ ಮಾರ್ಚ್ ತಿಂಗಳ ೨೩ ನೇ ದಿನಾಂಕದಂದು ಕೆ. ಕೃಷ್ಣರಾವ್ ಮತ್ತು ಪಾರ್ವತಿ ದಂಪತಿಯ ಸುಪುತ್ರರಾಗಿ ಮಂಗಳೂರಿನಲ್ಲಿ ಹುಟ್ಟಿದರು. ಇವರ ತಂದೆ, ಅಜ್ಜಂದಿರು ಮದ್ದಳೆಗಾರರಾಗಿ ಪ್ರಭಾವಿತರಾಗಿದ್ದುದರಿಂದ, ಆ ಪ್ರಭಾವದ ಗುಣ ವಂಶ ಪಾರಂಪರವಾಗಿ ಇವರಿಗೂ ಬಂದಿದೆ. ತಂದೆಯವರಿಂದ ಮೊದಲ ಪಾಠ, ಅನಂತರ ದಿ| ನೆಡ್ಲೆ ನರಸಿಂಹ ಭಟ್ಟರಿಂದ ಹೆಚ್ಚಿನ ಅಧ್ಯಯನವನ್ನು ಮಾಡಿರುವ ಗಣೇಶ್ ರಾವ್ ಚೆಂಡೆ ಮತ್ತು ಮದ್ದಳೆಗಳ ಬಾರಿಸುವಿಕೆಯೊಂದಿಗೆ ಭಾಗವತಿಕೆಯನ್ನು ಕೂಡಾ ಮಾಡಬಲ್ಲವರಾಗಿದ್ದಾರೆ.

ಶೈಕ್ಷಣಿಕವಾಗಿ ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪೂರೈಸಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಗಮನ ಹರಿಸುತ ಬೆಳೆದರು. ತಂದೆ ಕೃಷ್ಣ ರಾವ್ ಇವರಿಗೆ ಇವರಿಗೆ 13ನೇ ವಯಸ್ಸಿನಲ್ಲೇ ಹಿಮ್ಮೇಳದ ಪಾಠಾಭ್ಯಾಸವನ್ನು ಮಾಡಿದ್ದರು. ಮುಂದೆ ಮೇಳ ತಿರುಗಾಟಕ್ಕೆ ಸೇರಿದ ಇವರು ಸುರತ್ಕಲ್ ಮೇಳ - 1 ವರ್ಷ, ಕಟೀಲು ಮೇಳ 9 ವರ್ಷ, ಪುತ್ತೂರು-ಮೇಳ -6 ವರ್ಷ, ಕದ್ರಿ ಮೇಳ-1 ವರ್ಷ, ಧರ್ಮಸ್ಥಳ ಮೇಳ – 14 ವರ್ಷ ಹೀಗೆ 5 ಮೇಳಗಳಲ್ಲಿ 30 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಶ್ರೀಮತಿ ಶೀಲಾ ಎಂಬವರನ್ನು ವರಿಸಿರುವ ಇವರು ಅನುಶ್ರೀ ಮತ್ತು ಅನಿರುದ್ಧ ಎಂಬ ಹೆಸರಿನ ಇಬ್ಬರು ಎಳೆಯ ಮಕ್ಕಳೊಂದಿಗೆ ಸಂಸಾರ ಜೀವನವನ್ನು ನಡೆಸುತ್ತಿದ್ದಾರೆ. ಮಳೆಗಾಲದಲ್ಲಿ ಜೀವನೋಪಾಯಕ್ಕಾಗಿ ಕೃಷಿಗಾರಿಕೆಯನ್ನು ಅವಲಂಬಿಸಿರುವ ಇವರು ಬೇಡಿಕೆಯ ಕಲಾವಿದರಾಗಿದ್ದು ಮಳೆಗಾಲದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ಆರಂಭದ ಹಂತದಲ್ಲಿ ವೇಷಗಾರಿಕೆಯ ಬಗ್ಗೆ ಆಸಕ್ತಿ ಇದ್ದ ಇವರು ಕಿರೀಟ ವೇಷ, ಪುಂಡು ವೇಷ, ಮತ್ತು ಬಣ್ಣದ ವೇಷಗಳನ್ನು ಮಾಡಿದ್ದಾರೆ. ರಂಗ ಮಾಹಿತಿ ಮತ್ತು ಪಾತ್ರಗಳ ಸ್ವಭಾವದ ಬಗ್ಗೆ ಜ್ಞಾನವುಳ್ಳ ಇವರಿಗೆ ನಾಡಿನ ಹಲವು ಸಂಮಾನಗಳು ಸಂದಿವೆ.

ಕುವೈಟ್, ದಕ್ಷಿಣ ಕನ್ನಡ ಬಂಟರ ಸಂಘ ಮತ್ತು ಮಸ್ಕತ್ ಕನ್ನಡ ಸಂಘ ಈ ಸಂಸ್ಥೆಗಳು ಇವರನ್ನು ಸಂಮಾನಿಸಿವೆ. ಬೆಂಗಳೂರು ಮುಂಬಯಿಯ ಮೊದಲಾದ ನಗರಗಳು ಸೇರಿದಂತೆ ದೇಶ ವಿದೇಶಗಳ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕೀರ್ತಿವಂತರಾಗಿದ್ದಾರೆ.



## ಗಣೇಶ್ ಕುಂದರ್, ಕೊಳಂಬೆ

ತಲ್ಲದ ಬೈಲು ಮನೆ, ಕೊಳಂಬೆ ಅಂಚೆ

ಮಂಗಳೂರು ತಾಲೂಕು

(ಮನೆ ದೂರವಾಣಿ:) 0824-2251634

ಪ್ರಸ್ತುತ ಮಂಗಳಾದೇವಿ ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಗಣೇಶ್ ಕುಂದರ್ ಕೊಳಂಬೆಯವರು ರಾಜ ವೇಷ, ಪುಂಡು ವೇಷ ಮತ್ತು ನಾಟಕೀಯ ವೇಷಗಳನ್ನು ಸಮರ್ಥವಾಗಿ ನಿರ್ವಹಿಸಿ ಜನಮನ್ನಣೆಗೆ ಕಾರಣರಾಗಿದ್ದಾರೆ.

ನಾರಾಯಣ ಬಿ. ಮತ್ತು ಲೀಲಾ ದಂಪತಿಯ ಸುಪುತ್ರರಾಗಿ 1967ನೇ ವರ್ಷದಲ್ಲಿ ಬಜ್ಪೆಯ ಕೊಳಂಬೆಯಲ್ಲಿ ಹುಟ್ಟಿದರು. ಶೈಕ್ಷಣಿಕವಾಗಿ 7ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಕಲಾ ಪ್ರಭಾವಕ್ಕೆ ಒಳಗಾಗಿ ಶಕ್ತಿನಗರ ಕೇಶವರಿಂದ ಆರಂಭ ಹಂತದ ನಾಟ್ಯಾಭ್ಯಾಸವನ್ನು ನಡೆಸಿದರು. ಆಮೇಲೆ ಮೇಳ ತಿರುಗಾಟದಲ್ಲಿ ಸಂದರ್ಭಕ್ಕೆ ತಕ್ಕಂತೆ ಹೆಚ್ಚಿನ ಅನುಭವವನ್ನು ಸಂಪಾದಿಸುತ್ತಾ ಬೆಳೆದು ಬಂದರು.

ತಳಕಲ ಮೇಳ 3 ವರ್ಷ, ಸುಂಕದಕಟ್ಟೆ ಮೇಳ 14 ವರ್ಷ, ಮಂಗಳಾದೇವಿ ಮೇಳ - 3 ವರ್ಷ ಹೀಗೆ 3 ಮೇಳಗಳ ತಿರುಗಾಟದ ಅನುಭವವಿರುವ ಇವರಿಗೆ ಪೌರಾಣಿಕ ಹಾಗೂ ತುಳು ಪ್ರಸಂಗಗಳ ಪಾತ್ರಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ಪ್ರಭುತ್ವವಿದೆ.

ಪರಶುರಾಮ, ಕೋಟಿ-ಚೆನ್ನಯ, ಹಿರಣ್ಯ ಕಶ್ಯಪ, ಹಿರಣ್ಯಾಕ್ಷ, ವಾವರ, ಕಾರ್ತವೀರ್ಯ, ದಾರಿಕಾಸುರ, ಬಬ್ಬು, ಶುಂಭ, ಭೀಮ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಖಳ ಪಾತ್ರಗಳು ಹಾಗೂ ಪ್ರತಿನಾಯಕ ಪಾತ್ರಗಳನ್ನು ನಿರ್ವಹಿಸುವಲ್ಲಿ ಇವರ ಸ್ವಾಭಾವಿಕ ಗುಣ ಧರ್ಮವನ್ನು ಕಾಣಬಹುದಾಗಿದೆ.

ಶ್ರೀಮತಿ ಲೀಲಾ ಎಂಬವರನ್ನು ವರಿಸಿರುವ ಇವರಿಗೆ ಚರಣ್ ರಾಜ್ (ಉದ್ಯೋಗಿ), ಮನೋಜ್ (10ನೇ ತರಗತಿ) ಎಂಬ ಇಬ್ಬರು ಮಕ್ಕಳಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಉಡುಪಿ ಉದ್ಯಾವರ, ಕರಂಬಾರು, ಹೊಸಂಗಡಿ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



## ಗಣೇಶ್ ಭಟ್ ಟಿ. ಕೆ. ಹಳುವಳ್ಳಿ


"ತಂಬಿ ಕುಡಿಗೆ ಮನೆ, ಹಳುವಳ್ಳಿ ಅಂಚೆ

ಮೂಡಿಗೆರೆ ತಾಲೂಕು,

ಚಿಕ್ಕಮಗಳೂರು ಜಿಲ್ಲೆ 577124

(ಮನೆ ದೂರವಾಣಿ:): 08263 - 214475


ಶ್ರೀದೇವಿ ಪಾತ್ರದ ಮುಖೇನ ಜನಮನ್ನಣೆಗೆ ಕಾರಣರಾಗಿರುವ ಶ್ರೀ ಟಿ.ಕೆ. ಗಣೇಶ್ ಭಟ್ ಹಳುವಳ್ಳಿಯವರು ಕಲಾಗಾರಿಕೆಯ ಬಗ್ಗೆ ನಿಷ್ಠೆಯುಳ್ಳ ಕಲಾವಿದರಾಗಿದ್ದು ಪ್ರಸ್ತುತ ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೃಷ್ಣಯ್ಯ ಮತ್ತು ಗಂಗಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 21-2-1956ರಂದು ಹಳುವಳ್ಳಿಯಲ್ಲಿ ಹುಟ್ಟಿದರು. 10ನೇ ಇಯತ್ತೆಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುವ ಇವರು ಯಕ್ಷಗಾನ ಕಲೆಯ ಮೇಲೆ ಪ್ರಭಾವಿತರಾಗಿ ರಂಗ ಪ್ರವೇಶ ಮಾಡಿದರು.

20ನೇ ವಯಸ್ಸಿನಿಂದಲೇ ಬಣ್ಣ ಹಚ್ಚಲು ಆರಂಭಿಸಿದ ಹಳುವಳ್ಳಿಯವರ ತೆಂಕುತಿಟ್ಟಿನ ನಾಟ್ಯಕ್ಕೆ ಗುರು ಪಡ್ರೆ ಚಂದು ಮತ್ತು ಕೆ. ಗೋವಿಂದ ಭಟ್. ಎಂ. ಜಿ. ವಿಶ್ವನಾಥ ಜೋಯಿಸರು ಬಡಗು ತಿಟ್ಟಿನ ಗುರುವಾಗಿದ್ದಾರೆ.

ಆರಂಭದಲ್ಲಿ ಧರ್ಮಸ್ಥಳ ಮೇಳದಲ್ಲಿ 1 ವರ್ಷ ಅನಂತರ ಸುಂಕದಕಟ್ಟೆ ಮೇಳದಲ್ಲಿ 20 ವರ್ಷ ತಿರುಗಾಟ ನಡೆಸಿದ ಮೇಲೆ ಕಟೀಲು ಮೇಳವನ್ನು ಸೇರಿದವರು ಈಗಾಗಲೇ 15 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಸ್ತ್ರೀ, ಪುಂಡು, ರಾಜ, ಬಣ್ಣ ಮತ್ತು ಪೋಷಕ ಪಾತ್ರಗಳು ಸೇರಿದಂತೆ ಎಲ್ಲಾ ವಿಧದ ಪಾತ್ರಗಳನ್ನು ತೆಂಕು ಮತ್ತು ಬಡಗು ತಿಟ್ಟುಗಳೆರಡರಲ್ಲಿ ನಿರ್ವಹಿಸಿದ ಅನುಭವವನ್ನು ಹೊಂದಿದ್ದಾರೆ. ದಾಕ್ಷಾಯಿಣಿ, ಅಂಬೆ, ಕಯಾದು, ಪುಲ್ಲಪರ್ಗಡಿ, ಕಿನ್ನಿದಾರು, ವಿಷ್ಣು, ಸಂಜಯ, ಶುಂಭ, ತಾಟಕಿ, ಮುಂತಾದ ಪಾತ್ರಗಳನ್ನು ಮಾಡಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಹಳುವಳ್ಳಿಯವರು ಶ್ರೀಮತಿ ಸೀತಾಲಕ್ಷ್ಮೀ ಎಂಬವರನ್ನು ವರಿಸಿ, ಶಶಿಧರ (ಪಿ.ಯು.ಸಿ.) ಶಾಂಭವಿ (10ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಕಲಶ, ಕೊಲಂಬೆ, ಕೌಡೂರು, ಪುತ್ತೂರು ಮುಂತಾದ ಕಡೆಗಳಲ್ಲಿ ಇವರ ಅಭಿಮಾನಿ ಬಳಗವು ಸಂಮಾನಿಸಿ ಗೌರವಿಸಿದೆ.



## ಗಂಗಯ್ಯ ಶೆಟ್ಟಿ ಗೇರುಕಟ್ಟೆ


"ಸಂಬೊಳ್ಯ" ಮನೆ

ಕಳಿಯ ಗ್ರಾಮ, ಗೇರುಕಟ್ಟೆ ಅಂಚೆ

ಬೆಳ್ತಂಗಡಿ ತಾಲೂಕು-574293

ಮೊಬೈಲ್: 9449662163

ರಾಜವೇಷ, ನಾಟಕೀಯ ವೇಷ ಮತ್ತು ಬಣ್ಣದ ವೇಷಗಳನ್ನು ಮಾಡಿ ಜನಮನ್ನಣೆಗೆ ಒಳಗಾಗಿರುವ ಶ್ರೀ ಗಂಗಯ್ಯ ಶೆಟ್ಟಿ ಗೇರುಕಟ್ಟೆಯವರು ಕಟೀಲು ಮೇಳದ ಹಿರಿಯ ಕಲಾವಿದರಾಗಿದ್ದಾರೆ.

ಅಮ್ಮು ಶೆಟ್ಟಿ ಮತ್ತು ಕಮಲ ಶೆಡ್ತಿ ದಂಪತಿಯ ಸುಪುತ್ರರಾಗಿ ಗೇರುಕಟ್ಟೆಯಲ್ಲಿ ಜನಿಸಿದ ಇವರಿಗೆ ಈಗಾಗಲೇ 56 ವರ್ಷಗಳು ಆಗಿವೆ. 9ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಗಂಗಯ್ಯ ಶೆಟ್ಟರು ಯಕ್ಷಗಾನದ ಪ್ರಭಾವಕ್ಕೆ ಒಳಗಾಗಿ 16ನೇ ವಯಸ್ಸಿನಿಂದ ಕಲಾಸೇವೆಯನ್ನು ಆರಂಭಿಸಿದ್ದಾರೆ.

ಪಡ್ರೆ ಚಂದು ಅವರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗ ಪ್ರವೇಶ ಮಾಡಿದ ಇವರು ಕಟೀಲು ಮೇಳವೊಂದರಲ್ಲೇ 40 ವರ್ಷಗಳ ತಿರುಗಾಟವನ್ನು ಪೂರೈಸಿ ಹಿರಿಮೆಗೆ ಪಾತ್ರರಾಗಿದ್ದಾರೆ. ರಾವಣ, ಕುಂಭಕರ್ಣ, ಹಿರಣ್ಯಾಕ್ಷ, ನರಕಾಸುರ, ಮೈರಾವಣ, ಮಧು-ಕೈಟಭ, ಕೌಂಡ್ಲಿಕ ಮೊದಲಾದ ಪಾತ್ರಗಳನ್ನು ಬಣ್ಣಗಾರಿಕೆಯಲ್ಲಿ ರುದ್ರ ರಮಣೀಯತೆಯನ್ನು ಚಿತ್ರಿಸ ಬಲ್ಲ ಇವರು ಪೌರಾಣಿಕ ಪ್ರಸಂಗಗಳ ಅನುಭವಿ ಕಲಾವಿದರಾಗಿದ್ದಾರೆ. ದೇವಿ ಮಹಾತ್ಮೆಯ ಮಹಿಷಾಸುರ ಮತ್ತು ದುಶ್ಯಾಸನ ವಧೆಯ ರುದ್ರಭೀಮ ಇವರಿಗೆ ಹೆಚ್ಚಿನ ಕೀರ್ತಿ ಮತ್ತು ಮನ್ನಣೆಯನ್ನು ತಂದುಕೊಟ್ಟಿದೆ. ಹಿಂದೆ ಕಟೀಲು ಕ್ಷೇತ್ರ ಮಹಾತ್ಮೆಯ ವಜ್ರದುಂಬಿಯಾಗಿ ಘೋರರೂಪದ ಪಾತ್ರ ನಿರ್ವಹಣೆಯನ್ನು ಮಾಡಿ ಜನಾಕರ್ಷಣೆಗೆ ಒಳಗಾಗಿದ್ದರು.

ಮೇಳದ ಪ್ರಬಂಧ ಕರಾಗಿಯೂ ಕಾರನಿರ್ವಹಿಸುತ್ತಿರುವ ಇವರು ಹವ್ಯಾಸಿ ಕಲಾವಿದರಿಗೆ ತರಬೇತಿಯನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಶ್ರೀಮತಿ ಕಮಲ ಎಂಬವರನ್ನು ವರಿಸಿರುವ ಗಂಗಯ್ಯ ಶೆಟ್ಟರು ಶಶಿಕಾಂತ, ಮುಖೇಶ್, ಶ್ರೀನಿಧಿ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಪರಂಪರೆಯ ಶೈಲಿಯನ್ನು ಅನುಸರಿಸಿ ಕಲಾಸೇವೆಯನ್ನು ಮಾಡಿರುವ ಇವರ ಸಾಧನೆಯನ್ನು ಗುರುತಿಸಿ, ಕಲಾಭಿಮಾನಿಗಳು ಕಟೀಲು, ಕೈಕಂಬ, ಟೌನ್‌ಹಾಲ್ ( ಶ್ರೀಕೃಷ್ಣ ಯಕ್ಷಸಭಾದ ಸಂಮಾನ), ಬೆಳ್ತಂಗಡಿ ಮುಂತಾದೆಡೆಯಲ್ಲಿ ಸಂಮಾನಿಸಿ ಗೌರವಿಸಿದ್ದಾರೆ.



# ಗಂಗಾಧರ ಶೆಟ್ಟಿ, ನಾವೂರು


ನಿಂರ್ದಿ ಮನೆ, ನಾವೂರು ಗ್ರಾಮ & ಅಂಚೆ

ಬೆಳ್ತಂಗಡಿ ತಾಲೂಕು

(ಮೊಬೈಲ್) 9481512738/9731892829


ಪುಂಡು ವೇಷ ಮತ್ತು ರಾಜ ವೇಷಗಳನ್ನು ಮಾಡುವ ಶ್ರೀ ನಾವೂರು ಗಂಗಾಧರ ಶೆಟ್ಟರು ಪೀಠಿಕೆ ವೇಷ ಮತ್ತು ನಾಯಕ ಪಾತ್ರಗಳನ್ನು ನಿರ್ವಹಿಸುವಲ್ಲಿ ಯಶೋವಂತರು. ಪ್ರಸ್ತುತ ಮಂಗಳಾದೇವಿ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ. ಸಂಮಾನಿತರಾಗಿದ್ದಾರೆ.

ಕೃಷ್ಣ ಶೆಟ್ಟಿ ಮತ್ತು ಲಕ್ಷ್ಮೀ ದಂಪತಿಯ ಸುಪುತ್ರರಾಗಿ 1975ನೇ ವರ್ಷದಲ್ಲಿ ನಿಂರ್ದಿ ಮನೆಯಲ್ಲಿ ಹುಟ್ಟಿದರು. 7ನೇ ತರಗತಿಯ ತನಕವಿದ್ಯಾಭ್ಯಾಸವನ್ನು ಮಾಡಿ ಯಕ್ಷಗಾನ ಕಲೆಯತ್ತ ಆಕರ್ಷಿತರಾದರು. ಇವರ ಸಹೋದರ ಬೆಳ್ಳಾರೆ ವಿಶ್ವನಾಥ ರೈಯವರು ಯಕ್ಷಗಾನ ಕಲಾವಿದರಾಗಿದ್ದುದರಿಂದ ಹೆಚ್ಚಿನ ಪ್ರೋತ್ಸಾಹ ಕೂಡಾ ದೊರೆಯಿತು.

ಶ್ರೀ ಧರ್ಮಸ್ಥಳ ಕ್ಷೇತ್ರದ ಲಲಿತ ಕಲಾ ಕೇಂದ್ರದಲ್ಲಿ ಕೆ. ಗೋವಿಂದ ಭಟ್ಟರಿಂದ ನಾಟ್ಯಾಭ್ಯಾಸವನ್ನು ಪೂರೈಸಿದ ಇವರು ಕದ್ರಿ ಮೇಳ 3 ವರ್ಷ, ಬಪ್ಪನಾಡು ಮೇಳ 3 ವರ್ಷ, ಅರುವ ಮೇಳ. 2 ವರ್ಷ, ಕರ್ನಾಟಕ ಮೇಳ-3 ವರ್ಷ, ಕುಂಜಾರು ಮೇಳ - 1 ವರ್ಷ, ಮಂಗಳಾದೇವಿ ಮೇಳ 4 ವರ್ಷ ಹೀಗೆ ಹಲವು ಮೇಳಗಳಲ್ಲಿ ತಿರುಗಾಟವನ್ನು ಪೂರೈಸುತ್ತಾ ಬಂದಿದ್ದಾರೆ.

ಅಭಿಮನ್ಯು, ಕುಶ, ಲವ, ಬಭ್ರುವಾಹನ, ಕೃಷ್ಣ, ವಿಷ್ಣು, ದೇವೇಂದ್ರ, ಅರ್ಜುನ, ಬುದ್ಧಿವಂತ, ಪೆರುಮಳ, ದೇವುಪೂಂಜ ಮೊದಲಾಗಿ ತುಳು ಕನ್ನಡ ಭಾಷೆಯ ಪ್ರಸಂಗಗಳಲ್ಲಿ ಹೆಚ್ಚಿನ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಯಶೋಧ ಎಂಬವರನ್ನು ವರಿಸಿ ಸುಜಿತ್ (9ನೇ ತರಗತಿ), ಶ್ರೀರಕ್ಷಾ (7ನೇ ತರಗತಿ) ಎಂಬ ಮಕ್ಕಳನ್ನು ಪಡೆದಿದ್ದಾರೆ. ಸಾಧನೆಯ ಮೇರೆಗೆ . ಒಡಿಯೂರು, ಬಂಟ್ವಾಳ, ನಾವೂರು, ಬೆಳುವಾಯಿ ಅಭಿ ಮಾನಿಗಳಿಂದ ಸಂಮಾನಿತರಾಗಿದ್ದಾರೆ.



## ಗಂಗಾಧರ ಪುತ್ತೂರು


ಸೇಡಿಯಾಪು ಮನೆ, ಕೋಡಿಬಾಡಿ ಅಂಚೆ

ಪುತ್ತೂರು ತಾಲೂಕು-574201

(ಮೊಬೈಲ್) 9449461001


ಸ್ತ್ರೀ ವೇಷ, ಪುಂಡುವೇಷ, ರಾಜವೇಷ ಮತ್ತು ಹೆಣ್ಣು ಬಣ್ಣದ ಪಾತ್ರಗಳ ನಿರ್ವಹಣೆಯನ್ನು ಮಾಡುತ್ತಾ ಬೆಳೆದಿರುವ ಶ್ರೀ ಪುತ್ತೂರು ಗಂಗಾಧರರು ಧರ್ಮಸ್ಥಳ ಮೇಳದ ಸ್ತ್ರೀ ಪಾತ್ರಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೆ. ನಾರಾಯಣಮಯ್ಯ ಮತ್ತು ಲಕ್ಷ್ಮೀ ದಂಪತಿಯ ಸುಪುತ್ರರಾಗಿ ದಿನಾಂಕ 22-8- 1964ರಂದು ಸೇಡಿಯಾಪು ಮನೆಯಲ್ಲಿ ಹುಟ್ಟಿದರು. 7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರವರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

ಹದಿನೆಂಟನೇ ವಯಸ್ಸಿನಿಂದ ಮೇಳ ತಿರುಗಾಟವನ್ನು ಆರಂಭಿಸಿದ ಪುತ್ತೂರು ಗಂಗಾಧರರು ಧರ್ಮಸ್ಥಳ ಮೇಳವೊಂದರಲ್ಲೇ 29 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಮಾಲಿನಿ, ಚಿತ್ರಾಂಗದೆ, ಮೋಹಿನಿ, ದಾಕ್ಷಾಯಿಣಿ, ಪ್ರಮೀಳೆ, ಶ್ರೀದೇವಿ, ಸೀತೆ, ದೇವೇಂದ್ರ, ದುಶ್ಯಾಸನ, ಶೂರ್ಪನಖಾ, ಲಂಕಿನಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಹಾಸ್ಯದ ಸ್ತ್ರೀ ಪಾತ್ರಗಳನ್ನು ಕೂಡಾ ಚೆನ್ನಾಗಿ ನಿರ್ವಹಿಸುವ ಪ್ರೌಢಿಮೆ ಇವರಲ್ಲಿದೆ.

ಮಳೆಗಾಲದಲ್ಲಿ ನಿಡ್ಲೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯಲ್ಲಿ ತಿರುಗಾಟವನ್ನು ಮಾಡುವ ಇವರಿಗೆ ದೆಹಲಿ, ಕೋಟ, ಮೈಸೂರು, ಹೈದರಾಬಾದ್, ಮದ್ರಾಸ್ ಮೊದಲಾದೆಡೆಯಲ್ಲಿ ಗೌರವ ಪುರಸ್ಕಾರಗಳು ಸಂದಿವೆ.

ಹವ್ಯಾಸಿ ಕಲಾವಿದರಿಗೆ ಮಾರ್ಗದರ್ಶನ ಮಾಡಿರುವ ಇವರು ಶ್ರೀಮತಿ ಬಿ. ಕುಶಾಲಾಕ್ಷಿ ಎಂಬವರನ್ನು ವರಿಸಿ ಜ್ಞಾನೇಶ ಎಂಬ ಸುಪುತ್ರನನ್ನು ಪಡೆದಿದ್ದಾರೆ.



## ಗೋವಿಂದ ಭಟ್ ಕೆ. ಸೂರಿಕುಮೇರಿ


"ಸಫಲಪುರ, ಹೆದ್ದೂರು ಅಂಚೆ,

ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ - 577415

(ಮನೆ ದೂರವಾಣಿ:)08181 - 234413

(ಮೊಬೈಲ್) 9449367202

ಉತ್ತಮ ಶೈಲಿಯ ನಾಟ್ಯ ಮತ್ತು ಮಾತಿನ ಪ್ರಬುದ್ಧತೆಯಿಂದ ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದರಾಗಿ ಸತೀರ್ತಿಯನ್ನು ಸಂಪಾದಿಸಿರುವ ಶ್ರೀ ಕೆ. ಗೋವಿಂದ ಭಟ್ ಸೂರಿಕುಮೇರಿ ಇವರು ಧರ್ಮಸ್ಥಳ ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕಿನಿಲ ಶಂಕರ ನಾರಾಯಣ ಭಟ್ಟ ಮತ್ತು ಕುಕ್ಕೆಮನೆ ಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ ಕುಕ್ಕೆಮನೆಯಲ್ಲಿ ಜನಿಸಿದರು. ಇವರ ಹುಟ್ಟಿದ ದಿನಾಂಕ 22-3-1940 ಹೊಸಹಿತ್ತು ಮಹಾಲಿಂಗ ಭಟ್ಟ ಮತ್ತು ಕುರಿಯ ವಿಠಲಶಾಸ್ತ್ರಿ ಇವರ ಪ್ರೇರಣೆಯ ಮೇರೆಗೆ 11ನೇ ವಯಸ್ಸಿನಲ್ಲೇ ಯಕ್ಷಗಾನದ ರಂಗ ಪ್ರವೇಶ ಮಾಡಿದರು.

ಗೋವಿಂದ ಭಟ್ಟರ ಮೊದಲಗುರು ಕುರಿಯ ವಿಠಲಶಾಸ್ತ್ರೀಯವರೇ ಆಗಿದ್ದಾರೆ. ಅನಂತರ ಪರಮಶಿವನ್ ಅವರಲ್ಲಿ ಭರತನಾಟ್ಯವನ್ನು ಅಭ್ಯಾಸ ಮಾಡಿರುವರು. ಮಾಧವ ಮೆನನ್, ರಾಜನ್ ಅಯ್ಯರ್ ಅವರೆಲ್ಲ ಇವರ ಗುರುಗಳಾಗಿದ್ದಾರೆ.

ಧರ್ಮಸ್ಥಳ ಮೇಳ - 1 ವರ್ಷ, ಮೂಲ್ಕಿ- - 1 ವರ್ಷ, ಕೂಡ್ಲು ಮೇಳ-2 ವರ್ಷ,ಇರಾಮೇಳ 2 ವರ್ಷ, ಸುರತ್ಕಲ್ ಮೇಳ 1 ವರ್ಷ, ಹಳೇ ಸುರತ್ಕಲ್ ಮೇಳ – 1 ವರ್ಷ ಅನಂತರ, ಧರ್ಮಸ್ಥಳ ಮೇಳ 41 ವರ್ಷ ಹೀಗೆ ಸುದೀರ್ಘವಾದ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಸ್ತ್ರೀ ವೇಷ, ಪುಂಡುವೇಷ, ಪೋಷಕ ವೇಷ ಮತ್ತು ರಾಜ ವೇಷದಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಇವರು ಕೃಷ್ಣ, ರಾಮ, ಸುಧನ್ವ, ಜಮದಗ್ನಿ, ಶ್ರೀದೇವಿ, ಪರಶುರಾಮ, ವಿಶ್ವಾಮಿತ್ರ, ಸುಯೋಧನ, ಮಾಗಧ, ಶಿಶುಪಾಲ, ರಕ್ತಬೀಜ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ. ತೀಕ್ಷಣವಾದ ಮಾತು, ಖಚಿತ ಲಯ, ನಿರ್ದಿಷ್ಟವಾದ ಧೋರಣೆ, ಉತ್ತಮವಾದ ಕುಣಿತ ಇವೆಲ್ಲಾ ಇವರ ಪಾತ್ರ ನಿರ್ವಹಣೆಯಲ್ಲಿ ಕಂಡು ಬರುವ ಲಕ್ಷಣಗಳಾಗಿವೆ.

ಶ್ರೀಮತಿ ಸಾವಿತ್ರಿ ಎಂಬವರನ್ನು ವರಿಸಿರುವ ಇವರು ಪ್ರಸನ್ನ ಕುಮಾರ (ಕೃಷಿ), ಶ್ಯಾಮ ಪ್ರಸಾದ (ಪೌರೋಹಿತ್ಯ), ಸೂರ್ಯ ಪ್ರಸಾದ (ನ್ಯಾಯವಾದಿ) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಆಟ-ಕೂಟಗಳೆರಡರಲ್ಲೂ ಪ್ರಸಿದ್ಧರಾಗಿರುವ ಇವರು ನಾಟ್ಯ ಗುರುಗಳಾಗಿ 700ಕ್ಕೂ ಮಿಕ್ಕಿದ ಶಿಷ್ಯರನ್ನು ಹೊಂದಿದ್ದಾರೆ. ಇವರ ಸಾಧನೆಗೆ ಗೌರವ ರೂಪವಾಗಿ ರಾಜ್ಯೋತ್ಸವ ಪ್ರಶಸ್ತಿ, ಕಲ್ಲುಗುಂಡಿ ಶ್ರೇಣಿ ಪ್ರಶಸ್ತಿ, ಕಲ್ಲಾಡಿ ಕೊರಗ ಶೆಟ್ಟಿ, ವಿಠಲ ಶೆಟ್ಟಿ ಪ್ರತಿಷ್ಠಾನ ಪ್ರಶಸ್ತಿ, ಧರ್ಮಸ್ಥಳ ಸಂಮಾನ, ಅಬುದಾಭಿ, ದುಬಾ, ಬೆಹರನ್ ಸಂಮಾನಗಳಲ್ಲದೆ ಕದ್ರಿ, ಮುಂಬೈ, ಬೆಂಗಳೂರು ಮುಂತಾದೆಡೆಯಲ್ಲಿ ಹಲವಾರು ಸಂಮಾನ ಗೌರವಗಳು ಸಂದಿವೆ.



## ಗೋಪಾಲ ಕೃಷ್ಣ ಭಟ್ ಗುಂಡಿಮಜಲು

ಗುಂಡಿಮಜಲು ಮನೆ, ಬೋಳಂತೂರು ಅಂಚೆ

ಮತ್ತು ಗ್ರಾಮ, ಬಂಟ್ವಾಳ ತಾಲೂಕು

(ಮೊಬೈಲ್) 9663136211

(ಮನೆ ದೂರವಾಣಿ:)08255 276967

ಪುಂಡುವೇಷಕ್ಕೆ ಹೆಸರುವಾಸಿಯಾಗಿರುವ ಗುಂಡಿಮಜಲು ಗೋಪಾಲಕೃಷ್ಣ ಭಟ್ಟರು ಇತ್ತೀಚೆಗೆ ರಾಜವೇಷ ಮತ್ತು ನಾಟಕೀಯ ವೇಷಗಳನ್ನು ಕೂಡಾ ಸಮರ್ಥವಾಗಿ ನಿರ್ವಹಿಸಿ ಜನ ಮನ್ನಣೆಗೆ ಪಾತ್ರರಾಗಿದ್ದಾರೆ.

ಸುಬ್ರಾಯ ಭಟ್ ಮತ್ತು ವೆಂಕಟೇಶ್ವರಿ ದಂಪತಿಯ ಸುಪುತ್ರರಾಗಿ 1959 ರ ವರ್ಷ ಗುಂಡಿಮಜಲಿನಲ್ಲಿ ಹುಟ್ಟಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪರಿಸರದಲ್ಲಿ ಕಲಾಕರ್ಷಿತರಾಗಿ ಪಡ್ರೆ ಚಂದು ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

15ನೇ ವರ್ಷದಿಂದ ಯಕ್ಷಗಾನದ ರಂಗ ಪ್ರವೇಶ ಮಾಡಿದ ಗೋಪಾಲ ಕೃಷ್ಣ ಭಟ್ಟರು ಕಟೀಲು ಮೇಳ ವೊಂದರಲ್ಲೇ 25 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ. ಆಮೇಲೆ ಅನಿವಾರ ಕಾರಣದಿಂದ ಮೇಳ ತಿರುಗಾಟವನ್ನು ನಿಲ್ಲಿಸಿದ ಇವರು ಹವ್ಯಾಸಿ ಮತ್ತು ಮೇಳದ ಕಲಾವಿದರ ಕೂಡುವಿಕೆಯಲ್ಲಿ ನಡೆಯುವ ಕಾರ್ಯ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಇವರ ರಕ್ತರಾತ್ರಿಯ ಅಶ್ವತ್ಥಾಮ ಪಾತ್ರ ಉತ್ತಮ ಅಭಿವ್ಯಕ್ತಿಯ ಪಾತ್ರವಾಗಿದ್ದು ಕೀರ್ತಿಯನ್ನು ತಂದುಕೊಟ್ಟಿದೆ. ಅಭಿಮನ್ಯು, ಬಭ್ರುವಾಹನ, ವಿಷ್ಣು, ಬ್ರಹ್ಮ, ಇಂದ್ರಜಿತು, ಹಿರಣ್ಯಾಕ್ಷ, ಅರ್ಜುನ, ಚಂಡ- ಮಂಡರು, ಅಯ್ಯಪ್ಪ ಮೊದಲಾದ ಹಲವು ಪಾತ್ರಗಳಲ್ಲಿ ತಮ್ಮ ಅಭಿನಯವನ್ನು ಮೆರೆಸಿದ್ದಾರೆ.

ಕೃಷಿಗಾರಿಕೆಯಲ್ಲೂ ಅನುಭವಿಯಾಗಿರುವ ಇವರು ಶ್ರೀಮತಿ ಲತಾ ಅವರನ್ನು ವರಿಸಿ ಸುಚೇತ್ ಕುಮಾರ್ ಎಂಬ ಸುಪುತ್ರನನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಫಲವಾಗಿ ಅರಸಿನಮಕ್ಕಿ, ಕಾಸರಗೋಡು, ಮಂಗಳೂರು ಮುಂತಾದ ಕಡೆಗಳಲ್ಲಿ ಸಂಮಾನಗಳು ಸಂದಿವೆ.



## ಗೋವಿಂದ ಭಟ್ ನಿಡ್ಲೆ


ಹೊಸಮನೆ ಅಂಚೆ ನಿಡ್ಲೆ

ವಯಾ ಧರ್ಮಸ್ಥಳ – 574216

(ಮನೆ ದೂರವಾಣಿ) 08256 270129

(ಮೊಬೈಲ್) 9448868796


ಶ್ರೀ ಧರ್ಮಸ್ಥಳ ಮೇಳದ ಕಲಾವಿದರಾಗಿರುವ ಶ್ರೀ ಕೆ. ನಿಡ್ಲೆ ಗೋವಿಂದ ಭಟ್ಟರು ರಾಜವೇಷ ಮತ್ತು ನಾಟಕೀಯ ವೇಷಗಳಲ್ಲಿ ಪ್ರೌಢಿಮೆಯನ್ನು ಸಾಧಿಸಿ ಜನ ಮನ್ನಣೆಯನ್ನು ಪಡೆದಿದ್ದಾರೆ.

ಈಶ್ವರ ಭಟ್ ಮತ್ತು ಶಂಕರಿಯಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 2-10-1958ರಂದು ಮಂಜೇಶ್ವರದ ಕೊಳಚಪ್ಪು ಎಂಬಲ್ಲಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಕಲೆಗೆ ಮಾರುಹೋಗಿ ಮಾವನಾದ ದಿ| ಕುರಿಯ ವಿಠಲ ಶಾಸ್ತ್ರಿ ಮತ್ತು ದಿ| ಪಡ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

13ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದ ಇವರು ವೇಣೂರು ಮೇಳ – 1 ವರ್ಷ, ಧರ್ಮಸ್ಥಳ ಮೇಳ 2 ವರ್ಷ, ಕರ್ನಾಟಕ ಮೇಳ ವರ್ಷ, ಶ್ರೀ ಗೀತಾಂಬಿಕ ಯಕ್ಷಗಾನ ಮಂಡಳಿ ಮುಂಬಯಿ - 1 ವರ್ಷ, ಪುತ್ತೂರು ಮೇಳ 1-ವರ್ಷ, ಬಪ್ಪನಾಡು ಮೇಳ 2 ವರ್ಷ ಹಾಗೂ ಮತ್ತೆ ಧರ್ಮಸ್ಥಳ ಮೇಳದಲ್ಲಿ 24 ವರ್ಷಗಳ ತಿರುಗಾಟವನ್ನು ಮಾಡಿರುವರು.

ಕರ್ಣ, ಅರ್ಜುನ, ಕೌರವ, ಭೀಮ, ರಾವಣ, ಚಂದಗೋಪ, ಹಿರಣ್ಯಾಕ್ಷ, ಕಾರ್ತವೀರ್ಯ, ಇಂದ್ರಜಿತು ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಉತ್ತಮವಾದ ನಟನಾ ಶೈಲಿ ಮತ್ತು ಮಾತಿನ ಸ್ವರಭಾರದಿಂದ ಗತ್ತುಗಾರಿಕೆಯ ಪಾತ್ರವನ್ನು ನಿರ್ವಹಿಸುವ ಗೋವಿಂದ ಭಟ್ಟರು ರಂಜನೀಯವಾದ ಪಾತ್ರಗಳನ್ನು ಕೂಡ ಜನರ ಮನ ಮೆಚ್ಚುವಂತೆ ಸರಳ ಶೈಲಿಯಲ್ಲಿ ನಿರ್ವಹಿಸುವ ಪ್ರತಿಭಾವಂತರಾಗಿದ್ದಾರೆ.

ಯಕ್ಷಗಾನ ಕಲೆಯನ್ನು ಅದರ ವ್ಯಾಪ್ತಿಯ ಮೇರೆಗೆ ಮೀರಿಸಿ ಬೆಳೆಸಬೇಕೆಂಬ ಆಶಯದಿಂದ ನಿಡ್ಲೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿರುವ ಇವರು ಕಳೆದ 25 ವರ್ಷಗಳಿಂದ ಮಳೆಗಾಲದ ತಿರುಗಾಟವನ್ನು ಆರಂಭಿಸಿ ದಕ್ಷಿಣ ಭಾರತದಾದ್ಯಂತ ಪ್ರದರ್ಶನವನ್ನು ನೀಡಿದ್ದಾರೆ.

ಇವರ ಯಕ್ಷಗಾನದ ಕಲಾ ಸಾಧನೆಗೆ ಪ್ರತಿಫಲವಾಗಿ ದೆಹಲಿ, ಕೊಯಮುತ್ತೂರು, ಚೆನ್ನೈ, ವಿಜಯವಾಡ, ವಿಶಾಖಪಟ್ಟಣ, ಹೊಸಪೇಟೆ, ಕುಂದಾಪುರ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ. ತನ್ನ ಮಂಡಳಿಯ ಮುಖೇನ ಜೊತೆಗಿದ್ದ ಕಲಾವಿದರಿಗೂ ಗೌರವ ಪುರಸ್ಕಾರಗಳು ದೊರೆಯುವಂತೆ ಮಾಡಿದ ಗುಣಧರ್ಮ ಇವರದ್ದಾಗಿದೆ.

ಶ್ರೀಮತಿ ವಸಂತಿ ಎಂಬವರನ್ನು ವರಿಸಿರುವ ಇವರು ಈಶ್ವರಚಂದ್ರ (ಪಿ. ಯು. ಸಿ.), ಕುಮಾರಿ ವಿದ್ಯಾ ಶಂಕರಿ (10ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



# ಗೋಪಾಲ ಭಟ್ ಕೋಳ್ಯೂರು

ಶ್ರೀ ದುರ್ಗಾ ನಿಲಯ

ಅಸೈಗೋಳಿ, ಮಂಗಳೂರು ತಾಲೂಕು

(ಮೊಬೈಲ್) 9964643190

ಸ್ತ್ರೀ ವೇಷದ ಮುಖೇನ ಜನ ಮನ್ನಣೆಯನ್ನು ಪಡೆದಿರುವ ಶ್ರೀ ಗೋಪಾಲ ಭಟ್ಟ ಕೋಳ್ಯೂರರು ಪ್ರಸ್ತುತ ಬಜೆ ಸುಂಕದಕಟ್ಟೆಯ ಶ್ರೀ ಅನ್ನ ಪೂರ್ಣೇಶ್ವರಿ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಶಂಕರ ನಾರಾಯಣ ಭಟ್ ಮತ್ತು ಶಾರದಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 16-11-1963 ರಂದು ಕೊಳ್ಯೂರಿನಲ್ಲಿ ಜನಿಸಿದರು. 10 ನೇ ಇಯತ್ತೆಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಚಿಕ್ಕಪ್ಪ ಹೊಸಹಿತ್ತು ಮಹಾಲಿಂಗ ಭಟ್ಟರ ಪ್ರೇರಣೆಯ ಮೇರೆಗೆ ಅವರಲ್ಲೇ ನಾಟ್ಯಾಭ್ಯಾಸ ಮಾಡಿ ಯಕ್ಷಗಾನ ಕಲೆಯ ಅಭಿರುಚಿಯನ್ನು ಬೆಳೆಸಿದರು.

16 ನೇ ವಯಸ್ಸಿನಿಂದಲೇ ರಂಗ ಪ್ರವೇಶ ಮಾಡಿದ ಇವರು ಅಳದಂಗಡಿ ಮೇಳ 4 ವರ್ಷ,1 ಪುತ್ತೂರು ಮೇಳ 3 ವರ್ಷ, ತಳಕಲ ಮೇಳ - 4 ವರ್ಷ, ಸುರತ್ಕಲ್ ಮೇಳ – 1 ವರ್ಷ ಅನಂತರ ಹವ್ಯಾಸಿ ಕಲಾವಿದರಾಗಿ 4 ವರ್ಷಗಳನ್ನು ಪೂರೈಸಿ - ಈ ಬಾರಿಗೆ ಸುಂಕದಕಟ್ಟೆಯ ಮೇಳದಲ್ಲಿ ತಿರುಗಾಟವನ್ನು ನಡೆಸಿದ್ದಾರೆ.

ದಮಯಂತಿ, ಚಿತ್ರಾಂಗದೆ, ಸೀತೆ, ಶ್ರೀ ದೇವಿ, ಪ್ರಮೀಳೆ, ಶಶಿಪ್ರಭೆ, ಕಮಲಗಂಧಿನಿ, ದೌಪದಿ ಮೊದಲಾದ ಸ್ತ್ರೀ ಪಾತ್ರಗಳನ್ನು ನಿರ್ವಹಿಸುವ ಇವರು ಬ್ರಹ್ಮ, ವಿಷ್ಣು, ಈಶ್ವರ ಮೊದಲಾದ ಮುಖ್ಯ ಪುರುಷ ಪೋಷಕ ಪಾತ್ರಗಳನ್ನು ಕೂಡ ನಿರ್ವಹಿಸುತ್ತಾರೆ. ತುಳು ಪ್ರಸಂಗದ ಪಾತ್ರಗಳನ್ನು ಕೂಡ ಉತ್ತಮವಾಗಿ ನಿರ್ವಹಿಸುತ್ತಾರೆ.

ಶ್ರೀಮತಿ ದೇವಕಿ ಅಮ್ಮ ಎಂಬವರನ್ನು ವರಿಸಿ ಅರುಣ ಭಟ್ (ಅಧ್ಯಾಪಕ), ಕಿರಣ್ ಕುಮಾರ್ (ತಾಂತ್ರಿಕ ತರಬೇತಿ ಅಧ್ಯಯನ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಗೋಪಾಲಕೃಷ್ಣ ಬೆಳ್ಳಾರೆ


ಕಳಂಜ ಮನೆ ಮತ್ತು ಗ್ರಾಮ

ಕೊಡಂಗಾಯಿ ಅಂಚೆ, ಸುಳ್ಯ ತಾಲೂಕು -574212

(ಮೊಬೈಲ್) 9740538699


ಪುಂಡು ವೇಷ, ರಾಜ ವೇಷ, ಬಣ್ಣದ ವೇಷ, ಸ್ತ್ರೀವೇಷ ಹಾಸ್ಯ ಪಾತ್ರಗಳನ್ನು ಮಾಡುತ್ತಾ ಬೆಳೆದಿರುವ ಬೆಳ್ಳಾರೆ ಗೋಪಾಲಕೃಷ್ಣರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಸುಬ್ಬಣ್ಣ ರೈ ಮತ್ತು ಭಾಗೀರಥಿ ದಂಪತಿಯ ಸುಪುತ್ರರಾಗಿ ಕಳಂಜದಲ್ಲಿ ಹುಟ್ಟಿರುವ ಇವರಿಗೆ 36 ವರ್ಷಗಳು ಆಗಿವೆ. ಇವರ ತಂದೆ ಬಣ್ಣದ ವೇಷಧಾರಿ ಆಗಿದ್ದುದರಿಂದ ಪ್ರೇರಣೆ ಮತ್ತು ಉತ್ತೇಜನದಿಂದ ಗೋಪಾಲಕೃಷ್ಣರಿಗೆ ನಾಟ್ಯಾಭ್ಯಾಸವನ್ನು ಮಾಡಿಸಿದರು. ಇವರ ಬಾವ ರಘುನಾಥ ರೈ ಯವರು ಕೂಡಾ ಹಾಸ್ಯಗಾರರಾಗಿ ಪಾತ್ರ ನಿರ್ವಹಣೆ ಮಾಡುತ್ತಾರೆ. ಹೀಗೆ ಸಂಬಂಧಿಕ ನೆಲೆಯಿಂದ ಇವರ ಕಲಾ ಜೀವನವು ಬೆಳೆದು ಬಂದಿದೆ.

ರಘುನಾಥ ಶೆಟ್ಟಿ ಬಾಯಾರು ಅವರಿಂದ ಹೆಚ್ಚಿನ ಮಾರ್ಗದರ್ಶನ ಪಡೆದಿರುವ ಬೆಳ್ಳಾರೆ ಗೋಪಾಲಕೃಷ್ಣರು ಕರ್ನಾಟಕ ಮೇಳ - 9 ರ್ಷ, ಸುರತ್ಕಲ್ ಮೇಳ 1 ವರ್ಷ, ಎಡನೀರು ಮೇಳ-- 3 ವರ್ಷ, ಕಟೀಲು ಮೇಳ-4 ವರ್ಷ ಹೀಗೆ ತಿರುಗಾಟವನ್ನು ನಡೆಸಿದ್ದಾರೆ.

ಯಕ್ಷ, ವರುಣ, ಚಂಡ, ಮುಂಡ, ಮಹಿಷಾಸುರ, ಶುಂಭ, ಕಮಲಗಂಧಿನಿ, ಭ್ರಮರ ಕುಂತಳೆ ಮೊದಲಾದ ಪಾತ್ರಗಳನ್ನು ಮಾಡಿರುವ ಇವರು ಶ್ರೀಮತಿ ವಾರಿಜ ಎಂಬವರನ್ನು ವರಿಸಿದ್ದಾರೆ.



## ಚಂದ್ರಶೇಖರ ಧರ್ಮಸ್ಥಳ

ಅಂಚೆ ಮಜಲು ಮನೆ, ಧರ್ಮಸ್ಥಳ ಅಂಚೆ

ಬೆಳ್ತಂಗಡಿ ತಾಲೂಕು · 574216

(ಮೊಬೈಲ್) 9448013591

ಪುಂಡು ವೇಷದ ಮುಖೇನ ತನ್ನ ಪ್ರತಿಭೆಯನ್ನು ತೋರುತ್ತಾ ಜನಮನ್ನಣೆಯನ್ನು ಪಡೆದಿರುವ ಶ್ರೀ ಚಂದ್ರಶೇಖರರು ಪ್ರಸ್ತುತ ಧರ್ಮಸ್ಥಳ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಗುರುವಪ್ಪ ಪೂಜಾರಿ ಮತ್ತು ಲೀಲಮ್ಮ ದಂಪತಿಯ ಸುಪುತ್ರರಾಗಿ 18-9-1974ರಂದು ಧರ್ಮಸ್ಥಳದಲ್ಲಿ ಹುಟ್ಟಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಕಲೆಯ ಮೇಲೆ ಪ್ರಭಾವಿತರಾಗಿ ಕೋಳ್ಯೂರು ಶ್ರೀ ರಾಮಚಂದ್ರ ರಾವ್‌ರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

15ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದ ಇವರು ಬಪ್ಪನಾಡು ಮೇಳ - 1 ವರ್ಷ, ಕರ್ನಾಟಕ ಮೇಳ 11 ವರ್ಷ, ಸಾಲಿಗ್ರಾಮ ಮೇಳ 1 ವರ್ಷ, ಪುತ್ತೂರು ಮೇಳ – 1 ವರ್ಷ, ಎಡನೀರು 4 ವರ್ಷ ಹಾಗು ಧರ್ಮಸ್ಥಳ ಮೇಳ-2 ವರ್ಷ ಹೀಗೆ ತಿರುಗಾಟವನ್ನು ಮಾಡಿರುವರು. ಮಳೆಗಾಲದಲ್ಲಿ ಕಲಾವಿದ ಶ್ರೀಧರ ಭಂಡಾರಿಯವರ ತಿರುಗಾಟದ ತಂಡದಲ್ಲಿ ಪಾತ್ರ ನಿರ್ವಹಣೆಯನ್ನು ಮಾಡಿರುವ ಇವರುದೆಹಲಿ ಮುಂಬಯಿ, ಬೆಹರನ್ ಮೊದಲಾದೆಡೆ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪಾತ್ರ ನಿರ್ವಹಣೆ ಮಾಡಿದ್ದಾರೆ.

ಅಭಿಮನ್ಯು, ಬಭ್ರುವಾಹನ, ಭ್ರಮರಕುಂತಳೆ, ಸೀತೆ, ಅರ್ಜುನ, ದೇವೇಂದ್ರ, ಖರಾಸುರ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪುಂಡುವೇಷದಂತೆ, ರಾಜವೇಷದಲ್ಲೂ ಶೈಲಿಗೆ ಚ್ಯುತಿ ಬಾರದಂತೆ ಪಾತ್ರ ನಿರ್ವಹಣೆ ಮಾಡುವ ಯುವ ಕಲಾವಿದ ಇವರಾಗಿದ್ದಾರೆ.

ಇವರ ಪ್ರತಿಭೆಗೆ ಪುರಸ್ಕಾರವಾಗಿ ಬೆಹರನ್, ದೆಹಲಿ, ತೋಡಾರು, ಕಾಶಿಪಟ್ಟ ಮೊದಲಾದೆಡೆಯಲ್ಲಿ ಗೌರವಿಸಲ್ಪಟ್ಟಿದ್ದಾರೆ.



## ಚಂದ್ರಶೇಖರ, ಕೊಂಕಣಾಜೆ

ಕೊಂಕಣಜೆ ಮನೆ,

ಅಂಚೆ ಕುಕ್ಕೇಡಿ, ವಯಾ ವೇಣೂರು

ಬೆಳ್ತಂಗಡಿ ತಾಲೂಕು - 574242

ಮನೆ ದೂರವಾಣಿ; 08256 - 264251 2023

ಮೊಬೈಲ್; 9008136127

ಚೆಂಡೆ ಮದ್ದಳೆಯ ನುಡಿತ-ಬಡಿತಗಳಲ್ಲಿ ಪ್ರತಿಭೆಯನ್ನು ತೋರುವ ಶ್ರೀ ಚಂದ್ರ ಶೇಖರ ಕೊಂಕಣಾಜೆಯವರು ಕಟೀಲು ಮೇಳದ ತಿರುಗಾಟವನ್ನು ಮಾಡಿ ಅನುಭವವನ್ನು ಸಂಪಾದಿಸಿರುವರು.

ಎಲ್. ಸುಬ್ರಾಯ ಭಟ್ ಮತ್ತು ದುರ್ಗಾಪರಮೇಶ್ವರಿ ಅಮ್ಮ ದಂಪತಿಯ ಸುಪುತ್ರರಾಗಿ 18-4-1975ರಂದು ವೇಣೂರಿನಲ್ಲಿ ಹುಟ್ಟಿರುವರು ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ದೊಡ್ಡಪ್ಪ ದಿ| ವಿಟ್ಲ

ಗೋಪಾಲಕೃಷ್ಣ ಜೋಷಿಯವರ ಆದರ್ಶದ ಮೇರೆಗ ಬಾಲ್ಯದಿಂದಲೇ ಯಕ್ಷಗಾನ ಕಲೆಯ ಮೇಲೆ ಪ್ರಭಾವಿತರಾಗಿದ್ದರು.

17ನೇ ವರ್ಷದಿಂದ ಯಕ್ಷಗಾನ ಕಲಾಸೇವೆಯಲ್ಲಿ ತೊಡಗಿರುವ ಇವರು ಸಬ್ಬನಕೋಡಿ ರಾಂ ಭಟ್ಟರಲ್ಲಿ ನಾಟ್ಯಾಭ್ಯಾಸ ಮತ್ತು ಹರಿನಾರಾಯಣ - ಬೈಪಾಡಿತ್ತಾಯರಲ್ಲಿ ಚೆಂಡೆ ಮದ್ದಳೆಯ ಪಾಠಾಭ್ಯಾಸವನ್ನು ಮಾಡಿರುವರು.

ಆರಂಭದಲ್ಲಿ ಅರ್ಜುನ, ಶತ್ರುಘ್ನ, ಮುರಾಸುರ, ಶಿಶುಪಾಲ, ಬಲರಾಮ, ಚಿತ್ರಾಂಗದೆ, ಸುಭದ್ರೆ ಮೊದಲಾದ ಪಾತ್ರಗಳನ್ನು ಹವ್ಯಾಸಿ ಕಲಾವಿದರ ಜೊತೆಗೆ ನಿರ್ವಹಿಸಿದ್ದಾರೆ. ಅನಂತರ ಚೆಂಡೆ ಮದ್ದಳೆಯ ನುಡಿತ ಬಡಿತಗಳಲ್ಲಿ ಪಳಗಿ ಕಟೀಲು ಮೇಳದ ಮುಖಾಂತರ 12ವರ್ಷ ತಿರುಗಾಟವನ್ನು ಮಾಡಿದ್ದಾರೆ. ಪ್ರಸ್ತುತ ವರ್ಷದಲ್ಲಿ ಮೇಳ ತಿರುಗಾಟವನ್ನು ನಿಲ್ಲಿಸಿ ಹ ವ್ಯಾಸಿ - ಕಲಾಕಾರ್ಯಕ್ರಮಗಳಲ್ಲಿ ಹೇಳಿಕೆಯ ಮೇರೆಗೆ ಭಾಗವಹಿಸುತ್ತಿದ್ದಾರೆ.

ಶ್ರೀಮತಿ ಸರೋಜ ಎಂಬವರನ್ನು ಇತ್ತೀಚೆಗೆ ವರಿಸಿರುವ ಇವರು ಕೃಷಿ ಕಾರ್ಯದಲ್ಲಿ ಆಸಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹವ್ಯಾಸಿ ಕಲಾವಿದರಿಗೆ ಯಕ್ಷಗಾನದ ಪಾಠಾಭ್ಯಾಸ ಮಾಡಿರುವ ಇವರಿಗೆ ಕಾಶಿಪಟ್ಣ ಮತ್ತು ಕೇಳ ದೇವಸ್ಥಾನದಲ್ಲಿ ಗೌರವ ಪುರಸ್ಕಾರಗಳು ಸಂದಿವೆ.



## ಚಂದ್ರಶೇಖರ ಬನಾರಿ

ಬನಾರಿ ಮನೆ, ಉರುವಾಲು ಅಂಚೆ ಮತ್ತು ಗ್ರಾಮ,

ಬೆಳ್ತಂಗಡಿ ತಾಲೂಕು

(ಮೊಬೈಲ್) 9980244390

ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಚಂದ್ರಶೇಖರ ಬನಾರಿಯವರು ಪುಂಡು, ರಾಜ ಹಾಗೂ ಬಣ್ಣದ ವೇಷಗಳ ನಿರ್ವಹಣೆಯನ್ನು ಮಾಡಬಲ್ಲವರಾಗಿದ್ದಾರೆ.

ದಿನಾಂಕ 4-6-1982ರಲ್ಲಿ ನಾರಾಯಣ ಗೌಡ ಮತ್ತು ರಾಮಕ್ಕ ದಂಪತಿಯ ಸುಪುತ್ರರಾಗಿ ಬನಾರಿ ಮನೆಯಲ್ಲಿ ಹುಟ್ಟಿದರು. 7ನೇ ತರಗತಿಯ ತನಕ ವಿದ್ಯಭ್ಯಾಸವನ್ನು ಪಡೆದಿರುವ ಇವರು ಮನೆಯ ಸುತ್ತಲಿನ ಯಕ್ಷಗಾನ ಪರಿಸರದಲ್ಲಿ ಬೆಳೆದು ಪ್ರಭಾವಿತರಾಗಿದ್ದರು.

14ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದ ಇವರು ದಿವಾಣ ಶಿವಶಂಕರ ಭಟ್ ಮತ್ತು ದಿ| ಪರಮೇಶ್ವರ ಆಚಾರ್ ಕೊಕ್ಕಡ ಇವರಿಂದ ಯಕ್ಷಗಾನ ಕಲೆಯ ಬಗ್ಗೆ ಅಭ್ಯಾಸವನ್ನು ಮಾಡಿದ್ದಾರೆ. ಮಂಗಳಾದೇವಿ ಮೇಳದಲ್ಲಿ 2 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಕಟೀಲು ಮೇಳದಲ್ಲಿ ಒಟ್ಟಾಗಿ 10 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಪುಷ್ಕಳ, ದಮನ, ದೇವೇಂದ್ರ, ನಿಶುಂಭ, ತಾರಕಾಸುರ, ವೀರಭದ್ರ, ಭೀಮ, ಜರೆ, ಶೂರ್ಪನಖಾ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾ ಪ್ರಯತ್ನಶೀಲರಾಗಿ ಬೆಳೆಯುತ್ತಾ ಇದ್ದಾರೆ.

ಶಾಲಾ ಕಾಲೇಜುಗಳಲ್ಲಿ ನಾಟ್ಯ ತರಬೇತಿಯನ್ನು ಮಾಡಿರುವ ಚಂದ್ರಶೇಖರ ಬನಾರಿಯವರನ್ನು ಕಣಿಯೂರು ಕಸಬ ಶಾಲೆ ಮತ್ತು ಅಂಡಡ್ಕ ಇಲಂತಿಲ ಶಾಲೆಯವರು ಗೌರವ ಪೂರ್ವಕವಾಗಿ ಸಂಮಾನಿಸಿದ್ದಾರೆ. ಕಲಾ ಸಾಧನೆಯಲ್ಲಿ ಬೆಳೆಯಬೇಕೆಂಬ ಹಂಬಲ ವ್ಯಕ್ತಪಡಿಸುವ ಇವರು ಬೆಳೆಯುವ ಯುವ ಕಲಾವಿದರಾಗಿದ್ದಾರೆ.



## ಚಿದಂಬರ ಬಾಬು

ಶ್ರೀ ರತ್ನ", ಹಿತ್ತಲ ಸರ, ಅಕಲಾಪುರ ಗ್ರಾಮ

ಕೇಶವಪುರ ಅಂಚೆ, ತೀರ್ಥಹಳ್ಳಿ ತಾಲೂಕು

ಶಿವಮೊಗ್ಗ - 577422

(ಮೊಬೈಲ್) 9880911375

ನಾಯಕ, ಪ್ರತಿನಾಯಕ ಮತ್ತು ಪೋಷಕ, ಪ್ರೌಢ ಪಾತ್ರಗಳಲೆಲ್ಲಾ ಪಾತ್ರಕ್ಕೆ ತಕ್ಕಂತೆ ನಿರ್ವಹಣೆಯನ್ನು ತೋರಿ ಪ್ರಸಿದ್ಧರಾಗಿರುವ ಚಿದಂಬರ ಬಾಬುರವರು ಸುಂಕದಕಟ್ಟೆ ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

24-3-1961ರಲ್ಲಿ ನಾಗೇಶ್ ರಾವ್ ಮತ್ತು ರತ್ನ ಅಮ್ಮ ದಂಪತಿಯ ಸುಪುತ್ರರಾಗಿ ಹಿತ್ತಲಸರ ಎಂಬಲ್ಲಿ ಹುಟ್ಟಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪ್ರಭಾವಕ್ಕೆ ಒಳಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತಾ ಕಲಾ ಕೇಂದ್ರದಲ್ಲಿ ಕೆ. ಗೋವಿಂದ ಭಟ್ಟರಿಂದ ನಾಟ್ಯಾಭ್ಯಾಸವನ್ನು ಪೂರೈಸಿದರು.

ರಾಜ, ನಾಟಕೀಯ, ಬಣ್ಣ ಮತ್ತು ಹಾಸ್ಯ ಪಾತ್ರಗಳು ಸೇರಿದಂತೆ ಹೆಚ್ಚಿನ ಎಲ್ಲಾ ಪಾತ್ರಗಳನ್ನು ನಿರ್ವಹಿಸಲು ಅರ್ಹರಾದ ಇವರು ಸುಂಕದಕಟ್ಟೆ ಮೇಳವೊಂದರಲ್ಲೇ 29 ವರ್ಷಗಳ ತಿರುಗಾಟವನ್ನು ಮಾಡಿರುವ ಅನುಭವಿ ಕಲಾವಿದರಾಗಿದ್ದಾರೆ.

ಮಹಿಷಾಸುರ, ಭೀಮ, ಕಾರ್ತವೀರ್ಯ, ಅತಿಕಾಯ, ಸುಂದರ ರಾವಣ, ಕೇಳು ಪಂಡಿತ, ಭಸ್ಮಾಸುರ, ಅರ್ಜುನ, ತಾಮ್ರಧ್ವಜ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

ಪ್ರಸಂಗ ಮಾಹಿತಿ ಮತ್ತು ಮೇಳ ನಿರ್ವಹಣೆಯ ಬಗ್ಗೆ ಅನುಭವವುಳ್ಳ ಚಿದಂಬರ ಬಾಬುರವರು ನಾಟಕ ರಂಗದಲ್ಲೂ ಪಾತ್ರಾಭಿನಯ ಮಾಡಿದ್ದಾರೆ. ತಬ್ಲಾವಾದನದಲ್ಲೂ ಆಸಕ್ತಿ ಬೆಳೆಸಿದವರಾಗಿದ್ದಾರೆ.

ಮಳೆಗಾಲದಲ್ಲಿ ಕೃಷಿ ಕಾವ್ಯವನ್ನು ಮಾಡುವ ಇವರು ಶ್ರೀಮತಿ ಪಾರ್ವತಿ ಎಂಬವರನ್ನು ವರಿಸಿ ಕಾರ್ತಿಕ್ (1 ಪಿ. ಯು. ಸಿ.), ಕೌಶಿಕ್ (8ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಬೋಂದೇಲ್, ಕಿನ್ನಿಕಟ್ಟೆ, ಪುತ್ತೂರು ಮೊದಲಾದೆಡೆಯಲ್ಲಿ ಸಾಧನೆಗೆ ಪ್ರತಿಫಲವಾಗಿ ಕಲಾಭಿಮಾನಿಗಳಿಂದ ಸಂಮಾನಗೊಂಡಿರುವರು.



# ಚೆನ್ನಪ್ಪ ಶೆಟ್ಟಿ ಆರ್. ಸಿದ್ಧಕಟ್ಟೆ

ಕಲಾಚೇತನ, ಮಾವಿನಕಟ್ಟೆ ಅಂಚೆ,

ವಯಾ ವಾಮದಪದವು, ಬಂಟ್ವಾಳ ತಾಲೂಕು.

ಪರಿಸರದಲ್ಲಿ ನಡೆಯುತ್ತಿರುವ ಯಕ್ಷಗಾನದ ಆಟ-ಕೂಟಗಳನ್ನು ನೋಡುತ್ತಾ ಎಳೆವೆಯಲ್ಲಿಯೇ ಪ್ರಭಾವಿತರಾದ ಆರ್ ಚೆನ್ನಪ್ಪ ಶೆಟ್ಟಿಯವರು ಪ್ರಸಿದ್ಧ ಕಲಾವಿದರಾಗಿ ಕೀರ್ತಿವಂತರಾಗಿದ್ದಾರೆ. ಯಕ್ಷಗಾನದ ಬಯಲಾಟ ಮತ್ತು ತಾಳಮದ್ದಳೆಗಳಲ್ಲಿ ಬಹು ಬೇಡಿಕೆಯ ಕಲಾವಿದರಾಗಿರುವ ಚೆನ್ನಪ್ಪ ಶೆಟ್ಟರ ಸಾಧನೆ ಪರಿಶ್ರಮ ಪೂರ್ಣವಾಗಿದ್ದು ಫಲಪ್ರದವಾಗಿದೆ.

ಬಂಟ್ವಾಳ ತಾಲ್ಲೂಕಿನ ವಾಮದ ಪದವಿನ ಬಳಿಯಲ್ಲಿರುವ ಮಾವಿನಕಟ್ಟೆಯಲ್ಲಿ ವಾಸಿಸುತ್ತಿರುವ ಚೆನ್ನಪ್ಪ ಶೆಟ್ಟರ ಮನೆಯ ಹೆಸರು ಕಲಾಚೇತನ. ಇವರ ಹುಟ್ಟೂರು ರಾಯಿ. ಹುಟ್ಟಿದ ದಿನಾಂಕ 8-5-1952. ವಾಸುಶೆಟ್ಟಿ, ಲಿಂಗಮ್ಮ ದಂಪತಿಯ ಸುಪುತ್ರರಾಗಿರುವ ಇವರು ಮೂರನೆಯ ಮಗನಾಗಿದ್ದು ಓರ್ವಾಕೆ ಸಹೋದರಿ ಹಾಗೂ ಈರ್ವರು ಸಹೋದರರೊಂದಿಗೆ ಬಾಳುತ್ತಿದ್ದಾರೆ. ಶ್ರೀಮತಿ ಹೇಮಲತಾ ಎಂಬವರನ್ನು ಪಾಣಿಗ್ರಹಣ ಮಾಡಿರುವ ಚೆನ್ನಪ್ಪ ಶೆಟ್ಟರು ಭರತ್ ಕುಮಾರ್ (ಕಂಪ್ಯೂಟರ್ ಉದ್ಯೋಗಿ) ಭುವನ್ ಕುಮಾರ್ (ಎನಿಮೇಷನ್ ಉದ್ಯೋಗಿ) ಭೂಷಣ್ ಕುಮಾರ್ (ಎನಿಮೇಷನ್ ಉದ್ಯೋಗಿ) ಎಂಬ ನಾಮಧೇಯವುಳ್ಳ ಮೂವರು ಸುಪುತ್ರರನ್ನು ಪಡೆದಿದ್ದಾರೆ.

ಕೆ.ವಾಸುಶೆಟ್ಟಿ, ಯಂ. ರಮೇಶ್ ಭಟ್ ಇವರ ಪ್ರೇರಣೆಯಂತೆ ದಿ.ಕುರಿಯ ವಿಠಲ ಶಾಸ್ತ್ರೀ ಮತ್ತು ದಿ.ಪಡ್ರೆ ಚಂದು ಇವರೀರ್ವರ ಗುರುತ್ವದಲ್ಲಿ ಧರ್ಮಸ್ಥಳ ಲಲಿತಕಲಾ ಕೇಂದ್ರದಲ್ಲಿ ತೆಂಕುತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿ ಮೇಳ ತಿರುಗಾಟವನ್ನು ಆರಂಭಿಸಿದರು.ಮುಂದೆ ಬೇಡಿಕೆಯ ಮೇರೆಗೆ ಬಡಗುತಿಟ್ಟಿನ ಮೇಳ ತಿರುಗಾಟವನ್ನು ಮಾಡಿದಾಗ ಹೆರಂಜಾಲು ವೆಂಕಟರಮಣ ಎಂಬವರಲ್ಲಿ ಬಡಗುತಿಟ್ಟಿನ . ನಾಟ್ಯಾಭ್ಯಾಸವನ್ನು ಮಾಡಿದರು.ಇವರ ಅರ್ಥಗಾರಿಕೆಗೆ ಪೋಷಕ ಸಾಮಾಗ್ರಿಯನ್ನು ಒದಗಿಸಿದವರು ಕೊರ್ಗಿ ವೆಂಕಟೇಶ್ವರ ಉಪಾಧ್ಯ, ಕೆ.ಕೆ.ರೈ, ವಾಸುಶೆಟ್ಟಿ ಕೆ.

ಪ್ರಸ್ತುತ ಶ್ರೀ ಹೊಸನಗರ ಮೇಳದಲ್ಲಿ 39ನೇ ವರ್ಷದ ತಿರುಗಾಟವನ್ನು ಪೂರೈಸುತ್ತಿರುವ ಸಿದ್ಧಕಟ್ಟೆಯವರು ಶ್ರೀ ಕಟೀಲು ಮೇಳ -5ವರ್ಷ, ಶ್ರೀ ಧರ್ಮಸ್ಥಳ ಮೇಳ -2ವರ್ಷ, ಶ್ರೀ ಕದ್ರಿ ಮೇಳ 9ವರ್ಷ ಬಪ್ಪನಾಡು ಮೇಳ -2ವರ್ಷ, ಶ್ರೀ ಮಧೂರು ಮೇಳ -1ವರ್ಷ, ಶ್ರೀ ಕುಂಬ್ಳೆ ಮೇಳ-ವರ್ಷ, ಶ್ರೀ ಪೆರ್ಡೂರು ಮೇಳ-11ವರ್ಷ, ಶ್ರೀ ಸಾಲಿಗ್ರಾಮ ಮೇಳ- 4ವರ್ಷ, ಶ್ರೀ ಎಡನೀರು ಮೇಳ-1ವರ್ಷ, ಶ್ರೀ ಹೊಸನಗರ ಮೇಳ-1ವರ್ಷ ಹೀಗೆ ತಿರುಗಾಟದ ಹಿನ್ನಲೆಯನ್ನು ಹೊಂದಿದ್ದಾರೆ.

ಕಾರ್ಕಳದ ಭುವನೇಂದ್ರ ಕಾಲೇಜು ಮತ್ತು ಬಂಟ್ವಾಳದ ವೆಂಕಟರಮಣ ಕಾಲೇಜುಗಳಲ್ಲಿ ಯಕ್ಷಗಾನದ ತರಬೇತಿಯನ್ನು ನೀಡಿರುವ ಇವರು ಅಭ್ಯಾಸಿ ಕಲಾವಿದರಿಗೆ ಪ್ರಸಂಗದ ನಡೆ, ಪಾತ್ರದ ನಡೆ ಮತ್ತು ಅರ್ಥದ ಮಾಹಿತಿಯನ್ನು ನೀಡುವಲ್ಲಿ ಸಮರ್ಥರೆನಿಸಿದ್ದಾರೆ.

ಕೇವಲ ಐದನೆಯ ಇಯತ್ತೆಯಲ್ಲಿ ಶಾಲಾವಿದ್ಯಾಭ್ಯಾಸವು ನಿಂತು ಹೋದರೂ ಸ್ವಂತ ಪರಿಶ್ರಮದ ಮೂಲಕ ಅಧ್ಯಾಯನ ನಡೆಸಿ, ಇವರು ಸಂಪಾದಿಸಿರುವ ವಿದ್ವತ್ ಸಮಷ್ಠಿ ಗುರುತರವಾಗಿದೆ. ಇವರ ಸಾಧನೆಗೆ ಪ್ರತಿಫಲವಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಯಕ್ಷಮಿತ್ರರು ದುಬ್ಯಾ, ದುಬ್ಯಾ ಬಂಟರ ಸಂಘ, ಮುಂಬಯಿ ಬಂಟರ ಸಂಘ, ಕಲಾಭಿಮಾನಿ ಬಳಗ ಕುಂದಾಪುರ ಹೀಗೆ ಹಲವೆಡೆಯಲ್ಲಿ ಸಂಘ- ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.



## ಜಯರಾಮ್ ಭಟ್ ಕೆದಿಲ

ನೇರಳೆಕಟ್ಟೆ ಅಂಚೆ, ವಯಾ ಮಾಣಿ, ಕೇಪುಲಕೆರೆ

ಬಂಟ್ವಾಳ ತಾಲೂಕು

(ಮೊಬೈಲ್) 9740946512

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಮುಖ್ಯ ಸ್ತ್ರೀಪಾತ್ರಧಾರಿಯಾಗಿ ಕಲಾಸೇವೆಯನ್ನು ಮಾಡುತ್ತಿರುವ ಕೆದಿಲ ಜಯರಾಮ ಭಟ್ಟರು ತುಳು ಮತ್ತು ಕನ್ನಡ ಪ್ರದರ್ಶನಗಳಿಗೆ ಬೇಡಿಕೆಯ ಕಲಾವಿದರಾಗಿದ್ದಾರೆ.

ದಿನಾಂಕ 4-4-1964ರಲ್ಲಿ ಶಂಕರನಾರಾಯಣ ಭಟ್ ಮತ್ತು ಲಕ್ಷ್ಮೀ ಅಮ್ಮ ದಂಪತಿಗೆ ಸುಪುತ್ರರಾಗಿ ಜನಿಸಿದ ಇವರ ಹುಟ್ಟೂರು ಪುತ್ತೂರು. ಹತ್ತನೆಯ ತರಗತಿಯ ವರೆಗೆ ಶಾಲೆಗೆ ಹೋಗಿರುವ ಇವರು ಕರ್ಗಲ್ಲು ವಿಶ್ವೇಶ್ವರ್ ಭಟ್, ಕೆ. ಗೋವಿಂದ ಭಟ್ ಇವರುಗಳ ಮಾರ್ಗದರ್ಶನದಲ್ಲಿ ನಾಟ್ಯಭ್ಯಾಸವನ್ನು ಪೂರೈಸಿ ರಂಗಪ್ರವೇಶ ಮಾಡಿದರು. 22 ನ ವರ್ಷದಿಂದ ಯಕ್ಷಗಾನದ ಪಾತ್ರವನ್ನು ನಿರ್ವಹಿಸಲು ಆರಂಭಿಸಿದ ಇವರು ಅರುವ ಮೇಳ-1 ವರ್ಷ, ಬಪ್ಪನಾಡು ಮೇಳ1 ವರ್ಷ, ಕರ್ನಾಟಕ ಮೇಳ- 1 ವರ್ಷ, ಮಂದಾರ್ತಿ ಮೇಳ-2 ವರ್ಷ, ಪೆರ್ಡೂರು ಮೇಳ 3ವರ್ಷ, ಸಾಲಿಗ್ರಾಮ ಮೇಳ-4 ವರ್ಷ, ಮಧೂರು ಮೇಳ - 2ವರ್ಷ, ಕದ್ರಿ ಮೇಳ 'ವರ್ಷ, ಸುರತ್ಕಲ್ ಮೇಳ ಮಂಗಳಾದೇವಿ ಮೇಳ-1ವರ್ಷ 1ವರ್ಷ, ಧರ್ಮಸ್ಥಳ ಮೇಳ - 5ವರ್ಷ ಹೀಗೆ ತೆಂಕು-ಬಡಗು ಮೇಳಗಳಲ್ಲಿ-ತಿರುಗಾಟ ಮಾಡಿದ ಅನುಭವ ಜಯರಾಮ ಭಟ್ಟರಿಗೆ ಇದೆ.

ಶ್ರೀಮತಿ ವಾಣೀ ಎಂಬವರನ್ನು ವರಿಸಿ "ಕ್ಷಮಿತ್" ಎಂಬ ಸುಕುಮಾರನೋರ್ವನನ್ನು ಪಡೆದಿರುವ ಇವರು ಮೋಹಿನಿ.ಅಂಬೆ, ಚಿಂತ್ರಾಗದೆ, ಪ್ರಭಾವತಿ ಮೊದಲಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾರೆ. ಸೀತೆ, ಶ್ರೀದೇವಿ, ದೌಪದಿ, ಸುಭದ್ರೆ ಮೊದಲಾದ ಮುಖ್ಯಪಾತ್ರಗಳನ್ನೆಲ್ಲಾ ಮಾಡಿರುವ ಜಯರಾಮ ಭಟ್ಟರು ರಾಮ, ಕೃಷ್ಣ, ಅರ್ಜುನ, ದೇವೇಂದ್ರ ಮೊದಲಾದ ಪಾತ್ರಗಳನ್ನು ಅನಿವಾರ ಸಂದರ್ಭಗಳಲ್ಲಿ ನಿರ್ವಹಿಸಿದ್ದಾರೆ.

ಯಕ್ಷಗಾನ ಕಲಾವಿದ ಪೆರುವೋಡಿ ನಾರಾಯಣ ಭಟ್ಟರ ಸಂಬಂಧಿಕರಾಗಿರುವ ಇವರು ಧರ್ಮಸ್ಥಳ ಮೇಳದ ಹಿರಿಯ ಕಲಾವಿದರುಗಳ ಒಡನಾಟದಲ್ಲಿ ತಿರುಗಾಟವನ್ನು ಮಾಡುತ್ತಾ ಪೌರಾಣಿಕ ಪ್ರಸಂಗದ ಸ್ತ್ರೀ ಪಾತ್ರಗಳ ಬಗ್ಗೆ, ಹಾಗೂ ನಿರ್ವಹಣೆಯ ಪರಿಸರದ ಆಟ ಕೂಟಗಳಿಂದ ಪ್ರಭಾವಿತರಾಗಿದ್ದರು. ಶೈಲಿಯಲ್ಲಿ ಬದ್ಧತೆಯನ್ನು ತೋರುತ್ತಾ ಇದ್ದಾರೆ.



# ಜಯಪ್ರಕಾಶ್ ಶೆಟ್ಟಿ ಪೆರ್ಮುದೆ


ಕುಡಾಲ್‌ಗುತ್ತು ಮನೆ,

ಪೆರ್ಮುದೆ ಅಂಚೆ, ಕಾಸರಗೋಡು

ಕುಂಬ್ಳೆ ಮಂಗಲ್ಪಾಡಿ ವಯಾ - 671324

(ಮೊಬೈಲ್) 9480064670


ಆಟ ಕೂಟಗಳೆರಡರಲ್ಲೂ ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆಯುತ್ತಿರುವ ಜಯಪ್ರಕಾಶ್ ಶೆಟ್ಟಿ ಪೆರ್ಮುದೆಯವರು ಪ್ರಸ್ತುತ ಶ್ರೀ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 26-4-1975ರಲ್ಲಿ ಬಾಲಕೃಷ್ಣ ಶೆಟ್ಟಿ ಮತ್ತು ಲೀಲಾವತಿ ದಂಪತಿಯ ಸುಪುತ್ರರಾಗಿ ಕುಡಾಲ್‌ಗುತ್ತು ಮನೆಯಲ್ಲಿ ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಮನೆತನದ ಹಿನ್ನೆಲೆಯಿಂದ ಬಾಲ್ಯದಲ್ಲೇ ಯಕ್ಷಗಾನದತ್ತ ಪ್ರಭಾವಿತರಾಗಿದ್ದರು.

ಇವರ ತಂದೆ ಅರ್ಥಧಾರಿ, ಕೀರ್ತಿಶೇಷ ಕಲಾವಿದ ಗುಂಪೆ ರಾಮಯ್ಯ ರೈ ಅಜ್ಜ, ಹಿರಿಯ ಕಲಾವಿದರಾಗಿರುವ ಪೆರುವಾಯಿ ನಾರಾಯಣ ಶೆಟ್ಟಿ ಮಾವ. ಇವರೆಲ್ಲರ ಆದರ್ಶವನ್ನು ಅನುಸರಿಸಿರುವ ಜಯಪ್ರಕಾಶರು ಶ್ರೀ ಕೋಳ್ಯೂರು ರಾಮಚಂದ್ರ ರಾವ್ ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವರು. ಅನಂತರ ತಿರುಗಾಟದ ಸಂದರ್ಭದಲ್ಲಿ ಮವನಿಂದ ಹೆಚ್ಚಿನ ಅನುಭವವನ್ನು ಗಳಿಸಿರುವರು.

16ನೇ ವರ್ಷದಿಂದಲೇ ಯಕ್ಷಗಾನದ ಪಾತ್ರನಿರ್ವಹಣೆ ಮಾಡುತ್ತಾ ಬೆಳೆದಿರುವ ಇವರುಕಟೀಲು ಮೇಳ-16 ವರ್ಷ ಹಾಗೂ ಹೊಸನಗರ ಮೇಳದಲ್ಲಿ 3 ವರ್ಷಗಳ ವರ್ಷಗಳ ತಿರುಗಾಟವನ್ನು ಪೂರೈಸಿರುವರು.

ರಾಜವೇಷ, ಪುಂಡುವೇಷ ಮತ್ತು ನಾಟಕೀಯ ವೇಷಗಳಲ್ಲಿ ಹಿಡಿತವನ್ನು ಸಾಧಿಸಿರುವ ಇವರು ಜಾಬಾಲಿ, ಕೃಷ್ಣ, ವಿಷ್ಣು, ಅರ್ಜುನ, ತಾಮ್ರಧ್ವಜ, ಕಂಸ, ರಕ್ತಬೀಜ, ಅತಿಕಾಯ ಮುಂತಾದ ಪಾತ್ರಗಳನ್ನು ಉತ್ತಮವಾದ ಮಾತಿನ ಮುಖೇನ ನಿರ್ವಹಿಸುತ್ತಾ ಇದ್ದಾರೆ.

ಶ್ರೀಮತಿ ಪ್ರಭಾಲತಾ ಎಂಬವರನ್ನು ವರಿಸಿರುವ ಇವರು ಪಲ್ಲವಿ ಮತ್ತು ಪವಿತ್ರ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಜಯರಾಮ ಭಟ್ ಪದ್ಯಾಣ

"ಸಪ್ತಸ್ವರ", ಸಂಪ್ಯ ಅಂಚೆ, ಕೊಲ್ಯ ಆರಿಯಾಪು ಗ್ರಾಮ

ಪುತ್ತೂರು ತಾಲೂಕು 574210

(ಮೊಬೈಲ್) 9448365666

ಮದ್ದಳೆಗಾರರಾಗಿ ಮತ್ತು ಭಾಗವತರಾಗಿ ಜನಮನ್ನಣೆಯನ್ನು ಪಡೆದಿರುವ ಪದ್ಯಾಣ ಜಯರಾಮ ಭಟ್ಟರು ಪ್ರಸ್ತುತ ಶ್ರೀ ಹೊಸನಗರ ಮೇಳದ ಹಿಮ್ಮೇಳ ವಾದಕರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪದ್ಯಾಣ ತಿರುಮಲೇಶ್ವರ ಭಟ್ ಮತ್ತು ಡಿ. ಸಾವಿತ್ರಿ ಅಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 19-11-1957ರಂದು ಕಲ್ಲಡ್ಕದಲ್ಲಿ ಹುಟ್ಟಿದರು. ತಂದೆ ಹಿಮ್ಮೇಳ ವಾದಕರು, ಅಜ್ಜ ಮುಟ್ಟು ನಾರಾಯಣ ಭಾಗವತರು, ಹಿರಿಯ ಸಹೋದರ ಪದ್ಯಾಣ ಗಣಪತಿ ಭಟ್ ಭಾಗವತರು ಹೀಗೆ ಮನೆತನದ ಹಿನ್ನೆಲೆಯಿಂದ ರಕ್ತಗತವಾಗಿ ಬಂದ ಪ್ರತಿಭೆಯನ್ನು ವಿಸ್ತರಿಸಿ ಕೀರ್ತಿ ಸಂಪನ್ನರಾಗಿದ್ದಾರೆ.

ಬಿ.ಕಾಂ. ಪದವೀಧರರಾಗಿರುವ ಇವರು 18ನೇ ವರ್ಷದಿಂದಲೇ ಯಕ್ಷಗಾನದ ಹವ್ಯಾಸಿ ಕಲಾವಿದರಾಗಿ ಕಲಾಸೇವೆಯನ್ನು ಆರಂಭಿಸಿದವರು ಮುಂದೆ ಮೇಳ . ತಿರುಗಾಟವನ್ನು ನಡೆಸಿದರು. ಶ್ರೀ ಕೇಶವಾನಂದ ಭಾರತೀ

ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ರೂಪುಗೊಂಡ ಪ್ರತಿಭೆ ಇವರದ್ದಾಗಿದೆ. ಹವ್ಯಾಸಿ ಕಲಾವಿದರಾಗಿದ್ದಾಗಲೇ ಮನ್ನಣೆಯನ್ನು ಪಡೆದು ಹೇಳಿಕೆಯ ಮೇರೆಗೆ ಮೇಳ ಹಾಗೂ ಹವ್ಯಾಸಿ ಸಂಘಟನೆಯ ಹಲವಾರು ಕಾರಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ಮಂಗಳಾದೇವಿ ಮೇಳ-2 ವರ್ಷ, ಕರ್ನಾಟಕ—1 ವರ್ಷ, ಕದ್ರಿ ಮೇಳ 2 ವರ್ಷ,ಕುಂಟಾರು ಮೇಳ-2 ವರ್ಷ, ಎಡನೀರು ಮೇಳ- 2 ವರ್ಷ ಹಾಗೂ ಹೊಸನಗರ ಮೇಳ ವರ್ಷ ಹೀಗೆ 13 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ.

ಆರಂಭದಲ್ಲಿ ವೇಷಗಾರಿಕೆಯಲ್ಲಿಯೂ ಆಸಕ್ತಿಯನ್ನು ಹೊಂದಿದ್ದ ಜಯರಾಮ ಭಟ್ಟರು ಸುಧನ್ವ, ಬಭ್ರುವಾಹನ, ಕೃಷ್ಣ, ವಿಷ್ಣು ಮುಂತಾದ ಪಾತ್ರಗಳನ್ನು ಮಾಡಿದ್ದಾರೆ.ಸಂಗೀತದ ಜ್ಞಾನ ಸಂಪನ್ನರಾಗಿರುವ ಇವರು ಯಕ್ಷಗಾನ ಹಿಮ್ಮೇಳದ ಎಲ್ಲಾ ಬಗೆಗಳಲ್ಲಿ ಅನುಭವಿಯಾಗಿದ್ದಾರೆ.

ಕೃಷಿಕ ಮನೆತನಕ್ಕೆ ಸೇರಿದ ಜಯರಾಮ ಭಟ್ಟರು ಮಳೆಗಾಲದ ಕಾರ್‍ಯಕ್ರಮಗಳಲ್ಲೂ ಭಾಗವಹಿಸುತ್ತಾರೆ. ಶ್ರೀಮತಿ ಸುಮಂಗಳ ಎಂಬವರನ್ನು ವರಿಸಿರುವರುವ ಇವರಿಗೆ ಸುಜಯ್ ( ಬಿ. ಬಿ. ಎಂ.) ಎಂಬ ಸುಪುತ್ರನೋರ್ವರಿದ್ದಾರೆ. ದೆಹಲಿ, ಪದ್ಯಾಣ, ಬೆಂಗಳೂರು, ಕಲ್ಮಡ್ಕ, ಎಡನೀರು, ಉಡುಪಿ ಮುಂತಾದೆಡೆಯಲ್ಲಿ ಗೌರವ ಸಂಮಾನಗಳಿಗೆ ಭಾಜನರಾಗಿದ್ದಾರೆ.



## ಜಯರಾಮ ಆಚಾರ್ಯ ಬಂಟ್ವಾಳ


"ಕಲಾಶ್ರೀ ಮನೆ"

ಬಂಟ್ವಾಳ ಎಸ್. ವಿ. ಎಸ್. ಕಾಲೇಜು ರೋಡ್

ಬಂಟ್ವಾಳ ತಾಲೂಕು-574211

(ಮೊಬೈಲ್) 944916307

ಹಾಸ್ಯ ಪಾತ್ರಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿ ಪ್ರಸಿದ್ಧರಾಗಿರುವ ಬಂಟ್ವಾಳ ಜಯರಾಮ ಆಚಾರ್ಯರು ಪ್ರಸ್ತುತ ಹೊಸನಗರ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಬಂಟ್ವಾಳ ಗಣಪತಿ ಆಚಾರ್ಯ ಮತ್ತು ಭವಾನಿ ದಂಪತಿಯ ಸುಪುತ್ರರಾಗಿ ದಿನಾಂಕ 10-12- 1957ರಂದು ಬಂಟ್ವಾಳದಲ್ಲಿ ಹುಟ್ಟಿರುವ ಜಯರಾಮ ಆಚಾರ್ಯರರು 7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವರು. ತಂದೆ ಹಾಸ್ಯ ಪಾತ್ರಧಾರಿಯಾಗಿ ಮೇಳ ತಿರುಗಾಟವನ್ನು ಮಾಡಿದ ಅನುಭವಿ ಕಲಾವಿದರಾಗಿದ್ದುದರಿಂದ ಜಯರಾಮ ಆಚಾರ್ಯರ ಆಸಕ್ತಿ ಕೂಡ ಹಾಸ್ಯ ಪಾತ್ರಗಳತ್ತವೇ ಬೆಳೆಯಿತು.

ಪಡ್ರೆ ಚಂದು ಮತ್ತು ನೆಲ್ಲಿಕಟ್ಟೆ ನಾರಾಯಣ ಹಾಸ್ಯಗಾರರಿಂದ ನಾಟ್ಯಾನುಭವ ಮತ್ತು ರಂಗಾನುಭವವನ್ನು ಸಂಪಾದಿಸಿದ ಇವರು ಅಲ್ವಾಡಿಮೇಳ 1 ವರ್ಷ, ಸ್ವರ್ಣಾಡು ಮೇಳ—1ವರ್ಷ, ಸುಂಕದಕಟ್ಟೆ ಮೇಳ - 1 ವರ್ಷ, ಕಟೀಲು ಮೇಳ 7 ವರ್ಷ, ಪುತ್ತೂರು ಮೇಳ 5ವರ್ಷ, ಕದ್ರಿ ಮೇಳ 15 ವರ್ಷ, ಕುಂಬ್ಳೆ ಮೇಳ - 1 ವರ್ಷ, ಸುರತ್ಕಲ್ ಮೇಳ 2 ವರ್ಷ, ಎಡನೀರು ಮೇಳ - 2 ವರ್ಷ ಹಾಗೂ ಹೊಸನಗರ . 4 ವರ್ಷ ಹೀಗೆ ತಿರುಗಾಟವನ್ನುನಡೆಸಿದ್ದಾರೆ.

ದಾರುಕ, ವಿಜಯ, ಬಾಹುಕ, ಮೂಕಾಸುರ ಮೊದಲಾದ ಎಲ್ಲಾ ವಿಧದ ಹಾಸ್ಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಾಟಕ ಕಲೆಯಲ್ಲೂ ಆಸಕ್ತಿಯನ್ನು ಬೆಳೆಸಿದ ಇವರು ಆ ಕ್ಷೇತ್ರದಲ್ಲೂ ಮನ್ನಣೆಯನ್ನು ಪಡೆದಿದ್ದಾರೆ. ಚೆಂಡೆ - ಮದ್ದಳೆಗಳ ಬಾರಿಸುವಿಕೆಯಲ್ಲಿ ಅಭಿರುಚಿವುಳ್ಳವರಾಗಿದ್ದಾರೆ. ವಿಶೇಷ ಆಕರ್ಷಣೆಯಾಗಿ ಕಂಸ, ಭಸ್ಮಾಸುರ, ಮಹಿಷಾಸುರ, ಶೂರ್ಪನಖಾ, ಕೃಷ್ಣ, ಜಮದಗ್ನಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಶ್ಯಾಮಲ ಎಂಬವರನ್ನು ವರಿಸಿ ವರ್ಷ (6ನೇ ತರಗತಿ), ವರುಣ್ (5ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ತುಳು ಮತ್ತು ಕನ್ನಡ ಪ್ರಸಂಗಗಳ ಹಾಸ್ಯ ಪಾತ್ರಗಳಲ್ಲಿ ಚೌಕಟ್ಟನ್ನು ಮೀರದೆ ಕಲಾಗಾರಿಕೆಯನ್ನು ಮೆರೆಸಿರುವ ಇವರ ಸಾಧನೆಗೆ ಗೌರವ ರೂಪವಾಗಿ ಬಂಟ್ವಾಳ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ ದೊರೆತಿದೆ. ಬಂಟ್ವಾಳ, ಮಂಗಳೂರು, ಕಲ್ಮಡ್ಕ ಮುಂತಾದೆಡೆಯಲ್ಲಿ ಹಲವು ಸಂಮಾನಗಳನ್ನು ಪಡೆದಿರುವ ಇವರಿಗೆ "ತೆಲಿಕೆದ ರಾಜ" ಎಂಬ ಬಿರುದು ಕೂಡಾ ಲಭಿಸಿದೆ.



## ಜನಾರ್ದನ ಜೋಗಿ ಮಂಜೇಶ್ವರ

"ಮಲ್ಲುಗುರಿ ಮನೆ, ಉದ್ಯಾವರ ಗ್ರಾಮ

ಮಂಜೇಶ್ವರ ಅಂಚೆ, ಕಾಸರಗೋಡು ತಾಲೂಕು

ಮನೆ ದೂರವಾಣಿ) 0824 -2250718

ನಾಟಕೀಯ ವೇಷದ ಗತ್ತುಗಾರಿಕೆಯಲ್ಲಿ ತನ್ನ ತನವನ್ನು ಮೆರೆಸಿ ಪ್ರಸಿದ್ಧಿಗೆ ಏರಿದ ಹಿರಿಯ ಕಲಾವಿದರಾದ ಶ್ರೀ ಮಂಜೇಶ್ವರ ಜನಾರ್ದನ ಜೋಗಿಯವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಐತಪ್ಪ ಜೋಗಿ ಮತ್ತು ಕಲ್ಯಾಣಿ ದಂಪತಿಯ ಸುಪುತ್ರರಾಗಿ 1939ನೇ ವರ್ಷ ಮಂಜೇಶ್ವರದಲ್ಲಿ ಜನಿಸಿದರು. 8ನೇ ತರಗತಿಯ ವಿದ್ಯಾಭ್ಯಾಸ ಪಡೆದಿರುವ ಇವರಿಗೆ ಬಾಲ್ಯದಲ್ಲೇ ಯಕ್ಷಗಾನದ ಆಸಕ್ತಿ ಇತ್ತು ಆಮೇಲೆ ಹಿರಿಯ ಕಲಾವಿದ ಶೀನಪ್ಪ ಭಂಡಾರಿಯವರ ಪ್ರೇರಣೆ ಒದಗಿ ಬಂದ ಕಾರಣ ಅವರಿಂದಲೇ ನಾಟ್ಯಾಭ್ಯಾಸವನ್ನು ಮಾಡಿ ಕಲಾಸೇವೆಗೆ ಮುಂದಾದರು.

17ನೇ ವರ್ಷದಿಂದಲೇ ಮುಖಕ್ಕೆ ಬಣ್ಣ ಹಚ್ಚಲು ಆರಂಭಿಸಿದ ಇವರು ಸುಬ್ರಹ್ಮಣ್ಯ ಮೇಳ 12 ವರ್ಷ, ವೇಣೂರು ಮೇಳ 6 ವರ್ಷ, ಕೂಡ್ಲು- ಮೇಳ 3 ವರ್ಷ, ಸುರತ್ಕಲ್ ಮೇಳ - 1 ವರ್ಷ, ಸುಂಕದಕಟ್ಟೆ ಮೇಳ 9 ವರ್ಷ, ಕಟೀಲು ಮೇಳ-1 22 ವರ್ಷ ಹೀಗೆ ಒಟ್ಟಾಗಿ 5 ದಶಕಗಳಿಗೂ ಮಿಕ್ಕಿದ ಸೇವೆಯನ್ನು ಪೂರೈಸಿದ್ದಾರೆ.

ಅರುಣಾಸುರ, ಹಿರಣ್ಯಕಶ್ಯಪ, ಕಂಸ, ದಾರಿಕಾಸುರ, ಸುಂದರರಾವಣ ಇತ್ಯಾದಿ ನಾಟಕೀಯ ವೇಷಗಳು ಇವರ ಗತ್ತುಗಾರಿಕೆಯ ಪಾತ್ರಗಳಾಗಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿವೆ. ಉಳಿದಂತೆ ವೀರವರ್ಮ, ತಾಮ್ರಧ್ವಜ, ಇಂದ್ರಜಿತು, ರಕ್ತಬೀಜ, ಅತಿಕಾಯ, ಮಧು ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾ ಬಂದಿದ್ದಾರೆ.

ಶ್ರೀಮತಿ ವಾರಿಜ ಎಂಬವರನ್ನು ವರಿಸಿರುವ ಇವರು ಮೋಹಿನಿ (ಅಧ್ಯಾಪಕಿ), ಪುಷ್ಪ, ಶೋಭಾ (ಅಧ್ಯಾಪಕಿ), ಬಬಿತಾ (ಇನ್ಸೂರೆನ್ಸ್ ಏಜೆಂಟ್) ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಫಲವಾಗಿ ಕಟೀಲು ಅಸಣ್ಣ ಸಂಸ್ಮರಣಾ ಸಂಮಾನ, ಕದ್ರಿ ಹವ್ಯಾಸಿ ಬಳಗದ ದಶಮಾನ ಸಂಮಾನಗಳಲ್ಲದೆ ಮಂಜೇಶ್ವರ, ಗಂಜಿಮಠ, ನಿಡೋಡಿ, ಕೋಡಿಕಲ್, ಪುತ್ತೂರು ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



**ಜಯಕುಮಾರ್ ಉದ್ಯಾವರ**

ಕೇದಾರು ಮನೆ, ಉದ್ಯಾವರ ಅಂಚೆ

ಉಡುಪಿ ಜಿಲ್ಲೆ - 574118

(ಮೊಬೈಲ್) 9480157711

(ಮನೆ ದೂರವಾಣಿ) 0820 - 2003678

ಸ್ತ್ರೀ ಪಾತ್ರಗಳ ಮುಖೇನ ಜನ ಮನ್ನಣೆಯನ್ನು ಪಡೆದಿರುವ ಉದ್ಯಾವರದ ಶ್ರೀ ಜಯ ಕುಮಾರರು ತೆಂಕು ಮತ್ತು ಬಡಗು ತಿಟ್ಟುಗಳೆರಡರಲ್ಲೂ ಪ್ರತಿಭೆಯನ್ನು ಮೆರೆಸಿದ ಪಾತ್ರಧಾರಿಯಾಗಿದ್ದಾರೆ. ಪ್ರಸ್ತುತ ಶ್ರೀ ಮಾರಣ ಕಟ್ಟೆ ಮೇಳದ ಸ್ತ್ರೀ ಸುಭದ್ರೆ, ಅಂಬೆ, ವಿಷ್ಣು, ಕೃಷ್ಣ ಮುಂತಾದ ಪಾತ್ರಗಳನ್ನು ಪಾತ್ರಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಯಕ್ಷಗಾನದ ಹೆಸರುವಾಸಿ ಕಲಾವಿದರಾಗಿ ಕೀರ್ತಿ ಶೇಷರಾಗಿರುವ ಬಸವ ಗಾಣಿಗ ಮತ್ತು ಲಕ್ಷ್ಮಿ ದಂಪತಿಯ ಸುಪುತ್ರರಾಗಿ 5-3-1952ರಲ್ಲಿ ಹಾರಾಡಿ ಎಂಬಲ್ಲಿ ಹುಟ್ಟಿದರು. ಇವರ ಅಜ್ಜ ಹಾರಾಡಿ ಕುಷ್ಟಗಾಣಿಗರು ಇವರ ತಂದೆಯಂತೆಯೇ ಉತ್ತಮ ಕಲಾವಿದರಾಗಿದ್ದರು. ಹೀಗಾಗಿ ಜಯ ಕುಮಾರರು ತಂದೆ ಅಜ್ಜಂದಿರ ಆದರ್ಶದಲ್ಲೇ ಮುನ್ನಡೆದು ಕೀರ್ತಿ ಸಂಪನ್ನರಾಗಿದ್ದಾರೆ.

ವೀರಭದ್ರ ನಾಯ್ಕರವರಲ್ಲಿ ಬಡಗು ತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿ ಅನಂತರ ಕುರಿಯ ವಿಠಲ ಶಾಸ್ತ್ರಿ ಮತ್ತು ಪಡ್ರೆ ಚಂದು ರವರಲ್ಲಿ ತೆಂಕುತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿ ಮೇಳದ ತಿರುಗಾಟವನ್ನು ಆರಂಭಿಸಿದರು. ಶೈಕ್ಷಣಿಕವಾಗಿ ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದರೂ ಭಾವ ಪೂರ್ಣವಾದ ಮಾತಿನಿಂದ ಪ್ರೌಢಿಮೆಯನ್ನು ತೋರಿದ್ದಾರೆ.

19ನೇ ವರ್ಷದಿಂದಲೇ ತಿರುಗಾಟವನ್ನು ಆರಂಭಿಸಿದ ಜಯಕುಮಾರರು ಸುರತ್ಕಲ್ ಮೇಳ - 2 ವರ್ಷ, ಧರ್ಮಸ್ಥಳ ಮೇಳ 29 ವರ್ಷ, ಸಾಲಿಗ್ರಾಮ ಮೇಳ 2 ವರ್ಷ, ಕದ್ರಿ ಮೇಳ - 1 ವರ್ಷ, ಸುಂಕದಕಟ್ಟೆ ಮೇಳ – 1 ವರ್ಷ, ಸೌಕೂರು ಮೇಳ - 1 ವರ್ಷ, ಎಡನೀರು ಮೇಳ-2 ವರ್ಷ, ಬಪ್ಪನಾಡು ಮೇಳ – 1 ವರ್ಷ, ಮಾರಣಕಟ್ಟೆ ಮೇಳ - 1 ವರ್ಷ ಹೀಗೆ ಹಲವು ಮೇಳಗಳಲ್ಲಿ ತಿರುಗಾಟ ಮಾಡಿರುವ ಅನುಭವವಿದೆ.

ಶ್ರೀದೇವಿ, ದಾಕ್ಷಾಯಿಣಿ, ಅಂಬು ಬಳ್ಳಾ, ಮಾಡಿರುವ ಇವರು ಶ್ರೀಮತಿ ವಾರಿಜಾ ಎಂಬವರನ್ನು ವರಿಸಿ ಪೂರ್ಣರಾಜ್ ಮತ್ತು ಪೂಜಾ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ತಕ್ಕಂತೆ ಉದ್ಯಾವರ, ಮಂಚ ಕಲ್ಲು, ಮಣಿ ಪಾಲ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



## ಜನಾರ್ದನ ಎನ್. ಕಾರ್ವಿ

ಅಜ್ಜಮ್ಮನ ಮನೆ (ಪ್ರಣಾಮ್)
ಉಪ್ಪುಂದ ಗ್ರಾಮ ಮತ್ತು ಅಂಚೆ
ಕುಂದಾಪುರ ತಾಲೂಕು ಉಡುಪಿ - 576232
(ಮನೆ ದೂರವಾಣಿ) 08254 - 256544
(ಮೊಬೈಲ್) 9964144683

ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಡುತ್ತಿರುವ ಶ್ರೀ ಜನಾರ್ದನ ಎನ್. ಕಾರ್ವಿಯವರು ಪುಂಡು ವೇಷಗಳ ಪಾತ್ರ ನಿರ್ವಹಣೆಯಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಯುವ ಕಲಾವಿದರಾಗಿದ್ದಾರೆ.

ನಾರಾಯಣ ಕಾರ್ವಿ ಮತ್ತು ಕಮಲಾವತಿ ದಂಪತಿಯ ಸುಪುತ್ರರಾಗಿ 27-10-1979ರಂದು ಉಪ್ಪುಂದದಲ್ಲಿ ಜನಿಸಿದರು. 8ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಕಲೆಯ ಮೇಲೆ ಆಕರ್ಷಿತರಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾಕೇಂದ್ರದಲ್ಲಿ ಕೋಳ್ಯೂರು ರಾಮಚಂದ್ರ ರಾವ್ ಅವರ ನೇತೃತ್ವದಲ್ಲಿ ನಾಟ್ಯಾಭ್ಯಾಸ ಮಾಡಿದರು.

14ನೇ ವರ್ಷದಲ್ಲೇ ರಂಗ ಪ್ರವೇಶ ಮಾಡಿದ ಇವರು ಕಟೀಲು ಮೇಳದಲ್ಲಿ 14 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಚಂಡ-ಮುಂಡರು, ಚಂಡ-ಪ್ರಚಂಡರು, ಶ್ರೀಕೃಷ್ಣ, ಭಾರ್ಗವ, ಅಭಿಮನ್ಯು, ವಿದ್ಯುನ್ಮಾಲಿ, ದೇವೇಂದ್ರ, ಚತುರ್ಬಾಹು ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ದಶಾವತಾರ ಪ್ರಸಂಗದ ಮತ್ಸ, ವರಾಹ, ಜಾಂಬವತಿ ಕಲ್ಯಾಣದ ಸಿಂಹ ಮುಂತಾದ ಬಣ್ಣದ ವೇಷದ ವಿಭಾಗಕ್ಕೆ ಸೇರಿದ ಪಾತ್ರಗಳನ್ನು ರಂಗ ತುಂಬುವಂತೆ ತೀವ್ರಗತಿಯ ಕುಣಿತದಲ್ಲಿ ಅಭಿನಯಿಸುವ ಚಾಕಚಕ್ಯತೆಯನ್ನು ಇವರಲ್ಲಿ ಕಾಣಬಹುದಾಗಿದೆ. ಇಷ್ಟಲ್ಲದೆ ಪುಂಡು ವೇಷಗಳ ಜೊತೆಗೆ ರಾಜವೇಷದ ಪಾತ್ರಗಳನ್ನು ನಿರ್ವಹಿಸುತ್ತಾ ಕಲಾಸೇವೆಯನ್ನು ಮಡುತ್ತಾ ಇದ್ದಾರೆ.



## ಜಯಾನಂದ ಸಂಪಾಜೆ

ಸುಳ್ಯಕ್ಕೋಡಿ ಮನೆ, ಸಂಪಾಜೆ ಅಂಚೆ ಮತ್ತು ಗ್ರಾಮ,

ಸುಳ್ಯ ತಾಲೂಕು, ದ. ಕ. 574234

(ಮೊಬೈಲ್) 9731435243, 9481516243

ರಾಜವೇಷ, ನಾಟಕೀಯ ವೇಷ ಮತ್ತು ಪುಂಡು ವೇಷಗಳ ಮುಖೇನ ಕಲಾಸೇವೆಯನ್ನು ಮಾಡುತ್ತಾ ಬೆಳೆದಿರುವ ಶ್ರೀ ಜಯಾನಂದ ಸಂಪಾಜೆಯವರು ಪ್ರಸ್ತುತ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 1-6-1972ರಲ್ಲಿ ತಿಮ್ಮಯ್ಯ ಗೌಡ ಮತ್ತು ಎಸ್. ಲಕ್ಷ್ಮೀ ದಂಪತಿಯ ಸುಪುತ್ರರಾಗಿ ಸುಳ್ಯಕೋಡಿ ಮನೆಯಲ್ಲಿ ಜನಿಸಿದರು. ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿದ್ದರು. ಅಜ್ಜ ಕೇದಗಡಿ ಗುಡ್ಡಪ್ಪ ಗೌಡರ ಆದರ್ಶ ಇವರ ಕಲಾಜೀವನದ ಬೆಳವಣಿಗೆಗೆ ಉತ್ತೇಜನವನ್ನು ನೀಡಿದೆ.

ಅರಸಿನಮಕ್ಕಿಯ ಪರಮೇಶ್ವರ ಆಚಾರ್ಯರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಜಯಾನಂದರು 20ನೇ ವರ್ಷದಲ್ಲಿ ರಂಗಪ್ರವೇಶ ಮಾಡಿದರು. ಕಟೀಲುಮೇಳ9 ವರ್ಷ, ಕುಂಜಾರು ಮೇಳ 1-ವರ್ಷ, ಹೊಸನಗರ ಮೇಳ 2 ವರ್ಷ, ಹೀಗೆ ಮೇಳಗಳ 12 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ದೇವೇಂದ್ರ, ಅರ್ಜುನ, ಹಿರಣ್ಯಾಕ್ಷ, ಇಂದ್ರಜಿತು, ಅರುಣಾಸುರ, ಅವೀಕ್ಷಿತ, ದೇವವ್ರತ, ಮಧು, ಕೈಟಭ ಮೊದಲಾದ ಪಾತ್ರಗಳನ್ನು ಉತ್ತಮವಾದ ಮಾತಿನ ಮುಖೇನ ನಿರ್ವಹಿಸುತ್ತಾರೆ.

ಮಳೆಗಾಲದಲ್ಲಿ ಕೃಷಿಯ ಬಗ್ಗೆ ಆಸಕ್ತರಾಗಿ ಶ್ರಮಿಸುತ್ತಿರುವ ಇವರು ಶ್ರೀಮತಿ ವಿಜಯಾ ಎಸ್. ಜೆ. ಎಂಬವರನ್ನು ವರಿಸಿ ಭ್ರಾಮರಿ ಮತ್ತು ನೈಋತ್ಯ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



# ಜಗನ್ನಾಥ ಶೆಟ್ಟಿ ಪೆರ್ಲ


"ಮಂಡ್ಯ ಮನೆ, ನೆಟ್ಟಣಿಗೆ ಮೂಡೂರು ಗ್ರಾಮ

ಈಶ್ವರ ಮಂಗಳ ಅಂಚೆ, ಪುತ್ತೂರು ತಾಲೂಕು

ಮೊಬೈಲ್: 9449903745


ರಾಜವೇಷ, ಸ್ತ್ರೀವೇಷ, ಪುಂಡುವೇಷ ಮತ್ತು ನಾಟಕೀಯ ವೇಷಗಳ ಮುಖೇನ ಪ್ರೌಢಿಮೆಯನ್ನು ಸಾಧಿಸಿರುವ ಶ್ರೀ ಪೆರ್ಲ ಜಗನ್ನಾಥ ಶೆಟ್ಟರು ಹೊಸನಗರದ ಶ್ರೀರಾಮಚಂದ್ರಾಪುರ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 25-10-1966 ರಲ್ಲಿ ಮಂಜಪ್ಪ ಶೆಟ್ಟಿ ಮತ್ತು ಕಮಲ ಶೆಡ್ತಿ ದಂಪತಿಯ ಸುಪುತ್ರರಾಗಿ ಕಾಸರಗೋಡು ಜಿಲ್ಲೆಯ ಪೆರ್ಲದ ಕಾಟುಕುಕ್ಕೆ ಎಂಬಲ್ಲಿ ಜನಿಸಿದರು. 8ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿ ಕಾಟುಕುಕ್ಕೆ ಕುಂಞರಾಮ ಮಣಿಯಾಣಿಯವರಿಂದ ಮೊದಲ ಹಂತದ ನಾಟ್ಯಾಭ್ಯಾಸವನ್ನು ಪೂರೈಸಿದರು. ಮುಂದೆಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತಕಲಾ ಕೇಂದ್ರದಲ್ಲಿ ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ಹೆಚ್ಚಿನ ಅಧ್ಯಯನವನ್ನು ಮಾಡಿರುವರು.

ಕದ್ರಿ ಮೇಳ – 7 ವರ್ಷ, ಸುರತ್ಕಲ್ ಮೇಳ 13 ವರ್ಷ, ಗಣೇಶಪುರ ಮೇಳ 1 ವರ್ಷ, ಕುಂಟಾರು ಮೇಳ — 5 ವರ್ಷ, ಎಡನೀರು ಮೇಳ - 1 ವರ್ಷ ಅನಂತರ ಹೊಸನಗರ ಮೇಳದಲ್ಲಿ 4 ವರ್ಷಗಳ ತಿರುಗಾಟವನ್ನು ಪೂರೈಸಿರುವರು.

ಪುಂಡುವೇಷ, ಸ್ತ್ರೀವೇಷ, ರಾಜವೇಷ, ನಾಟಕೀಯವೇಷ, ಪೋಷಕ ಪಾತ್ರಗಳು ಸರಿದಂತೆ ಎಲ್ಲಾ ರೀತಿಯ ವೇಷಗಳನ್ನು ಮಾಡಲು ಅರ್ಹರಾಗಿರುವ ಇವರು ವಿಷ್ಣು, ಕೃಷ್ಣ, ಈಶ್ವರ, ರಾಮ, ಮಯೂರ ಧ್ವಜ, ಅರ್ಜುನ,

ದೇವೇಂದ್ರ, ಸುಭದ್ರೆ, ಶ್ರೀದೇವಿ, ಚಂದ್ರಮತಿ, ಸುರ್ದಶನ ಕುಶಲವರು, ಚಂಡ-ಮುಂಡರು ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ದಿ| ಬೆಟ್ಟಂಪಾಡಿ ಬಾಳಪ್ಪ ಶೆಟ್ಟರ ದೂರ ಸಂಬಂಧಿಯಾಗಿರುವ ಇವರು ಶ್ರೀಮತಿ ಮೋಹಿನಿ ಶೆಡ್ತಿ ಎಂಬವರನ್ನು ವರಿಸಿ ಧನ್ಯಶ್ರೀ, ರಮ್ಯಶ್ರೀ, ರೂಪಿತ್ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಪುತ್ತೂರಿನಲ್ಲಿ ಅಭಿಮಾನಿಗಳಿಂದ ಸಂಮಾನವಾಗಿದೆ.



## ಜಯರಾಮ ಶೆಟ್ಟಿ ಬೋಳಂತೂರು

ಶ್ರೀದೇವಿ ನಿಲಯ, ಗುಂಡಿ ಮಜಲು,

ಬೋಳಂತೂರು ಅಂಚೆ, ಬಂಟ್ವಾಳ ತಾಲೂಕು

ದ. ಕ. - 574222 (ಮೊಬೈಲ್) 9844142507

ಸ್ತ್ರೀ ವೇಷ, ಪುಂಡುವೇಷ, ರಾಜ ವೇಷ ಮತ್ತು ನಾಟಕೀಯ ವೇಷಗಳನ್ನು ಮಾಡುತ್ತಾ ಬೆಳೆದು ಬಂದಿರುವ ಬೋಳಂತೂರು ಜಯರಾಮ ಶೆಟ್ಟರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 24-10-1982ರಲ್ಲಿ ಶ್ರೀನಿವಾಸ್ ಶೆಟ್ಟಿ ಮತ್ತು ವಾರಿಜ ಶೆಟ್ಟಿ ದಂಪತಿಯ ಸುಪುತ್ರರಾಗಿ ಬಂಟ್ವಾಳ ತಾಲೂಕಿನ ಪೈಲ ಎಂಬಲ್ಲಿ ಹುಟ್ಟಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 15ನೇ ವರ್ಷದಿಂದ ಯಕ್ಷಗಾನದ ಪಾತ್ರ ನಿರ್ವಹಣೆ ಮಾಡಲು ಕಲಿತರು.

ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು ಬಾಲ್ಯದಿಂದಲೇ ಯಕ್ಷಗಾನವನ್ನು ನೋಡುತ್ತಾ ಕಲೆಯ ಬಗ್ಗೆ ಬೆಳೆಯುವ ಆಸೆಯನ್ನು ಕಟ್ಟಿಕೊಂಡಿದ್ದರು. ಹಾಗಾಗಿ ಪ್ರಸಂಗದ ಅನುಭವ,

ವಿಭಿನ್ನ ಪಾತ್ರಗಳನ್ನು ನಿರ್ವಹಿಸುವ ಶೈಲಿ ಮುಂತಾದುವುಗಳನ್ನು ಬೇಗನೆ ಮನದಟ್ಟು ಮಾಡುವ ಪ್ರತಿಭೆ ಇವರಲ್ಲಿ ಮೈಗೂಡಿದೆ.

ಯಕ್ಷಗಾನದ ವೇಷಧಾರಿ ಬೋಳಂತೂರು ವಿಠಲ ಅವರ ಬಾವನಾಗಿರುವ ಜಯರಾಮ ಶೆಟ್ಟರು ಕಟೀಲು ಮೇಳವೊಂದರಲ್ಲಿ 14 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಬ್ರಹ್ಮ, ಚಂಡ ಮುಂಡರು, ವಿಷ್ಣು, ರಾಮ, ಮೋಹಿನಿ, ಮಾಲಿನಿ, ಯಶೋಮತಿ, ನಂದಿನಿ, ಮಧು-ಕೈಟಪ, ದೇವೇಂದ್ರ, ಅರ್ಜುನ ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.



## ಜನಾರ್ದನ ಬಜಾಲ್


“ಗುಡ್ಡೆ ಮನೆ", ಉದ್ಯಾವರ ಗ್ರಾಮ

ಮಂಜೇಶ್ವರ, ಕಾಸರಗೋಡು ತಾಲೂಕು

(ಮೊಬೈಲ್) 09847627664


ಹಾಸ್ಯ ಪಾತ್ರ, ರಾಜ ವೇಷ ಮತ್ತು ಮುಖ್ಯ ಪೋಷಕ ಪಾತ್ರಗಳ ಮುಖೇನ ಕಲಾ ಸೇವೆಯನ್ನು ಮಾಡುತ್ತಾ ಬೆಳೆದು ಬಂದಿರುವ ಶ್ರೀ ಬಜಾಲ್ ಜನಾರ್ದನ ಇವರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ತಿಮ್ಮಪ್ಪ ಕುಲಾಲ್ ಮತ್ತು ಯಮುನಾ ದಂಪತಿಯ ಸುಪುತ್ರರಾಗಿ ಬಜಾಲ್ ಎಂಬಲ್ಲಿ ಹುಟ್ಟಿದ ಜನಾರ್ದನರಿಗೆ ಈಗಾಗಲೇ 60 ವರ್ಷಗಳಾಗಿವೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬೋಳಾರ ನಾರಾಯಣ ಶೆಟ್ಟಿಯವರ ಪ್ರೇರಣೆಯ ಮೇರೆಗೆ ಅವರಿಂದಲೇ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದರು.

18ನೇ ವರ್ಷದಿಂದಲೇ ಮುಖಕ್ಕೆ ಬಣ್ಣ ಹಚ್ಚಲು ಆರಂಭಿಸಿದ ಇವರು ಕರ್ನಾಟಕ ಮೇಳ 8 ವರ್ಷ,- ಕದ್ರಿ ಮೇಳ - 10 ವರ್ಷ, ಬಪ್ಪನಾಡು ಮೇಳ - 2 1 ವರ್ಷ, ವರ್ಷ, ಧರ್ಮಸ್ಥಳ ಮೇಳ ಮಂಗಳಾದೇವಿ ಮೇಳ 1 ವರ್ಷ, ಸುಂಕದಕಟ್ಟೆ ಮೇಳ - 20 ವರ್ಷ ಹೀಗೆ ಒಟ್ಟು 42 ವರ್ಷಗಳ ತಿರುಗಾಟವನ್ನು ಮಾಡಿದ ಅನುಭವವನ್ನು ಹೊಂದಿದ್ದಾರೆ.

ದಾರುಕ, ಬಾಹುಕ, ಮಕರಂದ, ಉಸ್ಮಾನ್, ವಿಜಯ, ದೇವೇಂದ್ರ, ಅರ್ಜುನ, ಪಾಂಡ್ಯರಾಜ, ಬ್ರಹ್ಮ, ಅಕ್ರೂರ, ಧರ್ಮರಾಯ, ಪೆರುಮಳ, ಕಾಂತಣ್ಣ ಅತಿಕಾರಿ ಮೊದಲಾದ ತುಳು ಕನ್ನಡ ಪ್ರಸಂಗಗಳ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಹಿರಿಯ ಯಕ್ಷಗಾನ ಕಲಾವಿದ ಬಾಬು ಕುಡಡ್ಕ ಇವರ ಚಿಕ್ಕ ತಾಯಿಯ ಮಗನಾಗಿರುವ ಜನಾರ್ದನರು ಶ್ರೀಮತಿ ವಸಂತಿ ಎಂಬವರನ್ನು ವರಿಸಿ ರೂಪಾ, ಶರ್ಮಿಳಾ, ರತೀಶ್, ಮಮತಾ, ಶಿವಪ್ರಸಾದ್, ಅನಿತಾ ಎಂಬ ಮಕ್ಕಳನ್ನು ಪಡೆದಿದ್ದಾರೆ. ಮಂಜೇಶ್ವರ, ಮುಳ್ಳೇರಿಯಾ, ಮುಂಬಯಿ ಮುಂತಾದೆಡೆಯಲ್ಲಿ ಇವರಿಗೆ ಸಂಮಾನಗಳು ಸಂದಿವೆ.



## ತಾರಾನಾಥ ವರ್ಕಾಡಿ


ಬೆಳ್ವಣ್ ಅಂಚೆ,

ಕಾರ್ಕಳ ತಾಲೂಕು -575111

(ಮೊಬೈಲ್) 9449714612

ಪ್ರಸಂಗ ರಚನೆ, ವೇಷಗಾರಿಕೆ, ಅರ್ಥಗಾರಿಕೆ, ಮತ್ತು ಬರಹಗಾರಿಕೆಯಲ್ಲಿ ಪ್ರೌಢಿಮೆಯನ್ನು ಸಾಧಿಸಿ ಕಲಾವಿದನೂ, ಸಾಧಕನೂ ಆಗಿರುವ ಶ್ರೀ ತಾರನಾಥ ವರ್ಕಾಡಿಯವರು ಪ್ರಸ್ತುತ ಧರ್ಮಸ್ಥಳ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪಂಡಿತ್ ವರ್ಕಾಡಿ ಅಪ್ಪಯ್ಯ ಬಲ್ಲಾಳ ಹಾಗೂ ಕಮಲಾಕ್ಷಿ ದಂಪತಿಯ ಸುಪುತ್ರರಾಗಿ 1-6- 1963ರಂದು ಕಾಸರಗೋಡು ಜಿಲ್ಲೆಯ ವರ್ಕಾಡಿಯಲ್ಲಿ ಜನಿಸಿದರು. ಯಕ್ಷಗಾನದತ್ತ ಬಾಲ್ಯದಲ್ಲೇ ಆಕರ್ಷಿತರಾಗಿ ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು. ಮುಂದೆ ದೇರಾಜೆ ಸೀತಾರಾಮಯ್ಯ ಅವರಿಂದ ಸಾಹಿತ್ಯ ಸಾಧನೆಯ ಪ್ರಭಾವಕ್ಕೆ ಒಳಗಾದ ಇವರು ಡಾ| ಎನ್. ನಾರಾಯಣ ಶೆಟ್ಟಿಯವರಲ್ಲಿ ಪ್ರಸಂಗ ರಚನೆಯ ಅಧ್ಯಯನ, ಕೊರ್ಗಿ ವೆಂಕಟೇಶ ಉಪಾಧ್ಯಾಯರಲ್ಲಿ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಿರುವರು.

ಕಲಾವಿದರಾದ ಮೇಲೆ ಸ್ವಂತ ಪರಿಶ್ರಮದಿಂದಲೇ ಕನ್ನಡ ಎಂ. ಎ. ಪದವಿಯನ್ನು ಪಡೆದಿರುವ ಇವರು17ನೇ ವಯಸ್ಸಿನಿಂದಲೇ ರಂಗ ಪ್ರವೇಶ ಮಾಡಿದ್ದಾರೆ. ಸುಂಕದಕಟ್ಟೆ ಮೇಳ - 2 ವರ್ಷ, ಕದ್ರಿ ಮೇಳ - 1 ವರ್ಷ, ನಂದಾವರ ಮೇಳ ವರ್ಷ, ಅರುವ ಮೇಳ 1 ವರ್ಷ, ಬಪ್ಪನಾಡು ಮೇಳ 2 ವರ್ಷ, ಧರ್ಮಸ್ಥಳ ಮೇಳ ವರ್ಷ ಹೀಗೆ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ಸೌಮ್ಯ ಸ್ವಭಾವಕ್ಕೊಳಗಾಗುವ ವೇಷಗಳ ಚಿತ್ರಣವನ್ನು ಚೆನ್ನಾಗಿ ಮಾಡಬಲ್ಲ ಇವರು ಕೃಷ್ಣ, ವಿಷ್ಣು, ರಾಮ, ಲಕ್ಷ್ಮಣ, ಹರಿಶ್ಚಂದ್ರ, ಭ್ರಮರ ಕುಂತಳೆ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತಾಳಮದ್ದಳೆಯಲ್ಲೂ ಅರ್ಥ ವಾದಿಯಾಗಿ ಪಾತ್ರ ನಿರ್ವಹಣೆ ಮಾಡುವ ಇವರು ಪಾಡ್ದನ ಮತ್ತು ಪೌರಾಣಿಕ ಕಥೆಗಳಿಗೆ ಸಂಬಂಧಿಸಿದ ಹಲವು ಪ್ರಸಂಗಗಳನ್ನು ರಚಿಸಿದ್ದಾರೆ. ಧರ್ಮಸ್ಥಳದ ಲಲಿತಾ ಕಲಾ ಕೇಂದ್ರದಲ್ಲಿ ನಾಲ್ಕು ವರ್ಷಗಳ ತನಕ ನಾಟ್ಯ ಗುರುವಾಗಿ ಕಾರ್ಯ ನಿರ್ವಹಿಸಿದ್ದಾರೆ.

ಬ್ರಹ್ಮ ಬೈದೆರ್, ಅಗೋಳಿ ಮಂಜಣೆ, ವಿಶ್ವ ಕರ್ಮ ಮಹಾತ್ಮ, ಒಡಿಯೂರು ಕ್ಷೇತ್ರ ಮಹಾತ್ಮ ಮುಂತಾದ ಪ್ರಸಂಗಗಳು ಇವರಿಂದ ರಚಿಸಲ್ಪಟ್ಟಿವೆ. ಪುರಾಣದ ಬಾಲಕರು, ಒಂದೊಂದು ನದಿಗೂ ಒಂದೊಂದು ಕಥೆಗಳು ಇವರ ಧಾರಾವಾಯಿ ಲೇಖನಗಳಾಗಿದ್ದು, ಉದಯವಾಣಿ ದಿನ ಪತ್ರಿಕೆಯ ಮನ್ನಣೆಗೊಳಗಾಗಿದೆ. ಪುರಾಣದ ಬಾಲಕರು ಕೃತಿರೂಪದಲ್ಲಿ ಪ್ರಕಟವಾಗಿದೆ. ಡಾ. ನಾರಾಯಣ ಶೆಟ್ಟಿಯವರ ಜೀವನ ಸಾಧನೆಗೆ ಸಂಬಂಧ ಪಟ್ಟು ಅಭಿನವ ನಾಗವರ್ಮ ಎಂಬ ಕೃತಿಯನ್ನು ರಚಿಸಿದ್ದಾರೆ. ಇಷ್ಟಲ್ಲದೆ ಇವರ ಕೆಲವು ಪ್ರಸಂಗಗಳು ಕೂಡಾ ಪ್ರಕಟವಾಗಿವೆ. ಶ್ರಮವಂತರಾದ ಇವರ ಸಾಧನೆಗೆ ಪ್ರತಿಫಲವಾಗಿ ಹಲವೆಡೆಯಲ್ಲಿ ಸಂಮಾನ - ಪುರಸ್ಕಾರಗಳು ಸಂದಿವೆ.

ವೈದ್ಯರಾಗಿರುವ ಡಾ| ಪ್ರೇಮಲತಾ (ಬಿ. ಎಸ್. ಸಿ., ಬಿ. ಎ., ಎಂ. ಎಸ್. ಸಿ.) ಎಂಬವರನ್ನು ವರಿಸಿ ಆಜ್ಞಾ ಸೋಹಂ ಎಂಬ ಸುಪುತ್ರಿಯನ್ನು ಪಡೆದಿದ್ದಾರೆ.



**ತಿಮ್ಮಪ್ಪ ಮಿಜಾರು**

ಶ್ರೀ ತುಳಸೀ ನಿವಾಸ
ಬಡಗ ಎಡಪದವು ಗ್ರಾಮ ಮತ್ತು ಅಂಚೆ
ಮಂಗಳೂರು ತಾಲೂಕು ದ. ಕ. 574267
ಮೊಬೈಲ್: 9902461207


ಹಾಸ್ಯ ಪಾತ್ರಗಳ ಮುಖೇನ ಪ್ರಭಾವಿತರಾಗಿ ಪ್ರಸಿದ್ಧಿಗೆ ಬಂದಿರುವ ಶ್ರೀ ಮಿಜಾರು ತಿಮ್ಮಪ್ಪರು ಪ್ರಸ್ತುತ ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಹೊನ್ನಯ್ಯ ಶೆಟ್ಟಿಗಾರ್ ಮತ್ತು ಸೀತಮ್ಮ ದಂಪತಿಯ ಸುಪುತ್ರರಾಗಿ ಮಿಜಾರಿನಲ್ಲಿ ಹುಟ್ಟಿದ ತಿಮ್ಮಪ್ಪರವರಿಗೆ 45 ವರ್ಷಗಳಾಗಿವೆ. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಮಾವನಾದ ಶ್ರೀ ಹರೀಶ ಶೆಟ್ಟಿ ಮುಳ್ಪೂರು ಇವರ ಪ್ರೇರಣೆಯ ಮೇರೆಗೆ ಇವರಲ್ಲೇ ನಾಟ್ಯಾಭ್ಯಾಸವನ್ನು ಮಾಡಿ ರಂಗ ಪ್ರವೇಶ ಮಾಡಿದರು. ಮುಂದೆ ಕರ್ನಾಟಕ ಮೇಳದಲ್ಲಿ ಮಿಜಾರು ಅಣ್ಣಪ್ಪರವರ ಜೊತೆಗೆ ತಿರುಗಾಟವನ್ನು ನಡೆಸಿದ್ದರಿಂದ ಅವರ ಅನುಭವವನ್ನು ಸಂಪಾದಿಸಿ ಹೆಚ್ಚಿನ ಪ್ರೌಢಿಮೆಯನ್ನು ಸಾಧಿಸಿದರು.

18ನೇ ವರ್ಷದಿಂದಲೇ ಯಕ್ಷಗಾನ ಕಲಾಸೇವೆಯನ್ನು ಆರಂಭಿಸಿದ ಇವರು ಪುತ್ತೂರು ಮೇಳ - 3 ವರ್ಷ, ಅರುವ ಮೇಳ 2 ವರ್ಷ,ಬಪ್ಪನಾಡು ಮೇಳ - 2 ವರ್ಷ, ಕರ್ನಾಟಕ ಮೇಳ-15 ವರ್ಷ, ಕುಂಟಾರು ಮೇಳ 2 ವರ್ಷ, ಎಡನೀರು ಮೇಳ - 2 ವರ್ಷ, ಕಟೀಲು ಮೇಳ - 2 ವರ್ಷ ಹಾಗೂ ಸುಂಕದಕಟ್ಟೆ ಮೇಳ - 2 ವರ್ಷ ಹೀಗೆ ತುಳು-ಪೌರಾಣಿಕ ಪ್ರಸಂಗಗಳನ್ನು ಪ್ರದರ್ಶಿಸುವ ಮೇಳಗಳಲ್ಲಿ ತಿರುಗಾಟವನ್ನು ನಡೆಸಿರುವರು.

ದಾರುಕ, ವಿಜಯ, ಉಸ್ಮಾನ್, ಪಯ್ಯಬೈದ, ನಾರದ, ಈಶ್ವರ, ಬ್ರಹ್ಮ, ಲಿಂಗಪ್ಪ ಆಚಾರಿ ಮುಂತಾದ ಹಾಸ್ಯ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

ಶ್ರೀಮತಿ ಜಯಶ್ರೀ ಎಂಬವರನ್ನು ವರಿಸಿರುವ ಇವರ ಕಲಾ ಸಾಧನೆಗೆ ಫಲಶ್ರುತಿಯಾಗಿ ಮಿಜಾರು ಸರಪಾಡಿ ಮುಂತಾದೆಡೆಯಲ್ಲಿ ಹತ್ತು ಹಲವು ಸಂಮಾನಗಳು ಸಂದಿವೆ.



# ದಯಾನಂದ ಶೆಟ್ಟಿ ಜಪ್ಪು

ಜಪ್ಪಿನಮೊಗರು,

ಮಾಣಿಹಿತ್ತು, ಮಂಗಳೂರು

(ಮನೆ ದೂರವಾಣಿ) 0824-2241356

ತನ್ನದೇ ಆದ ಪಾತ್ರ ಚಿತ್ರಣ ಮತ್ತು ಪಾತ್ರಕ್ಕೊಪ್ಪುವ ಶೈಲಿಯಿಂದ ಶೈಲಿಯಿಂದ ನಟಿಸಿ ಜನಮನ್ನಣೆಯನ್ನು ಪಡೆದು ಕೀರ್ತಿಸಂಪನ್ನರಾಗಿರುವ ಶ್ರೀ ಜಪ್ಪು ದಯಾನಂದ ಶೆಟ್ಟರು ಪ್ರಸ್ತುತ ಶ್ರೀ ಭಗವತಿ ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದೇವಪ್ಪ ಶೆಟ್ಟಿ ಮತ್ತು ಲಕ್ಷ್ಮೀ ಶೆಡ್ತಿ ದಂಪತಿಯ ಸುಪುತ್ರರಾಗಿ 1950ರ ವರ್ಷ ಬೆಳ್ತಂಗಡಿಯ ಸವಣಾಲು ಎಂಬಲ್ಲಿ ಹುಟ್ಟಿದರು. ಶೈಕ್ಷಣಿಕವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಕಲೆಯ ಪ್ರಭಾವಕ್ಕೆ ಒಳಗಾಗಿ ಕೆ.ಗೋವಿಂದ. ಭಟ್ಟರಲ್ಲಿ ನಾಟ್ಯಾಭ್ಯಾಸವನ್ನು ಮಾಡಿಕೊಂಡರು.

12ನೇ ವಯಸ್ಸಿನಿಂದಲೇ ಯಕ್ಷಗಾನದ ಪಾತ್ರನಿರ್ವಹಣೆ ಮಾಡುತ್ತಾ ಬೆಳೆದು ಬಂದರು. ವೇಣೂರು ದೇಲಂಪುರಿ ಮೇಳ 2 ವರ್ಷ, ಕುಂಡಾವು ಮೇಳ - 2 ವರ್ಷ, ಕರ್ನಾಟಕ ಮೇಳ-36 ವರ್ಷ ಹಾಗೂ ಭಗವತಿ ಮೇಳ-ವರ್ಷ ಒಟ್ಟು 47 ವರ್ಷಗಳ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ಪುಂಡು, ರಾಜ, ಬಣ್ಣ, ಸ್ತ್ರೀ, ಹಾಸ್ಯ ಹೀಗೆ ಯಕ್ಷಗಾನದ ಎಲ್ಲಾ ವಿಧದ ಪಾತ್ರಗಳನ್ನು ನಿರ್ವಹಿಸಿ ಯಶೋವಂತರಾಗಿರುವ ಶ್ರೀ ಜಪ್ಪು ದಯಾನಂದ ಶೆಟ್ಟರಿಗೆ ಕರ್ನಾಟಕ ಮೇಳದ ದೀರ್ಘ ತಿರುಗಾಟವೇ ಜನಮನ್ನಣೆ ಮತ್ತು ಪ್ರಸಿದ್ಧಿಗೆ ಕಾರಣವಾಗಿತ್ತು. ಕೋಟಿ ಚೆನ್ನಯದ ಚೆನ್ನಯ ಪಾತ್ರ ಸದಾ ಸ್ಮರಣೀಯ. ಅತಿಕಾರಿ, ದೇವುಪೂಂಜ, ಕಾಂತಬಾರೆ, ಬೂದಬಾರೆ ಇತ್ಯಾದಿ ಪಾತ್ರಗಳನ್ನು ಕೂಡಾ ಉಲ್ಲೇಖಿಸಬಹುದು.

ಶ್ರೀಮತಿ ಲೀಲಾ ಶೆಟ್ಟಿ ಎಂಬವರನ್ನು ವರಿಸಿ ಶರ್ಮಿಳಾ, ಕುಶಲಾ, ಆಶಾ, ಸಂತೋಷ್ ಸಂದೀಪ್ ಎಂಬ ಐವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫ ಲವಾಗಿ ಮುಂಬಯಿ, ಜಪ್ಪಿನ ಮೊಗರು, ಕಾವೂರು ಮುಂತಾದ ಹಲವೆಡೆಯಲ್ಲಿ ಅಭಿಮಾನಿಗಳಿಂದ ಸಂಮಾನಗಳು ಸಂದಿವೆ.



## ದಾಸಪ್ಪ ರೈ ಕೆ. ಎಚ್.

'ಯಕ್ಷದಾ" ನಿಲಯ, ಬಪ್ಪಳಿಗೆ ಪುತ್ತೂರು

ಮೊಬೈಲ್: 9480016865

ತುಳು ಭಾಷಾ ಪ್ರಸಂಗದ ಕಥಾ ನಾಯಕ ಪಾತ್ರಗಳಿಗೆ ತನ್ನದೇ ಆದ ಶೈಲಿಯಿಂದ ಜೀವಕಳೆಯನ್ನು ಭರಿಸಿ ಜನ ಮನ್ನಣೆಯನ್ನು ಪಡೆದು ಕೀರ್ತಿವಂತರಾದ ಶ್ರೀ ಕೆ. ಎಚ್. ದಾಸಪ್ಪ ರೈಯವರು ಪ್ರಸ್ತುತ ಮೇಳದ ನಿವೃತ್ತ ಕಲಾವಿದರಾಗಿದ್ದು ಕಲಾಭಿಮಾನಿಗಳ ಹೇಳಿಕೆಯ ಮೇರೆಗೆ ಕಾರಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

10-5-1950ರಲ್ಲಿ ಬೈಂಕಿ ರೈ ಮತ್ತು ಕುಂಞಕ್ಕೆ ದಂಪತಿಯ ಸುಪುತ್ರರಾಗಿ ಈಶ್ವರ ಮಂಗಳದ ಕುತ್ಯಾಳ ಹೊಸಮನೆಯಲ್ಲಿ ಇವರು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದ ಇವರು 16ನೇ ವಯಸ್ಸಿನಿಂದ ಯಕ್ಷಗಾನದ ಕ್ಷೇತ್ರವನ್ನು ಪ್ರವೇಶಿಸಿ ಕಲಾ ಸೇವೆಯನ್ನು ಆರಂಭಿಸಿದ್ದಾರೆ.

ಕೆ. ಎಸ್. ಬಾಬು ರೈ ಎಂಬವರ ಪ್ರೇರಣೆಯ ಮೇರೆಗೆ ಅವರಲ್ಲೇ ನಾಟ್ಯಾಭ್ಯಾಸವನ್ನು ಮಾಡಿದ ದಾಸಪ್ಪ ರೈ ಯವರು ಕರ್ನಾಟಕ ಮೇಳ 18 ವರ್ಷ, ಕದ್ರಿ ಮೇಳ – 8 ವರ್ಷ, ಕಣಿಪುರ ಕುಂಬ್ಳೆ (ಸ್ವಂತ ಮೇಳ) ಮೇಳ - 6 ವರ್ಷ, ಮಂಗಳಾದೇವಿ ಮೇಳ - 10 ವರ್ಷ ಹೀಗೆ 2008ರ ತನಕ ಮೇಳದ ತಿರುಗಾಟವನ್ನು ನಡೆಸಿದವರು ಅನಂತರ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಮೇಳದಲ್ಲಿ ಮ್ಯಾನೇಜರ್ ಆಗಿ, ಯಜಮಾನರಾಗಿ ಕಾರ‍್ಯಕ್ರಮದ ಸಂಘಟಕರಾಗಿ ವಿವಿಧ ಮುಖಗಳಿಂದ ಅನುಭವವನ್ನು ಸಂಪಾದಿಸಿರುವ ಇವರು ಬಣ್ಣ, ರಾಜ ಮತ್ತು ನಾಟಕೀಯ ವೇಷಗಳನ್ನು ಮಾಡಿದವರಾಗಿದ್ದಾರೆ.

ಕೋಟಿ, ದೇವುಪೂಂಜ, ಕಾಂತಾಬಾರೆ, ಮಹಿಷಾಸುರ, ಭೀಮ, ರಾವಣ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಇವರ ಕೋಟಿ ಪಾತ್ರವು ಪ್ರೇಕ್ಷಕರ ಪ್ರಭಾವಕ್ಕೊಳಗಾದ ಪಾತ್ರವಾಗಿದೆ. ಆ ಪಾತ್ರದ ಕೊನೆಯ ಹಂತದ ಮಾತುಗಳು ವಿಷಾದ ಪೂರ್ಣವಾಗಿವೆ.

ಶ್ರೀಮತಿ ಚಿತ್ರಾವತಿ ಎಂಬವರನ್ನು ವರಿಸಿರುವ ಇವರು ದಿ| ಸಂಧ್ಯಾ (ದೈಹಿಕ ಶಿಕ್ಷಕಿ) ಮತ್ತು ದೇವಿ ಪ್ರಸಾದ್ ರೈ (ಉದಯ ಟಿ. ವಿ. ರಿಪೋರ್ಟರ್) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೆಹಲಿ ತುಳುನಾಡ ಪ್ರಶಸ್ತಿ ಮುಂತಾದ 50ಕ್ಕೂ ಮಿಕ್ಕಿದ ಗೌರವ ಸಂಮಾನಗಳು ದೊರೆತಿವೆ. ಚೆನ್ನೈ, ಬೆಂಗಳೂರು, ಕಥರ್, ಮುಂಬಯಿ, ಬೆಹರನ್, ಇಲೆಲ್ಲಾ ಅಭಿಮಾನಿಗಳಿಂದ ಸಂಮಾನಿಸಲ್ಪಟ್ಟಿದ್ದಾರೆ.



## ದಿನೇಶ ಅಮ್ಮಣ್ಣಾಯ

ಹೊಸ್ತೋಟ ಮನೆ, ಹತ್ಯಡ್ಕ ಗ್ರಾಮ,

ಅರಸಿನಮಕ್ಕಿ ಅಂಚೆ, ಬೆಳ್ತಂಗಡಿ ತಾಲೂಕು.

ಮನೆ ದೂರವಾಣಿ-08256-318106

ಮೊಬೈಲ್-9448869198

ಸಂಗೀತಮಯವಾದ ಭಾಗವತಿಕೆಯ ಮುಖೇನ ರಸಿಕರ ಮನವನ್ನು ಮೆಚ್ಚಿಸಿ ಕೀರ್ತಿಸಂಪನ್ನರಾಗಿರುವ ಶ್ರೀ ದಿನೇಶ ಅಮ್ಮಣ್ಣಾಯರು ಪ್ರಸ್ತುತ ಶ್ರೀ ಎಡನೀರು ಯಕ್ಷಗಾನ ಮಂಡಳಿಯ ಕಲಾವಿದರಾಗಿ ತಿರುಗಾಟವನ್ನು ಮಾಡುತಿದ್ದಾರೆ.

7-11-1959ರಲ್ಲಿ ನಾರಾಯಣ ಅಮ್ಮಣ್ಣಾಯ ಮತ್ತು ಕಾವೇರಿಅಮ್ಮ ದಂಪತಿಯ ಸುಪುತ್ರರಾಗಿ ಇವರು ಜನಿಸಿದರು. ಹತ್ತನೆಯ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ವಿದ್ವತ್ತಿನ ಮನೆತನದಲ್ಲೇ ಹುಟ್ಟಿದವರಾಗಿದ್ದಾರೆ. ಇವರ ತಂದೆ ಮೃದಂಗ ವಾದಕರು, ಚಿಕ್ಕಪ್ಪ ಅರ್ಥಧಾರಿ ಮತ್ತು ಭಾಗವತರು. ಹಿರಿಯ ಸಹೋದರಿ ರಾಜೀವಿ ಎಂಬವರು ಸಂಗೀತಗಾರರಾಗಿದ್ದಾರೆ. ಹಾಗಾಗಿ ಇವರಲ್ಲೂ ಕಲಾಪ್ರತಿಭೆ ಚಿಗುರಿತು.

ದಾಮೋದರ ಮಂಡೆಚ್ಚರಿಂದ ಭಾಗವತಿಕೆಯ ಅಭ್ಯಾಸ, ಹರಿನಾರಾಯಣ ಬೈಪಾಡಿತ್ತಾಯರಿಂದ ಮೃದಂಗದ ಅಭ್ಯಾಸ ಮಾಡಿರುವ ಇವರು ಸಹೋದರಿಯಿಂದ ಸಂಗೀತದ ಅಭ್ಯಾಸವನ್ನು ಮಾಡಿದ್ದಾರೆ. ಚಿಕ್ಕಪ್ಪ ವಿಷ್ಣು ಅಮ್ಮಣ್ಣರ ಪ್ರೋತ್ಸಾಹ ದೊಂದಿಗೆ ಉತ್ತೇಜಿತರಾದ ಅಮ್ಮಣ್ಣಾಯರು ಯಕ್ಷಗಾನದ ಕಲಾಸಾಧನೆಯಲ್ಲಿ ಪ್ರೌಢಿಮೆಯನ್ನು ಸಾಧಿಸಿ, ಬೆಳೆಯುತ್ತಾ ಬಂದರು.

ಪುತ್ತೂರು ಮೇಳ-ವರ್ಷ, ಕರ್ನಾಟಕ ಮೇಳ- 21 ವರ್ಷ, ಕದ್ರಿ ಮೇಳ-2ವರ್ಷ, ಕುಂಟರು ಮೇಳ- 2ವರ್ಷ, ಎಡನೀರು ಮೇಳ-5ವರ್ಷ ಹೀಗೆ ಮೇಳ ತಿರುಗಟದ ಹಿನ್ನೆಲೆ ಇದೆ. ಕರ್ನಾಟಕ ಮೇಳದಿಂದ ವರ್ಚಸ್ಸನ್ನು ಮೆರೆಸುತ್ತಾ ಬಂದ ಅಮ್ಮಣ್ಣಾಯರು ಈವರೆಗೂ ತಮ್ಮ ವರ್ಚಸ್ಸನ್ನು ಉಳಿಸಿ ಬೇಡಿಕೆಯ ಕಲಾವಿದರಾಗಿದ್ದಾರೆ.

ತುಳು ಮತ್ತು ಕನ್ನಡ ಪ್ರಸಂಗಗಳನ್ನು ಸಮರ್ಥವಾಗಿ ಆಡಿಸಬಲ್ಲ ಇವರು ರಾಗ ಸಂಯೋಜನೆಯಲ್ಲಿ ಪಳಗಿದವರಾಗಿದ್ದಾರೆ. ಕಂಠ ಮಾಧುರದಿಂದ ಪ್ರೇಕ್ಷಕರ ಮನವನ್ನು ತಣಿಸುವಪ್ರೌಢಭಾಗವತರು ಅಮ್ಮಣ್ಣಾಯರಾಗಿದ್ದಾರೆ.ಕೃಷಿಕರಾಗಿರುವ ಇವರು ಶ್ರೀಮತಿ ಸುಧಾ ಎಂಬವರನ್ನು ವರಿಸಿ ಅಕ್ಷತಾ ಮತ್ತು ಅಮಿತಾ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಭಾಗವತಿಕೆಯ ಇವರ ಕಲಾಸಾಧನೆಗೆ ಪ್ರತಿಫಲವಾಗಿ 40 ಕ್ಕೂ ಮಿಕ್ಕಿ ಸಂಮ್ಮಾನಗಳು ಸಂದಿವೆ. ಮುಂಬಯಿ, ಬೆಂಗಳೂರು, ಮಂಗಳೂರು ಸೇರಿದಂತೆ ಎಡನೀರು, ಉಡುಪಿ ಮೊದಲಾದೆಡೆಯಲ್ಲಿ ಅಭಿಮಾನಿಗಳಿಂದ ಗೌರವ ಪುರಸ್ಕಾರಕ್ಕೆ ಒಳಗಾಗಿದ್ದಾರೆ.

ಯಕ್ಷರಸರಾಗ ಚಕ್ರವರ್ತಿ, ಗಾನಕೊಗಿಲೆ, ಯಕ್ಷಕೋಗಿಲೆ, ಮಧುರಗಾನದ ಐಸಿರಿ, ಯಕ್ಷ ಸಂಗೀತ ಕಲಾ ಕೌಸ್ತುಬ ಮುಂತಾದ ಬಿರುದುಗಳಿಂದಜನಮನ್ನಣೆಗೆ ಒಳಗಾಗಿರುವ ದಿನೇಶ ಅಮ್ಮಣ್ಣಾಯರ ಸಾಧನೆ ಔಚಿತ್ಯಪೂರ್ಣವಾಗಿದೆ.



## ದಿನೇಶ ಶೆಟ್ಟಿ ಕಾವಳಕಟ್ಟೆ

ಮರಮ್ಮ ಮನೆ, ಕಾವಳ ಮೂಡೂರು ಗ್ರಾಮ

ಕಾವಳ ಕಟ್ಟೆ ಅಂಚೆ, ಬಂಟ್ವಾಳ ತಾಲೂಕು

ಪುಂಡು ವೇಷ, ರಾಜ ವೇಷಗಳನ್ನು ಮಾಡುತ್ತಾ ಉತ್ತಮವಾದ ಮಾತಿನ ಮುಖೇನ ಆಟ- ಕೂಟಗಳ ಪಾತ್ರಧಾರಿಯಾಗಿ ಬೆಳೆಯುತ್ತಿರುವ ದಿನೇಶ್ ಶೆಟ್ಟಿ ಕಾವಲಕಟ್ಟೆಯವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಹಾಬಲ ಶೆಟ್ಟಿ ಮತ್ತು ಸುಂದರಿ ಶೆಡ್ತಿ ದಂಪತಿಯ ಸುಪುತ್ರರಾಗಿ 2/0/1977ರಂದು ಕಾವಲಕಟ್ಟೆಯಲ್ಲಿ ಜನಿಸಿದರು. ಪ್ರಥಮ ಪದವಿ ಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪ್ರದರ್ಶನಗಳನ್ನು ಕಂಡು ತಾನೂ ಕೂಡಾ ಅಂತಹ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು ಎಂಬ ಉದ್ದೇಶದಿಂದ ಕಲಾಭ್ಯಾಸವನ್ನು ಮಾಡಿದ್ದಾರೆ.

ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಇವರು ಕಟೀಲು ಮೇಳವೊಂದರಲ್ಲೇ 14 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಪುಂಡು ವೇಷ, ರಾಜ ವೇಷ ಮತ್ತು ಇತರ ಮುಖ್ಯ ಪಾತ್ರಗಳನ್ನು ಮಾಡುವ ಇವರು ಸುಧನ್ವ, ವಿಷ್ಣು, ಬ್ರಹ್ಮ, ತರಣಿ ಸೇನ, ಸುಗ್ರೀವ, ಪರಶುರಾಮ, ಜಾಬಾಲಿ, ಈಶ್ವರ, ಕೃಷ್ಣ, ಜಮದಗ್ನಿ, ಅರ್ಜುನ, ದೇವೇಂದ್ರ ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

19ನೇ ವಯಸ್ಸಿನಿಂದಲೇ ಕಲಾಸೇವೆಯನ್ನು ಮಾಡುತ್ತಾ ಬಂದಿರುವ ಇವರು ತಾಳಮದ್ದಳೆಯಲ್ಲೂ ತಮ್ಮ ಪ್ರತಿಭೆಯನ್ನು ತೋರುತ್ತಾ ಕೀರ್ತಿವಂತರಾಗಿದ್ದಾರೆ. ಹವ್ಯಾಸಿ ಕಲಾವಿದರಿಗೆ ನಾಟ್ಯ ತರಬೇತಿ ಮತ್ತು ಪ್ರದರ್ಶನಕ್ಕೆ ಮಾರ್ಗದರ್ಶನವನ್ನು ನೀಡುತ್ತಾ ಇರುವ ದಿನೇಶ ಶೆಟ್ಟರು ಶ್ರೀಮತಿ ನಿರ್ಮಲ ಶೆಡ್ತಿ ಎಂಬವರನ್ನು ವರಿಸಿ ನಿಧಿಶಾ ಮತ್ತು ಸಮೀಕ್ಷಾ ಎಂಬ ಇಬ್ಬರು ಪುತ್ರಿಯರನ್ನು ಪಡೆದಿದ್ದಾರೆ.

ಕೃಷಿಯ ಕಾರದೊಂದಿಗೆ ಕಲಾಸಾಧಕರಾಗಿರುವ ಇವರಿಗೆ ರಾಯಿ, ಕೈಲ ಕುಂಜತ್ತ ಬೈಲು, ಬಂಟ್ವಾಳ ಮೊದಲಾದ ಕಡೆಗಳಲ್ಲಿ ಗೌರವ ಪುರಸ್ಕಾರಗಳು ಸಲ್ಲಲ್ಪಟ್ಟಿವೆ.



## ದಿನಕರ ಆರ್. ಗೋಖಲೆ

ದರ್ಭೆತಡ್ಕ ಗ್ರಾಮ, ಅರಸಿನ ಮಕ್ಕಿ ಅಂಚೆ

ಬೆಳ್ತಂಗಡಿ ತಾಲೂಕು 574198

(ಮೊಬೈಲ್) 9449714914

ರಾಜವೇಷ ಮತ್ತು ಮುಖ್ಯ ಪೋಷಕ ಪಾತ್ರಗಳನ್ನು ನಿರ್ವಹಿಸುತ್ತಿರುವ ಶ್ರೀ ದಿನಕರ ಆರ್. ಗೋಖಲೆಯವರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ರಂಗನಾಥ ಗೋಖಲೆ ಮತ್ತು ಕಾಮಾಕ್ಷಿ ಯಾನೆ ಪಾರ್ವತಿ ದಂಪತಿಯ ಸುಪುತ್ರರಾಗಿ 22-12- 1957ರಂದು ಹತ್ಯಡ್ಕ ಗ್ರಾಮದಲ್ಲಿ ಹುಟ್ಟಿದರು. ಬಾಲ್ಯದಲ್ಲೇ ಯಕ್ಷಗಾನ ಕಲೆಯ ಬಗ್ಗೆ ಆಸಕ್ತಿಯನ್ನು ಹೊಂದಿದ ಇವರು ಹವ್ಯಾಸಿ ವೇಷಧಾರಿ ಮತ್ತು ಅರ್ಥಧಾರಿಯಾಗಿ ಕಲಾಸೇವೆ ಮಾಡುತ್ತಾ ಬಂದಿದ್ದರು. ಬಿ.ಕಾಂ ಪದವೀಧರರಾಗಿ ಉದ್ಯೋಗ ನಿರತರಾಗಿದ್ದವರು ಅನಿವಾರ ಕಾರಣದಿಂದ ಮೇಳ ತಿರುಗಾಟವನ್ನು ನಡೆಸಿದ್ದಾರೆ.

ದೇವೇಂದ್ರ, ಅರ್ಜುನ, ವಾಲ್ಮೀಕಿ, ವಸಿಷ್ಠ, ಧರ್ಮರಾಯ, ಸಂಜಯ ಮುಂತಾದ ಪಾತ್ರಗಳನ್ನು ನಿರ್ವಹಿಸುವ ಇವರು ಸೌಮ್ಯ ಸ್ವಭಾವದ ಪಾತ್ರಗಳನ್ನು ಚಿತ್ರಿಸ ಬಲ್ಲವರಾಗಿದ್ದಾರೆ.

ಶ್ರೀಮತಿ ಪ್ರಶಾಂತಿ ಗೋಖಲೆ ಇವರ ಧರ್ಮಪತ್ನಿಯಾಗಿದ್ದು, ಪ್ರಕೃತಿ ಗೋಖಲೆ (ಬೆಂಗಳೂರು ಉದ್ಯೋಗಿ), ಪೃಥ್ವಿ ಗೋಖಲೆ ( ಬಿ. ಬಿ. ಎಂ.), ಪರ್ಣಶ ( ಬಿ. ಸಿ. ಎ.), ಪರ್ಜನ್ಯ (8ನೇ ತರಗತಿ) ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರ ಕಲಾ ಸೇವೆಗೆ ಗೌರವ ಪುರಸ್ಕಾರವಾಗಿ ಅರಸಿನ ಮಕ್ಕಿಯ ಅಭಿಮಾನಿ ಬಳಗದಿಂದ ಸಂಮಾನವಾಗಿದೆ.



# ದಿವಾಕರ ರೈ ಸಂಪಾಜೆ

ಕಲ್ಲುಗುಂಡಿ, ಸಂಪಾಜೆ ಗ್ರಾಮ

ಸುಳ್ಯ ತಾಲೂಕು 574234

(ಮೊಬೈಲ್) 9481379866


ಪುಂಡು ವೇಷದ ತೀವ್ರ ಗತಿಯ ನಾಟ್ಯ ಪ್ರದರ್ಶನವನ್ನು ತೋರುತ್ತಾ ದಿಗಿಣ ವೀರನಾಗಿ ಜನಮನ್ನಣೆಗೆ ಪಾತ್ರರಾಗಿರುವ ಶ್ರೀ ದಿವಾಕರ ರೈ ಸಂಪಾಜೆಯವರು ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೆ. ವಾಸು ರೈ ಮತ್ತು ಇಂದಿರಾವತಿ ದಂಪತಿಯ ಸುಪುತ್ರರಾಗಿ 15-4-1977ರಂದು ಕಲ್ಲುಗುಂಡಿಯಲ್ಲಿ ಜನಿಸಿದರು. 7ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಲ್ಲೇ ಯಕ್ಷಗಾನ ಕಲೆಗೆ ಆಕರ್ಷಿತರಾಗಿದ್ದರು. ಅರಸಿನ ಮಕ್ಕಿಯ ಪರಮೇಶ್ವರ ಆಚಾರ್ಯ ಅವರಲ್ಲಿ ಮೊದಲ ಹಂತದ ನಾಟ್ಯಾಭ್ಯಾಸವನ್ನು ಮಾಡಿ, ಆ ಮೇಲೆ ಧರ್ಮಸ್ಥಳ ಶ್ರೀ ಕ್ಷೇತ್ರದ ಲಲಿತ ಕಲಾಕೇಂದ್ರವನ್ನು ಸೇರಿದರು. ಕೋಳ್ಯೂರು ರಾಮ ಚಂದ್ರ ರಾವ್ ಅವರಿಂದ ಹೆಚ್ಚಿನ ನಾಟ್ಯಾಭ್ಯಾಸ ಹಾಗೂ ರಂಗದ ಅನುಭವವನ್ನು ಸಂಪಾದಿಸಿ ತಿರುಗಾಟವನ್ನು ಆರಂಭಿಸಿದರು.

13ನೇ ವಯಸ್ಸಿನಿಂದ ರಂಗಪ್ರವೇಶ ಮಾಡಿದ ದಿವಾಕರ ರೈಯವರು ಧರ್ಮಸ್ಥಳ ಮೇಳ - 12 ವರ್ಷ, ಕುಂಟಾರು ಮೇಳ 2 ವರ್ಷ, ಎಡನೀರು ಮೇಳ 2 ವರ್ಷ ಹಾಗೂ ಹೊಸನಗರ ಮೇಳ-4 ವರ್ಷ ಹೀಗೆ ಒಟ್ಟು 20 ವರ್ಷಗಳ ಮೇಳ ತಿರುಗಾಟವನ್ನು ಪೂರೈಸಿದ್ದಾರೆ.

ಹೊಸನಗರ ಮೇಳವನ್ನು ಸೇರಿದ ಮೇಲೆ ಹೆಚ್ಚು ವಿಜೃಂಭಿಸಿದ ಇವರು ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳನ್ನು ನಿರ್ವಹಿಸುತ್ತಾರೆ. ಹೂಹೂ ಗಂಧರ್ವ, ಬಭ್ರುವಾಹನ, ಕುಶ, ಸುದರ್ಶನ, ದುಶ್ಯಾಸನ,

ಶಿಶುಪಾಲ, ಹಿರಣ್ಯಾಕ್ಷ, , ಕೌಂಡ್ಲಿಕ, ಚಂಡ-ಮುಂಡ, ಶ್ರೀನಿವಾಸ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ. ಅಭಿಮನ್ಯು ಮತ್ತು ಅಶ್ವತ್ಥಾಮ ಪಾತ್ರಗಳು ಇವರಿಗೆ ಹೆಚ್ಚಿನ ಕೀರ್ತಿಯನ್ನು ತಂದು ಕೊಟ್ಟ ಪಾತ್ರಗಳಾಗಿವೆ.



## ದಿನೇಶ ರೈ ಕಡಬ

"ಮಾಳಮನೆ"

ಚಿತ್ತೋಡಿ, ಐ-ತೂರು ಗ್ರಾಮ

ಸುಂಕದಕಟ್ಟೆ ಅಂಚೆ

ಹಾಸ್ಯ ಹಾಗೂ ಇನ್ನಿತರ ಪಾತ್ರಗಳನ್ನು ನಿರ್ವಹಿಸುತ್ತಾ ಬೆಳೆದು ಬಂದವರು ಶ್ರೀ ಕಡಬ ದಿನೇಶ ರೈ, ಮಂಗಳಾದೇವಿ ಮೇಳದಲ್ಲಿ ಪ್ರಸ್ತುತ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ವರದ ರೈ ಮತ್ತು ವಾರಿಜ ರೈ ಎಂಬವರ ಸುಪುತ್ರರಾಗಿರುವ ಇವರು ದಿ. 1-6-1983ರಂದು ಕಡಬದಲ್ಲಿ ಹುಟ್ಟಿದರು. 8ನೇ ತರಗತಿಯ ತನಕ ಶಾಲೆಗೆ ಹೋಗಿರುವ ದಿನೇಶ ರೈಯವರು ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನದ ಪ್ರಭಾವದಿಂದ ಆಕರ್ಷಿತರಾದರು. ಮಾವ ಸೌತೆಗದ್ದೆ ಧರ್ಣಪ್ಪ ಶೆಟ್ಟರಿಂದ ಪ್ರೇರಣೆಗೆ ಒಳಪಟ್ಟು ಧರ್ಮಸ್ಥಳ ಮೇಳದ ಕಲಾವಿದರಾಗಿರುವ ತಾರನಾಥ ವರ್ಕಾಡಿಯವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ರಂಗವನ್ನು ಪ್ರವೇಶಿಸಿದರು.

15ನೇ ವರ್ಷದಿಂದಲೇ ಯಕ್ಷಗಾನ ರಂಗಕ್ಕೆ ಪ್ರವೇಶಿಸಿದ ಇವರು ಧರ್ಮಸ್ಥಳ ಮೇಳ-1ವರ್ಷ, ಕಾಟಿಪಳ್ಳ ಮೇಳ 1ವರ್ಷ, ಕಟೀಲು ಮೇಳ 3 ವರ್ಷ, ಪುತ್ತೂರು ಮೇಳ ವರ್ಷ, ಕುಂಟಾರು ಮೇಳ 2ವರ್ಷ, ಕದ್ರಿ ಮೇಳ 1ವರ್ಷ ಹೀಗೆ ತಿರುಗಾಟವನ್ನು ಮಾಡಿರುವರು. ಆಮೇಲೆ ಮಂಗಳಾದೇವಿ ಮೇಳವನ್ನು ಸೇರಿದವರು ಈಗಾಗಲೇ 3ನೇ ವರ್ಷದ ತಿರುಗಾಟವನ್ನು ಪೂರೈಸಿದ್ದಾರೆ.

ಕಡಬ ದಿನೇಶ ರೈಯವರು ತುಳು ಪ್ರಸಂಗದ ಹಾಸ್ಯ ಪಾತ್ರಗಳನ್ನು ಆಧುನಿಕ ಕಾಲದ ರಂಜನೆಗೆ ತಕ್ಕಂತೆ ನಿರ್ವಹಿಸುತ್ತಾರೆ. ನಾರದ, ಪಯ್ಯಬೇದ, ಜೋಯಿಸ (ಕೋಟಿ ಚೆನ್ನಯ), ಆಚಾರಿ ಲಿಂಗಪ್ಪ (ದೇವು ಪೂಂಜ), ದಾರುಕ, ವಿಜಯ, ಮಕರಂದ ಹೀಗೆ ಹಲವು ಹಾಸ್ಯದ ಪಾತ್ರಗಳನ್ನು ತುಳು-ಕನ್ನಡ ಪ್ರಸಂಗಗಳಲ್ಲಿ ನಿರ್ವಹಿಸಿದ್ದಾರೆ. ಸಂದರ್ಭಕ್ಕೆ ಅನುಗುಣವಾಗಿ ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳನ್ನು ಕೂಡಾ ಮಾಡುತ್ತಾರೆ.

ಮಳೆಗಾಲದಲ್ಲಿ ಕೃಷಿಜೀವನದ ಬಗ್ಗೆ ಆಸಕ್ತಿವುಳ್ಳ ಇವರು ಬೆಳೆಯುವ ಯುವಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ. ನೂತನ ಪ್ರಸಂಗಗಳ ಹಾಸ್ಯ - ಪಾತ್ರಗಳಲ್ಲಿ ನಟಿಸುತ್ತಾ ಜನರ ಮನಸ್ಸನ್ನು ರಂಜಿಸಿದ್ದಾರೆ.



## ನಾರಾಯಣ ಭಾಗವತ ಬಲಿಪ

ನೂಯಿಮನೆ, ಮಾರೂರು ಗ್ರಾಮ ಮತ್ತು ಅಂಚೆ

ವಯಾ ಮೂಡಬಿದ್ರೆ - 574227

ಮಂಗಳೂರು ತಾಲೂಕು

ಮನೆತನದಿಂದ ಬಂದ ಪರಂಪರೆಯ ಶೈಲಿಯನ್ನು ಉಳಿಸಿ ಬೆಳೆಸಿ ಬಂದಿರುವುದರ ಜೊತೆಗೆ ತೆಂಕುತಿಟ್ಟಿನಲ್ಲೇ ಅಗ್ರ ಪಂಕ್ತಿಯ ಮನ್ನಣೆಯನ್ನು ಪಡೆದ ಶ್ರೀ ಬಲಿಪ ನಾರಾಯಣ ಭಾಗವತರು ಕಟೀಲು ಮೇಳದ ಮುಖ್ಯ ಭಾಗವತರಾಗಿ ತಿರುಗಾಟವನ್ನು ನಡೆಸಿ ನಿವೃತ್ತರಾಗಿದ್ದಾರೆ.

ಕಾಸರಗೋಡು ಜಿಲ್ಲೆಯ ಪದ್ರೆ ಗ್ರಾಮದಲ್ಲಿ 19-03-1938ರಂದು ಬಲಿಪ ಮಾಧವ ಭಟ್ಟ ಮತ್ತು ಸರಸ್ವತಿ ದಂಪತಿಯ ಸುಪುತ್ರರಾಗಿ ನಾರಾಯಣ ಭಾಗವತರು ಜನಿಸಿದರು. ಮನೆ ತ ನ ದ ಹಿನ್ನೆಲೆಯಿಂದಾಗಿ ಪರಂಪರೆಯ ಮಟ್ಟಿನಲ್ಲಿ ಹಾಡುವ ರೀತಿ ಇವರಲ್ಲಿ ರಕ್ತಗತವಾಗಿತ್ತು. ಬಾಲ್ಯದಲ್ಲೇ ಯಕ್ಷಗಾನದತ್ತ ಆಸಕ್ತರಾಗಿದ್ದ ಇವರು ಅಜ್ಜ ದಿ. ಬಲಿಪ ನಾರಾಯಣ ಭಾಗವತ ಮತ್ತು ತಂದೆಯವರಿಂದ ಯಕ್ಷಗಾನದ ಭಾಗವತಿಕೆಯನ್ನು ಅಭ್ಯಾಸ ಮಾಡಿ ತಿರುಗಾಟವನ್ನು ನಡೆಸಿದ್ದಾರೆ.

ಕೂಡ್ಲು ಮೇಳ 7 ವರ್ಷ, ಕುಂಡಾವು ಮೇಳ-4 JF,ಮೂಲ್ಕಿ ಮೇಳ-1 ವರ್ಷ, ರೆಂಜಾಳ54ಮೇಳ-4 ವರ್ಷ ಹಾಗೂ ಕಟೀಲು ಮೇಳ 33ವರ್ಷ ಹೀಗೆ ತಿರುಗಾಟವನ್ನು ನಡೆಸಿದ್ದಾರೆ. ಅಜ್ಜನಂತೆಯೇ ಪ್ರಸಂಗ ರಚನೆಯಲ್ಲಿ ಪ್ರವೀಣರಾಗಿರುವ ಇವರು 30ಕ್ಕೂ ಹೆಚ್ಚಿನ ಪ್ರಸಂಗಗಳನ್ನು ರಚಿಸಿದ್ದಾರೆ. ರಕ್ತರಾತ್ರಿ, ಶಿವಪ್ರಭಾ ಪರಿಣಯ, ಕಾಳಿಂದಿ ವಿವಾಹ, ಮತ್ಸಾವತಾರ ಕೇತಕಿಶಾಪ, ನವಗ್ರಹ ಮಹಾತ್ಮ ಮೊದಲಾದ ಪ್ರಸಂಗಗಳನ್ನು ಉಲ್ಲೇಖಿಸ ಬಹುದಾಗಿದೆ.

ಪ್ರದರ್ಶನದ ನಿರ್ದೇಶಕರಾಗಿ, ದಿಗ್ದರ್ಶಕರಾಗಿ ಸಮರ್ಥ ನಿರ್ವಹಣೆಯನ್ನು ತೋರಿರುವ ಇವರು 50ಕ್ಕೂ ಮಿಕ್ಕಿದ ವೀಡಿಯೋ ಮತ್ತು ಆಡಿಯೋಗಳಲ್ಲಿ ಭಾಗವತರಾಗಿ ಹಾಡಿದ್ದಾರೆ. ಪ್ರಸಂಗಕ್ಕೆ ತಕ್ಕಂತೆ ಕಲಾವಿದರಿಗೆ ನಿರ್ದೇಶನವನ್ನು ಮಾಡಬಲ್ಲ ಇವರು ಅಬ್ಬರದ ಕಂಠಧ್ವನಿಯಿಂದ ಹಾಡಬಲ್ಲವರಾಗಿದ್ದಾಗರೆ. ಕೃಷ್ಣಾರ್ಜುನ, ಕರ್ಣಾರ್ಜುನ, ದುಶ್ಯಾಸನ ವಧೆ ಮುಂತಾದ ಪ್ರಸಂಗಗಳನ್ನು ಉತ್ತಮವಾಗಿ ಆಡಿಸಿ ಪ್ರಸಿದ್ಧರಾಗಿದ್ದಾರೆ.

ಶ್ರೀಮತಿ ಜಯಲಕ್ಷ್ಮೀ ಎಂಬವರನ್ನು ವರಿಸಿ ಮಾಧವ, ಶಿವಶಂಕರ, ಶಶಿಧರ, ಪ್ರಸಾದ ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ. ಇವರಲ್ಲಿ ಎರಡನೆಯ ಮತ್ತು ನಾಲ್ಕನೆಯ ಸುಪುತ್ರರು ಉತ್ತಮ ಭಾಗವತರಾಗಿದ್ದು ತಂದೆಯವರ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಯಕ್ಷಕಲಾ ದ್ರುಮ, ಭಾಗವತ ಭೂಷಣ, ಭಾಗವತ ಕುಲತಿಲಕ, ಯಕ್ಷ ಕಲಾ ಬ್ರಹ್ಮ ಮುಂತಾದ ಬಿರುದುಗಳಿಂದ ಕೀರ್ತಿವಂತರಾಗಿರುವ ಬಲಿಪ ನಾರಾಯಣ ಭಾಗವತರಿಗೆ ಕರ್ನಾಟಕ ಜಾನಪದ ಪರಿಷತ್ ದೊಡ್ಡಮನೆ ಲಿಂಗೇ ಗೌಡ ಪ್ರಶಸ್ತಿ, ಶೇಣಿ ದತ್ತಿನಿಧಿ ಪ್ರಶಸ್ತಿ, ಶಿವರಾಮ ಕಾರಂತ ದೀಪ ಪ್ರಶಸ್ತಿ, ಅಗರಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಲ್ಲದೆ ನೂರಾರು ಸಂಮಾನ ಗೌರವ ಪುರಸ್ಕಾರಗಳು ಸಂದಿವೆ.



# ನಾರಾಯಣ ಹಾಸ್ಯಗಾರ ನೆಲ್ಲಿಕಟ್ಟೆ

ಕಾಟಿಪಳ್ಳ

ಮಂಗಳೂರು ತಾಲೂಕು.

ಹಾಸ್ಯ ಪಾತ್ರಗಳ ನಟನಾಭಿವ್ಯಕ್ತಿಯನ್ನು ತೋರಿಸಿ ಸರ್ತಿಗೆ ಪಾತ್ರರಾಗಿರುವ ನೆಲ್ಲಿಕಟ್ಟೆನಾರಾಯಣ ಹಾಸ್ಯಗಾರರು ಮೇಳದ ನಿವೃತ್ತ ಕಲಾವಿದರಾಗಿದ್ದು, ಹೇಳಿಕೆಯ ಮೇರೆಗೆ ಭಾಗವಹಿಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯ ನೆಲ್ಲಿಕಟ್ಟೆಯಲ್ಲಿ ಶ್ರೀ ಕೃಷ್ಣ ಹಾಗೂ ಶ್ರೀಮತಿ ಮಾನು ದಂಪತಿಯ ಮಗನಾಗಿ ದಿನಾಂಕ 24.08.1938ರಂದು ನಾರಾಯಣ

ಹಾಸ್ಯಗಾರರು ಜನಿಸಿದರು. ಬಾಲ್ಯದಲೇ ಯಕ್ಷಗಾನ ಕಲೆಗೆ ಮಾರುಹೋದ ಇವರು ಕೂಡ್ಲು, ಮುಲ್ಕಿ, ಇರಾ, ಸುಬ್ರಹ್ಮಣ್ಯ, ಸುಂಕದಕಟ್ಟೆ, ಬಪ್ಪನಾಡು, ಮಲ್ಲ. ಮತ್ತು ಕಟೀಲು ಮೇಳಗಳಲ್ಲಿ ತಿರುಗಾಟವನ್ನು ನಡೆಸಿರುವರು.

ಹಾಸ್ಯಗಾರ ಕುಂಞಂಬು ಮತ್ತು ಬಣ್ಣದ ಕುಟ್ಯಪ್ಪರವರ ರಕ್ತ ಸಂಬಂಧಿಯಾದ ನೆಲ್ಲಿಕಟ್ಟೆಯವರು ಪೆರುವೋಡಿ ನಾರಾಯಣ ಭಟ್, ಕುರಿಯ ವಿಠಲ ಶಾಸ್ತ್ರಿ, ವೇಣೂರು ವೆಂಕಟರಮಣ ಭಟ್ ಮೊದಲಾದವರ ಮಾರ್ಗದರ್ಶನದಲ್ಲಿ ಪ್ರಬುದ್ಧರಾಗಿ ಪೌರಾಣಿಕ ಪ್ರಸಂಗಗಳ ಅನುಭವವನ್ನು ಸಂಪಾದಿಸಿದರು.

ಮಾಲಿನಿದೂತ, ದಾರುಕ, ದೇವದೂತ, ಬಾಹುಕ, ನಕ್ಷತ್ರಿಕ ಮೊದಲಾದ ಹಾಸ್ಯ ಪಾತ್ರಗಳಲ್ಲಿ ವಿಜೃಂಭಿಸಿರುವ ಇವರು ಮಾತುಗಾರರಾಗಿದ್ದು ತಾಳ ಮದ್ದಳೆಯ ಅರ್ಥದಾರಿಯಾಗಿಯೂ ಮನ್ನಣೆಯನ್ನು ಪಡೆದಿದ್ದಾರೆ. ಹಾಸ್ಯ ಪಾತ್ರಗಳಲ್ಲದೆ ಬ್ರಹ್ಮ, ನಾರದ, ಸುಬುದ್ಧಿ, ರೇವತರಾಜ ಮುಂತಾದ ಪೋಷಕ ಪಾತ್ರಗಳನ್ನು ಕೂಡಾ ನಿರ್ವಹಿಸುತ್ತಿದ್ದಾರೆ.

ಹವ್ಯಾಸಿ ಕಲಾ ಕಾರ್ಯಕ್ರಗಳು ಸೇರಿದಂತೆ, ಬಪ್ಪನಾಡು ಮೇಳದ ಪೌರಾಣಿಕ ಪ್ರದರ್ಶನಗಳಿಗೆ ಹೇಳಿಕೆಯ ಮೇರೆಗೆ ಭಾಗವಹಿಸುವ ಇವರು ಶ್ರೀಮತಿ ಕಲ್ಯಾಣಿ ಎಂಬವರನ್ನು ವರಿಸಿದ್ದು, ಓರ್ವಳು ಸುಪುತ್ರಿಯನ್ನು

ಪಡೆದಿರುವರು. ಇವರ ಸಾಧನೆಗೆ ಪ್ರತಿಫಲವಾಗಿ ಬೋಳೂರು ದೋಗ್ರ ಪೂಜಾರಿ ಪ್ರಶಸ್ತಿ ಸೇರಿದಂತೆ, ಕದ್ರಿ ಶಕ್ತಿನಗರ, ಕಾಟಿಪಳ್ಳ, ಕುಳಾಯಿ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



## ನಾರಾಯಣ ಗೌಡ ಕೊಳ್ತಿಗೆ

ಏಳತಡ್ಕ ಮನೆ, ಕೊಳಿಗೆ ಗ್ರಾಮ

ಅಂಚೆ: ಪೆರ್ಲಂಪಾಡಿ, ದ. ಕ.

ಮೊಬೈಲ್: 9901301389

ಚಿಂತನಾತ್ಮಕ ಮಾತುಗಾರಿಕೆಯಿಂದ ತನ್ನದೇ ಆದ ಶೈಲಿಯನ್ನು ಪ್ರಸ್ತುತ ಪಡಿಸುತ್ತಾ ಜನಮನ್ನಣೆಗೆ ಒಳಗಾಗಿರುವ ಕೊಳಿಗೆ ನಾರಯಣ ಗೌಡರು ಪ್ರಸ್ತುತ ಮಂಗಳಾದೇವಿ ಮೇಳದ ಹಿರಿಯ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.


ತಿಮ್ಮಪ್ಪ ಗೌಡ ಮತ್ತು ಕಮಲ ದಂಪತಿಯ ಸುಪುತ್ರರಾಗಿ ದಿ. 18/7/1950 ರಂದು ಕೊಟ್ಟಿಗೆಯಲ್ಲಿ ನಾರಾಯಣ ಗೌಡರು ಜನಿಸಿದರು. ಮನೆಯಲ್ಲಿ ವರ್ಷಂಪ್ರತಿ ನವರಾತ್ರಿ ಉತ್ಸವದ ನಿಮಿತ್ತ ನಡೆಯುತ್ತಿದ್ದ ತಾಳಮದ್ದಳೆಯ ಕಾರ್ಯಕ್ರಮಗಳಿಂದ ಇವರು ಪ್ರಭಾವಿತರಾಗಿ ಯಕ್ಷಗಾನ ಕಲೆಯನ್ನು ಅಭ್ಯಾಸಿಸುವ ಬಗ್ಗೆ ಆಸಕ್ತಿಯನ್ನು ತಾಳಿದರು. ಬೆಳ್ಳಾರೆ ವಿಶ್ವನಾಥ ರೈ ಮತ್ತು ಶಂಕರ ನಾರಾಯಣ ಸಾಮಗರಿಂದ ಯಕ್ಷಗಾನದ ಬಗ್ಗೆ ಮಾರ್ಗದರ್ಶನವನ್ನು ಪಡೆದು ತಿರುಗಾಟವನ್ನು ಆರಂಭಿಸಿದರು.

ಆದಿ ಸುಬ್ರಹ್ಮಣ್ಯ ಮೇಳ- 3 ವರ್ಷ, ಅಂಮ್ಟಾಡಿ ಮೇಳ 2 ವರ್ಷ, ಕೊಲ್ಲೂರು ಮೇಳಪುತ್ತೂರು ಮೇಳ-2 JF,12 ವರ್ಷ,ಬಪ್ಪನಾಡು ಮೇಳ2 ವರ್ಷ, ಕರ್ನಾಟಕ ಮೇಳ -18 ವರ್ಷ,ಮಂಗಳಾದೇವಿ ಮೇಳ7 ವರ್ಷ, ಹೀಗೆ ತಿರುಗಾಟವನ್ನು ನಡೆಸಿದ್ದಾರೆ.

ತಾಳಮದ್ದಳೆಯ ಅರ್ಥಧಾರಿ, ಧಾರ್ಮಿಕ ಉಪನ್ಯಾಸಕ, ಕಾರ್ಯಕ್ರಮದ ಸಂಘಟಕರಾಗಿ ಗುರುತಿಸಲ್ಪಟ್ಟಿರುವ ಕೊಳಿಗೆ ನಾರಾಯಣ ಗೌಡರು ಪುಂಡು ವೇಷ, ರಾಜ ವೇಷ, ನಾಟಕೀಯ ವೇಷಗಳಲ್ಲಿ ಪ್ರವೀಣರಾಗಿದ್ದಾರೆ. ಮಾರ್ತಾಂಡ ತೇಜ, ಪರಶುರಾಮ, ಕಂಸ, ಮಾಗಧ, ದಾರಿಕಾಸುರ ಮೊದಲಾದ ಪೌರಾಣಿಕ ಪಾತ್ರಗಳನ್ನು ನಿರ್ವಹಿಸುತ್ತಾರೆ. ದುಗ್ಗಣಕೊಂಡೆ, ಬುದ್ಧಿವಂತ ಮೊದಲಾದ ತುಳು ಪ್ರಸಂಗದ ಪಾತ್ರಗಳನ್ನು ನಿರ್ವಹಿಸಿರುವ ಇವರಿಗೆ ಬ್ರಹ್ಮ ಬಲಾಂಡಿದ ಬಲಾಂಡಿಯ ಪಾತ್ರವು ಹೆಚ್ಚಿನ ಕೀರ್ತಿಯನ್ನು ತಂದು ಕೊಟ್ಟಿದೆ.

ಶ್ರೀಮತಿ ದೇವಕಿ ಎಂಬವರನ್ನು ವರಿಸಿರುವ ಇವರಿಗೆ ಜಗದೀಪ್ (ವಿದ್ಯುತ್ ಸಂಸ್ಥೆಯಲ್ಲಿ ಅಧಿಕಾರಿ) ಜಯದೀಪ್ (ಬೆಂಗಳೂರಿನಲ್ಲಿ ಉದ್ಯೋಗಿ) ದೀಪ್ತಿ (ಡಿಪ್ಲೊಮೊ ಪದವೀಧರೆ) ಎಂಬ ಮೂರು ಮಂದಿ . ಮಕ್ಕಳಿದ್ದಾರೆ.

ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮುಂಬಯಿ ಅಭಿಮಾನ ಬಳಗದ ಸಂಮಾನ, ಬೆಂಗಳೂರು ದಾಸರಹಳ್ಳಿಯ ಸಂಮಾನ ಮುಂತಾದ ಗೌರವಗಳು ಇವರ ಸಾಧನೆಗೆ ಸಂದಿವೆ.



## ನಾರಾಯಣ ಭಟ್ ಪೆರುವಾಡಿ

ಪುತ್ತೂರು ನೂಜಿ ಮನೆ

ಕಸಬ ಗ್ರಾಮ

ಪುತ್ತೂರು, ದ. ಕ. 574201

ಮನೆ ದೂರವಾಣಿ: 08251-232666

ಯಕ್ಷಗಾನ "ಹಾಸ್ಯ ವಿಶಾರದ, ವಿದೂಷಕ ಶಿಖಾಮಣಿ" ಮೊದಲಾದ ಬಿರುದುಗಳಿಗೆ ಪಾತ್ರರಾಗಿರುವ ಪೆರುವಡಿ ನಾರಾಯಣ ಭಟ್ಟರು ತೆಂಕು ತಿಟ್ಟಿನ ಅಗ್ರಪಂಕ್ತಿಯ ಕಲಾವಿದರಾಗಿ ಜನ ಮನ್ನಣೆಯನ್ನು ಪಡೆದು ಕೀರ್ತಿವಂತರಾಗಿದ್ದಾರೆ.

ಭೀಮ ಭಟ್ಟ ಹಾಗೂ ಗುಣವತಿ ದಂಪತಿಯ ಸುಪುತ್ರರಾಗಿ ದಿನಾಂಕ 28-5-1927ರಲ್ಲಿ ಕರೋಪಾಡಿ ಗ್ರಾಮದ ಪದ್ಯಾಣ ಎಂಬಲ್ಲಿ ನಾರಾಯಣ ಭಟ್ಟರು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಮನೆತನದ ಪ್ರಭಾವದಿಂದ ಯಕ್ಷಗಾನದ ಮೇಲೆ ಆಕರ್ಷಿತರಾಗಿ ಪಾತ್ರ ನಿರ್ವಹಣೆ ಮಾಡಲು ಮುಂದಾದರು. ಸಂಬಂಧಿಕರಾಗಿದ್ದ ಸಂಕಯ್ಯ ಭಾಗವತ, ಈಶ್ವರ ಹಾಸ್ಯಗಾರ, ಮಾಂಬಾಡಿ ಭಾಗವತರು, ಪುಟ್ಟುನಾರಾಯಣ ಭಾಗವತರು ಇವರೆಲ್ಲರ

ಕಲಾಸೇವೆಯ ಆದರ್ಶದಿಂದ ಸ್ಪೂರ್ತಿವಂತರಾಗಿ ದಿ। ಕುರಿಯ ವಿಠಲ ಶಾಸ್ತ್ರಿಯವರ ಮಾರ್ಗದರ್ಶನವನ್ನು ಪಡೆದರು. ಕನ್ಯಾನ ಕೇಶವ, ಶೀನಪ್ಪ ಭಂಡಾರಿ, ಅಗರಿ ಶ್ರೀನಿವಾಸ ಭಾಗವತ ಮೊದಲಾದವರ ಮಾರ್ಗದರ್ಶನದಲ್ಲಿ ನಾರಾಯಣ ಭಟ್ಟರು ಬೆಳೆದು ಪಾತ್ರ ನಿರ್ವಹಣೆಯಲ್ಲಿ ಪ್ರಬುದ್ಧರಾದರು.

ಧರ್ಮಸ್ಥಳ - 6 ವರ್ಷ, ಮೂಲ್ಕಿ ವರ್ಷ, ಸುರತ್ಕಲ್ 6 ವರ್ಷ,-ವರ್ಷ, ಅಮೃತೇಶ್ವರಿ (ಬಡಗು) 2-12ಕುತ್ಯಾಳ - 6ವರ್ಷ, ಕದ್ರಿಮೇಳ 2 ವರ್ಷ, ಅರುವ ಮೇಳ 2 ವರ್ಷ,-ಬಪ್ಪನಾಡು ಮೇಳ - 3 ವರ್ಷ, ನಂದಾವರ 1 ವರ್ಷ ಹೀಗೆ ಮೇಳ ತಿರುಗಾಟವನ್ನು ಮಾಡಿದ ಇವರು ಕಳೆದ 15-17 ವರ್ಷಗಳಿಂದ ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಪಾತ್ರ ನಿರ್ವಹಣೆ ಮಾಡುತ್ತಿದ್ದಾರೆ.

ಪಾಪಣ್ಣ, ಬಾಹುಕ, ವಿಭಾಕರ ಮುಂತಾದ ಪಾತ್ರಗಳಲ್ಲಿ ಪೆರುವಡಿಯವರು ಪ್ರತಿಭಾ ವಿಳಾಸವನ್ನು ಮೆರೆಸಿದ್ದಾರೆ. ಕನ್ನಡ ಹಾಗೂ ತುಳು ಭಾಷೆಯ ಪ್ರಸಂಗಗಳ ಹಾಸ್ಯ ಪಾತ್ರಗಳಲ್ಲಿ ಸಮಾನ ಪೌಢಿಮೆಯನ್ನು ತೋರಿರುವ ಇವರು ನಾರದ, ದೂರ್ವಾಸ, ಬ್ರಹ್ಮ ಇತ್ಯಾದಿ ಪಾತ್ರಗಳನ್ನು ಕೂಡಾ ಉತ್ತಮವಾಗಿ ನಿರ್ವಹಿಸುತ್ತಿದ್ದರು.

ಸಾವಿತ್ರಿ ಎಂಬವರನ್ನು ವರಿಸಿರುವ ಇವರು ಕೃಷ್ಣಾಕುಮಾರಿ, ಸುಗುಣ ಕುಮಾರಿ (ಡ್ರಾಯಿಂಗ್ ಟೀಚರ್), ಮಹಾಲಕ್ಷ್ಮೀ (ಆಪೀಸರ್ ಉದ್ಯೋಗಿ) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ನಾಡಿನ ವಿವಿಧ ಕಡೆಗಳಲ್ಲಿ ಕಲಾ ಸೇವೆಯನ್ನು ಮಾಡಿರುವ ಇವರಿಗೆ ಕೇರಳ, ಮಹಾರಾಷ್ಟ್ರ, ಆಗ್ರಾ, ಅಹ್ಮದಾಬಾದ್, ದೆಹಲಿ ಮೊದಲಾದ ಕಡೆಗಳಲ್ಲಿ ಸಂಮಾನಗಳು ಸಂದಿವೆ. ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ, ಉಡುಪಿ ಕಲಾರಂಗದ ಪ್ರಶಸ್ತಿ, ಕೋಡಪದವು ಕರ್ಗಲ್ಲು ಸುಬ್ಬಣ್ಣ ಪ್ರಶಸ್ತಿ, ಮೊದಲಾದ ಪ್ರಶಸ್ತಿಗಳಿಗೆ ಭಾಜನರಾಗಿರುವರು.



## ನಾರಾಯಣ ಶೆಟ್ಟಿ ಕೆ.ಪಿ.ಪೆರುವಾಯಿ


ಮುಕ್ಕಡಾಪು ಮನೆ

ಪೆರುವಾಯಿ ಅಂಚೆ, ಗ್ರಾಮ

ಬಂಟ್ವಾಳ ತಾಲೂಕು

ಮೊಬೈಲ್ : 9632525388


ನಾಟಕೀಯ ಮತ್ತು ರಾಜವೇಷಗಳಲ್ಲಿ ಅದ್ವಿತೀಯವಾದ ಪ್ರತಿಭೆಯನ್ನು ಮೆರೆಸಿರುವ ಶ್ರೀ ಕೆ.ಪಿ. ಪೆರುವಾಯಿ ನಾರಾಯಣ ಶೆಟ್ಟರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮದನಪ್ಪ ಶೆಟ್ಟಿ ಮತ್ತು ಅಬ್ಬಕ್ಕ ದಂಪತಿಯ ಸುಪುತ್ರರಾಗಿ ಪೆರುವಾಯಿಯಲ್ಲಿ ಜನಿಸಿರುವ ನಾರಾಯಣ ಶೆಟ್ಟರಿಗೆ 70 ವರ್ಷಗಳು ಸಂದಿವೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು, ಯಕ್ಷಗಾನದ ಪ್ರದರ್ಶನಗಳನ್ನು ನೋಡಿ ಆಕರ್ಷಣೆಗೆ ಒಳಗಾಗಿ ಅಧ್ಯಯನಾಸಕ್ತರಾದರು.

ಐತ ಪ್ಪ ಶೆಟ್ಟಿ ಪೈವಳಿಕೆ ಇವರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಪೆರುವಾಯಿ ನಾರಾಯಣ ಶೆಟ್ಟರು 12ನೇ ವರ್ಷದಿಂದಲೇ ರಂಗಪ್ರವೇಶ ಮಾಡಿದ್ದಾರೆ. ಕುಡಾವು ಮೇಳ - 1 ವರ್ಷ, ಧರ್ಮಸ್ಥಳ ಮೇಳ - 1 ವರ್ಷ, ಕರ್ನಾಟಕ ಮೇಳ 2 ವರ್ಷ, ಕಲಾವಿಹಾರ ಮೇಳ 4 ವರ್ಷ, ಕಟೀಲು ಮೇಳ -39 ವರ್ಷ ಹೀಗೆ ಮೇಳ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ರಕ್ತಬೀಜ, ಹಿರಣ್ಯಕಶ್ಯಪ, ಕಂಸ, ಸುಂದರ ರಾವಣ ಋತುಪರ್ಣ ಹನುಮಂತ ಜಾಬಾಲಿ ಅರುಣಾಸುರ ಮುಂತಾದ ಪಾತ್ರಗಳಿಂದ ಕೀರ್ತಿವಂತರಾಗಿರುವ ಇವರು ತುಳುಪ್ರಸಂಗದ ಪಾತ್ರಗಳಾದ ಕೋಟಿ, ದೇವು ಪೂಂಜ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಆಟ -ಕೂಟಗಳಲ್ಲಿ ಪ್ರತಿಭೆಯನ್ನು ಮೆರೆಸಿರುವ ಇವರು ತರ್ಕದ ಮುಖೇನ ವಾಗ್ ವೈಖರಿಯನ್ನು ಮೆರೆಸಿದ್ದಾರೆ. ಕಿರಿಯ ಕಲಾವಿದರಿಗೆ ರಂಗಮಾಹಿತಿ ಮತ್ತು ಪಾತ್ರಗಳ ಅರ್ಥದ ಮಾಹಿತಿಯನ್ನು ನೀಡಿ ಉತ್ತೇಜಿಸುವ ಗುಣಧರ್ಮ ಇವರಲ್ಲಿದೆ.

ಕೃಷಿಕರಾಗಿಯೂ ಅನುಭವವನ್ನು ಪಡೆದಿರುವ ಇವರು ಶ್ರೀಮತಿ ಚ0ದ್ರಾವತಿ ಎಂಬುವರನ್ನು ವರಿಸಿ, ಬಾಲಕೃಷ್ಣ, ರೇಖಾ, ರವಿರಾಜ, ರತ್ನರಾಜ ಸಹನಾ ಎಂಬ ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಮುಂಬಯಿ ಮಂಗಳೂರು, ಬಂಟ್ವಾಳ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ. ಶ್ರೀಕೃಷ್ಣ ಯಕ್ಷಸಭಾ ಮಂಗಳೂರು ಹವ್ಯಾಸಿ ಬಳಗ ಕದ್ರಿ ಮೊದಲಾದ ಸಂಸ್ಥೆಗಳು ಇವರನ್ನು ಗೌರವಿಸಿವೆ.



## ನಾರಾಯಣ ಕುಲಾಲ್

ತುಂಬೆದಲ್ಲೆಕ್ಕಿ ಮನೆ, ಗುಂಡೂರಿ ಗ್ರಾಮ

ವೇಣೂರು ಅಂಚೆ

ಬೆಳ್ತಂಗಡಿ ತಾಲೂಕು - 574242

(ಮೊಬೈಲ್) 9379096745

ಸ್ತ್ರೀ ವೇಷ, ಪುಂಡುವೇಷ ಮತ್ತು ರಾಜವೇಷಗಳನ್ನು ಮಾಡುತ್ತಾ ಬಂದಿರುವ ಶ್ರೀ ನಾರಾಯಣ ಕುಲಾಲರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

1-12-1976ರಲ್ಲಿ ಲೋಕಯ್ಯ ಮೂಲ್ಯ ಮತ್ತು ಗಿರಿಜಾ ದಂಪತಿಯ ಸುಪುತ್ರರಾಗಿ ತುಂಬೆ ದಲೆಕ್ಕಿ ಮನೆಯಲ್ಲಿ ಹುಟ್ಟಿದ ಇವರು ಹತ್ತನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಮುಂದೆ ಯಕ್ಷಗಾನದ ಮೇಲೆ ಆಕರ್ಷಿತರಾದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿದ ಇವರು ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ನಾಟ್ಯಾಭ್ಯಾಸ ಮಾಡಿದರು. ಆಮೇಲೆ ಬಪ್ಪನಾಡು ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಪೂರೈಸಿ ಕಟೀಲು - ಮೇಳವನ್ನು ಸೇರಿದರು. 13 ವರ್ಷಗಳ ತಿರುಗಾಟವನ್ನು ಕಟೀಲು ಮೇಳದಲ್ಲೇ ನಡೆಸಿರುವ ಇವರು ಪ್ರಸ್ತುತ ಕಿರೀಟ ವೇಷದ ಕಲಾವಿದರಾಗಿದ್ದಾರೆ.

ಪುಂಡುವೇಷ, ರಾಜವೇಷ, ಸ್ತ್ರೀವೇಷಗಳನ್ನು ಮಾಡಿರುವ ಇವರು ದೇವೇಂದ್ರ, ಅರ್ಜುನ, ಮಾಲಿನಿ, ಯಶೋಮತಿ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಸೌಮ್ಯ ಸ್ವಭಾವದ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುವ ಗುಣಧರ್ಮ ನಾರಾಯಣ ಕುಲಾಲರಲ್ಲಿದೆ.

ಮಳೆಗಾಲದಲ್ಲಿ ಕೃಷಿಗಾರಿಕೆಯ ಬಗ್ಗೆ ಆಸಕ್ತಿಯನ್ನು ಹೊಂದಿರುವ ನಾರಾಯಣ ಕುಲಾಲರು ಶ್ರೀಮತಿ ಹೇಮಾವತಿ ಎಂಬವರನ್ನು ವರಿಸಿದ್ದಾರೆ.



## ನಾರಾಯಣ ಪಾಟಾಳಿ ಪಡುಮಲೆ

ಏರಿಕಳ ಮನೆ, ಪಟ್ಲ ಅಂಚೆ,

ಮಧೂರು ಗ್ರಾಮ, ಕಾಸರಗೋಡು ಜಿಲ್ಲೆ

(ಮೊಬೈಲ್) 9448911543

ಬಣ್ಣದ ವೇಷಧಾರಿಯಾಗಿ ಜನಮನ್ನಣೆಗೆ ಪಾತ್ರರಾಗಿರುವ ಶ್ರೀ ನಾರಾಯಣ ಪಾಟಾಳಿಯವರು ಪ್ರಸ್ತುತ ಧರ್ಮಸ್ಥಳ ಮೇಳದಲ್ಲಿ ಬಣ್ಣದ ವೇಷಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಸುಬ್ಬ ಪಾಟಾಳಿ ಮತ್ತು ಸೀತು ದಂಪತಿಯ ಸುಪುತ್ರರಾಗಿ 12-3-1970ರಂದು ಕೇರಳದ ಕಾಸರಗೋಡಿನ ಪಂಜಿಕಲ್ಲು ಎಂಬಲ್ಲಿ ಜನಿಸಿದರು. ಈಶ್ವರ ಮಂಗಳ ಶಾಲೆಯ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿದ್ದ ಹವ್ಯಾಸಿ ವೇಷಧಾರಿ ಕೆ. ಸಿ. ಪಾಟಾಳಿ ಪಡುಮಲೆಯವರು ಇವರಿಗೆ ಪ್ರೇರಕರಾಗಿ ಯಕ್ಷಗಾನ ಕಲೆಯ ಅಭ್ಯಾಸ ಮಾಡಲು ಪರಕರಾದರು. ಹೀಗಾಗಿ ನಾರಾಯಣ ಪಾಟಾಳಿಯವರು ವೇಷಧಾರಿಯಾಗಿ ರಂಗಪ್ರವೇಶ ಮಾಡಿದರು.

1990-1991ನೇ ವರ್ಷದಲ್ಲಿ ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿದ ಇವರು ಕೊಳ್ಳೂರು ರಾಮಚಂದ್ರರಾವ್‌ರವರಲ್ಲಿ ಹೆಚ್ಚಿನ ನಾಟ್ಯಾಭ್ಯಾಸವನ್ನು ಮಾಡಿದರು. ಕೀರ್ತಿ ಶೇಷ ಕಲಾವಿದ, ಬಣ್ಣದ ಮಾಲಿಂಗ ಇವರ ಮಾವನಾಗಿದ್ದು ಅವರ ಆದರ್ಶವನ್ನು ಕೂಡಾ ಮೈಗೂಡಿಸಿಕೊಂಡು ಬಣ್ಣದ ವೇಷಗಳಲ್ಲಿ ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆದುಬಂದರು.

ಕಟೀಲು ಮೇಳ-5 ವರ್ಷ ಹಾಗೂ ಧರ್ಮಸ್ಥಳ ಮೇಳದಲ್ಲಿ 13 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಶುಂಭ, ಮಹಿಷಾಸುರ, ರಾವಣ, ಮಹಿರಾವಣ ಮೊದಲಾದ ಬಣ್ಣದ ವೇಷಗಳನ್ನು ಮಾಡಿರುವರಲ್ಲದೆ, ರಾಜವೇಷದ ಕೆಲವು ರಾಕ್ಷಸ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಸರೋಜಿನಿ ಎಂಬವರನ್ನು ವರಿಸಿರುವ ಇವರು ಶರತ್ ಮತ್ತು ಶರಣ್ಯ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ನಾರಾಯಣ ಶೆಟ್ಟಿ, ಅರುವ

ಲಕ್ಷ್ಮೀ ನಿವಾಸ ಅಳದಂಗಡಿ

ಬೆಳ್ತಂಗಡಿ ತಾಲೂಕು ದ. ಕ. - 574217

(ದೂರವಾಣಿ) 08256 - 272645

ಶ್ರೀ ಮಂಗಳಾದೇವಿ ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಅರುವ ನಾರಾಯಣ ಶೆಟ್ಟಿಯವರು ಉತ್ತಮ ವೇಷಧಾರಿಯಾಗಿ ಮನ್ನಣೆಯನ್ನು ಪಡೆದಿದ್ದಾರೆ.

ದಿನಾಂಕ 12-6-1954ರಲ್ಲಿ ಮುತ್ತಣ್ಣ ಶೆಟ್ಟಿ ಮತ್ತು ಚೆಲುವಮ್ಮ ದಂಪತಿಯ ಸುಪುತ್ರರಾಗಿ ಅರುವ ಅಳದಂಗಡಿಯಲ್ಲಿ ಹುಟ್ಟಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 14ನೇ ವರ್ಷದಿಂದ ಯಕ್ಷಗಾನದ ಪಾತ್ರ ನಿರ್ವಹಣೆಯನ್ನು ಮಾಡಲು ಆರಂಭಿಸಿದರು.

ಹಿರಿಯ ಸಹೋದರನಾದ ಅರುವ ಕೊರಗಪ್ಪ ಶೆಟ್ಟಿಯವರಿಂದ ಪ್ರೇರಣೆ ಮತ್ತು ಆರಂಭದ ನಾಟ್ಯಾಭ್ಯಾಸವನ್ನು ಮಾಡಿ, ಕೆ. ಗೋವಿಂದ ಭಟ್ಟರಿಂದ ಇನ್ನೂ ಹೆಚ್ಚಿನ ನಾಟ್ಯಾಭ್ಯಾಸವನ್ನು ಕಲಿತು ತಿರುಗಾಟವನ್ನು ಆರಂಭಿಸಿದರು.

ಕರ್ನಾಟಕ ಮೇಳ-10 ವರ್ಷ, ಕಟೀಲುಮೇಳ 10 ವರ್ಷ, ಕದ್ರಿ ಮೇಳ 8 ವರ್ಷ,—ಅರುವ ಮೇಳ 10 ವರ್ಷ,ಮೇಳ-ರಾಘವೇಂದ್ರ 2 ವರ್ಷ, ಸುಬ್ರಹ್ಮಣ್ಯ ಮೇಳ 2 ವರ್ಷ ಹಾಗೂ ಮಂಗಳಾದೇವಿ ಮೇಳದಲ್ಲಿ 2 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ರಾಮ, ಕೃಷ್ಣ, ಹರಿಶ್ಚಂದ್ರ, ಈಶ್ವರ, ಕೋಟಿ, ಪೆರುಮಳ ಮುಂತಾದ ಹಲವಾರು ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಸ್ತ್ರೀ ಪಾತ್ರಗಳನ್ನು ಮಾಡಿದ ಅನುಭವ ಕೂಡ ಇವರಿಗಿದೆ. ಮಾತಿನಲ್ಲೂ ' ಪ್ರೌಢಿಮೆಯನ್ನು ಸಾಧಿಸಿದ್ದಾರೆ.

ಶ್ರೀಮತಿ ವಾರಿಜ ಎಂಬವರನ್ನು ವರಿಸಿರುವ ನಾರಾಯಣ ಶೆಟ್ಟರು ವಜೇಶ್ವರಿ (ಅಧ್ಯಾಪಕಿ), ದುರ್ಗಾಪ್ರಸಾದ್ (ಖಾಸಗಿ ಉದ್ಯೋಗಿ), ರಾಜೇಶ್ವರಿ (ಅಧ್ಯಾಪಕಿ) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.



## ನಾರಾಯಣ ಸುವರ್ಣ


ಪಾಪೆ ಮಜಲು ಮನೆ, ಹರಿಯಡ್ಕ ಗ್ರಾಮ,

ಬಡಗನೂರು ಅಂಚೆ, ಪುತ್ತೂರು ತಾಲೂಕು,

ದ.ಕ. 574334 (ಮೊಬೈಲ್) 9341966251


ಸ್ತ್ರೀ ಪಾತ್ರದ ಮುಖೇನ ಕಲಾ ಸೇವೆಯನ್ನು ಮಾಡುತ್ತಿರುವ ಶ್ರೀ ನಾರಾಯಣ ಸುವರ್ಣರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಉಮಣ ಪೂಜಾರಿ ಮತ್ತು ಸುಂದರಿ ದಂಪತಿಯ ಸುಪುತ್ರರಾಗಿ ಪಾಪೆಮಜಲು ಮನೆಯಲ್ಲಿ ದಿನಾಂಕ 17-1-1968ರಂದು ಜನಿಸಿದರು. 9ನೇ ವಯಸ್ಸಿನಿಂದ ಯಕ್ಷಗಾನದ ಪಾತ್ರ ನಿರ್ವಹಣೆಯನ್ನು ಮಾಡುತ್ತಾ ಬೆಳೆದರು. ಅರ್ಥಧಾರಿ ಮತ್ತು ವೇಷಧಾರಿಯಾಗಿದ್ದ ಚಿಕ್ಕಪ್ಪ ಪಕೀರಪ್ಪ ಪೂಜಾರಿ ಮತ್ತು ದೊಡ್ಡಪ್ಪ ದಿ| ಬೈಂಕಿ ಪೂಜಾರಿಯವರು . ಬಾಲ್ಯದಿಂದಲೇ ಇವರಿಗೆ ಪ್ರೇರಣೆಯನ್ನು ನೀಡಿದ್ದರೆ, ಭಾಗವತರಾದ ಪಾದೆ ಕರಿಯ ನಾರಾಯಣ ಭಟ್ಟರು ಕೂಡಾ ಉತ್ತೇಜನ ನೀಡಿದವರಾಗಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು ಕುಂಬ್ಳೆ ಮೇಳ 2 ವರ್ಷ, ಕದ್ರಿ ಮೇಳ 2 ವರ್ಷ, ಬಪ್ಪನಾಡು ಮೇಳ - 1 ವರ್ಷ, ಮಧೂರು 1 ವರ್ಷ, ಹಾಗೂ ಕಟೀಲು ಮೇಳದಲ್ಲಿಮೇಳ- 15 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಇವರು ಮಾಲಿನಿ, ಶ್ರೀದೇವಿ, ಮೋಹಿನಿ, ಮಂಡೋದರಿ, ಸೀತೆ, ಶಚಿ, ರೇಣುಕ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿರುವ ಇವರು ಶ್ರೀಮತಿ ಚಂದ್ರಾವತಿ ಎಂಬವರನ್ನು ವರಿಸಿರುವರು.0



## ಪದ್ಮನಾಭ ಉಪಾಧ್ಯ

“ವಿಂದ್ಯಾ”, ಪೆರ್ಲ ರಸ್ತೆ, ಉಜಿರೆ ಅಂಚೆ

ಬೆಳ್ತಂಗಡಿ ತಾಲೂಕು

(ಮೊಬೈಲ್) 9449487182

ಚೆಂಡೆ-ಮದ್ದಳೆಯ ನುಡಿತ ಬಡಿತಗಳಲ್ಲಿ ತೀವ್ರಗತಿಯ ಕೈಚಳಕವನ್ನು ತೋರುತ್ತಾ ಕಲಾ ಸಾಧಕನಾಗಿ ಜನ ಮನ್ನಣೆಯನ್ನು ಪಡೆದಿರುವ ಪದ್ಮನಾಭ ಉಪಾಧ್ಯಾಯರು ಶ್ರೀ ಹೊಸನಗರ ಮೇಳದ ಹಿಮ್ಮೇಳ ವಾದಕರಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ಶ್ರೀನಿವಾಸ ಉಪಾಧ್ಯ ಮತ್ತು ಸುನಂದ ಉಪಾಧ್ಯ ದಂಪತಿಯ ಸುಪುತ್ರರಾಗಿ 15-1-1968ರಂದು ಉಡುಪಿಯಲ್ಲಿ ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಲ್ಲೇ ಯಕ್ಷಗಾನದತ್ತ ಆಕರ್ಷಿತರಾಗಿದ್ದರು. ಕೀರ್ತಿಶೇಷ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರ ಚೆಂಡೆಯ ಕೈಚಳಕದ ವರ್ಚಸ್ಸು ಇವರಲ್ಲಿ ಹೆಚ್ಚಿನ ಉತ್ತೇಜನವನ್ನು ಮೂಡಿಸಿತ್ತು.

ನಿಡ್ಲೆ ನರಸಿಂಹ ಭಟ್, ದಿವಾಣ ಭೀಮ ಭಟ್, ಮಾಂಬಾಡಿ ಸುಬ್ರಹ್ಮಣ್ಯ ಭಟ್, ಮೋಹನ ಬೈಪಾಡಿತ್ತಾಯ, ಗೋಪಾಲಕೃಷ್ಣ ಕುರುಪ್ " ಮೊದಲಾದವರ ಗುರುತನದಲ್ಲಿ ಚೆಂಡೆ, ಮದ್ದಲೆ ಮತ್ತು ಭಾಗವತಿಕೆಯ ಬಗ್ಗೆ ಜ್ಞಾನ ಸಂಪಾದನೆ ಮಾಡಿರುವರು. ಚುರುಕಿನ ಪ್ರತಿಭಾವಂತರಾಗಿರುವ ಪದ್ಮನಾಭ ಉಪಾಧ್ಯಾಯರು ಮೇಳ ತಿರುಗಾಟದ ಮುಖೇನ ಸಾಧಕರಾಗಿ ಬೆಳೆದುಬಂದರು.

ಬಪ್ಪನಾಡು ಮೇಳ 1 ವರ್ಷ, ನೇತ್ರಾವತಿ ಯಕ್ಷಗಾನ ಮಂಡಳಿ 1 ವರ್ಷ, ಅರುವ ಮೇಳ - 1 ವರ್ಷ, ಕುಂಬ್ಳೆ ಮೇಳ - 1 ವರ್ಷ, ಪುತ್ತೂರು ಮೇಳ - 1 ವರ್ಷ, ಕಾಂತಾವರಮೇಳ - 2 ವರ್ಷ, ಕದ್ರಿ ಮೇಳ 5 ವರ್ಷ, ಮಂಗಳಾದೇವಿ ಮೇಳ-3 ವರ್ಷ, ಗಣೇಶ ಪುರ ಮೇಳ 1 RF,. ಕಟೀಲು ಮೇಳ - 2 ವರ್ಷ, ಎಡನೀರು ಮೇಳ 2 ವರ್ಷ, ಧರ್ಮಸ್ಥಳ ಮೇಳ 3 ವರ್ಷ, ಹೊಸನಗರ ಮೇಳ - 1 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಹಿಮ್ಮೇಳ ವಾದಕರಾಗಿರುವ ಜೊತೆಗೆ ಸಂಗೀತ ಜ್ಞಾನ, ರಂಗಮಾಹಿತಿ, ಪ್ರಸಂಗಮಾಹಿತಿ ಇತ್ಯಾದಿಗಳ ಬಗ್ಗೆಯೂ ಹೆಚ್ಚಿನ ಅಧ್ಯಯನವನ್ನು ಮಾಡಿದ್ದಾರೆ. ಗುರುಗಳಾಗಿ ನೂರಾರು ಮಂದಿ ಶಿಷ್ಯರನ್ನು ಹೊಂದಿರುವ ಇವರು ಹಲವೆಡೆಯಲ್ಲಿ ತರಬೇತಿಯನ್ನು ನೀಡಿದ್ದಾರೆ. ಚೆಂಡೆಯನ್ನು ಶ್ರುತಿ ಮಾಡಲು ಅನುಕೂಲವಾಗುವಂತೆ, ಹಗ್ಗದ ಬಿಗಿ ಹಿಡಿಯಲು ಹೊಸವಿಧಾನವನ್ನು ಇವರು ಕಂಡು ಹಿಡಿದಿದ್ದಾರೆ.

ಶ್ರೀಮತಿ ಪ್ರೀತಿ ಉಪಾಧ್ಯರನ್ನು ವರಿಸಿ ಪ್ರತೀಕ್ ಉಪಾಧ್ಯ ಎಂಬ ಸುಪುತ್ರನನ್ನು ಪಡೆದಿರುವ ಪದ್ಮನಾಭ ಉಪಾಧ್ಯಾಯರು ಜನ ಮೆಚ್ಚುಗೆಯಿಂದ ಕೀರ್ತಿಯನ್ನು ಸಂಪಾದಿಸಿದ ಸಾಧಕರಾಗಿದ್ದಾರೆ.



## ಪದ್ಮನಾಭ ಶೆಟ್ಟಿಗಾರ್ ಎಸ್.


ಯಕ್ಷಬಂಧು ಪದ್ಮಶ್ರೀ, ಸಂಘಬೆಟ್ಟು ಗ್ರಾಮ,

ಸಿದ್ಧಕಟ್ಟೆ ಪೋಸ್ಟ್, ಬಂಟ್ವಾಳ ತಾಲೂಕು- 574237

ಮೊಬೈಲ್: 9591468878

ಹಾಸ್ಯದ ನಟನೆಯಿಂದ ಮನವನ್ನು ರಂಜಿಸುವ ಶ್ರೀ ಎಸ್. ಪದ್ಮನಾಭ ಶೆಟ್ಟಿಗಾರ್ ಓರ್ವ ಉತ್ತಮ ಹಾಸ್ಯಗಾರರಾಗಿ ತೆಂಕುತಿಟ್ಟಿನ ಕ್ಷೇತ್ರದಲ್ಲಿ ಪ್ರಭಾವ ಬೀರಿದ್ದಾರೆ. ಪ್ರಸ್ತುತ ಕಟೀಲು ಮೇಳದ ಹಾಸ್ಯಗಾರರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ರಾಮಣ್ಣ ಶೆಟ್ಟಿಗಾರ್ ಮತ್ತು ಗಿರಿಜಾ ಶೆಟ್ಟಿಗಾರಿ ದಂಪತಿಯ ಸುಪುತ್ರರಾಗಿ ಸಿದ್ಧಕಟ್ಟೆಯ ಸಂಘಬೆಟ್ಟಿನಲ್ಲಿ ಜನಿಸಿದ ಇವರಿಗೀಗ 56 ವರ್ಷ, 7ನೇ ತರಗತಿಯ ತನಕ ಶಾಲೆಗೆ ಹೋಗಿರುವ ಇವರನ್ನು ಯಕ್ಷಗಾನ ಕಲೆಯು ತನ್ನೆಡೆಗೆ ಆಕರ್ಷಿಸಿತು. ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನದ ಪ್ರದರ್ಶನಗಳಲ್ಲಿ ಹಾಸ್ಯ ಪಾತ್ರಗಳನ್ನು ನೋಡುತ್ತಾ ತಾನು ಕೂಡಾ ಹಾಸ್ಯ ಪಾತ್ರಧಾರಿಯಾಗಿ ಬೆಳೆಯಬೇಕೆಂದು ಬಯಸಿದರು. ತುಳು ಭಾಷೆಯ ಪ್ರದರ್ಶನಗಳಲ್ಲಿ ಪ್ರಭಾವಿತರಾಗಿ ಬೆಳೆದು ಕೀರ್ತಿ ಶೇಷರಾಗಿರುವ ಕಲಾವಿದ ಕೊರಗದಾಸ್ ಇವರಲ್ಲಿ ನಾಟ್ಯವನ್ನು ಅಭ್ಯಾಸ ಮಾಡಿ ರಂಗಪ್ರವೇಶ ಮಾಡಿದರು.

22ನೇ ವರ್ಷದಿಂದಲೇ ಯಕ್ಷಗಾನದ ಕಲಾಜೀವನಕ್ಕೆ ಪ್ರವೇಶಿಸಿದ ಪದ್ಮನಾಭ ಶೆಟ್ಟಿಗಾರರು ಕುಂಡಾವು ಮೇಳ 1 ವರ್ಷ, ಸುಬ್ರಹ್ಮಣ್ಯ ಮೇಳ- 1 ವರ್ಷ, ಕೊಲ್ಲೂರು ಮೇಳ 1 ವರ್ಷ, ಸುಂಕದಕಟ್ಟೆ ಮೇಳ - 9 ವರ್ಷ, ಸುರತ್ಕಲ್ ಮೇಳ—6 ವರ್ಷ, ಹಾಗೂ ಕಟೀಲು ಮೇಳ 14 ವರ್ಷ ಹೀಗೆ ಒಟ್ಟು 32 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ. ಈ ಮದ್ಯ ಹ ವ್ಯಾಸಿ ಕಲಾವಿದರಾಗಿಯೂ ಕಲಾ ಸೇವೆಯನ್ನು ನಡೆಸಿದ್ದಾರೆ.

ಶ್ರೀಮತಿ ಪದ್ಮಾವತಿ ಎಂಬವರನ್ನು ವರಿಸಿರುವ ಇವರು ಪುರುಷೋತ್ತಮ ಶೆಟ್ಟಿಗಾರ್ (ಉದ್ಯೋಗಿ), ಜೀವನ್‌ದಾಸ್ (ವಿದ್ಯುತ್ ಕುಶಲ ಕರ್ಮಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಮೂಕಾಸುರ, ವಿಜಯ, ದಾರುಕ, ಬಾಹುಕ, ಮೊದಲಾದ ಪಾಪಣ್ಣ ಮುಂತಾದ ಪಾತ್ರಗಳಲ್ಲಿ ಉತ್ತಮ ಹಾಸ್ಯದ ನಟನೆಯನ್ನು ತೋರುವ ಇವರು ದೇವಿ ಮಹಾತ್ಮಯ ಬ್ರಹ್ಮ, ಸುಗ್ರೀವ ಮೊದಲಾದ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ನಂದಿಶೆಟ್ಟಿ, ಸುಬುದ್ಧಿ ಗೌರವ ಹಾಸ್ಯದ ಪಾತ್ರಗಳಲ್ಲಿ ನಟಿಸುವಲ್ಲಿಯೂ ಪ್ರಬುದ್ಧ ನಿರ್ವಹಣೆಯನ್ನು ತೋರುತ್ತಾರೆ. ಕನ್ನಡ ಮತ್ತು ತುಳು ಭಾಷೆಯ ಹೆಚ್ಚಿನ ಪ್ರಸಂಗಗಳಲ್ಲಿ ಪಾತ್ರ ನಿರ್ವಹಣೆಗೆ ತಕ್ಕಂತೆ ಪ್ರಬುದ್ಧತೆಯನ್ನು ಸಾಧಿಸಿದ್ದಾರೆ.



## ಪ್ರಭಾಕರ ಗೋರೆ ಎಂ.


"ಭಾರ್ಗವ ನಿಲಯ", ಶಾಲಿನಿ ನಗರ, ದಿಡಿಂಬಿರಿ,

ಮೂಡರು ಗ್ರಾಮ, ಬಜಗೋಳಿ ಅಂಚೆ

ಕಾರ್ಕಳ ತಾಲೂಕು.

ಮೊಬೈಲ್ 09945484640.


ಮದ್ದಳೆಯ ನುಡಿತ ಬಡಿತಗಳನ್ನು ಹಿಡಿತವನ್ನು ಸಾಧಿಸಿ ಪ್ರೌಢಿಮೆಯನ್ನು ಮೆರೆಸಿರುವ ಶ್ರೀ ಎಂ ಪ್ರಭಾಕರ ಗೋರೆಯವರು ಪ್ರಸ್ತುತ ಎಡನೀರು ಯಕ್ಷಗಾನ ಮಂಡಳಿಯಲ್ಲಿ ಕಲಾ ಸೇವೆಯನ್ನು ಮಾಡುತ್ತಿದ್ದಾರೆ.

4-11-1959ರಲ್ಲಿ ಶಂಕರಭಟ್ ಗೋರೆ ಮತ್ತು ಉಮಾ ಗೋರೆ ದಂಪತಿಯ ಸುಪುತ್ರರಾಗಿ ಜನಿಸಿದರು. ಪದವಿಪೂರ್ವ ಹಂತದವರೆಗೆ ಶೈಕ್ಷಣಿಕವಾಗಿ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕಲೆಯ ಮೇಲಿನ ಅಭಿರುಚಿಯಿಂದಾಗಿ ಕಲಾಸಾಧಕರಾಗಿ ಬೆಳೆದು ಬಂದರು.

ಬೆಳ್ತಂಗಡಿ ತಾಲೂಕು ಲೈಲಗ್ರಾಮದ ಅಗರಿ ಕೃಷ್ಣ ಭಾಗವತರು ಇವರ ಅಜ್ಜರಾಗಿದ್ದು ಅವರ ಪ್ರೋತ್ಸಾಹವು ಇವರಿಗೆ ದೊರೆತ ಕಾರಣ ಕಲಾ ಸಾಧಕರಾಗಲು ಹಂಬಲಿಸಿದರು. ಮುಂದೆ - ನಾರಾಯಣ ಬೀಡೆ ಎಂಬವರಿಂದ ಮೃದಂಗದ ನುಡಿತ-ಬಡಿತಗಳನ್ನು ಅಭ್ಯಾಸ ಮಾಡಿದ ಇವರು ಜಿ ಆರ್ ಭಟ್ ಹೊನ್ನಾವರ ಅವರಿಂದ ತಬ್ಲಾವಾದನದ ಅಭ್ಯಾಸವನ್ನು ಮಾಡಿರುವರು. ತಬ್ಲಾ- ಉತ್ತರಾದಿ ಸಿನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಇವರು ಕಲಾವ್ಯವಸ್ಯಾಯಕ್ಕಾಗಿ ಯಕ್ಷಗಾನ ಕ್ಷೇತ್ರವನ್ನು ಆಯ್ದುಕೊಂಡರು.

ಕೀರ್ತಿಶೇಷ ಭಾಗವತರಾಗಿರುವ ದಿ. ದಾಮೋದರ ಮಂಡೆಚ್ಚರ ಅಸಕ್ತಿಯ ಮೇರೆಗೆ ಕರ್ನಾಟಕ ಮೇಳವನ್ನು ಸೇರಿದ ಪ್ರಭಾಕರ ಗೋರೆಯವರು - 28ವರ್ಷಗಳ ತನಕ ಅದೇ ಮೇಳದಲ್ಲಿ ತಿರುಗಾಟವನ್ನು ಮಾಡಿ

ಕೀರ್ತಿವಂತರಾದರು. ಮುಂದೆ ಮಂಗಳದೇವಿ ಮೇಳದಲ್ಲಿ 5ವರ್ಷಗಳ ತಿರುಗಾಟವನ್ನು ನಡೆಸಿದ ಇವರು ಎಡನೀರು ಮೇಳವನ್ನು ಸೇರಿದರು. ಈಗಾಗಲೆ 5ವರ್ಷಗಳ ತಿರುಗಾಟವನ್ನು ಎಡನೀರು ಮೇಳದಲ್ಲಿ ಪೂರೈಸಿದ್ದಾರೆ.

ಶ್ರೀಮತಿ ಪ್ರತಿಭಾ ಗೋರೆ ಇವ ರ ಸಹಧರ್ಮಿಣಿಯಾಗಿದ್ದು, ನಾಗಾರಾಜ (ಪುರೋಹಿತರು), ಪುಷ್ಪರಾಜ ಗೋರೆ (ಮೆಕೋಟ್ರಾನಿಕ್ಸ್ ಇಂಜಿನಿಯರಿಂಗ್ ಡಿಪ್ಲೊಮೊ) . ಎಂಬ ಈರ್ವರು ಮಕ್ಕಳಿದ್ದಾರೆ. ಇವರ ಕಲಾ ಸಾಧನೆಯನ್ನು ಗುರುತಿಸಿರುವ ಎಡನೀರು ಮಠ ಹಾಗೂ ಕಾರ್ಕಳ ಬಜಗೋಳಿಯ ಅಭಿಮಾನಿಗಳು ಗೌರವಿಸಿ ಸಂಮಾನಿಸಿದ್ದಾರೆ.



## ಪ್ರಜ್ವಲ್ ಕುಮಾರ್ ಶೆಟ್ಟಿ

“ಶಕ್ತಿನಗರ ಮನೆ, ಗುರುವಾಯನಕೆರೆ ಅಂಚೆ

ಕುವೆಟ್ಟು ಗ್ರಾಮ, ಬೆಳ್ತಂಗಡಿ ತಾಲೂಕು -574217

(03) 9972673161


ಪುಂಡು ವೇಷ, ರಾಜವೇಷ, ನಾಟಾಕೀಯ ವೇಷ, ಬಣ್ಣದ ವೇಷ ಮತ್ತು ಹಾಸ್ಯ ವೇಷಗಳು ಸೇರಿದಂತೆ ಎಲ್ಲಾ ಬಗೆಯ ಪುರುಷ ಪಾತ್ರಗಳನ್ನು ನಿರ್ವಹಿಸುತ್ತಾ ಮನ್ನಣೆಯನ್ನು ಪಡೆದಿರುವ ಶ್ರೀ ಪ್ರಜ್ವಲ್ ಕುಮಾರ್ ಶೆಟ್ಟಿ ಇವರು ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.

ದಿನಾಂಕ 14-8-1985ರಲ್ಲಿ ಬೇಬಿ ಶೆಟ್ಟಿ ಮತ್ತು ಸಂಪಾವತಿ ಶೆಡ್ತಿಯ ಸುಪುತ್ರರಾಗಿ ಮೂಡಿಗೆರೆಯಲ್ಲಿ ಹುಟ್ಟಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಬಾಲ್ಯದಿಂದಲೇ ಯಕ್ಷಗಾನ ಕಲೆಯ ಮೇಲೆ ಆಕರ್ಷಿತರಾದ ಇವರಿಗೆ ಬಂಧುಗಳ ಕಲಾಸಾಧನೆಯು ಬೆಳವಣಿಗೆಗೆ ಉತ್ತೇಜನವನ್ನು ನೀಡಿತ್ತು.

ಹಿರಿಯ ಕಲಾವಿದರಾದ ಅರುವ ಕೊರಗಪ್ಪ ಶೆಟ್ಟಿ ಹಾಗೂ ಗೆರುಕಟ್ಟೆ ಗಂಗಯ್ಯ ಶೆಟ್ಟಿಯವರು - ಮಾವ ಹಾಗೂ ದೊಡ್ಡಪ್ಪರಾಗಿದ್ದಾರೆ. ಇನ್ನೋರ್ವ ಕಲಾವಿದ ಕಾವಳಕಟ್ಟೆ ದಿನೇಶ್ ಶೆಟ್ಟಿ ಬಾವನಾಗಿದ್ದಾರೆ. ಹೀಗಾಗಿ ತಾನೂ ಕಲಾ ಸಾಧಕನಾಗಬೇಕೆಂಬ ಹಂಬಲದಿಂದ ತಾರನಾಥ ವರ್ಕಾಡಿ ಹಾಗೂ ದಿವಾಣ ಶಿವಶಂಕರ ಭಟ್ಟರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಪ್ರವೀಣರಾದರು.

11ನೇ ವರ್ಷದಿಂದಲೇ ಮುಖಕ್ಕೆ ಬಣ್ಣ ಹಚ್ಚಲಾರಂಭಿಸಿದ ಇವರು ಧರ್ಮಸ್ಥಳ ಮೇಳ 4 ವರ್ಷ, ಕಟೀಲು ಮೇಳ - 1 ವರ್ಷ, ಕುಂಟಾರು ಮೇಳ- 2 ವರ್ಷ, ಎಡನೀರು ಮೇಳ 2- ವರ್ಷ ಹಾಗೂ ಹೊಸನಗರ ಮೇಳದಲ್ಲಿ 4 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಶುಂಭ, ಸಾಲ್ವ, ರಾವಣ, ಭೀಮ, ದುಶ್ಯಾಸನ, ಬೇಹಿನಚರ, ಕೇಳುಪಂಡಿತ, ದೇವೇಂದ್ರ, ಅರ್ಜುನ, ವಿದ್ಯುನ್ಮಾಲಿ ಮೊದಲಾದ ಪಾತ್ರಗಳನ್ನು ನಿರ್ವಹಿಸಿರುವ ಇವರು ಪ್ರತ್ಯುತ್ಪನ್ನವಾದ ಮಾತುಗಳನ್ನಾಡಿ ಪ್ರೇಕ್ಷಕರ ಮೆಚ್ಚುಗೆಗೆ ಕಾರಣರಾಗಿದ್ದಾರೆ.



## ಪ್ರಸಾದ ಭಟ್ ಬಲಿಪ

ನೂಯಿ ಮನೆ,

ಅಂಚೆ: ಮಾರೂರು (ಗ್ರಾಮ), ವಯಾ ಮೂಡಬಿದ್ರೆ,

ಮಂಗಳೂರು ತಾಲೂಕು - 574227

(ಮೊಬೈಲ್) 9611649196

ಬಲಿಪ ಮನೆತನದ ಶೈಲಿ ಮತ್ತು ಸಂಪ್ರದಾಯವನ್ನು ವಿಸ್ತರಿಸಿ ಮೆರೆಸುತ್ತಿರುವ ಶ್ರೀ ಬಲಿಪ ಪ್ರಸಾದ ಭಟ್ ಇವರು ಪ್ರಸ್ತುತ ಕಟೀಲು ಮೇಳದಲ್ಲಿ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ನಾಡಿನಾದ್ಯಂತ ಪ್ರಸಿದ್ಧರಾಗಿರುವ ಬಲಿಪ ನಾರಾಯಣ ಭಾಗವತ ಮತ್ತು ಜಯಲಕ್ಷ್ಮೀ ದಂಪತಿಯ ಸುಪುತ್ರರಾಗಿ ದಿನಾಂಕ 14-4-1976ರಂದು ಮಾರೂರಿನ ನೂಯಿ ಮನೆಯಲ್ಲಿ ಹುಟ್ಟಿದರು. ತಂದೆ, ಅಜ್ಜ, ಮುತ್ತಜ್ಜ ಹೀಗೆ ಮನೆತನದ ಹಿರಿಯರೆಲ್ಲ ಯಕ್ಷಗಾನದ ಸಾಧಕರಾಗಿದ್ದುದರಿಂದ ವಂಶ ಪಾರಂಪರ್ಯದ ಕಲಾ ಪ್ರತಿಭೆ ಇವರಿಗೂ ಬಂದಿದೆ. ತಂದೆಯವರೇ ಗುರುಗಳಾಗಿದ್ದು ಅವರ ಪ್ರೇರಣೆ ಮತ್ತು ಮಾರ್ಗದರ್ಶನದಲ್ಲಿ ಪ್ರಸಂಗದ ಅನುಭವವನ್ನು ಸಂಪಾದಿಸಿರುವರು.

ಕಟೀಲು ಮೇಳವೊಂದರಲ್ಲೇ ಹದಿನೇಳು ವರ್ಷಗಳ ತಿರುಗಾಟವನ್ನು ನಡೆಸಿರುವ ಬಲಿಪ ಪ್ರಸಾದ ಭಾಗವತರು 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವರು. ಶ್ರೀಮತಿ ದುರ್ಗಾದೇವಿ ಎಂಬವರನ್ನು ವರಿಸಿ ಅರ್ಪಣ (7ನೇ ತರಗತಿ) ಎಂಬ ಸುಪುತ್ರಿಯನ್ನು ಪಡೆದಿರುವ ಇವರ ಕಲಾ ಸೇವೆಯು 16ನೇ ವಯಸ್ಸಿನಿಂದಲೇ ಆರಂಭವಾಗಿದೆ.



# ಪುರುಷೋತ್ತಮ ಭಟ್ ಕಡಂದೇಲು

ದೇವರ ಗುಡ್ಡೆ, ಬಡಗ ಎಕ್ಕಾರು ಗ್ರಾಮ

ಮಂಗಳೂರು ತಾಲೂಕು

ಮನೆ ದೂರವಾಣಿ: 0824-2200909

ಸ್ತ್ರೀ ಪಾತ್ರದ ಮುಖೇನ ತೆಂಕುತಿಟ್ಟಿನ ಯಕ್ಷಗಾನದಲ್ಲಿ ವಿಶಿಷ್ಟ ಶೈಲಿಯನ್ನು ಮೆರೆಸಿದ ಕಡಂದೇಲು ಪುರುಷೋತ್ತಮ ಭಟ್ಟರು ಉತ್ತಮ ಕಲಾ ಸಾಧಕರಾಗಿ ಜನ ಮನ್ನಣೆಗೆ ಪಾತ್ರರಾಗಿದ್ದಾರೆ. ಇವರ ಶ್ರೀದೇವಿ, ಕೈಕೇಯಿ ಮೊದಲಾದ ಪಾತ್ರಗಳು ಅನುಪಮ ಮಾದರಿಯ ಪಾತ್ರಗಳಾಗಿ ಪ್ರಶಂಸೆಗೆ ಪಾತ್ರವಾಗಿವೆ.

ವೆಂಕಟರಮಣ ಭಟ್ ಹಾಗೂ ಭಾಗೀರಥಿ ದಂಪತಿಯ ಸುಪುತ್ರರಾಗಿ ಪುತ್ತೂರು ತಾಲೂಕಿನ ಪಾಳಾಜೆ ಗ್ರಾಮದ ಕಡಂದೇಲು ಎಂಬಲ್ಲಿ ಹುಟ್ಟಿದರು. ಇವರ ಹುಟ್ಟಿದ ದಿನಾಂಕ 19-10-1917 ಪ್ರಾಥಮಿಕ ಹಂತದ ಶಾಲಾ ವಿದ್ಯಾಭ್ಯಾಸವನ್ನು ಪೂರೈಸಿದ ಇವರು ಸಂಸ್ಕೃತ ಹಾಗೂ ವೇದಪಾಠದ ಅಭ್ಯಾಸದೊಂದಿಗೆ ಬಾಲ್ಯದಲ್ಲೇ ಸಾಹಿತ್ಯದಲ್ಲಿ ಪ್ರೌಡಿಮೆಯನ್ನು ಸಾಧಿಸಿದರು. ಕಾವು ಶೀನಪಯ್ಯನವರ ಪ್ರೇರಣೆಯಿಂದ ಮತ್ತು ಕಲಾವಿದ ಗಣಪತಿ ಭಟ್ ಎಂಬವರ ಮಾರ್ಗದರ್ಶನದಲ್ಲಿ ಯಕ್ಷಗಾನ ಕಲಾವಿದರಾಗಿ ಪುರುಷೋತ್ತಮ ಭಟ್ಟರು ಬೆಳೆದರು.

ಬಾಲ್ಯದಲ್ಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾದ ಇವರು ಮೂಲ್ಕಿ ಮೇಳ ಕೊರೊಕ್ಕೋಡು ಮೇಳ – 1 ವರ್ಷ, ಕೂಡ್ಲು ಮೇಳ - 1 ವರ್ಷ, ಕಟೀಲು ಮೇಳ 18 ವರ್ಷ, ಇರಾಮೇಳ - 6 ವರ್ಷ ಹೀಗೆ ಮೇಳ ತಿರುಗಾಟವನ್ನು ಮಾಡಿ ನಿವೃತ್ತರಾಗಿದ್ದಾರೆ. ಅಂಬೆ, ಚಿತ್ರಾಂಗದೆ, ದಮಯಂತಿ, ಶಕುಂತಲೆ ಮೊದಲಾದ ಪಾತ್ರಗಳನ್ನು ಮಾಡಿರುವ ಇವರು ಕಟೀಲು ಮೇಳದಲ್ಲಿ ಶ್ರೀದೇವಿಯ ಪಾತ್ರವನ್ನು ಮಾಡುವುದರ ಮುಖೇನ ಹೆಚ್ಚಿನ ಜನಮನ್ನಣೆಗೆ ಕಾರಣರಾದರು.

ವಿಮರ್ಶಾತ್ಮಕ ನೆಲೆಯಿಂದ ಪಾತ್ರ ನಿರ್ವಹಣೆಯನ್ನು ಮಾಡುತ್ತಿದ್ದ ಪುರುಷೋತ್ತಮ ಭಟ್ಟರು ಆರಾಧನೆಯ ಮನಸ್ಸಿನಿಂದ ಕಲಾ ಸೇವೆಯನ್ನು ಮಾಡಿದ್ದರು. ವೃದ್ಧಾಪ್ಯದ ಹಂತದಲ್ಲೂ ಯಕ್ಷಗಾನದ ಆಟ ಹಾಗೂ ಕೂಟಗಳನ್ನು ನೋಡುವ ಹವ್ಯಾಸ ಇವರಲ್ಲಿದೆ. ಪ್ರಸಂಗ ಜ್ಞಾನ, ಪುರಾಣ ಜ್ಞಾನ ಮತ್ತು ರಂಗತಂತ್ರದ ಅನುಭವವನ್ನು ಪಡೆದಿರುವ ಇವರು ಸಮರ್ಥ ಮಾರ್ಗದರ್ಶಕರಾಗಿದ್ದಾರೆ.

ಕುಮದಾ ಎಂಬವರನ್ನು ವರಿಸಿರುವ ಇವರು ಶ್ರೀಪತಿ, ಮಾಲತಿ, ಶ್ರೀಹರಿ (ಬ್ಯಾಂಕ್ ಉದ್ಯೋಗಿ), ವೆಂಕಟರಮಣ ಭಟ್ (ಅಮೇರಿಕಾದಲ್ಲಿ ಉದ್ಯೋಗಿ), ಶ್ರೀಪಾದ ಭಟ್ (ಗೋವದಲ್ಲಿ ಪ್ರೋಫೆಸರ್) ಎಂಬ ಐವರು ಮಕ್ಕಳನ್ನು ಪಡೆದಿದ್ದಾರೆ.

ತೆಂಕುತಿಟ್ಟಿನ ಸ್ತ್ರೀಪಾತ್ರಧಾರಿ ಎಂದೆನಿಸಿರುವ ಇವರ ಸಾಧನೆಗೆ ಪ್ರತಿಫಲವಾಗಿ 45ಕ್ಕೂ ಮಿಕ್ಕಿ ಸಂಮಾನಗಳು ಸಂದಿವೆ. ದೆಹಲಿ, ಉಡುಪಿ ಕಲಾರಂಗ, ಕೋಡಪದವು, ಕಟೀಲು ಮುಂತಾದ ಕಡೆಗಳಿಂದ ಪ್ರಶಸ್ತಿಗಳು ಸಂದಿವೆ. ಶ್ರೀ ಕೃಷ್ಣ ಯಕ್ಷ ಸಭಾ, ಹವ್ಯಾಸ ಬಳಗ ಕದ್ರಿ ಇತ್ಯಾದಿ ಸಂಸ್ಥೆಗಳು ಇವರನ್ನು ಸಂಮಾನಿಸಿವೆ.



## ಪುಂಡರೀಕಾಕ್ಷ ಉಪಾಧ್ಯಾಯ

“ಸುರಭಿ” ಮನೆ, ಪುತ್ತೂರು ಗ್ರಾಮ, ಅಂಚೆ

ಉಡುಪಿ ತಾಲೂಕು ಮತ್ತು ಜಿಲ್ಲೆ

ಮೊಬೈಲ್: 9449143975

ತುಳು ಮತ್ತು ಕನ್ನಡ ಭಾಷೆಯ ಪ್ರಸಂಗಗಳಲ್ಲಿ ಸ್ತ್ರೀ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುವುದರ ಮೂಲಕ ಖ್ಯಾತವಾಗಿರುವ ಶ್ರೀ ಪುಂಡರೀಕಾಕ್ಷ ಉಪಾಧ್ಯಾಯರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೃಷ್ಣ ಉಪಾಧ್ಯಾಯ ಮತ್ತು ಭಾರತಿ ದಂಪತಿಯ ಪುತ್ರರಾಗಿ 08/02/1942ರಲ್ಲಿ ಕಾಸರಗೋಡಿನ ವೈನಾಡಿನಲ್ಲಿ ಇವರು ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 15ನೇ ವರ್ಷದಿಂದಲೇ ಯಕ್ಷಗಾನದ ಕಲಾಕ್ಷೇತ್ರವನ್ನು ಪ್ರವೇಶಿಸಿದ್ದಾರೆ.

ಟಿ. ಕಾಂತಪ್ಪ ಮಾಸ್ತರ್ ಮತ್ತು ಜಿ. ಜಯಂತ ಕುಮಾರ್ ತೋನ್ಸೆ ಇವರ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ಇವರಲ್ಲೇ ನಾಟ್ಯಾಭ್ಯಾಸ ರಂಗದ ಅನುಭವವನ್ನು ಸಂಪಾದಿಸಿದ ಪುಂಡರೀಕಾಕ್ಷ ಉಪಾಧ್ಯಾಯರು ತೆಂಕು ಮತ್ತು ಬಡಗು ತಿಟ್ಟಿನ ತಿರುಗಾಟವನ್ನು ಮಾಡಿದ ಕಲಾವಿದರಾಗಿದ್ದಾರೆ.

ಸಾಲಿಗ್ರಾಮ-3 ವರ್ಷ, ಇಡಗುಂಜಿ ಮೇಳ-3 ವರ್ಷ, ಕರ್ನಾಟಕ ಮೇಳ-13 ವರ್ಷ, ಕಟೀಲು ಮೇಳ-21 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ. ಕರ್ನಾಟಕ ಮೇಳದಲ್ಲಿ ತುಳು ಪ್ರಸಂಗಗಳಲ್ಲಿ ನಾಯಕಿ ಪಾತ್ರಗಳನ್ನು ಮಾಡಿ ಮನ್ನಣೆಗೆ ಒಳಗಾಗಿದ್ದ ಇವರು ಕಟೀಲು ಮೇಳದಲ್ಲಿ ದೇವಿಮಹಾತ್ಮೆಯ ಶ್ರೀ ದೇವಿಯಾಗಿ ಪಾತ್ರ ನಿರ್ವಹಣೆ ಮಾಡಿದಾಗ ಪ್ರೇಕ್ಷಕರು ಭಕ್ತಿ ಭಾವುಕರಾಗಿ ನೋಡುವಂತೆ ಅಭಿನಯವನ್ನು ತೋರಿಸುವ ಚಾಕಚಕ್ಯತೆ ಇವರಲ್ಲಿದೆ.

ಶ್ರೀಮತಿ ಶಶಿಕಲಾ ಎಂಬವರನ್ನು ವರಿಸಿರುವ ಇವರು ಉದಯ ಕುಮಾರ್ (ಪೈಂಟರ್), ವಿಜಯ ಕುಮಾರ್ (ಆಫೀಸ್ ಉದ್ಯೋಗಿ) ಮತ್ತು ರೇಖಾ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ರಂಗ ಮಾಹಿತಿ, ಪಾತ್ರದ ಮಾಹಿತಿಯನ್ನು ಹಲವು ಮಂದಿ ಸಹಕಲಾವಿದರಿಗೆ ನೀಡಿ ಪ್ರದರ್ಶನ ಯಶಸ್ವಿಗೆ ಕಾರಣರಾಗಿರುವರು. ಇವರು ಕಲಾಪ್ರತಿಭೆಗೆ ಪೂರಕವಾಗಿ ಇರಾ, ಕಲ್ಲಾಡಿ ಪ್ರತಿಷ್ಠಾನ, ಮುದ್ರಾಡಿ, ಮಂಗಳೂರು ಕೃಷ್ಣ ಸಭಾ, ಉಡುಪಿ ಕೃಷ್ಣ ಮಠ, ಮುಂಬಯಿ, ಬೆಂಗಳೂರು ಮುಂತಾದೆಡೆಯಲ್ಲಿ . ಸಂಮಾನ ಪುರಸ್ಕಾರಗಳು ಸಂದಿವೆ.



## ಪುರುಷೋತ್ತಮ ಪೂಂಜ ಬೊಟ್ಟಿಗೆರೆ

“ಅಂಬುರುಹು, ಮಂಜನಾಡಿ ಗ್ರಾಮ ಅಂಚೆ : ಅಸೈಗೋಳಿ,

ಮಂಗಳೂರು ತಾಲೂಕು-574199

ಮೊಬೈಲ್: 9481320864/94491043329

ಶ್ರೀ ಕಟೀಲು ಮೇಳದ ಮುಖ್ಯ ಭಾಗವತರಾಗಿ ತಿರುಗಟವನ್ನು ಮಾಡುತ್ತಿರುವ ಶ್ರೀ ಬೊಟ್ಟಿಗೆರೆ ಪುರುಷೋತ್ತಮ ಪೂಂಜರು ಯಕ್ಷಗಾನದ ಸರ್ವಾಂಗಗಳ ಜ್ಞಾನ ಸಂಪನ್ನರಾಗಿರುವ ಕಲಾವಿದರಾಗಿದ್ದಾರೆ.

21-6-1953 ರಲ್ಲಿ ತ್ಯಾಂಪಣ್ಣ ಪೂಂಜ ಮತ್ತು ಜಲಜಾ ದಂಪತಿಯ ಸುಪುತ್ರರಾಗಿ ಇವರು ಮಂಜನಾಡಿಯಲ್ಲಿ ಹುಟ್ಟಿದ್ದಾರೆ. ಬಿ.ಎಸ್ಸಿ ಪದವೀಧರರಾಗಿರುವ ಇವರು ಯಕ್ಷಗಾನ ಕಲಾಪ್ರಿಯರಾಗಿದ್ದು ಶಾಲಾ ಅಧ್ಯಾಪಕರ ಪ್ರೋತ್ಸಾಹದ ಮೇರೆಗೆ ಆರನೇ ತರಗತಿಯಿಂದಲೇ ವೇಷ ಹಾಕುತ್ತಾ ಬೆಳೆದು ಬಂದರು.

ಆರಂಭದಲ್ಲಿ ಉಪ್ಪಳ ಭಗವತಿಮೇಳದಲ್ಲಿ ಒಂದ ವರ್ಷ ವೇಷಧಾರಿಯಾಗಿ ಕಲಾಸೇವೆ ಮಾಡಿದ ಇವರು ಉದ್ಯೋಗದ ನಿಮಿತ್ತ ಮುಂಬಯಿಗೆ ಹೋದವರು 3ವರ್ಷಗಳ ತನಕ ವೇಷಧಾರಿಯಾಗಿ ಪಾತ್ರ ನಿರ್ವಹಣೆ ಮಾಡಿದ್ದಾರೆ. ಆಮೇಲೆ ಭಾಗವತಿಕೆಯ ಬಗ್ಗೆ ಆಸಕ್ತರಾದ ಇವರು ಮುಂಬಯಿಯಲ್ಲಿ 4ವರ್ಷಗಳ ತನಕ ಭಾಗವತಿಕೆಯನ್ನು ಮಾಡಿದ್ದರು. ಅನಂತರ ಊರಿಗೆ ಮರಳಿದವರು ಪುತ್ತೂರು ಮೇಳ-2ವರ್ಷ, ಕರ್ನಾಟಕ ಮೇಳ-5ವರ್ಷ, ಮತ್ತು ಕಟೀಲು ಮೇಳದಲ್ಲಿ 19ವರ್ಷಗಳ ಸುಧೀರ್ಘ ಕಲಾಸೇವೆಯನ್ನು ಮಾಡುತ್ತಾ ಭಾಗವತರೆನಿಸಿದರು.

ಹಿಮ್ಮೇಳ ಮುಮ್ಮೇಳಗಳ ತರಬೇತಿಯನ್ನು ನೀಡುತ್ತಿರುವ ಇವ ರು ಉತ್ತಮ ನಿರ್ದೇಶಕರಾಗಿರುವರು. ಇಷ್ಟಲ್ಲದೆ ತುಳು ಮತ್ತು ಕನ್ನಡ ಭಾಷೆಯ ಪ್ರಸಂಗ ಕರ್ತರಾಗಿರುವ ಇವರು ಉಭಯಕುಲ ಬಿಲ್ಲೋಜ, ನಳಿನಾಕ್ಷನಂದನೆ, ಮಾನಿಷಾದ, ಕ್ಷಾತ್ರಮೇಧ, ರಾಜಾದ್ರುಪದ, ಕುಡಿಯನ ಕೊಂಬಿರೆಲ್, ಕುಡಿಯನ ಕಣ್, ಮೊದಲಾದ ಹಲವಾರು ಪ್ರಸಂಗಗಳನ್ನು ಬರೆದಿದ್ದಾರೆ.

ರಾಜವೇಷ, ಬಣ್ಣದ ವೇಷ, ಪುಂಡು ವೇಷ, ಸ್ತ್ರೀವೇಷಗಳನ್ನು ಮಾಡಿರುವ ಇವರು ಅತಿಕಾಯ, ರಾಮ, ಲಕ್ಷ್ಮಣ ಇತ್ಯಾದಿ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಸಾಹಿತ್ಯ, ಸಂಗೀತ, ಕ್ರೀಡೆಗಳ ಆಸಕ್ತಿ ಇರುವ ಇವರು ಶ್ರೀಮತಿ ಶೋಭ ಎಂಬವರನ್ನು ವರಿಸಿ ಜೀವಿತೇಶ, ಪರೀಕ್ಷಿತ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. TCD'J. ಮಂದಿ ಶಿಷ್ಯರನ್ನು ಹೊಂದಿರುವ ಇವರಿಗೆ ಮುಂಬಯಿ, ಮಂಗಳೂರು, ಕಲಾಗಂಗೋತ್ರಿ ಉಚ್ಚಿಲ್ಲ. ಇಲ್ಲೆಲ್ಲಾ ಗೌರವ ಸಂಮಾನಗಳು ಸಂದಿವೆ. ಮುಂಬಯಿ ಅಭಿಮಾನಿ ಬಳಗದಿಂದ ನಿಧಿ ಸಮರ್ಪಣೆಯಾಗಿದೆ. ದುಬಯಿ ಯಕ್ಷಮಿತ್ರರಿಂದ ಕೂಡಾ ಸಂಯಾನವಾಗಿದೆ.



## ಬಾಲಕೃಷ್ಣ ಕಾಟುಕುಕ್ಕೆ

"ಕಾಟುಕುಕ್ಕೆ ಮನೆ" (ಕೊಳ್ತಾಜೆ ಮನೆ)

ಅಂಚೆ ಮತ್ತು ಗ್ರಾಮ ಕಾಟುಕುಕ್ಕೆ

ಕಾಸರಗೋಡು ತಾಲೂಕು· 671552

ಚೆಂಡೆ-ಮದ್ದಳೆ ನುಡಿತ-ಬಡಿತಗಳಲ್ಲಿ ಸಾಧನೆಯನ್ನು ಮಾಡಿ ಬೆಳೆದಿರುವ ಶ್ರೀ ಬಾಲಕೃಷ್ಣ. ಕಾಟುಕುಕ್ಕೆಯವರು ಪ್ರಸ್ತುತ ಕೊಲ್ಲಂಗಾನ ಮೇಳದ ಕಲಾವಿದರಾಗಿ ಕಲಾಸೇವೆ ಮಾಡುತ್ತಿದ್ದಾರೆ.

ಈಶ್ವರ ನಾಯ್ಕ ಮತ್ತು ದೇವಕಿ ದಂಪತಿಯ * ಸುಪುತ್ರರಾಗಿ ಕಾಟುಕುಕ್ಕೆಯಲ್ಲಿ ಜನಿಸಿದ ಬಾಲಕೃಷ್ಣರಿಗೆ 43 ವರ್ಷಗಳು ಆಗಿವೆ. 9ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 15ನೇ ವರ್ಷದಿಂದಲೇ ಯಕ್ಷಗಾನದ

ಅಭಿರುಚಿಯನ್ನು ಬೆಳೆಸಿಕೊಂಡಿದ್ದಾರೆ. ಇವರ ಕಲಾ ಜೀವನದ ಬೆಳವಣಿಗೆಗೆ ಬಣ್ಣದ ವೇಷಧಾರಿ ಕುಂಞರಾಮ ಮಣಿಯಾಣಿಯವರ ಪ್ರೋತ್ಸಾಹ ಮತ್ತು ಉತ್ತೇಜನವು ದೊರೆತಿತ್ತು.

ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡಿದ್ದ ಕೊರಗಪ್ಪ ನಾಯ್ಕರು ಇವರ ಗುರುಗಳಾಗಿದ್ದಾರೆ. ಸುಬ್ರಹ್ಮಣ್ಯ ಮೇಳ – 2 ವರ್ಷ, ಪುತ್ತೂರು ಮೇಳ - - 2 ವರ್ಷ, ಬಪ್ಪನಾಡು ಮೇಳ 3 ವರ್ಷ, ನೆಟ್ಟಣಿಗೆ ಮೇಳ - 1 ವರ್ಷ, ಮಂಗಳೂರು ಮಹಾಲಿಂಗೇಶ್ವರ ಮೇಳ - 1 ವರ್ಷ, ಅರುವ ಅಳದಂಗಡಿ ಮೇಳ - 1 ವರ್ಷ, ಕದ್ರಿ ಮೇಳ ವರ್ಷ, ಕೊಲ್ಲಂಗಾನ ಮೇಳ-2 12 ವರ್ಷ. ಹೀಗೆ . ತಿರುಗಾಟದ ಅನುಭವವನ್ನು ಹೊಂದಿದ್ದಾರೆ. ಇತ್ತೀಚೆಗೆ ಕೊಲ್ಲಂಗಾನ ಮೇಳದಲ್ಲಿ ಹಿಮ್ಮೇಳ ವಾದಕರಾಗಿ ಮತ್ತು ಮೇಳದ ಸಂಚಾಲಕರಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ.

ಶ್ರೀಮತಿ ಸರಸ್ವತಿ ಎಂಬವರನ್ನು ವರಿಸಿರುವ ಇವರಿಗೆ ಉಡುಪಿ ಮೊದಲಾದೆಡೆಯಲ್ಲಿ ಸಂಮಾನ ಗೌರವ ಪುರಸ್ಕಾರಗಳು ಸಂದಿವೆ.



ಬಾಬು ಕುಲಾಲ್

*ಗಾವಳಿ ಮನೆ , ಹಳ್ನಾಡಿ ವರ್ಕಾಡಿ ಗ್ರಾಮ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಸ್ತ್ರೀ ಪಾತ್ರಗಳನ್ನು ಮಾಡುತ್ತಾ ಕಲಾಸೇವೆಯಲ್ಲಿ ತಿರುಗಾಟವನ್ನು ನಡೆಸುತಿರುವ ಶ್ರೀ ಬಾಬು ಕುಲಾಲರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ಜನ ಮನ್ನಣೆಗೆ ಒಳಗಾಗಿದ್ದಾರೆ.

ವೆಂಕಟ ಕುಲಾಲ್ ಮತ್ತು ಶೂರು ಕುಲಾಲ್ ದಂಪತಿಯ ಸುಪುತ್ರರಾಗಿರುವ ಇವರು ಗಾವಳಿ ಮನೆಯಲ್ಲಿ ಹುಟ್ಟಿರುವರು. 58 ವರ್ಷಗಳ ವಯೋಮಾನರಾಗಿರುವ ಬಾಬು ಕುಲಾಲರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಬಾಲ್ಯದಿಂದಲೇ ಯಕ್ಷಗಾನದ ಆಕರ್ಷಣೆಗೆ ಒಳಗಾಗಿದ್ದ ಇವರು ತೆಂಕು ಮತ್ತು ಬಡಗು ತಿಟ್ಟುಗಳ ತಿರುಗಾಟವನ್ನು ನಡೆಸಿರುವ ಕಲಾವಿದರಾಗಿದ್ದಾರೆ.

ನಾರಾಯಣ ಉಳ್ಳೂರು (ಬಡಗು) ಬಲಿಪ ನಾರಾಯಣ ಭಾಗವತರು (ತೆಂಕು) ಇವರಿಂದ ರಂಗಾನುಭವವನ್ನು ಪಡೆದಿರುವ ಶ್ರೀಯುತರು ಅಮೃತೇಶ್ವರಿ ಮೇಳ-7 ವರ್ಷ, ಮಂದರ್ತಿ ಮೇಳ- 2 ವರ್ಷ,

ಸಾಲಿಗ್ರಾಮ ಮೇಳ-1 ವರ್ಷ, ಸೌಕೂರು ಮೇಳ 3 ವರ್ಷ, ಮಾರಣ ಕಟ್ಟೆ ಮೇಳ 3 ವರ್ಷ, ಕಮಲಶಿಲೆ ಮೇಳ 3 ವರ್ಷ, ಹಾಲಾಡಿ ಮೇಳ - 3 ವರ್ಷ, ಕಟೀಲು ಮೇಳ - 28 ವರ್ಷ ಹೀಗೆ ಮೇಳ ತಿರುಗಾಟವನ್ನು ನಡೆಸಿದ್ದಾರೆ.

ಸ್ತ್ರೀ ವೇಷವನ್ನು ಮಾಡುವ ಇವರು ಪುಂಡು . ವೇಷ, ರಾಜ ವೇಷ ಮತ್ತು ಪೋಷಕ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಮಾಲಿನಿ, ದೇವಿ, ದಮಯಂತಿ, ಸುದೇಷ್ಣ, ಸುಭದ್ರೆ, ಪಾರ್ವತಿ, ಈಶ್ವರ, ಬ್ರಹ್ಮ, ಕೃಷ್ಣ, ಧರ್ಮರಾಯ, ದೇವೇಂದ್ರ, ಅರ್ಜುನ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಕೃಷಿಕರಾಗಿರುವ ಇವರು ಲಕ್ಷ್ಮಿ ಎಂಬವರನ್ನು ವರಿಸಿ ಸುಶೀಲ, ಚಂದ್ರ, ರಾಘವೇಂದ್ರ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಕಟೀಲು ಮೇಳದ ಪ್ರದರ್ಶನದ ನಿಮಿತ್ತ ಕಿನ್ನಿಗೋಳಿಯಲ್ಲಿ ಸಂಮಾನಕ್ಕೆ ಒಳಗಾಗಿರುವ ಬಾಬು ಕುಲಾಲರು ಹಲವು ಮಂದಿ ಕಲಾಸಕ್ತರಿಗೆ ರಂಗ ಮಾಹಿತಿ, ಮಾರ್ಗದರ್ಶನ ನೀಡಿ ಪಾತ್ರ ನಿರ್ವಹಣೆ ಮಾಡುವಂತೆ ಪ್ರೇರಕರಾಗಿದ್ದಾರೆ.



**ಬಾಲಕೃಷ್ಣ ಶೆಟ್ಟಿ, ತಾರಿಯಡ್ಕ**

*"ತಾರಿಯಡ್ಕ ಮನೆ", ವಿಟ್ಲ ಪಡ್ನೂರು ಗ್ರಾಮ*
*ಕೊಡಂಗಾಯಿ ಅಂಚೆ,*
*ಬಂಟ್ವಾಳ ತಾಲೂಕು – 574243*
*(ಮೊಬೈಲ್) 9880117760*

ಪುಂಡು ವೇಷ ಮತ್ತು ರಾಜ ವೇಷಗಳ ಪೋಷಕ ಪಾತ್ರಗಳನ್ನು ಮಾಡುತ್ತಾ ಕಲಾ ಸೇವೆಯನ್ನು ನಡೆಸುತ್ತಿರುವ ಶ್ರೀ ಬಾಲಕೃಷ್ಣ ಶೆಟ್ಟಿ ತಾರಿಯಡ್ಕ ಇವರು ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೊರಗಪ್ಪ ಶೆಟ್ಟಿ ಮುತ್ತಕ್ಕ ದಂಪತಿಯ ಸುಪುತ್ರರಾಗಿ ದಿನಾಂಕ 1-9-1963ರಂದು ತಾರಿಯಡ್ಕ ಮನೆಯಲ್ಲಿ ಹುಟ್ಟಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತಾಸಕ್ತಿಯಿಂದ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿ ಪಾತ್ರ ನಿರ್ವಹಣೆಯನ್ನು ಮಾಡುತ್ತಾ ಇದ್ದಾರೆ.

ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಇವರು ಕಟೀಲು ಮೇಳವೊಂದರಲ್ಲೇ 27 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ದುರ್ಗಾಸುರ, , ಶುಂಭಾಸುರ, ಈಶ್ವರ ಮೊದಲಾದ ಪಾತ್ರಗಳನ್ನು ಮಾಡುವ ಇವರು ಅನಿವಾರ ಕಾರಣಗಳಲ್ಲಿ ಹೊಗಳಿಕೆ ಹಾಸ್ಯದ ಪಾತ್ರವನ್ನು ಕೂಡಾ ನಿರ್ವಹಿಸುತ್ತಾರೆ.

ಶ್ರೀಮತಿ ಪ್ರೇಮಲತಾ ಎಂಬವರನ್ನು ವರಿಸಿರುವ ಇವರು ಮನಿಶಾ (10ನೇ ತರಗತಿ), ಯತೀನ್ ಕುಮಾರ್ (8ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಬಾಬು ಕುಡ್ತಡ್ಕ

*ಬಜಾಲು ಗ್ರಾಮ*
*ಮಂಗಳೂರು ತಾಲೂಕು*
*ಮನೆ ದೂ.: 0824 2245128*

ವೇಷಧಾರಿಯಾಗಿ, ಸಂಘಟಕರಾಗಿ, ಪ್ರಸಂಗಕರ್ತರಾಗಿ ವಿಜೃಂಭಿಸಿ ಜನಮನ್ನಣೆಗೆ ಪಾತ್ರರಾದ ಶ್ರೀ ಬಿ.ಬಾಬು ಕುಡಡ್ಕ ಅವರು ಮೇಳ ತಿರುಗಾಟದಿಂದ ನಿವೃತ್ತ ಕಲಾವಿದರಾಗಿದ್ದಾರೆ.

ಶ್ರೀ ಕಿಂಞಣ್ಣ ಮೂಲ್ಯ ಹಾಗೂ ಶ್ರೀಮತಿ ಕಾವೇರಿ ದಂಪತಿಯ ಪ್ರಥಮ ಪುತ್ರರಾಗಿ ದಿನಾಂಕ 13/ 05/1944 ರಂದು ಬಜಾಲಿನಲ್ಲಿ ಜನಿಸಿದ ಬಾಬು ಕುಡಡ್ಕರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಯಕ್ಷಗಾನದ ನಾಟ್ಯಾಭ್ಯಾಸವನ್ನು ತಿಮ್ಮಪ್ಪ ಬೆಳ್ಳಾಡರಿಂದ ಅಭ್ಯಾಸ ಮಾಡಿದ ಇವರು, ಯಕ್ಷನಾಟ್ಯಾಚಾರ್ಯ ಕಾವು ಕಣ್ಣನವರ ಶಿಷ್ಯ ವೃತ್ತಿಯಲ್ಲಿ ಪ್ರತಿಭಾನ್ವಿತರಾಗಿ ಬೆಳೆದರು. ಅಧ್ಯಯನ ಶೀಲರಾಗಿರುವ ಇವರು ವೈದ್ಯ ಬಿ.ದಾಸಪ್ಪನವರಲ್ಲಿ ಅರ್ಥಗಾರಿಕೆಯ ಬಗ್ಗೆ ಮಾರ್ಗದರ್ಶನವನ್ನು ಪಡೆದಿದ್ದರು. ಮೇಳ ತಿರುಗಾಟದ ಸಂದರ್ಭದಲ್ಲಿ ಡಾ| ಶೇಣಿ ಗೋಪಾಲ ಕೃಷ್ಣ ಭಟ್ಟರಿಂದ ಹೆಚ್ಚಿನ ಪ್ರೋತ್ಸಾಕ್ಕೊಳಗಾಗಿ ಪ್ರಸಿದ್ಧಿಗೇರಿದರು.

ಕೂಡ್ಲುಮೇಳ- ವರ್ಷ, ಕುಂಬ್ಳೆಮೇಳ-ವರ್ಷ, ಸುರತ್ಕಲ್ ಮೇಳ-23ವರ್ಷ, ಸುಂಕದಕಟ್ಟೆಮೇಳ- 1ವ ರ್ಷ, ಕೊಲ್ಲೂರು ಮೇಳ -1ವರ್ಷ, ರಾಘವೇಂದ್ರಮೇಳ ಕಾಸರಗೋಡು-1ವರ್ಷ, ಕರ್ನಾಟಕಮೇಳ-1ವರ್ಷ, ಇರಾಮೇಳ-1ವರ್ಷ, ಕದ್ರಿಮೇಳ-2ವರ್ಷ, ಸುಂಕದಕಟ್ಟೆ ಮೇಳ-ವರ್ಷ ಹೀಗೆ ಮೇಳದಲ್ಲಿ ತಿರುಗಾಟವನ್ನು ಮಾಡಿದ್ದಾರೆ.

ಅನಿವಾರ ಕಾರಣದಿಂದ ಮೇಳ ತಿರುಗಾಟವನ್ನು ನಿಲ್ಲಿಸಿದ ಇವರು ಸ್ವಂತ ಮೇಳವಾಗಿ ಶ್ರೀ ಗುರು ರಾಘವೇಂದ್ರ ಕೃಪಾಪೋಷಿತ ಯಕ್ಷಗಾನ ಕಲಾಮಂಡಳಿಯನ್ನು ಸ್ಥಾಪಿಸಿ ಹತ್ತು ವರ್ಷಗಳ ಪರಂತರ ನಡೆಸಿಕೊಂಡು ಬಂದರು. ಇಷ್ಟಲ್ಲದೆ ಜನತಾ ಯಕ್ಷಗಾನ ಮಂಡಳಿಯನ್ನು ಮಂಗಳೂರು ವಿಠೋಭ ದೇವಸ್ಥಾನದ ಆಶ್ರಯದಲ್ಲಿ ನಡೆಸಿಕೊಂಡು ಬಂದು ಸೀಮಿತ ಅವಧಿಯ ಪ್ರದರ್ಶನಗಳನ್ನು ಆರಂಭಿಸಿ ಹಗಲಿನಲ್ಲೂ ನಡೆಸಿದರು. ಭಕ್ತ ಮುಚುಕುಂದ, ಶ್ರೀ ಕಾಳಿಕಾ ಮಹಾತ್ಮ ಮೊದಲಾದ 17 ಪ್ರಸಂಗಗಳನ್ನು ರಚಿಸಿದ್ದಾರೆ. ನತದೃಷ್ಟ ದುರ್ಯೋಧನ, ರಾಮಾಯಣ ಶತಕ ಎಂಬ ಎರಡು ಭಾಮಿನಿ ಕಾವ್ಯಖಂಡಗಳನ್ನು ರಚಿಸಿದ್ದಾರೆ.

ಕಂಸ, ಮಾಗಧ, ಜಲಂಧರ, ರಾವಣ, ದಾರಿಕಾಸುರ, ಹಿರಣ್ಯಾಕ್ಷ, ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿ ಮನ್ನಣೆಗೆ ಒಳಗಾಗಿರುವ ಶ್ರೀಯುತರು ಶನೈಶ್ಚರನ ಪಾತ್ರದಲ್ಲಿ ಹೆಚ್ಚು ವಿಜೃಂಭಿಸಿ ಸ್ವಂತಿಕೆಯನ್ನು ಮೆರೆದಿದ್ದಾರೆ. ಕಾಂತಾಬಾರೆ, ಕೋಟಿ ಮೊದಲಾದ ತುಳು ಪ್ರಸಂಗಗಳಲ್ಲೂ ಹಿರಿಮೆಯನ್ನು ಸಾಧಿಸಿದ್ದಾರೆ.

ಯಶೋವಂತಿ ಎಂಬವರನ್ನು ವರಿಸಿ ಪಸಾದ್ (ಪ್ರಬಂಧಕ ಹುದ್ದೆ), ರಾಘವೇಂದ್ರ (ಸೇನಾ ವಿಭಾಗದ ಹುದ್ದೆ) ಪ್ರತಿಭಾ (ಲೇಖಕಿ, ಪತ್ರಕರ್ತ ಹುದ್ದೆ) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ದೋಗ್ರ ಪೂಜಾರಿ ಪ್ರಶಸ್ತಿ, ಪಟ್ಲಾಜೆ ಪ್ರಶಸ್ತಿ ಮೊದಲಾದುವುಗಳಲ್ಲದೆ 30 ಕ್ಕೂ ಮಿಕ್ಕಿ ಸಂಮಾನಗಳು ಸಂದಿವೆ.



## ಬಾಲಕೃಷ್ಣ ಮಣಿಯಾಣಿ ಮವ್ವಾರು

*ಕೆ.ಕೆ. ಮೂಲೆಮನೆ, ಮವ್ವಾರು ಅಂಚೆ,*
*ಕುಂಬ್ಡಾಜೆ ಗ್ರಾಮ, ಕಾಸರಗೋಡು, ಕೇರಳ*
*ಮೊಬೈಲ್: 9947845158.*

ಹಾಸ್ಯ ಪಾತ್ರಗಳ ಮೂಲಕ ಜನಮನವನ್ನು ರಂಜಿಸಿ ಮನ್ನಣೆಗೆ ಪಾತ್ರರಾಗಿರುವ ಶ್ರೀ ಮವ್ವಾರು ಬಾಲಕೃಷ್ಣ ಮಣಿಯಾಣಿ ಇವರು ಪ್ರಸ್ತುತ ಶ್ರೀ ಎಡನೀರು ಯಕ್ಷಗಾನ ಮಂಡಳಿಯಲ್ಲಿ ಪಾತ್ರನಿರ್ವಹಣೆ ಮಾಡುತ್ತಿದ್ದಾರೆ.

ಕುಂಞರಾಮ ಮಣಿಯಾಣಿ ಮತ್ತು ನಾರಾಯಣಿ ದಂಪತಿಯ ಸುಪುತ್ರರಾಗಿ ನೀರ್ಬಾಲಿನಲ್ಲಿ ಹುಟ್ಟಿದ ಮಣಿಯಾಣಿಯವರಿಗೆ 46 ವರ್ಷಗಳಾಗಿವೆ. 7ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಲ್ಲೇ ಯಕ್ಷಗಾನ ದತ್ತ ಆಕರ್ಷಿತರಾಗಿದ್ದರು.

ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡಿದ್ದ ಅಪ್ಪಯ್ಯ ಮಣಿಯಾಣಿ ಇವರ ದೊಡ್ಡ ತಂದೆಯಾಗಿದ್ದು ಅವರ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ಮೂಲ ಪಾಠವನ್ನು ಅಭ್ಯಾಸ ಮಾಡಿದ್ದರು. ಆಮೇಲೆ ಧರ್ಮಸ್ಥಳದ ಲಲಿತಾಕಲಾ ಕೇಂದ್ರವನ್ನು ಸೇರಿದವರು ಕೆ. ಗೋವಿಂದ ಭಟ್ಟರಲ್ಲಿ ಹೆಚ್ಚಿನ ನಾಟ್ಯಾಭ್ಯಾಸ, ರಂಗಮಾಹಿತಿಯನ್ನು ತಿಳಿದುಕೊಂಡರು.

12ನೇ ವಯಸ್ಸಿನಿಂದಲೇ ರಂಗ ಪ್ರವೇಶ ಮಾಡಿದ ಇವರು ಕಟೀಲು ಮೇಳ-3 ವರ್ಷ, ಆದಿ ಸುಬ್ರಹ್ಮಣ್ಯ ಮೇಳ-4 ವರ್ಷ, ಪುತ್ತೂರು ಮೇಳ-3 ವರ್ಷ, ಕಾಂತಾವರ ಮೇಳ-3 ವರ್ಷ, ಕದ್ರಿ ಮೇಳ- 8 ವರ್ಷ, ಮಂಗಳಾದೇವಿ ಮೇಳ-7 ವರ್ಷ, ಮಧೂರು ಮೇಳ-1 ವರ್ಷ, ಎಡನೀರು ಮೇಳ-5 ವರ್ಷ ಹೀಗೆ 34 ವರ್ಷಗಳ ತಿರುಗಾಟವನ್ನು ಮಾಡಿರುವರು.

ಮಕರಂದ, ದಾರುಕ, ಪಯ್ಯ, ಮಂಥರೆ, ಕಾಶೀಮಾಣಿ, ಅಬ್ಬು, ಶೇಕು, ಬ್ರಹ್ಮ, ಮಾಲಿನಿ, ಶ್ರೀದೇವಿ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ. ಹಾಸ್ಯ ಪಾತ್ರಗಳೊಂದಿಗೆ ಸ್ತ್ರೀ ವೇಷ, ಪುಂಡುವೇಷ ಮತ್ತು ರಾಜ ವೇಷಗಳನ್ನು ಮಾಡಿದ ಅನುಭವ ಇವರಿಗಿದೆ.

ಶ್ರೀಮತಿ ಎಂಬವರನ್ನು ವರಿಸಿರುವ ಇವರು . ದಿನೇಶ್, ಅಭಿಷೇಕ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಚೆಂಡೆ-ಮದ್ದಳೆಗಳ ಬಾರಿಸುವಿಕೆಯಲ್ಲಿ ಆಸಕ್ತರಾಗಿರುವ ಇವರ ಸಾಧನೆಯನ್ನು ಗುರುತಿಸಿ ಕಾಸರಗೋಡು ಮಾರ್ಪನಡ್ಕದ ಅಭಿಮಾನಿಗಳು ಸಂಮಾನಿಸಿದ್ದಾರೆ. ಇಷ್ಟಲ್ಲದೆ ಕದ್ರಿ ಮೇಳದ ಸಂಮಾನ ಕೂಡ ಇವರಿಗೆ ದೊರಕಿದೆ.



ಮನೋಹರ ಕುಮಾರ್ ಡಿ.

"ಅಂಬಾಟ್ ಪರಂ",
ಕಣ್ಣಾಪುರಂ ಚೇಟ್ ಪುಳ, ತ್ರಿಶೂರ್ (ಕೇರಳ)
ಮನೆ ದೂರವಾಣಿ : 0487 : 236 2216
( ಮೊಬೈಲ್) : 9972724359

ಪುಂಡು ವೇಷ ಮತ್ತು ರಾಜವೇಷದ ಮುಖೇನ ಜನ ಮನ್ನಣೆ ಪಡೆದು, ತುಳು ಪ್ರಸಂಗದ ಖಳನಾಯಕನಾಗಿ, ಮೇಳದ ಯಜಮಾನರಾಗಿ ಕೀರ್ತಿವಂತರಾಗಿರುವ ಶ್ರೀ ಡಿ. ಮನೋಹರ ಕುಮಾರ್ ಇವರು ಪ್ರಸ್ತುತ ಮಂಗಳಾದೇವಿ ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.

ವೇಲಾಯುಧ ಮತ್ತು ತಂಗ ದಂಪತಿಯ ಸುಪುತ್ರರಾಗಿ, 17-11-1959 ರಂದು ತ್ರಿಶೂರಿನ ಅಂಬಾಟ್ ಪರಂನಲ್ಲಿ ಮನೋಹರ ಕುಮಾರರು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ತಂದೆಯ ಉದ್ಯೋಗ ನಿಮಿತ್ತ ಬಾಲ್ಯದಲ್ಲೇ ಧರ್ಮಸ್ಥಳಕ್ಕೆ ಬಂದಿದ್ದರು.

ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಯಕ್ಷಗಾನ ತರಬೇತಿಯು ನಡೆಯುತ್ತಿದ್ದುದ್ದನ್ನು ಕಂಡ ಮನೋಹರ ಕುಮಾರರು ತಾನು ಕೂಡಾ ಕಲಾಸಾಧಕನಾಗಿ ಬೆಳೆಯಬೇಕೆಂದು ಹಂಬಲಿಸಿದರು. ಮುಂದೆ ಪದ್ರೆಚಂದು ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದರು. ಹೆಚ್ಚಿನ ಅನುಭವಕ್ಕಾಗಿ ಮಾಣಂಗಾಯಿ ಕೃಷ್ಣ ಭಟ್ಟರಲ್ಲೂ ಕೂಡಾ ಇವರು ಅಭ್ಯಾಸ ಮಾಡಿದ್ದಾರೆ.

ಅಂಮ್ಲಾಡಿ ಮೇಳ - 1 ವರ್ಷ, ಸುರತ್ಕಲ್ಮೇಳ 4 ವರ್ಷ, ಗೀತಾಂಬಿಕ ಮಂಡಳಿ- 1ವರ್ಷ, ಕದ್ರಿ ಮೇಳ (ಕಲಾವಿದನಾಗಿ) 5 ವರ್ಷಕಾಂತಾವರ ಮೇಳ - 1 ವರ್ಷ, ಕುಂಬ್ಳೆ ಮೇಳ- 1 ವರ್ಷ, ನಂದಾವರ ಮೇಳ 1 ವರ್ಷ ಮಧೂರು ಮೇಳ

(ಸಹಯಜಮಾನಿಕೆ) -2 ವರ್ಷ, ಕದ್ರಿ ಮೇಳ (ಸ್ವಂತ ಯಜಮಾನಿಕೆ) - 13 ವರ್ಷ, ಮಂಗಳಾದೇವಿ ಮೇಳ - 2 ಮತ್ತು 4 ವರ್ಷ, ಎಡನೀರು ಮೇಳ - 1 ವರ್ಷ ಹೀಗೆ ತಿರುಗಾಟದ ಹಿನ್ನೆಲೆ ಇವರಿಗಿದೆ.

ವಾವರ, ಭಸ್ಮಾಸುರ, ಅಭಿಮನ್ಯು, ಕೌರವ, ಕಂಸ, ಚಂದುಗಿಡಿ ಪಾತ್ರಗಳು ಇವರಿಗೆ ಹೆಚ್ಚಿನ ಕೀರ್ತಿಯನ್ನು ತಂದಿತ್ತಿವೆ. ಇವರೇ ರಚಿಸಿರುವ ಗೆಜ್ಜೆದ ಪೂಜೆ ಪ್ರಸಂಗದ ನಾಗನ ಪಾತ್ರವನ್ನು ನಿರ್ವಹಿಸಿ, ಅಪ್ರತಿಮ ನಿರ್ವಹಣೆಯ ಖಳನಾಯಕನಾಗಿ ವಿಜೃಂಭಿಸಿ ಪ್ರೇಕ್ಷಕರನ್ನು ಬೆರಗುಗೊಳಿಸಿದ್ದಾರೆ.

ಮೇಳದ ಯಜಮಾನಿಕೆಯಲ್ಲಿ ಕಲಾವಿದರ ಬೆಳವಣಿಗೆಗೆ ಮಹತ್ವವನ್ನು ನೀಡಿರುವ ಇವರು, ಹಲವು ಮಂದಿ ಕಲಾವಿದರಿಗೆ ಸಂಮಾನ ಮಾಡಿ ಬಂಗಾರದ ಉಂಗುರವನ್ನು ನೀಡಿ ದಾಖಲೆ ನಿರ್ಮಿಸಿದ್ದಾರೆ. ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಸಂಸ್ಥೆಯ ಸ್ಥಾಪನೆ ಮಾಡಿದ್ದಾರೆ. ವಿನೂತನ ಪ್ರದರ್ಶನಕ್ಕಾಗಿ ವರ್ಷಂಪ್ರತಿ ಹೊಸ ಪ್ರಸಂಗಗಳನ್ನು ರಚಿಸುತ್ತಿದ್ದರು.

ಶ್ರೀಮತಿ ಸರಸ್ವತಿ ಎಂಬವರನ್ನು ವರಿಸಿರುವ ಇವರು ತೇಜಾಕ್ಷಿ, ತೇಜಸ್, ಮಹೇಶ್, ಕೃಪಾ, ಮನೀಶ್ ಎಂಬ ಮಕ್ಕಳನ್ನು ಪಡೆದಿದ್ದಾರೆ. ಮುಂಬಯಿ, ಮಸ್ಕತ್, ಬೆಂಗಳೂರು ಸೇರಿದಂತೆ ನಾಡಿನಾದ್ಯಂತ 200ಕ್ಕೂ ಮಿಕ್ಕಿ ಸಂಮಾನಗಳು ಇವರಿಗೆ ಸಂದಿವೆ.



ಮಹೇಶ ಮಣಿಯಾಣಿ

"ಕುದ್ಪಾಜೆ ಮನೆ"
ಅಂಚೆ ಬೊಳ್ಳಾಜೆ, ನೆಲ್ಲೂರು ಕೆಂಬ್ರಾಜೆ ಗ್ರಾಮ
ಸುಳ್ಯ ತಾಲೂಕು – 574248
(ಮೊಬೈಲ್) 9448868798


ಆರಂಭದಲ್ಲಿ ಪುಂಡುವೇಷ, ಸ್ತ್ರೀವೇಷ, ಕಿರೀಟ ವೇಷ ಮತ್ತು ಬಣ್ಣದ ವೇಷಗಳನ್ನು ಮಾಡುತ್ತಾ ಬೆಳೆದು ಹಾಸ್ಯ ಪಾತ್ರದ ಮುಖೇನ ಗಟ್ಟಿಯಾದ ನೆಲೆಗಟ್ಟನ್ನು ಕಂಡ ಮಹೇಶ ಮಣಿಯಾಣಿಯವರು ಧರ್ಮಸ್ಥಳ ಮೇಳದ ಹಾಸ್ಯಗಾರರಾಗಿ ಜನ ಮನ್ನಣೆಯನ್ನು ಪಡೆದಿದ್ದಾರೆ.

ಅಪ್ಪಯ್ಯ ಮಣಿಯಾಣಿ ಮತ್ತು ಲೀಲಾವತಿ ದಂಪತಿಯ ಸುಪುತ್ರರಾಗಿ 14-9-1974ರಂದು ಉಬರಡ್ಕದಲ್ಲಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿದ್ದು ಧರ್ಮಸ್ಥಳ ಮೇಳದ ಕಲಾವಿದ ಉಬರಡ್ಕ ಉಮೇಶ ಶೆಟ್ಟಿಯವರ ಪ್ರೇರಣೆಯ ಮೇರೆಗೆ ರಂಗ ಪ್ರವೇಶ ಮಾಡಿದರು.

ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು 14ನೇ ವಯಸ್ಸಿನಿಂದಲೇ ಮುಖಕ್ಕೆ ಬಣ್ಣ ಹಚ್ಚಲು ಪ್ರಾರಂಭಿಸಿದರು. ಆರಂಭದಲ್ಲಿ ಬಪ್ಪನಾಡು ಮೇಳ - 1 ವರ್ಷ, ಅನಂತರ ಕಟೀಲು ಮೇಳಕ್ಕೆ ಸೇರಿದವರು : 12 ವರ್ಷಗಳ ತಿರುಗಾಟವನ್ನು ಪೂರೈಸಿ, ಧರ್ಮಸ್ಥಳ ಮೇಳಕ್ಕೆ ಸೇರಿದವರು ಈಗಾಗಲೇ 8 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ಬಾಹುಕ, ಮಕರಂದ, ದಾರುಕ, ವಿಜಯ, ನಾರದ,, ಹಾಸ್ಯದ ಸ್ತ್ರೀ ಪಾತ್ರಗಳು ಮತ್ತು ಪೋಷಕ ಪಾತ್ರಗಳನ್ನು ಮಾಡುತ್ತಾ ಇದ್ದಾರೆ. ಅನಿವಾರಕ್ಕೆ ಪುಂಡುವೇಷವನ್ನು ಮಾಡುವ ಇವರು ಚಂಡ- ಮುಂಡರು, ಷಣ್ಮುಖ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಮೀನಾಕ್ಷಿ ಎಂಬವರನ್ನು ವರಿಸಿ ಕು ಮನೀಷ್ ಎಂಬ ಸುಪುತ್ರನನ್ನು ಪಡೆದಿರುವ ಇವರನ್ನು ದುಗ್ಗಲಡ್ಕದ ಅಭಿಮಾನಿ ಬಳಗವು ಸಂಮಾನಿಸಿದೆ.



ಮಹಾಬಲ ರೈ ನಗ್ರಿ

*"ನಗ್ರಿ ಹೊಸಮನೆ", ಸಜಿಪ ಮೂಡ, ನಗ್ರಿ ಅಂಚೆ,*
*ಗ್ರಾಮ, ಬಂಟ್ವಾಳ ತಾಲೂಕು. 574231*
*ಮೊಬೈಲ್: 9972990666*

ಬಣ್ಣದ ವೇಷಗಳನ್ನು ಮಾಡುವುದರ ಮೂಲಕ ಜನರ ಮನ್ನಣೆಗೆ ಪಾತ್ರರಾಗಿರುವ ಶ್ರೀ ನಗ್ರಿ ಮಹಾಬಲ ರೈಯವರು ಕಟೀಲು ಮೇಳದ ಕಲಾವಿದರಾಗಿದ್ದಾರೆ.

ನಾರಾಯಣ ರೈ ಮತ್ತು ರಾಜೀವಿ ದಂಪತಿಯ ಸುಪುತ್ರರಾಗಿ 24/11/1958 ರಂದು ನಗ್ರಿ ಹೊಸಮನೆಯಲ್ಲಿ ಹುಟ್ಟಿರುವ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವರು. ಯಕ್ಷಗಾನದ ಪರಿಸರದಲ್ಲಿ ಹುಟ್ಟಿರುವ ಇವರು ಕಲಾಕರ್ಷಣೆಗೆ ಒಳಗಾಗಿ 13ನೇ ವಯಸ್ಸಿನಿಂದಲೇ ರಂಗಪ್ರವೇಶ ಮಾಡಿದ್ದಾರೆ.

ಶೀನಪ್ಪ ಭಂಡಾರಿಯವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ಮಹಾಬಲ ರೈಯವರು ಗೇರುಕಟ್ಟೆ ಗಂಗಯ್ಯ ಶೆಟ್ಟಿಯವರಿಂದ ಬಣ್ಣದ ವೇಷಗಳ ಬಗ್ಗೆ ಮಾಹಿತಿಯನ್ನು ಪಡೆದಿರುವರು. ಮೊದಲಿಗೆ ಆದಿ ಸುಬ್ರಹ್ಮಣ್ಯ ಮೇಳದಲ್ಲಿ 15 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು, ಧರ್ಮಸ್ಥಳ ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿ ಅನಂತರ ಕಟೀಲು ಮೇಳವನ್ನು ಸೇರಿದವರು ಈಗಾಗಲೇ 22 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಪುಂಡು ವೇಷ, ರಾಜವೇಷ, ಬಣ್ಣದ ವೇಷಗಳನ್ನು ಮಾಡಿ ಅನುಭವ ಇರುವ ಇವರು ರಾವಣ, ಕುಂಭಕರ್ಣ, ಭೀಮ, ತಾಟಕಿ, ಶೂರ್ಪನಖಾ, ಲಂಕಿಣಿ, ಮತ್ಸ, ವರಾಹ, ದೇವೇಂದ್ರ. ಅರ್ಜುನ, ಚಂಡ-ಮುಂಡರು, ಚೆನ್ನಯ, ದೇವು ಪೂಂಜ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಕಟೀಲು ಮೇಳದಲ್ಲಿ ದೇವಿಮಹಾತ್ಮೆಯ ಮಹಿಷಾಸುರನಾಗಿ ಪಾತ್ರನಿರ್ವಹಣೆಯನ್ನು ಮಾಡುತ್ತಾ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಶೀನಪ್ಪ ಭಂಡಾರಿ ಮಾವ, ಅಳಿಕೆ ರಾಮಯ್ಯ ರೈ ಚಿಕ್ಕಪ್ಪ, ಅಳಿಕೆ ಮೋನಪ್ಪ ಶೆಟ್ಟಿ ಅಜ್ಜ ಹೀಗೆ ಹಿರಿತನದಲ್ಲಿ ಯಕ್ಷಗಾನದ ಮನೆತನಕ್ಕೆ ಸೇರಿದ ಇವರು, ಯಕ್ಷಗಾನ ಕಲೆಯ ಬಗ್ಗೆ ಅಭಿಮಾನವುಳ್ಳವರಾಗಿದ್ದಾರೆ. ಮಳೆಗಾಲದಲ್ಲಿ ಶ್ರೀಧರ ಭಂಡಾರಿಯವರ ತಿರುಗಾಟದ ಮಂಡಳಿಯಲ್ಲಿ ಪಾತ್ರನಿರ್ವಹಣೆ ಮಾಡುವ ಇವರು ಶ್ರೀಮತಿ ಸುಗುಣಾ ಎಂ. ಎಂಬವರನ್ನು ವರಿಸಿ ಶ್ರೀಕಾಂತ್ ರೈ, ಯಶೋದಾ, ಕಿರಣ್ ರೈ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾಸಾಧನೆಯನ್ನು ಗುರುತಿಸಿದ ಕಲಾಭಿಮಾನಿಗಳು ಸಜೀಪಮೂಡ, ಕಣ್ಣೂರು, ಮೂಡಬಿದಿರೆ, ಬೆಂಗಳೂರು ಮುಂತಾದೆಡೆಯಲ್ಲಿ ಸಂಮಾನಿಸಿ ಗೌರವಿಸಿದ್ದಾರೆ.



## ಮಹಾಬಲ ಶೆಟ್ಟಿ ಪಟ್ಲಗುತ್ತು

ಪಟ್ಲಗುತ್ತು ಮನೆ
ಕುಡ್ತಲ್ತಡ್ಕ ಅಂಚೆ, ಕರೋಪಾಡಿ ಗ್ರಾಮ
ಬಂಟ್ವಾಳ ತಾಲೂಕು 574279.

ಮದ್ದಳೆಗಾರರಾಗಿ, ಮೇಳದ ಪ್ರಬಂಧಕರಾಗಿ, ಯಜಮಾನರಾಗಿ ಮನ್ನಣೆಯನ್ನು ಪಡೆದಿರುವ ಪಟ್ಲಗುತ್ತು ಮಹಾಬಲ ಶೆಟ್ಟಿಯವರು ಮೇಳದ ನಿವೃತ್ತರಾದ ಕಲಾವಿದರಾಗಿದ್ದಾರೆ.

ಬಂಟ್ವಾಳದ ಕರೋಪಾಡಿ ಗ್ರಾಮದಲ್ಲಿ ಪಟ್ಲಗುತ್ತು ದುಗ್ಗಪ್ಪ ಶೆಟ್ಟಿ ಹಾಗೂ ಪದ್ಮಾವತಿ ದಂಪತಿಯ ಸುಪುತ್ರರಾಗಿ 1943ನೇ ಇಸ ವಿಯಲ್ಲಿ ಜನಿಸಿದರು.ಎಳವೆಯಿಂದಲೇ ಯಕ್ಷಗಾನ ಕಲೆಯ ಬಗೆ ಆಸಕ್ತಿಯನ್ನು ತಾಳಿದ್ದ ಇವರು, ಮಾಂಬಾಡಿ ನಾರಾಯಣ ಭಾಗವತರಿಂದ ಭಾಗವತಿಕೆ ಮತ್ತು ಚೆಂಡೆ ಮದ್ದಳೆಯ ಅಭ್ಯಾಸ ಮಾಡಿದ್ದಾರೆ.

ಕುಂಡಾವು ಹಾಗೂ ಸುಂಕದಕಟ್ಟೆ ಮೇಳಗಳಲ್ಲಿ ತಿರುಗಾಟವನ್ನು ನಡೆಸಿರುವ ಮಹಾಬಲ ಶೆಟ್ಟಿಯವರು ಸುಂಕದಕಟ್ಟೆ ಮೇಳದಲ್ಲಿ ಪ್ರಬಂಧಕರಾಗಿಯೂ ಕಾರ್ಯ ನಿರ್ವಹಣೆ ಮಾಡಿದ್ದಾರೆ. 1987ರಿಂದ ನಾಲ್ಕು ವರ್ಷಗಳ ತನಕ ಮಲ್ಲ ಶ್ರೀ ದುರ್ಗಾ ಪರಮೇಶ್ವರಿ ಮೇಳವನ್ನು ಸ್ವಂತಮೇಳವಾಗಿ ನಡೆಸಿದ್ದಾರೆ.

ಪ್ರಸ್ತುತ ಒಗೆನಾಡಿನಲ್ಲಿ ಶ್ರೀ ಸುಬ್ರಹ್ಮಣ್ಯಶ್ವರ ಯಕ್ಷಗಾನ ಕಲಾಸಂಘವನ್ನು ಸ್ಥಾಪಿಸಿ, ಕಲಾ ಕಾರ್ಯಕ್ರಮಗಳನ್ನು ನಡೆಸುತ್ತಾ ಇದ್ದಾರೆ. ವರ್ಷಂಪ್ರತಿ ಶ್ರಾವಣ ಮಾಸದಲ್ಲಿ ಒಂದು ತಿಂಗಳ ತನಕ ತಾಳಮದ್ದಳೆಯ ಕಾರ್ಯಕ್ರಮಗಳನ್ನು ನಡೆಸಿ ನಾಡಿನ ಬೇರೆ ಬೇರೆ ತಂಡಗಳಿಗೆ ಮತ್ತು ಕಲಾವಿದರಿಗೆ ಅವಕಾಶವನ್ನು ನೀಡುತ್ತಾರೆ.

ಯಕ್ಷಗಾನ ಕಲೆಯ ಬಗ್ಗೆ ಕಾಳಜಿವುಳ್ಳ ಇವರು . ಶ್ರೀಮತಿ ಲಲಿತ ಎಂಬವರನ್ನು ವರಿಸಿ ಈರ್ವರು ಸುಪುತ್ರರನ್ನು ಹಾಗೂ ಓರ್ವಾಕೆ ಸುಪುತ್ರಿಯನ್ನು ಪಡೆದಿದ್ದಾರೆ. ಇವರ ಕಿರಿಯ ಸುಪುತ್ರ ಪಟ್ಲ ಸತೀಶ ಶೆಟ್ಟಿಯವರು ಕಟೀಲು ಮೇಳದ ಭಾಗವತರಾಗಿ ಯುವ ಪ್ರತಿಭೆಯನ್ನು ಮೆರೆಸಿದ್ದಾರೆ.

ಹಲವಾರು ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲರಾಗಿ ಸೇವೆ ಸಲ್ಲಿಸಿರುವ ಇವರಿಗೆ ಒಡಿಯೂರು, ವಗೆನಾಡು, ನೆಲ್ಯಾಡಿ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ. ಕದ್ರಿ ಹವ್ಯಾಸಿ ಬಳಗದ ದಶಮಾನ ಸಯಾನ ಶತಕದ ಸಂಮಾನ ಕೂಡ ಇವರಿಗೆ ಲಭಿಸಿದೆ.



ಮಹಾಲಿಂಗ ಭಟ್ ಹೊಸಹಿತ್ಲು

ಹೊಸಹಿತ್ಲು, ಮೀಂಜ ಗ್ರಾಮ
ಕಾಸರಗೋಡು ತಾಲೂಕು

ತೀವ್ರಗತಿಯ ನಾಟ್ಯ ಶೈಲಿಯಿಂದ ಪ್ರಸಿದ್ಧರಾಗಿ ಮೆರೆದಿರುವ ಹೊಸಹಿತ್ತು ಮಹಾಲಿಂಗ ಭಟ್ಟರು ತೆಂಕುತಿಟ್ಟಿನಲ್ಲಿ ಗುರುತಿಸಲ್ಪಟ್ಟ ಅಗ್ರ ಪಂಕ್ತಿಯ ಕಲಾವಿದರಾಗಿದ್ದಾರೆ. ಕಮ್ಮಟ ತರಬೇತಿ ಮೊದಲಾದ ಪ್ರಕ್ರಿಯೆಗಳಲ್ಲೂ ಪಳಗಿದ ಪ್ರತಿಭೆ ಇವರದಾಗಿದೆ.

ದಿನಾಂಕ 1-5-1936 ರಲ್ಲಿ ಗಣಪತಿ ಭಟ್ ಹಾಗೂ ವೆಂಕಮ್ಮ ದಂಪತಿಯ ಸುಪುತ್ರರಾಗಿ ಮೀಂಜ ಗ್ರಾಮದ ಹೊಸಹಿತ್ತು ಎಂಬಲ್ಲಿ ಮಹಾಲಿಂಗ ಭಟ್ಟರು ಜನಿಸಿದರು. ಬಾಲ್ಯದಿಂದಲೇ ಕಲಾಸಕ್ತರಾಗಿ ದಿ| ಕುರಿಯ ವಿಠಲ ಶಾಸ್ತ್ರಿಯವರಿಂದ ಯಕ್ಷಗಾನ ಕಲೆಯ ಅಭ್ಯಾಸವನ್ನು ಮಾಡಿ ಮುಂದೆ ಕೋಳ್ಯೂರು ರಾಮಚಂದ್ರ ರಾವ್ ಇವರೊಂದಿಗೆ ಅನುಭವನ್ನು ಪಡೆದು ಮೇಳ ತಿರುಗಾಟವನ್ನು ಪೂರೈಸಿದ್ದಾರೆ.

ಧರ್ಮಸ್ಥಳ ಮೇಳ- 15 ವರ್ಷ, ಕಟೀಲು ಮೇಳ- 1 ವರ್ಷ, ಸುರತ್ಕಲ್ ಮೇಳ- 2 ವರ್ಷ, ಕೂಡ್ಲು ಮೇಳ- 2 ವರ್ಷ, ಬಪ್ಪನಾಡು ಮೇಳ- 1 ವರ್ಷ, ಮೂಲ್ಕಿ ಮೇಳ- 2 ವರ್ಷ, ಪುತ್ತೂರು ಮೇಳ- 2 ವರ್ಷ, ಅರುವ ಮೇಳ- 1 ವರ್ಷ, ಹೀಗೆ ಮೇಳಗಳ ತಿರುಗಾಟವನ್ನು ಮಾಡಿದ್ದಾರೆ. ಆ ಮೇಲೆ ಅನಿವಾರ ತಿರುಗಾಟವನ್ನು ನಿಲ್ಲಿಸಿದವರು ಹೇಳಿಕೆಯ ಮೇರೆಗೆ ಹಲವು ಸಂಘ ಸಂಸ್ಥೆಗಳ ಕಾಠ್ಯಕ್ರಮಗಳಲ್ಲಿ ಬಾಗವಹಿಸುತ್ತಾ ಪಾತ್ರ ನಿರ್ವಹಣೆ ಮಾಡಿದ್ದಾರೆ. ಕಮ್ಮಟ, ನಾಟ್ಯ ತರಬೇತಿಯ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುವ ಇವರು ಉತ್ತಮ ಕಲಾ ಸಾಧಕರಾಗಿ ಗೌರವ ಮನ್ನಣೆಗೆ ಪಾತ್ರರಾಗಿದ್ದಾರೆ.

ಆರಂಭದಲ್ಲಿ ಅಭಿಮನ್ಯು, ಬಭ್ರುವಾಹನ, ಕೃಷ್ಣ, ಪರಶುರಾಮ ಮೊದಲಾದ ಪುಂಡುವೇಷಗಳಲ್ಲಿ ಉತ್ತಮವಾಗಿ ನಟಿಸುತ್ತಿದ್ದ ಇವರು ಮುಂದಕ್ಕೆ ದೇವೇಂದ್ರ, ಅರ್ಜುನ, ಇಂದ್ರಜಿತು, ಮಕರಾಕ್ಷ ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾ ಗಂಡುಗಾರಿಕೆ . ಬಿರುಸಾದ ಶೈಲಿಯನ್ನು ಪ್ರಸ್ತುತ ಪಡಿಸಿ ಪ್ರಸಿದ್ಧಿಗೇರಿದರು. ಪರಂಪರೆಯ ನಾಟ್ಯ ಶೈಲಿಯ ಹಿನ್ನೆಲೆಯಲ್ಲಿ ಇವರಿಗೆ ಹೆಚ್ಚಿನ ಗೌರವ ಒದಗಿ ಬಂದಿದೆ.

ಶ್ರೀಮತಿ ಲಕ್ಷ್ಮೀ ಎಂಬವರನ್ನು ವರಿಸಿ ಈರ್ವರು ಮಕ್ಕಳನ್ನು ಪಡೆದಿರುವ ಹೊಸಹಿತ್ತು ಮಹಾಲಿಂಗ ಭಟ್ಟರು ಯಕ್ಷಗಾನದಲ್ಲಿ ಕಂಡು ಬರುವ ಪ್ರತಿನಾಯಕ ಪಾತ್ರಗಳಿಗೆ ತನ್ನದೇ ಆದ ಸ್ವಂತಿಕೆಯ ಶೈಲಿಯಿಂದ ಜೀವ ಸತ್ವವನ್ನು ತುಂಬಿದ್ದಾರೆ. ಮೈ ರೋಮಾಂಚನ ಗೊಳಿಸುವ ಪಾತ್ರ ನಿರ್ವಹಣೆ ಇವರದ್ದಾಗಿತ್ತು.

ಮಹಾಲಿಂಗ ಭಟ್ಟರ ಸಾಧನೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ.ಶ್ರೇಣಿದ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಕಾಸರಗೋಡು, ಕುರಿಯ ವಿಠಲಶಾಸ್ತ್ರಿ ಪ್ರಶಸ್ತಿ, ಅಗರಿ ಪ್ರಶಸ್ತಿ, ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನ ಶತಕದ ಸಂಮಾನ ಇತ್ಯಾದಿಗಳು ಪ್ರಮುಖವಾಗಿವೆ.



ಮುರಳೀಧರ ಶೆಟ್ಟಿಗಾರ್ ಕನ್ನಡಿಕಟ್ಟೆ

"ಶ್ರೀನಿಧಿ ನಿವಾಸ"
ಸಂಪಿಗೆ ಬೆಟ್ಟು, ಪಡಂಗಡಿ ಗ್ರಾಮ, ಅಂಚೆ
ಬೆಳ್ತಂಗಡಿ ತಾಲೂಕು ದ. ಕ.
ಮೊಬೈಲ್: 9611648829

ಶೃಂಗಾರ ಸ್ತ್ರೀ ಪಾತ್ರಕ್ಕೆ ತಕ್ಕಂತೆ ರೂಪದ ಸೌಂದರ್ಯ ಮತ್ತು ನಾಟ್ಯದ ಶೈಲಿಯನ್ನು ಹೊಂದಿರುವ ಶ್ರೀ ಕನ್ನಡಿಕಟ್ಟೆ ಮುರಳೀಧರ ಶೆಟ್ಟಿಗಾರರು ಪ್ರಸ್ತುತ ಸುಂಕದಕಟ್ಟೆ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ಪುರುಷೋತ್ತಮ ಶೆಟ್ಟಿಗಾರ್ ಮತ್ತು ಲಲಿತ ಶೆಟ್ಟಿಗಾರಿ ಎಂಬವರ ಸುಪುತ್ರನಾಗಿ, ಕೇರಳದ ಕುರುಡ ಪದವಿನಲ್ಲಿ ದಿನಾಂಕ 22-1-1981ರಲ್ಲಿ ಜನಿಸಿದರು. 8ನೇ ಇಯತ್ತೆಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ

ಇವರು ಬಾಲ್ಯದಲ್ಲೇ ಯಕ್ಷಗಾನದ ಪ್ರಭಾವಕ್ಕೆ ಒಳಗಾದರು. ಪುಂಡುವೇಷಧಾರಿ ಧರ್ಮೇಂದ್ರ ಅಚಾರಿ ಎಂಬವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ವೇಷ ಹಾಕಲು ಪ್ರಾರಂಭಿಸಿದರು.

ಕಟೀಲು ಮೇಳ - 4 ವರ್ಷ, ಮಂಗಳಾದೇವಿ ಮೇಳ 1 ವರ್ಷ, ಹೊಸನಗರ ಮೇಳ 1 ವರ್ಷ ಹೀಗೆ ತಿಮೇಳಗಳಲ್ಲಿ 6 ವರ್ಷಗಳ ತಿರುಗಾಟವನ್ನು ಮಾಡಿದ ಮೇಲೆ ಈಗ ಮುರಳೀಧರ ಶೆಟ್ಟಿಗಾರ್ ಕನ್ನಡಿಕಟ್ಟೆ ಸುಂಕದಕಟ್ಟೆಯ ಮೇಳದಲ್ಲಿ 5 ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಾಲಿನಿ, ಶ್ರೀದೇವಿ, ಪ್ರಭಾವತಿ, ರತಿ, ಮೋಹಿನಿ, ಲಕ್ಷ್ಮೀ, ಶಾರದೆ, ದಮಯಂತಿ, ಸೀತೆ, ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.ರುಕ್ಮಾಂಗ, ಶುಭಾಂಗ, ವಿಷ್ಣು, ಈಶ್ವರ ಮೊದಲಾದ ಪುಂಡು ಮತ್ತು ಪೋಷಕ ಪುರುಷ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ. ಇಷ್ಟಲ್ಲದೆ ಪ್ರಮೀಳೆ, ಮೀನಾಕ್ಷಿ ಮೊದಲಾದ ಕಸೆಯ ಸ್ತ್ರೀ ಪಾತ್ರಗಳಲ್ಲಿ ಪ್ರವೀಣತೆಯನ್ನು ತೋರಿದ್ದಾರೆ.

ಇತ್ತೀಚೆಗೆ ವಿವಾಹವಾಗಿದ್ದು, ಶ್ರೀಮತಿ ಮಾಲತಿ ಎಂಬವರನ್ನು ವರಿಸಿದ್ದಾರೆ. ಇವರ . ಸಂಬಂಧಿಕರಾಗಿರುವ ಸಿದ್ಧಕಟ್ಟೆ ಪದ್ಮನಾಭ ಶೆಟ್ಟಿಗಾರರು ಉತ್ತಮ ಹಾಸ್ಯಗಾರರಾಗಿದ್ದು ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತ ಇದ್ದಾರೆ.

ಪೌರಾಣಿಕ ಪಾತ್ರಗಳ ನಿರ್ವಹಣೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರುವ ಇವರು ತುಳು ಪ್ರಸಂಗದ ಪಾತ್ರಗಳನ್ನು ಕೂಡ ಉತ್ತಮವಾಗಿ ನಿರ್ವಹಿಸುತ್ತಾ, ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆಯುತ್ತಿದ್ದಾರೆ.



**ಮೋಹನ್ ಶೆಟ್ಟಿಗಾರ್, ಮಿಜಾರು**


*"ಪೂಮಾವರ ಮನೆ"*
*ನೀರ್ಕೆರೆ, ಗ್ರಾಮ ತೆಂಕ ಮಿಜಾರು*
*ಅಶ್ವತ್ಥಪುರ ಅಂಚೆ*
*(ಮೊಬೈಲ್) 9902189918*

ಚೆಂಡೆ ಮದ್ದಳೆಯ ಕೈಚಳಕದಲ್ಲಿ ಉತ್ತಮವಾದ ಪ್ರತಿಭೆಯನ್ನು ತೋರಿ ಪ್ರಸಿದ್ಧರಾಗಿರುವ ಶ್ರೀ ಮೋಹನ ಶೆಟ್ಟಿಗಾರ್ ಮಿಜಾರು ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ನಾರಾಯಣ ಶೆಟ್ಟಿಗಾರ್ ಮತ್ತು ಗೌರಮ್ಮ ದಂಪತಿಯ ಸುಪುತ್ರರಾಗಿ ಮಿಜಾರು ಎಂಬಲ್ಲಿ ಹುಟ್ಟಿದ್ದಾರೆ. 54 ವರ್ಷಗಳ ವಯೋಮಾನವಂತರಾಗಿರುವ ಇವರು ಬಾಲ್ಯದಲ್ಲಿ ಹುಟ್ಟೂರಿನ ಯಕ್ಷಗಾನ ಸಂಘದಿಂದ ಪ್ರಭಾವಿತರಾಗಿದ್ದರು.

ಮೋಹನ ಶೆಟ್ಟಿಗಾರರ ತಂದೆ ಸುರತ್ಕಲ್ ಮೇಳದಲ್ಲಿ ವೇಷಧಾರಿಯಾಗಿ ತಿರುಗಾಟ ಮಾಡಿದ್ದಾರೆ. ಅಜ್ಜ ಬಾಬು ಶೆಟ್ಟಿಗಾರ್ ಚೆಂಡೆ . ಮದ್ದಳೆಯ ವಾದಕರಾಗಿದ್ದರು. ಈ ಎಲ್ಲ ಕಾರಣದಿಂದ ಪ್ರತಿಭಾವಂತರಾದ ಮೋಹನ್ ಶೆಟ್ಟಿಗಾರರು ಗುರುಪುರ ಅಣ್ಣಿ ಭಟ್ಟರಲ್ಲಿ ಚೆಂಡೆ ಮದ್ದಳೆಯ ನುಡಿತ ಬಡಿತಗಳನ್ನು ಅಭ್ಯಾಸಿಸಿದರು. ಅನಂತರ ಮೇಳ ತಿರುಗಾಟದಲ್ಲಿ ನೆಡ್ಲೆ ನರಸಿಂಹ ಭಟ್ಟರಿಂದ ಹೆಚ್ಚಿನ ಅನುಭವವನ್ನು ಸಂಪಾದಿಸಿದರು.

15ನೇ ವರ್ಷದಿಂದಲೇ ಕಲಾಸೇವೆಯನ್ನು ಆರಂಭಿಸಿದ ಇವರು ಆರಂಭಕ್ಕೆ ಕಟೀಲು ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಪೂರೈಸಿ ಕರ್ನಾಟಕ ಮೇಳದಲ್ಲಿ 9 ವರ್ಷಗಳ ತಿರುಗಾಟವನ್ನು ನಡೆಸಿರುವರು. ಆ ಬಳಿಕ ಕಟೀಲು ಮೇಳವನ್ನು ಮತ್ತೆ ಸೇರಿದವರು ಈವರೆಗೆ 17 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಶ್ರೀಮತಿ ಮೀನಾಕ್ಷಿ ಎಂಬವರನ್ನು ವರಿಸಿ ಜಗದೀಶ (ಮೋಟಾರು ವೈಡಿಂಗ್ ಉದ್ಯೋಗಿ), ದೇವಿದಾಸ್ (ಬಡಗಿ), ಲಾವಣ್ಯ (8ನೇ ತರಗತಿ) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಸಾತ್ವಿಕ ಗುಣಧರ್ಮದ ಇವರ ಸಾಧನೆಗೆ ಫಲವಾಗಿ ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನವು ಸಂದಿರುವುದಲ್ಲದೆ ಪೊಳಲಿ, ಕೋಡಿಕಲ್, ಮುಂತಾದೆಡೆಯಲ್ಲಿ ಅಭಿಮಾನಿಗಳಿಂದ ಗೌರವ ಪುರಸ್ಕಾರಗಳು ಸಂದಿವೆ.



**ಮೋಹನ ಕುಮಾರ್ ಅಮ್ಮುಂಜೆ**

*"ಯಕ್ಷಾನುಗ್ರಹ"*
*ಅಮ್ಮುಂಜೆ ಗ್ರಾಮ, ಅಂಚೆ, ಬಂಟ್ವಾಳ ತಾಲೂಕು*
*ಮೊಬೈಲ್: 9980257881*

ಪುಂಡು ವೇಷದ ಮುಖೇನ ಜನಮನ್ನಣೆಯನ್ನು ಪಡೆದಿರುವ ಶ್ರೀ ಮೋಹನ ಕುಮಾರ್ ಅಮ್ಮುಂಜೆ ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ವೆಂಕಪ್ಪ ಬೆಳಡ ಮತ್ತು ಸುಶಿಲ ಬೆಳ್ಚಡ್ತಿ ದಂಪತಿಯ ಸುಪುತ್ರರಾಗಿ 04/07/1974 ರಂದು . ಅಮ್ಮುಂಜೆಯಲ್ಲಿ ಜನಿಸಿದರು. 10ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 16ನೇ ವರ್ಷದಿಂದ ಯಕ್ಷಗಾನದ ರಂಗ ಪ್ರವೇಶ ಮಾಡಿದ್ದಾರೆ.

ಕೆ ನ ರಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿರುವ ಶ್ರೀ ಶಂಕರ ಶೆಟ್ಟಿ ಅವರಿಂದ ಯಕ್ಷಗಾನದ ಬಗ್ಗೆ ಮೊದಲ ಅನುಭವವನ್ನು ಸಂಪಾದಿಸಿದ ಇವರು ಪಡ್ರೆಚಂದು ಮತ್ತು ಕೋಳ್ಯೂರು ರಾಮಚಂದ್ರ ರಾವ್ (ಧರ್ಮಸ್ಥಳ ಲಲಿತ ಕಲಾಕೇಂದ್ರ) ಅವರಿಂದ ಹೆಚ್ಚಿನ ನಾಟ್ಯಾಭ್ಯಾಸವನ್ನು ಮಾಡಿರುವರು.

ಕಟೀಲು ಮೇಳವೊಂದರಲ್ಲೇ 19 ವರ್ಷಗಳ ತಿರುಗಾಟವನ್ನು ಪೂರೈಸಿರುವ ಇವರು ಅಭಿಮನ್ಯು, ಬಭ್ರುವಾಹನ, ಚಂಡ-ಮುಂಡರು, ವಿಷ್ಣು, ಬ್ರಹ್ಮ, ಈಶ್ವರ, ಲವ, ಕುಶ, ಮನ್ಮಥ, ವಿದ್ಯುನ್ಮಾಲಿ, ಶಿಶುಪಾಲ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಶಶಿಕಲಾ ಎಂಬವರನ್ನು ವರಿಸಿರುವ ಇವರಿಗೆ ವೈಶಾಖ್, ವೈಷ್ಣವಿ ಎಂಬ ಇಬ್ಬರು ಮಕ್ಕಳಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಕಲಾಯಿ (ಅಮ್ಮುಂಜೆ), ಪೊಳಲಿ, ಹೊಸಪೇಟೆ, ಕುಂದಾಪುರ, ಮೈಸೂರು, ಕಟೀಲು, ಮೊದಲಾದೆಡೆಯಲ್ಲಿ ಸಂಮಾನ ಗೌರವ ಪುರಸ್ಕಾರಗಳು ಸಂದಿವೆ.



ಮಹಾಬಲ ಶೆಟ್ಟಿ, ಮಂಗಲ್ಪಾಡಿ

*"ಪೂಜಾ ನಿವಾಸ", ಮಂಗಲ್ಪಾಡಿ ಗ್ರಾಮ ಮತ್ತು ಅಂಚೆ*
*ಕಾಸರಗೋಡು, ಕೇರಳ*
*(ಮನೆ ದೂರವಾಣಿ) 04998-231490*

ನಾಟಕೀಯ ವೇಷಗಳ ಮುಖೇನ ಗುರುತಿಸಲ್ಪಟ್ಟಿರುವ ಶ್ರೀ ಮಹಾಬಲ ಶೆಟ್ಟಿ, ಮಂಗಲ್ಪಾಡಿಯವರು ಕೀರ್ತಿ ಮತ್ತು ಜನಮನ್ನಣೆಗೆ ಸಂದ ಹಿರಿಯ ಕಲಾವಿದರು. ಪ್ರಸ್ತುತ ಸುಂಕದಕಟ್ಟೆ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ವೇಷಧಾರಿಯಾಗಿದ್ದ ಕೀರ್ತಿಶೇಷ ತ್ಯಾಂಪಣ್ಣ ಶೆಟ್ಟಿ ಮತ್ತು ಅಂತಕ್ಕೆ ದಂಪತಿಯ ಸುಪುತ್ರರಾಗಿ 1947ನೇ ವರ್ಷ ಮಂಗಲ್ಪಾಡಿಯಲ್ಲಿ ಜನಿಸಿದರು. 8ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಶಾಲಾ ಜೀವನದಲ್ಲಿ ಶಾಲಾ ಅಧ್ಯಾಪಕರ ಪ್ರೇರಣೆಯ ಮೇರೆಗೆ ಮುಖಕ್ಕೆ ಬಣ್ಣ ಹಚ್ಚಲು ಆರಂಭಿಸಿದರು.

ಶ್ರೀ ಕೃಷ್ಣ ಮಾಸ್ತರ್ ಉಪ್ಪಳ ಅವರಿಂದ . ನಾಟ್ಯಾಭ್ಯಾಸವನ್ನು ಮಾಡಿರುವ ಮಹಾಬಲ ಶೆಟ್ಟರು ಉಪ್ಪಳದ ಭಗವತಿ ಮೇಳದಲ್ಲಿ ನಾಲ್ಕಾರು ವರ್ಷಗಳ ತಿರುಗಾಟವನ್ನು ಮಾಡಿ ಮಧೂರು, ಮಲ್ಲ, ಬೆಳ್ಳಣ್ ಮತ್ತು ಕಟೀಲು ಮೇಳದಲ್ಲಿ ಒಂದೊಂದು ವರ್ಷಗಳ ತಿರುಗಾಟವನ್ನು ಮಾಡಿರುವರು. ಅನಂತರ ಸುಂಕದಕಟ್ಟೆ ಮೇಳವನ್ನು ಸೇರಿದವರು ಈಗಾಗಲೇ 16 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಕಂಸ, ಹಿರಣ್ಯಾಕ್ಷ, ಸುಂದರರಾವಣ, ಹಿರಣ್ಯಕಶ್ಯಪ, ಮಾಗಧ, ಬಪ್ಪಬ್ಯಾರಿ, ದಾರಿಕಾಸುರ, ದುಗ್ಗಣ್ಣ ಕೊಂಡೆ, ಕೋಟಿ, ಚೆನ್ನಯ, ಚಂದುಗಿಡಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಹವ್ಯಾಸಿ ಕಲಾವಿದರಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ಮಾಡಿದ್ದಾರೆ. ಇವರ ಸಾಧನೆಗೆ ಪ್ರತಿಯಾಗಿ ಮಂಗಲ್ಪಾಡಿ, ಶಂಭೂರು, ಮುಡಿಮಾರು ಮುಂತಾದೆಡೆಯಲ್ಲಿ ಸಂಮಾನಕ್ಕೆ ಒಳಗಾಗಿದ್ದಾರೆ.

ಶ್ರೀಮತಿ ದೇವಕಿ ಎಂಬವರನ್ನು ವರಿಸಿರುವ ಇವರಿಗೆ ಪೂರ್ಣಿಮಾ (ಬಿ.ಕಾಂ.) ಜಗನಿವಾಸ (10ನೇ ತರಗತಿ) ಎಂಬ ಇಬ್ಬರು ಮಕ್ಕಳಿದ್ದಾರೆ.



ರಘರಾಮ ಹೊಳ್ಳ ಪುತ್ತಿಗೆ

*4 ಎಚ್ 51-ಬಿ., ಲ್ಯಾಂಡ್ ಲಿಂಕ್ಸ್ ಟೌನ್‌ಶಿಪ್,*
*ದೇರೆಬೈಲ್ ಕೊಂಚಾಡಿ, ಮಂಗಳೂರು-8*
*ಮೊಬೈಲ್: 9448502959*

ಪ್ರತಿಭೆ ಮತ್ತು ಅಬ್ಬರದ ಸ್ವರಮಾಧುರ್ಯ್ಯದಿಂದ ತೆಂಕುತಿಟ್ಟಿನ ಪ್ರಸಿದ್ದ ಪ್ರಸಿದ್ಧ ಭಾಗವತರಾಗಿ ಮನ್ನಣೆಯನ್ನು ಪಡೆದಿರುವ ಶ್ರೀ ಪುತ್ತಿಗೆ ರಘರಾಮ ಹೊಳ್ಳರು ಪ್ರಸ್ತುತ ಧರ್ಮಸ್ಥಳ ಮೇಳದ ಮುಖ್ಯಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪುತ್ತಿಗೆ ರಾಮಕೃಷ್ಣ ಜೋಯಿಸ ಮತ್ತು ಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ ದಿ 5-5- 1955 ರಂದು ಕಾಸರಗೋಡಿನ ಬೋವಿಕಾನದಲ್ಲಿ ಜನಿಸಿದರು. ಇವರ ಮನೆತನವು ಯಕ್ಷಗಾನದ ಮನೆತನವಾಗಿರುವುದರಿಂದ ಯಕ್ಷಗಾನದ ಕಲಾ ಪ್ರತಿಭೆಯು ಇವರಿಗೆ ರಕ್ತಗತವಾಗಿ ಬಂದಿದೆ. ತಂದೆಯವರು ಶ್ರೇಷ್ಠಭಾಗವತರಾಗಿ ಕೀರ್ತಿ ಸಂಪನ್ನರಾಗಿದ್ದರು. ಚಿಕ್ಕ ತಂದೆ ಬಿ. ವಿ. ಹೊಳ್ಳ ಅರ್ಥಧಾರಿ ಮತ್ತು ಪ್ರಸಂಗ ಕರ್ತರು.


ಬಿ. ಕಾಂ. ಪದವೀಧರರಾಗಿರುವ ಹೊಳ್ಳರು ತಂದೆಯವರು ಮಾರ್ಗದರ್ಶನದೊಂದಿಗೆ ಹಾಡಲು ಆರಂಭಿಸಿದರು. ಆಮೇಲೆ ಚೆಂಡೆ-ಮದ್ದಲೆಯ ನುಡಿತ-ಬಡಿತಗಳಿಗಾಗಿ ದಿ| ಕಿಟ್ಟಣ ಭಾಗವತ ಮತ್ತು ದಿ| ಕುದ್ರೆಕೂಡ್ಲು ರಾಂ ಭಟ್‌ರವರಲ್ಲಿ ಅಭ್ಯಾಸ ಮಾಡಿದ್ದಾರೆ. ಧರ್ಮಸ್ಥಳ ಮೇಳದ ತಿರುಗಾಟದಲ್ಲಿದ್ದಾಗ ಕಡತೋಕ ಭಾಗವತರಿಂದ ಪ್ರಭಾವಿತರಾಗಿದ್ದರು.

ಆರಂಭಕ್ಕೆ ಧರ್ಮಸ್ಥಳ ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿ ಅನಂತರ ಕದ್ರಿ ಮೇಳದಲ್ಲಿ 6 ವರ್ಷಗಳ ತಿರುಗಾಟವನ್ನು ನಡೆಸಿ ಮತ್ತೆ ಧರ್ಮಸ್ಥಳ ಮೇಳವನ್ನು ಸೇರಿದವರು 2 ದಶಕಕ್ಕೂ ಮಿಕ್ಕಿದ ತಿರುಗಾಟವನ್ನು ಪೂರೈಸಿದ್ದಾರೆ.

ರಂಗದ ಒಟ್ಟು ಪ್ರದರ್ಶನ ಮು ಚೆಂದವಾಗಬೇಕು ಎಂಬ ಆಶಯವುಳ್ಳ ಇವರು ಕಲಾವಿದರಿಗೆ, ಸನ್ನಿವೇಶಕ್ಕೆ ತಕ್ಕಂತೆ ಮಾಹಿತಿ ನೀಡುವಲ್ಲಿ ಮಾರ್ಗದರ್ಶಕರಾಗಿದ್ದಾರೆ. ಇಷ್ಟಲ್ಲದೆ ಸನ್ನಿವೇಶಕ್ಕೆ ಪೂರಕವಾಗಿ ರಸಪೂರಣವಾಗಿ ಹಾಡಬಲ್ಲರು. ಗದಾಯುದ್ಧ, ಕರ್ಣಾರ್ಜುನ, ದುಶ್ಯಾಸನ ವಧೆ ಮುಂತಾದ ಪ್ರಸಂಗಗಳು ಇವರ ಹಾಡಿಂದ, ರಂಗತಂತ್ರದಿಂದ ರಂಜನೀಯ ಪ್ರದರ್ಶನವಾಗಿ ಜನಮನಕ್ಕೆ ಮುಟ್ಟಿದೆ. ಕಲಾವಿದರ ಸಾಮರ್ಥ್ಯವನ್ನು ಅರ್ಥವಿಸಿಕೊಂಡು ಕುಣಿಸಬಲ್ಲ ಯೋಗ್ಯತೆ ಇವರಲ್ಲಿದೆ.

ದೆಹಲಿ, ಮುಂಬಯಿ, ಬೆಂಗಳೂರು, ಜಪಾನ್‌ಗಳು ಸೇರಿದಂತೆ ದೇಶವಿದೇಶಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಮಾಜಿ ರಾಷ್ಟ್ರಪತಿ ಶಂಕರದಯಾಳರಿಂದ ಗೌರವ, ದೆಹಲಿಯ ಕನ್ನಡ ಸಂಘದ ಸಂಮಾನಗಳಲ್ಲದೆ, ಮಂಗಳೂರು, ಎಡ ನೀರು, ಬಂಟ್ವಾಳ ಮುಂತಾದೆಡೆ ಅಭಿಮಾನಿಗಳಿಂದ ಸಂಮಾನಿಸಲ್ಪಟ್ಟಿರುವರು.

ಶ್ರೀಮತಿ ವಾಣಿ ಎಂಬವರನ್ನು ವರಿಸಿ ಶ್ರೀಲಕ್ಷ್ಮೀ, ಶ್ರೀವಿದ್ಯಾ ಎಂಬ ಇಬ್ಬರು ಮಕ್ಕಳನ್ನು ಪಡೆದಿರುವರು. ಅಪಾರ ಅಭಿಮಾನಿಗಳಿಂದ ಗೌರವಕ್ಕೊಳಗಾದ ಕೀರ್ತಿ ಇವರದ್ದಾಗಿದೆ.



**ರಘುನಾಥ ಶೆಟ್ಟಿ ಬಾಯಾರು**

"ಪಳ್ಳಾರು ಮನೆ", ಬಾಯಾರು ಗ್ರಾಮ
ಚಿಪ್ಪಾರು ಅಂಚೆ, ಕಾಸರಗೋಡು, ಕೇರಳ
(ಮೊಬೈಲ್) 09020849410
(ಮನೆ ದೂರವಾಣಿ) 04998 – 205404

ಪುಂಡು, 2, ನಾಟಕೀಯ, ರಾಜವೇಷಗಳ ಮುಖೇನ ಪ್ರಸಿದ್ಧಿಗೆ ಬಂದಿರುವ ಬಾಯಾರು ರಘುನಾಥ ಶೆಟ್ಟಿಯವರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಐತಪ್ಪ ಶೆಟ್ಟಿ ಪೈವಳಿಕೆ ಮತ್ತು ಕಲ್ಯಾಣಿ ಶೆಡ್ತಿ ದಂಪತಿಯ ಸುಪುತ್ರರಾಗಿ 18-6-1950ರಂದು ಬಾಯಾರಿನಲ್ಲಿ ಹುಟ್ಟಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರಿಗೆ ವೇಷಧಾರಿಯಾಗಲು ತಂದೆಯ ಪ್ರೇರಣೆ ಒದಗಿತ್ತು. ಪ್ರಸಿದ್ಧ ಸ್ತ್ರೀ ಪಾತ್ರಧಾರಿಯಾಗಿ ಮನ್ನಣೆಯನ್ನು ಪಡೆದಿದ್ದ ಐತಪ್ಪ ಶೆಟ್ಟರು ಇವರಿಗೆ ನಾಟ್ಯಾಭ್ಯಾಸವನ್ನು ಮಾಡಿ ರಂಗಾನುಭವವನ್ನು ನೀಡಿದ್ದರು.

16ನೇ ವಯಸ್ಸಿನಿಂದ ಪಾತ್ರ ನಿರ್ವಹಣೆಯನ್ನು ಮಾಡಲಾರಂಭಿಸಿದ ಇವರು ಕರ್ನಾಟಕ ಮೇಳದಲ್ಲಿ 37 ವರ್ಷಗಳ ತಿರುಗಾಟವನ್ನು ಮಾಡಿದ ಮೇಲೆ ಸುಂಕದಕಟ್ಟೆ ಮೇಳವನ್ನು ಸೇರಿ ಇದೀಗ 8 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಕೌರವ, ಅರ್ಜುನ, ರಕ್ತಬೀಜ, ಪ್ರಮೀಳೆ, ಸೀತೆ, ರಾಮ, ಬಭ್ರುವಾಹನ, ಸುಧನ್ವ, ಕೋಟಿ, ಕಾಂತಾಬಾರೆ, ದೇವುಪೂಂಜ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಬಾಯಾರು ರಮೇಶ ಶೆಟ್ಟಿ, ಬಾಯಾರು ಮೋಹನ ಶೆಟ್ಟಿ ಮೊದಲಾದವರು ಸೇರಿದಂತೆ ಇವರ ಐವರು ಸಹೋದರರು ಕೂಡ ಕಲಾವಿದರಾಗಿದ್ದಾರೆ. ಮಳೆಗಾಲದಲ್ಲಿ ಯಕ್ಷಗಾನ ಭೂಷಣಗಳ ತಯಾರಿ ಕೆಲಸವನ್ನು ಮಾಡುವ ಇವರು ಶ್ರೀಮತಿ ಪುಷ್ಪಾವತಿ ಎಂಬವರನ್ನು ವರಿಸಿ ಹೇಮಲತಾ (ಕಂಪ್ಯೂಟರ್ ಪದವಿ ಅಧ್ಯಯನ), ಸುಮಲತಾ (ಪಿ. ಯು. ಸಿ.) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಫಲವಾಗಿ ಬಾಯಾರು, ಮುಂಬಯಿ, ಕೋಡಿಕಲ್, ಉಡುಪಿ, ದೇರಳಕಟ್ಟೆ ಮುಂತಾದೆಡೆಯಲ್ಲಿ ಸಂಮಾನಗಳು ಸಂದಿವೆ.



ರಮೇಶ ಭಟ್ ಸರವು

ಶ್ರೀದೇವಿಕೃಪಾ, ಸರವು, ಅಂಚೆ ಬೆರಿಪದವು,
ಬಾಯಾರು ಗ್ರಾಮ, ವಯಾ ಉಪ್ಪಳ,
ಕಾಸರಗೋಡು ತಾಲೂಕು-671 322
ಮೊಬೈಲ್ :09481344783

ಸ್ತ್ರೀಪಾತ್ರಗಳ ಮುಖೇನ ಪ್ರಸಿದ್ಧರಾಗಿರುವ ರಮೇಶ ಭಟ್ಟರು ಶ್ರೀ ಕಟೀಲು ಮೇಳದ ಕಲಾವಿದರಾಗಿ ಮನ್ನಣೆಯನ್ನು ಪಡೆದಿದ್ದಾರೆ.

17.11.1967ರಂದು ನಾರಾಯಣ ಭಟ್ ಮತ್ತು ಪಾರ್ವತಿಅಮ್ಮ ದಂಪತಿಯ ಸುಪುತ್ರರಾಗಿ ಸರವು ಎಂಬಲ್ಲಿ ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪರಿಸರದಲ್ಲಿ ಹುಟ್ಟಿ ಬೆಳೆದಿರುವುದರಿಂದ ಕಲಾಕರ್ಷಣೆಗೆ ಒಳಗಾದರು.

ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡುವ ಉದ್ದೇಶದಿಂದ ಧರ್ಮಸ್ಥಳದ ಲಲಿತಾಕಲಾ ಕೇಂದ್ರವನ್ನು ಸೇರಿದ ಇವರು, ಗೋವಿಂದ ಭಟ್ ಸೂರಿಕುಮೇರಿ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ, ಅನುಭವವನ್ನು ಪಡೆದರು.

18ನೇ ವರ್ಷದಿಂದ ಕಲಾಸೇವೆಯನ್ನು ಆರಂಭಿಸಿದ ಇವರು ಮೊದಲ ವರ್ಷ ಕುಂಬ್ಳೆ ಮೇಳದಲ್ಲಿ ತಿರುಗಾಟವನ್ನು ಮಾಡಿ ಕಟೀಲು ಮೇಳವನ್ನು ಸೇರಿದರು. ಈಗಾಗಲೇ 23 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಯಶೋಮತಿ, ನಂದಿನಿ, ಚಿತ್ರಾಂಗದೆ, ಶಶಿಪ್ರಭೆ, ಪ್ರಮೀಳೆ, ಮುಂತಾದ ಸ್ತ್ರೀಪಾತ್ರಗಳನ್ನು ಮಾಡುವ ಇವರು ರಾಮ, ಕೃಷ್ಣ, ಅರ್ಜುನ, ದೇವೇಂದ್ರ, ನಿಶುಂಭ ಇತ್ಯಾದಿ ಪಾತ್ರಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮಾಡಿದ್ದಾರೆ.

ಕಟೀಲು ಮೇಳದಲ್ಲಿ ಶ್ರೀದೇವಿಯ ಪಾತ್ರವನ್ನು ಮಾಡುತ್ತಿರುವ, ಇವರಿಗೆ ಆ ಪಾತ್ರವು ಹೆಚ್ಚಿನ ಪ್ರಸಿದ್ಧಿಯನ್ನು ತಂದು ಕೊಟ್ಟಿದೆ. ಸ್ತ್ರೀ ವೇಷ, ರಾಜವೇಷ, ಪುಂಡುವೇಷ ಮತ್ತು ಬಣ್ಣದ ವೇಷಗಳನ್ನು ಮಾಡಿದ ಅನುಭವ ಇವರಿಗಿದೆ.

ಶ್ರೀಮತಿ ಗೀತಾ ಎಂಬವರನ್ನು ವರಿಸಿರುವ ರಮೇಶಭಟ್ಟರು ಶ್ರೀರಾಮ ಎಂಬ ಸುಪುತ್ರನನ್ನು ಪಡೆದಿದ್ದಾರೆ. ತಾಳಮದ್ದಳೆಯ ಅರ್ಥಧಾರಿಯಾಗಿ, ಯಕ್ಷಗಾನ ಪೂರ್ವರಂಗ ವಿಭಾಗದ ಸಂಗೀತಗಾರರಾಗಿ ಅನುಭವಗಳನ್ನು ಗಳಿಸಿಕೊಂಡಿದ್ದಾರೆ.



ರವಿಚಂದ್ರ ಕನ್ನಡಿಕಟ್ಟೆ

*"ಸುಧರ್ಮ ನಿಲಯ"*
*ಪಜಿಮಾರು, ಗರ್ಡಾಡಿ ಅಂಚೆ & ಗ್ರಾಮ*
*ಬೆಳ್ತಂಗಡಿ ತಾಲೂಕು – 574217*
*(ಮೊಬೈಲ್) 9449348849*

ಭಾಗವತಿಕೆಯ ಮೂಲಕ ಜನ ಮನ್ನಣೆಯನ್ನು ಪಡೆಯುತ್ತಾ ಕೀರ್ತಿ ಸಂಪನ್ನರಾಗಿ ಬೆಳೆಯುತ್ತಿರುವ ಶ್ರೀ ರವಿಚಂದ್ರ ಕನ್ನಡಿ ಕಟ್ಟೆಯವರು ಪ್ರಸ್ತುತ ಮಂಗಳಾದೇವಿ ಮೇಳದ ಮುಖ್ಯ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಧರ್ಮಣ ಸಾಲ್ಯಾನ್ ಮತ್ತು ಸುಶೀಲ ದಂಪತಿಯ ಸುಪುತ್ರರಾಗಿ ದಿನಾಂಕ 4-10- 1980ರಂದು ಸುಧರ್ಮ ನಿಲಯದಲ್ಲಿ ಹುಟ್ಟಿದರು. 10ನೇ ಇಯತ್ತೆಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಹದಿನಾರನೇ ವರ್ಷದಿಂದ

ಯಕ್ಷಗಾನ ಕಲಾ ಪ್ರವೇಶ ಮಾಡಿದರು. ಪಡಂಗಡಿ ಶಾಲೆಯ ಅಧ್ಯಾಪಕರಾದ ಶ್ರೀ ಅನಂತ ಪದ್ಮನಾಭ ಹೊಳ್ಳ ಮತ್ತು ಕಲಾವಿದ ಶ್ರೀ ಸದಾಶಿವ ಕುಲಾಲ್ ಅವರ ಪ್ರೇರಣೆ ಹಾಗೂ ಪ್ರೋತ್ಸಾಹದ ಮೇರೆಗೆ ಶ್ರೀ ಪದ್ಯಾಣ ಗಣಪತಿ ಭಟ್ ಮತ್ತು ಸಬ್ಬಣಕೋಡಿ ಕೃಷ್ಣ ಭಟ್ ಅವರಿಂದ ಕ್ರಮವಾಗಿ ಭಾಗವತಿಕೆ ಹಾಗೂ ನಾಟ್ಯಾಭ್ಯಾಸವನ್ನು ಮಾಡಿರುವರು.

ಸುರತ್ಕಲ್ ಮೇಳ ಮೇಳ - 1 ವರ್ಷ-2 ವರ್ಷ,ಕರ್ನಾಟಕ ಮತ್ತು ಮಂಗಳಾದೇವಿ ಮೇಳದಲ್ಲಿ 11 ವರ್ಷಗಳ ತಿರುಗಾಟವನ್ನು ಪೂರೈಸಿರುವ ರವಿಚಂದ್ರರು ಆರಂಭದಲ್ಲಿ ಹವ್ಯಾಸಿಯಾಗಿ ರಾಮ, ಹನುಮಂತ, ಪ್ರಭಾವತಿ, ರಂಭೆ, ಕುಶ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಇವರು ಮೊದಮೊದಲಿಗೆ ಮೇಳದಲ್ಲೂ ಸ್ತ್ರೀ ಪಾತ್ರ ಹಾಗೂ ಪುಂಡು

ವೇಷಗಳನ್ನು ಮಾಡಿದ್ದಾರೆ. ಪದ್ಯಾಣ ಗಣಪತಿ ಭಟ್ಟರ ಶೈಲಿಯ ಅನುಸರಣೆಯಲ್ಲಿ ಬೆಳೆದಿರುವ ಇವರು ಆಟ ಕೂಟಗಳೆರಡರಲ್ಲೂ ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆಯುತ್ತಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಶ್ರೀಮತಿ ಶುಭಲತಾ ಎಂಬವರನ್ನು ವರಿಸಿರುವರು. ಇವರ ಯುವ ಪ್ರತಿಭೆಗೆ ಪುರಸ್ಕಾರ ವಾಗಿ ಗುರುವಾಯನಕೆರೆ, ಕನ್ನಡಿಕಟ್ಟೆ, ಬೆಳ್ತಂಗಡಿ ಮೊದಲಾದೆಡೆಯಲ್ಲಿ ಗೌರವ ಸಂಮಾನಗಳು ಸಂದಿವೆ.



ರಾಮಚಂದ್ರ ರಾವ್ ಕೋಳ್ಯೂರು

*ಇನ್ನಂಜೆ ಅಂಚೆ, ಉಡುಪಿ ಜಿಲ್ಲೆ*
*ದೂ. 0820.2559129*

ಸ್ತ್ರೀ ಪಾತ್ರಗಳಲ್ಲಿ ವರ್ಚಸ್ಸನ್ನು ಮೆರೆಸಿ, ಪ್ರತಿಭಾ ವಿಳಾಸದಿಂದ ಸರಿಸಾಟಿಯಿಲ್ಲದ ಕಲಾಸಾಧಕನಾಗಿ ಮಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಅರ್ಹರಾದ ಶ್ರೀ ಕೊಳ್ಯೂರು ರಾಮಚಂದ್ರರಾವ್ ಮೇಳದ ನಿವೃತ್ತ ಕಲಾವಿದರಾಗಿದ್ದು, ಹೇಳಿಕೆಯ ಮೇರೆಗೆ ಕಲಾಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ. ಕಾಸರಗೋಡು ಜಿಲ್ಲೆಯ ಕೊಳ್ಯೂರಿನಲ್ಲಿ ನಾರಾಯಣ ಭಟ್ಟ ಹಾಗೂ ರಾಧಮ್ಮ ದಂಪತಿಯ ಪುತ್ರರಾಗಿ ದಿನಾಂಕ 9-11-1932 ರಲ್ಲಿ ಜನಿಸಿದರು.

ಬಾಲ್ಯದಲ್ಲೇ ಯಕ್ಷಗಾನದ ಬಗ್ಗೆ ಆಕರ್ಷಿತರಾದ ಇವರು ಕುರಿಯ ವಿಠಲ ಶಾಸ್ತ್ರಿಯವರಲ್ಲಿ ಯಕ್ಷಗಾನದ ಅಭ್ಯಾಸ ಮಾಡಿ ಸ್ತ್ರೀ ವೇಷ ಹಾಗೂ ಪು0ಡು ವೇಷಗಳಲ್ಲಿ ಪ್ರೌಢಿಮೆಯನ್ನು ಸಾಧಿಸಿದರು. ಕಟೀಲು ಸುರತ್ಕಲ್, ಧರ್ಮಸ್ಥಳ, ಕೂಡ್ಲು, ಬಪ್ಪನಾಡು, ಕರ್ನಾಟಕ ಮೇಳಗಳು ಸೇರಿದಂತೆ 44 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಸುಭದ್ರೆ, ಅಂಬೆ, ಕಿನ್ನಿದಾರು, ಬೊಮ್ಮಕ್ಕೆ, ಸಿರಿ ,ಪ್ರಮೀಳೆ, ಚಿತ್ರಾಂಗದೆ ಮುಂತಾದ ಪಾತ್ರಗಳು ರಾಮಚ0ದ್ರರಾಯರಿಗೆ ಅಚ್ಚುಮೆಚ್ಚಿನ ಪಾತ್ರಗಳಾಗಿದ್ದವು. ಈ ಪಾತ್ರಗಳಿಂದಲೇ ಕೀರ್ತಿಯ ಶಿಖರವನ್ನು ಹತ್ತುತ ಜನ ಮಾತಾದರು. ಮತ್ತು ಕನ್ನಡ ಭಾಷೆಯ ವಿಭಿನ್ನ ಪಾತ್ರಗಳಲ್ಲಿ ತನ್ನದೇ ಆದ ಸ್ವಂತಿಕೆಯನ್ನು ಮೆರೆಸಿದ್ದಾರೆ.

ಅಕ್ಷಯಾಂಬರ ವಿಳಾಸದ ದೌಪದಿಯಾಗಿ, ದಕ್ಷಯಜ್ಞದ ದಾಕ್ಷಾಯಿಣಿಯಾಗಿ ಜನಮಾನಸದಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತಿದ್ದಾರೆ.

ಧರ್ಮಸ್ಥಳದ ಯಕ್ಷಗಾನ ಕಲಾಕೇಂದ್ರವೂ ಸೇರಿದಂತೆ ಹಲವಾರು ವರುಷಗಳಿಂದ ಹಲವೆಡೆಯಲ್ಲಿ ಯಕ್ಷಗಾನದ ತರಬೇತಿಯನ್ನು ನೀಡುತ್ತಾ ಇದ್ದಾರೆ. ಇಳಿವಯಸ್ಸಿನಲ್ಲು ಶ್ರದ್ದೆಯಿಂದ ಕಲಾಸೇವೆಯನ್ನು ಮಾಡುವ ಇವರ ನೂರಾರು ಶಿಷ್ಯರು ರಂಗದಲ್ಲಿ ಉತ್ತಮ ಕಲಾವಿದರಾಗಿ ಮೆರೆಯುತ್ತಾ ಇದ್ದಾರೆ.

ಪ್ರಾತ್ಯಕ್ಷಿಕೆ, ಕಮ್ಮಟಗಳ ಸಂಪನ್ಮೂಲ ವ್ಯಕ್ತಿಯಾಗಿ, ಪರಂಪರೆಯ ಬಗ್ಗೆ ನಿಖರವಾಗಿ ಹೇಳಬಲ್ಲ ಅಧೀಕೃತ ವ್ಯಕ್ತಿಯಾಗಿ, ಶಕ್ತ ಪ್ರತಿಭೆಯ ಅನುಪಮ ಸಾಧಕರಾಗಿ ಬ೦ದಿರುವ ಇವರ ಸಾಧನೆ ಅದ್ವಿತೀಯವಾಗಿದೆ.

2005 ರಿಂದ 3 ವರ್ಷಗಳ ಅವಧಿಗೆ ತುಳು ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರು, ಬೆಹರಿನ್, ದೆಹಲಿ, ಮುಂಬಯಿ, ಬೆಂಗಳೂರು ಮುಂತಾದೆಡೆಯಲ್ಲಿ ಗೌರವಕ್ಕೆ ಒಳಗಾಗಿದ್ದಾರೆ.

ಬೆಂಗಳೂರು ಭಾರ್ಗವ ಪ್ರಶಸ್ತಿ, ತುಳು ಜಾನಪದ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ 2010 ರಲ್ಲಿ ಡಾಕ್ಟರೇಟ್ ಪದವಿ ದೊರೆತಿದೆ.



## ರಾಮಕೃಷ್ಣ ರಾವ್ ರೆಂಜಾಳ

"ಶ್ರೀ ದೇವಿ ಕೃಪಾ", ಮರ್ಕಂಜ ಗ್ರಾಮ
ಸುಳ್ಯ ತಾಲೂಕು, ಬೊಳ್ಳಾಜೆ ಅಂಚೆ
ಮನೆ ದೂರವಾಣಿ : 08257 – 262880
( ಮೊಬೈಲ್) : 90663765960

ಸ್ತ್ರೀ ಪಾತ್ರಗಳನ್ನು ಮಾಡಿ ಉತ್ತಮಿಕೆಯನ್ನು ಮೆರೆದುದಲ್ಲದೆ ರಾಜವೇಷ ಮತ್ತು ನಾಟಕೀಯ ವೇಷಗಳ ಪಾತ್ರಗಳಲ್ಲಿ ತನ್ನದೇ ಆದ ವರ್ಚಸ್ಸನ್ನು ತೋರುತ್ತಾ ಕಲಾ ಸೇವೆಯನ್ನು ಮಾಡುತ್ತಿರುವ ಶ್ರೀ ರಾಮಕೃಷ್ಣ ಭಟ್ಟರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

19-5-1944 ರಲ್ಲಿ ವೆಂಕಟರಮಣಯ್ಯ ಮತ್ತು ಯಮುನಮ್ಮ ದಂಪತಿಯ ಸುಪುತ್ರರಾಗಿ ರೆಂಜಾಳದಲ್ಲಿ ಇವರು ಜನಿಸಿದರು. 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಶ್ರೀಯುತರು 21 ನೇ ವರ್ಷದಿಂದ ರಂಗಪ್ರವೇಶ ಮಾಡಿದರು.

ಕುದ್ಕಾಡಿ ವಿಶ್ವನಾಥ ರೈಯವರಿಂದ ಭರತನಾಟ್ಯವನ್ನು ಅಭ್ಯಾಸ ಮಾಡಿರುವ ಇವರು, ಅಗರಿ ಶ್ರೀನಿವಾಸ ಭಾಗವತರ ಉತ್ತೇಜನದೊಂದಿಗೆ, ಅಡ್ಕ ಸ್ಥಳ ನಾರಾಯಣ ಶೆಟ್ಟಿ, ಕುಡಾಣ ಗೋಪಾಲಕೃಷ್ಣ ಭಟ್, ಕೊಕ್ಕಡ ಈಶ್ವರ ಭಟ್ ಇವರು ಮೂವರ ಪಾತ್ರ ನಿರ್ವಹಣೆಯನ್ನು ನೋಡಿ ಬೆಳೆಯುತ್ತಾ ಕಲಾಸಾಧಕರಾದರು.

ಕೂಡ್ಲು, ಮಡಿಕೇರಿ ಮೇಳಗಳಲ್ಲಿ ಆರಂಭದ ತಿರುಗಾಟವನ್ನು ಮಡಿರುವ ಇವರು ಮುಂದೆ ಕಟೀಲು ಮೇಳವನ್ನು ಸೇರಿದವರು ಮೂರು ದಶಕಕ್ಕೂ ಮಿಕ್ಕಿದ ಕಲಾಸೇವೆಯನ್ನು ಮಾಡಿದ್ದಾರೆ.

ಶ್ರೀದೇವಿ, ಮೋಹಿನಿ, ಚಿತ್ರಾಂಗದೆ ಮುಂತಾದ ಸ್ತ್ರೀ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿ ಕೀರ್ತಿಯನ್ನು ಪಡೆದಿರುವ ಇವರು ಇತ್ತೀಚಿನ ವರ್ಷಗಳಿಂದ ಅರ್ಜುನ, ಕಾರ್ತವೀರ್ಯ, ಹಿರಣ್ಯಾಕ್ಷ, - ಮಧು-ಕೈ ಭಟರು ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

ಪೀಠಿಕೆ ರಾಜವೇಷದಲ್ಲಿ ಪರಂಪರೆಯ ಶೈಲಿಗೆ ಅನುಗುಣವಾಗಿ ಪಾತ್ರವನ್ನು ಚಿತ್ರಿಸುವ ಇವರು, ಹಲವು ಮಂದಿಗಳಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಪುರಾಣ ಜ್ಞಾನ, ಪ್ರಸಂಗ ಜ್ಞಾನದಲ್ಲಿ ಪಳಗಿದ್ದು ರಂಗಮಾಹಿತಿಯ

ಬಗ್ಗೆ ನಿಖರವಾಗಿ ಸಲಹೆ ನೀಡಬಲ್ಲ ಹಿರಿಮೆಯ ಕಲಾವಿದರು ಇವರಾಗಿದ್ದಾರೆ. ಕಮ್ಮಟ, ಪ್ರಾತ್ಯಕ್ಷಿಕೆಗಳಲ್ಲೂ ಭಾಗವಹಿಸಿದ್ದಾರೆ.

ಕೃಷಿಕರಾಗಿ ಶ್ರಮಿಸಿ, ಅನುಭವಿಯಾಗಿರುವ ರಾಮಕೃಷ್ಣರಾಯರು ಶ್ರೀಮತಿ ಇಂದಿರಾ ಎಂಬವರನ್ನು ವರಿಸಿದ್ದಾರೆ.

ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನವು ಸೇರಿದಂತೆ ಕಟೀಲು ಮೊದಲಾದೆಡೆ ಸ0ಮಾನ ಪುರಸ್ಕಾರಕ್ಕೆ ಒಳಗಾಗಿ ಕಲಾಭಿಮಾನಿಗಳಿಂದ ಗೌರವಿಸಲ್ಪಟ್ಟಿದ್ದಾರೆ.



**ರಾಮಕೃಷ್ಣ ಶೆಟ್ಟಿಗಾರ್**

*ನಾಪಾಡಿ ಮನೆ, ಅಶ್ವತ್ಥಪುರ ಅಂಚೆ*
*ತೆಂಕಮಿಜಾರು ಗ್ರಾಮ, ಮಂಗಳೂರು ತಾಲೂಕು*
*(ಮೊಬೈಲ್) 9945998465*

ಚೆಂಡೆ ಮದ್ದಳೆಯ ನುಡಿತ ಬಡಿತಗಳಲ್ಲಿ ಸಾಧನೆಯನ್ನು ಮಾಡಿ ಜನಮನ್ನಣೆಯನ್ನು ಪಡೆದಿರುವ ಶ್ರೀ ರಾಮಕೃಷ್ಣ ಶೆಟ್ಟಿಗಾರರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಹೊನ್ನಯ್ಯ ಶೆಟ್ಟಿಗಾರ್ ಮತ್ತು ರಾಧಾ ದಂಪತಿಯ ಸುಪುತ್ರರಾಗಿ ನಾಪಾಡಿ ಮನೆಯಲ್ಲಿ 1947ನೇ ವರ್ಷ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಅಪ್ಪಯ್ಯ ಮಾಸ್ಟರು ಗುರುಪುರ ಎಂಬವರಲ್ಲಿ ಚೆಂಡೆ ಮದ್ದಳೆಯ ನುಡಿತ ಬಡಿತಗಳ ಬಗ್ಗೆ ಅಭ್ಯಾಸವನ್ನು ಮಾಡಿ ಕಲಾಸೇವೆಯನ್ನು ಆರಂಭಿಸಿದರು.

ಕೂಡ್ಲು ಮೇಳ - 1ವರ್ಷ, ಮಂಗಳಾದೇವಿ-1 ವರ್ಷ, ಕದ್ರಿ ಮೇಳ - 1 RF,ಉಳ್ಳಾಲ ಭಗವತಿ ಮೇಳ ಮೇಳ-1 ವರ್ಷ. ಕಟೀಲು 23 ವರ್ಷ ಹೀಗೆ ಮೇಳಗಳ ತಿರುಗಾಟದ ಹಿನ್ನೆಲೆ ಇದೆ. ಕಲಾವಿದರ ಮನೋಧರ್ಮಕ್ಕೆ ತಕ್ಕಂತೆ ಚೆಂಡೆ-ಮದ್ದಳೆಯನ್ನು ನುಡಿಸಬಲ್ಲರು. ಇಷ್ಟಲ್ಲದೆ ಪೂರ್ವರಂಗದ ಹಾಡುಗಳನ್ನು ಹಾಡುವ ಕ್ರಮಗಳನ್ನು ಕೂಡಾ ತಿಳಿದಿದ್ದಾರೆ.

ಶ್ರೀಮತಿ ಯಮುನಾ ಎಂಬವರನ್ನು ವರಿಸಿರುವ ಇವರು ಶ್ರೀ ಗಣೇಶ್, ಶ್ರೀ ಲಕ್ಷ್ಮೀಶ, ವಿಶಾಲಾಕ್ಷಿ, ಸೀತಾಲಕ್ಷ್ಮಿ ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ.



**ರಾಮಕೃಷ್ಣ ಮಯ್ಯ ಸಿರಿಬಾಗಿಲು**

*"ಯಕ್ಷಾನುಗ್ರಹ", ಸಿರಿಬಾಗಿಲು ಅಂಚೆ*
*ವಯಾ ಕೂಡ್ಲು, ಕಾಸರಗೋಡು ಜಿಲ್ಲೆ-671124*
*(ಮೊಬೈಲ್) 9448344380*

ಸ್ವರ ಮಧುರತೆಯ ಉತ್ತಮ ಕಂಠದಿಂದ ಜನಮನ್ನಣೆಯನ್ನು ಪಡೆದಿರುವ ಶ್ರೀ ರಾಮಕೃಷ್ಣ ಮಯ್ಯರವರು ಧರ್ಮಸ್ಥಳ ಮೇಳದ 2ನೇ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಸಿರಿಬಾಗಿಲು ವೆಂಕಪ್ಪಯ್ಯ ಮತ್ತು ಪಾರ್ವತಿ ಅಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 25- 10-1967ರಂದು ಸಿರಿಬಾಗಿಲಿನಲ್ಲಿ ಹುಟ್ಟಿದರು. ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪೂರೈಸಿರುವ ಇವರು ಮನೆತನದ ಹಿನ್ನೆಲೆಯಿಂದ ಪ್ರತಿಭಾ ಸಂಪನ್ನರಾಗಿದ್ದರು.

ತಂದೆಯ ಅಜ್ಜ ಬನ್ನೂರು ವೆಂಕಪ್ಪಯ್ಯ, ತಾಯಿಯ ತಂದೆ ಪುತ್ತಿಗೆ ರಾಮಕೃಷ್ಣ ಜೋಯಿಸ (ಭಾಗವತರು), ಸೋದರ ಮಾವ ಪುತ್ತಿಗೆ ರಘುರಾಮ ಹೊಳ್ಳ ಇವರೆಲ್ಲರು ಯಕ್ಷಗಾನದ ಕಲಾಸಾಧಕರಾಗಿದ್ದು ಅವರ ಆದರ್ಶ ಮತ್ತು ಪ್ರೇರಣೆಯೊಂದಿಗೆ ಕಲಾಭಿರುಚಿಯನ್ನು ಬೆಳೆಸಿಕೊಂಡ ರಾಮಕೃಷ್ಣ ಮಯ್ಯರು ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಲ್ಲಿ ಭಾಗವತಿಕೆಯ ಅಭ್ಯಾಸ ಮಾಡಿರುವರು.

ಆರಂಭದಲ್ಲಿ ಕಟೀಲು ಮೇಳ 3 ವರ್ಷ, ಬಪ್ಪನಾಡು ಮೇಳ - 1 ವರ್ಷ, ಅನಂತರ ಧರ್ಮಸ್ಥಳ ಮೇಳವನ್ನು ಸೇರಿದವರು ಈಗಾಗಲೇ 21 ವರ್ಷಗಳ ತಿರುಗಾಟವನ್ನು ಪೂರೈಸಿರುವರು. ಮಳೆಗಾಲದಲ್ಲಿ ನಿಡ್ಲೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯ ಭಾಗವತರಾಗಿ ಕಳೆದ 23 ವರ್ಷಗಳಿಂದ ತಿರುಗಾಟವನ್ನು ನಡೆಸುತ್ತಿರುವರು.

ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿರುವ ಇವರು ಪರಶುರಾಮ, ರುಕ್ಮಿಣಿ ಮೊದಲಾದ ಪುಂಡು ಹಾಗೂ ಸ್ತ್ರೀ ವೇಷಗಳನ್ನು ಮಾಡಿರುವರು. ನಾಟ್ಯ ಮತ್ತು ಪಾತ್ರಚಿತ್ರಣದ ಬಗ್ಗೆ ಅನುಭವವಿರುವುದರಿಂದ ರಂಗದಲ್ಲಿ ಪಾತ್ರಕ್ಕೆ ತಕ್ಕಂತೆ ಹಾಡಬಲ್ಲವರು ಇವರಾಗಿದ್ದಾರೆ.

ಕೃಷಿಕ ಮನೆತನಕ್ಕೆ ಸೇರಿರುವ ಇವರು ಶ್ರೀಮತಿ ಶೀಲ ಎಂಬವರನ್ನು ವರಿಸಿ ಕುಮಾರಿ ಅನುಶ್ರೀ ಮತ್ತು ಕುಮಾರ ಅನಿರುದ್ಧ  ಎಂಬ ಇಬ್ಬರು ಸುಪುತ್ರರನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಯಾಗಿ ಹೈದರಬಾದ್,

ಕುಂದಾಪುರ, ಮೈಸೂರು, ಬೆಳಿಗಿರಿ, ರಂಗನಬೆಟ್ಟ, ಕೊಯಮುತ್ತೂರು, ಚಾಮರಾಜ ನಗರ ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



ರಾಮ ಕುಲಾಲ್, ದಾಸನಡ್ಕ

*"ತೆಂಕ ಕೆರೆ ಮನೆ"*
*ಧರ್ಮತಡ್ಕ ಅಂಚೆ, ವಯಾ ಮಂಗಲ್ಪಾಡಿ*
*ಕಾಸರಗೋಡು ತಾಲೂಕು ಜಿಲ್ಲೆ*

ರಾಜವೇಷ ಮತ್ತು ಬಣ್ಣದ ವೇಷಗಳ ಮುಖೇನ ಮನ್ನಣೆಗೆ ಪಾತ್ರರಾಗಿರುವ ಶ್ರೀ ರಾಮ ಕುಲಾಲ್ ದಾಸನಡ್ಕ ಇವರು ಪ್ರಸ್ತುತ ಕಟೀಲು ಮೇಳದ ಬಣ್ಣದ ವೇಷಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕುಂಜ ಮೂಲ್ಯ ಮತ್ತು ಅಪ್ಪು ಹೆಂಗು ದಂಪತಿಯ ಸುಪುತ್ರರಾಗಿ 1942ನೇ ವರ್ಷ ಧರ್ಮತಡ್ಕದಲ್ಲಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪ್ರಭಾವಕ್ಕೆ ಒಳಗಾಗಿ ಕಿರೀಟ ವೇಷಧಾರಿಯಾಗಿದ್ದ ಮಧೂರು ತಿಮ್ಮಪ್ಪರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

18ನೇ ವರ್ಷದಿಂದಲೇ ತಿರುಗಾಟವನ್ನು ಆರಂಭಿಸಿದ ಇವರು ಕಟೀಲು, ಧರ್ಮಸ್ಥಳ, ಚೌಡೇಶ್ವರಿ, ಕೊಲ್ಲೂರು, ಉಪ್ಪಳ, ಸ್ವರ್ಣಾಡು ಮೇಳಗಳು ಸೇರಿದಂತೆ ಒಟ್ಟು 43 ವರ್ಷಗಳ ತಿರುಗಾಟವನ್ನು ಮಾಡಿರುವರು.

ಶುಂಭ, ರಾವಣ, ನರಕಾಸುರ, ಮೈರಾವಣ, ಭೀಮ, ಶೂರ್ಪನಖಾ, ತಾಟಕಿ ಮೊದಲಾದ ಬಣ್ಣದ ವೇಷದ ಪಾತ್ರಗಳನ್ನು ಈವಾಗ ನಿರ್ವಹಿಸುತ್ತಾ ಇದ್ದಾರೆ. ಹಿಂದೆ ಕೌರವ, ದೇವೇಂದ್ರ, ಅರ್ಜುನ, ಶಿಶುಪಾಲ ಮೊದಲಾದ ರಾಜವೇಷದ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ. ಹಳೆಯ ಶೈಲಿಯ ಬಗ್ಗೆ . ಕಾಳಜಿವುಳ್ಳ ಮನೋಧರ್ಮ ಇವರದ್ದಾಗಿದೆ.

ಶ್ರೀಮತಿ ಲಕ್ಷ್ಮೀ ಎಂಬವರನ್ನು ವರಿಸಿರುವ ಇವರು ರುಕ್ಮಿಣಿ, ಮೋಹನ್, ಮತ್ತು ಚಂದ್ರಶೇಖರ ಬಿಎಸ್ಸಿ,ಬಿಎಡ್ (ಅಧ್ಯಾಪಕರು) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ರಾಮ ಕುಲಾಲರ ಕಲಾ ಸಾಧನೆಗೆ ಪೂರಕವಾಗಿ ಮುತ್ತಿಗೆ ಮತ್ತು ಮಂಜೇಶ್ವರದ ಹೊಸಬೆಟ್ಟಿನಲ್ಲಿ ಕುಲಾಲ ಸಂಘದ ವತಿಯಿಂದ ಸಂಮಾನಗಳು ಸಂದಿವೆ.



**ರಾಘವ ಜೋಡುಕಲ್ಲು**

*ಜೋಡುಕಲ್ಲು ಮನೆ, ಮೀಂಜ ಗ್ರಾಮ,*
*ಕಯ್ಯಾರು ಅಂಚೆ, ಕಾಸರಗೋಡು*
*ಮನೆ ದೂರವಾಣಿ: 04998 – 326148*

ಚೆಂಡೆ ಮದ್ದಳೆಯ ಬಾರಿಸುವಿಕೆಯಲ್ಲಿ ನುರಿತರಾಗಿ ಕಲಾಸೇವೆಯನ್ನು ಮಾಡುತ್ತಾ ಜನಮನ್ನಣೆಗೆ ಒಳಗಾಗಿರುವ ಶ್ರೀ ರಾಘವ ಜೋಡುಕಲ್ಲು ಇವರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಅಪ್ಪಯ್ಯ ಪುರುಷ ಹಾಗೂ ಮುತ್ತು ದಂಪತಿಯ ಸುಪುತ್ರರಾಗಿ ಜೋಡುಕಲ್ಲಿನಲ್ಲಿ ಹುಟ್ಟಿದ ರಾಘವರಿಗೆ 67 ವರ್ಷಗಳಾಗಿವೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕುದ್ರೆಕೂಡ್ಲು ರಾಂಭಟ್, ಕೃಷ್ಣಯ್ಯ, ಬಲ್ಲಾಳ್ ಮತ್ತು ದಿವಾಣ ಭೀಮ ಭಟ್ ಇವರುಗಳ ಮಾರ್ಗದರ್ಶನದಲ್ಲಿ ಬೆಳೆದು ಬಂದವರಾಗಿದ್ದಾರೆ.

ಸುಂಕದಕಟ್ಟೆ ಮೇಳ - 3 ವರ್ಷ, ಕೊಲ್ಲೂರು-3 ವರ್ಷ, ಧರ್ಮಸ್ಥಳ ಮೇಳ· 1ವರ್ಷ, ಉಪ್ಪಳ ಭಗವತಿ ಮೇಳ 3 RF,ಸುಬ್ರಹ್ಮಣ್ಯ ಮೇಳ1 ವರ್ಷ, ಕಟೀಲು ಮೇಳ 30 ವರ್ಷ ಹೀಗೆ ಸುದೀರ್ಘವಾದ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ಅರ್ಥಧಾರಿ ಕೃಷ್ಣ ಪುರುಷ ಎಂಬವರ - ಸಂಬಂಧಿಯಾಗಿರುವ ಇವರು ಹಲವಾರು ಹವ್ಯಾಸಿ ಕಲಾವಿದರಿಗೆ ಹಿಮ್ಮೇಳದ ಬಗ್ಗೆ ಮಾರ್ಗದರ್ಶನವನ್ನು ಮಾಡಿರುವರು.

ಶ್ರೀಮತಿ ದೇವಕಿ ಎಂಬವರನ್ನು ವರಿಸಿರುವ ಇವರಿಗೆ ಯಶೋದಾ, ಅನುಷಾ, ಪ್ರೇಮ, ಕನ್ಯಾಕುಮಾರಿ, ಗಿರೀಶ್, ಗಣೇಶ್ ಎಂಬ ಆರು ಮಂದಿ ಮಕ್ಕಳನ್ನು ಪಡೆದಿರುವರು. ಇವರ ಕಲಾಸಾಧನೆಯ ಹಿರಿಮೆಗೆ

ಫಲಶ್ರುತಿಯಾಗಿ ಕಿನ್ನಿಗೋಳಿ, ಹೊಸಂಗಡಿ, ಉಪ್ಪಳ, ಕೊಲಂಬೆ. ಮುಂತಾದ ಕಡೆಗಳಲ್ಲಿ ಸಂಮಾನಗಳು ಸಂದಿವೆ. ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನಕ್ಕೂ ಇವರು ಭಾಜನರಾಗಿದ್ದಾರೆ.



**ರಾಜಾರಾಮ್ ಕುಲಾಲ್, ಬಂದಾರು**

*ಪಾಣೆಕಲ್ಲು ಮನೆ*
*ಬಂದಾರು ಗ್ರಾಮ & ಅಂಚೆ*
*ಬೆಳ್ತಂಗಡಿ ತಾಲೂಕು – 574241*


ಬಣ್ಣ, ರಾಜ, ಪುಂಡು ವೇಷಗಳನ್ನು ಮಾಡುತ್ತಾ ಜನ ಮನ್ನಣೆಯನ್ನು ಪಡೆದಿರುವ ಶ್ರೀ ರಾಜಾರಾಮ್ ಕುಲಾಲರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಲಿಂಗಪ್ಪ ಕುಲಾಲ್ ಮತ್ತು ಚೆನ್ನಕ್ಕ ದಂಪತಿಯ ಸುಪುತ್ರರಾಗಿ ಬಂದಾರು ಎಂಬಲ್ಲಿ ಹುಟ್ಟಿದರು. 40 ವರ್ಷಗಳ ಮಯೋಮಾನಕ್ಕೆ ಅರ್ಹರಾದ ಇವರು ಕೀರ್ತಿಶೇಷ ಬಣ್ಣದ ಮಾಲಿಂಗರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದ್ದಾರೆ.

ಸ್ವಂತ ಆಸಕ್ತಿಯ ಮೇರೆಗೆ ಮೇಳ ತಿರುಗಾಟ ಮಾಡುವ ಉದ್ದೇಶದಿಂದ ಮೊದಲಾಗಿ ಕಟೀಲು ಮೇಳವನ್ನು ಸೇರಿ 3 ವರ್ಷಗಳ ತಿರುಗಾಟವನ್ನು ಪೂರೈಸಿದರು. ಅನಂತರ ಬಪ್ಪನಾಡು ಮೇಳದಲ್ಲಿ ಎರಡು ವರುಷಗಳ ತಿರುಗಾಟವನ್ನು ಪೂರೈಸಿ - ಸುಂಕದಕಟ್ಟೆಯ ಮೇಳವನ್ನು ಸೇರಿದವರು 15 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಶುಂಭ, ರಾವಣ, ಕುಂಭ ಕರ್ಣ, ಭೀಮ, ವರಾಹ, ದಾರಿಕಾಸುರ, ಶಿಶುಪಾಲ, ಕೇಮರ ಬಲ್ಲಾಳ, ಮತ್ಸ, ಶೂರ್ಪನಖಾ, ತಾಟಕಿ, ಕಾಂತಾಬಾರೆ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಶ್ರೀಮತಿ ಯಮುನಾ ಎಂಬವರನ್ನು ವರಿಸಿ ಅಕ್ಷತಾ, ಪ್ರಸಾದ್, ಜಿತೇಶ್ ಎಂಬ ಮಕ್ಕಳನ್ನು ಪಡೆದಿರುವರು. ರಾಜಾರಾಮರ ' ಸಾಧನೆಯನ್ನು ಗುರುತಿಸಿ ಬಂದಾರು ಗ್ರಾಮದ ಕಲಾಭಿಮಾನಿಗಳು ಗೌರವದಿಂದ ಸಂಮಾನಿಸಿದ್ದಾರೆ.



**ಲಕ್ಷ್ಮಣ ಗೌಡ ಬೆಳಾಲು**

*'ಹುಣಸೆಪುಡಿ ಮನೆ', ಬೆಳಾಲು ಗ್ರಾಮ ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು – 574240*
*(ಮೊಬೈಲ್) 9448633689*

ಪುಂಡು ವೇಷ ಮತ್ತು ಸ್ತ್ರೀ ವೇಷ, ರಾಜ ವೇಷ, ನಾಟಕೀಯ ವೇಷಗಳನ್ನು ಮಾಡಿ ಕೀರ್ತಿಸಂಪನ್ನರಾಗಿರುವ ಶ್ರೀ ಲಕ್ಷ್ಮಣ ಗೌಡ ಬೆಳಾಲು ಇವರು ಧರ್ಮಸ್ಥಳ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 1-1-1956ರಲ್ಲಿ ಚೇಂಕ್ರ ಗೌಡ ಮತ್ತು ಲಕ್ಷ್ಮೀ ದಂಪತಿಯ ಸುಪುತ್ರರಾಗಿ ಬೆಳಾಲಿನಲ್ಲಿ ಹುಟ್ಟಿದರು. 7ನೇ ತರಗತಿಯ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತ ಆಸಕ್ತಿಯ ಮೇರೆಗೆ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ.

ಪಡ್ರೆ ಚಂದು ಮತ್ತು ಕೋಳ್ಯೂರು ರಾಮಚಂದ್ರ ರಾವ್ ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ 1975ನೇ ವರ್ಷದಿಂದ ತಿರುಗಾಟವನ್ನು ಆರಂಭಿಸಿದರು. ಕಟೀಲು ಮೇಳ 6 ವರ್ಷ, ಪುತ್ತೂರು ಮೇಳ 7 ವರ್ಷ, ಸುಂಕದಕಟ್ಟೆ ಮೇಳ 6 ವರ್ಷ, ಕದ್ರಿ ಮೇಳ 2 ವರ್ಷ, ಕುಂಟಾರು ಮೇಳ 3 ವರ್ಷ, ಎಡನೀರು ಮೇಳ3 ವರ್ಷ ಹಾಗೂಧರ್ಮಸ್ಥಳ ಮೇಳ – 3 ವರ್ಷ ಹೀಗೆ ತಿರುಗಾಟವನ್ನು ನಡೆಸಿರುವರು.

ತುಳು ಹಾಗೂ ಕನ್ನಡ ಭಾಷೆಯಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಇವರು ದೇವಿ, ಮಾಲಿನಿ, ಮೋಹಿನಿ, ದೌಪದಿ, ಭ್ರಮರಕುಂತಳೆ, ಪ್ರಮೀಳೆ, ವಿಷ್ಣು, ಅರ್ಜುನ, ಧರ್ಮರಾಯ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಶ್ರೀಮತಿ ಶಾರದಾ ಎಂಬವರನ್ನು ವರಿಸಿ, ಮಹೇಶ್ (ಅಧ್ಯಾಪಕ) ಪ್ರವೀಣ್ (ಡಿಪ್ಲೊಮಾ ವಿದ್ಯಾರ್ಥಿ) ಸುಮನಾ (ಬಿ.ಎಸ್ಸಿ.), ಶಶಿಕಲಾ (10ನೇ ತರಗತಿ) ಎಂಬ ನಾಲ್ಕು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಯನ್ನು ಗಮನಿಸಿ ಬೆಳಾಲಿನ ಸುಬ್ರಹ್ಮಣ್ಯ ಯಕ್ಷಗಾನ ಸಂಘವು ಗೌರವಿಸಿ ಸಂಮಾನಿಸಿದೆ.



ಲಕ್ಷ್ಮಣ ಕಲ್ಲುಗುಡ್ಡೆ

'ಕಲ್ಲುಗುಡ್ಡೆ ಮನೆ', ನೂಜಿ ಬಾಳ್ತಿಲ ಅಂಚೆ
ವಯಾ ಕಡಬ, ಪುತ್ತೂರು ತಾಲೂಕು – 574221
(ಮೊಬೈಲ್) 9901441041

ಸ್ತ್ರೀ ಪಾತ್ರಧಾರಿಯಾಗಿ ಕಲಾಸೇವೆಯನ್ನು ಮಾಡುತ್ತಿರುವ ಶ್ರೀ ಲಕ್ಷ್ಮಣ ಕಲ್ಲುಗುಡ್ಡೆಯವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 20-6-1962ರಲ್ಲಿ ಸುಬ್ಬಣ್ಣ ಮತ್ತು ಶಿವಮ್ಮ ದಂಪತಿಯ ಸುಪುತ್ರರಾಗಿ ಕಲ್ಲುಗುಡ್ಡೆಯಲ್ಲಿ ಜನಿಸಿದರು. 7ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕಾಡುಮನೆ ರಾಮಣ್ಣ ಗೌಡ ಎಂಬವರ ಪ್ರೇರಣೆ ಮೇರೆಗೆ ಹವ್ಯಾಸಿ ಕಲಾವಿದರಾಗಿ ಬೆಳೆದು ಅನಂತರ ಮೇಳದ ತಿರುಗಾಟವನ್ನು ಆರಂಭಿಸಿದರು.

ಕಿರೀಟ ವೇಷಧಾರಿಯಾಗಿ ಮನ್ನಣೆ ಪಡೆದಿದ್ದ ತಣಿಯಪ್ಪ ಎಂಬವರ ಮೊಮ್ಮಗನಾಗಿರುವ ಇವರು 1985ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾಕೇಂದ್ರವನ್ನು ಸೇರಿ ಕೆ. ಗೋವಿಂದ ಭಟ್ ಮತ್ತು ಕರ್ಗಲು ವಿಶ್ವೇಶ್ವರಭಟ್ಟರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

ಕಟೀಲು ಮೇಳವೊಂದರಲ್ಲೇ 18 ವರ್ಷಗಳ ತಿರುಗಾಟವನ್ನು ಪೂರೈಸಿರುವ ಇವರು ಮಾಲಿನಿ, ಶ್ರೀದೇವಿ, ಧರ್ಮರಾಯ, ವಿಷ್ಣು, ಕೃಷ್ಣ, ಶಲ್ಯ, ನಾರದ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ನೂಜಿ ಬಾಳ್ತಿಲ ಕಾಲೇಜಿನ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿರುವ ಇವರು ಶ್ರೀಮತಿ ಚಂದ್ರಾವತಿ ಎಂಬವರನ್ನು ವರಿಸಿ, ರೂಪಶ್ರೀ (ದ್ವಿತೀಯ ಪಿ.ಯು.ಸಿ.) ಮತ್ತು ಚೇತನ್ ಕುಮಾರ್ - (10ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿರುವರು.



## ಲಕ್ಷ್ಮೀಶ ಅಮ್ಮಣ್ಣಾಯ

*ಎಣ್ಮಾಡಿ ಮನೆ*
*ಇಳಂತಿಲ ಗ್ರಾಮ, ಬೆಳ್ತಂಗಡಿ ತಾಲೂಕು*
*ಮೊಬೈಲ್ :9449282876*

ಚೆಂಡೆ-ಮದ್ದಳೆಯ ನುಡಿತ-ಬಡಿತಗಳಲ್ಲಿ ಕೈಚಳಕವನ್ನು ತೋರಿ ಪ್ರಸಿದ್ಧಿಗೇರಿರುವ ಕಲಾ ಸಾಧಕ ಶ್ರೀ ಲಕ್ಷ್ಮೀಶ ಅಮ್ಮಣ್ಣಯರು ಪ್ರಸ್ತುತ ಹೇಳಿಕೆಯ ಕಾರ್ಯಕ್ರಮಗಳಲ್ಲಿ ಮೇರೆಗೆ ಕ ಲಾ ಭಾಗವಹಿಸುತ್ತಿದ್ದಾರೆ.

ವಿಷ್ಣು ಅಮ್ಮಣ್ಣಾಯ ಮತ್ತು ಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ ಲಕ್ಷ್ಮೀಶ ಅಮ್ಮಣ್ಣಾಯರು ಜನಿಸಿದರು. ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿದ್ದರು.

ತಂದೆಯಯವರು ಉತ್ತಮ ಭಾಗವತರಾಗಿ, ಚೆಂಡೆ ಮದ್ದಳೆಯ ವಾಕದರಾಗಿ ಕಲಾ ಸೇವೆಯನ್ನು ಸಂಮಾನಗಳಾಗಿವೆ. ಮಾಡಿರುವವರಲ್ಲದೆ ಅರ್ಥಧಾರಿಯಾಗಿಯೂ ಮನ್ನಣೆಯನ್ನು ಪಡೆದಿದ್ದರು. ಸಹೋದರ ಮೋಹನ ಅಮ್ಮಣ್ಣಾಯರು ಚಿತ್ರಕಲಾವಿದ ಮತ್ತು ಮೃದಂಗ ವಿದ್ವಾನ್ ಆಗಿದ್ದಾರೆ. ಇನ್ನೋರ್ವ ಸಹೋದರ ರ ಘುರಾಂಸಂಗೀತ ಹಾಡುಗಾರರಾಗಿರುವುದರೊಂದಿಗೆ ವಯೋಲಿನ್ ವಿದ್ವಾನ್ ಆಗಿದ್ದಾರೆ. ಇದೇ ಹಿನ್ನೆಲೆ ಸಹೋದರಿಯಾದ ರಾಧಿಕಾ ಅವರಿಗೂ ಇದೆ. ಚಿಕ್ಕ ತಂದೆಯ ಸುಪುತ್ರರಾಗಿರುವ ದಿನೇಶ ಅಮ್ಮಣ್ಣಯರು ಪ್ರಸಿದ್ಧ ಭಾಗವತರಾಗಿದ್ದಾರೆ. ಇಂತಹ ಹಿನ್ನೆಲೆವುಳ್ಳ ಮನೆತನದಲ್ಲಿ ಹುಟ್ಟಿದ ಲಕ್ಷ್ಮೀಶ ಅಮ್ಮಣ್ಣಯರು ಯಕ್ಷಗಾನ ಕಲೆಯಲ್ಲಿ ಪಳಗಿ ಬೆಳೆದು ನಿಂತರು.

ಮುಂಡ್ರುಪ್ಪಾಡಿ ಶ್ರೀಧರರಾವ್ ಹಿಮ್ಮೇಳ ವಾದನದ ಅಭ್ಯಾಸವನ್ನು ಮಾಡಿದ ಇವರು ಧರ್ಮಸ್ಥಳ ಮೇಳದಲ್ಲಿ ಮೊದಲ 3 ವರ್ಷದ ತಿರುಗಾಟವನ್ನು ಪೂರೈಸಿದರು. ಆ ಮೇಲೆ ಪುತ್ತೂರು ಮೇಳ 1ವರ್ಷ, ಅರುವ ಮೇಳ ವರ್ಷ, ಬಪ್ಪನಾಡು ಮೇಳ -2ವರ್ಷ, ಕುಂಬ್ಳೆಮೇಳ-5ವರ್ಷ, ಕರ್ನಾಟಕ ಮೇಳ -1 ವರ್ಷ, ಕದ್ರಿಮೇಳ 7 ವರ್ಷ, ಮಂಗಳಾದೇವಿ ಮೇಳ 2 ವರ್ಷ ಹೀಗೆ ತಿರುಗಾಟವನ್ನು ಮಾಡಿರುವರು.ನಾಟ್ಯವನ್ನು ಅಭಾಸ ಮಾಡಿರುವ ಇವರು ಅಭಿಮನ್ಯು, ವರುಣ, ಮಾರುತ, ಮೊದಲಾದ ಪಾತ್ರಗಳನ್ನು ಮಾಡಿರುವರು.

ಶ್ರೀಮತಿ ಗೀತಾ ಎಂಬವರನ್ನು ವರಿಸಿರುವ, ಲಕ್ಷ್ಮೀಶ ಅಮ್ಮಣ್ಣಾಯರು ವಿಧಾರಾಣಿ, ಗುರುಮೂರ್ತಿ, ಶುಭಾ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಹವ್ಯಾಸಿ ಕಲಾವಿದರಿಗೆ ಹಿಮ್ಮೇಳದ ಬಗ್ಗೆ ತರಬೇತಿ ನೀಡಿರುವ ಇವರಿಗೆ ಎಡನೀರು, ಮಂಗಳೂರು ಮೊದ ಲಾದೆ ಡೆಯಲ್ಲಿ.



## ಲಕ್ಷ್ಮಣ ಕೋಟ್ಯಾನ್


"ಭ್ರಾಮರಿ ನಿವಾಸ, ಒಲ್ವಿನ್ ಗಾರ್ಡನ್

ಪಡುಪೆರಾರ ಗ್ರಾಮ, ಅಂಚೆ: ಕತ್ತಲಸಾ

ಮಂಗಳೂರು ತಾಲೂಕು

ಮೊಬೈಲ್: 9980754087


ರಾಜವೇಷ ಮತ್ತು ಬಣ್ಣದ ವೇಷಗಳಲ್ಲಿ ಪ್ರೌಢಿಮೆಯನ್ನು ಸಾಧಿಸಿ ಕೀರ್ತಿವಂತರಾಗಿರುವ ಶ್ರೀ ಲಕ್ಷ್ಮಣ ಕೋಟ್ಯಾನ್ ಇವರು ಕಟೀಲು ಮೇಳದ ಮುಖ್ಯ ವೇಷಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಚೆನ್ನಯ ಪೂಜಾರಿ ಮತ್ತು ಮುತ್ತು ಪೂಜಾರಿ ದಂಪತಿಯ ಸುಪುತ್ರರಾಗಿ 1953ನೇ ವರ್ಷದಲ್ಲಿ : ಮೂಡುಪೆರಾರದಲ್ಲಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನದತ್ತ ಆಕರ್ಷಿತರಾಗಿದ್ದರು.

ಕೀರ್ತಿಶೇಷ ಕಲಾವಿದರಾಗಿರುವ ಕ್ರಿಶನ್ ಬಾಬು ಇವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ಇವರು 6 ವರ್ಷಗಳ ತನಕ ಮುಂಬಯಿಯ ಶ್ರೀ ಗುರುನಾರಾಯಣ ಯಕ್ಷಗಾನ ಮಂಡಳಿಯಲ್ಲಿ ಕಲಾಸೇವೆಯನ್ನು ಮಾಡಿದ್ದರು. ಈಗಾಗಲೇ ಕಟೀಲು ಮೇಳದಲ್ಲಿ 22 ವರ್ಷಗಳ ತಿರುಗಾಟವನ್ನು ಪೂರೈಸಿರುವ ಲಕ್ಷ್ಮಣರು ಸುಂಕದಕಟ್ಟೆ, ತಲಕಳ ಮತ್ತು ಅಡ್ಯಾರು ಮೇಳಗಳಲ್ಲಿ ಒಂದೊಂದು ವರ್ಷಗಳ ತಿರುಗಾಟವನ್ನು ಪೂರೈಸಿರುವರು.

ಮಹಿಷಾಸುರ, ಶುಂಭ, ಭೀಮ, ಶೂರ್ಪನಖಾ, ಕುಂಭಕರ್ಣ, ಮಧೂ-ಕೈಟಭ, ಅರುಣಾಸುರ, ಸುಬಾಹು-ಮಾರೀಚ, ಹನೂಮಂತ ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾ ಇರುವ ಇವರು ಯಕ್ಷಗಾನ ಕಲಾಸಾಧನೆಯಲ್ಲಿ ತನ್ನದೇ ಆದ ವರ್ಚಸ್ಸನ್ನು ತೋರುತ್ತಾ ಇದ್ದಾರೆ.

ಶ್ರೀಮತಿ ಚಂದ್ರಾವತಿ ಎಂಬವರನ್ನು ವರಿಸಿರುವ ಲಕ್ಷ್ಮಣ ಕೋಟ್ಯಾನರು ಕುಮಾರಿ ಮಂಜುಳಾ (ಎಂ.ಎಸ್.ಸಿ) ಎಂಬ ಸುಪುತ್ರಿಯನ್ನು ಪಡೆದಿದ್ದಾರೆ. ಕಿನ್ನಿಗೋಳಿಯ ಕಲಾಭಿಮಾನಿಗಳು ಇವರ ಕಲಾಸಾದನೆಯನ್ನು ಗುರುತಿಸಿ ಸಂಮಾನಿಸಿದ್ದಾರೆ.



ಲೀಲಾವತಿ ಬೈಪಾಡಿತ್ತಾಯ

"ಕಲಾನುಗ್ರಹ", ಅಂಚೆ ಕೊಳಂಬೆ
ತಲಕಳ ಬಜ್ಪೆ ಮಂಗಳೂರು
ಮನೆ ದೂರವಾಣಿ: 0824, 2253543
ಮೊಬೈಲ್: 9481388887

ಯಕ್ಷಗಾನದ ಭಾಗವತರಾಗಿ 24 ವರ್ಷಗಳ ವೃತ್ತಿಯ ಅನುಭವವನ್ನು ಪ ಡೆ ದು ಕೀರ್ತಿವಂತರಾಗಿರುವ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರ ಕಲಾ ಸೇವೆ ಅಪೂರ್ವವೆನಿಸಿದೆ.

ಪುಂಡರೀಕಾಕ್ಷ ಹೆಬ್ಬಾರ್ ಮತ್ತು ಮಹಾಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ ದಿ. 23-5- 1947ರಂದು ಕಾಸರಗೋಡಿನ ಮಧೂರು ಎಂಬಲ್ಲಿ ಜನಿಸಿದರು. ಹಿಂದಿ ವಿಶಾರದ ಪದವಿಯನ್ನು ಪಡೆದಿರುವ ಇವರು ಮಧೂರು ಪದ್ಮನಾಭ ಸರಳಾಯರಲ್ಲಿ ಸಂಗೀತಾಭ್ಯಾಸ ಮಾಡಿದ್ದರು. ಆ ಮೇಲೆ ವಿವಾಹದ ನಂತರ ಪತಿ ಮದ್ದೆಗಾರ ಕೆ. ಹರಿನಾರಾಯಣ ಬೈಪಾಡಿತ್ತಾಯರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು.

ಪುತ್ತೂರು ಮೇಳ 3 ವರ್ಷ, ಸುಬ್ರಹ್ಮಣ್ಯ- 3 ವರ್ಷ, ಅರುವ ಮೇಳ—10 ವರ್ಷ,ಕುಂಬ್ಳೆ ಮೇಳ - 1 ವರ್ಷ, ಬಪ್ಪನಾಡು ಮೇಳ1 ವರ್ಷ, ತಲಕಳ ಮೇಳ—6 ವರ್ಷ ಹೀಗೆಪತಿಯ ಜೊತೆಯಲ್ಲಿ ಪತಿಯ ಪ್ರೇರಣೆಯಂತೆ ಕಲಾಸೇವೆಯನ್ನು ಮಾಡಿ ಪುರುಷ ಪ್ರಧಾನವಾದ ಯಕ್ಷಗಾನ ಕಲೆಯಲ್ಲಿ ಮಹಿಳೆಯೂ ಕೂಡಾ ಸಮರ್ಥವಾಗಿ ಕಾರ್ ನಿರ್ವಹಿಸಬಲ್ಲಳು. ಎಂಬುವುದನ್ನು ತೋರಿಸಿಕೊಟ್ಟರು.

ಗುರುಪ್ರಸಾದ್ ಬೈಪಾಡಿತ್ತಾಯ (ವ್ಯಾಪಾರದ ಉದ್ಯೋಗ), ಅವಿನಾಶ್ ಬೈಪಾಡಿತ್ತಾಯ (ವೆಬ್‌ಸೈಟ್ ಉದ್ಯೋಗಿ) ಎಂಬ ಈರ್ವರು ಮಕ್ಕಳನ್ನು ಪಡೆದಿದ್ದಾರೆ. ಅವಿನಾಶ್ ಬೈಪಾಡಿತ್ತಾಯರು ಮದ್ದಳೆ . ಮತ್ತು ಚೆಂಡೆಯ ನುಡಿತ ಬಡಿತಗಳ ಅಭ್ಯಾಸ ಮಾಡಿ ಪ್ರವೀಣರಾಗಿದ್ದಾರೆ.

ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ 10 ವರ್ಷಗಳ ಪರ್ಯಂತ ಗುರುವಾಗಿ ಸೇವೆಯನ್ನು ಸಲ್ಲಿಸಿರುವ ಇವರು ಹಲವೆಡೆಯಲ್ಲಿ ಭಾಗವತಿಕೆಯ ತರಬೇತಿಯನ್ನು ನಡೆಸಿದ್ದಾರೆ. ಅಬ್ಬಕ್ಕ ಪುರಸ್ಕಾರ, ಯಕ್ಷ ಪ್ರಮೀಳ ಪ್ರಶಸ್ತಿ, ಅಗರಿ ಪ್ರಶಸ್ತಿ, ರಾಮ ಗಾಣಿಗ ಪ್ರಶಸ್ತಿ, ಸಾಹಿತ್ಯ ಸಮ್ಮೇಳನದ ಸಂಮಾನಗಳು ಹೀಗೆ ಹಲವಾರು ಗೌರವಗಳಿಗೆ ಪಾತ್ರರಾಗಿರುವ ಇವರು ಚಲನಚಿತ್ರ ಗ್ರಹಣಕ್ಕೆ ಭಾಗವತಿಕೆಯನ್ನು ಮಾಡಿದ್ದಾರೆ.



ವೆಂಕಟೇಶ ಆಚಾರ್ಯ ಕಲ್ಲುಗುಂಡಿ

*"ಕಲ್ಲ ಸರ್ವೆ ಮನೆ"*
*ಇಡ್ಕಿದು ಅಂಚೆ, ಬಂಟ್ವಾಳ ತಾಲೂಕು*
*(ಮೊಬೈಲ್) 9901878018*

ದಿಗಿಣವೇ ಪ್ರಧಾನವಾಗಿದ್ದು ಪುಂಡುವೇಷ ಮತ್ತು ರಾಜವೇಷಗಳನ್ನು ಮಡುವ ಶ್ರೀ ವೆಂಕಟೇಶ ಆಚಾರ್ಯ ಕಲ್ಲಗುಂಡಿ ಇವರು ಪ್ರಸ್ತುತ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಲಿಂಗಪ್ಪ ಆಚಾರ್ಯ ಮತ್ತು ಭವಾನಿ ದಂಪತಿಯ ಸುಪುತ್ರರಾಗಿ ಕಲ್ಲು ಗುಂಡಿಯಲ್ಲಿ ಜನಿಸಿದ ವೆಂಕಟೇಶ ಆಚಾರ್ಯರಿಗೆ 38 ವರ್ಷಗಳು ಸಂದಿವೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರನ್ನು ಯಕ್ಷಗಾನದ ವೇಶಧಾರಿಯಗುವಂತೆ ದೊಡ್ಡಪ್ಪನಾದ ಮರ್ದಾಲ ಕೃಷ್ಣಪ್ಪ ಆಚಾರ್ಯರು ಪ್ರೋತ್ಸಾಹಿಸಿದರು.

13ನೇ ವಯಸ್ಸಿನಿಂದ ಪಾತ್ರ ನಿರ್ವಹಣೆ ಮಾಡಲಾರಂಭಿಸಿದ ಇವರು ಧರ್ಮಸ್ಥಳ ಕ್ಷೇತ್ರದ ಲಲಿತಕಲಾ ಕೇಂದ್ರದಲ್ಲಿ ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದರು. ಆಮೇಲೆ ಕಟೀಲು ಮೇಳವನ್ನು ಸೇರಿ 18 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಇತ್ತೀಚೆಗಿನ 3 ವರ್ಷಗಳಿಂದ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಚಂಡ-ಮುಂಡರು, ಯಕ್ಷ, ವೃಷಕೇತು, ಚಂಡ- ಪ್ರಚಂಡರು, ಅಭಿಮನ್ಯು, ವಿದ್ಯನ್ಮಾಲಿ, ದೂಮ್ರಾಕ್ಷ, ಹುಂಡ-ಮುಂಡರು, ಕಮಲಗಂಧಿನಿ, ದಂಡನಾಥೆ, ಬಾಲಸರಸ್ವತಿ, ಮೊದಲಾದ ಪಾತ್ರನಿರ್ವಹಿಸಿದ್ದಾರೆ.

ಚೆಂಡೆ ಮದ್ದಳೆ ಬಾರಿಸುವಿಕೆಯ ಆಸಕ್ತಿವುಳ್ಳ ಇವರು ಸಂಪಾಜೆ ಮತ್ತು ಮಾಣಿಯಲ್ಲಿನ ಶಾಲೆಗಳಲ್ಲಿ ತರಬೇತಿಯನ್ನು ನೀಡಿದ್ದಾರೆ. ಶ್ರೀಮತಿ ಸುಧಾ . ಎಂಬವರನ್ನು ವರಿಸಿರುವ ಇವರು ಪುನೀತ್ ಕುಮಾರ್ ಎಂಬ ಸುಪುತ್ರನನ್ನು ಪಡೆದಿದ್ದಾರೆ.



ಉತ್ತಮವಾದ ಮಾತು ಮತ್ತು ನಾಟ್ಯ ಶೈಲಿಯಿಂದ ಯಕ್ಷಗಾನದ ಕಲಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿ ಪ್ರಸಿದ್ಧರಾದ ಪಾತಾಳ ವೆಂಕಟರಮಣ ಭಟ್ಟರು ಧರ್ಮಸ್ಥಳ ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

8-11-1993ರಲ್ಲಿ ರಾಮಭಟ್ಟ ಹಾಗೂ ಹೇಮಾವತಿ ದಂಪತಿಯ ಸುಪುತ್ರರಾಗಿ ಪುತ್ತೂರು ಕಬಕದ ಬೈ ಪದವಿನಲ್ಲಿ ಜನಿಸಿದರು. ಕಾಂಚನ ಕೃಷ್ಣ ಭಟ್ ಮತ್ತು ಮಾಣಂಗಾವಿ ಕೃಷ್ಣ ಭಟ್ಟರ ನೇತೃತ್ವದಲ್ಲಿ ನೃತ್ಯಾಭ್ಯಾಸ ಮತ್ತು ರಂಗಾನುಭವವನ್ನು ಸಂಪಾದಿಸಿ ಬೆಳೆದರು.

ಕಾಂಚನ ಯಕ್ಷಗಾನ ನಾಟಕ ಕಂಪೆನಿಯಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಬೆಳೆದು ಮುಂದಕ್ಕೆ ಸೌಕೂರು, ಮೂಲ್ಕಿ, ಸುರತ್ಕಲ್ ಮತ್ತು ಧರ್ಮಸ್ಥಳ ಮೇಳಗಳಲ್ಲಿ ಮೂವತ್ತು ವರ್ಷಗಳ ಕಲಾಸೇವೆಯನ್ನು ಮಾಡಿ ಕೀರ್ತಿವಂತರಾಗಿರುವರು.

ಸುಭದ್ರೆ, ಚಿತ್ರಾಂಗದೆ, ಮೇನಕೆ, ದಾಕ್ಷಾಯಿಣಿ, ದೌಪದಿ, ಶ್ರೀದೇವಿ ಮೊದಲಾದ ಪಾತ್ರಗಳನ್ನು ಮಾಡಿರುವ ಇವರು ಭಾವಪೂರ್ಣವಾದ ಅಭಿನಯವನ್ನು ತೋರಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿರುವರು. ಸ್ತ್ರೀ ಪಾತ್ರಗಳ ಗೌರವಕ್ಕೆ ತಕ್ಕಂತೆ . ನಟಿಸ ಬಲ್ಲ ಪ್ರತಿಭೆ ಇವರಲ್ಲಿ ರಕ್ತಗತವಾಗಿದೆ.

ಯಕ್ಷಗಾನದ ಕಮ್ಮಟಗಳಲ್ಲಿ ಸ್ತ್ರೀ ಪಾತ್ರದ ವೇಷ- ಭೂಷಣ, ನಾಟ್ಯ ಹಾಗೂ ಮಾತಿನ ಶೈಲಿಯ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ನೀಡಿರುವ ಪಾತಾಳ ವೆಂಕಟರಮಣ ಭಟ್ಟರು ಬೇಲೂರಿನ ಶಿಲಾಬಾಲಿಕೆಯರ ಅಲಂಕಾರ ವಿನ್ಯಾಸದಿಂದ ಪ್ರಭಾವಿತರಾಗಿ ಸ್ತ್ರೀ ಪಾತ್ರಕ್ಕೆ ತನ್ನದೇ ಆದ ಮಾದರಿಯನ್ನು ನೀಡಿದ್ದಾರೆ. ನಾಡ ಸಂಸ್ಕೃತಿಯನ್ನು ಬಿಂಬಿಸುವ ಈ ಮಾದರಿಯನ್ನು ಇವರ ಸುಪುತ್ರ ಸ್ತ್ರೀ ಪಾತ್ರಧಾರಿಯಾದ ಅಂಬಾಪ್ರಸಾದರು ಅನುಸರಿಸುತ್ತಿದ್ದಾರೆ.

ಶ್ರೀಮತಿ ಪರಮೇಶ್ವರಿ ಎಂಬವರನ್ನು ವರಿಸಿ ಅಂಬಾಪ್ರಸಾದ್, ಶ್ರೀರಾಮ್, ಹೇಮಲತಾ, ಸುಕನ್ಯ, ವಂದ್ಯ, ಜಯಲಕ್ಷ್ಮಿ ಎಂಬ ಎರಡು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳನ್ನು ಪಡೆದಿರುವರು.

ಇವರ ಸಾಧನೆಗೆ ಪ್ರತಿಫಲವಾಗಿ ರಾಜ್ಯೋತ್ಸವ ಪ್ರಶಸ್ತಿ, ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನ ಮುಂತಾದುವುಗಳಲ್ಲದೆ ಹತ್ತು ಹಲವೆಡೆಗಳಲ್ಲಿ ಅಭಿಮಾನಿಗಳಿಂದ ಗೌರವ ಸಂಮಾನಗಳನ್ನು ಪಡೆದು ಕೀರ್ತಿವಂತರಾಗಿದ್ದಾರೆ.




ವಿಶ್ವನಾಥ ಶೆಟ್ಟಿ ಸಿದ್ದಕಟ್ಟೆ

"ಯಕ್ಷ ಶ್ರೀ", ಅಂಚೆ: ಅಜ್ಜಿಬೆಟ್ಟು,
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574324
ದೂರವಾಣಿ: 08256–264664.
ಮೊಬೈಲ್: 9845258233


ಶ್ರೀ ಸಾಲಿಗ್ರಾಮ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಿರುವ ಶ್ರೀ ಸಿದ್ಧಕಟ್ಟೆ ವಿಶ್ವನಾಥ ಶೆಟ್ಟರು ಅರ್ಥಧಾರಿಯಾಗಿ, ವೇಷಧಾರಿಯಾಗಿಯೂ ಜನಮನ್ನಣೆಯನ್ನು ಪಡೆದಿದ್ದಾರೆ.

ಕೊರಗ ಶೆಟ್ಟಿ ಮತ್ತು ರೇವತಿ ಕೆ. ಶೆಟ್ಟಿ ದಂಪತಿಯ ಸುಪುತ್ರರಾಗಿ ಬಂಟ್ವಾಳ ತಾಲೂಕಿನ ಅಜ್ಜಿಬೆಟ್ಟಿನಲ್ಲಿ

24-7-1957ರಂದು ಇವರು ಜನಿಸಿದರು. ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬಗ್ಗೆ ಆಸಕ್ತಿ ಹುಟ್ಟಿದ ಕಾರಣದಿಂದ ಕಲಾವಿದರಾಗಿ ಬೆಳೆದರು.

ಕಾವೂರು ಕೇಶವ ಇವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ವಶ್ವನಾಥ ಶೆಟ್ಟರು ಕಟೀಲು ಮೇಳ-1 ವರ್ಷ, ಕದ್ರಿ ಮೇಳ-8 ವರ್ಷ, ಕರ್ನಾಟಕ ಮೇಳ- 2 ವರ್ಷ, ಮಂಗಳಾದೇವಿ ಮೇಳ-5 ವರ್ಷ ಹಾಗೂ ಸಾಲಿಗ್ರಾಮ ಮೇಳ-15 ವರ್ಷ ಒಟ್ಟು 31 ವರ್ಷಗಳ ಮೇಳ ತಿರುಗಾಟದ ಅನುಭವವನ್ನು ಸಂಪಾದಿಸಿದ್ದಾರೆ.

ಪುಂಡು ವೇಷ ಮತ್ತು ಪೋಷಕ ಪಾತ್ರಗಳನ್ನು ಮಾಡಿರುವ ಇವರು ಸುಧನ್ವ, ಕೃಷ್ಣ, ವಾಮನ, ರಾಮ, ವಾಲ್ಮೀಕಿ, ಶಲ್ಯ, ಭೀಷ್ಮ, ಸಂಜಯ, ಧರ್ಮರಾಯ, ಪರಶುರಾಮ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಆಕರ್ಷಣೀಯವಾದ ಮಾತಿನ ಶೈಲಿಯಿಂದಲೇ ಪಾತ್ರಗಳಿಗೆ ಜೀವ ತುಂಬಿ ಪ್ರೇಕ್ಷಕರ ಮನವನ್ನು ತಣಿಸಬಲ್ಲ ವ್ಯಕ್ತಿತ್ವ ಇವರಲ್ಲಿದೆ.

ತಾಳಮದ್ದಳೆಯ ಅರ್ಥಧಾರಿಯಾಗಿ ನಾಡಿನಾದ್ಯಂತ ಮನ್ನಣೆಯನ್ನು ಪಡೆದಿರುವ ಇವರು ಪ್ರಸಂಗಕರ್ತರಾಗಿಯೂ ಜನಮನ್ನಣೆಯನ್ನು ಪಡೆದಿದ್ದಾರೆ. ಚಾಣಕ್ಯ ತಂತ್ರ, ವಿಷಮ ಸಮರಂಗ ಮುಂತಾದ ಪ್ರಸಂಗಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಭಾಷೆಯ ಬಗ್ಗೆ ಹಿಡಿತವಿದ್ದು

ಸಾಹಿತ್ಯ ಸೌಂದರ್ಯವನ್ನು ಅರ್ಥಗಾರಿಕೆಯಲ್ಲಿ ಇವರು ಮೆರೆಸುವಂತೆ, ಪದ್ಯ ರಚನೆಯಲ್ಲೂ ಮೆರೆಸಿ ಸತೀರ್ತಿಗೆ ಪಾತ್ರರಾಗಿದ್ದಾರೆ.

ಶ್ರೀಮತಿ ಜಯಂತಿ ಎಂಬವರನ್ನು ವರಿಸಿರುವ ಇವರು ಅಕ್ಷತಾ ವಿ. ಶೆಟ್ಟಿ, ಸುದರ್ಶನ ವಿ. ಶೆಟ್ಟಿ (ಪ್ರಾಧ್ಯಾಪಕ), ಭರತ್ ರಾಜ್ ವಿ. ಶೆಟ್ಟಿ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಮಂಗಳೂರು, ಮುಂಬಯಿ, ಬೆಂಗಳೂರು ಹಾಗೂ ಊರಿನ ಹಲವೆಡೆಯಲ್ಲಿ ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು, ಸಂಮಾನ ಪುರಸ್ಕಾರಗಳು ಸಂದಿವೆ.



ವಿಶ್ವನಾಥ ನಾಯಕ್ ಕಾರಿಂಜ

*ನೆಲ್ಲಿಗುಡ್ಡೆ ಮನೆ ,*
*ಕಾವಳ ಮೂಡೂರು ಗ್ರಾಮ, ಕಾವಳ ಕಟ್ಟೆ ಅಂಚೆ,*
*ಬಂಟ್ವಾಳ ತಾಲೂಕು 574211*
*ಮೊಬೈಲ್ : 9972989141.*

ರಾಜವೇಷ ಮತ್ತು ಬಣ್ಣದ ವೇಷಗಳನ್ನು ಮಾಡುತ್ತಾ ಕಟೀಲು ಮೇಳದ ಕಲಾವಿದರಾಗಿ ಮನ್ನಣೆಗೆ ಒಳಗಾಗಿರುವ ಶ್ರೀವಿಶ್ವನಾಥ ನಾಯಕ್ ಕಾರಿಂಜ ಇವರು ತಾಳಮದ್ದಳೆಯಲ್ಲೂ ಅರ್ಥ ಮಾತಾಡುವವರಾಗಿದ್ದಾರೆ.

ಶ್ರೀನಿವಾಸ ನಾಯಕ್ ಮತ್ತು ಗುಲಾಬಿ ದಂಪತಿಯ ಸುಪುತ್ರರಾಗಿ 30-11-1969ರಲ್ಲಿ ನೆಲ್ಲಿಗುಡ್ಡೆ ಮನೆಯೊಳಗೆ ಜನಿಸಿದರು. ಹತ್ತನೆ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪರಿಸರಕ್ಕೆ ಸೇರಿದವರಾಗಿದ್ದ ಕಾರಣ ಬಾಲ್ಯದಿಂದಲೇ ಯಕ್ಷಗಾನದತ್ತ ಆಕರ್ಷಿತರಾಗಿದ್ದರು.

1992ರಲ್ಲಿ ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿದ ಇವರು ಕೋಳ್ಯೂರು ರಾಮಚಂದ್ರರಾವ್ ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ 21ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದರು.

ಮೊದಲ ವರ್ಷ ತಲಕಳ ಮೇಳದಲ್ಲಿ ತಿತುಗಾಟವನ್ನು ಮಾಡಿದ ಇವರು ಆಮೇಲೆ ಕಟೀಲು ಮೇಳವನ್ನು ಸೇರಿ ಈಗಾಗಲೇ 17ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ದೇವೇಂದ್ರ, ಅರ್ಜುನ, ಅಕ್ರೂರ ಮಯೂರ ಧ್ವಜ, ತಾರಕಾಸುರ, ಶೂರ್ಪನಖಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ತಾಳಮದ್ದಳೆಯಲ್ಲಿ ಆಸಕ್ತರಾಗಿರುವ ಇವರು ಅರ್ಥಗಾರಿಕೆಗೆ ಪೂರಕವಾಗಿ ಪುರಾಣ ಜ್ಞಾನ ಸಂಪನ್ನರಾಗಿದ್ದಾರೆ. ಯಕ್ಷಗಾನ ಕಲಾಕ್ಷೇತ್ರದಲ್ಲಿ ಬೆಳೆಯಬೇಕೆಂಬ ಹಂಬಲವನ್ನು ಹೊಂದಿರುವ ಇವರು ಶ್ರೀಮತಿ ಅರುಣಾ ಎಂಬವರನ್ನು ವರಿಸಿ ಪ್ರಜ್ಞಾ ಮತ್ತು ಪ್ರಜ್ವಲ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



ವಿಶ್ವನಾಥ ರೈ ಕೆ. ಬೆಳ್ಳಾರೆ

*ಮಾಡಾವ ಅಂಚೆ*
*ಪುತ್ತೂರು ತಾಲ್ಲೂಕು, ದ.ಕ 574318*

ತನ್ನದೇ ಆದ ಶೈಲಿಯಿಂದ, ಸ್ತ್ರೀವೇಷ, ಮುಂಡುವೇಷ ಹಾಗೂ ಕಥಾನಾಯಕ ಪಾತ್ರಗಳು ಸೇರಿದಂತೆ ಮುಖ್ಯ ಪೋಷಕ ಪಾತ್ರಗಳನ್ನು ನಿರ್ವಹಿಸುವ ಶ್ರೀ ಕೆ.ವಿಶ್ವನಾಥ ರೈಯವರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಸುಬ್ಬಯ್ಯ ರೈ ಮತ್ತು ಮಂಜಕ್ಕೆ ದಂಪತಿಯ ಸುಪುತ್ರರಾಗಿ 28.02.1949ರಲ್ಲಿ ಬೆಳ್ಳಾರೆಯಲ್ಲಿ ಜನಿಸಿದ ವಿಶ್ವನಾಥ ರೈಯವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವರು. ಬಾಲ್ಯದಲೇ ಯಕ್ಷಗಾನ ಕಲೆಯಲ್ಲಿ ಆಕರ್ಷಿತರಾದ ಇವರು ಅಚ್ಯುತ ಮಣಿಯಾಣಿ ಎಂಬವರಿಂದ ನಾಟ್ಯಭ್ಯಾಸವನ್ನು ಮಾಡಿರುವರು. ಕಿರಿಯವನಾಗಿ 9ನೇ ವರ್ಷದಿಂದಲೇ ಯಕ್ಷಗಾನದ ರಂಗಪ್ರವೇಶ ಮಾಡಿದ ಹಿರಿಮೆ ಇವರಿಗಿದೆ.

ರಾಜನ್ ಅಯ್ಯರ್ ಮತ್ತು ಕೇಶವ ಮಾಸ್ಟರ್ ಇವರಿಂದ ಭರತ ನಾಟ್ಯವನ್ನು ಅಭ್ಯಾಸ ಮಾಡಿರುವ ವಿಶ್ವನಾಥ ರೈಯವರು ಕರ್ನಾಟಕ ಮೇಳ-35ವರ್ಷ, ಮಧೂರು ಮೇಳ-1 ವರ್ಷ, ಸುರತ್ಕಲ್ ಮೇಳ-5 ವರ್ಷ, ಕದ್ರಿಮೇಳ-8 ವರ್ಷ, ಬಪ್ಪನಾಡು ಮೇಳ- 1 ವರ್ಷ, ಕುಂಟಾರು ಮೇಳ-2ವರ್ಷ, ಎಡನೀರು ಮೇಳ-1 ವರ್ಷ, ಕಟೀಲು ಮೇಳ-3ವರ್ಷ, ಹೀಗೆ ತಿರುಗಾಟವನ್ನು ನಡೆಸಿದ್ದಾರೆ.

ಕಾಡಮಲ್ಲಿಗೆಯ ಮಲ್ಲಿಗೆಯಾಗಿ ಪ್ರಸಿದ್ಧಿಯನ್ನು ಪಡೆದಿರುವ ಬೆಳ್ಳಾರೆ ವಿಶ್ವನಾಥ ರೈಯವರ ಪಾತ್ರ ಚಿತ್ರಣ, ಭಾವ ಪೂರ್ಣವಾಗಿದೆ. ಮಾನಿಷಾದದ ಸೀತೆ, ಸತ್ಯಹರಿಶ್ಚಂದ್ರದ ಚಂದ್ರಮತಿ, ಮೊದಲಾದ ಪಾತ್ರಗಳಿಗೆ ಜೀವಕಳೆ

ತುಂಬಿದ್ದಾರೆ. ಕೃಷ್ಣ, ಅಭಿಮನ್ಯು, ಭಾರ್ಗವ ಸುದರ್ಶನ ಮೊದಲಾದ ಪಾತ್ರಗಳಲ್ಲಿ ಉತ್ತಮ, ನಟನೆಯನ್ನು ತೋರಿಸಿದ್ದಾರೆ.

ಶ್ರೀಮತಿ ಕುಸುಮಾವತಿ ಎಂಬವರನ್ನು ವರಿಸಿ ಮಧುಚಂದ್ರ, ರವಿಚಂದ್ರ, ಮಮತಾ ಎನ್ನುವ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಕಲಾ ಸಾಧನೆಗೆ ಬಾಲ್ಯದಲ್ಲೇ ನಟ ರತ್ನಾಕರ ಮಾ ಹಿರಣ್ಣಯ್ಯರವರಿಂದ ಚಿನ್ನದ ಉಂಗುರದ ಜೊತೆಗೆ ಸಂಮಾನವಾಗಿತ್ತು. ಮುಂದೆ ಕೋಳ್ಯಾಡು ನಾರಾಯಣ ಶೆಟ್ಟಿಯವರಿಂದ ಸಂಮಾನ, ಕದ್ರಿ ಮೇಳದ ಸಂಮಾನ, ಮುಂಬಯಿ ಅಭಿಮಾನಿ ಬಳಗದ ಸಂಮಾನ ಹೀಗೆ ಗೌರವಗಳು ಸಂದಿವೆ.



ವಿಶ್ವೇಶ್ವರ ಭಟ್ ಕೆ. ಸುಣ್ಣಂಬಳ

"ಕಲಾವಿಹಾರ", ನೆಕ್ಕರೆ, ಕಬಕ ಅಂಚೆ
ಪುತ್ತೂರು ತಾಲೂಕು - 574220
ಮೊಬೈಲ್: 9448260867

ಪಾತ್ರದ ಸ್ವಭಾವಕ್ಕೆ ತಕ್ಕಂತೆ ಸ್ವರಭಾರ, ಮಾತಿನ ಸಾಹಿತ್ಯ ಹಾಗೂ ನಟನಾ ಶೈಲಿಯನ್ನು ಸಾಕ್ಷಾತ್ಕರಿಸುವ ಶ್ರೀ ಕೆ. ವಿಶ್ವೇಶ್ವರ ಭಟ್ ಸುಣ್ಣಂಬಳ ಇವರು ಆಟ ಕೂಟವೆರಡರಲ್ಲೂ ಪ್ರಭುತ್ವ ಸಾಧಿಸಿದ್ದಾರೆ. ಪ್ರಸ್ತುತ ಕಟೀಲು ಮೇಳದಲ್ಲಿ ಇದಿರು ವೇಷಗಳನ್ನು ನಿರ್ವಹಿಸುವ ಇವರು ಮೇಳದ ಪ್ರಬಂಧಕರಾಗಿಯೂ ಕಾರ್ಯ ನಿರ್ವಹಿಸುತ್ತಾರೆ.

ನಾರಾಯಣ ಭಟ್ ಹಾಗೂ ಪರಮೇಶ್ವರೀ ಅಮ್ಮ ದಂಪತಿಯ ಸುಪುತ್ರನಾಗಿ ಪೆರುವಾಯಿ ಎಂಬಲ್ಲಿ ದಿನಾಂಕ 19-11-1964ರಂದು ಇವರು ಜನಿಸಿದರು. ತಂದೆ ಹಾಗೂ ಚಿಕ್ಕ ತಂದೆ ಅಂಬೆಮೂಲೆ ಗೋವಿಂದ ಭಟ್ ಅರ್ಥಧಾರಿಗಳಾಗಿದ್ದುದರಿಂದ ಇವರಲ್ಲೂ ಯಕ್ಷಗಾನದ ಪ್ರತಿಭೆ ಬೆಳೆದು ಬಂತು. ಇವರ ಸಹೋದರ ಸುಣ್ಣಂಬಳ ಈಶ್ವರ ಭಟ್ ಹವ್ಯಾಸಿ ವೇಷಧಾರಿ ಹಾಗೂ ಅರ್ಥಧಾರಿ. ಹೀಗೆ ಇವರ ಮನೆತನವು ಯಕ್ಷಕಲೆಯೊಂದಿಗೆ ಬೆರೆತ ಮನೆತನವಾಗಿದೆ. ಕಲೆಯಲ್ಲಿ ಬೆಳೆಯಬೇಕೆಂಬ ಆಸಕ್ತಿಯಿಂದ ಕೆ. ಗೋವಿಂದ ಭಟ್, ಅಳಿಕೆ ' ರಾಮಯ್ಯ ರೈ ಮತ್ತು ನರಸಿಂಹ ಭಟ್ಟರಿಂದ ನಾಟ್ಯ ಹಾಗೂ ರಂಗದ ಬಗ್ಗೆ ಅಧ್ಯಯನ ಮಾಡಿದ ಇವರ ಕಲಾ ಜೀವನ ಬೆಳಗುತ್ತಾ ಬಂದಿದೆ.

10ನೇ ಇಯತ್ತೆಯ ತನಕ ಶಾಲಾ ಪಾಠಾಭ್ಯಾಸ ಮಾಡಿರುವ ಇವರಲ್ಲಿ ಸಾಹಿತ್ಯಕವಾಗಿ ಮೈಗೂಡಿರುವುದು ಪ್ರೌಢ ಚಿಂತನೆಯ ಮನೋಧರ್ಮ, ಅರಂಭಕ್ಕೆ ಧರ್ಮಸ್ಥಳದಲ್ಲಿ ವರ್ಷದ ತಿರುಗಾಟವನ್ನು ಮಾಡಿದ ಇವರು ಪ್ರಸ್ತುತ

ಕಟೀಲು ಮೇಳದಲ್ಲಿ 28ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ. ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳಲ್ಲಿ ಪ್ರೌಢತೆಯನ್ನು ಸಾಧಿಸಿರುವ ವಿಶ್ವೇಶ್ವರ ಭಟ್ಟರು ಅನಿವಾರ ಸಂದರ್ಭಗಳಲ್ಲಿ ಸ್ತ್ರೀ ವೇಷವನ್ನು ಕೂಡಾ ನಿರ್ವಹಿಸಿದ್ದಾರೆ. ನಂದಿನಿ, ಶ್ರೀದೇವಿ ಮೊದಲಾದ ಪಾತ್ರಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ವಿಷ್ಣು, ರಾಮ, ಕೃಷ್ಣ, ಯಕ್ಷ, ಬಭ್ರುವಾಹನ, ಸುಧನ್ವ, ಈಶ್ವರ, ವಿಶ್ವಾಮಿತ್ರ, ಜಾಬಾಲಿ, ಭೀಷ್ಮ, ಮಾಗಧ, ಅರುಣಾಸುರ, ರಕ್ತಬೀಜ, ಅತಿಕಾಯ, ಕಂಸ ಇತ್ಯಾದಿ ಪಾತ್ರಗಳಿಗೆ ಅರ್ಥಗಾರಿಕೆಯ ಮುಖೇನ ಹೊಸತನದ ಜೀವಸತ್ವವನ್ನು ತುಂಬಿದ್ದಾರೆ.

ಶ್ರೀಮತಿ ಕಮಲಾಕ್ಷಿ ಎಂಬವರನ್ನು ವರಿಸಿ ಪ್ರಜ್ಞಾ ಎಂಬವರನ್ನು ಪಡೆದಿದ್ದಾರೆ. ಬೇಸಿಗೆ ಮತ್ತು ಮಳೆಗಾಲದಲ್ಲಿ ಬೇಡಿಕೆಯ ಕಲಾವಿದರಾಗಿರುವ ಇವರು ಮೇಳದ ಮತ್ತು ಹವ್ಯಾಸಿ ಕಲಾವಿದರಿಗೆ ರಂಗದ ಅನುಭವದ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ಪ್ರತಿಭೆಗೆ ಪ್ರತಿಫಲವಾಗಿ ಪೆರುವಾಯಿ, ಕದ್ರಿ, ಪಡುಬಿದ್ರೆ, ಮುಂಬಯಿ ಮುಂತಾದ ಕಡೆಗಳಲ್ಲಿ ಅಭಿಮಾನಿ ಬಳಗದಿಂದ ವಿಶ್ವೇಶ್ವರ ಭಟ್ಟರು ಸಂಮಾನಿಸಲ್ಪಟ್ಟಿದ್ದಾರೆ.



ವಿಶ್ವನಾಥ ಗೌಡ ತೋಡಿಕಾನ

ತೋಡಿಕಾನ ಗ್ರಾಮ ಮತ್ತು ಅಂಚೆ
ಸುಳ್ಯ ತಾಲೂಕು
ಮನೆ ದೂರವಾಣಿ; 08257 – 208337

ಸ್ತ್ರೀ ಪಾತ್ರಗಳ ಮುಖೇನ ಉತ್ತಮ ನಿರ್ವಹಣೆಯನ್ನು ತೋರಿ ಮನ್ನಣೆಗೊಳಗಾಗಿರುವ ಶ್ರೀ ವಿಶ್ವನಾಥ ಗೌಡ ತೋಡಿಕಾನರು ಪ್ರಸ್ತುತ ಕಟೀಲು ಮೇಳದ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಸುಬ್ಬಪ್ಪ ಗೌಡ ಮತ್ತು ರಾಮಕ್ಕ ದಂಪತಿಯ ಸುಪುತ್ರರಾಗಿ ತೋಡಿಕಾನ ಎಂಬಲ್ಲಿ 23-8- 1959ರಂದು ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಮಾವ ಕೆ. ನಾರಾಯಣ ಗೌಡ ಎಂಬವರ ಪ್ರೇರಣೆಯ ಮೇರೆಗೆ ಧರ್ಮಸ್ಥಳದ ಲಲಿತ ಕಲಾ ಕೇಂದ್ರವನ್ನು ಸೇರಿ ಪಡೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

ಕರ್ನಾಟಕ ಮೇಳ-9 ವರ್ಷ, ಕದ್ರಿ ಮೇಳ - 2 ವರ್ಷ, ಕುಂಬ್ಳೆ ಮೇಳ 2 ವರ್ಷ ಹಾಗೂ ಕಟೀಲು ಮೇಳ 20 ವರ್ಷ ಹೀಗೆ ತುಳು ಮತ್ತು ಪುರಾಣ ಪ್ರಸಂಗಗಳ ಪ್ರದರ್ಶನಗಳಲ್ಲಿ ಪಾತ್ರ ನಿರ್ವಹಣೆಯನ್ನು ಮಾಡಿ ಪ್ರೌಢಿಮೆಯನ್ನು ಸಾಧಿಸಿರುವ ಇವರು ಶ್ರೀ ದೇವಿಯ ಪಾತ್ರದಲ್ಲಿ ತನ್ನ ವೈಶಿಷ್ಟ್ಯವನ್ನು ಮೆರೆಸಿದ್ದಾರೆ.

ಚಿತ್ರಾಂಗದೆ, ಪ್ರಭಾವತಿ, ದಮಯಂತಿ, ಸುಭದ್ರೆ, ದಾಕ್ಷಾಯಿಣಿ, ಸೀತೆ, ಮಂಡೋದರಿ, ನಂದಿನಿ, ಯಶೋಮತಿ, ಮೋಹಿನಿ ಮುಂತಾದ ಪಾತ್ರಗಳನ್ನು ಸೊಗಸಾಗಿ ನಿರ್ವಹಿಸುತ್ತಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು - ಶ್ರೀಮತಿ ದಮಯಂತಿ ಎಂಬವರನ್ನು ವರಿಸಿ ಶರತ್ (ಕಂಪ್ಯೂಟರ್ ಅಧ್ಯಯನ), ಶಿಶಿರ (ಪಿ. ಯು. ಸಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಕೀರ್ತಿಶೇಷ ಕಲಾವಿದ ಗುಡ್ಡಪ್ಪ ಗೌಡ, ತೋಡಿಕಾನ ಬಾಬು ಗೌಡ, ಸಂಪಾಜೆ ಜಯಾನಂದ ಈ ಮೂವರು ಕಲಾವಿದರು ಇವರ ದೂರ ಸಂಬಂಧಿಗಳಾಗಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ತೋಡಿಕಾನದ ಪರಿಸರದಲ್ಲಿ 3 ಸಂಮಾನಗಳು ಸಂದಿವೆ.



ವಿಷ್ಣುಶರ್ಮ ವಾಟೆಪಡ್ಪು

*ಪಣಕಜೆ "ಹರೇರಾಮ" ಮನೆ*
*ಗ್ರಾಮ ಸೋಣಂದೂರು, ಪಣಕಜೆ ಅಂಚೆ*
*ಬೆಳ್ತಂಗಡಿ ತಾಲೂಕು – 574224*
*ಮೊಬೈಲ್: 9901985207*

ಮಾತು ಮತ್ತು ನಾಟ್ಯಾಗಾರಿಕೆಯಲ್ಲಿ ಉತ್ತಮವಾದ ಶೈಲಿಯನ್ನು ಹೊಂದಿದ್ದು ಒಂದನೇ ಪುಂಡುವೇಷಧಾರಿಯಾಗಿ ಮನ್ನಣೆಗೆ ಪಾತ್ರರಾಗಿರುವ ಶ್ರೀ ವಿಷ್ಣು ಶರ್ಮ ವಾಟೆಪಡ್ಡು ಇವರು ಕಟೀಲು ಮೇಳದ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಾಇದ್ದಾರೆ.

ಸುಬ್ರಾಯ ಭಟ್ ಮತ್ತು ಪರಮೇಶ್ವರಿ ದಂಪತಿಯ ಸುಪುತ್ರರಾಗಿ ವಾಟೆಪಡ್ಡು ಎಂಬಲ್ಲಿ 6- 5-1969 ರಲ್ಲಿ ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಅನಿವಾರ ಕಾರಣದಿಂದ ಯಕ್ಷಗಾನವನ್ನು ವೃತ್ತಿಯಾಗಿ ಸ್ವೀಕರಿಸಿದರು.

ಕೆ. ಗೋವಿಂದ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್ ಮತ್ತು ಕುಡಾಣ ಗೋಪಾಲಕೃಷ್ಣ ಭಟ್ ಇವರೆಲ್ಲ ಸಂಬಂಧಿಕರಾಗಿದ್ದು ಆ ನೆಲೆಯಿಂದ ಯಕ್ಷಗಾನದತ್ತ ಆಸಕ್ತಿಯನ್ನು ಬೆಳೆಸಿದ ಇವರು ಧರ್ಮಸ್ಥಳದ ಲಲಿತ ಕಲಾ ಕೇಂದ್ರವನ್ನು ಸೇರಿದರು. ಕೆ, ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ ಇವರಿಂದ ನಾಟ್ಯಾಭ್ಯಾಸವನ್ನು ಮಾಡಿ ಮೇಳ ತಿರುಗಾಟವನ್ನು ಆರಂಭಿಸಿದರು.

ಮೊದಲಿಗೆ ಸುಂಕದಕಟ್ಟೆ ಮೇಳದಲ್ಲಿ 7 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಕಟೀಲು ಮೇಳವನ್ನು ಸೇರಿ ಈಗಾಗಲೇ 16 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಲಾಲಿತ್ಯ ಪೂರ್ಣವಾದ ಮಾತಿನಿಂದ ತಾಳಮದ್ದಳೆಯ ಅರ್ಥಧಾರಿಯಾಗಿಯೂ ಮನ್ನಣೆಯನ್ನು ಪಡೆದಿರುವ ಇವರು ವಿಷ್ಣು, ರಾಮ, ಕೃಷ್ಣ, ಸುಧನ್ವ, ಹನೂಮಂತ, ವಿಶ್ವಾಮಿತ್ರ, ವಾಲ್ಮೀಕಿ, ಹರಿಶ್ಚಂದ್ರ, ನಳ, ವಿಕ್ರಮ ಮೊದಲಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾರೆ.



ವಿನೋದ ರೈ ಸೊರಕೆ

*ಕಲ್ಲ ಮೆಟ್ಟು ಮನೆ, ಸರ್ವೆ ಗ್ರಾಮ ಮತ್ತು ಅಂಚೆ*
*ಪುತ್ತೂರು ತಾಲೂಕು – 574202*
*ಮೊಬೈಲ್ : 9535676436/ 08251 276111*

ಉತ್ತಮ ಪುಂಡುವೇಷಧಾರಿಯಾಗಿ ತುಳು ಮತ್ತು ಪೌರಾಣಿಕ ಪ್ರಸಂಗಗಳ ಪಾತ್ರಗಳನ್ನು ನಿರ್ವಹಿಸ ಜನಮನ್ನಣೆಯನ್ನು ಪಡೆದಿರುವ ಶ್ರೀ ವಿನೋದ ರೈ ಸೊರಕೆಯವರು ಮೇಳ ತಿರುಗಾಟದಿಂದ ವಿಮುಖರಾಗಿ ಪ್ರಸ್ತುತ ಹವ್ಯಾಸಿ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ನಾರಾಯಣ ರೈ ಎ ಮತ್ತು ಸರಸ್ವತಿ ದಂಪತಿಯ - ಸುಪುತ್ರರಾಗಿ ದಿನಾಂಕ 15-3-1968ರಂದು ಬನ್ನೂರು ಆನೆಮಜಲು ಎಂಬಲ್ಲಿ ಹುಟ್ಟಿದರು. 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪ್ರದರ್ಶನಗಳನ್ನು ನೋಡಿ ಪ್ರಭಾವಿತರಾಗಿ ತಾನೂ ಕಲಿಯಬೇಕೆಂಬ ಹಂಬಲದಿಂದ ತಿಮ್ಮಪ್ಪ ಶೆಟ್ಟಿ, ಕೆ. ಗೋವಿಂದ ಭಟ್ ಮತ್ತು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

13ನೇ ವಯಸ್ಸಿನಿಂದಲೇ ಯಕ್ಷಗಾನ ರಂಗವನ್ನು ಪ್ರವೇಶಿಸಿದ ಇವರು ಕಟೀಲು ಮೇಳ - 7 ವರ್ಷ, ಕಾಂತಾವರ ಮೇಳ2 ವರ್ಷ, ಕದ್ರಿ ಮೇಳ12 ವರ್ಷ, ಮಂಗಳಾದೇವಿ ಮೇಳ-1 ವರ್ಷ,ಪುತ್ತೂರು ಮೇಳ – 1 ವರ್ಷ ಹೀಗೆ ತಿರುಗಾಟವನ್ನು ನಡೆಸಿ ಪ್ರಸ್ತುತ ಮನೆಯಲ್ಲಿನ ಕೃಷಿ ಕಾರ್ಯದೊಂದಿಗೆ ಅವಕಾಶವೊದಗಿದಾಗ ಹೇಳಿಕೆಯ ಮೇರೆಗೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾ ಇದ್ದಾರೆ.

ಶ್ರೀಮತಿ ಸುಜಾತ ಎಂಬವರನ್ನು ವರಿಸಿ ಮನೀಷ್ ರೈ ಮತ್ತು ಧನೀಷ್ ರೈ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಅಭಿಮನ್ಯು, ಬಭ್ರುವಾಹನ, ಚಂಡ-ಮುಂಡರು, ಕೋಟಿ-ಚೆನ್ನಯರು, ಪರಶುರಾಮ, ಸುದರ್ಶನ, ಮುರಾಸುರ, ದೇವೇಂದ್ರ ಇತ್ಯಾದಿ ಪಾತ್ರಗಳನ್ನು ಮಾಡಿರುವ ಇವರ ಕಲಾಸೇವೆಯನ್ನು ಗುರುತಿಸಿ ಆರ್ಯಾಪು, ಕುಂಬ್ರೆ, ಕೆದಂಬಾಡಿ, ಮೊಂಟೆತಡ್ಕ ಮೊದಲಾದೆಡೆಯಲ್ಲಿ ಸಂಮಾನಿಸಿದ್ದಾರೆ. ಕದ್ರಿ ಮೇಳದ ಸಂಮಾನ ಕೂಡಾ ಇವರಿಗೆ ಲಭಿಸಿದೆ.



ವಿಠಲ ಸರಪಾಡಿ

*ಆರುಮುಡಿ ಮನೆ*
*ಅಂಚೆ ಸರಪಾಡಿ, ಬಂಟ್ವಾಳ ತಾಲೂಕು*
*ಮೊಬೈಲ್ :9741836690*

ಪುಂಡುವೇಷ, ರಾಜವೇಷ, ಮತ್ತು ನಾಟಕೀಯ ವೇಷಗಳ ಮುಖೇನ ಕಲಾಸೇವೆಯನ್ನು ಮಾಡುತ್ತಿರುವ ಶ್ರೀ ವಿಠಲ ಸರಪಾಡಿಯವರು ಕಟೀಲು ಮೇಳದ ಕಲಾವಿದರಾಗಿ ಮನ್ನಣೆಯನ್ನು ಪಡೆದಿದ್ದಾರೆ.

ಬಾಬು ಶೆಟ್ಟಿ ಪೂವಕ್ಕೆ ದಂಪತಿಯ ಸುಪುತ್ರರಾಗಿ 11-12-19620ರಂದು ಸರಪಾಡಿಯ ಆರುಮುಡಿಯಲಿ ಹುಟ್ಟಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 18ನೇ ವರ್ಷದಿಂದ ಯಕ್ಷಗಾನದ ಕಲಾಸೇವೆಗೆ ತೊಡಗಿಸಿಕೊಂಡರು.

ಸಹೋದರಸೀತಾ ರಾಮ ಶೆಟ್ಟಿ ಅರ್ಥಧಾರಿಯಾಗಿದ್ದು ಅವರ ಪ್ರೇರಣೆಯ ಮೇರೆಗೆ ಗೋವಿಂದ ಭಟ್ ಸೂರಿಕುಮೇರಿಯವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

ಧರ್ಮಸ್ಥಳ ಮೇಳ-1ವರ್ಷ, ಕರ್ನಾಟಕ ಮೇಳ- 4 ವರ್ಷ,ಆರುವ ಮೇಳ -2 ವರ್ಷ, ಬಪ್ಪನಾಡು ಮೇಳ-2 ವರ್ಷ, ಪುತ್ತೂರು ಮೇಳ-ವರ್ಷ, ಕಟೀಲು ಮೇಳ -22 ವರ್ಷ, ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಬಭ್ರುವಾಹನ, ಅಭಿಮನ್ಯು, ಚಂಡ-ಮುಂಡರು, ದೇವೇಂದ್ರ, ಅರ್ಜುನ, ಇಂದ್ರಜಿತು, ಹಿರಣ್ಯಾಕ್ಷ, ಮಧು-ಕೈಟಭ, ದುಶ್ಯಾಸನ ಮುಂತಾದ ಪಾತ್ರಗಳನ್ನು ಮಾಡಿದ್ದಾರೆ. ತುಳು ಮತ್ತು ಕನ್ನಡ ಪ್ರಸಂಗಗಳಲ್ಲಿ ಪಾತ್ರನಿರ್ವಹಣೆ ಮಾಡಿರುವ ಅನುಭವ ಇವರಿಗಿದೆ.

ಮಳೆಗಾಲದಲ್ಲಿ ಕೃಷಿಗಾರಿಕೆಯಲ್ಲಿ ಶ್ರಮಿಸುವ ಇವರು ಶ್ರೀಮತಿಲೀಲಾವತಿ ಎಂಬವರನ್ನು ವರಿಸಿ, ಧನ್ಯಶ್ರೀ, ಧನುಷ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



ಶಂಕರನಾರಾಯಣ ಭಟ್ ಪದ್ಯಾಣ

ಪದ್ಯಾಣ ಮನೆ, ಕರೋಪಾಡಿ ಅಂಚೆ ಮತ್ತು ಗ್ರಾಮ
ವಯಾ ಕನ್ಯಾನ, ಬಂಟ್ವಾಳ ತಾಲೂಕು. ದ. ಕ.
(ಮೊಬೈಲ್) 9449663779

ಚೆಂಡೆ - ಮದ್ದಳೆಯ ಕೈ ಚಳಕದಲ್ಲಿ ತನ್ನದೇ ಆದ ಹೆಚ್ಚುಗಾರಿಕೆಯನ್ನು ತೋರಿ ತೆಂಕುತಿಟ್ಟಿನ ಮದ್ದಳೆಗಾರರಾಗಿ ಮನ್ನಣೆಯನ್ನು ಪಡೆದಿರುವ ಪದ್ಯಾಣ ಶಂಕರ ನಾರಾಯಣ ಭಟ್ಟರು ಪ್ರಸ್ತುತ ಶ್ರೀ ಹೊಸನಗರ ಮೇಳದ ಮದ್ದಳೆಗಾರರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ರಾಮಕೃಷ್ಣ ಭಟ್ ಮತ್ತು ಪಾರ್ವತಿ ಅಮ್ಮ ದಂಪತಿಯ ಸುಪುತ್ರರಾಗಿ 27-4-1949ರಂದು ಪದ್ಯಾಣದಲ್ಲಿ ಜನಿಸಿದರು. 29. ಪದವೀಧರರಾಗಿರುವ ಇವರಿಗೆ ಮನೆತನದ ಹಿನ್ನೆಲೆಯಿಂದ ಯಕ್ಷಗಾನದ ಕಲಾಪ್ರತಿಭೆ ರಕ್ತಗತವಾಗಿ ಬಂದಿದೆ. ದೊಡ್ಡ ತಂದೆ ಪುಟ್ಟು ನಾರಾಯಣ ಭಾಗವತರು, ಕುಟುಂಬ ಸಂಬಂಧಿ ದಿ| ಮಾಂಬಾಡಿ ನಾರಾಯಣ ಭಾಗವತರು ಮತ್ತು ಅಣ್ಣನಾದ ತಿರುಮಲೇಶ್ವರ ಭಟ್' (ಚೆಂಡೆ-ಮದ್ದಳೆ ವಾದಕರು) ಇವರೆಲ್ಲರ ಉತ್ತೇಜನದಲ್ಲಿ ಇವರು ಕಲಾ ಸಾಧಕರಾಗಿ ಬೆಳೆದರು.

ಆರಂಭದಲ್ಲಿ ತಿರುಮಲೇಶ್ವರ ಭಟ್ಟರಿಂದ ಅಭ್ಯಾಸ, ಅನಂತರ ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್ ಮತ್ತು ನರಸಿಂಹ ಭಟ್ಟರಿಂದ ಹೆಚ್ಚಿನ ಅನುಭವವನ್ನು ಸಂಪಾದಿಸಿರುವರು. ಮಾಸ್ಟರ್ ಕೇಶವ ಮತ್ತು ಮುರಳೀಕೃಷ್ಣ ಎಂಬವರಲ್ಲಿ ನಾಟ್ಯ ಹಾಗೂ ಭರತನಾಟ್ಯದ ಅಭ್ಯಾಸವನ್ನು ಮಾಡಿರುವರು.

ಕುಂಡಾವು ಮೇಳ 3 ವರ್ಷ, ಕರ್ನಾಟಕ-2 ವರ್ಷ, ಸುರತ್ಕಲ್ ಮೇಳ 3 ವರ್ಷ, ಸುಂಕದಕಟ್ಟೆ ಮೇಳ - 9 ವರ್ಷ, ಕಟೀಲು ಮೇಳ ಕುಂಟಾರು ಮೇಳ - 3 ವರ್ಷ, ಎಡನೀರು ಮೇಳ-10 ವರ್ಷ, ಕದ್ರಿ ಮೇಳ-· 3 JF,

4 ವರ್ಷ- 1 ವರ್ಷ, ಹೊಸನಗರ ಮೇಳ ಹೀಗೆ 38 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಆರಂಭದಲ್ಲಿ ಪುಂಡುವೇಷ ಮತ್ತು ರಾಜವೇಷಗಳನ್ನು ಮಾಡಿರುವ ಇವರು ಚಂಡ-ಮುಂಡರು, ದೇವೇಂದ್ರ, ಅರ್ಜುನ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

14ನೇ ವರ್ಷದಿಂದಲೇ ಕಲಾ ಸಾಧನೆಯನ್ನು ಮಾಡುತ್ತಾ ಬೆಳೆದಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ. ಶ್ರೀಮತಿ ವನಜಾಕ್ಷಿ ಅವರನ್ನು ವರಿಸಿ ಅರ್ಚನಾ ಮತ್ತು ಅಜೇಯ ಕೃಷ್ಣ (ಇಂಜಿನಿಯರ್) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಯಾಗಿ ದೆಹಲಿ, ಬೆಹರನ್, ದುಬಾಯಿ, ಜಪಾನ್, ಮಸ್ಕತ್, ಮುಂಬಯಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಂಮಾನಗಳು ಸಂದಿವೆ. ಎಡನೀರು ಮಠದ ಗೌರವ, ಸಂಪಾಜೆ ಕೀಲಾರು ಪ್ರಶಸ್ತಿ, ಮಂಗಳೂರು ಶ್ರೀ ಕೃಷ್ಣ ಯಕ್ಷ ಸಭಾದ ಸಂಮಾನ ಇತ್ಯಾದಿ ಪುರಸ್ಕಾರಗಳು ಸಂದಿವೆ.



**ಶಂಭಯ್ಯ ಕಂಜರ್ಪಣೆ**

*"ದುರ್ಗಾನಿಲಯ", ಗಡಿಕಲ್ಲು, ಕೊಲ್ಲಮೊಗರು ಅಂಚೆ*
*ಸುಳ್ಯ ತಾಲೂಕು ದ. ಕ.– 574218*
*ಮನೆ ದೂರವಾಣಿ: 08257–273512*
*ಮೊಬೈಲ್: 9740941135*


ಪುರಾಣ ಪ್ರಸಂಗದ ರಾಜವೇಷಕೊಪ್ಪುವ ನಾಟ್ಯ ಶೈಲಿಯಿಂದ ಗುರುತಿಸಲ್ಪಟ್ಟಿರುವ ಶ್ರೀ ಕಂಜರ್ಪಣೆ ಶಂಭಯ್ಯನವರು ನಾಯಕ ಮತ್ತು ಪ್ರತಿ ನಾಯಕ ಪಾತ್ರಗಳನ್ನು ಮಾಡುತ್ತಾ ಕಟೀಲು ಮೇಳದಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾರೆ.

ಶಂಭಯ್ಯನವರು 26-7-1969ರಲ್ಲಿ ಕೆ. ಗೋಪಾಲಕೃಷ್ಣಯ್ಯ ಮತ್ತು ಕೆ. ಚಂದ್ರಮತಿ ಎಂಬವರ ಸುಪುತ್ರನಾಗಿ ಕಂಜರ್ಪಣೆಯಲ್ಲಿ ಜನಿಸಿದರು. ಕರ್ಗಲ್ಲು ಕೃಷ್ಣ ಮೂರ್ತಿ (ಮಾವ) ಬಣ್ಣದ ವೇಷಧಾರಿ ಸುಬ್ಬಣ್ಣ ಭಟ್ (ಮಾವ) ಅರ್ಥಧಾರಿ ಉಡೊಕೋಡಿ ಸುಬ್ಬಪ್ಪಯ್ಯ (ದೂರ ಸಂಬಂಧಿ) ಮತ್ತೆಗಾರ ಕಲ್ಮಡ್ಕ ಶಂಕರ ಭಟ್ (ಭಾವ) ಹೀಗೆ ಆದರ್ಶದ ಮನೆತನದಲ್ಲಿ ಹುಟ್ಟಿದ ಕಾರಣದಿಂದ ಯಕ್ಷಕಲೆಯ ಪ್ರಭಾವ-ಪ್ರೇರಣೆ ಶಂಭಯ್ಯನವರಿಗೂ ಆಗಿದ್ದು, ಕಲಿಯುವ ಆಸಕ್ತಿಯಿಂದ 1989ನೇ ವರ್ಷದಲ್ಲಿ ಧರ್ಮಸ್ಥಳದ ಲಲಿತಾಕಲಾ ಕೇಂದ್ರವನ್ನು ಸೇರಿದರು.

ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು, 10ನೇ ತರಗತಿಯ ತನಕ ಪಾಠ ಶಾಲೆಗೆ ಹೋಗಿದ್ದಾರೆ. ವೇಷದ ನಿಮಿತ್ತ ಬಪ್ಪನಾಡು ಮೇಳದಲ್ಲಿ ಅತಿಥಿ ಕಲಾವಿದರಾಗಿ ಭಾಗವಹಿಸಿರುವುದನ್ನು ಹೊರತುಪಡಿಸಿದರೆ, ಇವರ ತಿರುಗಾಟದ ಏಕೈಕ ಮೇಳವೆಂದರೆ 'ಕಟೀಲು ಮೇಳ, ಪ್ರಸ್ತುತ 19ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದೇವೇಂದ್ರ, ಅರ್ಜುನ, ಶಿಶುಪಾಲ, ಹಿರಣ್ಯಾಕ್ಷ, ಇಂದ್ರಜಿತು, ಶತ್ರುಘ್ನ, ಅರುಣಾಸುರ, ಮಧು-ಕೈಟಭ ಇತ್ಯಾದಿ ರಾಜ ಮತ್ತು ನಾಟಕೀಯ ವೇಷಗಳ ಪಾತ್ರಗಳನ್ನು ನಿರ್ವಹಿಸುವ ಇವರು ಚಂಡ- ಮುಂಡರು, ಚಂಡ ಪ್ರಚಂಡರು, ಬ್ರಹ್ಮ, ಈಶ್ವರ ಮುಂತಾದ ಪಾತ್ರಗಳನ್ನು ಕೂಡಾ ನಿರ್ವಹಿಸುತ್ತಾರೆ. ಕೊಟ್ಟ ಪಾತ್ರವನ್ನು ಅಚ್ಚು ಕಟ್ಟಾಗಿ ನಿರ್ವಹಿಸಬೇಕೆಂಬ ಉದ್ದೇಶ ಇವರದ್ದಾಗಿದೆ.

ಇತರ ಪಾತ್ರಗಳನ್ನು ಅವಲೋಕನ ಮಾಡುವ ಜೊತೆಗೆ ತನ್ನ ಪಾತ್ರವನ್ನು ಹೇಗೆ ವಿಜೃಂಭಿಸಬೇಕು ಎನ್ನುವುದರ ಬಗ್ಗೆ ಚಿಂತಿಸುವ, ಪರಂಪರೆಯ ಬಗೆ ಕಾಳಜಿವುಳ್ಳ ಶಂಭಯ್ಯನವರು ಯಕ್ಷಗಾನ ಮಿತ್ರ ವೃಂದ ಕೊಲ್ಲಮೊಗರು, ಹರಿಹರೇಶ್ವರ ಯಕ್ಷಗಾನ ಕಲಾಸಂಘ ಹರಿಹರ, ಪಲ್ಲತಡ್ಕ ಇಲ್ಲೆಲ್ಲಾ ಯಕ್ಷಗಾನದ ತರಬೇತಿಯನ್ನು ನಡೆಸಿದ್ದಾರೆ.



ಶೀನ ಭಂಡಾರಿ ಪುತ್ತೂರು

ಬನ್ನೂರು ಅಂಚೆ
ಪುತ್ತೂರು

65 ವರ್ಷಗಳ ತನಕ ಮೇಳ ತಿರುಗಾಟವನ್ನು ಮಾಡಿರುವ ಶ್ರೀ ಪುತ್ತೂರು ಶೀನ ಭಂಡಾರಿಯವರು ಕಿರೀಟ ವೇಷದ ಕಲಾವಿದರಾಗಿ ಪ್ರಸಿದ್ದಿಯನ್ನು ಪಡೆದಿದ್ದಾರೆ. ಪ್ರಸ್ತುತ ನಿವೃತ್ತ ಕಲಾವಿದರಾಗಿರುವ ಇವರು ರಾಜ್ಯೋತ್ಸವ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿರುವ ಹಿರಿಯ ಕಲಾವಿದರಾಗಿದ್ದಾರೆ.

ಕಾಸರಗೋಡಿನ ಪೆರಡಾಲ ಗ್ರಾಮದ ಬಳ್ಳಂಬೆಟ್ಟಿನ ನೆಲ್ಲಿಕುಂಜ ನಡುಮನೆಯಲ್ಲಿ ದಿ. 10- 6-1923 ರಂದು ಜನಿಸಿದರು. ಇವರ ತಂದೆ ದೂಮಪ್ಪ ಭಂಡಾರಿ, ತಾಯಿ ದಾರಮ್ಮ ಬಾಲ್ಯದಿಂದಲೇ ಯಕ್ಷಗಾನ ಕಲೆಯುತ್ತ ಆಕರ್ಷಿತರಾಗಿರುವ ಇವರು ಬೋವಿ ಕಣ್ಣ ಎಂಬವರಲ್ಲಿ ಯಕ್ಷಗಾನದ ಬಗ್ಗೆ ಅಧ್ಯಯನ ಮಾಡಿರುವರು.

ಕದ್ರಿ ಮತ್ತು ಧರ್ಮಸ್ಥಳ ಮೇಳಗಳಲ್ಲಿ ತಿರುಗಾಟವನ್ನು ಮಾಡಿರುವ ಇವರು ಬಳ್ಳಂಬೆಟ್ಟು ಹಾಗೂ ಆದಿ ಸುಬ್ರಹ್ಮಣ್ಯ ಮೇಳಗಳನ್ನು ಸ್ವಂತವಾಗಿ ನಡೆಸಿ ಮೇಳದ ಯಜಮಾನಿಕೆಯಲ್ಲಿ ಕೀರ್ತಿಯನ್ನು ಪಡೆದಿದ್ದರು. ಗತ್ತುಗಾರಿಕೆಗೆ ಹೆಸರಾಗಿರುವ ಶೀನ ಭಂಡಾರಿಯವರು ದೇವೇಂದ್ರ, ಅರ್ಜುನ, ಭಸ್ಮಾಸುರ, ಇಂದ್ರಜಿತು, ರಕ್ತಬೀಜ ಮುಂತಾದ ಕಿರೀಟ ವೇಷಗಳ ಹಾಗೂ ನಾಟಕೀಯ ವೇಷಗಳ ಪಾತ್ರಗಳನ್ನು ನಿರ್ವಹಿಸಿರುವರು. ಇಷ್ಟಲ್ಲದೆ ಪುಂಡುವೇಷ ಹಾಗೂ ಕಸೆಯ ವೇಷಗಳನ್ನು ಕೂಡಾ ಹೆಚ್ಚಾಗಿ ನಿರ್ವಹಿಸಿ ಕೀರ್ತಿವಂತರಾಗಿದ್ದಾರೆ.

ಶ್ರೀಮತಿ ಸುಂದರಿ ಎಂಬವರನ್ನು ವರಿಸಿ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಪಡೆದಿದ್ದಾರೆ. ಇವರ ಸುಪುತ್ರರಾದ ಶೇಖರ ಭಂಡಾರಿ, ಶ್ರೀಧರ ಭಂಡಾರಿ ಮತ್ತು ಗಂಗಾಧರ ಭಂಡಾರಿ ಇವರುಗಳು ಉತ್ತಮ ವೇಷಧಾರಿಗಳಾಗಿದ್ದು ಈಗಾಗಲೇ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ರಾಜ್ಯ ಪ್ರಶಸ್ತಿಯು ಸೇರಿದಂತೆ ನಾಡಿನಾದ್ಯಂತ, ಸಂಮಾನಗಳಿಂದ, ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟಿರುವ ಇವರ ಕಲಾ ಸಾಧನೆ ಅನನ್ಯವಾಗಿದ್ದು ಉಲ್ಲೇಖನೀಯವಾಗಿದೆ.



ಶೀನಪ್ಪ ರೈ ಸಂಪಾಜೆ

"ಶ್ರೀ ದೇವಿ ರಕ್ಷಾ, ಸಂಪಾಜೆ ಗ್ರಾಮ,
ಸುಳ್ಯ ತಾಲೂಕು, ಮಾದೆಪಾಲು ಮನೆ
ಅಂಚೆ ಸಂಪಾಜೆ ಕಲ್ಲುಗುಂಡಿ – 574234
ಮೊಬೈಲ್. 9481264379

ಕೂಡಾಟ-ಜೋಡಾಟಗಳಲ್ಲಿ ಹೆಸರು ವಾಸಿಯಾಗಿ ಪ್ರಸಿದ್ಧಿಯನ್ನು ಉಳಿಸುತ್ತಾ ಇಂದಿನ ತನಕವೂ ರಂಗದಲ್ಲಿ ಮೆರೆಯುತ್ತಾ ಇರುವ ಗಂಡುಗತ್ತಿನ ಕಿರೀಟ ವೇಷಧಾರಿ ಶ್ರೀ ಸಂಪಾಜೆ ಶೀನಪ್ಪ ರೈಯವರು ಪ್ರಸ್ತುತ ಶ್ರೀ ರಾಮ ಚಂದ್ರಾಪುರ ಹೊಸನಗರದ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 7-6-1943 ರಂದು ರಾಮಣ್ಣ ರೈ ಮತ್ತು ಕಾವೇರಿ ದಂಪತಿಯ ಸುಪುತ್ರರಾಗಿ ಸಂಪಾಜೆಯಲ್ಲಿ ಶೀನಪ್ಪ ರೈಯವರು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ತ್ರೀವೇಷಧಾರಿಯಾಗಿದ್ದ ತಂದೆಯವರ ಪ್ರೇರಣೆಯಂತೆ ತಂದೆಯವರಿಂದಲೇ ಯಕ್ಷಗಾನದ ಪ್ರಾಥಮಿಕ ಅನುಭವವನ್ನು ಪಡೆದು ಮುಂದೆ ನಾಟಾಚಾರ್ಯ ಕಾವು ಕಣ್ಣನ್ ಎಂಬವರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

13ನೇ ವಯಸ್ಸಿನಿಂದಲೇ ಯಕ್ಷಗಾನ ಕಲಾಕ್ಷೇತ್ರವನ್ನು ಪ್ರವೇಶಿಸಿದ ಇವರು ಆರಂಭದಲ್ಲಿ ಪುಂಡುವೇಷವನ್ನು ಮಾಡುತ್ತಿದ್ದರು. ಬೆಳೆಯುತ್ತಾ ಇದ್ದಂತೆ ಕಿರೀಟ ವೇಷದ ಬಗ್ಗೆ ಆಕರ್ಷಿತರಾಗಿ ನಾಟ್ಯದ ಶೈಲಿ ಮತ್ತು ಮಾತಿನ ಗತ್ತುಗಾರಿಕೆಯನ್ನು ಉತ್ತಮವಾಗಿಸಿ ಜನಾಕರ್ಷಣೆಗೆ ಒಳಗಾಗುತ್ತಾ ಪ್ರಸಿದ್ಧರಾದರು.

ಕುಂಡಾವು ಮೇಳ-4 ವರ್ಷ, ವೇಣೂರುಮೇಳ 3 ವರ್ಷ, ಇರುವೈಲು ಮೇಳ - 2 ವರ್ಷ, ಸೌಕೂರು ಮೇಳ - 2 ವರ್ಷ, ಚೌಡೇಶ್ವರಿಎಡನೀರು ಮೇಳ-2ವರ್ಷದ ಮೇಳ 2 ವರ್ಷ, ಕಟೀಲು ಮೇಳ 32 ವರ್ಷ, ವರ್ಷ, ರಾಮಚಂದ್ರಾಪುರ - 4ನೇ ತಿರುಗಾಟ ಹೀಗೆ 5 ದಶಕಗಳಿಗೂ ತೆಂಕುತಿಟ್ಟಿನಲ್ಲಿ ಕಲಾಸೇವೆಯನ್ನು ಮಾಡುತ್ತಿರುವರು.

ಇವರು ಕಟೀಲು ಮೇಳದಲ್ಲಿದ್ದಾಗ ಇವರದ್ದೇ ಆದ ಚೌಕಟ್ಟಿನಲ್ಲಿ ರಕ್ತಬೀಜನ ಪಾತ್ರನಿರ್ವಹಣೆಯನ್ನು ಮಾಡಿ ಒಳ್ಳೆಯ ಕೀರ್ತಿಯನ್ನು ಸಂಪಾದಿಸಿದ್ದಾರೆ. ಇಂದ್ರಜಿತು, ಹಿರಣ್ಯಾಕ್ಷ, ಕೌಂಡ್ಲಿಕ, ಶಿಶುಪಾಲ, ತಾಮ್ರಧ್ವಜ, ವೀರ ವರ್ಮ ಮುಂತಾದ ಪ್ರತಿನಾಯಕ ಪಾತ್ರಗಳಲ್ಲಿ ಪ್ರತಿಭೆಯನ್ನು ಮೆರೆದಿರುವ ಇವರು ಅರ್ಜುನ, ದೇವೇಂದ್ರ ಮೊದಲಾದ ಸೌಮ್ಯ ಸ್ವಭಾವದ ಪಾತ್ರಗಳನ್ನು ಕೂಡ ಚೆನ್ನಾಗಿ ನಿರ್ವಹಿಸುತ್ತಾರೆ.

ಶ್ರೀಮತಿ ಗಿರಿಜಾವತಿ ಎಂಬವರನ್ನು ವರಿಸಿ, ಜಯರಾಮ ರೈ, ರೇವತಿ ಶೆಟ್ಟಿ ಮತ್ತು ರಜನಿ ರೈ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸುಪುತ್ರ ಜಯರಾಮ ರೈ ಯವರು ಕಿರೀಟ ವೇಷದ ಪಾತ್ರಗಳನ್ನು ನಿರ್ವಹಿಸುವ ಹವ್ಯಾಸಿ ಕಲಾವಿದರಾಗಿದ್ದು ತಂದೆಯ ಶೈಲಿಯನ್ನು ಅನುಸರಿಸಿದ್ದಾರೆ.

ಕೃಷಿಕರಾಗಿರುವ ಇವರು ಮಳೆಗಾಲದ ಕಾರ್ಯಕ್ರಮಗಳಲ್ಲೂ ಬೇಡಿಕೆಯ ಕಲಾವಿದರಾಗಿ ಭಾಗವಹಿಸುತ್ತಾ ಇದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕೀಲಾರು ಪ್ರತಿಷ್ಠಾನದ ಪ್ರಶಸ್ತಿ, ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನ ಶತಕದ ಸಂಮಾನ ಮುಂತಾದವುಗಳು ದೊರೆತಿರುವುದಲ್ಲದೆ, ಹಲವಾರು ಸಂಘ-ಸಂಸ್ಥೆಗಳ ಗೌರವಕ್ಕೆ ಪಾತ್ರರಾಗಿದ್ದಾರೆ.



**ಶಿವರಾಮ ಜೋಗಿ, ಬಿ. ಸಿ. ರೋಡ್**

*"ಯಕ್ಷದೀಪ", ಪೂಂಜರಕೋಡಿ*
*ಬಿ. ಸಿ. ರೋಡ್, ಬೈಪಾಸ್ – 574219*
*ಮೊಬೈಲ್: 9448793448*

ಇವರೆಲ್ಲರಿಂದ ರಂಗಾನುಭವವನ್ನು ಸಂಪಾದಿಸಿ

ರಾಜವೇಷ ಮತ್ತು ನಾಟಕೀಯ ವೇಷಗಳ ಮುಖೇನ ಪ್ರಸಿದ್ಧಿಯಲ್ಲಿರುವ ಪೌರಾಣಿಕ ಮತ್ತು ತುಳು ಭಾಷಾ ಪ್ರಸಂಗದ ಅನುಭವಿ ಕಲಾವಿದ ಶ್ರೀ ಶಿವರಾಮ ಜೋಗಿ ಬಿ. ಸಿ. ರೋಡ್, ಪ್ರಸ್ತುತ ಹೊಸನಗರ ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಗುರುವಪ್ಪ ಜೋಗಿ ಮತ್ತು ಸೀತಮ್ಮ ದಂಪತಿಯ ಸುಪುತ್ರರಾಗಿ 7-6-1941ರಂದು ಕಾಂಚನ ಎಂಬಲ್ಲಿ ಹುಟ್ಟಿದರು. ಯಕ್ಷಗಾನದ ಪರಿಸರದಲ್ಲಿ ಹುಟ್ಟಿ ಬೆಳೆದ ಕಾರಣ ಕಲೆಯೊಳಗೆ ಪಳಗಬೇಕೆಂಬ ಉದ್ದೇಶದಿಂದ ಡಾ| ಶೇಣಿ ಗೋಪಾಲಕೃಷ್ಣ ಭಟ್, ಗೋಪಾಲಕೃಷ್ಣ ಜೋಷಿ ಮತ್ತು ಗೋಪಾಲಕೃಷ್ಣ ಭಟ್ ಕುಡಾಣ ಇವರೆಲ್ಲರಿಂದ ರಂಗಾನುಭವವನ್ನು ಸಂಪಾದಿಸಿ ಬೆಳೆದರು.

13ನೇ ವಯಸ್ಸಿನಿಂದ ರಂಗಪ್ರವೇಶ ಮಾಡಿದ ಇವರು ಕೂಡ್ಲು ಮೇಳ 1 ವರ್ಷ, ಮೂಲ್ಕಿ ಮೇಳ 1 ವರ್ಷ, ಸುರತ್ಕಲ್ ಮೇಳ 40 ವರ್ಷ, ಕರ್ನಾಟಕ ಮೇಳ 3 ವರ್ಷ, ಮಂಗಳಾದೇವಿ ಮೇಳ3 ವರ್ಷ, ಕುಂಟಾರು -ಮೇಳ 2 ವರ್ಷ, ಎಡನೀರು ಮೇಳ2 ವರ್ಷ ಹಾಗೂ ಹೊಸನಗರ ಮೇಳ 4 ವರ್ಷ ಹೀಗೆ ತಿರುಗಾಟವನ್ನು ನಡೆಸಿರುವರು.

ಪುಂಡು ವೇಷ, ರಾಜವೇಷ ಮತ್ತು ನಾಟಕೀಯ ವೇಷಗಳನ್ನು ಮಾಡಿರುವ ಶಿವರಾಮ ಜೋಗಿಯವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಮಾಡಿರುವರು. ಹಿರಣ್ಯಕಶ್ಯಪ, ಕಂಸ, ಹನುಮಂತ, ಕೌರವ, ದ್ರೋಣ, ಚೆನ್ನಯ, ಚಂದುಗಿಡಿ, ದುಗ್ಗಣ ಕೊಂಡೆ, ಕಾರ್ತವೀರ್ಯ, ಇಂದ್ರಜಿತು, ಜಮದಗ್ನಿ, ರಾವಣ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ. ಬಾಲ್ಯ ಮತ್ತು ಯೌವನದ ಕಾಲದಲ್ಲಿ ಅಭಿಮನ್ಯು, ಅಶ್ವತ್ಥಾಮ, ಚೆನ್ನಯ, ಚಂಡ-ಮುಂಡ ಮುಂತಾದ ಪಾತ್ರಗಳನ್ನು ಮಾಡಿದ್ದಾರೆ.

ಶ್ರೀಮತಿ ಲತಾ ಎಂಬವರನ್ನು ವರಿಸಿರುವ ಇವರು ಶ್ರೀಮತಿ ಸೌಮ್ಯ, ಸುಮಂತ್‌ರಾಜ್ (ಆಫೀಸ್ ಉದ್ಯೋಗಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ,

ಕಿಲಾರು ಪ್ರಶಸ್ತಿ, ಉಡುಪಿ ಮಠದ ಸಂಮಾನ, ಎಡನೀರು ಮಠದ ಸಂಮಾನಗಳಲ್ಲದೆ ದೆಹಲಿ, ಮುಂಬಯಿ, ಬೆಂಗಳೂರು ಮುಂತಾದೆಡೆಗಳಲ್ಲಿ ಹಲವು ಸಂಮಾನಗಳು ನಡೆದಿವೆ.



ಶಿವ ಪ್ರಸಾದ್ ಭಟ್

"ಪೆರುಮಾಜೆ ಮನೆ", ವಿಟ್ಲ ಮುಡ್ನೂರು ಗ್ರಾಮ
ಮತ್ತು ಅಂಚೆ, ಬಂಟ್ವಾಳ ತಾಲೂಕು, 574246
(ಮೊಬೈಲ್) 9480231015

ಕಟೀಲು ಮೇಳದಲ್ಲಿ ಕಳೆದ 14 ವರ್ಷಗಳಿಂದ ತಿರುಗಾಟವನ್ನು ಮಾಡುತ್ತಿರುವ ಶ್ರೀ ಶಿವಪ್ರಸಾದ್ ಭಟ್ಟರು ಬಣ್ಣವೇಷದ ಪಾತ್ರಗಳ ನಿರ್ವಹಣೆಯಲ್ಲಿ ಪ್ರೌಢಿಮೆಯನ್ನು ಸಾಧಿಸಿದ್ದಾರೆ.

ದಿ. 3-9-1972ರಂದು ಶಿವರಾಮ್ ಭಟ್ ಮತ್ತು ಶಂಕರಿಯಮ್ಮ ದಂಪತಿಯ ಸುಪುತ್ರರಾಗಿ ಕುಂಡಡ್ಕ ಎಂಬಲ್ಲಿ ಜನಿಸಿದರು. ಎಂಟನೆಯ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನದ ಆಕರ್ಷಿತರಾಗಿದ್ದರು. ಕೃಷಿಕರಾಗಿರುವ ಚಿಕ್ಕತಂದೆ ವಿಠಲ ಶರ್ಮರು ಯಕ್ಷಗಾನದ ಕಲಾಸಕ್ತರಾಗಿದ್ದು ಇವರನ್ನು ಸದಾ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ.

ಸಬ್ಬನ ಕೋಡಿ ರಾಮ್ ಭಟ್ ಅವರಲ್ಲಿ ಮೊದಲಾಗಿ ಯಕ್ಷಗಾನ ನಾಟ್ಯಾಭ್ಯಾಸವನ್ನು ಮಾಡಿದ ಇವರು ಮುಂದೆ ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿ ಕೋಳ್ಯೂರು ರಾಮಚಂದ್ರ ರಾವ್ ಅವರ ನೇತೃತ್ವದಲ್ಲಿ ಹೆಚ್ಚಿನ ನಾಟ್ಯಾಭ್ಯಾಸವನ್ನು ಮಾಡಿದ್ದಾರೆ. ಯಕ್ಷಗಾನದ ಹಿರಿಯ ಬಣ್ಣದ ವೇಷಧಾರಿಯಾಗಿರುವ ಪಕಳ ಕುಂಞ ಕೃಷ್ಣನಾಯ್ಕ ಅವರಲ್ಲಿ ಬಣ್ಣಗಾರಿಕೆಯ ಬಗ್ಗೆ ಅಭ್ಯಾಸವನ್ನು ಮಾಡಿರುವರು.

15ನೇ ವಯಸ್ಸಿನಿಂದಲೇ ಯಕ್ಷಗಾನದ ಪಾತ್ರನಿರ್ವಹಣೆಯನ್ನು ಮಾಡಿರುವ ಇವರು ಹವ್ಯಾಸಿ ಕಲಾವಿದರಾಗಿ ಕಲಾಸೇವೆಯನ್ನು ಮಾಡಿದ ಮೇಲೆ ಕಟೀಲು ಮೇಳವನ್ನು ಸೇರಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ. ಮಳೆಗಾಲದ ಸಮಯದಲ್ಲಿ ನೆಡೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯಲ್ಲಿ ಕಲಾಸೇವೆಯನ್ನು ನಡೆಸುತ್ತಾ ಇದ್ದಾರೆ.

ಮಂಗಳೂರು, ಹೊಸಪೇಟೆ, ಹೈದರಾಬಾದ್, ಮೈಸೂರು, ಚೆನ್ನೈ ಮುಂತಾದ ಕಡೆಗಳಲ್ಲಿ ಸಂಮಾನ ಪುರಸ್ಕಾರಗಳು ಸಂದಿವೆ.

ರಾವಣ, ಮೈರಾವಣ, ಮಹಿಷಾಸುರ, ಭೀಮ, ಶುಂಭ, ಕುಂಭಕರ್ಣ, ಶೂರ್ಪನಖಾ, ತಾಟಕಿ, ಅಜಮುಖಿ ಮಧು, ಕೈಟಭ, ವಿದ್ಯುನ್ಮಾಲಿ ಮುಂತಾದ ಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ.



ಶಿವರಾಮ ಶೆಟ್ಟಿ

"ಬಂಟೇಕಲ್ಲು ಮನೆ"
ಹೊಸಕೊಪ್ಪ, ಜೋಗಿಮಕ್ಕಿ ಆರಾವರಿ ಗ್ರಾಮ
ಕಟ್ಟೆಮನೆ ಅಂಚೆ ,ಎನ್.ಆರ್.ಪುರ ತಾಲೂಕು
(ಮೊಬೈಲ್) 9481652585

ಬಣ್ಣದ ವೇಷಧಾರಿಯಾಗಿರುವ ಶಿವರಾಮ ಶೆಟ್ಟರು ತೆಂಕು ಮತ್ತು ಬಡಗುತಿಟ್ಟಿನ ಮೇಳಗಳಲ್ಲಿ ತಿರುಗಾಟವನ್ನು ಮಾಡಿ ಹಿರಿತನಕ್ಕೆ ಸಂದಿರುವರು.

ತಿಮ್ಮಪ್ಪ ಶೆಟ್ಟಿ ಮತ್ತು ಕಾವೇರಿ ಶೆಡ್ತಿ ದಂಪತಿಯ ಸುಪುತ್ರರಾಗಿ ಹೊಸನಗರ ತಾಲೂಕಿನ ನಾಗರ ಕೋಡಿಯಲ್ಲಿ ಇವರು ಜನಿಸಿದ್ದಾರೆ. ಈಗಾಗಲೇ 53 ವರ್ಷಗಳ ವಯೋಮಾನವಂತರಾಗಿರುವ ಶಿವರಾಮ ಶೆಟ್ಟರು ಬಾಲ್ಯದಲ್ಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿದ್ದು, 15ನೇ ವಯಸ್ಸಿನಿಂದ ಕಲಾಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದಾರೆ.

ಪಡ್ರೆ ಚಂದು, ಬ್ರಹ್ಮಾವರ ಶ್ರೀನಿವಾಸ ನಾಯ್ಕ ಇವರೀರ್ವರಿಂದ ಪ್ರಭಾವಿತರಾಗಿರುವ ಶಿವರಾಮ ಶೆಟ್ಟರು ನೋಡಿ ಕಲಿತದ್ದೇ ಹೆಚ್ಚು. ನಾಗರಕೋಡಿಗೆ ಮೇಳ-2 ವರ್ಷ, ಸುಬ್ರಹ್ಮಣ್ಯ ಮೇಳ-1 ವರ್ಷ, ಪೆರ್ಡೂರು ಮೇಳ-3 ವರ್ಷ, ಮಂದಾರ್ತಿ ಮೇಳ- 2 ವರ್ಷ, ಗೋಳಿಗರಡಿ ಮೇಳ-2 ವರ್ಷ, ಕಮಲಶಿಲೆ ಮೇಳ-6 ವರ್ಷ, ಸಾಕೂರು ಮೇಳ-1 ವರ್ಷ, ಅಮೃತೇಶ್ವರಿ ಮೇಳ-1 ವರ್ಷ, ಸಾಲಿಗ್ರಾಮ ಮೇಳ- 1 ವರ್ಷ, ಮಾರಣಕಟ್ಟೆ ಮೇಳ-6 ವರ್ಷ, ಕಟೀಲು ಮೇಳ 11 ವರ್ಷ ಹೀಗೆ ಹಲವು ಮೇಳಗಳಲ್ಲಿ ತಿರುಗಾಟವನ್ನು ಮಾಡಿರುವರು.

ಆರಂಭದಲ್ಲಿ ಪುಂಡುವೇಷವನ್ನು ಮಾಡುತ್ತಿದ್ದ ಇವರು ರಾಜವೇಷ ಮತ್ತು ಬಣ್ಣದ ವೇಷಗಳನ್ನು ನಿರ್ವಹಿಸುತ್ತಾ ಇದ್ದಾರೆ. ಮಹಿಷಾಸುರ, ಮಧು, ಕೈಟಭ, ದೇವೇಂದ್ರ, ಅರ್ಜುನ, ರಾವಣ, ಮೈರಾವಣ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುತ್ತಿರುವ ಇವರು ಶ್ರೀಮತಿ ಸರಸ್ವತಿ ಎಂಬವರನ್ನು ವರಿಸಿ, ಸುಧಾಮ (5ನೇ ತರಗತಿ), ಸುಚೇಮ (4ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡೆದಿರುವರು.



ಶ್ರೀಧರ ರಾವ್ ಕುಬಣೂರು

*"ಯಕ್ಷಪ್ರಭಾ", ಸುರಿಯ ದೇವಸ್ಥಾನ ರಸ್ತೆ,*
*ಉಜಿರೆ, ಬೆಳ್ತಂಗಡಿ 574240*
*ಮನೆ ದೂರವಾಣಿ: 08256–237296*
*ಮೊಬೈಲ್: 94482784783*

ಕರ್ನಾಟಕ ಶಾಸ್ತ್ರೀಯ ಸಂಗೀತದ ಅನುಭವವನ್ನು ಯಕ್ಷಗಾನದ ಭಾಗವತಿಕೆಯ ಮುಖೇನ ವಿಸ್ತರಿಸಿ, ತನ್ನದೇ ಆದ ಶೈಲಿಯಿಂದ ಬೆಳೆದು ಕಟೀಲು ಮೇಳದ ಭಾಗವತರಾಗಿರುವ ಕುಬಣೂರು ಶ್ರೀಧರ ರಾವ್ ತನ್ನ ಯಕ್ಷ ಪ್ರಭಾ ಪತ್ರಿಕೆಯ ಮುಖನ ಹೆಸರುವಾಸಿಯಾಗಿದ್ದಾರೆ.

ದಿನಾಂಕ 17-1-1951ರಲ್ಲಿ ಕೃಷ್ಣಯ್ಯ ಮತ್ತು ರುಕ್ಮಿಣಿ ದಂಪತಿಯ ಸುಪುತ್ರರಾಗಿ ಕುಬಣೂರು ಎಂಬಲ್ಲಿ ಹುಟ್ಟಿದರು. ಮಾವ ಪರಮೇಶ್ವರ ಬಳ್ಳಕುರಾಯ ಯಕ್ಷಗಾನ ಪೋಷಕರು ಹವ್ಯಾಸಿ ವೇಷಧಾರಿಯೂ ಆಗಿದ್ದುದರಿಂದ ಇವರಲ್ಲಿ ಮನೆತನದ ಪ್ರಭಾವವು ಮೈಗೂಡಿತು. ಜೊತೆಗೆ ಶಾಲೆಯ ಪರಿಸರವು ಯಕ್ಷಗಾನದ ಮಖೇನ ಬೆಳೆಯಲು ಉತ್ತೇಜನವನ್ನು ನೀಡಿತ್ತು. 12ನೇ ವರ್ಷದಲ್ಲೇ ಯಕ್ಷಗಾನ ಕಲಾ ಪ್ರವೇಶ ಮಾಡಿದ ಇವರು ಉಪ್ಪಳ ಕೃಷ್ಣ ಮಸ್ತರ್ ಅವರಿಂದ ನಾಟ್ಯಾಭ್ಯಾಸ, ಅಡ್ಕಸ್ಥಳ ರಾಮಚಂದ್ರ ಭಟ್ಟರಿಂದ ಮದ್ದಳೆ ವಾದನದ ಅಭ್ಯಾಸ, ಟಿ. ಗೋಪಾಲಕೃಷ್ಣ ಹಾಗೂ ದಿ| ಮಾಂಬಾಡಿ ನಾರಾಯಣ ಭಾಗವತರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು. ಇಷ್ಟಲ್ಲದೆ ಐ. ರಘು ಮಾಸ್ತರ್ ಎಂಬವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದರು. ನಾಟ್ಯಕ್ಕೆ ಉಪ್ಪಳ ಕೃಷ್ಣ ಮಾಸ್ತರ್, ಮದ್ದಳೆ ವಾದನಕ್ಕೆ ಅಡ್ಕಸ್ಥಳ ರಾಮಚಂದ್ರ ಭಟ್ ಇವರು ಗುರುಗಳಾಗಿದ್ದಾರೆ.

ಮಂಗಳೂರಿನ ಕರ್ನಾಟಕ ಪೊಲಿಟೆಕ್ನಿಕ್‌ನಲ್ಲಿ ಡಿಪ್ಲೊಮ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿಯನ್ನು ಪಡೆದ ಇವರು ಮಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾದರು. 6ವರ್ಷಗಳ ತನಕ ಉದ್ಯೋಗದ ಜೊತೆಗೆ ಹವ್ಯಾಸಿ ಭಾಗವತ ಹಾಗೂ ವೇಷಧಾರಿಯಾಗಿ ಕಲಾಸೇವೆ ಮಾಡಿದರು. ವಿಶ್ವ ಭಾರತಿ ಕಲಾವೃಂದ (ರಿ.) ಇದರ ಮುಖೇನ ಯಕ್ಷಗಾನ ಪ್ರದರ್ಶನದ ವ್ಯವಸ್ಥೆ, ರಾಘವೇಂದ್ರ ಕಲಾ ನಿಲಯದ ಮುಖೇನ ಸ್ವಂತ ವೇಷ ಭೂಷಣ ಹಿಮ್ಮೇಳ ಪರಿಕರಗಳ ಬಾಡಿಗೆ ವ್ಯವಸ್ಥೆ ಮಾಡಿ ಬೆಳೆದವರು ಮುಂದೆ ಮೇಳ ತಿರುಗಾಟವನ್ನು ಆರಂಭಿಸಿದರು. ಕೂಡ್ಲು ಮೇಳ (ಸ್ವಂತ ಸಂಘಟನೆ) 1 ವರ್ಷ, ಕದ್ರಿ ಮೇಳನಂದಾವರ ಮೇಳ-2 ವರ್ಷ,1, ವರ್ಷ ಅರುವ ಮೇಳ - 1 ವರ್ಷ, ಬಪ್ಪನಾಡು ಮೇಳ 4 ವರ್ಷ, ಕಾಂತಾವರ ಮೇಳ - 1 ವರ್ಷ, ಕಟೀಲು ಮೇಳ-20 ವರ್ಷ ಹೀಗೆ ತಿರುಗಾಟದ ಹಿನ್ನೆಲೆ ಇದೆ.

ಕಳೆದ 15 ವರ್ಷಗಳಿಂದ ಯಕ್ಷಗಾನಕ್ಕೆ ಮೀಸಲಾಗಿರುವ “ಯಕ್ಷಪ್ರಭಾ” ಪತ್ರಿಕೆಯ ಸಂಪಾದಕರೂ ಪ್ರಕಾಶಕರೂ ಆಗಿರುವ ಇವರು ಶ್ರೀಮತಿ ಶಾರದಾ ಎಂಬವರನ್ನು ವರಿಸಿ ಶ್ರೀ ವಿದ್ಯಾ ಬಿ.ಎ. ಪತ್ರಿಕೋದ್ಯಮ (ಟಿ.ವಿ. ಬೆಂಗಳೂರು ದೂರದರ್ಶನದ ಕಂಪೆನಿಯಲ್ಲಿ ಉದ್ಯೋಗಿ) ಶ್ರೀಕಾಂತ ಬಿ. ಕಾಂ. (ಕರ್ನಾಟಕ ಬ್ಯಾಂಕಲ್ಲಿ ಉದ್ಯೋಗಿ) ಎಂಬ ಈರ್ವರೂ ಮಕ್ಕಳನ್ನು ಪಡೆದಿದ್ದಾರೆ.ದಾಶರಥಿ ದರ್ಶನ, ಮನುವಂಶವಾಹಿನಿ ಸಾರ್ವಭೌಮ ಸಂಕರ್ಷಣ ಮೊದಲಾದ ಪ್ರಸಂಗಳನ್ನು ರಚಿಸಿರುವ ಇವರ ಪ್ರತಿಭೆ ಮತ್ತು ಪರಿಶ್ರಮಕ್ಕೆ ಪ್ರತಿರೂಪವಾಗಿ ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಗೋವಾ ಕನ್ನಡ ಸಮ್ಮೇಳನ ಕಾಳಿಂಗ ನಾವಡ ಪ್ರಶಸ್ತಿ, ಅಗರಿ ಭಾಗವತ ಸಂಸ್ಮರಣ ಪ್ರಶಸ್ತಿ, ಮುಂಬಯಿ ಮುಂತಾದ ಐದಾರು ಪ್ರಶಸ್ತಿಗಳು 20ಕ್ಕೂ ಮಿಕ್ಕಿದ ಸಂಮಾನಗಳು ಸಂದಿವೆ.



ಶ್ರೀಧರ ರಾವ್ ಕುಂಬ್ಳೆ

*“ಬೇರಿಕೆ ಮನೆ”, 34ನೇ ನೆಕ್ಕಿಲಾಡಿ*
*ವಯಾ ಉಪ್ಪಿನಂಗಡಿ*
*ಪುತ್ತೂರು ತಾಲೂಕು ದ. ಕ.*

ಲಾಲಿತ್ಯಮಯ ನಾಟ್ಯ ಹಾಗೂ ಮಾತಿನಿಂದ ವೇಷ, ಪುಂಡುವೇಷ, ರಾಜವೇಷಗಳ ಮೂಲಕ ಪ್ರತಿಭಾ ಸಂಪನ್ನರಾಗಿ ಬೆಳೆದಿರುವ ಶ್ರೀ ಕುಂಬ್ಳೆ ಶ್ರೀಧರ ರಾಯರು ಧರ್ಮಸ್ಥಳ ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ಕಾಸರಗೋಡು ಜಿಲ್ಲೆಗೆ ಸೇರಿದ ಕುಂಬ್ಳೆ ವ್ಯಾಪ್ತಿಯ ಕೈಪಾಡಿ ಗ್ರಾಮದ ನ್ಯಾಕಾಮು ಎಂಬಲ್ಲಿ ಶ್ರೀ ಮಾಲಿಂಗ ಮತ್ತು ಕಾವೇರಿ ದಂಪತಿಯ ಸುಪುತ್ರರಾಗಿ ಜನಿಸಿದರು. ಜನಿಸಿದ ದಿನಾಂಕ 27- 3-1948, ಯಕ್ಷಗಾನ ಕಲಾವಿದರಾದ ಕುಂಬ್ಳೆ ಚಂದ್ರಶೇಖರ ಇವರ ಪ್ರಭಾವದ ಮೇರೆಗೆ ಕುಂಬ್ಳೆ ಕಮಲಾಕ್ಷ ನಾಯ್ಕ ಎಂಬವರಲ್ಲಿ ನಾಟ್ಯಾಭ್ಯಾಸ ಮಾಡಿದರು. ಇಷ್ಟಲ್ಲದೆ ಶೇಣಿ ಗೋಪಾಲಕೃಷ್ಣ ಭಟ್ಟರಿಂದ ಅರ್ಥಗಾರಿಕೆಯ ಬಗ್ಗೆ ಅನುಭವ ಸಂಪಾದನೆ ಮಾಡಿದರು.

ಪ್ರಾಥಮಿಕ ಹಂತದ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕುಂಡಾವು ಮೇಳ - 1 ವರ್ಷ, ಕೂಡ್ಲು ಮೇಳ 2 ವರ್ಷ, ಕರ್ನಾಟಕ ಮೇಳ2 ವರ್ಷ, ಧರ್ಮಸ್ಥಳ ಮೇಳ ಹೀಗೆ ತಿರುಗಾಟದ ಹಿನ್ನೆಲೆ ಇದೆ.

13ನೇ ವರ್ಷದಿಂದಲೇ ಕಲಾ ಸೇವೆಯನ್ನು ಆರಂಭಿಸಿದ ಇವರು 4 ದಶಕಗಳ ಕಾಲ ಮೇಳದ ತಿರುಗಾಟವನ್ನು ಮಾಡಿದ್ದಾರೆ. ಆರಂಭದಲ್ಲಿ ಸ್ತ್ರೀ ವೇಷ ಮತ್ತು ಪುಂಡು ವೇಷಗಳಲ್ಲಿ ಮಿಂಚುತ್ತಿದ್ದರು. ದಮಯಂತಿ, ಚಂದ್ರಮತಿ, ಸೀತೆ, ಶ್ರೀದೇವಿ, ಅಮ್ಮು, ಬಳ್ಳಾಲ್ತಿ, ಶ್ರೀರಾಮ, ಶ್ರೀಕೃಷ್ಣ ಇತ್ಯಾದಿ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಇತ್ತೀಚೆನ ವರ್ಷಗಳಿಂದ ರಾಜ ವೇಷದ ಪಾತ್ರಗಳನ್ನೇ ಹೆಚ್ಚಾಗಿ ನಿರ್ವಹಿಸುವುದನ್ನೇ ಕಾಣಬಹುದಾಗಿದೆ. ಅರ್ಜುನ, ಕರ್ಣ, ಭೀಷ್ಮ, ಧರ್ಮರಾಯ ಮೊದಲಾದ ಪಾತ್ರಗಳನ್ನು ಉಲ್ಲೇಖಿಸಬಹುದಾಗಿದೆ.

ಕೃಷಿಗಾರಿಕೆಯ ಬಗ್ಗೆಯೂ ಶ್ರಮಿಸಿ ಅನುಭವವಿರುವ ಇವರು ಮಳೆಗಾಲದ ಪ್ರದರ್ಶನಗಳಲ್ಲೂ ಬೇಡಿಕೆ ಕಲಾವಿದರಾಗಿದ್ದಾರೆ. ಶ್ರೀಮತಿ ಸುಲೋಚನಾ ಎಂಬವರನ್ನು ವರಿಸಿ, ಗಣೇಶ ಎಂ.ಎ. (ಪತ್ರಿಕೋದ್ಯಮಿ) ಕೃಷ್ಣಪ್ರಸಾದ್ ಡಿ.ಎಡ್. ಪದವೀಧರ, ದೇವಿಪ್ರಸಾದ್ ಬಿ.ಬಿಎಂ. ವಿದ್ಯಾರ್ಥಿ ಹೀಗೆ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಹಿಂದೆ ದೆಹಲಿಯಲ್ಲಿ ಶಂಕರ್ ದಯಾಳ್ ಶರ್ಮಾ ಅವರ ಗೌರವಕ್ಕೆ ಪಾತ್ರರಾಗಿರುವ ಕುಂಬ್ಳೆ ಶ್ರೀಧರ ರಾಯರಿಗೆ ದುಬಾಯಿ, ಬೆಹರಿನ್, ಕೊಯಮತ್ತೂರು, ಮೈಸೂರು, ಪುತ್ತೂರು, ಧರ್ಮಸ್ಥಳ, ಎಡನೀರು, ಕಟೀಲು ಮುಂತಾದ ಹಲವೆಡೆಗಳಲ್ಲಿ ಸಂಮಾನಗಳು ಸಂದಿವೆ. ಕದ್ರಿ ಹವ್ಯಾಸಿ ಬಳಗದ ದಶಮಾನ ಸಂಮಾನ ಶತಕದ ಸಂಮಾನ, ಶ್ರೀ ಕೃಷ್ಣ ಸಭಾ ಮಂಗಳೂರು ಇದರ ಸಂಮಾನ ಇವರಿಗೆ ಲಭಿಸಿದೆ.



**ಶ್ರೀಧರ ಭಂಡಾರಿ ಪುತ್ತೂರು**

*"ಯಕ್ಷದೇಗುಲ" ಮನೆ, ಬನ್ನೂರು ಅಂಚೆ*
*ಪುತ್ತೂರು ತಾಲೂಕು*
*(ಮೊಬೈಲ್) 9448337151*
*(ಮನೆ ದೂರವಾಣಿ) 08251 – 234706*

ತೀವ್ರಗತಿಯ ನಾಟ್ಯ ವೈಖರಿಯನ್ನು ನಿರಂತರ ಉಳಿಸಿಕೊಳ್ಳುತ್ತಾ ಪುಂಡು ವೇಷದ ಮುಖೇನ ಅಚ್ಚರಿಯ ಪ್ರತಿಭೆಯನ್ನು ತೋರಿ ಮೆರೆದಿರುವ ಪುತ್ತೂರು ಶ್ರೀಧರ ಭಂಡಾರಿಯವರು ಧರ್ಮಸ್ಥಳ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಶೀನಪ್ಪ ಭಂಡಾರಿ ಮತ್ತು ಸುಂದರಿ ದಂಪತಿಯ ಸುಪುತ್ರರಾಗಿ ದಿನಾಂಕ 10-1-1945ರಂದು ಪುತ್ತೂರಿನ ಬೇರಿಕೆ ಎಂಬಲ್ಲಿ ಜನಿಸಿದರು. ತಂದೆಯವರು ಶ್ರೇಷ್ಠ ವೇಷಧಾರಿ, ಅಜ್ಜ ಜತ್ತಪ್ಪ ರೈಯವರು ಭಾಗವತರು, ವೇಷಧಾರಿಗಳಾಗಿರುವ ಚಂದ್ರಶೇಖರ ಭಂಡಾರಿ, ಗಂಗಾಧರ ಭಂಡಾರಿ ಇವರೆಲ್ಲರೂ ಸಹೋದರರು ಹೀಗೆ ಯಕ್ಷಗಾನದ ಮನೆತನದಲ್ಲಿ ಹುಟ್ಟಿದ ಕಾರಣದಿಂದಾಗಿ ಇವರಲ್ಲಿ ಪ್ರತಿಭೆ ರಕ್ತಗತವಾಗಿದೆ.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 10ನೇ ವರ್ಷದಿಂದಲೇ ಪಾತ್ರ ನಿರ್ವಹಣೆ ಮಾಡಲು ತೊಡಗಿದ್ದಾರೆ. ತಂದೆಯವರಿಂದ ಮೊದಲ ಮಾರ್ಗದರ್ಶನ, ಕುದ್ರಾಡಿ ವಿಶ್ವನಾಥ ರೈ ಯವರಿಂದ ಭರತನಾಟ್ಯಾಭ್ಯಾಸ, ಕುರಿಯ ವಿಠಲ ಶಾಸ್ತ್ರಿ ಮತ್ತು ಹೊಸಹಿತ್ತು ಮಹಾಲಿಂಗ ಭಟ್ಟರಿಂದ ಹೆಚ್ಚಿನ ನಾಟ್ಯಾಭ್ಯಾಸ ಹಾಗೂ ರಂಗಾನುಭವವನ್ನು ಸಂಪಾದಿಸಿರುವರು.

ಬಳ್ಳಂಬೆಟ್ಟು ಮೇಳ - 2 ವರ್ಷ, ಧರ್ಮಸ್ಥಳಮೇಳ-18 ವರ್ಷ, ಪುತ್ತೂರು ಮೇಳ 11 ವರ್ಷ, ಕಾಂತಾವರ ಮೇಳ (ಸ್ವಂತ ಮೇಳ) - 3 ವರ್ಷ ಆ ಮೇಲೆ ಮತ್ತೆ ಧರ್ಮಸ್ಥಳ ಮೇಳ 20 ವರ್ಷ ಹೀಗೆ 5 ದಶಕಕ್ಕೂ ಮಿಕ್ಕಿದ ತಿರುಗಾಟವನ್ನು ಮಾಡಿರುವರು.

ಹುಡಿ ನಾಟ್ಯದ ಮೋಡಿ ಮತ್ತು ದಿಗಿಣದ ಆಕರ್ಷಣೀಯ ಶೈಲಿಯಿಂದ ಸಿಡಿಲ ಮರಿಯಂತೆ ಅಬ್ಬರಿಸುತ್ತಾ ಅಭಿಮನ್ಯು ಪಾತ್ರದಲ್ಲಿ ರಂಜಿಸಿ ಜೋಡಾಟ, ಕೂಡಾಟಗಳಲ್ಲಿ ಮೆರೆದ ಕೀರ್ತಿ ಇವರದ್ದಾಗಿದೆ. ಹನೂಮಂತ, ಬಭ್ರುವಾಹನ, ಅಶ್ವತ್ಥಾಮ, ಕುಶ, ಭಾರ್ಗವ, ಕೃಷ್ಣ, ರಾಮ ಮುಂತಾದ ಪಾತ್ರಗಳಲ್ಲೂ ಉತ್ತಮ ಅಭಿನಯವನ್ನು

ತೋರುತ್ತಾರೆ. ಪುಂಡುವೇಷಗಳಲ್ಲದೆ ಇಂದ್ರಜಿತು, ರಕ್ತಬೀಜ, ಹಿರಣ್ಯಾಕ್ಷ ಇತ್ಯಾದಿ ರಾಜವೇಷದ ಪಾತ್ರಗಳನ್ನು ಕೂಡಾ ಚೆನ್ನಾಗಿ ನಿರ್ವಹಿಸುತ್ತಾರೆ.

ಮಳೆಗಾಲದಲ್ಲಿ ಕಲಾವಿದರ ಬದುಕಿಗೆ ಆಶ್ರಯವಾಗಲಿ ಎಂಬ ಸದುದ್ದೇಶದಿಂದ ಶ್ರೀ ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿ ಮಳೆಗಾಲದ ತಿರುಗಾಟವನ್ನು ನಡೆಸುತ್ತಾರೆ. ಮಕ್ಕಳಿಗೆ ಯಕ್ಷಗಾನದ ತರಬೇತಿಯನ್ನು ನೀಡುವುದರ ಮುಖೇನ ನಾಟ್ಯಗುರುವಾಗಿಯೂ ಮನ್ನಣೆಯನ್ನು ಪಡೆದಿದ್ದಾರೆ.

ಶ್ರೀಮತಿ ಉಷಾ ಎಂಬವರನ್ನು ವರಿಸಿ ಕೋಕಿಲ, ಶಾಂತಲ, ದೇವಿಪ್ರಕಾಶ್ ಎಂಬ ಮೂವರು ಮಕ್ಕಳನ್ನು - ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ದೆಹಲಿ, ಮಂಗಳೂರು, ಬೆಂಗಳೂರು, ಕಾಂತಾವರ, ಕಟೀಲು, ದುಬಾಯಿ, ಬೆಹರನ್, ಜಪಾನ್, ಲಂಡನ್ ಮುಂತಾದೆಡೆಯಲ್ಲಿ ಸಂಮಾನಗಳು ಸಂದಿವೆ.



ಶ್ರೀನಿವಾಸ ಜಿ. ಬಳ್ಳಮಂಜ.

*"ತಾರೆಮಾರು ಮನೆ", ಮಚ್ಚಿನ ಗ್ರಾಮ ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು, 574217*
*(ಮೊಬೈಲ್) 97431159924*

ಕಟೀಲು ಮೇಳದಲ್ಲಿ ಭಾಗವತರಾಗಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಶ್ರೀನಿವಾಸ ಬಳ್ಳಮಂಜ ಇವರು ಪೌರಾಣಿಕ ಪ್ರಸಂಗಗಳ ಪ್ರದರ್ಶನದ ನಿಮಿತ್ತ ಅನುಭವ ಸಂಪಾದನೆ ಮಾಡುತ್ತಾ ಬೆಳೆಯುತ್ತಿದ್ದಾರೆ.

ದಿ. 6-5-1978ರಲ್ಲಿ ಬಾಬುಗೌಡ ಹಾಗೂ ಬೂದಮ್ಮ ದಂಪತಿಯ ಸುಪುತ್ರರಾಗಿ ಬಳ್ಳಮಂಜದಲ್ಲಿ ಜನಿಸಿದರು. 10ನೇ ತರಗತಿಯ ತನ ಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿ ತಾನೂ ಸಾಧಕನಾಗಿ ಬೆಳೆಯಬೇಕೆಂಬ ಆಸಕ್ತಿಯನ್ನು ತಾಳಿದರು.

ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ ಇವರಲ್ಲಿ ಭಾಗವತಿಕೆಯ ಅಭ್ಯಾಸವನ್ನು ಮಾಡಿರುವ ಶ್ರೀನಿವಾಸರು ಯಕ್ಷಗಾನದ ಸಂಗೀತವನ್ನು ಮೊದಲಾಗಿ ಕಲಿತು ಕಟೀಲು ಮೇಳವನ್ನು ಸೇರಿದರು. ಆಮೇಲೆ ಕಟೀಲು ಮೇಳದಲ್ಲಿ ಎಂಟು ವರ್ಷಗಳ ತಿರುಗಾಟವನ್ನು ಪೂರೈಸಿ ಪ್ರಸಂಗ ಪ್ರದರ್ಶನದ ನಿರ್ವಹಣೆಯನ್ನು ಅರಿತು ಪ್ರೌಢಿಮೆಯನ್ನು ಸಾಧಿಸಿದರು. ಆಮೇಲೆ ಸುಂಕದಕಟ್ಟೆಯ ಮೇಳವನ್ನು ಸೇರಿದ ಅವರು 8 ವರ್ಷಗಳ ತಿರುಗಾಟವನ್ನು ನಡೆಸಿ, ಮತ್ತೆ ಕಟೀಲು ಮೇಳವನ್ನು ಸೇರಿ 1 ವರ್ಷಧ ತಿರುಗಾಟವನ್ನು ಪೂರೈಸಿದ್ದಾರೆ.

18ನೇ ವಯಸ್ಸಿನಿಂದ ಯಕ್ಷಗಾನದ ಭಾಗವತಿಕೆಯನ್ನು ಆರಂಭಿಸಿದ ಇವರು ಮಳೆಗಾಲದಲ್ಲಿ ಕೃಷಿಕರಾಗಿ ದುಡಿಯುತ್ತಿದ್ದಾರೆ. ಇತ್ತೀಚೆಗೆ ಶ್ರೀಮತಿ ಸವಿತಾ ಎಂಬವರನ್ನು ವರಿಸಿರುವರು.



ಶ್ರೀಧರ ಪೂಜಾರಿ ಪಂಜಾಜೆ

*"ಪಂಜಾಜೆ ಮನೆ", ಇರಾ ಗ್ರಾಮ ಮತ್ತು ಅಂಚೆ*
*ಬಂಟ್ವಾಳ ತಾಲೂಕು.*
*(ಮೊಬೈಲ್) 9980226990*

ಪುಂಡು ವೇ ಷ ದ ಮುಖೇನ ಜನಮನ್ನಣೆಯನ್ನು ಪಡೆದಿರುವ ಶ್ರೀ ಶ್ರೀಧರ ಪಂಜಾಜೆಯವರು ಕಟೀಲು ಮೇಳವೊಂದರಲ್ಲಿ ತಿರುಗಾಟವನ್ನು ಮಾಡಿರುವ ಅನುಭವಿ ಕಲಾವಿದರಾಗಿದ್ದಾರೆ.

ಕೋಟ್ಯಪ್ಪ ಬಂಗೇರ ಮತ್ತು ರಾಧಮ್ಮ ದಂಪತಿಯ ಸುಪುತ್ರರಾಗಿರುವ ಶ್ರೀಧರರು 10ನೇ ತರಗತಿಯ ತನಕ ಶೈಕ್ಷಣಿಕವಾಗಿ ಅಧ್ಯಯನವನ್ನು ಮಾಡಿದ್ದಾರೆ. ದಿ. 8-6-1961ರಲ್ಲಿ ಪಂಜಾಜೆ ಮನೆಯಲ್ಲಿ ಜನಿಸಿರುವ ಇವರು ಯಕ್ಷಗಾನ ಪರಿಸರದಲ್ಲಿ ಪ್ರಭಾವಿತರಾಗಿ ಕಲೆಯ ಅಧ್ಯಯನಕ್ಕೆ ಮನ ಮಾಡಿದರು. ಜೊತೆಗೆ ಅಜ್ಜ ರಾಮಪ್ಪ ಪೂಜಾರಿ

ಭಾಗವತಿಕೆ ಮತ್ತು ಹಿಮ್ಮೇಳ ವಾದನದಲ್ಲಿ ಪ್ರೌಢಿಮೆಯನ್ನು ಸಾಧಿಸಿದ್ದು ಇವರ ಉದಯೋನ್ಮುಖ ಬೆಳವಣಿಗೆಗೆ ಪೂರಕವೇ ಆಯಿತು.

ಗೋವಿಂದ ಭಟ್ ಸೂರಿಕುಮೇರಿ ಮತ್ತು ದಿವಾನ ಶಿವ ಶಂಕರ ಭಟ್ ಇವರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಶ್ರೀಧರ ಪೂಜಾರಿಯವರು ಅಭಿಮನ್ಯು, ಬಭ್ರುವಾಹನ, ಚಂಡ-ಮುಂಡರು, ರಾಮ, ಕೃಷ್ಣ, ಮುಂತಾದ ಪುಂಡುವೇಷಗಳನ್ನು ಉತ್ತಮವಾಗಿ ನಿರ್ವಸುತ್ತಾ ಇದ್ದಾರೆ. ಸ್ತ್ರೀ ವೇಷಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮಾಡಿರುವ ಇವರು ಮಾಲಿನಿ, ಶಶಿಪ್ರಭೆ, ಕಮಲಗಂಧಿನಿ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕೃಷಿಕರಾಗಿಯೂ ಕಾರ್ ಕುಶಲಿಯಾಗಿರುವ ಇವರು ಶ್ರೀಮತಿ ಶಾರದಾ ಎಂಬವರನ್ನು ವರಿಸಿ ಮನೋಜ್ ಕುಮಾರ್ (ಐ.ಟಿ.ಐ), ಹರ್ಷಿತಾ ಕುಮಾರಿ (ಪಿ.ಯು.ಸಿ.) ಎಂಬ ಇಬ್ಬರು ಮಕ್ಕಳನ್ನು ಪ ಡೆ ದಿರುವರು. ಇತ್ತೀಚೆಗೆ ಮೇಳ ದ ಪ್ರಬಂಧಕರಾಗಿಯೂ ಕಾರ್ಯನಿರ್ವಹಣೆ ಮಾಡಿರುವ ಅನುಭವ ಇವರದ್ದಾಗಿದೆ.



ಶ್ರೀಧರ ಪಡ್ರೆ

*"ಬದಿ" ಮನೆ, ಪಡೆ ಅಂಚೆ,*
*ಕಾಸರಗೋಡು– 671552*
*ಮೊಬೈಲ್ 09446169139*

ಚೆಂಡೆ-ಮದ್ದಳೆಯ ನುಡಿತ ಬಡಿತಗಳಲ್ಲಿ ಕೈಚಳಕವನ್ನು ತೋರುವ ಶ್ರೀಧರ ಪಡೆಯವರು ಮಂಗಳಾದೇವಿ ಮೇಳದ ಕಲಾವಿದರಾಗಿ ಮನ್ನಣೆಯನ್ನು ಪಡೆದಿದ್ದಾರೆ.

25-10-1975ರಲ್ಲಿ ಕುಂಞಪ್ಪನಯ್ ಮತ್ತು ಸರಸ್ವತಿ ದಂಪತಿಯ ಸುಪುತ್ರರಾಗಿ ಪಡೆಯ "ಬದಿ" ಮನೆಯಲ್ಲಿ ಹುಟ್ಟಿದರು. ಬಿ. ಎ. ಪದವೀಧರಾಗಿರುವ ಇವರು 16ನೇ ವಯಸ್ಸಿನಿಂದಲೇ ಯಕ್ಷಗಾನದ ಕಲಾಸೇವೆಯನ್ನು ಆರಂಬಿಸಿ ಹವ್ಯಾಸಿ ಕಲಾವಿದರೆನಿಸಿದ್ದರು.

ಶ್ರೀಧರ ಪಡ್ರೆಯವರ ತಂದೆಯವರು ವೇಷಧಾರಿಯಾಗಿರುವುದರಿಂದ ಅವರ ಪ್ರೇರಣೆಯ ಮೇರೆಗೆ ಪುಂಡಿಕ್ಕಾ ಕೃಷ್ಣಭಟರಲ್ಲಿ ಚೆಂಡೆ, ಮದ್ದಳೆ, ಮತ್ತು ಭಾಗವತಿಕೆಯ ಅಭ್ಯಾಸವನ್ನು ಮಾಡಿದರು.

ಎಡನೀರು ಮೇಳದಲ್ಲಿ ಎರಡು ವರ್ಷ ಹಾಗೂ ' ಮಂಗಳಾದೇವಿ ಮೇಳದಲ್ಲಿ 11ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಆರಂಭದಲ್ಲಿ ಪುಂಡು ವೇಷಧಾರಿಯಾಗಿ ಸುದರ್ಶನ, ರಾಮ ಮುಂತಾದ ಪಾತ್ರಗಳನ್ನು ಮಾಡಿದ್ದಾರೆ.

ಅನ್ಯ ಉದ್ಯೋಗವನ್ನು ಬಯಸದೆ ಯಕ್ಷಗಾನದ ಕಲಾಸಾಧಕನಾಗಬೇಕೆಂದು ಮೇಳದ ವೃತ್ತಿ ಜೀವನವನ್ನು ಸ್ವೀಕರಿಸಿರುವ ಇವರು ಶ್ರೀಮತಿ ಕುಸುಮ ಎಂಬವರನ್ನು ವರಿಸಿದ್ದಾರೆ.



ಶೇಖರ ಭಂಡಾರಿ

*"ಬನ್ನೂರು ಮನೆ", ಗ್ರಾಮ ಬನ್ನೂರು,*
*ಅಂಚೆ: ಬನ್ನೂರು ಕಟ್ಟೆ, ಪುತ್ತೂರು ತಾಲೂಕು.*
*(ಮೊಬೈಲ್) 9611202483.*

ಪುಂಡು ವೇಷ, ರಾಜವೇಷ ಮತ್ತು ಬಣ್ಣದ ವೇಷಗಳ ಮುಖೇನ ಜನಮನ್ನಣೆ ಪಡೆದಿರುವ ಶೇಖರ ಭಂಡಾರಿಯವರು ಕೊಲ್ಲಂಗಾನ ಮೇಳದ ಕಲಾವಿದರಾಗಿ ಕಲಾ ಸೇವೆಯನ್ನು ಮಾಡುತ್ತಿದ್ದಾರೆ.

1947ನೇ ಆಗಸ್ಟ್ ತಿಂಗಳಲ್ಲಿ ಹುಟ್ಟಿರುವ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಇವರ ತಂದೆ ಹಿರಿಯ ವೇಷಧಾರಿ ಬಿ. ಶೀನಪ್ಪ ಭಂಡಾರಿ, ತಾಯಿ ಸುಂದರಿ, ಯಕ್ಷಗಾನ ಮನೆತನದಲ್ಲಿ ಹುಟ್ಟಿದ ಇವರು ತಂದೆಯ ಮಾರ್ಗದರ್ಶನದ ಮೇರೆಗೆ ಕಲಾಪ್ರವೇಶ ಮಾಡಿದರು.

ಬಳ್ಳಂಬೆಟ್ಟು ಮೇಳ-5 ವರ್ಷ, ಕೂಡ್ಲು ಮೇಳ- 11 ವರ್ಷ, ಸುಬ್ರಹ್ಮಣ್ಯ ಮೇಳ-20 ವರ್ಷ, ಪುತ್ತೂರು ಮೇಳ-5 ವರ್ಷ, ಕಾಂತವರ ಮೇಳ-2 ವರ್ಷ, ಧರ್ಮಸ್ಥಳ ಮೇಳ -4 ವರ್ಷ, ವೇಣೂರು ದೇಲಂಪುರಿ ಮೇಳ-5 ವರ್ಷ, ಕೊಲ್ಲಂಗಾನ ಮೇಳ- 1 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಶುಂಭ, ಚಂಡ-ಮುಂಡರು, ಮಹಿಷಾಸುರ, ದೇವೇಂದ್ರ, ದೇವಿ, ಅರ್ಜುನ, ಹಿರಣ್ಯಾಕ್ಷ ಇಂದ್ರಜಿತು, ಶಿಶುಪಾಲ ಮುಂತಾದ ಪಾತ್ರಗಳನ್ನು ನಿರ್ವಹಿಸಿರುವ ಇವರು, ಹವ್ಯಾಸಿ ಕಲಾವಿದರಿಗೆ ತರಬೇತಿಯನ್ನು ನೀಡಿದ್ದಾರೆ. ಶ್ರೀಧರ ಭಂಡಾರಿ, ಗಂಗಾಧರ ಭಂಡಾರಿ ಸೇರಿದಂತೆ ಇವರ ಸಹೋದರರು ಮತ್ತು ಸಂಬಂಧಿಕರು ಯಕ್ಷಗಾನ ಕಲಾವಿದರಾಗಿ ಮನ್ನಣೆ ಪಡೆದಿದ್ದಾರೆ.

ಶ್ರೀಮತಿ ಸರೋಜ ಎಂಬವರನ್ನು ವರಿಸಿರುವ ಇವರು ದಿನೇಶ್ ಭಂಡಾರಿ ಮತ್ತು ಗಣೇಶ್ ಭಂಡಾರಿ ಎಂಬ ಮಕ್ಕಳನ್ನು ಪಡೆದಿರುವರು. ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಪುತ್ತೂರು ಮಂಗಳೂರು ಮೊದಲಾದೆಡೆಯಲ್ಲಿ ಸಂಮಾನ ಗೌರವಗಳು ಸಂದಿವೆ.



**ಸದಾಶಿವ ಶೆಟ್ಟಿ ಮುಂಡಾಜೆ**

*"ನಿಸರ್ಗಧಾಮ" ಮನೆ*
*ಮೂಡುಶೆಡ್ಡೆ, ಮಂಗಳೂರು*
*(ಮೊಬೈಲ್) 9880584557*

ಪುಂಡುವೇಷ ಮತ್ತು ರಾಜವೇಷಗಳ ಮುಖೇನ ಕೀರ್ತಿಯನ್ನು ಸಂಪಾದಿಸಿ ಜನಮನ್ನಣೆಗೆ ಕಾರಣವಾಗಿರುವ ಮುಂಡಾಜೆ ಸದಾಶಿವ ಶೆಟ್ಟರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ರಾಮಯ್ಯ ಶೆಟ್ಟಿ ಮತ್ತು ತುಂಗಮ್ಮ ದಂಪತಿಯ ಸುಪುತ್ರರಾಗಿ 6-6-1956ರಂದು ಮುಂಡಾಜೆ ಎಂಬಲ್ಲಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರಿಗೆ ಮನೆತನದ ಆದರ್ಶವೂ ಇದೆ. ಚಿಕ್ಕಪ್ಪ ಮಂಕುಡೆ ಸಂಜೀವ ಶೆಟ್ಟರು ಸ್ತ್ರೀ ಪಾತ್ರಧಾರಿ, ಅಜ್ಜ ಬೋಳಾರ ನಾರಾಯಣ ಶೆಟ್ಟರು (ಪುರುಷ ಪಾತ್ರಧಾರಿ) ಅಣ್ಣ ಬಾಲಕೃಷ್ಣ ಶೆಟ್ಟಿ ಮುಂಡಾಜೆಯವರು ಉತ್ತಮ ಪುಂಡುವೇಷಧಾರಿ. ಆರಂಭದಲ್ಲಿ ಸದಾಶಿವ ಶೆಟ್ಟರು

ಕಡಬ ಶಾಂತಪ್ಪರಲ್ಲಿ ನಾಟ್ಯಾಭ್ಯಾಸ ಮಾಡಿದರು. ಅನಂತರ ಧರ್ಮಸ್ಥಳ ಕ್ಷೇತ್ರದ ಲಲಿತಕಲಾ ಕೇಂದ್ರದಲ್ಲಿ, ವಿಠಲ ಶಾಸ್ತ್ರಿ ಮತ್ತು ಪಡ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

ದಿ| ನಾರಾಯಣ ಕಾಮತರ ಉತ್ತೇಜನದಂತೆ ಮೊದಲಾಗಿ ಧರ್ಮಸ್ಥಳ ಮೇಳವನ್ನು ಸೇರಿದ ಇವರು 11 ವರ್ಷಗಳ ತಿರುಗಾಟ ಪೂರೈಸಿದರು. ಆನಂತರ ಕದ್ರಿ ಮೇಳ 9 ವರ್ಷ, ಕುಂಬ್ಳೆ ಮೇಳ 5 ವರ್ಷ, ಬಪ್ಪನಾಡು ಮೇಳ 5 ವರ್ಷ, ಮಧೂರು ಮೇಳ - 1 ವರ್ಷ, ಭಗವತಿ ಮೇಳ-3 ವರ್ಷ ಹಾಗೂ ಕಟೀಲು ಮೇಳ 4 ವರ್ಷ ಹೀಗೆ ತುಳು ಪೌರಾಣಿಕ ಪ್ರದರ್ಶನಗಳ ಮೇಳಗಳಲ್ಲಿ ತಿರುಗಾಟವನ್ನು ನಡೆಸಿದ್ದಾರೆ.

ಬ್ರಹ್ಮ, ವಿಷ್ಣು, ಶಶಿಪ್ರಭೆ, ಪ್ರಮೀಳೆ, ಶಿಶುಪಾಲ ಅರ್ಜುನ, ಹಿರಣ್ಯಾಕ್ಷ, ಕೋಟಿ, ಚೆನ್ನಯ, ಪೆರುಮಳ, ದೇವುಪೂಂಜ, ಕೋರಬ್ಬು ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಾಟ್ಯಗುರುಗಳಾಗಿಯೂ ಕಾರ್ ನಿರ್ವಹಿಸಿರುವ ಸಾದಾಶಿವ ಶೆಟ್ಟರು ಮಂಗಳೂರು, ಮಂಗಳಾದೇವಿ ರಾಮಕೃಷ್ಣಾಶ್ರಮದ ಮಕ್ಕಳ ಪ್ರದರ್ಶನಕ್ಕೆ ಒಳ್ಳೆಯ ನಿರ್ದೇಶನವನ್ನು ನೀಡಿದ್ದಾರೆ. ಇಷ್ಟಲ್ಲದೆ ಹಲವು ಶಾಲಾ ಕಾಲೇಜುಗಳಲ್ಲಿ ಪ್ರದರ್ಶನಗಳನ್ನು ನಡೆಸಿ ಗೌರವ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ.

ಶ್ರೀಮತಿ ಕಮಲಾಕ್ಷಿ ಎಂಬವರನ್ನು ವರಿಸಿರುವ ಇವರು ಚೇತನ್ (ದ್ವಿತೀಯ ಬಿ.ಎ.), ವಾಣಿ (ಎಸ್.ಎಸ್.ಎಲ್.ಸಿ.) ಲೋಹಿತ್(ಎಸ್.ಎಸ್.ಎಲ್.ಸಿ.), ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಮಂಗಳೂರು, ಕಾರ್ಕಳ, ಮುಂಡಾಜೆ, ಕದ್ರಿ ಮುಂತಾದೆಡೆಯಲ್ಲಿ ಸಂಮಾನಗಳು ನಡೆದಿವೆ.



**ಸತೀಶ್ ಶೆಟ್ಟಿ ಪಟ್ಲ**

*ಪಟ್ಲ ಗುತ್ತು ಮನೆ, ಪುಡ್ಪಲ್ಪಡ್ಕ ಅಂಚೆ*
*ಕದೋಪಾಡಿ ಗ್ರಾಮ*
*ಬಂಟ್ವಾಳ ತಾಲೂಕು : 374279*

ಕಟೀಲು ಮೇಳದ ಮುಖ್ಯ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಿರುವ ಶ್ರೀ ಪಟ್ಲ ಸತೀಶ ಶೆಟ್ಟರು ಉತ್ತಮವಾದ ಕಂಠಸಿರಿಯಿ0ದ ಜನಮನ್ನಣೆ ಪಡೆದು ಕೀರ್ತಿ ಸ0ಪನ್ನರಾಗಿದ್ದಾರೆ.

ಮಹಾಬಲ ಶೆಟ್ಟಿ ಮತ್ತು ಲಲಿತಾ ಶೆಡ್ತಿ ದಂಪತಿಯ ಸುಪುತ್ರರಗಿ 1-8-1979 ರಲ್ಲಿ ಜನಿಸಿದ ಸತೀಶ ಶೆಟ್ಟರು ತಂದೆಯವರ ಪ್ರೇರಣೆಯಿಂದ ಕಲಾಸಾಧಕರಾಗಿ ಬೆಳೆದರು. ಇವರ ತಂದೆ ಹಿಮ್ಮೇಳದ ಬಗ್ಗೆ , ಮೇಳದ ಯಜಮಾನಿಕೆಯ ಬಗ್ಗೆ ಅನುಭವವನ್ನು ಸ0ಪಾದಿಸಿರುವುದರಿಂದ ತ0ದೆಯ ಪ್ರತಿಭೆ ರಕ್ತಗತವಾಗಿ ಇವರಲ್ಲೂ ಬಂದಿದೆ.

ಮಾಂಬಾಡಿ ಸುಬ್ರಹ್ಮಣ್ಯ ಭಟ್ ಅವರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿರುವ ಇವರು ಚೆಂಡೆ-ಮದ್ದಳೆಯ ಬಗ್ಗೆಯೂ ಅಧ್ಯಯನ ಮಾಡಿದ್ದಾರೆ. ಮು0ದೆ ಬಜೆಕಳ ಗಣಪತಿ ಭಟ್ಟರಿಂದ ಸಂಗೀತದಭ್ಯಾಸವನ್ನು ಮಾಡಿದ್ದಾರೆ.

ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಇವರು ಭಗವತಿ ಮೇಳ-1 ವರ್ಷ ಅನ0ತರಕಟೀಲು ಮೇಳ 10 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ. ಬಾಲ್ಯದಿಂದಲೇ ಕಲಾಸಕ್ತರಾಗಿದ್ದು ಹವ್ಯಾಸಿಯಾಗಿ ಕಲಾಸೇವೆ ಮಡಿದ ಅನುಭವ ಇವರಿಗಿದೆ.

ಕಾರ್ ಸ್ಟ್ರೀಟ್, ಮಂಗಳೂರು, ಕು0ಜತ್ ಬೈಲು ಮೊದಲಾದೆಡೆ ಗೌರವ ಪುರಸ್ಕಾರಕ್ಕೆ ಒಳಗಾಗಿರುವ ಸತೀಶ್ ಶೆಟ್ಟರು ಉತ್ತಮವಾದ ಸ್ವರಭಾರದಿಂದ ಪ್ರೇಕ್ಷಕರ ಮನಸ್ಸನ್ನು ತಣಿ ಸುವ ಯೋಗ್ಯತೆವುಳ್ಳವರಾಗಿದ್ದುದರಿ0ದಲೇ ಬೇಸಗೆ ಮತ್ತು ಮಳೆಗಾಲದಲ್ಲಿ ಆಟ-ಕೂಟಗಳು ಸೇರಿದಂತೆ ಬೇಡಿಕೆಯ ಕಲಾವಿದರಾಗಿದ್ದಾರೆ.



**ಸತೀಶ್ ಕುಮಾರ್ ಎನ್.**

*"ಶಾರದಾ ನಿಲಯ", ನಿಚ್ಚಾಲು ಗ್ರಾಮ ಅಂಚೆ*
*ಕುಂಬ್ಳೆ ವಯ. ಕಾಸರಗೋಡು.*
*ಮೊಬೈಲ್ : 9480227993*
*ಮನೆ ದೂರವಾಣಿ : 04998 234907.*

ಪುಂಡು ವೇಷದ ಮುಖೇನ ಜನ ಮನ್ನಣೆಗೆ ಒಳಗಾಗಿರುವ ಶ್ರೀ ಎನ್ ಸತೀಶ್ ಕುಮಾರ್ ಇವರು ಸುಂಕದಕಟ್ಟೆಯ ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಿದ್ದಾರೆ.

ಅಚ್ಯುತ ಮತ್ತು ಶಾರದಾ ದಂಪತಿಯ ಸುಪುತ್ರರಾಗಿ ಕಾಸರಗೋಡಿನಲ್ಲಿ 1980ರಲ್ಲಿ ಹುಟ್ಟಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು, ಪಡೆದಿದ್ದಾರೆ.

ಶಾಲಾ ಅಧ್ಯಾಪಕರಿಂದ ಯಕ್ಷಗಾನ ಕಲಾವಿದನಾಗುವ ಪ್ರೇರಣೆಗೆ ಒಳಗಾದ ಇವರು ಶಾಲೆಯಲ್ಲಿ ಕುಂಬ್ಳೆ ನಾರಾಯಣ ನಾಯ್ಕ ಎಂಬವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು. ಮುಂದೆ ಮೇಳ ತಿರುಗಾಟದಲ್ಲಿ ಹೆಚ್ಚಿನ ಅಭ್ಯಾಸವನ್ನು ನೋಡಿ ಕಲಿತು ಕೇಳಿ ತಿಳಿದು ಪ್ರೌಢಿಮೆಯನ್ನು ಸಾಧಿಸುತ್ತಾ ಬಂದರು.

11ನೇ ವರ್ಷದಿಂದಲೇ ಮೇಳ ತಿರುಗಾಟವನ್ನು ಆರಂಭಿಸಿದ ಇವರು ಸುಂಕದಕಟ್ಟೆಯ . ಮೇಳವೊಂದಲ್ಲೇ 20 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಚೆಂಡ-ಮುಂಡರು, ಶ್ರೀ ಕೃಷ್ಣ, ರಾಮ, ಲಕ್ಷ್ಮಣ, ಕುಶ, ಅಯ್ಯಪ್ಪ, ಬಭ್ರುವಾಹನ, ಅಭಿಮನ್ಯು, ಭಾರ್ಗವ, ವಿಷ್ಣು, ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಇದ್ದಾರೆ.

ಒಂದೇ ಮೇಳದ ವ್ಯವಸ್ಥೆಗೆ ಬದ್ಧರಾಗಿ ತಿರುಗಾಟವನ್ನು ಮಾಡುತ್ತಿರುವ ಇವರು ಶ್ರೀಮತಿ ಸವಿತಾ ಎಂಬವರನ್ನು ವರಿಸಿ ಕುಮಾರ ವಿಷೇಶ್ ಎಂಬ ಸುಪುತ್ರನನ್ನು ಪಡೆದಿದ್ದಾರೆ.



ಸಂಜೀವ ರೈ ಕಾಂಚನ

*ಗೋಳಿತೊಟ್ಟು ಅಂಚೆ*
*ಪುತ್ತೂರು ದ. ಕ.*

ತುಳು ಮತ್ತು ಕನ್ನಡ ಭಾಷೆಯ ಪ್ರಸಂಗಗಳಲ್ಲಿ ತನ್ನದೇ ಆದ ಸ್ವಂತಿಕೆಯ ಶೈಲಿಯಿಂದ ಪ್ರಸಿದ್ಧಿಯನ್ನು ಪಡೆದವರು ಕಾಂಚನ ಸಂಜೀವ ರೈ, ಪ್ರಸ್ತುತ ಬಪ್ಪನಾಡು ಮೇಳದಲ್ಲಿ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

24-8-1942ರಂದು ಮುಂಡಪ್ಪ ರೈ ಹಾಗೂ ಮುತ್ತಕ್ಕೆ ದಂಪತಿಯ ಸುಪುತ್ರರಾಗಿ ಬಂಟ್ವಾಳ ಸಜಿಪ ಮೂಡ ಗ್ರಾಮದ ನಗ್ರಿಗುತ್ತುವಿನಲ್ಲಿ ಜನಿಸಿದರು. ಬಾಲ್ಯದಿಂದಲೇ ಯಕ್ಷಗಾನದತ್ತ ಆಕರ್ಷಿತರಾಗಿದ್ದ ಇವರು ಮಾಣಂಗಾಯಿ ಕೃಷ್ಣ ಭಟ್ಟರಿಂದ ಯಕ್ಷಗಾನದ ನಾಟ್ಯಭ್ಯಾಸವನ್ನು ಮಾಡಿರುವರು.

ಸುಬ್ರಹ್ಮಣ್ಯ, ನಂದಾವರ, ಅರುವ, ಕರ್ನಾಟಕ, ಕದ್ರಿ, ಸುರತ್ಕಲ್, ವೇಣೂರು, ಮಂಗಳಾದೇವಿ, ಪುತ್ತೂರು ಮೇಳಗಳಲ್ಲಿ 47 ವರ್ಷಗಳಿಗೂ ಮಿಕ್ಕಿದ ಕಲಾ ಸೇವೆಯನ್ನು ಮಾಡಿದ್ದಾರೆ. ಇತ್ತೀಚಿನ ವರುಷಗಳಲ್ಲಿ ಹೇಳಿಕೆಯ ಮೇರೆಗೆ ಹವ್ಯಾಸಿ ಕಲಾ ಕಾರ್‍ಯ ಕ್ರಮಗಳಲ್ಲಿ ಭಾಗವಹಿಸಿ ಪಾತ್ರ ನಿರ್ವಹಣೆ ಮತ್ತು ಮಾರ್ಗದರ್ಶನವನ್ನು ಮಾಡುತ್ತಾ ಇದ್ದಾರೆ. ಅಪ್ಪಲ್ಲದೆ ಪ್ರಸ್ತುತ ಬಪ್ಪನಾಡು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕಥಾ ನಾಯಕನ ಪಾತ್ರಗಳಲ್ಲಿ ಹಿಡಿತವನ್ನು ಸಾಧಿಸಿರುವ ಇವರು ಕೋಟಿ, ದೇವುಪೂಂಜ, ಅರ್ಜುನ, ಧರ್ಮರಾಯ, ವಿಷ್ಣು, ಕೃಷ್ಣ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತುಳು ಭಾಷೆಯ ಬಲದಿಂದ ಇವರ ಮಾತಿನ ಶೈಲಿ ಭಾವ ಪೂರ್ಣವಾಗಿದ್ದು ತುಳು ಪ್ರಸಂಗಗಳ ಪಾತ್ರಗಳಲ್ಲಿ ಜನಾಕರ್ಷಣೆಯನ್ನು ಪಡೆದಿದ್ದಾರೆ.

ಶ್ರೀಮತಿ ಶುಭವತಿ ಎಂಬವರನ್ನು ವರಿಸಿರುವ ಸಂಜೀವ ರೈವರು ಸರೋಜ, ರಘುನಾಥ ರೈ, ಬಾಲಚಂದ್ರ ರೈ (ಅರ್ಥಧಾರಿ), ಚಂದ್ರಾವತಿ ರೈ (ಉಪನ್ಯಾಸಕರು), ವಿಠಲ ರೈ ಎಂಬ ಐವರು ಮಕ್ಕಳನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಯಾಗಿ ರಾಜ್ಯೋತ್ಸವದ ಜಿಲ್ಲಾ ಪ್ರಶಸ್ತಿ, ತಾಲೂಕು ಸಾಹಿತ್ಯ ಸಮ್ಮೇಳನದ ಪ್ರಶಸ್ತಿ, ಹವ್ಯಾಸಿ ಬಳಗದ ದಶಮಾನ ಸಂಮಾನ, ಮುಂಬಯಿ ಅಭಿಮಾನಿ ಬಳಗದ ಸಂಮಾನಗಳಲ್ಲದೆ ಉಳ್ಳಾಲ, ಕಾಂತಾವರ, ಮದ್ರಾಸು ಮುಂತಾದೆಡೆಯಲ್ಲಿ 30ಕ್ಕೂ ಮಿಕ್ಕಿದ ಸಂಮಾನಗಳು ಸಂದಿವೆ.



**ಸಂಜಯ ಕುಮಾರ್ ಶೆಟ್ಟಿ**

*"ಮನೀಷ" ನೆಹರೂ ರೋಡ್*
*ಕಂಕನಾಡಿ, ಮಂಗಳೂರು 2*
*ಮೊಬೈಲ್: 94815717060*

ಸ್ತ್ರೀ ವೇಷದ ಮೂಲಕ ಪ್ರಸಿದ್ಧಿಯನ್ನು ಪಡೆದಿರುವ ಶ್ರೀ ಸಂಜಯ್ ಕುಮಾರ್ ಶೆಟ್ಟಿಯವರು ಉತ್ತಮ ಸಂಘಟಕರಾಗಿದ್ದು ಪ್ರಸ್ತುತ ಎಡನೀರು ಯಕ್ಷಗಾನ ಮಂಡಳಿಯ ಕಲಾವಿದರಾಗಿದ್ದು ಕಲಾಸೇವೆ ಮಾಡುತ್ತಿದ್ದಾರೆ.

ಐತಪ್ಪ ಶೆಟ್ಟಿ ಮತ್ತು ಸುಂದರಿ ಶೆಟ್ಟಿ ದಂಪತಿಯ ಸುಪುತ್ರರಾಗಿ 10/10/1960ರಂದು ಚಿಕ್ಕಮಗಳೂರಿನ ಗೋಣಿಬೀಡಿನಲ್ಲಿ ಜನಿಸಿದರು. 10ನೇ ತರಗತಿಯ ತನಕ ಶೈಕ್ಷಣಿಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 17ನೇ ವರ್ಷದಿಂದ ಯಕ್ಷಗಾನ ಕಲೆಯತ್ತ ಆಕರ್ಷಕರಾಗಿ ಕಲಿಯುವ ಆಸಕ್ತಿಯನ್ನು ತಳೆದರು.

ಪಡ್ರೆಚಂದು ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದ ಸಂಜಯ ಕುಮಾರರು ಎಂ. ಕೆ. ರಮೇಶ ಆಚಾರ್ಯ, ಕೊಳ್ಯೂರು ರಾಮಚಂದ್ರ ರಾವ್, ಪಾತಾಳ ವೆಂಕಟರಮಣ ಭಟ್ ಮೊದಲಾದವರಿಂದ ಸ್ತ್ರೀ ಪಾತ್ರಗಳ ಬಗ್ಗೆ ಅನುಭವವನ್ನು ಪಡೆದಿದ್ದಾರೆ.

ಸ್ತ್ರೀ ಮತ್ತು ಪುಂಡು ವೇಷಗಳನ್ನು ಮಾಡುವ ಇವರು ಶ್ರೀದೇವಿ, ದ್ರೌಪದಿ, ಚಂದ್ರಮತಿ, ದಮಯಂತಿ, ಸುಭದ್ರೆ, ಭ್ರಮರಕುಂತಳೆ, ಮೇನಕೆ, ದಾಕ್ಷಾಯಿಣಿ, ಅಯ್ಯಪ್ಪ, ಕುಶ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ.

ಆದಿ ಸುಬ್ರಹ್ಮಣ್ಯ ಮೇಳ-4 ವರ್ಷ, ಪುತ್ತೂರು ಮೇಳ-4 ವರ್ಷ, ಸುರತ್ಕಲ್ ಮೇಳ-1 ವರ್ಷ, ಕರ್ನಾಟಕ ಮೇಳ-10 ವರ್ಷ, ಗಣೇಶಪುರ ಮೇಳ (ಸ್ವಂತ ಮೇಳ)-3 ವರ್ಷ, ಮಂಗಳಾದೇವಿ ಮೇಳ- 5 ವರ್ಷ, ಕುಂಟಾರು ಮೇಳ-2 ವರ್ಷ, ಬಪ್ಪನಾಡು ಮೇಳ-1 ವರ್ಷ, ಹೊಸನಗರ ಮೇಳ (ಅತಿಥಿ ಕಲಾವಿದ) -1 ವರ್ಷ, ಎಡನೀರು ಮೇಳ-2 ವರ್ಷ, ಹೀಗೆ 3 ದಶಕಕ್ಕೂ ಮಿಕ್ಕಿದ ತಿರುಗಾಟವನ್ನು ನಡೆಸಿದ್ದಾರೆ.

ಮಳೆಗಾಲದಲ್ಲಿ ಪ್ರಸಿದ್ಧ ಕೂಡುವಿಕೆಯಲ್ಲಿ ಕಾರ್ಯಕ್ರಮಗಳ ಆಯೋಜಿಸಿರುವ ಇವರು ಪಡ್ರೆ ಚಂದು, ಕೆ. ಗೋವಿಂದ ಭಟ್, ಅರುವ ಕೊರಗಪ್ಪ ಶೆಟ್ಟಿ, ಮಿಜಾರು ಅಣ್ಣಪ್ಪ ಮೊದಲಾದ ಹಲವಾರು ಹಿರಿಯ ಕಲಾವಿದರನ್ನು ಸಂಮಾನಿಸಿದ್ದಾರೆ.

ಶ್ರೀಮತಿ ಪ್ರಫುಲ್ಲ ಎಂಬವರನ್ನು ವರಿಸಿರುವ ಇವರು ದೀಕ್ಷಾ ಎಂ.ಬಿ.ಎ, ಎಂ.ಬಿ.ಸಿ (ಉಪನ್ಯಾಸಕಿ ಮಂಗಳೂರು ವಿಶ್ವವಿದ್ಯಾಲಯ), ದರ್ಶನ್ (ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಧ್ಯಯನ) ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಫಲವಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮುಂಬಯಿ ಅಭಿಮಾನಿ ಬಳಗದ ಸಂಮಾನ, ಸನಾತನ ಸೇವಾ ಟ್ರಸ್ಟ್ (ರಿ) ಮಂಗಳೂರು ಸಂಮಾನ, ಗೋಣಿಬೀಡು ಹುಟ್ಟೂರು ಸಂಮಾನ ಇತ್ಯಾದಿಗಳು ಇವರಿಗೆ ಲಭಿಸಿದೆ.



**ಸಂಜೀವ ಬಳೆಗಾರ ಎಸ್.**

*ಶಂಕರನಾರಾಯಣ ಮನೆ, ಶಂಕರನಾರಾಯಣ ಅಂಚೆ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಕರುಣ ರಸದ ಪಾತ್ರಗಳನ್ನು ಹೃದಯಕ್ಕೆ ಮುಟ್ಟುವಂತೆ ಚಿತ್ರಿಸಬಲ್ಲ ಶ್ರೀ ಎಸ್. ಸಂಜೀವ ಬಳೆಗಾರರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಗೋವಿಂದ ಬಳೆಗಾರ ಮತ್ತು ಮುತ್ತಮ್ಮ ದಂಪತಿಯ ಸುಪುತ್ರರಾಗಿ 18/04/1950 ರಂದು ಶಂಕರನಾರಾಯಣದಲ್ಲಿ ಜನಿಸಿದರು. 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನದತ್ತ ಆಕರ್ಷಿತರಾಗಿದ್ದರು ಮಾತ್ರವಲ್ಲದೆ ಶಾಲಾ ಪರಿಸರದಲ್ಲೂ ಉತ್ತೇಜನ ದೊರಕಿತ್ತು.

ಸಹೋದರರಾದ ಗೋಪಾಲಕೃಷ್ಣ ಅವರಿಂದ ಬಡಗುತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿದ್ದಾರೆ. 18ನೇ ವರ್ಷದಿಂದಲೇ ರಂಗಪ್ರವೇಶ ಮಾಡಿರುವ ಇವರು ಒಳ್ಳೆ ಮೇಳದ ನಿರೀಕ್ಷೆಯಲ್ಲಿ ತಿರುಗಾಟ ಮಾಡುವ ಉದ್ದೇಶವನ್ನು ಇಟ್ಟು ತೆಂಕುತಿಟ್ಟಿನ ಮೇಳವನ್ನು ಸೇರಿದ ಕಾರಣ ಇವರಿಗೆ ತೆಂಕುತಿಟ್ಟಿನ ಪರಿಸರದಲ್ಲೇ ಹೆಚ್ಚಿನ ಮನ್ನಣೆ ಇದೆ.

ಇಡಗುಂಜಿ ಮೇಳ- 1 ವರ್ಷ, ಅಮೃತೇಶ್ವರಿ ಮೇಳ- 1 ವರ್ಷ, ಸುರತ್ಕಲ್ ಮೇಳ- 3 ವರ್ಷ, ಕಟೀಲು ಮೇಳ- 35 ವರ್ಷ ಹೀಗೆ 4 ದಶಕಗಳ ತಿರುಗಾಟವನ್ನು ಮಾಡಿದ ಅನುಭವ ಇವರಿಗಿದೆ. ಚಂದ್ರಮತಿ, ಯಶೋಮತಿ, ದಮಯಂತಿ, ರೇಣುಕೆ, ಸುಭದ್ರೆ ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾರೆ.

ಶ್ರೀಮತಿ ಸೀತಾ ಎಂಬವರನ್ನು ವರಿಸಿರುವ ಇವರು ಸುರೇಶ್, ಶಾಂತಾ, ಮಮತಾ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಮಳೆಗಾಲದಲ್ಲಿ ತನ್ನ ಊರಲ್ಲೇ ಆಸಕ್ತರಿಗೆ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿರುವ ಇವರು ಹಲವು ಮಂದಿ ಶಿಷ್ಯರನ್ನು ಹೊಂದಿದ್ದಾರೆ.

ಪೌರಾಣಿಕ ಶೈಲಿಯನ್ನು ಮೈಗೂಡಿಸಿಕೊಂಡಿರುವ ಸಂಜೀವ ಬಳೆಗಾರರ ಸಾಧನೆಗೆ ಪ್ರತಿಫಲವಾಗಿ ಕಟೀಲು, ಅಸ್ರಣ್ಣ ಪ್ರಶಸ್ತಿ, ಕಲ್ಯಾಣ ಯಕೋತ್ಸವ ಸಂಮಾನ, ಹವ್ಯಾಸಿ ಬಳಗದ ದಶಮಾನ ಸಂಮಾನ ಅಂಬಲಪಾಡಿಯ ಸಂಮಾನ

ಮುಂತಾದವುಗಳಿಗೆ ಭಾಗಿಯಾಗಿದ್ದಾರೆ.



**ಸದಾಶಿವ ಶೆಟ್ಟಿ ಸಿದ್ಧಕಟ್ಟೆ**

*ಬಾರ್ಜರಡ್ಡ ಮನೆ, ಅಜ್ಜಿಬೆಟ್ಟು ಗ್ರಾಮ ಮತ್ತು ಅಂಚೆ*
*ಬಂಟ್ವಾಳ ತಾಲೂಕು-574324*
*ಮೊಬೈಲ್: 9448770359.*

ಸ್ತ್ರೀ ವೇಷ ಮತ್ತು ಸಾತ್ವಿಕ ವೇಷಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಮನ್ನಣೆಗೆ ಒಳಗಾಗಿರುವ ಶ್ರೀ ಸಿದ್ಧಕಟ್ಟೆ ಸದಾಶಿವ ಶೆಟ್ಟರು ಮಂಗಳಾದೇವಿ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ಬಿ. ಕೊರಗ ಶೆಟ್ಟಿ ಮತ್ತು ರೇವತಿ ಕೆ. ಶೆಟ್ಟಿ ದಂಪತಿಯ ಸುಪುತ್ರರಾಗಿ, ಅಜ್ಜಿಬೆಟ್ಟು ಗ್ರಾಮದಲ್ಲಿ

6/7/1965ರಂದು ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಆಟ-ಕೂಟಗಳನ್ನು ನೋಡಿ ಕಲಾ ಪ್ರಭಾವಕ್ಕೆ ಒಳಗಾಗಿ . ಕಲಿಯಬೇಕೆಂಬ ಹಂಬಲವನ್ನು ತಾಳಿದರು.

ಜನಾರ್ದನ ಗುಡಿಗಾರ, ದೂರಸಂಬಂಧಿ ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟಿ ಇವರೀರ್ವರು ಗುರುಗಳಾಗಿದ್ದು, 1987 ರಿಂದ ಯಕ್ಷಗಾನದ ಕಲಾಸೇವೆಯನ್ನು ಪ್ರಾರಂಭಿಸಿದ್ದಾರೆ. ಇವರ ಅಣ್ಣನಾಗಿರುವ ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿಯವರ ಪ್ರಭಾವ ಕೂಡ ಇವರ ಮೇಲೆ ಇದೆ.

ಅಡ್ಯಾರು ಶ್ರೀ ಮಹಾಲಿಂಗೇಶ್ವರ ಮೇಳ-3 ವರ್ಷ, ಕರ್ನಾಟಕ ಮೇಳ-8 ವರ್ಷ, ಕದ್ರಿ ಮೇಳ- 4 ವರ್ಷ, ಮಂಗಳಾ ದೇವಿ ಮೇಳ-9 ವರ್ಷ ಹೀಗೆ ಮೇಳ ತಿರುಗಾಟವನ್ನು ನಡೆಸಿರುವ ಇವರು ಸೀತೆ, ಚಿತ್ರಾಂಗದೆ, ಸುಭದ್ರೆ, ದಮಯಂತಿ, ಚಂದ್ರಮತಿ, ಕಿನ್ನಿದಾರು, ಸೋಮಲಾದೇವಿ, ಬೊಮ್ಮಕ್ಕೆ ವಿಷ್ಣು, ಕೃಷ್ಣ, ಧರ್ಮರಾಯ, ವಿದುರ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿ ಕಾವ್ಯವನ್ನು ಮಾಡುವ ಇವರು ಶ್ರೀಮತಿ ಆಶಾಲತಾ ಎಂಬವರನ್ನು ವರಿಸಿದ್ದಾರೆ. ಸನ್ನಿಧಿ ಮತ್ತು ಸಾನಿಧ್ಯ ಎಂಬ ಈರ್ವರು ಮಕ್ಕಳಿದ್ದಾರೆ.




ಸದಾಶಿವ ಆಚಾರಿ ಕೆ.

ಕೋಡ್ಲೆ ಮನೆ, ಉಜಿರೆ ಗ್ರಾಮ,
ವೇಣೂರು ಅಂಚೆ, ಬೆಳ್ತಂಗಡಿ ತಾಲೂಕು-574242
ಮೊಬೈಲ್: 9448930717


ಶ್ರೀ ಮಂಗಳಾದೇವಿ ಮೇಳದ ಕಲಾವಿದರಾಗಿರುವ ಶ್ರೀ. ಕೆ. ಸದಾಶಿವ ಆಚಾರಿ ಇವರು ಪುಂಡು ವೇಷದ ಮುಖೇನ ಮನ್ನಣೆಯನ್ನು ಪಡೆದ ಕಲಾವಿದರಾಗಿದ್ದಾರೆ.

5/6/1968 ರಲ್ಲಿ ಕಿಟ್ಟಣ್ಣ ಆಚಾರಿ ಮತ್ತು ರೇವತಿ ಆಚಾರಿ ದಂಪತಿಯ ಸುಪುತ್ರರಾಗಿ ಕೋಡ್ಲೆ ಮನೆಯಲ್ಲಿ ಜನಿಸಿದ ಸದಾಶಿವ ಆಚಾರಿಯವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವರು. ಯಕ್ಷಗಾನ ಕಲೆಗೆ ಇವರು ಆಕರ್ಷಿತರಾಗುತ್ತಿದ್ದಂತೆ ಕೀರ್ತಿಶೇಷ ಹಾಸ್ಯಗಾರ ವೇಣೂರು ಸುಂದರ ಆಚಾರಿ ಇವರ ಪ್ರೇರಣೆಯ ಮೇರೆಗೆ ರಂಗಪ್ರವೇಶ ಮಾಡಿದರು.

ಶ್ರೀ ಕೆ. ಗೋವಿಂದ ಭಟ್ ಮತ್ತು ದಿವಾಣ ಶಿವ ಶಂಕರ ಭಟ್ ಇವರುಗಳು ಗುರುಗಳಾಗಿದ್ದು ಧರ್ಮಸ್ಥಳದ ಲಲಿತಾ ಕಲಾ ಕೇಂದ್ರದಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವರು. ಆಮೇಲೆ . ಸುರತ್ಕಲ್ ಮೇಳವನ್ನು ಸೇರಿದವರು 16 ವರ್ಷಗಳ ತಿರುಗಾಟವನ್ನು ಪೂರೈಸಿ, ಮಂಗಳಾದೇವಿ ಮೇಳವನ್ನು ಸೇರಿದರು. ಈಗಾಗಲೇ 12 ವರ್ಷಗಳ ತಿರುಗಾಟವನ್ನು ಪೊರೈಸುತ್ತಾ ಕಲಾಸೇವೆಯನ್ನು ಮುನ್ನಡೆಸುತ್ತಾ ಇದ್ದಾರೆ.

ಅಭಿಮನ್ಯು, ವೃಷಕೇತು, ಕೋಟಿ- ಚೆನ್ನಯರು, ಚಂಡ-ಮುಂಡರು, ಮಖರ ಮುಖ, ಸಿಂಹಮುಖ ಇತ್ಯಾದಿ ಪುಂಡು ವೇಷಗಳನ್ನು ಮಾಡಿರುವ ಇವರು ದೇವೇಂದ್ರ, ಅರ್ಜುನ, ಕೇಮರ, ಪೆರುಮಳ ಮೊದಲಾದ ರಾಜವೇಷದ ಪಾತ್ರಗಳನ್ನು ಕೂಡಾ ನಿರ್ವಹಿಸುತ್ತಾ ಇದ್ದಾರೆ.

ಶ್ರೀಮತಿ ಶೋಭಾ ಎಂಬವರನ್ನು ವರಿಸಿ ರವಿಚಂದ್ರ ಮತ್ತು ರವಿಕಿರಣ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಕಲಾಸಾಧನೆಗಳ ಪ್ರತಿಫಲವಾಗಿ ಮಸ್ಕತ್ ಹಾಗೂ ಊರ ಪುರಸ್ಕಾರವನ್ನು ಪಡೆದಿದ್ದಾರೆ.



**ಸದಾಶಿವ ಕುಲಾಲ್ ವೇಣೂರು**

*"ಶ್ರೀ ದೇವಿ ಕೃಪಾ", ಕರಿಮಣೇಲು ಗ್ರಾಮ,*
*ವೇಣೂರು ಅಂಚೆ, ಬೆಳ್ತಂಗಡಿ ತಾಲೂಕು, 574247*
*ಮೊಬೈಲ್: 9480144978*

ಪುಂಡು ವೇಷದ ಮುಖೇನ ಮನ್ನಣೆಗೆ ಒಳಗಾಗಿ ಸಾಧನೆಯ ಸತ್ವವನ್ನು ಉಳಿಸಿಕೊಂಡಿರುವ ಶ್ರೀ ಸದಾಶಿವ ಕುಲಾಲ್ ವೇಣೂರು ಪ್ರಸ್ತುತ ಶ್ರೀ ಹೊಸನಗರ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

1960ನೇ ವರ್ಷದಲ್ಲಿ ಕೃಷ್ಣ ಮೂಲ್ಯ ಹಾಗೂ ಅಪ್ಪಿ ಮೂಲ್ಯೆದಿ ದಂಪತಿಯ ಸುಪುತ್ರರಾಗಿ ವೇಣೂರಿನಲ್ಲಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕೀರ್ತಿಶೇಷ ಹಾಸ್ಯ ಕಲಾವಿದ ವೇಣೂರು ಸುಂದರ ಆಚಾರ್ಯಅವರ ಪ್ರೋತ್ಸಾಹದ ಮೇರೆಗೆ 12ನೇ ವಯಸ್ಸಿನಿಂದಲೇ ಮೇಳಕ್ಕೆ ಸೇರ್ಪಡೆಗೊಂಡರು.

ಪಡ್ರೆ ಚಂದು ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ಸದಾಶಿವ ಕುಲಾಲರು ಸುರತ್ಕಲ್ ಮೇಳವೊಂದರಲ್ಲೇ 25 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ. ಸುರತ್ಕಲ್ ಮೇಳವು ಸ್ಥಗಿತವಾದ ಬಳಿಕ ಮಂಗಳಾದೇವಿ ಮೇಳಕ್ಕೆ ಸೇರಿ 8 ವರ್ಷಗಳ ತಿರುಗಾಟವನ್ನು ಮಾಡಿ ಹೊಸನಗರ ಮೇಳವನ್ನು ಸೇರಿದವರು ಈಗಾಗಲೆ 4 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಪುಂಡು ವೇಷ, ರಾಜ ವೇಷ ಮತ್ತು ನಾಟಕೀಯ ವೇಷಗಳಲ್ಲಿ ಹಿಡಿತವನ್ನು ಸಾಧಿಸಿರುವ ಇವರು ಅಭಿಮನ್ಯು, ಚಂಡ-ಮುಂಡರು, ಭ್ರಮರಕುಂತಳೆ, ಬಭ್ರುವಾಹನ, ಮಧು-ಕೈಟಬರು, ಪರಶುರಾಮ, ಗುಳಿಗ, ವರಾಹ, ಕೋಟಿ ಚೆನ್ನಯ, ದೇವು ಪೂಂಜ, ಕಾಂತಾಬಾರೆ-ಬೂದಾಬಾರೆ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಪ್ರಮೀಳೆ, ಭ್ರಮರಕುಂತಳೆ ಮೊದಲಾದ ಕಟ್ಟೆ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ.

ಹಿರಿಯ ಕಲಾವಿದ ಶ್ರೀ ಶಿವರಾಮ ಜೋಗಿ ಬಿ.ಸಿ. ರೋಡ್ ಅವರ ಶೈಲಿಗೆ ಆಕರ್ಷಣೆಗೊಂಡಿರುವ ಇವರು ಆದರ್ಶವನ್ನು ಅನುಸರಿಸಿಕೊಂಡು ಬೆಳೆದು ಬಂದಿದ್ದಾರೆ. ಶ್ರೀಮತಿ ಸುಜಯಾ ಎಂಬವರನ್ನು ವರಿಸಿರುವ ಇವರು ನಾಗಶ್ರೀ, ಷಣ್ಮುಖ, ನಾಗಲಕ್ಷ್ಮೀ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಬೆಳಗಾಂ, ಮಸ್ಕತ್, ವೇಣೂರಲ್ಲಿ ಸಂಮಾನ ಪುರಸ್ಕಾರಗಳು ಸಂದಿವೆ.



ಸದಾಶಿವ ಶೆಟ್ಟಿಗಾರ್ ಸಿದ್ಧಕಟ್ಟೆ


*ಕವಿತಾ ನಿವಾಸ, ಮಂಚಕಲ್ಲು ಮನೆ*
*ಸಿದ್ಧಕಟ್ಟೆ ಅಂಚೆ, ಸಂಗಬೆಟ್ಟು*
*ಬಂಟ್ವಾಳ ತಾಲೂಕು, 574237*
*(ಮೊಬೈಲ್) 9845034314*


ಬಣ್ಣದ ವೇಷಗಳ ಮುಖೇನ ಪ್ರಸಿದ್ಧಿಯನ್ನು ಪಡೆದಿರುವ ಶ್ರೀ ಸದಾಶಿವ ಶೆಟ್ಟಿಗಾರ್ ಸಿದ್ದಕಟ್ಟೆ ಇವರು ಹೊಸ ನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


17-12-1965ರಲ್ಲಿ ಬಾಬು ಶೆಟ್ಟಿಗಾರ್ ಮತ್ತು ಗಿರಿಯಮ್ಮ ದಂಪತಿಯ ಸುಪುತ್ರರಾಗಿ ಸಿದ್ದಕಟ್ಟೆಯಲ್ಲಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದ ಇವರು ಯಕ್ಷಗಾನದ ಪರಿಸರದಲ್ಲಿ ಹುಟ್ಟಿ ಬೆಳೆದು ಕಲೆಯ ಆಕರ್ಷಣೆಗೆ ಒಳಗಾದರು.

ಕೀರ್ತಿಶೇಷ ಕಲಾವಿದರಾಗಿರುವ ಬಣ್ಣದ ಮಾಲಿಂಗ ಹಾಗೂ ಕಟೀಲು ಮೇಳದ ಕಲಾವಿದ ರೆಂಜಾಳ ರಾಮಕೃಷ್ಣ ಇವರಲ್ಲಿ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿ 18ನೇ ವಯಸ್ಸಿನಿಂದ ರಂಗಪ್ರವೇಶ ಮಾಡಿದರು.

ಕಟೀಲು ಮೇಳ-8 ವರ್ಷ, ತಲಕಳ ಮೇಳ- 2 ವರ್ಷ, ಧರ್ಮಸ್ಥಳ ಮೇಳ-13 ವರ್ಷ, ಹೊಸನಗರ ಮೇಳ-4 ವರ್ಷ ಹೀಗೆ ಮೇಳ ತಿರುಗಾಟವನ್ನು ಮಾಡಿರುವ ಸದಾಶಿವ ಶೆಟ್ಟಿಗಾರರು ಉತ್ತಮವಾದ ಶೈಲಿಯಿಂದ ಬಣ್ಣದ ವೇಷಗಳನ್ನು ನಿರ್ವಹಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ಮಹಿಷಾಸುರ, ರುದ್ರ, ಭೀಮ, ಸಿಂಹ, ವರಾಹ, ಕುಂಭಕರ್ಣ, ಶೂರ್ಪನಖಿ, ತಾಟಕಿ ಮುಂತಾದ ಪಾತ್ರಗಳಿಗೆ ತನ್ನದೇ ಆದ ಸ್ವಂತಿಕೆಯ ವರ್ಚಸ್ಸನ್ನು ತೋರಿ ಜೀವಕಳೆ ತುಂಬಿದ್ದಾರೆ. ರಾಜಬಣ್ಣ, ಕಾಟು ಬಣ್ಣಗಳೆಂಬ ಎರಡು ರೀತಿಯ ಪಾತ್ರಗಳ ನಿರ್ವಹಣೆಯಲ್ಲಿ ಬಿನ್ನತೆಯನ್ನು ಕಂಡುಕೊಂಡವರಾಗಿದ್ದಾರೆ.

ಶ್ರೀಮತಿ ಕಲಾವತಿ ಎಂಬವರನ್ನು ವರಿಸಿರುವ ಇವರು ದಿಲೀಪ್ ಕುಮಾರ್ (ಪಿ.ಯು.ಸಿ, ಸೊಸೈಟಿ ಟ್ರೈನಿಂಗ್), ಸಂದೀಪ್ ಕುಮಾರ್ (ಪಿ.ಯು.ಸಿ, ಐ.ಟಿ.ಐ.) ಎಂಬ ಇಬ್ಬರು ಮಕ್ಕಳಿದ್ದಾರೆ.



**ಸಂತೋಷ್ ಕುಮಾರ್ ಡಿ.**

*ನಾರಾಯಣ ನಿವಾಸ, ಅಂತರ ಬೈಲು,*
*ಕಲ್ಮಂಜ ಕೊಡಂಜೆ ಅಂಚೆ, ಬೆಳ್ತಂಗಡಿ ತಾಲೂಕು*
*ಮೊಬೈಲ್: 9341894757*

ಪುಂಡು ವೇಷ ಮತ್ತು ರಾಜ ವೇಷದ ಮುಖೇನ ಜನಮನ್ನಣೆಗೆ ಕಾರಣವಾಗಿರುವ ಶ್ರೀ. ಡಿ. ಕೆ. ಸಂತೋಷ್ ಕುಮಾರ್ ಇವರು ಮಂಗಳಾದೇವಿ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

1957ರಲ್ಲಿ ನಾರಾಯಣ ಚಿತ್ರಿಗ ಮತ್ತು ನೀಲಮ್ಮ ದಂಪತಿಯ ಸುಪುತ್ರರಾಗಿ ಅಂತರಬೈಲಿನಲ್ಲಿ ಹುಟ್ಟಿರುವ ಶ್ರೀಯುತರು 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು. ಬಾಲ್ಯದಿಂದಲೇ ಯಕ್ಷಗಾನ ಕಲೆಗೆ ಪ್ರಭಾವಿತರಾದ ಇವರು ದಿ. ಪಡೆ ಚಂದು ಇವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿದರು.

ಕಟೀಲು ಮೇಳ-1 ವರ್ಷ, ಧರ್ಮಸ್ಥಳ ಮೇಳ-1 ವರ್ಷ, ಸುಬ್ರಹ್ಮಣ್ಯ ಮೇಳ-5 ವರ್ಷ, ಕುಂಬ್ಳೆ ಮೇಳ-5 ವರ್ಷ, ಮಧೂರು ಮೇಳ-3 ವರ್ಷ, ಕದ್ರಿ ಮೇಳ-7 ವರ್ಷ, ಸುರತ್ಕಲ್ ಮೇಳ- 4 ವರ್ಷ, ಕರ್ನಾಟಕ ಮೇಳ-3 ವರ್ಷ ಅನಂತರ ಮಂಗಳಾದೇವಿ ಮೇಳವನ್ನು ಸೇರಿದರು. ಈ ವರೆಗೆ ಹಲವು ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಅಭಿಮನ್ಯು, ವೃಷಕೇತು, ಬಭ್ರುವಾಹನ, ಕೃಷ್ಣ, ಚೆನ್ನಯ್, ಬೂದಾಬಾರೆ, ಮತ್ತೇಂದ್ರನಾಥ ಮೊದಲಾದ ಪಾತ್ರಗಳನ್ನು ಮಾಡಿರುವ ಇವರು ಅನಿವಾರ ಸಂದರ್ಭಗಳಲ್ಲಿ ಸ್ತ್ರೀ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ.

ದಿ| ದುರ್ಗಪ್ಪ ಗುಡಿಗಾರ ಮತ್ತು ಜನಾರ್ದನ ಗುಡಿಗಾರ ಇವರ ಸಂಬಂಧಿಕರಾದ ಇವರು ಮುಂಬಯಿ ಜಗದಂಬಾ ಯಕ್ಷಗಾನ ಮಂಡಳಿಯ ಸದಸ್ಯರಿಗೆ ತರಬೇತಿಯನ್ನು ನೀಡಿದ್ದಾರೆ.

ಶ್ರೀಮತಿ ವಿಜಯಲಕ್ಷ್ಮೀ ಎಂಬವರನ್ನು ವರಿಸಿರುವ ಇವರು ಭರತ್ ಚಿತ್ರಿಗ ಮತ್ತು ಭವ್ಯ ಚಿತ್ರಿಗೆ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆಗೆ ಪ್ರತಿಫಲವಾಗಿ ಮುಂಬಯಿ, ಉಜಿರೆ, ಕನ್ಯಾಡಿ ಮೊದಲಾದೆಡೆಯಲ್ಲಿ ಸಂಮಾನಗಳಾಗಿವೆ.



ಸತೀಶ ನೈನಾಡು

*ದೊಡ್ಡ ಬಾದಾರು ಮನೆ, ಬಜಿರೆ ಗ್ರಾಮ,*
*ಮದ್ದಡ್ಕ ಅಂಚೆ, ಬೆಳ್ತಂಗಡಿ ತಾಲೂಕು. ದ. ಕ.*
*ಮೊಬೈಲ್: 9449990973*

ಬಣ್ಣದ ವೇಷದಲ್ಲಿ ತೀವ್ರಗತಿಯ ನಡೆಯನ್ನು ತೋರಿ ಮನ್ನಣೆಗೆ ಒಳಗಾಗಿರುವ ಶ್ರೀ ಸತೀಶ ನೈನಾಡು ಇವರು ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

26-6-1974 ರಲ್ಲಿ ಕುಂಞರ ಪೂಜಾರಿ ಮತ್ತು ಸೀತಮ್ಮ ದಂಪತಿಯ ಸುಪುತ್ರರಾಗಿ ನೈನಾಡು ಎಂಬಲ್ಲಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತ ಆಸಕ್ತಿಯಿಂದ ಯಕ್ಷಗಾನ ಕಲಾಪ್ರವೇಶ ಮಾಡಿದರು.

ಕೋಳ್ಯೂರು ರಾಮಚಂದ್ರ ಭಟ್ ಮತ್ತು ಧರ್ಮಸ್ಥಳ ಗೋಪಾಲ ಭಟ್ ಇವರಲ್ಲಿ ನಾಟ್ಯಾಭ್ಯಾಸ ಹಾಗೂ ಬಣ್ಣದ ವೇಷದ ರೀತಿನೀತಿಗಳನ್ನು ಅರಿತರು. ಮೊದಲಿಗೆ ಕಟೀಲು ಮೇಳವನ್ನು ಸೇರಿದವರು 9 ವರ್ಷಗಳ ತಿರುಗಾಟವನ್ನು ಪೂರೈಸಿದರು. ಸುಂಕದಕಟ್ಟೆ ಮೇಳ-1 ವರ್ಷ, ಎಡನೀರು ಮೇಳ- 2 ವರ್ಷ ಆಮೇಲೆ ಹೊಸನಗರ ಮೇಳವನ್ನು ಸೇರಿದವರು ಈಗಾಗಲೇ 4 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಬಣ್ಣದ ವೇಷದ ಜೊತೆಗೆ ರಾಜವೇಷವನ್ನು ಮಾಡುವ ಇವರು ಶುಂಭ, ರಾವಣ, ಮೈರಾವಣ, ಮಹಿಷಾಸುರ, ಕುಂಭಕರ್ಣ, ಅನುಸಾಲ್ವ, ಸಿಂಹ, ಅರ್ಜುನ, ದೇವೇಂದ್ರ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕೃಷಿಕಾವ್ಯಾಸಕ್ತಿಯೊಂದಿಗೆ, ಯಕ್ಷಗಾನದ ಪ್ರಸಾಧನ ಕಲೆಯಲ್ಲಿ ಶ್ರಮಿಸಿರುವ ಇವರು ಶ್ರೀಮತಿ ಹರಿಣಾಕ್ಷಿ ಎಂಬವರನ್ನು ವರಿಸಿ ಶಶಾಂಕನೆನ್ನುವ ಪುತ್ರನನ್ನು ಪಡೆದಿದ್ದಾರೆ.



**ಸೀತಾರಾಮ ಕುಮಾರ್ ಕಟೀಲು**

*"ನೂಪುರ", ತೋಕೂರು ಅಂಚೆ (ಹಳೆಯಂಗಡಿ)*
*ಮಂಗಳೂರು ತಾಲೂಕು. 575146*
*ಮನೆ ದೂರವಾಣಿ: 0824–2283045*
*ಮೊಬೈಲ್: 9448383045*

ಹಾಸ್ಯ ಪಾತ್ರಗಳ ರಂಜನೀಯ ಶೈಲಿಯಲ್ಲಿ ವಿನೂತನವಾದ ಪ್ರತಿಭೆಯನ್ನು ತೋರಿ ಜನಮನವನ್ನು ಗೆದ್ದು ರಸಿಕ ಪಾತ್ರಧಾರಿಯೆನಿಸಿರುವ ಶ್ರೀ ಸೀತಾರಾಮ ಕುಮಾರ್ ಕಟೀಲು ಇವರು ಪ್ರಸ್ತುತ ಹೊಸನಗರ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಶ್ರೀನಿವಾಸ ಕೋಟ್ಯಾನ್ ಮತ್ತು ಕಲ್ಯಾಣಿ ದಂಪತಿಯ ಸುಪುತ್ರರಾಗಿ ಕಟೀಲಿನಲ್ಲಿ 10-10-1955 ರಂದು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪೂರೈಸಿರುವ ಇವರು ಮುಂಬಯಿಯ ಗುರುನಾರಾಯಣ ಯಕ್ಷಗಾನ ಮಂಡಳಿಯ ಮೂಲಕ ಯಕ್ಷಗಾನದ ಪ್ರಭಾವ ಮತ್ತು ಪಾತ್ರ ನಿರ್ವಹಣೆಗೆ ಒಳಗಾಗಿ ಬೆಳೆಯತೊಡಗಿದರು.

ಈಗಾಗಲೇ 40 ವರ್ಷಗಳ ಅನುಭವವನ್ನು ಸಂಪಾದಿಸಿರುವ ಸೀತಾರಾಮ ಕುಮಾರರು ಪ್ರದರ್ಶನವನ್ನು ನೋಡುತ್ತಾ, ವಿಮರ್ಶಿಸುತ್ತಾ ಸ್ವಂತ ಸಾಧನೆಯಲ್ಲಿ ಬೆಳೆದು ಬಂದಿರುವರು. ಮಾತುಗಾರಿಕೆಯ ಹಿನ್ನೆಲೆಯಲ್ಲಿ ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟಿಯವರಿಂದ ಹೆಚ್ಚಿನ ಅನುಭವವನ್ನು ಪಡೆದಿರುವ ಇವರು ಪದ್ಯ, ಗದ್ಯ ಮತ್ತು ಹಾಸ್ಯಮಯ ಸಾಹಿತ್ಯದ ತುಣುಕುಗಳನ್ನು ಮಾತಿನ ರಸೋತ್ಪನ್ನಕ್ಕೆ ಬಳಸಿಕೊಳ್ಳುತ್ತಾರೆ.

ಗುರುನಾರಾಯಣ ಯಕ್ಷಗಾನ ಮಂಡಳಿ ಮುಂಬಯಿ-10 ವರ್ಷ, ಕದ್ರಿ ಮೇಳ-9 ವರ್ಷ, ಮಧೂರು ಮೇಳ-2 ವರ್ಷ, ಪೆರ್ಡೂರು ಮೇಳ- 8 ವರ್ಷ, ಮಂಗಳಾದೇವಿ ಮೇಳ-7 ವರ್ಷ, ಪುತ್ತೂರು ಮೇಳ-1 ವರ್ಷ, ಹೊಸನಗರ ಮೇಳ- 3 ವರ್ಷ ಹೀಗೆ ತಿರುಗಾಟದ ಹಿನ್ನೆಲೆ ಇದೆ. ಹಾಸ್ಯ ಪಾತ್ರಗಳೊಂದಿಗೆ ಪುಂಡು ವೇಷ ಮತ್ತು ಇತರ ವಿಭಿನ್ನ ಶೈಲಿಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತುಳು, ಕನ್ನಡ ಪ್ರಸಂಗಗಳು ಸೇರಿದಂತೆ ತೆಂಕು ಬಡಗು ತಿಟ್ಟುಗಳಲ್ಲಿ ತಿರುಗಾಟ ಮಾಡಿ ಕೀರ್ತಿವಂತರಾಗಿದ್ದಾರೆ.

ಇವರು ಶ್ರೀಮತಿ ಬೇಬಿ ಎಂಬವರನ್ನು ವರಿಸಿ ಜಗದೀಶ (ಮೆಕ್ಯಾನಿಕಲ್ ಇಂಜಿನಿಯರ್), ಗೌರಿ (ಎಂ.ಬಿ.ಎ), ಸೌಮ್ಯ (ಬಿ.ಎಸ್.ಡಬ್ಲ್ಯು) ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸಾಧನೆ ತಕ್ಕವಾಗಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಆಸ್ರಣ್ಣ ಪ್ರಶಸ್ತಿ, ಸಾಮ ಸೌರಭ ಪ್ರಶಸ್ತಿ ಸೇರಿದಂತೆ 200ಕ್ಕೂ ಮಿಕ್ಕಿದ ಸಂಮಾನಗಳು ಸಂದಿವೆ.



ಸುಂದರ ರಾವ್ ಕುಂಬ್ಳೆ


*"ಯಕ್ಷಾನುಗ್ರಹ", ಪಡೀಲು ಅಂಚೆ*
*ಮಂಗಳೂರು – 575007*
*(ಮೊಬೈಲ್) 9448328787*


ಅರ್ಥಗಾರಿಕೆಯ ಪ್ರೌಢಿಮೆಯಲ್ಲಿ ಪಾತ್ರಕ್ಕೆ ಜೀವಕಳೆ ತುಂಬುವ ಪ್ರಸಿದ್ಧ ಅರ್ಥಧಾರಿ ಮತ್ತು ವೇಷಧಾರಿಯಾಗಿ ಹಿರಿತನಕ್ಕೆ ಸಂದಿರುವ ಶ್ರೀ ಕುಂಬ್ಳೆ ಸುಂದರರಾಯರು ಪ್ರಸ್ತುತ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು ಇದರ ಅಧ್ಯಕ್ಷರಾಗಿ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

1934ರ ವರ್ಷ ಕೇರಳದ ಕಾಸರಗೋಡಿಗೆ ಸೇರಿರುವ ಕುಂಬಳೆಯಲ್ಲಿ ಕುಂಞಕಣ್ಣ ಹಾಗೂ ಕಲ್ಯಾಣಿ ದಂಪತಿಯ ಸುಪುತ್ರರಾಗಿ ಇವರು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಸುಂದರರಾಯರು ಯಕ್ಷಗಾನ ಕಲೆಯ ಮೇಲೆ ಆಕರ್ಷಿತರಾಗಿ ಪರಿಶ್ರಮದ ಮುಖೇನ ಅರ್ಥಗಾರಿಕೆಯ ಸಾಧನೆಯನ್ನು ಮಾಡಿ ಶೇಣಿ, ಸಾಮಗ ಮೊದಲಾದ ಅರ್ಥಧಾರಿಗಳ ಕೂಟದಲ್ಲಿ ಮೆರೆದಿದ್ದಾರೆ.

ಬಣ್ಣದ ಕುಟ್ಯಪ್ಪುರವರಲ್ಲಿ ಸ್ಥೂಲವಾದ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿರುವ ಇವರು ಕೂಡ್ಲು, ಇರಾ, ಸುರತ್ಕಲ್ ಮೇಳಗಳಲ್ಲಿ ಆರಂಭದ ತಿರುಗಾಟವನ್ನು ಮಾಡಿ ಅನಂತರ ಧರ್ಮಸ್ಥಳ ಮೇಳದಲ್ಲಿ ಸುದೀರ್ಘವಾದ ತಿರುಗಾಟವನ್ನು ನಡೆಸಿರುವರು. 1994 ರಿಂದ 1998ರ ವರೆಗೆ ಶಾಸಕರಾದ ಅವಧಿಯಲ್ಲಿ ಮೇಳ ತಿರುಗಾಟವನ್ನು ನಿಲ್ಲಿಸಿದರೂ ಕೂಡಾ ಹೇಳಿಕೆಯ ಮೇರೆಗೆ ಅತಿಥಿ ಕಲಾವಿದರಾಗಿ ಭಾಗವಹಿಸುತ್ತಾ ಧರ್ಮಸ್ಥಳ ಮೇಳದ ನಂಟನ್ನು ಬಿಡದೆ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಭರತ, ಕರ್ಣ, ಭೀಷ್ಮ, ದುಷ್ಯಂತ, ಅಕ್ರೂರ, ಸಂಜಯ ಪರೀಕ್ಷಿತ ಮೊದಲಾದ ಪಾತ್ರಗಳನ್ನು ಮನೋಜ್ಞವಾಗಿ ಜನಮನಕ್ಕೆ ಮುಟ್ಟಿಸುವ ಇವರ ಕ್ರಮ ಶ್ಲಾಘನೀಯವಾಗಿದೆ. ಪ್ರಾಸಬದ್ಧವಾದ ಮಾತಿನ ಸಾಹಿತ್ಯದೊಂದಿಗೆ ಪಾಂಡಿತ್ಯವನ್ನು ಮೆರೆಸುವ ಇವರು ಆಕರ್ಷಣೀಯವಾದ ಸ್ವರಭಾರವನ್ನು ಹೊಂದಿದ್ದಾರೆ. ತುಳು ಪ್ರಸಂಗಗಳ ಪ್ರದರ್ಶನದಲ್ಲೂ ಪ್ರೌಢಿಮೆಯನ್ನು ಸಾಧಿಸಿರುವ ಇವರು ಪೆರುಮಳ, ತಿಮ್ಮಣ್ಣಾಜಿಲ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾರೆ. ನೂರಾರು ಆಡಿಯೋ-ವೀಡಿಯೋ ಕ್ಯಾಸೆಟ್‌ಗಳಲ್ಲಿ ಇವರ ಪಾತ್ರಗಾರಿಕೆ ಚಿತ್ರಿತವಾಗಿದೆ.

ಇವರು ಸಂಸ್ಕಾರ ಭಾರತಿಯ ರಾಜಾಧ್ಯಕ್ಷರಾಗಿ ಕಾರ್ ನಿರ್ವಹಿಸಿ ಲಲಿತ ಕಲೆಗಳ ಸಂವರ್ಧನೆಗಾಗಿ ಶ್ರಮಿಸಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕ ಭಾಷಣಗಳ ಸಂಪನ್ಮೂಲ ವ್ಯಕ್ತಿಯಾಗಿ ನಾಡಿನಾದ್ಯಂತ ಮನ್ನಣೆಯನ್ನು ಪಡೆದಿದ್ದಾರೆ. ಲೇಖಕರಾಗಿಯೂ ಕಾರ್ ನಿರ್ವಹಿಸಿರುವ ಇವರು ಸುಂದರ ಕಾಂಡವೆಂಬ ಇವರ ಅಭಿನಂದನ

ಗ್ರಂಥದಲ್ಲಿ ಜೀವನದ ಆತ್ಮ ಕಥನವನ್ನು ನಿರೂಪಿಸಿದ್ದಾರೆ. ಯಕ್ಷಗಾನ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದ ಸುಂದರ ರಾಯರು ಸದಸ್ಯರ ಜೊತೆಗೆ ಕ್ರಿಯಾಶೀಲರಾಗಿ ಸ್ಪಂದಿಸಿ ಹತ್ತು-ಹಲವು ಯೋಜನೆಗಳನ್ನು ಮುನ್ನಡೆಸುತ್ತಾ ಮನ್ನಣೆಗೆ ಒಳಗಾಗಿದ್ದಾರೆ.

ಶ್ರೀಮತಿ ಸುಶೀಲಾ ಎಂಬವರನ್ನು ವರಿಸಿ ಶಾಂತಾ ಕುಮಾರಿ, ಸವಿತಾ ಕುಮಾರಿ, ಪ್ರಸನ್ನ ಕುಮಾರ್, ಮಮತಾ ಕುಮಾರಿ, ಪ್ರವೀಣ ಕುಮಾರ್ ಎಂಬ ಐವರು ಮಕ್ಕಳನ್ನು ಇವರು ಪಡೆದಿದ್ದಾರೆ.

ಇವರ ಸಾಧನೆಗೆ ಪುರಸ್ಕಾರವಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇರಳ ಕಲಾ ಮಂಡಲದ ಪ್ರಶಸ್ತಿ, ಕನ್ನಡ ಶ್ರೀ ಪ್ರಶಸ್ತಿ, ಕರ್ನಾಟಕ ಶ್ರೀ ಪ್ರಶಸ್ತಿ ಇತ್ಯಾದಿ ಹತ್ತಾರು ಪ್ರಶಸ್ತಿಗಳು ದೊರೆತಿರುವುದಲ್ಲದೆ ದೆಹಲಿ, ಮುಂಬಯಿ, ಬೆಹರಿನ್ ಮುಂತಾದ ದೇಶ-ವಿದೇಶಗಳ ಗೌರವವು ಸಂದಿರುತ್ತದೆ.



## ಸುಬ್ಬಯ್ಯ ಶೆಟ್ಟಿ ಬೋಳಾರ

*ಪಡೀಲು, ಮಂಗಳೂರು*
*ದ.ಕ.ಜಿಲ್ಲೆ.*

ಕಾಸರಗೋಡು ಜಿಲ್ಲೆಯ ಮೂಡಂಬೈಲಿನಲ್ಲಿ ಶ್ರೀ ತ್ಯಾಂಪಣ್ಣ ಶೆಟ್ಟಿ ಹಾಗೂ ಶ್ರೀಮತಿ ಮಾಣಕ್ಕೆ ಶೆಡ್ತಿ ದಂಪತಿಯ ಪುತ್ರರಾಗಿ ದಿನಾ0ಕ 1940 ರಲ್ಲಿ ಸುಬ್ಬಯ್ಯ ಶೆಟ್ಟರು ಜನಿಸಿದರು.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬೋಳಾರ ಶ್ರೀ ತಿಮ್ಮಯ್ಯ ಸುವರ್ಣ ಎಂಬವರಲ್ಲಿ ನಾಟ್ಯಾಭ್ಯಾಸ ಮಾಡಿರುವರು. ಅನಂತರ ಬೋಳಾರ ನಾರಾಯಣ ಶೆಟ್ಟರಲ್ಲಿ ಅರ್ಥಗಾರಿಕೆಯ ಬಗ್ಗೆ ಮಾಹಿತಿಯನ್ನು ಪಡೆದಿರುವರು.

ಸುಂಕದ ಕಟ್ಟೆ ಮೇಳ 5 ವರ್ಷ, ಕದ್ರಿ ಮೇಳ -12 ವರ್ಷ, ಕರ್ನಾಟಕ 9 ವರ್ಷ, ಮಧೂರು ಮೇಳ 2 ವರ್ಷ, ಪುತ್ತೂರು-1ವರ್ಷ, ಕುಂಟಾರು 1 ವರ್ಷ ಹೀಗೆ ಮೇಳ ತಿರುಗಾಟದ ಹಿನ್ನೆಲೆಯನ್ನು ಹೊಂದಿರುವ ಇವರು ಪ್ರಸ್ತುತ ಸುಂಕದ ಕಟ್ಟೆ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಧು - ಕೈಟಭ, ಅರ್ಜುನ, ಶೂರ್ಪನಖಿ, ಶುಂಭ ಮೊದಲಾದ ಪಾತ್ರಗಳನ್ನು ಮಾಡಿರುವ ಸುಬ್ಬಯ್ಯ ಶೆಟ್ಟರು ಪೀಠಿಕೆ ವೇಷಗಳಲ್ಲಿ ಹಿಡಿತವನ್ನು ಸಾಧಿಸಿದ್ದಾರೆ. ಪೆರುಮಳ, ತಿಮ್ಮಣ್ಣ ಅಜಿಲ ಮೊದಲಾದ ತುಳು ಪ್ರಸಂಗದ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ. ತುಳು ಪ್ರಸಂಗದ ಪಾತ್ರಗಳ ಅರ್ಥಗಾರಿಕೆಯಲ್ಲಿ ಪೌರಾಣಿಕ ಪಾತ್ರಗಳ ಹಿನ್ನೆಲೆಯನ್ನು ನಿರೂಪಿಸುವ, ನೀತಿಬೋಧನೆಯ ನುಡಿಗಟ್ಟನ್ನು ಹೇಳುವ ಗುಣಧರ್ಮ ಇವರದ್ದಾಗಿದೆ.

ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಇವರು ಪಾಂಡೇಶ್ವರ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಸ0ಘದ ಕಲಾವಿದರಾಗಿ ಕಲಾಸೇವೆಯನ್ನು ಮಾಡಿದ್ದಾರೆ.

ಶ್ರೀಮತಿ ಲೀಲಾವತಿ ಎಂಬುವರನ್ನು ವರಿಸಿರುವ ಇವರು ಐವರು ಗ0ಡು ಹಾಗೂ ಹೆಣ್ಣು ಮಗುವನ್ನು ಪಡೆದಿದ್ದಾರೆ.

ಇವರ ಸಾಧನೆಗೆ ಪ್ರತಿಫಲವಾಗಿ ಮುಂಬಯಿ, ಮಂಗಳೂರು, ಮೊದಲಾದೆಡೆಯಲ್ಲಿ ಸ0ಮಾನಗಳು ಸಂದಿವೆ. " ಹವ್ಯಾಸಿ ಬಳಗ ಕದ್ರಿಯ ದಶಮಾನದ ಸಂಮನ ಕೂಡಾ ಇವರಿಗೆ ಲಭಿಸಿದೆ.



ಸುರೇಶ್ ಹೆಗ್ಡೆ

ರತ್ನ ನಿವಾಸ, ಬೊಲ್ಲೊಟ್ಟು, ಈದು ಗ್ರಾಮ ಮತ್ತು
ಅಂಚೆ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ,
ಮೊಬೈಲ್ :9008368512

ರಾಜವೇಷ, ಮತ್ತು ಬಣ್ಣದ ವೇಷಗಳನ್ನು ಮಾಡಿ ಮನ್ನಣೆಗೆ ಒಳಗಾಗಿರುವ ಸುರೇಶ ಹೆಗ್ಡೆಯವರು ಪ್ರಸ್ತುತ ಮಂಗಳಾದೇವಿ ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಿದ್ದಾರೆ.

ನಾಗಪ್ಪ ಹೆಗ್ಡೆ ಮತ್ತು ಕಮಲಮ್ಮ ದಂಪತಿಯ ಸುಪುತ್ರರಾಗಿ 25/5/1975ರಂದು ಬಂಗಾಡಿಯಲ್ಲಿ ಜನಿಸಿದರು. 8ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು. ಯಕ್ಷಗಾನ ಕಲೆಯಲ್ಲಿ ಬೆರೆತು ಆನಂದ ಪಡುವ ಮನೆತನದಲ್ಲಿ ಇವರು ಹುಟ್ಟಿದರಿಂದ ಬಾಲ್ಯದಿಂದಲೇ ಯಕ್ಷಗಾನದತ್ತ ಪ್ರಭಾವಿತರಾಗಿದ್ದರು.

ಭಾಸ್ಕರ ಮಡಿವಾಳ ಬಂಗಾಡಿ ಅವರ ಪ್ರೇರಣೆಯ ಮೇರೆಗೆ ಅವರಿಂದಲೇ ನಾಟ್ಯಭ್ಯಾಸವನ್ನು ಮಾಡಿಮೇಳ-ಕಲಾ ಸೇವೆಗೆ ಮುಂದಾದರು. ಕಟೀಲುಮೇಳ-5 ವರ್ಷ, ಸುಂಕದಕಟ್ಟೆ ಮೇಳ -2ವರ್ಷ, ಕುಂಟಾರು 3ವರ್ಷ, ಭಗವತಿ ಮೇಳ-3ವರ್ಷ, ಮಂಗಳಾದೇವಿ ಮೇಳ -1ವರ್ಷ ಹೀಗೆ ತಿರುಗಾಟವನ್ನು ಮಾಡಿದ್ದಾರೆ.

ಅರ್ಜುನ, ದೇವೇಂದ್ರ, ಶುಂಭ, ನಿಶುಂಭ, ಭೀಮ, ಶೂರ್ಪನಖಾ ಮುಂತಾದ ಪೌರಾಣಿಕ ಪ್ರಸಂಗದ ಪಾತ್ರಗಳನ್ನು ಮಾಡಿರುವ ಇವರು ತುಳು ಪ್ರಸಂಗಗಳಲ್ಲಿ ಪೆರುಮಳ ಬಲ್ಲಾಳ, ಬಂಗರಸು ಮುಂತಾದ ವೇಷಗಳನ್ನು ಮಾಡಿರುವರಲ್ಲದೆ ಪೂರಕವಾಗಿ ಹಾಸ್ಯದ ಪಾತ್ರಗಳನ್ನು ಕೂಡಾ ಇವರು ನಿರ್ವಹಿಸುತ್ತಾ ಬಂದಿದ್ದಾರೆ.

ಚಿಕ್ಕಪ್ಪ ಬಾಬು ಹೆಗ್ಡೆ ಹವ್ಯಾಸಿ ವೇಷಧಾರಿ, ಮಾವಂದಿರಾದ ರಂಜಪ್ಪ ಹೆಗ್ಡೆ ಹವ್ಯಾಸಿ ಭಾಗವತರು, ಜಯಂತ ಹೆಗ್ಡೆ ಅರ್ಥಧಾರಿ ಹೀಗೆ ಇವರೆಲ್ಲರಿಂದ ಪ್ರೋತ್ಸಾಹಕ್ಕೆ ಒಳಗಾದ ಸುರೇಶ ಹೆಗ್ಡೆಯವರು ಭಾಗವತಿಕೆಯಲ್ಲೂ ಪಳಗಿದವರಾಗಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಶ್ರೀಮತಿ ಲಲಿತಾ ಎಂಬವರನ್ನು ವರಿಸಿ ಕುಮಾರ್ ಸ್ವರ್ಣಿತ ಮತ್ತು ಕುಮಾರಿ ಸ್ವಾತಿಕ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಕೊಲ್ಲಿ ಶ್ರೀದುರ್ಗಾ ಪರಮೇಶ್ವರಿ ಯಕ್ಷಗಾನ ಮಂಡಳಿಯು ಇವರನ್ನು ದಶಮಾನೋತ್ಸವದ ನಿಮಿತ್ತ ಗೌರವಿಸಿ ಸಂಮಾನಿಸಿದೆ.



ಸುಬ್ರಹ್ಮಣ್ಯ ಭಟ್ ಮಾಂಬಾಡಿ

*ಮಾಂಬಾಡಿ ಮನೆ, ಕರೋಪಾಡಿ ಅಂಚೆ*
*ಬಂಟ್ವಾಳ ತಾಲೂಕು ದ.ಕ*
*ಮೊಬೈಲ್,9449333101*

ಯಕ್ಷಗಾನದ ಕಲಾಕ್ಷೇತ್ರದಲ್ಲಿ ಹಿಮ್ಮೇಳ ವಾದಕರಾಗಿ ತಿರುಗಾಟವನ್ನು ಮಾಡಿರುವುದರ ಜೊತೆಗೆ ಗುರುಪರಂಪರೆಯನ್ನು ಮೆರೆಸಿದ ಶ್ರೀ ಮಾಂಬಾಡಿ ಸುಬ್ರಹ್ಮಣ್ಯಭಟ್ಟರು ಜನಮನ್ನಣೆಗೆ ಒಳಗಾಗಿರುವ ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರು ಮಾಂಬಾಡಿ ನಾರಾಯಣ ಭಾಗವತರ ಸುಪುತ್ರರಾಗಿ ತಂದೆಯ ಆದರ್ಶವನ್ನು ಮೆರೆಸಿದರು. ರಕ್ತಗತವಾಗಿ ಬಂದ ಪ್ರತಿಭೆಯೊಂದಿಗೆ ತಂದೆಯ ಮಾರ್ಗದರ್ಶನದಲ್ಲಿ ಪ್ರತಿಭಾವಂತರಾಗಿ ಬೆಳೆದ ಮಾಂಬಾಡಿ ಸುಬ್ರಹ್ಮಣ್ಯಭಟ್ಟರು ಕಟೀಲು, ಕರ್ನಾಟಕ ಕದ್ರಿ ಮುಂತಾದ ಮೇಳಗಳಲ್ಲಿ ತಿರುಗಾಟವನ್ನು ನಡೆಸಿದ್ದಾರೆ.

ಕಲಾವಿದರ ಮನೋಧರ್ಮಕ್ಕೆ ತಕ್ಕಂತೆ, ರಸ ಪೋಷಣೆಗೆ ಅನುಗುಣವಾಗಿ ಚೆಂಡೆ - ಮದ್ದಳೆಯನ್ನು ನಯವಾಗಿ ನುಡಿಸುವ ಇವರು ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆಗಳು ಸೇರಿದಂತೆ ತೆಂಕುತಿಟ್ಟಿನ ಪ್ರಭಾವಲಯದಲ್ಲಿ ಯಕ್ಷಗಾನದ ಹಿಮ್ಮೇಳ ತರಗತಿಗಳನ್ನು ನಡೆಸಿ ನೂರಾರು ಶೀಷ್ಯರನ್ನು ಹೊಂದಿದ್ದಾರೆ. ಅನೇಕರು ವೃತ್ತಿಪರ - ಕಲಾವಿದರಾಗಿ ಹಾಗೂ ಇನ್ನು ಅನೇಕರು ಹವ್ಯಾಸಿ ಕಲಾವಿದರಾಗಿ ಪ್ರತಿಭೆಯನ್ನು ಮೆರೆಸುತ್ತಾ ಇವರ ಶಿಷ್ಯರೆನ್ನುವ ಕೀರ್ತಿಗೆ ಪಾತ್ರರಾಗಿದ್ದಾರೆ.

ಶ್ರೀಮತಿ ಲಕ್ಷ್ಮಿ ವೇಣುಗೋಪಾಲ, ನಾರಾಯಣ ಪ್ರಸನ್ನ ಎನ್ನುವ ಈರ್ವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸುಪುತ್ರ ವೇಣುಗೋಪಲ ಎಳವೆಯಲ್ಲೇ ಚೆಂಡೆ-ಮದ್ದಳೆಯನ್ನು ಬಾರಿಸಿ ಬಾಲ ಪ್ರತಿಭೆಯನ್ನು ಮೆರೆಸಿದ್ದಾರೆ. ಇವರ ಅದ್ವಿತಿಯವಾದ ಸಾಧನೆಗೆ ಪ್ರತಿಫಲವಾಗಿ ಕೋಳೂರು, ಮಂಗಳೂರು ಮೊದಲಾದೆಡೆಯಲ್ಲಿ ಸಂಮಾನಗಳು ಸಂದಿವೆ.



ಸುಬ್ರಹ್ಮಣ್ಯ ಶಾಸ್ತ್ರಿ

C/o. ನಾಗರಾಜ ಭಟ್.
ಅರ್ಚಕರು, ಗಣಪತಿ ದೇವಸ್ಥಾನ
ಉರ್ವಸ್ಟೋರ್ ಮಂಗಳೂರು.
(ಮೊಬೈಲ್) 9611202483.

ಚೆಂಡೆ-ಮದ್ದಳೆಯ ವಾದಕರಾಗಿ ಕಲಾಸೇವೆಯನ್ನು ಮಾಡಿರುವ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಯವರು ಪ್ರಸ್ತುತ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

26/4/1996 ರಲ್ಲಿ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ರಮಾದೇವಿ ಅವರ ಸುಪುತ್ರರಾಗಿ ಬಣಕಲ್ಲು ಎಂಬಲ್ಲಿ ಶ್ರೀಯುತರು ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 14ನೇ ವಯಸ್ಸಿನಿಂದ ಯಕ್ಷಕಲಾ ಸೇವೆಯನ್ನು ಆರಂಭಿಸಿದರು.

ಹಿರಿತನದಲ್ಲಿ ಸಂಬಂಧಿಕರಾಗಿರುವ ಕೆ. ಗೋವಿಂದ ಭಟ್ ಅವರಿಂದ ನಾಟ್ಯಾಭ್ಯಾಸ ರಂಗದ ಅನುಭವವನ್ನು ಪಡೆದಿರುವ ಇವರು ನೆಡ್ಲೆ ನರಸಿಂಹ ಭಟ್ಟರಿಂದ ಚೆಂಡೆ-ಮದ್ದಳೆಯ ಅಭ್ಯಾಸವನ್ನು ಮಾಡಿರುವರು. ಆರಂಭದಲ್ಲಿ ಬಾಲಗೋಪಾಲ, ವರುಣ ಮಾರುತ ಮೊದಲಾದ ಪಗಡೆವೇಷಗಳನ್ನು ಮಾಡಿರುವ ಇವರು ಬೆಳೆದಂತೆ ಹಿಮ್ಮೇಳನವಾದನದಲ್ಲಿ ಪ್ರೌಢಿಮೆಯನ್ನು ಸಾಧಿಸಿ ಕೀರ್ತಿವಂತರಾದರು.

ಧರ್ಮಸ್ಥಳ ಮೇಳ 18 ವರ್ಷ, ಪುತ್ತೂರು ಮೇಳ 2 ವರ್ಷ, ಸುಂಕದಕಟ್ಟೆ ಮೇಳ-1 ವರ್ಷ ಹಾಗೂ ಕಟೀಲು ಮೇಳ 2 ವರ್ಷ ಹೀಗೆ ತಿರುಗಾಟವನ್ನು ನಡೆಸಿರುವರು. ಹವ್ಯಾಸಿ ಕಲಾವಿದರಿಗೆ ಹಿಮ್ಮೇಳದ ತರಬೇತಿಯನ್ನು ನೀಡಿರುವ ಇವರು ಯಕ್ಷಗಾನದ ಪರಂಪರೆ ಶೈಲಿಯ ಬಗ್ಗೆ ಕಾಳಜಿವುಳ್ಳವರಾಗಿದ್ದಾರೆ.



ಸುಕುಮಾರ್ ಬಳ್ಳಾಲ್

ಆಳಿಕೆ ಗ್ರಾಮ, ಸತ್ಯಸಾಯಿ ವಿಹಾರ
ಬಂಟ್ವಾಳ ತಾಲೂಕು.
ಮೊಬೈಲ್: 9880117738.

ಚೆಂಡೆ-ಮದ್ದಳೆ ಬಾರಿಸುವುದರ ಮುಖೇನ ಕಲಾಸೇವೆ ಮಾಡಿರುವ ಶ್ರೀ ಸುಕುಮಾರ್ ಬಲ್ಲಾಳರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

1969ರಲ್ಲಿ ಗೋಪಾಲಕೃಷ್ಣ ಬಲ್ಲಾಳ್ ಮತ್ತು ಯಶೋದಮ್ಮ ದಂಪತಿಯ ಸುಪುತ್ರರಾಗಿ ಜನಿಸಿದರು. ಹತ್ತನೆಯ ತರಗತಿಯ ತನಕ ವಿದ್ಯಾಭ್ಯಾಸವನ್ನು ಮಾಡಿರುವ ಇವರು ಸ್ವಂತಾಸಕ್ತಿಯಿಂದ ಯಕ್ಷಗಾನದ ರಂಗಪ್ರವೇಶ ಮಾಡಿದ್ದಾರೆ. ದೊಡ್ಡಪ್ಪನಾದ ಚೆಪ್ಪಾರು ಕೃಷ್ಣಯ್ಯ ಬಲ್ಲಾಳರು ಇವರ ಸಾಧನೆಗೆ ಪ್ರೋತ್ಸಾಹವನ್ನು ನೀಡಿ ಬೆಳೆಸಿದ್ದಾರೆ. ಇಷ್ಟಲ್ಲದೆ ನಾಲುತೋಡು ಮಾಧವ ಎಂಬವರಲ್ಲಿ ಕೂಡಾ. ಸುಕುಮಾರ್ ಬಲ್ಲಾಳರು ಚೆಂಡೆ-ಮದ್ದಳೆಯ ಅಭ್ಯಾಸವನ್ನು ಮಾಡಿದ್ದಾರೆ.

ಸುಂಕದಕಟ್ಟೆ ಮೇಳ - 14 ವರ್ಷ, ಕುಂಟಾರು- 2 ವರ್ಷ, ಕಟೀಲು ಮೇಳ-· 8 ವರ್ಷ ಒಟ್ಟು 24 ವರ್ಷಗಳ ತಿರುಗಾಟವನ್ನು ಮಾಡಿರುವ ಇವರಿಗೆ ಹಿಮ್ಮೇಳ ವಾದಕರಾದ ಸಹೋದರ ಮರಿಮಯ್ಯ ಬಲ್ಲಾಳ್ ಅವರ ಉತ್ತೇಜನ ಕೂಡ ದೊರೆತಿದೆ.

ಶ್ರೀಮತಿ ಹೇಮಲತಾ ಎಂಬವರನ್ನು ವರಿಸಿರುವ ಸುಕುಮಾರ್ ಬಲ್ಲಾಳ್ ಯಕ್ಷಗಾನ ಮನೆತನದ - ಹಿನ್ನೆಲೆಯನ್ನು ಹೊಂದಿದವರಾಗಿದ್ದಾರೆ.

ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



ಸುಬ್ರಾಯ ಹೊಳ್ಳ ಎನ್. ಕಾಸರಗೋಡು

"ವೆಂಕಟರಮಣ" ಭವನ, ಕಾಸರಗೋಡು– 671121
ಮೊಬೈಲ್: 9449554516
ಮನೆ: 04994–224114.

ರಾಜವೇಷದ ಮೂಲಕೇನ ತನ್ನದೇ ಆದ ಸ್ವಂತಿಕೆಯನ್ನು ಮೆರೆಸಿರುವ ಶ್ರೀ ಸುಬ್ರಾಯ ಹೊಳ್ಳ ಕಾಸರಗೋಡು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕೆ. ಎಸ್. ನಾರಾಯಣ ಹೊಳ್ಳ ಮತ್ತು ಪದ್ಮಾವತಿ ಅಮ್ಮ ದಂಪತಿಯ ಸುಪುತ್ರರಾಗಿ ಕಾಸರಗೋಡಿನಲ್ಲಿ 17/12/1965ರಲ್ಲಿ ಜನಿಸಿದರು. 9ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತಾಸಕ್ತಿಯಿಂದ ಯಕ್ಷಗಾನದ ಕಲಾಸೇವೆಯನ್ನು ಮಾಡಿದರು.

ಕೂಡ್ಲು ಆನಂದ, ಕೂಡ್ಲು ನಾರಾಯಣ ಬಲ್ಯಾಯ ಇವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ಸುಬ್ರಾಯ ಹೊಳ್ಳರು ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಲ್ಲಿ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು. 15ನೇ ವರ್ಷದಿಂದಲೇ ಕಲಾಸೇವೆಯನ್ನು ಆರಂಭಿಸಿದ ಇವರು ಪುಂಡು ವೇಷ, ಸ್ತ್ರೀ ವೇಷ, ರಾಜವೇಷ, ಹೆಣ್ಣು ಬಣ್ಣ ಮತ್ತು ಬಣ್ಣದ ವೇಷಗಳು ಸೇರಿದಂತೆ ಹೆಚ್ಚಿನ ಎಲ್ಲಾ ವೇಷಗಳನ್ನು ಮಾಡಿದ ಅನುಭವವನ್ನು ಹೊಂದಿದ್ದಾರೆ.

ಕಟೀಲು ಮೇಳ-1 ವರ್ಷ, ಪುತ್ತೂರು ಮೇಳ- 1 ವರ್ಷ, ಕದ್ರಿ ಮೇಳ-2 ವರ್ಷ, ಕರ್ನಾಟಕ ಮೇಳ- 1 ವರ್ಷ, ಮಧೂರು ಮೇಳ-1 ವರ್ಷ, ಬಪ್ಪನಾಡು ಮೇಳ-3 ವರ್ಷ, ಮಧೂರು ಮೇಳ-1 ವರ್ಷ, ಕಟೀಲು ಮೇಳ-12 ವರ್ಷ, ಹೊಸನಗರ ಮೇಳ- 1 ವರ್ಷ, ಕಟೀಲು ಮೇಳ-3 ವರ್ಷ ಹೀಗೆ ಮೇಳ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ರಕ್ತ ಬೀಜ, ಇಂದ್ರಜಿತು, ಹಿರಣ್ಯಾಕ್ಷ, ಮಧು- ಕೈಟಭ, ಕೌಶಿಕ, ಅರ್ಜುನ, ತಾಮ್ರಧ್ವಜ, ಅತಿಕಾಯ, ಶೂರ್ಪನಖಾ, ಮಹಿಷಾಸುರ, ಶ್ರೀದೇವಿ, ಯಶೋಮತಿ, ಸತ್ಯಭಾಮೆ, ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕಾರ್ಕಳ, ಮಂಗಳೂರು, ಕೊಳ್ಳೂರು ಮೊದಲಾದೆಡೆ ನಾಟ್ಯತರಬೇತಿಯನ್ನು ನೀಡಿರುವ ಇವರು ಶ್ರೀಮತಿ ಶಾರದಾ ಎಂಬವರನ್ನು ವರಿಸಿ, ಹರಿನಾರಾಯಣ (6ನೇ ತರಗತಿ), ಕುಮಾರಿ ಪದ್ಮಶ್ರೀ (4ನೇ ತರಗತಿ) ಎಂಬ ಇಬ್ಬರು ಮಕ್ಕಳನ್ನು ಪಡಿದಿದ್ದಾರೆ.

ಕಲಾವಿದರಾಗಿರುವ ರಘುರಾಮ ಹೊಳ್ಳ, ರಾಮಕೃಷ್ಣಮಯ್ಯ, ರಾಧಾಕೃಷ್ಣ ನಾವಡ, ಜಿ.ಕೆ. ನಾವಡ ಇವರ ಸಂಬಂಧಿಕರಾಗಿರುವ ಸುಬ್ರಾಯ ಹೊಳ್ಳರ ಸಾಧನೆಗೆ ಪ್ರತಿಫಲವಾಗಿ ಕಾಸರಗೋಡು, ಕೊಯಮುತ್ತೂರು, ಬಹರೈನ್ ಮುಂತಾದೆಡೆಯಲ್ಲಿ ಸಂಮಾನಗಳು ಸಂದಿವೆ. “ಕರ್ನಾಟಕ ಯಕ್ಷಸಿರಿ” ಎಂಬ ಬಿರುದು ಕೂಡ ಇವರಿಗೆ ಲಭಿಸಿದೆ.



ಸುರೇಶ ಕುಪ್ಪೆಪದವು

ಶಾರದಾ ನಿಲಯ, ಕೆಳಿಂಜಾರು ಗ್ರಾಮ
ಕುಪ್ಪೆಪದವು ಅಂಚೆ, ಮಂಗಳೂರು ತಾಲೂಕು. 574162
ಮೊಬೈಲ್: 9741701752

ಬಣ್ಣದ ವೇಷದ ಮುಖೇನ ಜನಮನ್ನಣೆಯನ್ನು ಪಡೆದಿರುವ ಶ್ರೀ ಸುರೇಶ ಕುಪ್ಪೆಪದವು ಇವರು ಕಟೀಲು ಮೇಳದ ಹಿರಿಯ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಚೆನ್ನಪ್ಪ ಪೂಜಾರಿ ಹಾಗೂ ಶಾರದಾ ದಂಪತಿಯ ಸುಪುತ್ರರಾಗಿ ಕೆಳಿಂಜಾರು ಗ್ರಾಮದಲ್ಲಿ 1963 ರಂದು ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 24ನೇ ವಯಸ್ಸಿನಿಂದ ಯಕ್ಷಗಾನದಲ್ಲಿ ಪ್ರಭುತ್ವವನ್ನು ಸಾಧಿಸುತ್ತಾ ಬಂದರು.

ಯಕ್ಷಗಾನದ ಪರಿಸರದಲ್ಲಿ ಆಟ- ಕೂಟಗಳನ್ನು ನೋಡಿ ಪ್ರಭಾವಿತರಾಗಿರುವ ಸುರೇಶರು ಬಜಪೆ ದೇರಣ್ಣ, ಮಂಜುನಾಥ ಭಟ್, ಕರ್ಗಲ್ಲು, ವಿಶ್ವೇಶ್ವರ ಭಟ್ ಇವರಿಂದ ನಾಟ್ಯ ಮತ್ತು ರಂಗಮಾಹಿತಿಯ ಬಗ್ಗೆ ಅನುಭವವನ್ನು

ಪಡೆದಿರುವರು.

ಆರಂಭದಲ್ಲಿ ಹವ್ಯಾಸಿ ಕಲಾವಿದರಾಗಿ ಪಾತ್ರನಿರ್ವಹಣೆಯನ್ನು ಮಾಡಿ ಅನುಭವವನ್ನು ಸಂಪಾದಿಸಿದರು. ಆಮೇಲೆ ಕಟೀಲು ಮೇಳವನ್ನು ಸೇರಿದರು. ಈಗಾಗಲೇ 20 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಕಟೀಲು ಮೇಳದಲ್ಲಿ ಶ್ರೀದೇವಿ ಮಹಾತ್ಮೆಯ ಮಹಿಷಾಸುರನಾಗಿ ಗುರುತಿಸಲ್ಪಟ್ಟಿರುವ ಇವರು ಶುಂಭ, ಶೂರಪದ್ಮ, ರಾವಣ, ಸುಯೋಧನ, ಅರ್ಜುನ, ದೇವೇಂದ್ರ, ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ.

ಮಳೆಗಾಲದ ಕೃಷಿಗಾರಿಕೆಯಲ್ಲಿ ಶ್ರಮಿಸುವ ಇವರು ಶ್ರೀಮತಿ ಗೀತಾ ಎಂಬವರನ್ನು ವರಿಸಿ ಶ್ರಾವ್ಯ ಮತ್ತು ರಾಕೇಶ್ ಎಂಬ ಇಬ್ಬರು ಮಕ್ಕಳನ್ನು ಪಡೆದಿರುವರು.



ಸುಬ್ರಾಯ ಸಂಪಾಜೆ

ಕಲ್ಲುಗುಂಡಿ ಮನೆ , ಸಂಪಾಜೆ ಅಂಚೆ ಮತ್ತು ಗ್ರಾಮ
ಸುಳ್ಯ ತಾಲೂಕು – 574234
ಮೊಬೈಲ್: 9480279443

ಬಣ್ಣದ ವೇಷದಲ್ಲೇ ಪ್ರಭುತ್ವವನ್ನು ಸಾಧಿಸಿ ಹಳೆಯ ಶೈಲಿಯ ಮಾದರಿಯನ್ನು ಉಳಿಸಿಕೊಂಡು ಪಾತ್ರ ನಿರ್ವಹಣೆ ಮಾಡುವ ಸುಬ್ರಾಯ ಪಾಟಾಳಿ ಸಂಪಾಜೆಯವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸಿ ಹಿರಿತನದ ಮನ್ನಣೆಯನ್ನು ಪಡೆದಿದ್ದಾರೆ.

ಯಕ್ಷಗಾನದಲ್ಲಿ ಅಗ್ರ ಪಂಕ್ತಿಯ ಕಲಾವಿದರಾಗಿ ಗೌರವ-ಪುರಸ್ಕಾರಗಳಿಂದ ಮನ್ನಣೆಗೊಳಗಾಗಿ ಕೀರ್ತಿಶೇಷರಾಗಿರುವ ಬಣ್ಣದ ಮಾಲಿಂಗ ಮತ್ತು ದೇವಕಿ ದಂಪತಿಯ ಸುಪುತ್ರರಾಗಿ 1963ನೇ ವರ್ಷ ಸುಳ್ಯದ ಉಬರಡ್ಕದಲ್ಲಿ ಜನಿಸಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ತಂದೆಯವರ ಪ್ರೇರಣೆಯ ಮೇರೆಗೆ ಅವರಿಂದಲೇ ನಾಟ್ಯಾಭ್ಯಾಸವನ್ನು ಮಾಡಿದರು. ಆಮೇಲೆ ಸೂರಿಕುಮೇರು ಗೋವಿಂದ ಭಟ್ಟರಿಂದ ಹೆಚ್ಚಿನ ಅನುಭವವನ್ನು ಪಡೆದರು.

18ನೇ ವರ್ಷದಿಂದಲೇ ಕಲಾಸೇವೆಯನ್ನುಆರಂಭಿಸಿಕೊಂಡಇವರು ಕಟೀಲುಮೇಳವೊಂದರಲ್ಲೇ 30 ವರ್ಷಗಳ ತಿರುಗಾಟವನ್ನುಪೂರೈಸಿದ್ದಾರೆ. ಶುಂಭ, ಮಹಿಷಾಸುರ, ಶೂರಪದ್ಮ,ಶೂರ್ಪನಖಾ, ಭೀಮ, ಯಮ ಇತ್ಯಾದಿ ಬಣ್ಣದ

ವೇಷಗಳನ್ನು ನಿರ್ವಹಿಸುತ್ತಿರುವ ಇವರು ಅನಿವಾರ ಕಾರಣಗಳಲ್ಲಿ ರಾಜ ವೇಷದ ಪಾತ್ರಗಳನ್ನು ಕೂಡ ನಿರ್ವಹಿಸುತ್ತಾರೆ.

ಇವರ ಮನೆತನವು ಯಕ್ಷಗಾನದ ಮನೆತನವಾಗಿದ್ದು ಸಹೋದರರಾದ ರಾಮ ಮತ್ತು ಕೃಷ್ಣ ಇವರಿಬ್ಬರು ಯಕ್ಷಗಾನದ ಕ್ಷೇತ್ರದಲ್ಲಿ ಕಲಾಸೇವೆಯನ್ನು ಮಾಡಿದ್ದಾರೆ.

ಕಿರಿಯ ಕಲಾವಿದರಿಗೆ ನಾಟ್ಯಾಭ್ಯಾಸ ಮತ್ತು ರಂಗದ ಬಗ್ಗೆ ಮಾಹಿತಿ ನೀಡಿರುವ ಇವರು ಶ್ರೀಮತಿ ಸುಶೀಲ ಎಂಬವರನ್ನು ವರಿಸಿ ಕಲಾವತಿ, ಸೌಮ್ಯ, ಪ್ರಮೋದಿನಿ, ಅವಿನಾಶ್ ಎಂಬ ಸುಪುತ್ರರನ್ನು ಪಡೆದಿರುವರು.



ಸುಬ್ರಹ್ಮಣ್ಯ ವಿಷ್ಣು ಹೆಗಡೆ ಯಲಗುಪ್ಪ

ಸಾ॥ ಅಬ್ಬಿ ತೋಟ, ಅಂಚೆ: ಕೆಳಗಿನೂರು
ಹೊನ್ನಾವರ ತಾಲೂಕು. ಉ. ಕ.
ಮೊಬೈಲ್: 9448796916.

ಸ್ತ್ರೀ ಪಾತ್ರಗಳ ನಿರ್ವಹಣೆಯಲ್ಲಿ ನೂತನ ಶೈಲಿಯನ್ನು ಅಳವಡಿಸಿ ಆಕರ್ಷಣೆಗೆ ಒಳಗಾದ ಸುಬ್ರಹ್ಮಣ್ಯ ವಿಷ್ಣು ಹೆಗಡೆ ಯಲಗುಪ್ಪರವರು ಹೊಸನಗರ ಮೇಳದ ಸ್ತ್ರೀ ಪಾತ್ರಧಾರಿಯಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ವಿಷ್ಣು ಹೆಗಡೆ ಮತ್ತು ಇಂದಿರಾ ದಂಪತಿಯ ಸುಪುತ್ರರಾಗಿ ಯಲಗುಪ್ಪ ಎಂಬಲ್ಲಿ 08-06- 1973ರಂದು ಜನಿಸಿದರು. ಕಲಾವಿದರಾಗಿರುವಾಗಲೇ ಸ್ವಂತ ಸಾಧನೆಯ ಮುಖೇನ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರು ಯಕ್ಷಗಾನದ ಆಕರ್ಷಣೆಗೆ ಬಾಲ್ಯದಲ್ಲೇ ಒಳಗಾಗಿದ್ದರು. ಜೊತೆಗೆ ಸೋದರ ಮಾವ ರಾಮ ಹೆಗಡೆ ಚಿಟ್ಟಾಣಿ ಇವರ ಪ್ರೋತ್ಸಾಹ ಕೂಡಾ ದೊರೆತಿತ್ತು.

ಹೆರೆಂಜಾಲು ವೆಂಕಟರಮಣ ಗಾಣಿಗರಲ್ಲಿ ನಾಟ್ಯಾಭ್ಯಾಸವನ್ನು ಮಾಡಿರುವ ಇವರು ಮುಂದೆ ಹೆಚ್ಚಿನ ನಾಟ್ಯಾಭ್ಯಾಸ ಹಾಗೂ ಅನುಭವಕ್ಕಾಗಿ ಹೆರೆಂಜಾಲು ಗೋಪಾಲ ಗಾಣಿಗರಲ್ಲಿ ಅಧ್ಯಯನ ಮಾಡಿ ನಾಟ್ಯದ ಜೊತೆ ಜೊತೆಗೆ ಭಾಗವತಿಕೆಯ ಅಭ್ಯಾಸವನ್ನು ಮಾಡಿದ್ದರು.

ಗುಂಡಿ ಬಾಳ ಮೇಳ-2 ವರ್ಷ, ಮಂದಾರ್ತಿ ಮೇಳ-2 ವರ್ಷ, ಕಮಲಶಿಲೆ ಮೇಳ-1 ವರ್ಷ, ಮಾರಣಕಟ್ಟೆ ಮೇಳ-2 ವರ್ಷ, ಕೆರೆಮನೆ ಮೇಳ- 3 ವರ್ಷ, ಸಾಲಿಗ್ರಾಮ ಮೇಳ-4 ವರ್ಷ, ಪೆರ್ಡೂರು . ಮೇಳ-3 ವರ್ಷ, ಹೊಸನಗರ ಮೇಳ-2 ವರ್ಷ ಹೀಗೆ ತೆಂಕು ಬಡಗು ತಿಟ್ಟಿನ ಮೇಳಗಳಲ್ಲಿ ತಿರುಗಾಟವನ್ನು ನಡೆಸಿ ಜನ ಮನ್ನಣೆಗೆ ಪಾತ್ರರಾಗಿದ್ದಾರೆ.

ಸ್ತ್ರೀ ವೇಷ ಮತ್ತು ಸಾತ್ವಿಕ ಪುಂಡುವೇಷಗಳನ್ನು ಮಾಡುವ ಇವರು ಸುಭದ್ರೆ, ಕೈಕೆ, ದಾಕ್ಷಾಯಿಣಿ, ಮೋಹಿನಿ, ಪ್ರಭಾವತಿ, ಪದ್ಮಾವತಿ, ಕೃಷ್ಣ, ರಾಮ, ವಿಷ್ಣು ಮುಂತಾದ ಪಾತ್ರಗಳನ್ನು ಮಾಡಿರುವರು. ಹೊಸ ಪ್ರಸಂಗಗಳ ನೂತನ ಪಾತ್ರಗಳ ನಿರ್ವಹಣೆಯಲ್ಲಿ ಯಶಸ್ಸನ್ನು ಪಡೆದ ಸಾಧನೆ ಇವರದ್ದಾಗಿದೆ.

ಕಲಾಸಾಧನೆಗೆ ಪ್ರತಿಫಲವಾಗಿ ಬೆಂಗಳೂರು, ಮುಂಬಯಿ, ಹೈದರಾಬಾದ್ ಮುಂತಾದ ಕಡೆಗಳಲ್ಲಿ ಸಂಮಾನ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಕೃಷಿಕರಾಗಿರುವ ಇವರು ಶ್ರೀಮತಿ ಲಕ್ಷ್ಮೀ ಎಂಬವರನ್ನು ವರಿಸಿ ವಸುಧಾ ಎಂಬ ಮಗಳನ್ನು ಪಡೆದಿದ್ದಾರೆ.



ಸೂರ್ಯ ನಾರಾಯಣ ಭಟ್, ಕಣಿಯೂರು

*ಕಣಿಯೂರು ಮನೆ, ಕನ್ಯಾನ ಅಂಚೆ ಮತ್ತು ಗ್ರಾಮ,*
*ಬಂಟ್ವಾಳ ತಾಲೂಕು-5754279*
*ಮೊಬೈಲ್ :9480036812*

ಸ್ವಂತ ಆಸಕ್ತಿಯಿಂದಲೇ ಯಕ್ಷಗಾನ ಕ್ಷೇತ್ರಕ್ಕೆ ಬಂದು ಭಾಗವತಿಕೆಯ ಕಂಠಸಿರಿಯಿಂದ ಜನ ಮೆಚ್ಚುಗೆ ಗಳಿಸಿದ ಕಣಿಯೂರು ಸೂರ್ಯನಾರಾಯಣ ಭಟ್ ಇವರು ಸಸಿಹಿತ್ಲು ಭಗವತಿ ಮೇಳದ ಮುಖ್ಯ ಭಾಗವತರಾಗಿದ್ದಾರೆ.

ಕೃಷ್ಣ ಶಾಸ್ತ್ರಿ ಮತ್ತು ಲಲಿತಮ್ಮ ದಂಪತಿಗೆ ಕಣಿಯೂರಿನಲ್ಲಿ 1-8-1966ರಂದು ಸುಪುತ್ರನಾಗಿ ಜನಿಸಿದ ಇವರು 10ನೇ ತರಗತಿಯ ತನಕ ಶಿಕ್ಷಣವನ್ನು ಪಡೆದಿದ್ದಾರೆ.

17 ವರ್ಷದಲ್ಲಿ ಕೋಡ್ಡ ಗಣಪತಿ ಭಟ್ ಅವರಿಂದ ಬಾಗವತಿಕೆಯ ಅಭ್ಯಾಸವನ್ನು ಮಾಡಿ, ನೆಡ್ಲೆ ನರಸಿಂಹ ಭಟ್ ಇವರಿಂದ ಭಾಗವತಿಕೆಗೆ ಪೂರಕವಾದ ಹೆಚ್ಚಿನ ಅನುಭವವನ್ನು ಪಡೆದರು.

ಕುಡಾಣ ಗೋಪಾಲಕೃಷ್ಣ ಭಟ್, ಪೆರುವಾಯ ಹಾಗೂ ದೇವಕಾನ ಕೃಷ್ಣ ಆರ್. ಇವರುಗಳಿಂದ ಚೆಂಡೆ ಮದ್ದಳೆ ಕಲಿಕೆ ಅಭ್ಯಾಸ ಮಾಡಿರುವ ಸೂರ್ಯನಾರಾಯಣ ಭಟ್ಟರು ಸಮರ್ಥ ಭಾಗವತರಾಗಿ ಬೆಳೆದು ನಿಂತರು.

ಪುತ್ತೂರು ಮೇಳ 5 ವರ್ಷ, ಕಾಂತಾವರ ಮೇಳ -1 ವರ್ಷ, ಬಪ್ಪನಾಡು ಮೇಳ -1 ವರ್ಷ ಕಾಟಿಪಳ್ಳ ಮೇಳ -1 ವರ್ಷ, ಸುಂಕದಕಟ್ಟೆ ಮೇಳ -5 ವರ್ಷ, ಮಧೂರು ಮೇಳದಲ್ಲಿ -2 ವರ್ಷ ಹಾಗೂ ಪ್ರಸಕ್ತ ವರ್ಷ ಸೇರಿದಂತೆ 5 ವರ್ಷಗಳ ಕಾಲ ಮೇಳ ತಿರುಗಾಟವನ್ನು ಮಾಡಿರುವರು.

ಬಾಲ್ಯದಿಂದಲೇ ವೇಷಗಾರಿಕೆಯಲ್ಲಿ ಆಸಕ್ತಿಯನ್ನು ಹೊಂದಿರುವ ಸೂರ್ಯ ನಾರಾಯಣ ಭಟ್ಟರು ಸ್ತ್ರೀವೇಷಗಳಾದ ಸುಭದ್ರೆ, ರತಿ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿರುತ್ತಾರೆ.

ಶ್ರೀಮತಿ ಆಶಾ ಪಾರ್ವತಿಯವರನ್ನು ವಿವಾಹವಾಗಿದ್ದುಕೊಂಡು ಶ್ರೀಲತಾ ಹಾಗೂ ಸುಶ್ಮಿತಾ ಎಂಬ ಎರಡು ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಮುಂಬಯಿ, ಹಿಮಾಚಲ ಪ್ರದೇಶ, ಸಸಿಹಿತ್ತು ಮೇಳ, ಮಿತ್ತಬೈಲ್ ಮೂಡಬಿದಿರೆ ಮೊದಲಾದ ಕಡೆಗಳಿಂದ ಸಂಮಾನ ಪುರಸ್ಕಾರಗಳು ಸಂದಿವೆ.



**ಹರಿನಾರಾಯಣ ಭಟ್ ಎಡನೀರು**

*ಎಡನೀರು ಅಂಚೆ, ಪಡಿಗ್ರಾಮ, ಚೆರ್ಕಳ*
*ಕಾಸರಗೋಡು ಕೇರಳ– 671541*
*ಮೊಬೈಲ್ 9449281784.*

ಬಣ್ಣದ ವೇಷವನ್ನು ಉತ್ತಮವಾದ ಬಣ್ಣಗಾರಿಕೆ ನಾಟ್ಯ ಮತ್ತು ಮಾತಿನ ಶೈಲಿಯಿಂದ ಅಭಿವ್ಯಕ್ತಗೊಳಿಸಿ ಮನ್ನಣೆಗೆ ಪತ್ರರಾಗಿರುವ ಶ್ರೀ ಹರಿ ನಾರಾಯಣಭಟ್ ಎಡನೀರು ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟ ನಡೆಸುತ್ತಾ ಇದ್ದಾರೆ.

18-8-1974ರಂದು, ಡಿ. ಕೃಷ್ಣ ಭಟ್ ಮತ್ತು ಡಿ ಇಂದಿರಾ ದಂಪತಿಯ ಸುಪುತ್ರರಾಗಿ ಎಡನೀರಿನಲ್ಲಿ ಜನಿಸಿದರು.ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಪ್ರಭಾವಕ್ಕೊಳಗಾಗಿ - ಕಲಾಸಾಧನೆಯನ್ನು ಮಾಡಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾಕೇಂದ್ರದಲ್ಲಿ, ಶ್ರೀ ಕೋಳ್ಯೂರು ರಾಮಚಂದ್ರರಾವ್ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು ಹರಿನಾರಾಯಣ ಬೈಪಡಿತ್ತಾಯರಿಂದ ಹಿಮ್ಮೇಳದ ಅನುಭವವನ್ನು ಪಡೆದಿರುವರು. ಇಷ್ಟಲ್ಲದೆ ಕೆ. ಗೋವಿಂದ ಭಟ್ಟರಿಂದ ರಂಗದಲ್ಲಿ ಪಾತ್ರವನ್ನು ಮೆರೆಸುವುದಕ್ಕಾಗಿ ಪೂರಕವಾದ ಮಾಹಿತಿಯನ್ನು ಪಡೆದಿರುವರು.

18ನೇ ವಯಸ್ಸಿನಿಂದಲ್ಲೇ ಕಲಾಸೇವೆಯನ್ನು ಅರಂಭಿಸಿದ ಇವರು ಶ್ರೀ ಕಟೀಲು ಮೇಳವೂಂದರಲ್ಲೇ 18ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ. ರಾವಣ, ಮೈರಾವಣ, ಮಹಿಷಾಸುರ, ಭೀಮ, ನರಕಾಸುರ, ದೇವೇಂದ್ರ, ಅರ್ಜುನ, ತಾಟಕಿ, ಶೂರ್ಪನಖಿ ಮೊದಲಾದ ಬಣ್ಣ ಹಾಗೂ ಹೆಣ್ಣು ಬಣ್ಣದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ರಾಜವೇಷವನ್ನು ಕೂಡಾ ಮಡುವ ಇವರು ವೀರವರ್ಮ, ಸಿಂಹ ಮುಂತಾದ ಪಾತ್ರಗಳನ್ನು ಮಾಡುತ್ತಾರೆ.

ಪೂರ್ವರಂಗದ ಬಗ್ಗೆ ಜ್ಞಾನವುಳ್ಳ ಇವರು - ಭಾಗವತಿಕೆಯ ಅಭ್ಯಾಸ ಮಾಡಿದ್ದಾರೆ. ಪೂರ್ವರಂಗದ ವೇಷಗಳನ್ನು ಕುಣಿಸಲು ಸಂಗೀತ ಹಾಡಿರುವ ಅನುಭವ ಇವರಿಗಿದೆ.



## ಹರಿನಾರಾಯಣ ಬೈಪಡಿತ್ತಾಯ

"ಕಲಾನುಗ್ರಹ", ಅಂಚೆ ಕೊಳಂಬೆ
ತಲಕಳ ಬಜ್ಪೆ ಮಂಗಳೂರು
ಮನೆ ದೂರವಾಣಿ : 0824, 2253543

ಚೆಂಡೆ-ಮದ್ದಳೆಯ ನುಡಿತ-ಬಡಿತಗಳಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಶ್ರೀ ಹರಿನಾರಾಯಣ ಬೈಪಾಡಿತ್ತಾಯರು ಗುರುಗಳಾಗಿಯೂ ಮನ್ನಣೆಯನ್ನು ಪಡೆದಿರುವ ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

ತೇದಿ 13-11-1947ರಲ್ಲಿ ಕೆ. ರಾಮಕೃಷ್ಣ ಬೈಪಾಡಿತ್ತಾಯ ಮತ್ತು ಪದ್ಮಾವತಿ ದಂಪತಿಯ ಸುಪುತ್ರರಾಗಿ ಪುತ್ತೂರು ತಾಲೂಕಿನ ಕಡಬದಲ್ಲಿ ಜನಿಸಿದರು. ಬಾಲ್ಯದಿಂದಲೇ ಯಕ್ಷಗಾನ ಕಲೆಯತ್ತ ಅಕರ್ಷಿತರಾದ ಇವರು ಹಿಮ್ಮೇಳದ ಅಧ್ಯಾಯನವನ್ನು ಮಾಡಿ ಕಲಾಸಾಧಕರಾಗಿ ಬೆಳೆದು ಬಂದರು.

ಕೀರ್ತಿಶೇಷ ಕಲಾವಿದರಾದ ನೆಡ್ಲೆ ನರಸಿಂಹ ಭಟ್ ಮತ್ತು ಮೃದಂಗ ವಿದ್ವಾನ್ ಕಾಂಚನ ಕೆ. ವಿ ಮೂರ್ತಿಅವರಿಂದ ಕ್ರಮವಾಗಿ ಚೆಂಡೆ, ಮದ್ದಳೆ ಮತ್ತು ಮೃದಂಗಗಳ ನುಡಿತ-ಬಡಿತಗಳ ಅಭ್ಯಾಸವನ್ನು ಮಾಡಿದರು.

ಧರ್ಮಸ್ಥಳ ಮೇಳ 28ವರ್ಷ, ಕುಂಡಾವು ಮೇಳ 3ವರ್ಷ, ಕೊಲ್ಲೂರು ಮೇಳ 1ವರ್ಷ, ಕೂಡ್ಲು ಮೇಳ 2ವರ್ಷ, ಕುಂಬ್ಳೆಮೇಳ 3ವರ್ಷ, ಅರುವಮೇಳ - lವರ್ಷ, ಬಪ್ಪನಾಡು ಮೇಳ ವರ್ಷ, ತಲಕಳ ಮೇಳ 12ವರ್ಷ ಹೀಗೆ ಮೇಳ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ,

ಹಿಮ್ಮೇಳದ ಗುರುವಾಗಿ ಮಾರ್ಗದರ್ಶನವನ್ನು ಮಡಿರುವ ಇವರು ಧರ್ಮಸ್ಥಳದ ಲಲಿತಕಲಾಕೇಂದ್ರ, ಬೆಳಾಲು, ಕಾರ್ಕಳ, ಚೇಳಾರು ಪದವು ಇತ್ಯಾದಿ ಕಡೆಗಳಲ್ಲಿ ತರಬೇತಿಯ ತರಗತಿಗಳನ್ನು ನಡೆಸಿ ಹಲವು ಮಂದಿ ಶಿಷ್ಯರನ್ನು ಹೊಂದಿದ್ದಾರೆ. ಸ ಹ ಧ ರ್ಮಿಣಿಯಾಗಿರುವ ಲೀಲಾವತಿ ಬೈಪಾಡಿತ್ತಾಯರಿಗೆ ಮಾರ್ಗದರ್ಶನವನ್ನು ಮಾಡಿ ಅವರನ್ನು ಅಗ್ರಪಂಕ್ತಿಯ ಭಾಗವತರೆನ್ನುವ ಕೀರ್ತಿಗೆ - ಪಾತ್ರರಾಗಿಸಿದ್ದಾರೆ. ಇಬ್ಬರು ಗಂಡು ಮಕ್ಕಳಾದ ಗುರುಪ್ರಸಾದ್ ಬೈಪಾಡಿತ್ತಾಯ ಮತ್ತು ಅವಿನಾಶ್ ಬೈಪಾಡಿತ್ತಾಯ ಇವರಲ್ಲಿ ಅವಿನಾಶ್ ಬೈಪಾಡಿತ್ತಾಯ ಚೆಂಡೆ-ಮದ್ದಳೆಯ ವಾದಕರಾಗಿ ಹವ್ಯಾಸ ಬೆಳೆಸಿಕೊಂಡಿದ್ದಾರೆ.

ಇವರ ಕಲಾಸಾಧನೆಗೆ ಪ್ರತಿಫಲವಾಗಿ ಧರ್ಮಸ್ಥಳ, ಬೆಳಾಲು, ಕಾಟಿಪಳ್ಳ ಬಾಳ ಮೊದಲಾದ ಕಡೆಗಳಲ್ಲಿ ಗೌರವದ ಸಂಮಾನಗಳಾಗಿವೆ.

# ಬಡಗುತಿಟ್ಟಿನ ಕಲಾವಿದರು



**ಅಣ್ಣಪ್ಪ ಕುಲಾಲ್, ಶಿರೂರು**

*ಅಂಚೆ : ನೀರ್ಜಡ್ಡು, ಹೆಗ್ಗುಂಜೆ ಗ್ರಾಮ, ಮಂದಾರ್ತಿ,*
*ಉಡುಪಿ ತಾಲೂಕು/ಚರದೂರವಾಣಿ 97319 85309*

ಬಡಗುತಿಟ್ಟಿನ ಹಾಸ್ಯಕಲಾವಿದರಾಗಿ ಗುರುತಿಸಿಕೊಂಡ ಶಿರೂರು ಅಣ್ಣಪ್ಪ ಕುಲಾಲರು ಸಂಪನ್ನ ಪ್ರತಿಭೆಯ ಹಿರಿಯ ಕಲಾವಿದರು.

ಬಚ್ಚ ಕುಲಾಲ-ಕೊರತಿ ಕುಲಾಲ ದಂಪತಿಯ ಸುಪುತ್ರರಾದ ಅಣ್ಣಪ್ಪನವರು ಮಂದಾರ್ತಿಯಲ್ಲಿ 12- 05-1959ರಲ್ಲಿ ಜನಿಸಿದರು. ಬಡತನದ ಬೇಗುದಿಯಲ್ಲಿ ಉದರಯಜ್ಞದ ಹವಿಸ್ಸಿಗಾಗಿ ಯಕ್ಷಗಾನ ಕಲೆಯನ್ನೇ ವೃತ್ತಿಯಾಗಿಸಿಕೊಂಡ ಅಣ್ಣಪ್ಪನವರಿಗೆ ಒಂದರ್ಥದಲ್ಲಿ ಬಡತನವೇ ಬಡಗಿನ ವೃತ್ತಿರಂಗ ಭೂಮಿಯ ಕಲಾಸೇವೆಗೆ ಪ್ರೇರಣೆಯೆನ್ನಬಹು-ದಾಗಿದೆ.

7ನೇ ತರಗತಿಗೆ ಅಕ್ಷರಾಭ್ಯಾಸವನ್ನು ಮೊಟಕುಗೊಳಿಸಿ, 14ನೇ ವಯಸ್ಸಿನಲ್ಲಿ ಯಕ್ಷಗಾನ ರಂಗವನ್ನು ಪ್ರವೇಶಿಸಿದ ಇವರು ಖ್ಯಾತ ಕಲಾವಿದರಾರದ ಕುಂಜಾಲು ರಾಮಕೃಷ್ಣ, ಕಿನ್ನಿಗೋಳಿ ಮುಖ್ಯಪ್ರಾಣ ಅವರ ಶಿಷ್ಯವೃತ್ತಿಯಲ್ಲಿ ವೃತ್ತಿ ಬದುಕಿಗೆ ಬೇಕಾದ ಸಶಕ್ತ ಕಲಾವಿದ್ಯೆಯನ್ನು ಸಂಪಾದಿಸಿದರು. ಎಲ್ಲಾ ಬಗೆಯ ವೇಷಗಳನ್ನು ನಿರ್ವಹಿಸುವ ಕೌಶಲವನ್ನು ಹೊಂದಿದ ಕಲಾವಿದ ಅಣ್ಣಪ್ಪನವರು, ನಾರದ, ಅಕ್ರೂರ, ಮೇದೋಹೋತ, ವಿದುರ.... ಮೊದಲಾದ ಭೂಮಿಕೆಗಳನ್ನು ಸಮರ್ಪಕವಾಗಿ ಪೋಷಿಸುವವರು.

ಮಂದಾರ್ತಿ, ಕಮಲಶಿಲೆ, ಸಾಲಿಗ್ರಾಮ, ಪೆರ್ಡೂರು, ಅಮೃತೇಶ್ವರಿ ಮೇಳಗಳಲ್ಲಿ ತಿರುಗಾಟ ನಡೆಸಿದ ಇವರು ಪ್ರಸ್ತುತ ಮಂದಾರ್ತಿ ಮೇಳದ ಹಾಸ್ಯಗಾರ ರಾಗಿ 35 ವ ರ್ಷದ ಕಲಾಕೃಷಿಯಲ್ಲಿದ್ದಾರೆ.

ಗುಲಾಬಿ ಎಂಬುವರೇ ಇವರ ಸಹಧರ್ಮಿಣಿ. ಸುಖಾನಂದ, ನಿತ್ಯಾನಂದ, ಸದಾನಂದ, ಪ್ರೇಮಾನಂದ, ದಯಾನಂದ ಎಂಬ ಐವರು ಪುತ್ರರ ಸರ್ವಾನಂದ ಪೂರ್ಣ ಸಂಸಾರ ಇವರದ್ದು.

ಸಾಂಪ್ರದಾಯಿಕ ಚೌಕಟ್ಟಿನಲ್ಲಿದ್ದ ಕೊಂಡೇ ಯಕ್ಷಗಾನ ರಂಗ ಬದುಕು ನಡೆಸುವ ಇವರ ಪ್ರತಿಭೆಯ ಹಿರಿತನ ಗುರುತಿಸಿ ಹಲವು ಸಂಘ ಸಂಸ್ಥೆಗಳು ಸಮ್ಮಾನಿಸಿವೆ.



**ಅನಂತ ಕುಲಾಲ್, ಕಕ್ಕುಂಜೆ**

*ಹೊರ್ನಾಡಿ, ಅಂಚೆ : ಮೊಳಹಳ್ಳಿ,*
*ಕುಂದಾಪುರ ತಾಲೂಕು*
*ದೂರವಾಣಿ : 96114 96372, 95380 17394*

ಉನ್ನತ ಕಲಾವಂತಿಕೆಯ ಶಿಸ್ತು, ಗತ್ತಿನೊಂದಿಗೆ ಪೌರಾಣಿಕ ಯಕ್ಷಲೋಕದ ಸತ್ವ-ಶ್ರೀಮಂತಿಕೆಯನ್ನು ಸಮರ್ಥವಾಗಿ ಅಭಿವಯಕ್ತಿಗೊಳಿಸುವ ಸುಸಂಸ್ಕೃತ ಯಕ್ಷಾಭಿನೇತಾ ಕಕ್ಕುಂಜೆ ಅನಂತ ಕುಲಾಲ್,

ಉಡುಪಿ ತಾಲೂಕಿನ ಕಕ್ಕುಂಜೆ ಎಂಬಲ್ಲಿ 26- 2-1956ರಲ್ಲಿ ಜನಿಸಿದ ಅನಂತ ಕುಲಾಲ್ ಅವರು ಬಚ್ಚ ಕುಲಾಲ್-ದ್ಯಾವಮ್ಮ ಕುಲಾಲ್ಲಿ ದಂಪತಿಯ ಸುಪುತ್ರ ಕಕ್ಕುಂಜೆ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಅವರು ತನ್ನ 14ರ ಹರೆಯದಲ್ಲೇ ಬಣ್ಣದ ಲೋಕಕ್ಕೆ ಮುಖ ಮಾಡಿದವರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ದಶಾವತಾರಿ ಗುರು ವೀರಭದ್ರನಾಯಕರಲ್ಲಿ ಸಾಂಪ್ರದಾಯಿಕ ರಂಗಶಿಕ್ಷಣ ಪಡೆದ ಶ್ರೀಯುತರು ಹಿರಿಯ ವೇಷಧಾರಿ ಹಳ್ಳಾಡಿ ಮಂಜಯ್ಯ ಶೆಟ್ಟರಿಂದ ಅರ್ಥಗಾರಿಕೆಯನ್ನು ಹಳ್ಳಾಡಿ ಕೃಷ್ಣಪ್ಪ ಅವರಲ್ಲಿ ಪೌರಾಣಿಕ ರಂಗ ಮಾಹಿತಿಯನ್ನು ಪಡೆದರು.

ಸಾಹಿತ್ಯಪೂರ್ಣ ಸುಸ್ಪಷ್ಟ ವಾಗ್ವಿಲಾಸ, ಪ್ರಮಾಣ ಪೂರ್ವಕ, ನೃತ್ಯಾಭಿನಯ ಕೌಶಲ, ರಂಗ ಚೌಕಟ್ಟು ಮೀರದ ಪ್ರೌಢ ಕಲಾಭಿವ್ಯಕ್ತಿಯಲ್ಲಿ ಕಂಗೊಳಿಸುವ ಸಮರ್ಥ ಪುರುಷ ವೇಷಧಾರಿಯಾಗಿ ಗುರುತಿಸಲ್ಪಡುವವರು. ಅಮೃತೇಶ್ವರಿ 2, ಹಿರಿಯಡಕ 1, ಸಾಲಿಗ್ರಾಮ 2, ಪೆರ್ಡೂರು 2, ಹಾಲಾಡಿ 2, ಮಾರಣಕಟ್ಟೆ ಮೇಳದಲ್ಲೇ ಮೂರುದಶಕಗಳ ಕಲಾಕೃಷಿ ಕಂಡವರು, ಅನಂತಕುಲಾಲರ ಸುದೀರ್ಘ ರಂಗವ್ಯವಸಾಯ 39 ವರ್ಷ, ಕುಲಾಲರ ಕಲಾವಂತಿಕೆಯ ಕುಲುಮೆಯಲ್ಲಿ ಅರಳಿದ ಶ್ರೀಕೃಷ್ಣ, ಶ್ರೀರಾಮ, ಅಭಿಮನ್ಯು, ಬಬ್ರುವಾಹನ, ಸುಧನ್ವ, ಅರ್ಜುನ, ದ್ರೋಣ, ಮಾರ್ತಂಡತೇಜ, ಭರತ, ಪುಷ್ಕಳ ದುಷ್ಯಂತ ಮೊದಲಾದ ಪೌರಾಣಿಕ ಭೂಮಿಕೆಗಳು ಸೊಗಸಾದ ರಂಗಶಿಲ್ಪಗಳಾಗಿ ಸಚೇತನವಾಗಿವೆ.

ಮಡದಿ ಲೀಲಾ, ಸುಧೀರ, ಸುದರ್ಶನ, ಸುಬ್ರಹ್ಮಣ್ಯ, ಸುರೇಶ ಮಕ್ಕಳು. ಶ್ರೀಯುತರಿಗೆ ಸ್ಥಳೀಯ ಸಂಘ-ಸಂಸ್ಥೆಗಳಿಂದ ಸಮ್ಮಾನ, ಕುಂದಾಪುರ ಲಕ್ಷ್ಮೀವೆಂಕಟೇಶ್ವರ ದೇವಳ ವತಿಯಿಂದ ಹಾಗೂ ಉಡುಪಿ ಶ್ರೀಕೃಷ್ಣ ಮಠದ 'ಯಕ್ಷಸಂಧ್ಯಾ ಸಪ್ತಾಹ ವತಿಯಿಂದ ಗೌರವ ದೊರಕಿರುತ್ತದೆ.



ಅನಂತ ಪದ್ಮನಾಭ, ಎಚ್. ಎಸ್.

*ಹೊಸಮನೆ, ಅಂಚೆ : ಸೀತೂರು,*
*ನರಸಿಂಹ ರಾಜಪುರ ತಾಲೂಕು, ಚಿಕ್ಕಮಂಗಳೂರು ಜಿಲ್ಲೆ*
*ದೂರವಾಣಿ : 08265 231011, 94487 44601*

ವೇಷ, ಭಾಷೆ, ನೃತ್ಯ, ಅಭಿನಯ, ರಂಗನಡೆ ಎಲ್ಲದರಲ್ಲಿಯೂ ಯಕ್ಷಗಾನೀಯತೆಯ ಗರಿಷ್ಠ ಗುಣಮಟ್ಟ ಕಾಯ್ದುಕೊಂಡ ಸಮರ್ಥ ವೇಷಧಾರಿ ಎಚ್. ಎಸ್. ಅನಂತ ಪದ್ಮನಾಭ.

ಚಿರಪರಿಚಿತ ನಾಮಧೇಯದ ಅಣ್ಣಾಜಿ ರಾವ್. ಚಿಕ್ಕಮಂಗಳೂರು ಜಿಲ್ಲೆಯ ಸೀತೂರು ಅಣ್ಣಾಜಿಯವರ ಜನ್ಮಸ್ಥಳ. ಎಚ್. ಎಸ್. ಮಧ್ವರಾಜ್ - ಸರಸ್ವತಿ ಶ್ರೀಯುತರ ಜನಕ-ಜನನಿ, ಎಸ್.ಎಸ್.ಎಲ್.ಸಿ ವರೆಗೆ ಇವರ ಶೈಕ್ಷಣಿಕ ಸಂಸ್ಕಾರ. 28ರ ವಯಸ್ಸಿನಲ್ಲಿ ಯಕ್ಷಗಾನ ಸಂಚಾರ.

ಎಳವೆಯಲ್ಲಿಯೇ ಅಣ್ಣಾಜಿಯವರಿಗೆ ಕಲೆ, ಸಂಸ್ಕೃತಿಯಲ್ಲಿ ವಿಶೇಷ ಒಲವಿತ್ತು. ಯಕ್ಷಗಾನ, ನಾಟಕಗಳನ್ನು ನೋಡುವ ಗೀಳು ತೀವ್ರವಾಗಿತ್ತು. ಇವರ ದೊಡ್ಡಪ್ಪ ಹಾಗೂ ಸೋದರಮಾವ ಯಕ್ಷಗಾನ ರಂಗದಲ್ಲಿ ವ್ಯವಸಾಯಿಗಳಾಗಿದ್ದರು. ಇದರಿಂದಾಗಿ ಯಕ್ಷಕಲೆಯ ಸಾಮೀಪ್ಯ, ಸಂಸರ್ಗ ಸುಲಭ ಸಾಧ್ಯವಾಯಿತು.

ಪೇತ್ರಿ ಮಂಜುನಾಥ ಪ್ರಭು, ಹೊನ್ನೇ ಕುಡಿಗೆ ಗೋಪಾಲಕೃಷ್ಣಯ್ಯ, ಹಳ್ಳಾಡಿ ಸುಬ್ರಾಯಮಲ್ಯ ಅವರ * ಶಿಷ್ಯನಾಗಿ ಯಕ್ಷವಿದ್ಯಾ ಸಂಪನ್ನರಾದ ಅಣ್ಣಾಜಿರಾವ್ ಶ್ರೀವಿನಾಯಕ ಯಕ್ಷಗಾನ ಮಂಡಳಿ, ಸೀತೂರು ಇಲ್ಲಿ ಹದಿನೈದು ವರ್ಷಗಳ ಕಾಲ ಕಲಾ ತಿರುಗಾಟ ನಡೆಸಿದವರು. ಗುತ್ಯಮ್ಮ ಮೇಳ ಹಾಗೂ ಸೋಮವಾರ - ಸಂತೆ ಹೊಸಹಳ್ಳಿ ಮೇಳದಲ್ಲಿ ಎರಡುವರ್ಷ ದುಡಿದಿದ್ದರು. ಸುಮಾರು 2 ದಶಕಗಳ ಕಾಲ ಶ್ರೀಯುತರ ಕಲಾಸೇವೆ

ವೇಷಧಾರಿಯಾಗಿ ನಡೆದಿದೆ. ಪ್ರಸ್ತುತ ಮೂರು ಮೇಳಗಳು ಸಂಯುಕ್ತವಾಗಿ ಸಂಚರಿಸುತ್ತಿದ್ದು ಅಣ್ಣಾಜಿ ರಾವ್ ಅವರು ಈ ಮೇಳಗಳ ಪ್ರಧಾನ ಸೂತ್ರವಾಗಿದ್ದಾರೆ.

ಅಣ್ಣಾಜಿ ರಾವ್ ಅವರ ಈಶ್ವರ, ಕಂಸ, ದುಷ್ಟಬುದ್ಧಿ, ಜಾಂಬವ, ಉಗ್ರಸೇನ, ದುರ್ಜಯ, ಯಮ, ಹನುಮಂತ, ವೀರಮಣಿ, ಸುಧನ್ವ, ಅರ್ಜುನ, ಸಾಲ್ವ, ರಾವಣ, ಮಧು, ರಕ್ತಜಂಘ, ಮೊದಲಾದ ಪುರಾಣ ಪಾತ್ರಗಳು ಕಲಾರಸಿಕರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿವೆ. ಶ್ರೀಯುತರು ಕೈಲಾಸ ಶಾಸ್ತ್ರಿ, ಚಂದಗೋಪ ಮೊದಲಾದ ಗಂಭೀರ ನಡೆಯ ಹಾಸ್ಯಭೂಮಿಕೆಯನ್ನು ಸಮರ್ಥ-ವಾಗಿ ನಿರ್ವಹಿಸಿದವರು. ಅಣ್ಣಾಜಿ ರಾವ್ ಅವರ ಧರ್ಮಪತ್ನಿ ಜಯಲಕ್ಷ್ಮೀ ಮಧ್ವರಾಜ್, ವಿಜಯರಾಜ್ ಮತ್ತು ರಂಜಿತಾ ಮಕ್ಕಳು.

ಕನ್ನಡ ಸಾಹಿತ್ಯ ಪರಿಷತ್, ಕೆನರಾ ಬ್ಯಾಂಕ್ ವತಿಯಿಂದ ಹಾಗೂ ಹತ್ತಾರು ಸಂಘ ಸಂಸ್ಥೆಗಳಿಂದ ಅಣ್ಣಾಜಿ ರಾವ್ ಅವರಿಗೆ ಸಂಮಾನ ದೊರಕಿರುತ್ತದೆ.



**ಅರುಣಕುಮಾರ ಶೆಟ್ಟಿ, ಆಜ್ರಿ**

*ಆರೆಬೈಲುಮನೆ, ಕನ್ನುಕೆರೆ – ತೆಕ್ಕಟ್ಟೆ, ಅಂಚೆ : ತೆಕ್ಕಟ್ಟೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಯಕ್ಷಗಾನರಂಗದ ಖಳ ಪಾತ್ರಗಳಿಗೆ ವಿಶೇಷ ಜೀವಕಳೆ ನೀಡುವ ಸಂಪನ್ನ ಕಲಾವಿದ ಆಜಿ ಅರುಣಕುಮಾರ ಶೆಟ್ಟಿ.

ಕುಂದಾಪುರ ತಾಲೂಕಿನ ಆಜಿ ಎಂಬ ಹಳ್ಳಿಯಲ್ಲಿ 1971ರ ಜನವರಿ 4ರಂದು, ಶೀನಪ್ಪ ಶೆಟ್ಟಿ-ಗಿರಿಜಮ್ಮ ಶೆಟ್ಟಿ ದಂಪತಿಯ ಸುಪುತ್ರರಾಗಿ ಜನಿಸಿದ ಅರುಣಕುಮಾರ ಶೆಟ್ಟರು 5ನೇ ಇಯತ್ತೆಗೆ ಶರಣು ಹೊಡೆದು, ತನ್ನ 16ರ ಹರೆಯದಲ್ಲಿ ಕಲಾಜಗತ್ತು ಪ್ರವೇಶಿಸಿದರು.

ಹೊಳಂದೂರು ಸಂಜೀವ ಶೆಟ್ಟಿ, ಆದ್ರೆ ವಿಠಲ ಶೆಟ್ಟಿ ಅವರ ಪ್ರೇರಣೆಯನ್ನು ಪಡೆದು ರಂಗಬದುಕು ಕಂಡ ಶ್ರೀಯುತರು ಆರೋಡು ಗೋವಿಂದರಾಯ ಶೆಣೈ ಅವರಲ್ಲಿ ಸಶಕ್ತ ಯಕ್ಷಶಿಕ್ಷಣ ಪಡೆದವರು.

ಕಮಲಶಿಲೆ 5, ಪೆರ್ಡೂರು 2, ಮಡಾಮಕ್ಕಿ 1, ಹಾಲಾಡಿ 2, ಮಂದಾರ್ತಿ 11, ಹೀಗೆ 21ವರ್ಷಗಳ ಕಲಾವ್ಯವಸಾಯ ಪೂರೈಸಿದ್ದಾರೆ.

ಪಾತ್ರೋಚಿತ ಸ್ವರಭಾರ, ರಂಗವ್ಯವಹಾರ, ನೃತ್ಯ, ಅಭಿನಯ, ಭಾವ ಪ್ರಕಟಣೆಯಲ್ಲಿ ರಂಜಿಸುವ ಶೆಟ್ಟರು ಕಂಸ, ದುಷ್ಟಬುದ್ಧಿ, ಸಾಲ್ವ, ಕೌಂಡ್ಲಿಕ, ಕಾಲನೇಮಿ, ಕೀಚಕ, ಮಹಿಷಾಸುರ, ಮಧು-ಕೈಟಭ ಪಾತ್ರಗಳಲ್ಲಿ ಗುರುತಿಸಿಕೊಂಡು ಅಪಾರ ಜನಮನ್ನಣೆ ಗಳಿಸಿದ್ದಾರೆ.

ಪತ್ನಿ ಶಾಂತ ಶೆಟ್ಟಿ, ಅನುಷ, ನಯನ ಮಕ್ಕಳು. ಶ್ರೀಯುತರ ಪ್ರತಿಭಾ ವರ್ಚಸ್ಸಿಗೆ ತಲೆಬಾಗಿ ಅನೇಕಾನೇಕ ಸಂಘ-ಸಂಸ್ಥೆಗಳು ಸಂಮಾನಿಸಿವೆ.



**ಅಶೋಕ ಭಟ್, ಸಿದ್ಧಾಪುರ**

*ಹೊನ್ನೆಗುಂಡಿ, ಅಂಚೆ: ಸಿದ್ದಾಪುರ, ಸಿದ್ಧಾಪುರ ತಾಲೂಕು (ಉ.ಕ)*
*ದೂರವಾಣಿ : 94802 20185*

ಯಕ್ಷಗಾನ ಗುರುಬೋಧಿತ ಮೂಲ ಶೈಕ್ಷಣಿಕ ಸಂಸ್ಕಾರದೊಂದಿಗೆ ಸೃಜನಶೀಲ ಪ್ರತಿಭಾ ವೈಖರಿಯನ್ನು ರಂಗಮಂಚದಲ್ಲಿ ಅಭಿವ್ಯಕ್ತಿಸುವ ಕಲಾವಿದ ಅಶೋಕಭಟ್ ಸಿದ್ದಾಪುರ.

ಉತ್ತರ ಕನ್ನಡ ಸಿದ್ದಾಪುರ ಎಂಬಲ್ಲಿ ಜನ್ಮತಾಳಿದ ಅಶೋಕಭಟ್ ತಿಮ್ಮಣ್ಣ ಗಣಪತಿ ಭಟ್- ಯಶೋಧಾ ಭಟ್ ದಂಪತಿಯ ಸುಪುತ್ರ 17-12- 1961ರಲ್ಲಿ ಭಟ್ಟರ ಹುಟ್ಟು. ಹತ್ತನೇ ಇಯತ್ತೆಯವರೆಗೆ ಅವರ ಅಕ್ಷರ ಪಯಣ. 17ರ ಹರೆಯದಲ್ಲೇ ಯಕ್ಷಗಾನ ರಂಗಜೀವನಯಾನ. ಇವರ ತಂದೆ, ಅಣ್ಣ, ಸೋದರಮಾವ, ಎಲ್ಲರೂ ಈ ರಂಗಭೂಮಿಯಲ್ಲಿ ಕಲಾವಿದರಾಗಿ ದುಡಿದವರು. ಹೀಗಾಗಿ ಕೌಟುಂಬಿಕ ಕಲಾ ಹಿನ್ನೆಲೆ ಎಂಬುದು ಅಶೋಕಭಟ್ಟರ ಯಕ್ಷಗಾನ ಕಲಾಸಕ್ತಿಗೆ ನೀರೆರೆದು ಪೋಷಿಸಿತು. ಉಡುಪಿ ಯಕ್ಷಗಾನ ಕೇಂದ್ರದಲ್ಲಿ ನೀಲಾವರ ರಾಮಕೃಷ್ಣಯ್ಯ, ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗ ಮೊದಲಾದ ಸುಯೋಗ್ಯ ಯಕ್ಷಗುರುಗಳಿಂದ ಸಶಕ್ತ ಕಲಾವಿದ್ಯೆಯನ್ನು ಬೋಧಿಸಿಕೊಂಡ ಅಶೋಕಭಟ್ಟರು ಸತತ ಅಧ್ಯಯನ, ವೃತ್ತಿನಿಷ್ಠೆಯಿಂದ ಬಣ್ಣದ ಬದುಕಿನಲ್ಲಿ ಸಮರ್ಥ ಕಲಾವಿದರಾಗಿ ರೂಪುಗೊಂಡರು.

ಪುರುಷವೇಷ, ಪುಂಡುವೇಷ, ಸ್ತ್ರೀವೇಷ, ಹಾಸ್ಯ ಹೀಗೆ ಭಟ್ಟರು ಭಿನ್ನ ಭಿನ್ನ ಭೂಮಿಕೆಗಳಲ್ಲಿ ತನ್ನತನವನ್ನು ಮೆರೆದು ಕಲಾರಸಿಕರ ಮನ ಮೆಚ್ಚಿಸಿದವರು. ತೀವ್ರಗತಿಯ ನೃತ್ಯ, ಅಭಿನಯ, ಕೌಶಲದೊಂದಿಗೆ ಪುಂಡುವೇಷದಲ್ಲೂ, ಆಕರ್ಷಕ ರೂಪ, ಲಾಲಿತ್ಯದೊಂದಿಗೆ ಸ್ತ್ರೀಭೂಮಿಕೆಗಳಲ್ಲೂ, ಸದಭಿರುಚಿಯ ವೈನೋದಿಕತೆ-ಯಲ್ಲಿ ಹಾಸ್ಯ ಪಾತ್ರಗಳಲ್ಲೂ ಮೆರೆಯುವ ಅಶೋಕ ಭಟ್ಟರ ಅಭಿಮನ್ಯು, ಶ್ರೀಕೃಷ್ಣ, ಬಬ್ರುವಾಹನ, ಧರ್ಮಾಂಗದ, ಮೀನಾಕ್ಷಿ, ಭ್ರಮರಕುಂತಳೆ, ಯೋಜನಗಂಧಿ, ಕೈಲಾಸಶಾಸ್ತ್ರಿ, ಚಂದಗೋಪ ಮೊದಲಾದ ಪಾತ್ರಗಳು ಜನಪ್ರಿಯವಾಗಿವೆ.

ಉತ್ತಮ ವಾಗಿಯಾಗಿರುವ ಅಶೋಕಭಟ್ಟರು ತಾಳಮದ್ದಳೆ ಅರ್ಥಧಾರಿಯೂ ಹೌದು. ಕೆರೆಮನೆ 6, ಅಮೃತೇಶ್ವರಿ 1, ಸಾಲಿಗ್ರಾಮ 13, ಹೀಗೆ ಯಕ್ಷಕ್ಷೇತ್ರದಲ್ಲಿ ಸಾರ್ಥಕ 'ವಿಂಶತಿ' ಕಲಾಯಾತ್ರೆ ಇವರದ್ದಾಗಿದೆ. ಚಿಟ್ಟಾಣಿ, ಯಾಜಿ, ಕೊಂಡದಕುಳಿ, ಕೆರೆಮನೆ, ಸಾಲಿಗ್ರಾಮ, ಮೇಳಗಳ ಅತಿಥಿ ಕಲಾವಿದರಾಗಿ ಕಲಾಸೇವೆಗೈಯುತ್ತಿದ್ದಾರೆ.

ಪತ್ನಿ ಶೈಲಜಾ, ಪುತ್ರ ಅಪೂರ್ವ ಅವರನ್ನೊಳಗೊಂಡ ಕಿರು ಸಂಸಾರಸ್ಥ, ಶ್ರೀಯುತರನ್ನು ಸಿದ್ದಾಪುರದಲ್ಲಿ 'ಯಕ್ಷ ಚಿರಕನ್ಯ' ಸಾಗರದಲ್ಲಿ ಯಕ್ಷಪಾದರಸ ಬಿರುದಿನೊಂದಿಗೆ ಸಂಮಾನಿಸಲಾಗಿದೆ. ಡಿ. ಜಿ. ಹೆಗಡೆ ಪ್ರತಿಷ್ಠಾನ, ಹಣಜಿಬೈಲು ಮಹಾಗಣಪತಿ ಯಕ್ಷಗಾನ ಮಂಡಳಿ ವತಿಯಿಂದ ಗೌರವಿಸಲಾಗಿದೆ.



ಆನಂದ ಶೆಟ್ಟಿ, ಐರಬೈಲು

ಬಂಟ್ವಾಡಿ ಕೆಳಾಕಳಿ, ದೊಡ್ಮನೆ, ಅಂಚೆ : ಹಕ್ಲಾಡಿ,
ಕುಂದಾಪುರ ತಾಲೂಕು
ದೂರವಾಣಿ : 94493 87547

ಮಧ್ಯಮ ತಿಟ್ಟಿನ ಗಾಂಭೀರಬದ್ಧ ರಂಗನಡೆಯಲ್ಲಿ ವಿಜೃಂಭಿಸುವ ಪ್ರೌಢಪ್ರತಿಭಾನ್ವಿತ ಕಲಾವಿದ ಐರಬೈಲು ಆನಂದ ಶೆಟ್ಟಿ,

ಕುಂದಾಪುರ ತಾಲೂಕಿನ ಐರಬೈಲು ಎಂಬಲ್ಲಿ ರಾಮಣ್ಣ ಶೆಟ್ಟಿ-ನರಸಮ್ಮ ಶೆಟ್ಟಿ ದಂಪತಿಯ ಸುಪುತ್ರನಾಗಿ 15-10-1961ರಲ್ಲಿ ಜನಿಸಿದ ಆನಂದಶೆಟ್ಟರು, 7ನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ಮಾಡಿ, 15ನೇ ವಯಸ್ಸಿನಲ್ಲೇ ಕಲಾಜೀವನಕ್ಕೆ ಕಾಲಿಟ್ಟರು.

ಸುತ್ತ-ಮುತ್ತ ನಡೆಯುತ್ತಿದ್ದ ಬಯಲಾಟಗಳಿಂದ ಆಕರ್ಷಿತರಾದ ಶೆಟ್ಟರು ಬಾಲ್ಯದಲ್ಲಿಯೇ ಬಣ್ಣದ ಬದುಕಿನ ರಂಗಿನ ಹೊಂಗನಸು ಕಂಡಿದ್ದರು. ಹಾರಾಡಿ ಸರ್ವೋತ್ತಮ ಗಾಣಿಗರಿಂದ ನೃತ್ಯಾಭಿನಯಕಲೆಯನ್ನು ಬೊಧಿಸಿಕೊಂಡ ಆನಂದ ಶೆಟ್ಟರು ಸ್ವಯಂ ಪ್ರತಿಭೆಗೆ ಸತತ ಪರಿಶ್ರಮದ ಸಾಧನೆಯ ಮೆರುಗು ತುಂಬಿ ಸಶಕ್ತ ಕಲಾವಿದರಾಗಿ ರೂಪುಗೊಂಡರು.

ಎರಡನೇ ವೇಷಕ್ಕೆ ಸಮುಚಿತವಾಗುವಂತಹ ಆಳಂಗ, ಗಂಭೀರ ಸ್ವರತ್ರಾಣ, ಶೈಲೀಕೃತ ನೃತ್ಯ, ಅಭಿನಯ ವಿಧಾನ, ಉತ್ಕೃಷ್ಟ ಭಾವಾಭಿವ್ಯಕ್ತಿ, ಪಾಂಡಿತ್ಯಭರಿತ ವಾಕ್‌ಸಂಪತ್ತು ಐರಬೈಲು ಆನಂದ ಶೆಟ್ಟರಲ್ಲಿ ಗುರುತಿಸಬಹುದಾದ ಕಲಾಸಂಪದ.

ಮಾರಣಕಟ್ಟೆ ಮೇಳವೊಂದರಲ್ಲೇ 32 ವರ್ಷಗಳ ಕಲಾ ವ್ಯವಸಾಯ-ದಲ್ಲಿರುವುದು ಶೆಟ್ಟರ ವೃತ್ತಿಮೇಳದ ನಿಷ್ಠೆಯ ಕಾರ್ಯಕ್ಷಮತೆಗೆ ಸಾಕ್ಷಿಯಾಗುತ್ತದೆ.

ಐರಬೈಲು ಆನಂದ ಶೆಟ್ಟರು ನಿರ್ವಹಿಸಿದ ಕಂಸ, ಶ್ರೀರಾಮ, ರಾವಣ, ಭಸ್ಮಾಸುರ, ದುಷ್ಟಬುದ್ಧಿ, ಕರ್ಣ, ಅರ್ಜುನ, ಹರಿಶ್ಚಂದ್ರ, ಕೀಚಕ, ವೀರಮಣಿ, ದುರ್ಜಯ, ಮೂಕಾಸುರ, ಕಾಲನೇಮಿ, ಮೊದಲಾದ ಭೂಮಿಕೆಗಳು ಕಲಾರಸಿಕರ ಮನಮುದಗೊಳಿಸುವಲ್ಲಿ ವಿಶೇಷ ಯಶಸ್ಸು ಸಾಧಿಸಿವೆ.

ಮಡದಿ ಜಯರಾಣಿ ಶೆಟ್ಟಿ ಅವರಲ್ಲಿ ಶಿಲ್ಪಾ, ಶಿಥಿಲಾ, ಸೀಮಾ, ಎಂಬ ಮೂವರು ಮಕ್ಕಳನ್ನು ಪಡೆದ ಅನುಭವಿ ಯಕ್ಷನಟ ಆನಂದಶೆಟ್ಟರನ್ನು ಅನೇಕ ಸಂಘ-ಸಂಸ್ಥೆಗಳು ಸಮ್ಮಾನಿಸಿವೆ.



## ಆನಂದ ಶೆಟ್ಟಿ, ಮಜ್ಜಿಗೆಬೈಲು

*ಯಡಾಡಿ-ಮತ್ಯಾಡಿ, ಅಂಚೆ : ಗುಡ್ಡೆ ಅಂಗಡಿ,*
*ಉಡುಪಿ ತಾಲೂಕು*
*ದೂರವಾಣಿ 99807 53397*

ಪಾರಂಪರಿಕ ವರ್ಚಸ್ಸಿನ ಪ್ರಾತಿನಿಧಿಕ ಕಲಾವಿದರಾಗಿ ಗುರುತಿಸಿಕೊಂಡವರು ಮಜ್ಜಿಗೆಬೈಲು ಆನಂದ ಶೆಟ್ಟಿ.

ನಡು ಬಡಗಿನ ಸಾಂಪ್ರದಾಯಿಕ ವೇಷ ವೈವಿಧ್ಯದಲ್ಲಿ ತನ್ನದೇ ವಿಶಿಷ್ಟ ಛಾಪು ಮೂಡಿಸಿದ ಶೆಟ್ಟರು ಸಮಕಾಲೀನ ರಂಗಭೂಮಿಗೆ ಒಗ್ಗಿಕೊಳ್ಳದೆ ಸನಾತನ ಕಲಾಸಾರವನ್ನೇ ಗಂಭೀರವಾಗಿ ಹೀರಿಕೊಂಡು ಬೆಳೆದ ಶಿಷ್ಟ ಕಲಾವಿದರು. ಇವರ ತಂದೆ ಪ್ರಸಿದ್ಧ ವೇಷಧಾರಿ ಮಜ್ಜಿಗೆ ಬೈಲು ಚಂದಯ್ಯ ಶೆಟ್ಟಿ, ತಾಯಿ ಚಂದಮ್ಮ ಶೆಟ್ಟಿ. 65 ವರ್ಷದ ಆನಂದ ಶೆಟ್ಟರ ವಿದ್ಯಾಭ್ಯಾಸ ಐದನೇ ತರಗತಿಯವರೆಗೆ ತಂದೆಯ ವೇಷಗಾರಿಕೆಯೇ ಎವರ ಕಲಾಬದುಕಿಗೆ ಪ್ರೇರಣೆ. ತೀರ್ಥರೂಪರ ಗುರುತನವೂ ಪುತ್ರನ ಕಲಾಯಾತ್ರೆಗೆ ಸೂತ್ರವಾಗಿ ಸುಸೂತ್ರ-ವಾಯಿತು.

ಆನೆಗುಡ್ಡೆ ವಿನಾಯಕ ದೇವಳದಲ್ಲಿ ಗೆಜ್ಜೆ ಕಟ್ಟಿದ ಶೆಟ್ಟರು ತಂದೆಯವರೊಂದಿಗೆ ಕೊಡವೂರು ಮೇಳಕ್ಕೆ ಪಾದಾರ್ಪಣೆ ಮಾಡಿದರು. ಪ್ರಧಾನ ಪುರುಷ ವೇಷಗಳಾದ ಅರ್ಜುನ, ಪುಷ್ಕಳ, ಸುಧನ್ವ, ಮಾರ್ತಾಂಡ ತೇಜ, ಎರಡನೇ ವೇಷಗಳಾದ ಜಾಂಬವ, ಕರ್ಣ, ಋತುಪರ್ಣ, ಬಲರಾಮ, ಕಮಲಭೂಪ, ಯಯಾತಿ, ದಕ್ಷ, ಭೀಷ್ಮ ಮೊದಲಾದ ಭೂಮಿಕೆಗಳಲ್ಲಿ ತನ್ನತನದ ಛಾಪು ಮೂಡಿಸಿದರು. ಜೋಡಾಟದಲ್ಲಿ ಶ್ರೀಯುತರು ರಂಗಸ್ಥಳದ ಹುಲಿಯಾಗಿ ಘರ್ಜಿಸಿದವರು.

ಗತ್ತುಗಾಂಭೀರ್ಯದ ನಡೆ, ಪ್ರೌಢ ಸಾಹಿತ್ಯಕ ವಾಕ್ಸರಣಿ ಯಕ್ಷಗಾನೀಯ ಸೊಗಡು ಮೈವೆತ್ತ ವೇಷ ವೈಭವ ಮಜ್ಜಿಗೆ ಬೈಲು ಅವರಲ್ಲಿ ಗುರುತಿಸಬಹುದಾಗಿದೆ. ಕೊಡವೂರು 2, ಮಾರಣಕಟ್ಟೆ 5, ಅಮೃತೇಶ್ವರಿ 2, ಸಾಲಿಗ್ರಾಮ 1, ಪೆರ್ಡೂರು 8, ಮಂದಾರ್ತಿ 17, ಹೀಗೆ 35ವರ್ಷಗಳ ಕಾಲ ರಂಗಕೃಷಿ ನ ಡೆ ಸಿ ಮಂದಾರ್ತಿಮೇಳದ ಪ್ರಧಾನವೇಷಧಾರಿಯಾಗಿ ಮುಂದುವರಿಯುತ್ತಿದ್ದಾರೆ.

ರತ್ನಾಶೆಟ್ಟಿ ಇವರ ಬಾಳ ಸಂಗಾತಿ, ಸವಿತಾ, ಕವಿತಾ, ಸಂತೋಷ ಸೌಮ್ಯಾ ನಾಲ್ವರು ಮಕ್ಕಳು.

ಜಾಗತಿಕ ಬಂಟ ಪ್ರತಿಷ್ಠಾನದ ಪ್ರಶಸ್ತಿ, ಮಸ್ಕತ್‌ನಲ್ಲಿ ಅಭಿಮಾನಿಗಳ ಗೌರವ ಸಂಮಾನವೂ ಇವರಿಗೆ ದೊರಕಿರುತ್ತದೆ.



ಉಮೇಶ ಸುವರ್ಣ, ಗೋಪಾಡಿ

*ಸಂಜಯ ಗಾಂಧಿ ರಸ್ತೆ, ಕಾಮತ್ ಮೋಟಾರ್ಸ್*
*ಎದುರು, ಹಂಗಳೂರು ಗ್ರಾಮ ಅಂಚೆ : ಹಂಗಳೂರು,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.*

ಹೆಚ್ಚೇನಿನ ಸ್ವರವಾಹಿನಿಯನ್ನು ಹರಿಸಿ, ರಂಗಮಂಚದ ಕಲಾಭಿನೇತರ ಹೆಜ್ಜೆ-ಗೆಜ್ಜೆಯಲ್ಲಿ ಸಾಂಪ್ರದಾಯಿಕ ರಂಗವೈಭವವನ್ನು ಪ್ರತಿಧ್ವನಿಸುವ ಪ್ರಬುದ್ಧ ಭಾಗವತ ಗೋಪಾಡಿ ಉಮೇಶ ಸುವರ್ಣ,

ಕುಂದಾಪುರ ತಾಲೂಕಿನ ಗೋಪಾಡಿಯ ಕೂಸ ಸುವರ್ಣ-ಗುಲಾಬಿ ದಂಪತಿ ಪುತ್ರ ಉಮೇಶ ಸುವರ್ಣರಿಗೆ 38ರ ಹರೆಯ. ಎಂಟನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿ ಎಳವೆಯಲ್ಲೇ ಯಕ್ಷಗಾನ ಪ್ರಪಂಚವನ್ನು ಪ್ರವೇಶಿಸಿದ ಸುವರ್ಣರಿಗೆ ಗಾನ ಗಾರುಡಿಗ ಕಾಳಿಂಗನಾವಡರ ಕಂಚಿನ ಕಂಠಸಿರಿಯ ಭಾಗವತಿಕೆಯ ಪ್ರಭಾವವೇ ಕಲಾಜೀವನಕ್ಕೆ ಪ್ರೇರಣೆಯಾಯಿತು.

ಹಿರಿಯಭಾಗವತ ಐರೋಡಿ ರಾಮಗಾಣಿಗ ಅವರಲ್ಲಿ ತಾಳಪದ್ಧತಿ ಹಾಗೂ ಹೆಜ್ಜೆಗತಿಯ ಪ್ರಾಥಮಿಕ ಶಿಕ್ಷಣ ಪಡೆದು ಆರಂಭದಲ್ಲಿ ಹವ್ಯಾಸೀ ವೇಷಧಾರಿಯಾಗಿ ರಂಗಮಂಚವೇರಿದರು.

ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದಲ್ಲಿ ಕೆ. ಪಿ. ಹೆಗಡೆಯವರ ಶಿಷ್ಯನಾಗಿ ಸಮರ್ಪಕ ಭಾಗವತಿಕೆ ಅಭ್ಯಸಿಸಿದ ಉಮೇಶ ಸುವರ್ಣ ಅವರು ಪ್ರಸಂಗಕರ್ತ ಡಾ. ವೈ ಚಂದ್ರಶೇಖರ ಶೆಟ್ಟರ ಸಂಪೂರ್ಣ ಸಹಕಾರದೊಂದಿಗೆ ಶ್ರೀ ಮಾರಣಕಟ್ಟೆ ಮೇಳದಲ್ಲಿ . ತಾಳ ಹಿಡಿದು ಒಂದು ವರ್ಷ ಸಂಗೀತಗಾರಿಕೆ, ಎರಡುವರ್ಷ ಸಹಭಾಗವತಿಕೆ ಹಾಗೂ ಪ್ರಧಾನ ಭಾಗವತರಾಗಿ ಜವಾಬ್ದಾರಿಯುತ ಸ್ಥಾನ- ಮಾನ್ಯತೆಯಿಂದ ಅದೇ ಮೇಳದಲ್ಲಿ ಸಾರ್ಥಕ 20 ವರ್ಷ ಪೂರೈಸಿದ್ದಾರೆ.

ಶ್ರೀಯುತರಿಗೆ ಹಿರಿಯಭಾಗವತ ಮರವಂತೆ ನರಸಿಂಹದಾಸರು ಅಪಾರ ರಂಗಾನುಭವ, ಪ್ರಸಂಗಮಾಹಿತಿಯನ್ನೂ ನೀಡಿದ್ದಾರೆ. ಎಂ. ಎಂ. ಹೆಗ್ಡೆ, ಚಿತ್ತೂರು ಮಂಜಯ್ಯಶೆಟ್ಟರ ಹಾರ್ದಿಕ ಕಲಾಮಾರ್ಗದರ್ಶನದಲ್ಲಿ ಭರವಸೆಯ ಭಾಗವತರಾಗಿ ರೂಪಗೊಂಡ ಉಮೇಶ ಸುವರ್ಣರ ಇಂಪಿನ ಕಂಠ ಸಿರಿಯಲ್ಲಿ ಪೌರಾಣಿಕ ಪ್ರಸಂಗಗಳು ಸಚೇತನವಾಗುತ್ತವೆ.

ಸಮಗ್ರಭೀಷ್ಮ, ಶಶಿಪ್ರಭಾ ಪರಿಣಯ, ಕರ್ಣಾರ್ಜುನ, ಚಂದ್ರಹಾಸ ಚರಿತ್ರೆ, ಕೃಷ್ಣಾರ್ಜುನ, ದೌಪದಿ ಪ್ರತಾಪ ಮೊದಲಾದ ಪುರಾಣ ಕಥಾಭಾಗಗಳಲ್ಲಿ ಶ್ರೀಯುತರ ಗಾನ ಪ್ರತಿಭೆ ಪ್ರಶಂಸನೀಯ.

ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್, ಹೈದರಾಬಾದ್ ಕರಾವಳಿ ಮೈತ್ರಿ ಸಂಘ, ಬೀಜಾಡಿ ಫಿಶರೀಸ್ ಸ್ಕೂಲ್, ಆಲೂರು ರಾಮೇಶ್ವರ ಸಂಘ, ಸೇರಿದಂತೆ ಅನೇಕ ಸಂಘ ಸಂಸ್ಥೆಗಳಿಂದ ಸಂಮಾನಿತರಾದ ಪ್ರತಿಭಾವಂತ ಭಾಗವತ ಉಮೇಶ ಸುವರ್ಣರು ಪತ್ನಿ ರೇವತಿ. ಮೋದನ, ಮೋಹನ ಮಕ್ಕಳು.



ಎಂ. ಎ ನಾಯ್ಕ

*'ಕಲಾಶ್ರೀ' ನಿಲಯ (ತಂತ್ರಾಡಿ), ಮಂದಾರ್ತಿ ಪೋಸ್ಟ್,*
*ಕಾಡೂರು ಗ್ರಾಮ, ಉಡುಪಿ ಜಿಲ್ಲೆ*
*ದೂರವಾಣಿ: 98448 42937*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಪರಂಪರೆಯ ಪ್ರಾತಿನಿಧಿಕ ಸ್ತ್ರೀವೇಷಧಾರಿ ಮಂದಾರ್ತಿ ಅಣ್ಣು ನಾಯ್ಕ ಯಾನೆ ಎಂ. ಎ. ನಾಯ್ಕ-ಸಮೃದ್ಧ ಕಲಾವಂತಿಕೆಯ ಉಜ್ವಲ ಯಕ್ಷತಾರೆ.

ಮಂದಾರ್ತಿಯ ಕೊತ್ತೂರು ಎಂಬಲ್ಲಿ ಹುಟ್ಟಿ ಬೆಳೆದ ಎಂ. ಎ. ನಾಯ್ಕರು ಕರಿಯ ಮರಕಾಲ- ಬುಡ್ಡು ಮರಕಾಲ್ತಿ ಅವರ ಸುಪುತ್ರರಾಗಿ 14-02- 1952ರಲ್ಲಿ ಜನಿಸಿದರು.

ಬಾಲ್ಯದಲ್ಲಿ ಕಾಡುವ ಬಡತನದಿಂದಾಗಿ 6ನೇ ತರಗತಿಗೇ ಶರಣು ಹೊಡೆದು, ಪರಿಸರದ ಯಕ್ಷಗಾನ ಬಯಲಾಟಗಳಿಂದ ಆಕರ್ಷಿತರಾಗಿ ತನ್ನ 13ನೇ ವಯಸ್ಸಿನಲ್ಲೇ ಯಕ್ಷಗಾನ ಕ್ಷೇತ್ರಕ್ಕೆ ಹೆಜ್ಜೆ ಹಾಕಿದರು.

1964-65ರಲ್ಲಿ ಸುರಗಿಕಟ್ಟೆ ಹೆರಿಯಗಾಣಿಗರು ಇವರನ್ನು ಅಮೃತೇಶ್ವರಿ ಮೇಳಕ್ಕೆ ಸೇರಿಸಿದರು. ನಾರ್ಣಪ್ಪ ಉಪ್ಪರ, ಗುರು ವೀರಭದ್ರನಾಯಕ್, ಶಿರಿಯಾರ ಮಂಜುನಾಯ್ಕರ ಗುರುತನದಲ್ಲಿ ಅಣ್ಣು ನಾಯ್ಕರು ಅನನ್ಯ ಕಲಾವಿದ್ಯೆಯನ್ನು ಅರ್ಜಿಸಿಕೊಂಡು ಸಂಪನ್ನ ಪ್ರತಿಭೆಯಾಗಿ ರೂಪುಗೊಂಡರು.

ಅಮೃತೇಶ್ವರಿ, ಮೂಲ್ಕಿ, ಶಿರಿಸಿ ಪಂಚಲಿಂಗ, ಶಿರಸಿ-ಮಾರಿಕಾಂಬಾ, ಇಡಗುಂಜಿ, ಮಂದಾರ್ತಿಮೇಳಗಳಲ್ಲಿ ಸುಮಾರು 42 ವರ್ಷಗಳ ಕಲಾಕೃಷಿಯನ್ನು ನಡೆಸಿ ಶ್ರೇಷ್ಠ ಸ್ತ್ರೀವೇಷಧಾರಿಯಾಗಿ ಜನಪ್ರಿಯರಾಗಿದ್ದಾರೆ. ಕೋಟ ವೈಕುಂಠರೊಂದಿಗೆ ಅಮೃತೇಶ್ವರಿ ಮೇಳದ ವ್ಯವಸ್ಥಾಪಕತ್ವ ನಡೆಸಿದ ಅನುಭವವೂ ಇವರಿಗಿದೆ. ಪ್ರಸ್ತುತ ಶ್ರೀಯುತರು ಹೃದಯ ನೋವಿನ ತೊಂದರೆಯಿಂದಾಗಿ ವೃತ್ತಿ ಮೇಳದಿಂದ ದೂರಾಗಿ ವಿಶ್ರಾಂತ ಜೀವನದಲ್ಲಿದ್ದಾರೆ.

ಎಂ. ಎ ನಾಯ್ಕರದು ಸ್ತ್ರೀವೇಷಕ್ಕೊಪ್ಪುವ ಸುಂದರ ಅಂಗಶಿಲ್ಪ. ಆಕರ್ಷಕ ಮುಖಮಂಡಲ, ಪರಿಶುದ್ಧ ರಂಗನಡೆ, ಅದ್ಭುತ ಭಾವಾಭಿವ್ಯಕ್ತಿ, ನಿರರಳವಾದ ಮಧುರಕಂಠದ ಪ್ರಗಲಪಾಂಡಿತ್ಯದ ವಚೋವಿಲಾಸ, ಸುಸ್ಪಷ್ಟ ನೃತ್ಯಾಭಿನಯ, ಪಾತ್ರಗಳ ಮೂಲಕ ಪರಕಾಯಪ್ರವೇಶ ಮಾಡಬಲ್ಲ ಕಲಾ ಜಾಣೆಯನ್ನು ಹೊಂದಿದವರಿವರು. ಇವರ ಶಶಿಪ್ರಭೆ, ಶ್ರೀದೇವಿ, ಸೈರೇಂಧ್ರಿ, ದಮಯಂತಿ, ದಾಕ್ಷಾಯಿಣಿ, ವಿದ್ಯಾಧರೆ, ಅಂಬೆ, ಚಂದ್ರಮತಿ, ಸೀತೆ, ಕಯಾದು, ಚಿತ್ರಾಂಗದೆ.... ಇಂತಹ ಪೌರಾಣಿಕ ಸ್ತ್ರೀಪಾತ್ರಗಳು ರಂಗಸ್ಥಳದಲ್ಲಿ ಕಡೆದಿಟ್ಟ ಜೀವಂತ ಕಲಾಪ್ರತಿಮೆಗಳಾಗಿ ಅಜರಾಮರವಾಗಿವೆ.

ಅಪಾರ ಕಲಾನುಭವವನ್ನು ಹಲವು ಯುವ ಕಲಾವಿದರಿಗೆ ಧಾರೆಯೆರೆದ ಎಂ. ಎ. ನಾಯ್ಕರು ಬಡಗುತಿಟ್ಟಿನ ಸ್ತ್ರೀವೇಷದ ಸಾಂಪ್ರದಾಯಿಕತೆಯಲ್ಲಿ ಅಗ್ರಸ್ಥಾನ ಕಂಡವರು. ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಪೋಲೆಂಡ್, ಹಾಂಕಾಂಗ್ ಮೊದಲಾದ ವಿದೇಶಗಳಲ್ಲೂ ತನ್ನ ಕಲಾಪ್ರತಿಭೆಯನ್ನು ಮೆರೆದ ಮೇರು ಕಲಾವಿದ ಎಂ. ಎ ನಾಯ್ಕರು. ಪತ್ನಿ ಗುಲಾಬಿ. ಪ್ರಕಾಶ್, ವಾಣಿಶ್ರೀ, ದೀಪಾ, ಪ್ರೀತಿ ಎಂಬ ನಾಲ್ಕು . ಮಂದಿ ಮಕ್ಕಳು.

ಶ್ರೀಯುತರಿಗೆ ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ ದೊರಕಿರುತ್ತದೆ. ಹೆಗ್ಗೋಡು 'ಸಾಕೇತಕಲಾವಿದರು' ತಂಡದಿಂದ ಹಾಗೂ ಬೆಂಗಳೂರು, ಮುಂಬೈ, ಉಡುಪಿ ಮೊಗವೀರ ಸಂಘದ ಸಂಮಾನ, ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಸಮ್ಮಾನವೂ ಸೇರಿದಂತೆ ಹರವು ಪುರಸ್ಕಾರ ದೊರಕಿರುತ್ತದೆ.



## ಕುಷ್ಠ ಮಡಿವಾಳ, ವಾಲ್ತೂರು

ಕಾವ್ರಾಡಿ ಗ್ರಾಮ, ಅಂಚೆ : ನೆಲ್ಲಿ ಕಟ್ಟೆ, ಕುಂದಾಪುರ
ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 08254 207084

ಬಡಗುತಿಟ್ಟು ಯಕ್ಷಲೋಕ ಕಂಡ ಸಾಂಪ್ರದಾಯಿಕ ಸೊಗಡಿನ ಸುಸಮರ್ಥ ಮೂರನೇ ವೇಷಧಾರಿ ವಾಲ್ಲೂರು ಕುಷ್ಠ ಮಡಿವಾಳ.

ಕುಂದಾಪುರ ತಾಲೂಕಿನ ವಾಲ್ಲೂರು ಇವರ ಹುಟ್ಟೂರು. ಗಣಪ ಮಡಿವಾಳ-ಬಚ್ಚಿ ಮಡಿವಾಳಿ ದಂಪತಿಯ ಪುತ್ರನಾಗಿ 20-6-1941ರಲ್ಲಿ ಜನಿಸಿದ ಕೃಷ್ಣ ಮಡಿವಾಳ ಅವರು ಚಿಕ್ಕಂದಿನಿಂದಲೇ ಯಕ್ಷಗಾನದ ಕುರಿತು ವಿಶೇಷ ಒಲವು ಹೊಂದಿದವರು, 5ನೇ ತರಗತಿವರೆಗಿನ ಅಕ್ಷರ ಶಿಕ್ಷಣ ಪಡೆದು, ವಂಡ್ರೆ ಮುತ್ತ ಗಾಣಿಗರ ಪ್ರೇರಣೆಯಂತೆ ತನ್ನ 11ರ ಹರೆಯದಲ್ಲಿ ಇವರು ಬಣ್ಣದ ಲೋಕಕ್ಕೆ ಮುಖ ಮಾಡಿದರು. ದಶಾವತಾರಿ ಗುರು ವೀರಭದ್ರನಾಯಕರ ಶಿಷ್ಯನಾಗಿ ಸಾಂಪ್ರದಾಯಿಕ ಯಕ್ಷ ನೃತ್ಯಕಲೆಯನ್ನು ಪರಿ-ಪೂರ್ಣವಾಗಿ ಸಿದ್ಧಿಸಿಕೊಂಡ ಇವರು ಅನನ್ಯ ಪುರಾಣಜ್ಞಾನವನ್ನು ಹೊಂದಿದವರು.

ಮಾರಣಕಟ್ಟೆ 13, ಸೌಕೂರು 8, ಕಮಲಶಿಲೆ 7, ಗೋಳಿಗರಡಿ 7, ಕಳುವಾಡಿ 5, ಮಂದಾರ್ತಿ 2, ಕೊಲ್ಲೂರು 2, ಅಮೃತೇಶ್ವರಿ 3, ರಂಜದಕಟ್ಟೆ 3, ಹೀಗೆ ವೃತ್ತಿರಂಗಭೂಮಿಯಲ್ಲಿ ಸುದೀರ್ಘ ಐದುದಶಕಗಳ ಸಾರ್ಥಕ ಕಲಾವ್ಯವಸಾಯ ಪೂರೈಸಿ ಪ್ರಸ್ತುತ ವಿಶ್ರಾಂತ ಜೀವನದಲ್ಲಿದ್ದಾರೆ.

ಶ್ರೀಯುತರ ಪುಂಡುವೇಷದ ಗಂಡುಗಾರಿಕೆ ಅಸಾಧಾರಣವಾದುದು. ಬಬ್ರುವಾಹನ, ಲವ-ಕುಶ, ಮೈಂದ-ದ್ವಿವಿದ, ಪ್ರಸೇನ, ಅಭಿಮನ್ಯು ಮೊದಲಾದ ಮೂರನೇ ವೇಷಗಳಲ್ಲಿ ಇವರು ಮೂಡಿಸಿದ ರಂಗಶೌಲ್ಯದ ಛಾಪು ಇಂದಿಗೂ ಹಸಿರಾಗಿದೆ. ಹಾಗೆಯೇ ಶ್ರೀಕೃಷ್ಣ, ಬಲರಾಮ, ಕೌರವ, ಮೊದಲಾದ ಭೂಮಿಕೆಗಳಲ್ಲಿ ತೋರಿದ ಕಲಾವಂತಿಕೆ ಸರ್ವದಾ ಸ್ಮರಣೀಯ. ಶ್ರೀಯುತರು ಮದನಾಕ್ಷಿ, ಭ್ರಮರಕುಂತಳೆ ಮೊದಲಾದ ಗಂಡುಕಳೆಯ ಹೆಣ್ಣು ವೇಷಗಳಲ್ಲೂ ಕಾಣಿಸಿಕೊಂಡಿದ್ದಾರೆ.

ಶ್ರೀಯುತರ ಅನೇಕ ಪ್ರತಿಭಾವಂತ ಶಿಷ್ಯರು ವೃತ್ತಿರಂಗದಲ್ಲಿದ್ದಾರೆ. ಕುಷ್ಠ ಮಡಿವಾಳರು ಮುತ್ತು ಎಂಬವರನ್ನು ವರಿಸಿ, ಪ್ರಕಾಶ್, ಕನಕ, ಗುಲಾಬಿ, ಜ್ಯೋತಿ ಎಂಬ ನಾಲ್ಕು ಮಕ್ಕಳನ್ನು ಪಡೆದಿದ್ದಾರೆ. ಪ್ರಬುದ್ಧ

ಕಲಾವಿದ ವಾಲ್ಲೂರು ಕುಷ್ಟ ಮಡಿವಾಳರನ್ನು ಅಂಪಾರು ಹಳೇವಿದ್ಯಾರ್ಥಿ ಸಂಘ, ಬಿಲ್ಲವ ಸಮಾಜ ಬನ್ನಂಜೆ, ಕುಂದಾಪುರ ಮಡಿವಾಳ ಸಂಘ, ಯಶಸ್ವೀ ಕಲಾವೃಂದ ತೆಕ್ಕಟ್ಟೆ ಮೊದಲಾದ ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



ಕೃಷ್ಣ ಕೊಡೇರಿ

'ಆಶೀರ್ವಾದ ನಿಲಯ', ಅಂಚೆ : ತೆಗ್ಗರ್ಸೆ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 08254 250934; 96325 64913

ಬಡಗುತಿಟ್ಟು ಯಕ್ಷಗಾನ ರಂಗದಲ್ಲಿ ವಿಭಿನ್ನ ವೇಷಗಾರಿಕೆಯಲ್ಲಿ ಸಾಂಪ್ರದಾಯಿಕ ಬೆಡಗು ಮೂಡಿಸುವ ಹಿರಿಯ ಕಲಾವಿದ ಕೊಡೇರಿ ಕೃಷ್ಣ.

ಕುಂದಾಪುರ ತಾಲೂಕಿನ ಕೊಡೇರಿ ಎಂಬ ಪುಟ್ಟ ಹಳ್ಳಿಯಲ್ಲಿ ಅಣ್ಣಪ್ಪ ಪೂಜಾರಿ-ಶಾರದಾ ದಂಪತಿಯ ಸುಪುತ್ರರಾಗಿ ಜನಿಸಿದ ಕೃಷ್ಣ ಅವರು ಐವತ್ತೈದರ ಹೊಸ್ತಿಲಲ್ಲಿರುವ ಸಂಪನ್ನ ಪ್ರತಿಭೆ, ಒಂಭತ್ತನೆ ತರಗತಿಯವರೆಗೆ ವಿದ್ಯಾಭ್ಯಾಸ, ಹದಿನೆಂಟಕ್ಕೆ ಯಕ್ಷಗಾನ ಕಲೆಯ ನೆಂಟತನ ಬಯಸಿದ ಅವರು, ಚಿಕ್ಕಂದಿನಿಂದಲೇ ಈ ರಂಗಭೂಮಿಯ ಕುರಿತು ವಿಶೇಷ ಒಲುಮೆ ಹೊಂದಿದವರು. ಇವರ ಕಲಾಸಕ್ತಿಯನ್ನು ಗುರುತಿಸಿದ ಹೆರಂಜಾಲು ಪದ್ಮನಾಭ ಉಡುಪರು ಬಣ್ಣದ ಬದುಕಿನ ಹಾದಿ ತೋರಿದರು. -

ಹೆರಂಜಾಲು ಸುಬ್ಬಣ್ಣ ಹಾಗೂ ಹೆರಂಜಾಲು ಪದ್ಮನಾಭ ಉಡುಪರ ಗುರುತನದಲ್ಲಿ ಅರಳಿದ ಕೊಡೇರಿಯ ಈ ಕಲಾಕುಸುಮ ಮೂರನೇ ವೇಷಧಾರಿ-ಯಾಗಿ ರಂಗಮಂಚದಲ್ಲಿ ಪರಿಮಳಿಸಿ ಯಕ್ಷರಸಿಕರ ಮನಮುದಗೊಳಿಸಿತು. ಕಳವಾಡಿ ಮೇಳ 1, ನಾಗರಕೊಡಿಗೆ 2, ಮೂಲ್ಕಿ 2, ಅಮೃತೇಶ್ವರಿ 5, ಗೋಳಿಗರಡಿ 5, ಶಿರಸಿ-ಮಾರಿಕಾಂಬಾ 6,

ಮಂದಾರ್ತಿ 3, ಬಚ್ಚಗಾರು 3, ಮಡಾಮಕ್ಕಿ 4, ಹಿರಿಯಡಕ 1, ಹೀಗೆ 34 ವರ್ಷಗಳ ಕಲಾಕೃಷಿಯಲ್ಲಿ ಕೋಡೇರಿಯವರು ಸಂಪದ್ಭರಿತ ಕಲಾವ್ಯಕ್ತಿತ್ವ. ರೂಪಿಸಿಕೊಂಡಿದ್ದಾರೆ.

ರಾಜವೇಷ, ಒತ್ತು ಎರಡನೇ ವೇಷ, ಮುಂಡಾಸುವೇಷಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುವ ಅವರು ಪ್ರಸಂಗ ಸಂದರ್ಭೋಚಿತವಾಗಿ ಎಲ್ಲಾಬಗೆಯ ಗಂಡು ಭೂಮಿಕೆಗಳಿಗೂ ಜೀವ ತುಂಬುತ್ತಾರೆ. ಶ್ರೀಯುತರ ಶಂತನು, ರುಕ್ಕ, ಶಲ್ಯ, ಸಾಲ್ವ, ಶತ್ರುಘ್ನ, ಅರ್ಜುನ, ದೇವೇಂದ್ರ, ಬಲರಾಮ, ಭೀಮ, ಕೌರವ, ಭಸ್ಮಾಸುರ ಪೆರುಮಾಳ ಬಲ್ಲಾಳ ಭೂಮಿಕೆಗಳು ಕಲಾರಸಿಕರ ಮನೋಭೂಮಿಕೆಯಲ್ಲಿ ನೆಲೆಯಾಗಿವೆ.

ಉತ್ತಮ ಭಾಷಾಪ್ರಜ್ಞೆ, ಹಿತಮಿತ ನೃತ್ಯಾಭಿನಯ, ಸುಪುಷ್ಟ ರಂಗ ವಾಹಿತಿ ಇವರಲ್ಲಿ ಗುರುತಿಸಬಹುದಾಗಿದೆ. ಮಡದಿ ಲಕ್ಷ್ಮೀ, ನಾಲ್ಕು ಮಂದಿ ಮಕ್ಕಳು. ಕೊಡೇರಿ ಕೃಷ್ಣ ಅವರು ಹಲವು ಸಂಘ-ಸಂಸ್ಥೆಗಳಿಂದ ಗೌರವ ಸಂಮಾನ ಪಡೆದಿರುತ್ತಾರೆ.



ಕೃಷ್ಣ, ಕೊಳಲಿ

ಕೊಳಲಿ, ಹೊಸಂಗಡಿ ಪೋಸ್ಟ್,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 99450 36525

ಖಚಿತಲಯಸಿದ್ಧಿಯೊಂದಿಗೆ ಪಾದರಸ ಸದೃಶ ಪಾದಗತಿಯನ್ನು ತೋರುವ ಸ್ಪುಟವಾದ ನೃತ್ಯರೇಖೆಯ ಪ್ರಮಾಣಬದ್ಧ ಅಭಿನಯ ಕೌಶಲದ ಪುರುಷ- ಪುಂಡುವೇಷಧಾರಿ ಕೊಳಲಿ ಕೃಷ್ಣ.

ಕುಂದಾಪುರ ತಾಲೂಕಿನ ಯಡಮೊಗೆಯ ಕೊಳಲಿ ಎಂಬಲ್ಲಿ ಗೋವಿಂದ ಶೆಟ್ಟಿ- ಸದಿಯಮ್ಮ ಶೆಟ್ಟಿ ದಂಪತಿಯ ಸುಪುತ್ರರಾಗಿ 1-1-1967ರಲ್ಲಿ ಜನಿಸಿದ ಕೃಷ್ಣ ಶೆಟ್ಟಿಯವರು 5ನೇ ಇಯತ್ತೆಗೆ ಶರಣು ಹೊಡೆದು, ಸುತ್ತ ಮುತ್ತ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳ ಆಕರ್ಷಣೆಯಿಂದ ಬಣ್ಣದ ಬದುಕು ಬಯಸಿ, ತನ್ನ 13ರ ಹರೆಯದಲ್ಲೇ ಯಕ್ಷರಂಗಮಂಚವೇರಿದರು.

ವಿಶ್ವೇಶ್ವರ ಸೋಮಯಾಜಿ, ಸುರೇಂದ್ರ ಆಲೂರು ಅವರ ಗುರುತನದಲ್ಲಿ ಸಮರ್ಪಕ ಯಕ್ಷಶಿಕ್ಷಣವನ್ನು ಪಡೆದ ಕೊಳಲಿ ಕೃಷ್ಣ ಅವರು, ಕಮಲಶಿಲೆ, ಸೌಕೂರು, ಮಾರಣಕಟ್ಟೆ, ಮಂದಾರ್ತಿ, ಪೆರ್ಡೂರು ಮೇಳಗಳಲ್ಲಿ ಸಾರ್ಥಕ 27ವರ್ಷ ಪೂರೈಸಿದ್ದಾರೆ. ಪ್ರಸ್ತುತ ಶ್ರೀಯುತರು ಪೆರ್ಡೂರು ಮೇಳದ ಕಲಾವಿದರು.

ಸುಂದರ ಆಕರ್ಷಕವಾದ ವೇಷಗಾರಿಕೆ, ಮಾತುಗಾರಿಕೆ, ಲವಲವಿಕೆಯ ನೃತ್ಯಗಾರಿಕೆ ಮೊದಲಾದವುಗಳಿಂದ ನಿರ್ವಹಣಾ ಭೂಮಿಕೆಗಳ ಅಂತಸ್ಸತ್ವವನ್ನು ಅರಿತು ರಂಗದಲ್ಲಿ ನಿರೂಪಿಸುವ ಕೊಳಲಿಯವರು ಪುರುಷ ಪಾತ್ರಗಳನ್ನೂ- ಪುಂಡುವೇಷಗಳನ್ನು ಸಮರ್ಥವಾಗಿ ಪೋಷಿಸುವವರು.

ಯಾವ ವಿಧದ ಪಾತ್ರ ನಿರೂಪಣೆಯಲ್ಲೂ ಭಾವನಾತ್ಮಕ ತಲ್ಲೀನತೆಯನ್ನು ಕಂಡುಕೊಳ್ಳುವ ಶ್ರೀಯುತರು ಜೋಡಾಟಗಳಲ್ಲಿ ಗಾಯದ ಹುಲಿಯಾಗುವವರು. ಶ್ರೀಕೃಷ್ಣ, ಅಭಿಮನ್ಯು, ಬಬ್ರುವಾಹನ, ಲವ-ಕುಶ, ಪುಷ್ಕಳ, ಸುಧನ್ವ, ದೇವವೃತ, ಮೊದಲಾದ ಭೂಮಿಕೆಗಳಲ್ಲಿ ತನ್ನದೇ ಕಲಾವಿಶೇಷತೆಯನ್ನು ಕಾಣಿಸಿ ಜನಪ್ರಿಯತೆ ಕಂಡ ಕೊಳಲಿ ಕೃಷ್ಣ ಅವರು ಶೀಲಾವತಿ ಎಂಬುವರನ್ನು ವರಿಸಿ, ಪವಿತ್ರ, ಪ್ರಸಾದ ಎಂಬ ಉಭಯ ಮಕ್ಕಳನ್ನು ಪಡೆದಿದ್ದಾರೆ. ಶ್ರೀಯುತರ ಕಲಾಪ್ರತಿಭೆಯನ್ನು ಗುರುತಿಸಿ ನಾಡಿನ ಹಲವು ಸಂಘ-ಸಂಸ್ಥೆಗಳು ಸಂಮಾನಿಸಿವೆ.



**ಕೃಷ್ಣ ಗಾಣಿಗ, ಹೊಸಂಗಡಿ**

*ಅಂಚೆ : ಎಡಮೊಗೆ, ಹೊಸಂಗಡಿ,*
*ಕುಂದಾಪುರ ತಾಲೂಕು*
*ದೂರವಾಣಿ : 98808 79238*

ಮುದ್ದಾದ ವೇಷವೈಖರಿ, ಮಾಧುರ ಪೂರ್ಣ ಕಂಠಸಿರಿ, ಸ್ತ್ರೀ ಲಾಲಿತ್ಯದ ನೃತ್ಯಾಭಿನಯ ವಿನ್ಯಾಸ, ಪಾತ್ರೋಚಿತ, ರಸರಂಜಿತ ವಾಕ್ ವಿಧಾನ ಸಂಪನ್ನವಾಗಿ ಸ್ತ್ರೀಭೂಮಿಕೆಗಳಲ್ಲಿ ಕಾಣಿಸುವ ಪ್ರತಿಭಾನ್ವಿತ ಸ್ತ್ರೀವೇಷಧಾರಿ ಹೊಸಂಗಡಿ ಕೃಷ್ಣ ಗಾಣಿಗ,

ಕುಂದಾಪುರ ತಾಲೂಕಿನ ಹೊಸಂಗಡಿ- ತಾರಿಗುಂಡಿ ಎಂಬ ಹಳ್ಳಿಯೇ ಇವರ ಹುಟ್ಟೂರು. ತಂದೆ ಸಿದ್ಧಗಾಣಿಗ, ತಾಯಿ ಸಿದ್ಧಮ್ಮ ಗಾಣಿಗ, 5ನೇ ಇಯತ್ತೆಯವರೆಗಿನ ಶೈಕ್ಷಣಿಕ ಸಂಸ್ಕಾರದ ಬಳಿಕ 15ರ - ಹರೆಯದಲ್ಲೇ ಯಕ್ಷಲೋಕ ಪ್ರವೇಶಿಸಿದ ಕೃಷ್ಣಗಾಣಿಗರು ಹಾಸ್ಯಗಾರ ದೇವಪ್ಪಗಾಣಿಗರ ಪ್ರೇರಣೆಯಂತೆ ಕಲಾಶಿಕ್ಷಣ ಪಡೆಯಲು ಮುಂದಾದರು. ಆಲೂರು ಸುರೇಂದ್ರನ ವರ ಶಿಷ್ಯನಾಗಿ ಉನ್ನತ ಕಲಾವಿದ್ಯಾಪಾರಂಗತರಾದ ಗಾಣಿಗರು ವೃತ್ತಿರಂಗದಲ್ಲಿ ಹಂತಹಂತವಾಗಿ ಬೆಳೆದು ಗಳಿಸಿದರು.

ಕಮಲಶಿಲೆ 1, ಸೌಕೂರು 17, ಮಾರಣಕಟ್ಟೆ 3, ಮಡಾಮಕ್ಕಿ 1, ಹಾಲಾಡಿ 3, ಹೀಗೆ ರಜತ ಸಂಭ್ರಮವನ್ನು ಯಶಸ್ವಿಯಾಗಿ ವೃತ್ತಿ ಮೇಳಗಳಲ್ಲಿ . ಪೂರೈಸಿದ ಕೃಷ್ಣಗಾಣಿಗ ಅವರು ಪ್ರಸ್ತುತ ಸೌಕೂರು ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ. ಶೃಂಗಾರ, ಸೌಮ್ಯ ಸ್ತ್ರೀಭೂಮಿಕೆಗೊಪ್ಪುವ ಅವರ ಅಂಗಸೌಷ್ಠವ, ರಂಗಾಭಿವ್ಯಕ್ತಿ, ಕಲಾರಸಿಕರ ಮೆಚ್ಚುಗೆ ಪಡೆದಿದೆ. ಮದನಾಕ್ಷಿ-ತಾರಾವಳಿ, ಚಿತ್ರಾಂಗದೆ, ಸುಭದ್ರೆ, ಪ್ರಭಾವತಿ, ಸತ್ಯಭಾಮೆ, ಭ್ರಮರಕುಂತಳೆ ಪಾತ್ರಗಳಲ್ಲಿ ಅವರ ಅಭಿನಯ ಮನಮುಟ್ಟುವಂತಾದ್ದು.

ಉತ್ತಮ ಪೌರಾಣಿಕ ಅನುಭವವನ್ನು ಸಿದ್ಧಿಸಿಕೊಂಡ ಶ್ರೀಯುತರು ಅಪರೂಪಕ್ಕೆ ಪುರುಷಪಾತ್ರಗಳನ್ನು ನಿರ್ವಹಿಸಿ ಪಾತ್ರಕ್ಕೆ ನ್ಯಾಯ ಕಲ್ಪಿಸುತ್ತಾರೆ. ಪತ್ನಿ ಶ್ಯಾಮಲಾ, ಸೌಜನ್ಯ, ಅನನ್ಯ ಮಕ್ಕಳು. ಶ್ರೀಯುತರಿಗೆ ಹುಟ್ಟೂರ ಸಂಮಾನ, ಮುಕ್ಕೋಡಿನಲ್ಲಿ ಗೌರವ ಸಂಮಾನ ದೊರಕಿರುತ್ತದೆ.



ಕೃಷ್ಣ, ಚಕ್ರಮೈದಾನ

ಹೊಸಕುತ್ತೂರು, ಅಂಚೆ : ಹೊಸಕುತ್ತೂರು,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 96112 83130

ಬಡಗುತಿಟ್ಟಿನ ಯಕ್ಷಗಾನದ ನಡುತಿಟ್ಟಿನ ನಡೆಯನ್ನು ಬಲ್ಲ ಅನುಭವಿ ಕಲಾವಿದ ಚಕ್ರಮೈದಾನ ಕೃಷ್ಣ.

ಕುಂದಾಪುರ ತಾಲೂಕಿನ ಬೆಳ್ಳಾಲದ ಕೇಲಾಡಿ- ಕೆಳಮನೆಯ ದುರ್ಗ ಪೂಜಾರಿ - ಸಿದ್ದು ಪೂಜಾರಿ ದಂಪತಿಯ ಸುಪುತ್ರರಾಗಿ 1-2-1960ರಲ್ಲಿ ಹುಟ್ಟಿದ ಕೃಷ್ಣ ಅವರು, 5ನೇ ತರಗತಿಯವರೆಗೆ ಅಕ್ಷರ ಶಿಕ್ಷಣವನ್ನು ಪಡೆದು, ಆರ್ಥಿಕ ಅನಾನುಕೂಲತೆಯಿಂದ ತನ್ನ 15ನೇ ವಯಸ್ಸಿನಲ್ಲೇ ಯಕ್ಷಗಾನ ಲೋಕದತ್ತ ಹೆಜ್ಜೆ ಹಾಕಿದರು.

ಹೆಬ್ಬೆಲು ರಾಮಪ್ಪನವರ ಚಿಕ್ಕ ಮೇಳದ ಬಾಲಕಲಾವಿದನಾಗಿ, ಎಳವೆಯಲ್ಲೇ ಅರ್ಥಗಾರಿಕೆಯ ಕೌಶಲವನ್ನು ಸಾಧಿಸಿದ ಕೃಷ್ಣ ಅವರಿಗೆ ಹಿರಿಯ ಯಕ್ಷಗಾನ ಕಲಾವಿದ ವಾಲ್ಲೂರು ಕುಷ್ಠನವರ ಸಶಕ್ತ ಗುರುಬಲ ದೊರಕಿ, ಸಮರ್ಥ ಕಲಾವಿದನಾಗುವುದಕ್ಕೆ ಸಹಕಾರಿಯಾಯಿತು.

ಚಕ್ರಮೈದಾನ ಅವರು ಆರಂಭಿಕ ವೃತ್ತಿರಂಗದಲ್ಲಿ ಕೋಡಂಗಿ, ಬಾಲ ಗೋಪಾಲ ಪಾತ್ರಗಳನ್ನು ಮಾಡುತ್ತ ಒಂದೆರಡು ವರ್ಷಗಳ ತಿರುಗಾಟದಲ್ಲಿ ಸುಯೋಗ್ಯ ಪುಂಡುವೇಷಧಾರಿಯಾಗಿ ಗುರುತಿಸಿಕೊಂಡರು. ಲವ-ಕುಶ, ಬಬ್ರುವಾಹನ, ಪುಷ್ಕಳ, ವೃಷಸೇನ, ಅಭಿಮನ್ಯು, ಪ್ರಸೇನ ಪಾತ್ರಗಳ ಮೂಲಕ ರಂಗಸ್ಥಳದಲ್ಲಿ ಹುಡಿ ಹಾರಿಸಿದರು. ತದನಂತರ ಪುರುಷವೇಷ, ಮುಂಡಾಸುವೇಷ, ರಾಜವೇಷ, ಹಾಗೂ ಪ್ರಸಂಗೋಚಿತವಾಗಿ ಬಣ್ಣದ ವೇಷ, ಕಿರಾತ ವೇಷಗಳನ್ನೂ ನಿರ್ವಹಿಸಿ ವರ್ಣರಂಜಿತ ಕಲಾವ್ಯಕ್ತಿತ್ವದಲ್ಲಿ ಕಂಗೊಳಿಸಿದರು.

ಗೋಳಿಗರಡಿ 9, ಅಮೃತೇಶ್ವರಿ 9, ಶಿವರಾಜಪುರ 3, ಶೃಂಗೇರಿ-ಭಕ್ತಂಪುರ 3, ಬಗ್ವಾಡಿ 2, ನಾಗರಕೊಡಿಗೆ 2, ಕಿಗ್ಗ 1, ಮೂಲ್ಕಿ 1, ಮೇಳಗಳಲ್ಲಿ ಸುಮಾರು 3 ದಶಕಗಳ ಕಾಲ ರಂಗಕೃಷಿ ಮಾಡಿದ ಚಕ್ರಮೈದಾನ ಕೃಷ್ಣ ಅವರು ಮೀನಾಕ್ಷಿ ಕಲ್ಯಾಣದ ಶೂರಸೇನ ನಂದಿ, ವಿಶ್ವಾಮಿತ್ರ, ಕರ್ಣ, ದ್ರೋಣ, ಕೌಂಡ್ಲಕ, ಭದ್ರಸೇನ, ದ್ರುಮಿಳಗಂಧರ್ವ, ಕಂಸ, ಅಶ್ವತ್ಥಾಮ, ಶಲ್ಯ, ಕೌರವ ಮೊದಲಾದ ಪಾತ್ರಗಳಿಗೆ ಜೀವ ತುಂಬಿದವರು.

ದೆಹಲಿ ಗಣರಾಜ್ಯೋತ್ಸವ ಸಂಮಾನ, ಉಡುಪಿ ಬೆಂಗಳೂರಿನಲ್ಲಿ ಬಿಲ್ಲವ ಕಲೋತ್ಸವ ಸಮ್ಮಾನ, ಯಶಸ್ವೀ ಕಲಾವೃಂದದ ದಶಮಾನೋತ್ಸವ ಸಂಮಾನ ಪಡೆದ ಕೃಷ್ಣ ಅವರು ಪತ್ನಿ ಬೇಬಿ, ಮಕ್ಕಳಾದ ಅಮೃತಾ, ಅನ್ವಿತಾ, ಅಕ್ಷತಾ, ಅಚ್ಯುತ ಅವರೊಂದಿಗೆ ಕುಂದಾಪುರದ ಹೆಸಕುತ್ತೂರು ಎಂಬಲ್ಲಿ ವಾಸವಾಗಿದ್ದಾರೆ.



**ಕೃಷ್ಣ ಜಿ. ಬೇಡ್ಕಣಿ**

ಮಾವಿನಕೊಪ್ಪ, ಅಂಚೆ : ತ್ಯಾಗಲಿ (ನಾಗೆಕಟ್ಟಾ),
ಸಿದ್ದಾಪುರ ತಾಲೂಕು (ಉ. ಕ)
ದೂರವಾಣಿ : 08389 293701

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದ ಬೇಡ್ಕಣಿ ಎಂಬಲ್ಲಿ ಹುಟ್ಟಿ ಬೆಳೆದ ಕೃಷ್ಣ. ಜಿ. ಬೇಡ್ಕಣಿಯವರು ಪ್ರಸ್ತುತ, 'ಬೇಡ್ಕಣಿ ಮೇಳ'ದ ಯಜಮಾನರಾಗಿ, ಕಲಾವಿದರಾಗಿ ಕಲಾಸೇವೆಯಲ್ಲಿರುವವರು.

ಗೌರಚೆನ್ನ ನಾಯ್ಕ-ಶಿವಿ ಗೌರನಾಯ್ಕ ದಂಪತಿಯ ಪುತ್ರರಾದ ಕೃಷ್ಣ ಅವರು 1-9-1957ರಲ್ಲಿ ಜನಿಸಿದರು. 10ನೇ ತರಗತಿಯವರೆಗೆ ವಿದ್ಯಭ್ಯಾಸ ಮಾಡಿದ ಇವರು 16ನೇ ವಯಸ್ಸಿನಲ್ಲಿ ಬಣ್ಣದ ಲೋಕದತ್ತ ಮುಖ ಮಾಡಿದರು. ಕನ್ನಪ್ಪ ಭಾಗವತರು ಇವರ ಮೂಲಗುರುಗಳಾಗಿ ಯಕ್ಷಗಾನರಂಗ ಭೂಮಿಗೆ ಪಾದಾರ್ಪಣೆ ಮಾಡುವುದಕ್ಕೆ ಸಹಕಾರ ನೀಡಿದರು. ಉಡುಪಿಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗರಲ್ಲಿ ಸಶಕ್ತ ಕಲಾಶಿಕ್ಷಣವನ್ನು ಪಡೆದ ಬೇಡ್ಕಣಿಯವರು ಗೋಳಿಗರಡಿ, ಅಮೃತೇಶ್ವರಿ, ಹಿರೇಮಹಾಲಿಂಗೇಶ್ವರ ಮೇಳ ಕೋಟ, ಶಿರಸಿ ಪಂಚಲಿಂಗೇಶ್ವರ ಮೇಳ, ಶಿರಸಿ ಮಾರಿಕಾಂಬಾ ಮೇಳ, ಇಡಗುಂಜಿ ಮೇಳ, ಸಾಲಿಗ್ರಾಮ ಮೇಳ, ಪೆರ್ಡೂರು ಮೇಳ ಕುಮಟಾ ಮೇಳಗಳಲ್ಲಿ 14ವರ್ಷಗಳ ತಿರುಗಾಟ ಪೂರೈಸಿದ್ದಾರೆ.

ಯಾವ ಪಾತ್ರವಾದರೂ ಬೇಡ್ಕಣಿಯವರಿಗೆ ಲೀಲಾಜಾಲ ಅಭಿವ್ಯಕ್ತಿಗೆ ದೊರಕುವುದು ವಿಶೇಷ. ಪಾತ್ರಗಳಲ್ಲಿ ಅನನ್ಯ ತಾದಾತ್ಮವನ್ನು ಹೊಂದಿ, ಅವುಗಳಿಗೆ ನ್ಯಾಯ ಒದಗಿಸುವುದರಲ್ಲಿ ಅವರು ಯಾವತ್ತೂ ಹಿಂದೆ ಬೀಳುವುದಿಲ್ಲ. ಪಾತ್ರೋಚಿತ ಸ್ವರಭಾರ, ಸುಸಂಸ್ಕೃತ ರಂಗವ್ಯವಹಾರ, ಪ್ರೌಢ ವ ಚೋಚ ಮತ್ಕಾರ, ಬೇಡ್ಕಣಿ -ಯವರ ಕಲಾಗುಣಗಳಾಗಿ ಗುರುತಿಸಲ್ಪಡುತ್ತವೆ.

ಉತ್ತರ ಕನ್ನಡ ದ ಖ್ಯಾತ ನಾಮ ಕಲಾವಿದರೊಂದಿಗೆ ಸಮರ್ಥವಾಗಿ ಪಾತ್ರ ಪೋಷಿಸುವ ಬೇಡ್ಕಣಿಯವರು ಕೀಚಕ, ಭಸ್ಮಾಸುರ, ವೀರಮಣಿ, ರುದ್ರಕೋಪ, ಅರ್ಜುನ, ಶ್ರೀರಾಮ, ಸುಧನ್ವ, ರಕ್ತಜಂಘ, ಶನೀಶ್ವರ, ದುರ್ಜಯ, ಹನುಮಂತ, ಮೊದಲಾದ ಪಾತ್ರಗಳಿಗೆ ಜೀವತುಂಬಿದ್ದಾರೆ. ಮೀನಾಕ್ಷಿ, ಶಶಿಪ್ರಭೆಯಂತಹ ಸ್ತ್ರೀಪಾತ್ರಗಳನ್ನೂ ನಿರ್ವಹಿಸಿ ಸೈ ಅನ್ನಿಸಿಕೊಂಡಿದ್ದಾರೆ. ಕಾಶೀಮಾಣಿ, ಏಕಲವ್ಯ ಭೂಮಿಕೆಗಳು ಬೇಡ್ಕಣಿಯವರ ಕಲಾಪ್ರಸ್ತುತಿಗೆ ಒಳಗಾಗಿವೆ. ಪತ್ನಿ ನೇತ್ರಾವತಿ, ಗಿರಿಧರ, ಸಂತೋಷ ಮಕ್ಕಳು

ಕೃಷ್ಣ ಜಿ. ಬೇಡ್ಕಣಿಯವರ ಉನ್ನತ ಪ್ರತಿಭೆಯನ್ನು ಗುರುತಿಸಿ ಹೊಸಳ್ಳಿ, ಕಾನಗೋಡ, ಕವಲುಕೊಪ್ಪ, ಅವರುಗುಪ್ಪಾ ಮೊದಲಾದ ಕಡೆಯ ಸಂಘ- ಸಂಸ್ಥೆಗಳು ಸಂಮಾನಿಸಿವೆ. ಗಾಜನೂರಿನಲ್ಲಿ ಗೌರವ ಪಡೆದ ಶ್ರೀಯುತರನ್ನು ಉಡುಪಿ ಬಿಲ್ಲವ ಕಲಾವಿದರ ಸಮಾವೇಶದಲ್ಲಿ ಗುರುತಿಸಿ ಗೌರವಿಸಲಾಗಿದೆ.



## ಗೋಪಾಲ ಆಚಾರ್ಯ, ತೀರ್ಥಹಳ್ಳಿ

*'ಗೆಜ್ಜೆನಾದ', ಕೆರ್ಗಾಲ್ ನಾಯ್ಕನ ಕಟ್ಟೆ – ಅಂಚೆ,*
*ಕುಂದಾಪುರ ತಾಲೂಕು*
*ದೂರವಾಣಿ: 08254–256210, 94483 92191*

ಮಲೆನಾಡಿನ ಮಡಿಲಿಂದ ಯಕ್ಷಗಾನ ರಂಗಭೂಮಿಗೆ ಬಂದ ಕರಾವಳಿಯ ಕಲಾ ಕಾರ್ಯಕ್ಷೇತ್ರದಲ್ಲಿ ಕ್ರಿಯಾಶೀಲ ವ್ಯಕ್ತಿತ್ವದಿಂದ ಗುರುತಿಸಿಕೊಂಡ ಪ್ರತಿಭಾಶಾಲಿ ಕಲಾವಿದ ತೀರ್ಥಹಳ್ಳಿ ಗೋಪಾಲ ಆಚಾರ್ಯ.

ಯಕ್ಷಗಾನ ನಡುಬಡಗು ಹಾಗೂ ಬಡಾಬಡಗುಗಳ ಸುಂದರ ಸಂಗಮವಾಗಿರುವ ಗೋಪಾಲ ಆಚಾರ್ಯರು ಯಕ್ಷರಂಗಮಂಚದ "ಸಿಡಿಲಮರಿ' ಬಿರುದಾಂಕಿತ ಕಲಾವಿದರು.

ವಾಸುದೇವ ಆಚಾರ್ಯ ಸುಲೋಚನಾ ದಂಪತಿಯ ಸುಪುತ್ರರಾಗಿ 1956ರ ಫೆಬ್ರವರಿ 24ರಂದು ತೀರ್ಥಹಳ್ಳಿಯಲ್ಲಿ ಜನಿಸಿದ ಗೋಪಾಲ ಆಚಾರರು ಕಲಿತದ್ದು ಮೂರಾದರೂ ಯಕ್ಷಗಾನ ರಂಗಭೂಮಿಯ ಕಲಾಕಾರ್ಯಕ್ಷಮತೆಗೆ ಗಳಿಸಿದ ಗರಿಷ್ಠ ಅಂಕ ನೂರಕ್ಕೆ ನೂರು.

ತನ್ನ 14ನೇ ವಯಸ್ಸಿಗೆ ಮಲೆನಾಡಿನ ರಂಜದಕಟ್ಟೆ ಮೇಳದಲ್ಲಿ ಬಣ್ಣದ ಬದುಕಿಗೆ ಶ್ರೀಕಾರ ಹಾಡಿದ ಬಾಲಗೋಪಾಲ ಇಂದು ಕಲಾರಂಗಭೂಮಿಯಲ್ಲಿ ಸಿದ್ದಿ ಸಾಧನೆಯ ತ್ರಿವಿಕ್ರಮನಾಗಿ ಬೆಳೆದು ನಿಂತಿದ್ದಾರೆ. ಆಕರ್ಷಕ

ವೇಷಗಾರಿಕೆ, ಸ್ಫುಟವಾದ ಪ್ರಬುದ್ಧ ಮಾತುಗಾರಿಕೆ, ಅದ್ಭುತ ಲಯಗಾರಿಕೆ, ಪಾದರಸಸದೃಶ ನೃತ್ಯಗಾರಿಕೆ, ಅಪ್ರತಿಮ ರಂಗತಾಂತ್ರಿಕತೆ, ಆಚಾರರಲ್ಲಿ ಮೇಲೈಸಿದೆ. ಅಭಿಮನ್ಯು ಬಭ್ರುವಾಹನ, ಧರ್ಮಾಂಗದ, ಪುಷ್ಕಳ, ಲವ-ಕುಶ, ವೃಷಸೇನ ಮೊದಲಾದ ಪುಂಡುವೇಷಗಳಲ್ಲಿ ಬೆಂಕಿಯ ಚೆಂಡಾಗಬಲ್ಲ ಆಚಾರರು, ಸುಧನ್ವ, ಅರ್ಜುನ,ಶ್ರೀಕೃಷ್ಣ , ಚಂದ್ರಹಾಸ ಮಾರ್ತಾಂಡತೇಜ ಹೀಗೆ ಯಾವುದೇ ಪುರುಷ ಪಾತ್ರವಿದ್ದರೂ ಜೀವಂತಿಕೆಯ ಕಳೆ ನೀಡಿ ತನ್ನ ಛಾಪು ಮೂಡಿಸುವವರು. ರಂಗಮಂಚವೇರಿದರೆ ಹದಿನೆಂಟರ ತರುಣರನ್ನೂ ನಾಚಿಸುವ ಆಚಾರರ ನೃತ್ಯ ಕೌಶಲ ಬೆರಗುಗೊಳಿಸುವಂತಾದ್ದು. ರಂಜದ ಕಟ್ಟೆ, ನಾಗರಕೊಡಿಗೆ, ಗೋಳಿಗರಡಿ, ಸಾಲಿಗ್ರಾಮ, ಪೆರ್ಡೂರು ಮೇಳಗಳಲ್ಲಿ ಸುದೀರ್ಘ ನಾಲ್ಕು ದಶಕಗಳ ಕಾಲ ರಂಗವ್ಯವಸಾಯ ನಡೆಸಿದ ಆಚಾರರು ಪೆರ್ಡೂರು ಮೇಳದಲ್ಲಿ ಸುದೀರ್ಘಕಾಲದ ಕೃಷ್ಣಜಿರಾವ್ ತೀರ್ಥಹಳ್ಳಿಯವರ ಶಿಷ್ಯ. ಪ್ರಸಿದ್ಧ ಕಲಾಕೃಷಿಯಲ್ಲಿರುವ ಪ್ರತಿಭಾ ಸಂಪನ್ನ ಕಲಾವಿದ ಗೋಪಾಲ ಆಚಾರ್ಯರು ಮಡದಿ ಮಂಜುಳಾ, ಓರ್ವ ಸುಮತ್ರ ನಿಧೀಶ.

ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕ ನೆಲೆಯಲ್ಲಿ 2007ರ ಆಗಸ್ಟ್ 19ರಂದು ಯಕ್ಷಗಾನ ಯೋಗಕ್ಷೇಮ ಅಭಿಯಾನ ಬೆಂಗಳೂರು, ಬೆಂಗಳೂರು ದಕ್ಷಿಣ ಕ ನ್ನಡಿಗರು, ಸೃಷ್ಟಿಯಕ್ಷಮಿತ್ರಮಂಡಳಿ, ಯಕ್ಷಕಲಾಸಾಗರ, ಗಾನಸೌರಭ, ವಿಶ್ವಕರ್ಮ ಪಬ್ಲಿಕ್ ಮತ್ತು ಚಾರಿಟೇಬಲ್ ಟ್ರಸ್ಟ್ ಇದರ ಅಧ್ಯಕ್ಷರಾದ ವಿ. ಆರ್. ಹೆಗಡೆಯವರ ಸಾರಥ್ಯದಲ್ಲಿ ಕಲಾನಿಧಿಪೂರ್ವಕ ಗೌರವಸಮ್ಮಾನ ಅಲ್ಲದೇ ಹಲವಾರು ಸಂಘ- ಸಂಸ್ಥೆಗಳಿಂದ, ಅಭಿಮಾನಿ ಬಳಗದಿಂದ ಸಮ್ಮಾನಗಳು, ದೊರಕಿರುತ್ತವೆ.



**ಗೋಪಾಲ ಗಾಣಿಗ, ಆಜ್ರಿ**

*ಆಜ್ರಿಹರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 94813 15672*

ಸಾಧನೆ, ಪ್ರತಿಭೆ, ಪ್ರಯತ್ನಗಳಿಂದ ಯಕ್ಷಗಾನರಂಗದ ಪ್ರಧಾನ ವೇಷಧಾರಿಯಾಗಿ ರೂಪುಗೊಂಡ ಪ್ರತಿಭಾಸಂಪನ್ನ ಕಲಾವಿದ ಆದ್ರೆ ಗೋಪಾಲ ಗಾಣಿಗ,

ಕುಂದಾಪುರ ತಾಲೂಕಿನ ಆದ್ರೆ ಎಂಬಲ್ಲಿ 27- 11-1958ರಲ್ಲಿ ಜನಿಸಿದ ಗೋಪಾಲ ಗಾಣಿಗ ಅವರು ಮಂಜಯ್ಯ ಗಾಣಿಗ ಮುತ್ತಮ್ಮ ದಂಪತಿಯ ಸುಪುತ್ರ

7ನೇ ತರಗತಿಯ ವಿದ್ಯಾಭ್ಯಾಸದ ತರುವಾಯ, ತನ್ನ 12ರ ಹರೆಯದಲ್ಲೇ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ ಗಾಣಿಗರು ಹವ್ಯಾಸಿ ಅರ್ಥಧಾರಿಯಾಗಿದ್ದ ತಂದೆಯವರ ಪ್ರೋತ್ಸಾಹದಿಂದ ಕಲಾಬದುಕಿಗೆ ಪ್ರೇರಣೆ ಕಂಡುಕೊಂಡರು.

1974-75ರಲ್ಲಿ ಉಡುಪಿ ಯಕ್ಷಗಾನ ಕೇಂದ್ರಕ್ಕೆ ವಿದ್ಯಾರ್ಥಿಯಾಗಿ ಸೇರ್ಪಡೆಗೊಂಡು, ಗುರುವೀರಭದ್ರನಾಯಕ್, ನೀಲಾವರ ರಾಮಕೃಷ್ಣಯ್ಯ, ಹೆರಂಜಾಲು ವೆಂಕಟರಮಣ, ಹಿರಿಯಡಕ ಗೋಪಾಲ ರಾಯರ ಶಿಷ್ಯನಾಗಿ ಶಾಸ್ತ್ರೋಕ್ತ ರಂಗಶಿಕ್ಷಣ ಸಂಪನ್ನರಾದರು. ಆರೋಡು ಗೋವಿಂದ ರಾಯ ಶೆಣೈಯವರು ಇವರನ್ನು ವೃತ್ತಿಮೇಳಕ್ಕೆ ಸೇರಿಸಿದರು.

ಕಮಲಶಿಲೆ 3, ಪೆರ್ಡೂರು 1, ಶೃಂಗೇರಿ 1, ಶಿವರಾಜಪುರ 1, ಪೆರ್ಡೂರು 1, ಇಡಗುಂಜಿ 2, ಮೂಲ್ಕಿ 1, ಸೌಕೂರು 2, ಮಂದಾರ್ತಿ 26, ಹೀಗೆ 38 ವರ್ಷಗಳ ಕಲಾಯಾತ್ರೆ ಪೂರೈಸಿದ ಗಾಣಿಗರು ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಯಕ್ಷಗಾನದ ಸಾಂಪ್ರದಾಯಿಕ ಗತ್ತು, ಶಿಸ್ತು, ಶ್ರೀಯುತರ ಪಾತ್ರ ಚಿತ್ರಣದಲ್ಲಿ ಗುರುತಿಸಬಹುದಾಗಿದೆ. ಅವರ ಗಂಭೀರ ಪೂರ್ಣ ರಂಗನಡೆ, ನಿಲುವು, ಪಾತ್ರನಿಷ್ಠ ನೃತ್ಯ, ಅಭಿನಯ ಕೌಶಲ, ನಿರರಳ ಮಾತಿನ ಶೈಲಿ, ಕಲಾರಸಿಕರ ಮನ ಮೆಚ್ಚಿಸುವಂತಹುದು. ಹಿರಣ್ಯ ಕಶಿಪು, ಋತುಪರ್ಣ, ಭೀಷ್ಮ, ಜಾಂಬವ, ಕರ್ಣ, ಕಂಸ, ಶ್ವೇತಕುಮಾರ, ಅರ್ಜುನ, ಮೊದಲಾದ ಪುರಾಣ ಪಾತ್ರಗಳಲ್ಲಿ ವಿಶೇಷವಾಗಿ ಗುರುತಿಸಿಕೊಂಡ ಗಾಣಿಗರ ಕಲಾಪ್ರತಿಭೆ ಸಂಪ್ರದಾಯಪ್ರಿಯ ಕಲಾಸಕ್ತರ ಮನಮುದಗೊಳಿಸಿದೆ.

ಶ್ರೀಯುತರ ಬಾಳಸಂಗಾತಿ ರೋಹಿಣಿ, ಪವಿತ್ರ, ಪಲ್ಲವಿ, ಪವನ ಇವರ ಮೂವರು ಮಕ್ಕಳು. ಆರೋಡು ರಾಮಚಂದ್ರ ಶಾನುಭಾಗ್ ವೇದಿಕೆ, ಕುಂದಾಪುರ ಗಾಣಿಗ ಸಮಾಜ ಶ್ರೀಯುತರನ್ನು ಸಂಮಾನಿಸಲಾಗಿದೆ.



**ಗೋಪಾಲ ಗಾಣಿಗ, ಹೆರಂಜಾಲು**

ಅಂಚೆ : ಕಿರಿಮಂಜೇಶ್ವರ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ
ದೂರವಾಣಿ: 97419 54450

ಶ್ರವಣಮಂಜುಳ ಶಾರೀರದಲ್ಲಿ ಸ್ವಂತಿಕೆಯ ಛಾಪು ಮೊಳಗಿಸುವ ಪ್ರೌಢ ಭಾಗವತ ಹೆರಂಜಾಲು ಗೋಪಾಲ ಗಾಣಿಗ,

ಕುಂದಾಪುರ ತಾಲೂಕಿನ ನಾಗೂರು ಎಂಬಲ್ಲಿ ಹೆರಂಜಾಲು ವೆಂಕಟರಮಣ ಗಾಣಿಗ-ಗಣಪು ಗಾಣಿಗ ದಂಪತಿಯ ಸುಪುತ್ರರಾಗಿ 28-3-1963ರಲ್ಲಿ ಜನಿಸಿದ ಗೋಪಾಲ ಗಾಣಿಗ ಅವರಿಗೆ ಶೈಕ್ಷಣಿಕ ವಿದ್ಯಾಭ್ಯಾಸ ನಾಕಕ್ಕೇ ಸಾಕೆನಿಸಿತು.

ತಂದೆ ಹೆರಂಜಾಲು ವೆಂಕಟರಮಣ ಗಾಣಿಗರು, ಯಕ್ಷಗಾನ ಪರಂಪರೆಯ ಪ್ರಸಿದ್ಧ ವೇಷಧಾರಿ. ಸಮರ್ಥ ಕಲಾಧ್ಯಾಪಕರೂ ಕೂಡ. ಹಾಗಾಗಿ ಬಾಲಕ ಗೋಪಾಲನಿಗೆ ಯಕ್ಷವಿದ್ಯೆ ಬಾಲ್ಯದಲ್ಲಿಯೇ ರಕ್ತಗತ ಬಳುವಳಿಯಾಯಿತು. ಉಡುಪಿ ಯಕ್ಷಗಾನ ಕೇಂದ್ರದಲ್ಲಿ ನೀಲಾವರ ರಾಮಕೃಷ್ಣಯ್ಯನವರಲ್ಲಿ ಭಾಗವತಿಕೆ, ಮಹಾಬಲ ಕಾರಂತರಲ್ಲಿ ಮದ್ದಳೆಗಾರಿಕೆ, ತಂದೆಯವರಲ್ಲಿ ಹೆಜ್ಜೆಗಾರಿಕೆ ಅಭ್ಯಾಸಮಾಡಿದ ಗೋಪಾಲ ಗಾಣಿಗರಿಗೆ ಕಲಾಲೋಕದ ಯಾತ್ರೆಗೆ ತಂದೆಯೇ ಪ್ರೇರಣಾ ಶಕ್ತಿ.

15ನೇ ವಯಸ್ಸಿನಲ್ಲಿ ವೃತ್ತಿರಂಗ ಪ್ರವೇಶಿಸಿದ ಹೆರಂಜಾಲು ಗೋಪಾಲಗಾಣಿಗರು ಹಳೆತರ ಮಟ್ಟನ್ನೂ, ಹೊಸತರ ಗುಟ್ಟನ್ನೂ ಬಲ್ಲ ಸಮರ್ಥ ಭಾಗವತರು. ಅಪಾರ ಪ್ರಸಂಗಾನುಭವ, ರಂಗವನ್ನು ಉಠಾವ್‌ಗೊಳಿಸುವ ರಂಗತಂತ್ರ, ಸಶಕ್ತ ಕವಿತಾಶಕ್ತಿ ಶ್ರೀಯುತರಲ್ಲಿ ಮುಪ್ಪುರಿಗೊಂಡಿದೆ.

ಮಾರಣಕಟ್ಟೆ, ಕಮಲಶಿಲೆ, ಮಂದಾರ್ತಿ, ಅಮೃತೇಶ್ವರಿ, ಸಾಲಿಗ್ರಾಮ, ಶಿರಸಿ ಮೇಳಗಳಲ್ಲಿ ಕಲಾವ್ಯವಸಾಯ ಮಾಡಿದ ಗಾಣಿಗರ ರಂಗ ಬದುಕಿಗೆ ರಜತ ಸಂಭ್ರಮ. ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ಭಾಗವತರು.

ಎಳವೆಯಲ್ಲಿ ಅಭಿಮನ್ಯು, ಬಬ್ರುವಾಹನ, ಪ್ರಹ್ಲಾದ, ಷಣ್ಮುಖ, ಶ್ರೀಕೃಷ್ಣ, ವೃಷಸೇನ ಮೊದಲಾದ ಪಾತ್ರಗಳನ್ನು ನಿರ್ವಹಿಸಿ ಜನಪ್ರಿಯರಾದ ಗಾಣಿಗರು ಹಿಮ್ಮೇಳ-ಮುಮ್ಮೇಳದ ಸರ್ವಾಂಗ ಪರಿಣತ ಕಲಾವಿದ.

ಪತ್ನಿ ಸಾವಿತ್ರಿ, ರಮ್ಯ, ಪಲ್ಲವ ಎಂಬ ಈಶ್ವರು ಮಕ್ಕಳು. ಪ್ರತಿಭಾನ್ವಿತ ಕಲಾವಿದ ಗೋಪಾಲ ಗಾಣಿಗರನ್ನು ಹಲವಾರು ಸಂಘ-ಸಂಸ್ಥೆಗಳು ಗೌರವಿಸಿವೆ.



ಗೋಪಾಲ ರಾವ್, ಹಿರಿಯಡಕ

'ಸೀತಾರಾಮ ನಿಲಯ', ಓಂತಿಬೆಟ್ಟು,
ಅಂಚೆ ಹಿರಿಯಡಕ, ಉಡುಪಿ ಜಿಲ್ಲೆ
ದೂರವಾಣಿ : 0820 2542666

ಬಡಗುತಿಟ್ಟು ಯಕ್ಷಗಾನರಂಗದಲ್ಲಿ ಮದ್ದಳೆಯ ಮಾಯಾಲೋಕ ನಿರ್ಮಿಸಿ ಪರಂಪರೆಯಗ್ರಪಂಕ್ತಿಯಲ್ಲಿ ಎದ್ದು ಕಾಣುವ ಹಿರಿಯ ಮದ್ದಳೆಗಾರ ಹಿರಿಯಡಕ ಗೋಪಾಲ ರಾಯರು. ತೊಂಬತ್ತು ದಾಟಿದರೂ ಗೋಪಾಲ ರಾಯರ ಕ್ರೀಯಾಶೀಲು ಹಾಗೂ ಕಲಾಕಾರ್ಯಕ್ಷಮತೆ ಈಗಲೂ ಮುಪ್ಪಾಗದೆ ಇರುವುದು ಇವರ ಅಪೂರ್ವ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೆಂದೇ ಹೇಳಬಹುದು.

ಗೋಪಾಲರಾಯರ ಹುಟ್ಟೂರು ಹಿರಿಯಡಕ. ಶೇಷಗಿರಿ ರಾವ್ ಹಾಗೂ ಶ್ರೀಮತಿ ಲಕ್ಷ್ಮೀ ತಂದೆ-ತಾಯಿ. 15-12-1919ರಲ್ಲಿ ಶ್ರೀಯುತರ ಹುಟ್ಟು, ಆರನೇ ಇಯತ್ತೆಯವರೆಗೆ ಅಕ್ಷರ ಜೀವನ 19ರ ಹರೆಯದಲ್ಲಿ ಯಕ್ಷ ಬದುಕಿನ ಯಾನ. ಇವರ ತಂದೆ ಶೇಷಗಿರಿ ರಾವ್, ಅಜ್ಜ ಲಕ್ಷಣ ರಾವ್ ಹವ್ಯಾಸಿ ಮದ್ದಳೆಗಾರರು, ಭಾಗವತರಾಗಿದ್ದರು. ಹಾಗಾಗಿ ಯಕ್ಷಗಾನ ಕಲಾಸಕ್ತಿಯೆಂಬುದು ಶ್ರೀಯುತರಿಗೆ ಜನ್ಮಜಾತ ಬಳುವಳಿ, ಕಾರ್ಕಳದ ನೃತ್ಯಗುರು ನಾಗಪ್ಪ ಕಾಮತರಲ್ಲಿ ನಾಟ್ಯಾಭ್ಯಾಸ. ತಂದೆಯಿಂದಲೇ ಮದ್ದಳೆವಾದನ ಕಲೆ ಕರಗತ.

1934ರಲ್ಲಿ ಹಿರಿಯಡ್ಕ ಮೇಳದಲ್ಲಿ ತನ್ನ 13ನೇ ವಯಸ್ಸಿನಲ್ಲೇ ಲವ-ಕುಶ, ರತ್ನಾವತಿ ಕಲ್ಯಾಣದಲ್ಲಿ ದೃಢವರ್ಮನ ಪಾತ್ರ ಸಹಿತ ಸ್ತ್ರೀವೇಷಗಳನ್ನೂ ಮಾಡಿದವರಿವರು. 1936ರಲ್ಲಿ ಒತ್ತುಮದ್ದಳೆ 27ವರ್ಷ ಬಾರಿಸತೊಡಗಿದರು. ಸುಮಾರು ಮಂದಾರ್ತಿ ಮೇಳದಲ್ಲಿ ಹಿರಿಯಭಾಗವತ ಶೇಷಗಿರಿ ಕಿಣಿಯವರ ಭಾಗವತಿಕೆಗೆ ಇವರ ಮದ್ದಳೆಯ ಸಾಥಿ ಯಕ್ಷಲೋಕ ಮರೆಯಲಾಗದ ನಾದಲೀಲೆಯನ್ನು ಸೃಷ್ಟಿಸಿತ್ತು. ಯಕ್ಷಗಾನದಲ್ಲಿ ಏರುಮದ್ದಳೆಯ ಕೊಡುಗೆ ನೀಡಿದ ಮಹಾನ್ ಪ್ರತಿಭೆ ಗೋಪಾಲರಾಯರದು. ಹಿರಿಯಡಕ, ಪೆರ್ಡೂರು, ಮಂದಾರ್ತಿ,

ಅಮೃತೇಶ್ವರಿ ಮೇಳಗಳಲ್ಲಿ ಸುಮಾರು ಆರುದಶಕಗಳ ಕಾಲ ಕಲಾಕೃಷಿ ನಡೆಸಿದ ಮೇರು ಕಲಾವಿದ ಗೋಪಾಲ ರಾಯರು ಉಡುಪಿ ಯಕ್ಷಗಾನ ಕೇಂದ್ರದ ಆರಂಭದ ಗುರುಗಳಾಗಿ ಅನನ್ಯ ಸೇವೆ ಸಲ್ಲಿಸಿದವರು. ಡಾ. ಶಿವರಾಮ ಕಾರಂತರ ಕಾರ್ಯಾಗಾರ-ಕಮ್ಮಟಗಳಿಗೆ ಸಂಪದ್ಭರಿತ ಪ್ರತಿಭೆಯಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದವರು.

1976ರಲ್ಲಿ ತನ್ನ ಶಿಷ್ಯ ಡಾ. ಮಾರ್ತಾ ಆಸ್ಟನ್ ನೆರವಿನಿಂದ ಯಕ್ಷಕಲೆಯನ್ನು ಕಡಲಾಚೆಯ ಅಮೆರಿಕಾದಲ್ಲಿ ಪಸರಿಸಿದ ಧೀಮಂತಿಕೆ ಇವರದ್ದಾಗಿದೆ. ಶೇಣಿ -ಸಾಮಗರ ಹರಿಕಥೆಗೆ ತ ಬ ಲಾ ಬಾರಿಸುವುದರಲ್ಲಂತೂ ಇವರದ್ದು ಎತ್ತಿದ ಕೈ. ಪರಂಪರೆಯ ಯಕ್ಷಗಾನದ ಪುರಾಣ, ಅನುಭವಸಾರವನ್ನು ಪರಿಪೂರ್ಣ ಜೀರ್ಣಿಸಿಕೊಂಡು ವಿಶ್ರಾಂತ ಬದುಕಿನಲ್ಲಿರುವ ಗೋಪಾಲರಾಯರ ಧರ್ಮಪತ್ನಿ ಮೀನಾಕ್ಷಿ ಬಾಯಿ, ಓರ್ವ ಸುಪುತ್ರ ಎಚ್. ರಾಮಮೂರ್ತಿ ರಾವ್ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ, ಶ್ರೀಯುತರಿಗೆ 1997ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ. 1998ರಲ್ಲಿ ಜಾನಪದಶ್ರೀ, 1972ರಲ್ಲಿ ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ದೇರಾಜೆ ಪ್ರಶಸ್ತಿ, ಸೀತಾನದಿ ಪ್ರಶಸ್ತಿ, ಹಾಗೂ ಉಡುಪಿ ಯಕ್ಷಗಾನ ಕಲಾರಂಗದ ಮಾರ್ವಿ ಪ್ರಶಸ್ತಿ ದೊರಕಿರುತ್ತದೆ. 'ಮದ್ದಳೆಯ ಮಾಯಾಲೋಕ ಡಾ|ಕೆ. ಎಮ್ ರಾಘವನಂಬಿಯಾರ್ ಸಂಪಾದಕತ್ವದಲ್ಲಿ ಇವರ ಕುರಿತಾಗಿ ಪ್ರಕಟಗೊಂಡ ಅಪೂರ್ವ ಗ್ರಂಥ.



**ಗೋವಿಂದಪ್ಪ, ಐರೋಡಿ**

*"ಯಕ್ಷಸೌರಭ", ಐರೋಡಿ, ಅಂಚೆ : ಸಾಸ್ತಾನ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ: 0820–2584241, 97423 22173*

ಬಡಗುತಿಟ್ಟಿನ ಸಾಂಪ್ರದಾಯಿಕ ಭವ್ಯತೆಗೆ ನಿಚ್ಚಳ ಸಾಕ್ಷಿಯಾಗುವ ಅಗ್ರಮಾನ್ಯ ಕಲಾವಿದ ಐರೋಡಿ ಗೋವಿಂದಪ್ಪ.

ಉಡುಪಿ ಜಿಲ್ಲೆಯ ಐರೋಡಿ ಎಂಬಲ್ಲಿ 10- 11-1945ರಲ್ಲಿ ಬೂದ ಭಾಗವತ ಹಾಗೂ ಗೌರಿ ದಂಪತಿಯ ಸುಪುತ್ರರಾಗಿ ಜನಿಸಿದ ಗೋವಿಂದಪ್ಪನವರು ಕಲಿತದ್ದು ಐದನೇ ತರಗತಿಯವರೆಗೆ.

ಇವರ ಭಾಗವತರಾದುದರಿಂದ ಯಕ್ಷಕಲೆ ಶ್ರೀಯುತರಿಗೆ ಅಭಿಜಾತವಾಗಿ ಒಲಿಯಿತು. ತಂದೆಯವರಲ್ಲಿ ಭಾಗವತಿಕೆ, ತೋನ್ಸೆ ಕಾಂತಪ್ಪ ಮಾಸ್ತರರಲ್ಲಿ ಹೆಜ್ಜೆಗಾರಿಕೆ ಅಭ್ಯಸಿಸಿದ ಗೋವಿಂದಪ್ಪ ಅವರು ತನ್ನ 12ರ ಹರೆಯದಲ್ಲೇ ಬಣ್ಣದ ಬದುಕು ಆರಂಭಿಸಿದರು.ಪ್ರಸಿದ್ಧ ಹಾರಾಡಿ ತಿಟ್ಟಿನ ಶೈಲೀಕೃತ ಕಲಾವಿದರಾಗಿ ಗುರುತಿಸಿಕೊಂಡ ಐರೋಡಿಯವರು ಪರಿಶುದ್ಧ ಯಕ್ಷಗಾನ ಪರಂಪರಾಗತ ಕಲಾಭಿವ್ಯಕ್ತಿಗೆ ಪ್ರಸಿದ್ದರು.

ಕೋಡಂಗಿ, ಬಾಲಗೋಪಾಲ, ಪೀಠಿಕಾಸ್ತ್ರೀವೇಷ, ಹೀಗೆ ಹಂತ ಹಂತವಾಗಿ ಕಲಾ ಸೋಪಾನವೇರುತ್ತ ಸಾಗಿದ ಐರೋಡಿಯವರು ಗಂಡುಕಲೆಯ ಬಹುಬೇಗನೆ ಪುಂಡುವೇಷಧಾರಿಯಾದರು. ಇವರ ಲವ-ಕುಶ, ಅಭಿಮನ್ಯು, ಬಬ್ರುವಾಹನ, ಪುಷ್ಕಳ ಪಾತ್ರಗಳು ಜನಪ್ರಿಯವಾದವು. ಹಾಗೆಯೇ ಸುಧನ್ವ, ಅರ್ಜುನ, ಮಾರ್ತಾಂಡತೇಜ, ಚಂದ್ರಹಾಸ, ಶ್ವೇತಕುಮಾರ...... ಮೊದಲಾದ ಭೂಮಿಕೆಗಳು ವಿಶೇಷ ಗೆಲುವು ಕಂಡವು. ತದನಂತರ ಬಡಗುತಿಟ್ಟಿನ ಸಮರ್ಥ ಎರಡನೇ ವೇಷಧಾರಿಯಾಗಿ ಹಿರಣ್ಯಕಶಿಪು, ಕರ್ಣ, ಭೀಷ್ಮ, ಜಾಂಬವ, ವೀರಮಣಿ, ಉಗ್ರಸೇನ, ತಾಮ್ರಧ್ವಜ, ದಶರಥ, ಯಯಾತಿ, ಕಂಸ, ಮೊದಲಾದ ಭೂಮಿಕೆಗಳನ್ನು ರಂಗನೆಲದಲ್ಲಿ ಜೀವಂತವಾಗಿ ಕಡೆದು ನಿಲ್ಲಿಸಿದರು.

ಗೋಳಿಗರಡಿ ಮೇಳವೊಂದರಲ್ಲೇ ರಜತವರ್ಷದ ರಂಗಕೃಷಿ ನಡೆಸಿದ ಐರೋಡಿಯವರು, ಸಾಲಿಗ್ರಾಮ 9, ಮೂಲ್ಕಿ 3, ಕುಂಬಳೆ 2, ಇರಾ 1, ಪೆರ್ಡೂರು 5, ಅಮೃತೇಶ್ವರಿ 2, ಹಿರಿಯಡಕ 2, ಹೀಗೆ 49ವರ್ಷ ಪೂರೈಸಿ ವೃತ್ತಿ ಬದುಕಿನ ಸುವರ್ಣ ವರ್ಷಕ್ಕೆ ಸನಿಹವಾಗುತ್ತಿದ್ದಾರೆ.

ಅಪಾರ ಪ್ರಸಂಗಾನುಭವ, ಅನ್ಯಾದೃಶ ಪಾತ್ರ ಪರಿಕಲ್ಪನೆ, ಆಕರ್ಷಕ ವೇಷಾಲಂಕಾರ, ಕಂಠೀರವದ ಕಂಠರವ, ವಿದ್ವತ್ ಪೂರ್ಣ ವಾಕ್ಸರಣಿ, ಕಾಂತಿಪೂರ್ಣ ಕಣ್ಣುಗಳ ಸೆಳಕು, ಲಯಪೂರ್ಣ ನೃತ್ಯ, ಅಭಿನಯ, ಗತ್ತು ಗೈರತ್ತಿನ ರಂಗನಡೆಯಲ್ಲಿ . ವಿಶಿಷ್ಟ ಛಾಪು-ಝಾಪು ಮೂಡಿಸುವ ಕಲಾವಿದ ಐರೋಡಿಯವರು ಪತ್ನಿ ಸುಮತಿ, ವಿಶ್ವನಾಥ, ವಿನಯ ಎಂಬ ಈಶ್ವರು ಮಕ್ಕಳು.

ಶ್ರೀಯುತರಿಗೆ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಯಕ್ಷಗಾನ ಕಲಾರಂಗದ ಮಾರ್ವಿ ಹೆಬ್ಬಾರ ಪ್ರಶಸ್ತಿ, ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ, ನಿಡಂಬೂರು ಪ್ರಶಸ್ತಿ, ಜಾನಪದ ಕಲಾ ಪ್ರಶಸ್ತಿ, ನಿಟ್ಟೂರು ಭೋಜಪ್ಪ ಸುವರ್ಣ ಪ್ರಶಸ್ತಿ, ದೋಗ್ರಪೂಜಾರಿ ಪ್ರಶಸ್ತಿಯೂ ದೊರಕಿರುತ್ತದೆ. ಇವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು.



**ಗೋವಿಂದ ಶೇರಿಗಾರ್, ಮಾರ್ಗೋಳಿ**

ಶ್ರೀ ಆದಿಶಕ್ತಿ ಕಾಳೀಕ್ಷೇತ್ರ,
ಪಡುಕೇರಿ, ಕುಂದಾಪುರ

ಬಡಗುತಿಟ್ಟಿನ ಯಕ್ಷಗಾನ ರಂಗಭೂಮಿಯಲ್ಲಿ ಅಗ್ರಪಂಕ್ತಿಯಲ್ಲಿ ಗುರುತಿಸಲ್ಪಡುವ ಪ್ರಸಿದ್ಧ ಹಿರಿಯ ಸ್ತ್ರೀವೇಷಧಾರಿ ಮಾಗೋಳಿ ಗೋವಿಂದ ಶೇರಿಗಾರ್.

ಕುಂದಾಪುರ ತಾಲೂಕಿನ ಬಸರೂರು ಗ್ರಾಮದ ಮಾರ್ಗೋಳಿ ಎಂಬಲ್ಲಿ 1926ರಲ್ಲಿ ಜನಿಸಿದ ಗೋವಿಂದ ಶೇರಿಗಾರರು ನರಸಿಂಹ ಶೇರಿಗಾರ್-ಸುಬ್ಬಮ್ಮ ದಂಪತಿಯ ಸುಪುತ್ರ ನಾಲ್ಕನೆ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಇವರು ತಮ್ಮ ಹದಿಮೂರರ ಹರೆಯದಲ್ಲೇ ಬಣ್ಣದ ಬದುಕಿಗೆ ಮುಖ ಮಾಡಿದರು. ಕೌಟುಂಬಿಕ ಯಕ್ಷಗಾನೀಯ ಹಿನ್ನೆಲೆ ಇವರಿಗಿಲ್ಲವಾದರೂ, ಬಾಲ್ಯದಿಂದಲೇ ವೈದುನ ಆವರಿಸಿದ್ದ ಅನ್ಯಾದೃಶ ಕಲಾಸಕ್ತಿ ರಂಗಬಾಳುವೆಯನ್ನು ಆಲಂಗಿಸುವಂತೆ ಮಾಡಿತು.

ದಶಾವತಾರಿ ಗುರು ವೀರಭದ್ರನಾಯಕ್ ಹಾಗೂ ಕೊಕ್ಕರ್ಣೆ ನರಸಿಂಹ ಕಮ್ಮಿಯವರ ಗುರುತನದಲ್ಲಿ ಶಾಸ್ತ್ರೋಕ್ತ ಯಕ್ಷ ಶಿಕ್ಷಣವನ್ನು ಪಡೆದು, ಕೋಡಂಗಿ, ಬಾಲಗೋಪಾಲ, ಪೀಠಿಕಾ ಸ್ತ್ರೀವೇಷ... ಹೀಗೆ ಹಂತ-ಹಂತವಾಗಿ ಯಕ್ಷಗಾನ ಬಯಲು ವಿಶ್ವ ವಿದ್ಯಾಲಯದಲ್ಲಿ ತೇರ್ಗಡೆ ಹೊಂದುತ್ತಾ ಸಾಗಿ ಪ್ರಧಾನ ಸ್ತ್ರೀವೇಷಧಾರಿಯಾಗಿ ರಂಗವಾಳಿದರು.

ಸೌಕೂರು, ಮಂದಾರ್ತಿ, ಕೂಡ್ಲು, ಇಡಗುಂಜಿ, ಸಾಲಿಗ್ರಾಮ, ಪೆರ್ಡೂರು, ಮಾರಣಕಟ್ಟೆ, ಅಮೃತೇಶ್ವರಿ ಮೇಳಗಳಲ್ಲಿ ಸುದೀರ್ಘ ಅರ್ಧ ಶತಮಾನದ ಯಕ್ಷಜೀವನ ಸಾಗಿಸಿದ ಮೇರು ಕಲಾವಿದ ಮಾರ್ಗೋಳಿಯವರು ಇದೀಗ 84ರ ವಯೋ ಹಿರಿತನದಲ್ಲಿ ಕುಂದಾಪುರ ಪಡುಕೇರಿಯ ತಮ್ಮ ನಿವಾಸದಲ್ಲಿ ವಿಶ್ರಾಂತ ಜೀವನದಲ್ಲಿದ್ದಾರೆ.

ಶ್ರೀದೇವಿ, ಮೀನಾಕ್ಷಿ, ದ್ರೌಪದಿ, ಶಶಿಪ್ರಭೆ, ಚಿತ್ರಾಂಗದೆ, ಪ್ರಮೀಳೆ, ಮದನಾಕ್ಷಿ, ಕಾಂತಿಮತಿ, ಪ್ರಭಾವತಿ, ದುರ್ದುಂಡಿ.. ಮೊದಲಾದ ಮುಖ್ಯ ಸ್ತ್ರೀಪಾತ್ರಗಳಿಗೆ ವಿಶೇಷ ಕಲಾವರ್ಚಸ್ಸು ನೀಡಿದ ಮಾರ್ಗೋಳಿಯವರು ಕಸೆ ಸ್ತ್ರೀವೇಷಗಳಲ್ಲಂತೂ ಸಾಟಿಯಿಲ್ಲದ ಪ್ರತಿಭೆಯ ಪ್ರಭೆಯಲ್ಲಿ ಪ್ರಜ್ವಲಿಸಿದರು. ಹಿಂದೆ ತೆಂಕುತಿಟ್ಟಿಗೇ ಮೀಸಲು ಎಂಬಂತ್ತಿದ್ದ ದೇವಿ ಮಹಾತ್ಮಯ . ಶ್ರೀದೇವಿ ಪಾತ್ರವನ್ನು ಬಡಗಿನ ರಂಗಸ್ಥಳದಲ್ಲಿ ಅದ್ಭುತ ನಿರ್ವಹಣೆಯಿಂದ ಪ್ರತಿಷ್ಠಾಪಿಸಿದ ಹಿರಿಮೆ ಮಾರ್ಗೋಳಿಯವರಿಗಿದೆ. ವೃತ್ತಿರಂಗದ ಕೊನೆಯ ಹನ್ನೆರಡು ವರ್ಷ ಸ್ತ್ರೀಪಾತ್ರ ನಿರ್ವಹಣೆಯನ್ನು ಬಿಟ್ಟು, ಶ್ರೀರಾಮ, ಶ್ರೀ ಗೋವಿಂದ ಶೇರಿಗಾರ್, ಮಾರ್ಗೋಳಿ ಕೃಷ್ಣ, ಸುಧನ್ವ, ತಾಮ್ರಧ್ವಜ,

ಹಂಸಧ್ವಜ, ಮಾರ್ತಾಂಡ ತೇಜ, ಕಮಲಭೂಪ... ಮೊದಲಾದ ಪುರುಷವೇಷಗಳನ್ನು ಧರಿಸಿ ಕಲಾರಸಿಕರ ಅಭಿಮಾನಕ್ಕೆ ಪಾತ್ರಾರಾದವರು.

ಸಾಂಪ್ರದಾಯಿಕ ಶೈಲೀಕೃತ ನೃತ್ಯಾಭಿನಯ, ಅದ್ವಿತೀಯ ಪ್ರತ್ಯುತ್ಪನ್ನ ಮತಿತ್ವ, ಅನನ್ಯ ರಂಗ ತಾದಾತ್ಮ್ಯ, ಅಗಾಧ ಪೌರಾಣಿಕ ಜ್ಞಾನ ಮಹಾನ್ ಮಾರ್ಗೋಳಿಯವರಲ್ಲಿ ನಿಚ್ಚಳವಾಗಿ ಗುರುತಿಸಬಹುದಾಗಿದ್ದು ಅವರ ತೆರೆ ಕುಣಿತ, ರಥ ಕುಣಿತ, ರಂಗದಲ್ಲಿನ ಚುರುಕುತನ, ನಡೆ-ನುಡಿ, ನಿಲುವು-ನೋಟ ಎಲ್ಲವೂ ಶುದ್ಧ ಯಕ್ಷಗಾನದ ಬದ್ಧ ಕುರುಹು ಪುರಾವೆಗಳಾಗುತ್ತವೆ.

ಕಲಾ ಪ್ರಪಂಚದಲ್ಲಿ ಸಿದ್ಧಿಯ ಶಿಖರವೇರಿದರೂ ಯಾವುದೇ ಅಹಮಿಕೆಯ ಎಳೆಯನ್ನೂ ಶ್ರೀಯುತರ ಸಮಗ್ರ ವ್ಯಕ್ತಿತ್ವದಲ್ಲಿ ಗುಲಗಂಜಿ ಮಾತ್ರಕ್ಕೂ ಹುಡುಕುವುದಕ್ಕೂ ಅಸಾಧ್ಯವೆಂದರೆ ಅತಿಶಯದ ಮಾತಲ್ಲ.

ಸಮರ್ಥ ಕಲಾವಿದರಾದ ಮಾರ್ಗೋಳಿಯವರು ಸುಯೋಗ್ಯ ಗುರುವಾಗಿಯೂ ಅನೇಕಾನೇಕ ಪ್ರತಿಭಾನ್ವಿತ ಶಿಷ್ಯರನ್ನು ರಂಗಭೂಮಿಗೆ ನೀಡಿದ್ದಾರೆ. ಗುರು ಬನ್ನಂಜೆ ಸಂಜೀವ ಸುವರ್ಣರಂತಹ ಉನ್ನತ ಪ್ರತಿಭಾವಂತರಿಗೆ ಗುರುವಾದ ಗರಿಮೆ ಶೇರಿಗಾರರಲ್ಲಿದೆ.

ಮಾರ್ಗೋಳಿಯವರ ಸಹಧರ್ಮಿಣಿ ಸುಲೋಚನಾ. ರಾಧಾಕೃಷ್ಣ, ಮಹೇಶ, ಆಶಾಲತಾ, ಇಂದಿರಾ ಇವರ ನಾಲ್ಕು ಮಂದಿ ಮಕ್ಕಳು.

ಸರ್ವಶ್ರೇಷ್ಟ ಸ್ತ್ರೀವೇಷಧಾರಿಯಾಗಿ ಯುಗಳ ತಿಟ್ಟಿನ ಯಕ್ಷಲೋಕದಲ್ಲಿ ಪರಂಪರೆಯ ಹೆಜ್ಜೆ ಮೂಡಿಸಿದ ಹಿರಿಯ ಕಲಾವಿದ ಮಾರ್ಗೋಳಿ ಗೋವಿಂದ ಶೇರಿಗಾರರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಡಾ. ಬಿ.ಬಿ. ಶೆಟ್ಟಿ ಪ್ರಶಸ್ತಿ ಸೇರಿದಂತೆ ನೂರಾರು ಪ್ರತಿಷ್ಠಿತ ಸಂಮಾನ, ಗೌರವಗಳು ದೊರಕಿವೆ.



**ಚಂದ್ರ ಆಚಾರ್ಯ, ಹಾಲಾಡಿ**

*ಗೋಳಿ ಅಂಗಡಿ-ಹೊಯಿಗೆ ಬೇಾರ್,*
*ಹಿಲಿಯಾಣ ಗ್ರಾಮ, ಅಂಚೆ: ಹೈಕಾಡಿ-ಹಿಲಿಯಾಣ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ: 9449449985*

ಮಾಧುರಮಯ ಮದ್ದಳೆವಾದನದಲ್ಲಿ ಪರಿಪಕ್ವಪ್ರತಿಭೆಯಾಗಿ ಗುರುತಿಸಿಕೊಂಡವರು ಹಾಲಾಡಿ ಚಂದ್ರ ಆಚಾರ್ಯ.

ಮಹಾಬಲ ಆಚಾರ್-ಅಕ್ಕಣಿ ಆಚಾರಿ ದಂಪತಿಯ ಸುಪುತ್ರರಾಗಿ ಹಾಲಾಡಿಯಲ್ಲಿ ಜನಿಸಿದ ಚಂದ್ರ ಆಚಾರರಿಗೆ 45 ವರ್ಷ ಪ್ರಾಯ.

ಆರಕ್ಕೆ ಓದು ನಿಲ್ಲಿಸಿ, 18ರ ಹರಯದಲ್ಲಿ ಯಕ್ಷಗಾನರಂಗಕ್ಕೆ ಕಾಲಿರಿಸಿದ ಚಂದ್ರ ಆಚಾರರು ಕಲಾವಂತರ ಮನೆತನದ ಹಿನ್ನೆಲೆಯಲ್ಲಿ ಬೆಳೆದು ಬೆಳಗಿದ ಹಿಮ್ಮೇಳ ಕಲಾವಿದರು. ಇವರ ಅಜ್ಜ ರಾಮಾಚಾರ್ ಹಾಗೂ ತಂದೆ ಮಹಾಬಲ ಆಚಾರ್ ಹವ್ಯಾಸೀ ಮದ್ದಳೆಗಾರರಾಗಿದ್ದರು. ನಾರ್ಣಪ್ಪ ಉಪ್ಪರ, ದುರ್ಗಪ್ಪ ಗುಡಿಗಾರ್, ಕೆ. ಪಿ. ಹೆಗಡೆ, ಸುರೇಶ ಉಳ್ಳೂರ, ಸದಾನಂದ ಐತಾಳರ ಶಿಷ್ಯರಾದ ಚಂದ್ರ ಆಚಾದ್ಯರು ಅನುಭವೀ ಮದ್ದಳೆಗಾರರಾಗಿ ಪ್ರಸಿದ್ಧಿ ಹೊಂದಿದವರು.

ಕಳುವಾಡಿ-2 (ಸಂಗೀತಗಾರಿಕೆ), ಕಮಲಶಿಲೆ- 2, ಮಂದಾರ್ತಿ-3, ಹಾಲಾಡಿ-2, ಸೌಕೂರು-3, ಸಾಲಿಗ್ರಾಮ-2, ಶಿರಸಿ-2, ಗೋಳಿಗರಡಿ-2, ಹೀಗೆ 18 ವರುಷಗಳ ಕಾಲ ಇವರ ಕಲಾಸೇವೆ ನಡೆದಿದೆ. ಪ್ರಸ್ತುತ ಶ್ರೀಯುತರು ಯಕ್ಷಗಾನ ಸಂಘಸಂಸ್ಥೆಗಳ ಗುರುಗಳಾಗಿಯೂ, ಮದ್ದಳೆಗಾರರಾಗಿಯೂ ಕಲಾ- ಸೇವೆಯಲ್ಲಿದ್ದಾರೆ.

ಆಕಾಶ ವಾಣಿ, ದೂರ ದರ್ಶನ ಕಲಾವಿದರಾಗಿಯೂ ಖ್ಯಾತನಾಮರಾದ ಚಂದ್ರ ಆಚಾರರು ಪದ್ಯದ ಸಾಹಿತ್ಯ, ಭಾವಾರ್ಥಕ್ಕೆ ಮಿಡಿತವಾಗುವ ಮದ್ದಳೆಯ ನುಡಿತದಲ್ಲಿ ಸಿದ್ಧಹಸ್ತರು.

ಪತ್ನಿ ಕಲಾವತಿ, ಮಮತಾ, ವಿನುತಾ, ವಿಜಯಲಕ್ಷ್ಮೀ ಎಂಬ ಮೂರು ಮಂದಿ ಹೆಣ್ಣುಮಕ್ಕಳು. ಚಂದ್ರ ಆಚಾರರು ಉಡುಪಿ ಜಿಲ್ಲಾ ಪಂಚ್ಯಾತ್ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಕೊಲ್ಲೂರು ಮೂಕಾಂಬಿಕಾ ದೇವಳ - ಯಕ್ಷಗಾನ ದಶಮಾನೋತ್ಸವ ಸಮಾರಂಭದಂದು ಸಮಾನ ಪಡೆದಿರುತ್ತಾರೆ.



**ಚಂದ್ರಕುಮಾರ್, ನೀರ್ಜಡ್ಡು**

*ಅಂಚೆ : ಮಂದಾರ್ತಿ, ಹೆಗ್ಗುಂಜೆ ಗ್ರಾಮ,*
*ಉಡುಪಿ ತಾಲೂಕು - ಜಿಲ್ಲೆ*
*ದೂರವಾಣಿ : 96328 49223*

ವ್ಯಾಕರಣಬದ್ಧ ಭಾಷಾಶುದ್ಧಿ, ಪರಿಸ್ಫುಟ ನೃತ್ಯಾಬಿ ನಯ ವೈಖರಿ, ಉತ್ಕೃಷ್ಟ ರಂಗವ್ಯವಹಾರಗಳಿಂದ ನಿರ್ವಹಣಾ ಪಾತ್ರಗಳಿಗೆ ಜೀವ ತುಂಬುವ ಕಲಾವಿದ ಚಂದ್ರಕುಮಾ ನೀರ್ಜಡ್ಡು.

ಉಡುಪಿ ಜಿಲ್ಲೆಯ ಮಂದಾರ್ತಿ ಸನಿಹದ ನೀರ್ಜಡ್ಡು ಎಂಬಲ್ಲಿ ವೀರ ಕುಲಾಲ ಬೆಳಕು ದಂಪತಿಯ ಸುಪುತ್ರರಾಗಿ 13-11-1973ರಲ್ಲಿ ಜನಿಸಿದ ಚಂದ್ರಕುಮಾರ್, 5ನೇ ತರಗತಿ ವಿದ್ಯಾಭ್ಯಾಸ ಪೂರೈಸಿ, ತನ್ನ 11ರ ಹರೆಯದಲ್ಲಿ ಯಕ್ಷಗಾನರಂಗಭೂಮಿಗೆ ಪದವಿರಿಸಿದರು. ಸುತ್ತಮುತ್ತ ನಡೆಯುತ್ತಿದ್ದ ಮಂದಾರ್ತಿ ಮೇಳದ ಬಯಲಾಟಗಳೇ ಶ್ರೀಯುತರ ಕಲಾಸಕ್ತಿ ಕುದುರಿಸಿದವು. ವಂಡಾರು ಬಸವ ನಾಯಿರಿ ಅವರೊಂದಿಗೆ ಹೂವಿನಕೋಲು ತಿರುಗಾಟದ ಬಾಲ ಕಲಾವಿದನಾಗಿ ಬಾಲ್ಯದಲ್ಲಿಯೇ ವಿಶೇಷ ಪೌರಾಣಿಕ ಜ್ಞಾನಸಂಪಾದಿಸಿದ ಇವರು ಬಸವಗಾಣಿಗ ಅವರಲ್ಲಿ ತಾಳಾಭ್ಯಾಸ ಮಾಡಿದರು. ಮುಂಡಾಡಿ ಬಸವ ಮರಕಾಲರ ಗುರುತನದಲ್ಲಿ ಸಶಕ್ತ ಯಕ್ಷನೃತ್ಯ ಶಿಕ್ಷಣವನ್ನು ಪಡೆದರು.

ಮಂದಾರ್ತಿ 2, ಸಾಲಿಗ್ರಾಮ 18, ಮಂದಾರ್ತಿ 5, ಹೀಗೆ ಚಂದ್ರ ಕುಮಾರರು ವೃತ್ತಿರಂಗದಲ್ಲಿ ಸಾರ್ಥಕ ರಜತವರ್ಷವನ್ನು ಪೂರೈಸಿದ್ದಾರೆ. ಪುರಾಣ ಪ್ರಸಂಗಗಳ ಗಂಡು ಪಾತ್ರಗಳಿಗೆ ಜೀವಕಳೆ ನೀಡುವ ಚಂದ್ರಕುಮಾರ್ ರಾಜವೇಷ, ಪುರಷವೇಷಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ಅದ್ವಿತೀಯ ಪಾತ್ರ ತಾದಾತ್ಮ್ಯ, ನಿರರಳ ವಚೋಸಂಪತ್ತು, ಪ್ರೌಢ ರಂಗವೈಖರಿ ಕಾಣಿಸುವ ಶ್ರೀಯುತರ ಪೌರಾಣಿಕ ಕಲಾಪ್ರಜ್ಞೆ ಅಗಾಧವಾದುದು.

ಶ್ರೀಕೃಷ್ಣ, ವಿಷ್ಣು, ಅಕ್ರೂರ, ವಿದುರ, ಅರ್ಜುನ, ಹರಿಶ್ಚಂದ್ರ, ಸುಧನ್ವ, ವಿಶ್ವಾಮಿತ್ರ, ಮೊದಲಾದ ಅವರ ಪಾತ್ರಗಳು ಸಮೃದ್ಧ ವಾಚಿಕತೆಯೊಂದಿಗೆ ಸೊಗಯಿಸಿವೆ.

ಶ್ರೀಯುತರು ಉತ್ತಮ ಅರ್ಥಧಾರಿಯಾಗಿಯೂ ಗುರುತಿಸಿಕೊಂಡವರು. ಧರ್ಮಪತ್ನಿ ಲಕ್ಷ್ಮೀ, ಸಹನಾ, ಸಾತ್ವಿಕ ಮಕ್ಕಳು. ಕಲಾವಿದ ಚಂದ್ರಕುಮಾರ್ ಪ್ರಸ್ತುತ ಮಂದಾರ್ತಿ ಮೇಳದಲ್ಲಿ ಕಲಾಸೇವೆ ನಡೆಸುತ್ತಿದ್ದಾರೆ. ಶ್ರೀಯುತರಿಗೆ ಹಲವು ಸಂಘ-ಸಂಸ್ಥೆಗಳಿಂದ ಗೌರವ ಸಂಮಾನಗಳು ದೊರಕಿವೆ.



ಚಂದ್ರ ಕುಲಾಲ್, ಹಾಲಾಡಿ

*ಅಂಚೆ : ಹಾಲಾಡಿ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 99021 75411*

ಪೌರುಷೇಯ ರಂಗರೀವಿಯ ಪುರುಷ ಪಾತ್ರಗಳನ್ನೂ, ಸಿಡಿಲಬ್ಬರದ ಚುರುಕುನಡೆಯ ಪುಂಡುವೇಷಗಳನ್ನು ಸಮರ್ಥವಾಗಿ ನಿರ್ವಹಿಸುವ ಯಕ್ಷನಟ ಚಂದ್ರ ಕುಲಾಲ್,

ಹಾಲಾಡಿ, ಕುಂದಾಪುರ ತಾಲೂಕಿನ ಹಾಲಾಡಿ- ಗೋರಾಜೆ ಎಂಬಲ್ಲಿ ಮಂಜುಕುಲಾಲ್-ಗಿರಿಜಮ್ಮ ದಂಪತಿಯ ಪುತ್ರನಾಗಿ ಜನಿಸಿದ ಚಂದ್ರಕುಲಾಲ್ ಅವರಿಗೀಗ ನಲವತ್ತೊಂದರ ಹರೆಯ. 7ನೇ ಇಯತ್ತೆಯವರೆಗೆ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದ ಚಂದ್ರ ಕುಲಾಲ್ ಬಣ್ಣದ ಬದುಕುಕಂಡದ್ದು ವರುಷ ಹನ್ನೆರಡರಲ್ಲಿ. ಯಕ್ಷಕಲೆಯ ಕುರಿತ ಸಹಜ ಅಭಿರುಚಿಯನ್ನು ಎಳವೆಯಲ್ಲಿಯೇ ಹೊಂದಿದ್ದ ಚಂದ್ರ ಕುಲಾಲ್ ಅವರಿಗೆ ಹಿರಿಯ ಕಲಾವಿದ ಮೊಳವಳ್ಳಿ ಹೆರಿಯನಾಯ್ಕ ಹಾಗೂ ಹಾಸ್ಯಗಾರ ನಾಗಯ್ಯ ಶೆಟ್ಟಿ ಅವರು ಯಕ್ಷಜೀವನ ಪ್ರವೇಶಕ್ಕೆ ಪ್ರೇರಣೆ ನೀಡಿದರು. ಮೊಳಹಳ್ಳಿ ಹೆರಿಯ ನಾಯ್ಕ ಹಾಗೂ ಕೆ. ಪಿ ಹೆಗಡೆ ಇವರ ಗುರುಗಳು.

ಸೌಕೂರು ಮೇಳದಲ್ಲಿಯೇ 27ವರ್ಷಗಳ ರಂಗ ತಿರುಗಾಟವನ್ನು ಪೂರೈಸಿದ ಕುಲಾಲರು | ವರ್ಷ ಹಾಲಾಡಿ ಮೇಳದಲ್ಲಿ ಸೇವೆ ಸಲ್ಲಿಸಿದ್ದು ಒಟ್ಟು ತಿರುಗಾಟದ ಅವಧಿ 28ವರ್ಷ, ಚಂದ್ರಕುಲಾಲರ ನೃತ್ಯ, ಅಭಿನಯ, ಯಕ್ಷಗಾನೀಯ ಸೊಗಸಿನಿಂದ ಪಡಿಮೂಡುವಂತಾದ್ದು. ಅವರ ವೇಷವೂ ಆಕರ್ಷಕ. ಮಾತುಗಾರಿಕೆ ರಂಗಕ್ರಿಯೆ ಪುರಾಣಜ್ಞಾನ ಎಲ್ಲವೂ ಪಾತ್ರದ ಒಟ್ಟು ಕಟ್ಟೋಣಕ್ಕೆ ಔಚಿತ್ಯಪೂರ್ಣವಾಗಿ ಕಾಣುವಂತಾದ್ದು.

ಅಭಿಮನ್ಯು, ಬಭ್ರುವಾಹನ, ಪುಷ್ಕಳ, ಶ್ರೀಕೃಷ್ಣ, ಅರ್ಜುನ, ಕಮಲಧ್ವಜ, ಧರ್ಮಾಂಗದ, ಶ್ವೇತಕುಮಾರ, ಚಂದ್ರಹಾಸ ಮೊದಲಾದ ಪೌರಾಣಿಕ ಪಾತ್ರಗಳು ಅವರ ನಿಜ ಪ್ರತಿಭೆಯಿಂದ ನ್ಯಾಯ ಪಡೆದಿವೆ. ಸಾಂದರ್ಭಿಕವಾಗಿ ಕುಲಾಲರು ಹಾಸ್ಯ ಪಾತ್ರಗಳನ್ನೂ ಮಾಡುವುದಿದೆ. ಸರೋಜಾ ಶ್ರೀಯುತರ ಪತ್ನಿ, ಶಶಿಧರ, ಸುಧೀರ ಮಕ್ಕಳು.

ಮುಕ್ಕೋಡಿನಲ್ಲಿ ಮತ್ತು ಕಾವಾಡಿಯಲ್ಲಿ ಇವರಿಗೆ ಗೌರವ ಸಂಮಾನ ದೊರಕಿರುತ್ತದೆ.



ಚಂದ್ರಗೌಡ, ಗೋಳಿಕೆರೆ

ಅಂಚೆ : ಗೋಳಿಹೊಳೆ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ
ದೂರವಾಣಿ : 08254 2020375, 96325 32324

ಗತ್ತು-ಗೈರತ್ತಿನ ನೃತ್ಯ, ಅಭಿನಯ ವಿಲಾಸದೊಂದಿಗೆ, ಸಾಹಿತ್ಯಕ ವಾಚಿಕ ವೈಖರಿಯನ್ನು ನಿರೂಪಿಸುತ್ತ, ಪಾತ್ರಗಳ ಅಂತರಂಗವನ್ನು ಅರ್ಥೈಸಿಕೊಂಡು ಬಹಿರಂಗಗೊಳಿಸುವ ಕಲಾವಿದ ಚಂದ್ರಗೌಡ ಗೋಳಿಕೆರೆ,

ಕುಂದಾಪುರ ತಾಲೂಕಿನ ಗೋಳಿಕೆರೆ ಎಂಬಲ್ಲಿ 15-5-1970ರಲ್ಲಿ ಮಂಜುಗೌಡ-ದಾರು ಗೌಡ್ತಿಯವರ ಸುಪುತ್ರನಾಗಿ ಜನಿಸಿದ ಚಂದ್ರಗೌಡರು 5ನೇ ತರಗತಿಯವರೆಗೆ ಓದು ಮುಗಿಸಿ 14ನೇ ವಯಸ್ಸಿನಲ್ಲೇ ಬಣ್ಣದ ಬದುಕಿಗೆ ಕಾಲಿರಿಸಿದರು.

ಪ್ರಸಿದ್ಧ ಹಾಸ್ಯಗಾರ ಕಮಲಶಿಲೆ ಮಹಾಬಲ ದೇವಾಡಿಗರಲ್ಲಿ ಯಕ್ಷಗಾನ ಶಿಕ್ಷಣ ಪಡೆದ ಚಂದ್ರಗೌಡರು ಹಾಲಾಡಿ2, ಮಾರಣಕಟ್ಟೆ 23, ಮೇಳಗಳಲ್ಲೇ ರಜತ ಸಂಭ್ರಮ ಆಚರಿಸುತ್ತಿದ್ದಾರೆ. ಪ್ರಸ್ತುತ ಶ್ರೀಯುತರು ಮಾರಣಕಟ್ಟೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ. ಸದೃಢ ಆಳಂಗ, ಆಕರ್ಷಕ ವೇಷಗಾರಿಕೆ, ಪಾತ್ರೋಚಿತ ನೃತ್ಯಗಾರಿಕೆ, ಸಮೃದ್ಧ ಅರ್ಥಗಾರಿಕೆಯಲ್ಲಿ ಮೆರೆಯುವ ಚಂದ್ರಗೌಡರು ಕಂಸ, ಕೀಚಕ, ವಿಭೀಷಣ, ಕೌರವ, ದುಷ್ಟಬುದ್ಧಿ, ಕಾರ್ತವೀರ, ಕರ್ಣ, ವೀರಮಣಿ ಮೊದಲಾದ ಭೂಮಿಕೆಗಳನ್ನು ಸಮರ್ಥವಾಗಿ ಪೋಷಿಸು-ವವರು.

ಶ್ರೀಯುತರು ಪುರುಷವೇಷ, ಮುಂಡಾಸುವೇಷ, ರಾಜವೇಷಗಳಲ್ಲಿ ಕಲಾ-ಭಿವ್ಯಕ್ತಿಯಿಂದ ಸಹೃದಯ ಕಲಾಸಕ್ತರ ಮನ ಮುದಗೊಳಿಸಿದವರು. ಖಳನಾಯಕ, ಪ್ರತಿನಾಯಕ ಪಾತ್ರಗಳಲ್ಲಂತೂ ಚಂದ್ರಗೌಡರ ಪ್ರತಿಭಾ

ಪಾರಮ್ಯದಲ್ಲಿ ಸಮೃದ್ಧರಾಗಿ ಸೊಗಯಿಸುತ್ತವೆ. ಬಾಳಸಂಗಾತಿ ತುಂಗಾ, ಪ್ರಹ್ಲಾದ, ಪ್ರಸನ್ನ, ನಯನ ಎಂಬ ಮೂರು ಮಕ್ಕಳನ್ನು ಪಡೆದ ಚಂದ್ರಗೌಡರನ್ನು ಹಲವು ಸಂಘ-ಸಂಸ್ಥೆಗಳು ಆದರಣೀಯ ಸಂಮಾನದಿಂದ ಗೌರವಿಸಿವೆ.



**ಜಗದೀಶ ಹೆಗಡೆ, ಮಾಳ್ಕೋಡು**

*ಅಂಚೆ : ಕೆಳಗಿನ ಇಡಗುಂಜಿ, ಹೊನ್ನಾವರ ತಾಲೂಕು,*
*ಉತ್ತರ ಕನ್ನಡ ಜಿಲ್ಲೆ*
*ದೂರವಾಣಿ : 9341648546*

ಬಡಗುತಿಟ್ಟು ದೃಶ್ಯಕಾವ್ಯದ ರಂಗಮಂಚದಲ್ಲಿ ನವೀನತೆ ಹಾಗೂ ಪಾರಂಪರಿಕತೆಯನ್ನ ರಮ್ಯ ರಸಪರಿಪಾಕದ ಸೊಗಸಾದ ಎರಕದಲ್ಲಿ ಸುಶೋಭಿಸುವ ಸಮರ್ಥ ಪುರುಷವೇಷಧಾರಿ ಮಾಸ್ಕೋಡು ಜಗದೀಶ ಹೆಗಡೆ, ಸುಂದರ ಸದೃಢ ಆಳಂಗ, ಸುಲಲಿತ ಸುಸ್ಪಷ್ಟ ವಾಕ್ಸರಣಿ, ಹೊಸ ಹುರುಪಿನ ರಂಗಪ್ರಕ್ರಿಯೆ, ಅನನ್ಯ ಪಾತ್ರ ತಾದಾತ್ಮ್ಯ, ಕಣ್ಣೆಳೆಯುವ ವೇಷವಿಧಾನ, ಪ್ರಸಂಗ ಪದ್ಯಗಳನ್ನು ಸಚೇತನವಾಗಿಡುವ ರಮ್ಯಾಕರ್ಷಕ ಅಭಿನಯ, ನರ್ತನ, ಯಕ್ಷಲೋಕದಲ್ಲಿ ದಕ್ಷಪ್ರತಿಭೆಯಾಗಿ ದರ್ಶಿಸುವ ಜಗದೀಶ ಹೆಗಡೆ, ವಿಶೇಷ ಕಲಾ ಚಾತುರದಲ್ಲಿ ಗಮನಾರ್ಹ ವೇಷಧಾರಿಯಾಗಿ ಗುರುತಿಸಲ್ಪಟ್ಟಿದ್ದಾರೆ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಮಾಡು ಎಂಬಲ್ಲಿ 8-5-1965ರಲ್ಲಿ ಜನಿಸಿದ ಶ್ರೀಯುತರು, ಗಣೇಶ ಹೆಗಡೆ-ಗಣಪಿ ಹೆಗಡೆಯವರ ಸುಪುತ್ರ, ಹತ್ತನೇ ತರಗತಿಯ ವಿದ್ಯಾಭ್ಯಾಸದ ಬಳಿಕ, 19ರ ಹರೆಯದಲ್ಲಿ ಯಕ್ಷ ಮಾಣಿನೂಪುರಕ್ಕೆ ಮಣಿದ ಹೆಗಡೆಯವರು, ಉಡುಪಿಯಕ್ಷಗಾನ ಕೇಂದ್ರಕ್ಕೆ ಸೇರ್ಪಡೆಯಾದರು. ಅಲ್ಲಿ ಹೆರಂಜಾಲು ವೆಂಕಟರಮಣ, ಮಹಾಬಲ ಕಾರಂತ, ಮೊದಲಾದ ಗುರುಪುಂಗವರಲ್ಲಿ ಯಕ್ಷಗಾನ ಸಾಂಪ್ರದಾಯಿಕ ಶಿಕ್ಷಣ ಪಡೆದು ಹಿಂದಿಕ್ಕದ ಹೆಜ್ಜೆಯಲ್ಲಿ ಯಕ್ಷಪ್ರಪಂಚವನ್ನು ಪ್ರವೇಶಿಸಿದರು.

ಹಿರಿಯ ಚಂಡೆವಾದಕ ಕೃಷ್ಣಯಾಜಿ ಇಡಗುಂಜಿ ಅವರ ಪ್ರೋತ್ಸಾಹ, ಮಾರ್ಗದರ್ಶನವನ್ನು ನೆನಪಿಸಿಕೊಳ್ಳುವ ಜಗದೀಶ ಹೆಗಡೆ ಇಂದು ಕಲಾಭಿಮಾನಿ-ಗಳ ಹಾರ್ದಿಕ ಅಭಿಮಾನ ಉತ್ಕೃಷ್ಟ ಪ್ರತಿಭೆಯಲ್ಲಿ

ಗುರುತಿಸಲ್ಪಡುವ ಕಲಾವಿದರಾಗಿದ್ದಾರೆ. ಗುಂಡಬಾಳ, ಕಮಲಶಿಲೆ, ಅಮೃತೇಶ್ವರಿ, ಕುಮಟಾ, ಕಳವಾಡಿ, ಬಗ್ವಾಡಿ, ಕಮಲಶಿಲೆ ಮೇಳಗಳಲ್ಲಿ ಸುಮಾರು 25 ವರ್ಷಗಳ ಕಲಾಯಾತ್ರೆಯನ್ನು ಸಾರ್ಥಕ ರಂಗಪ್ರಗತಿಯಲ್ಲಿ ಪೂರೈಸಿದ್ದಾರೆ.

ನಾಯಕ, ಪ್ರತಿನಾಯಕ, ಖಳನಾಯಕ, ಪಾತ್ರಗಳಲ್ಲಿ ಪ್ರತಿಭಾಪಾರಮ್ಯವನ್ನು ಪ್ರಕಟಿಸುವ ಜಗದೀಶ ಹೆಗಡೆಯವರು ಖಳ ಭೂಮಿಕೆಗಳಿಗೆ ಕೊಡುವ ಪ್ರತಿಭೆಯ ಕಳೆ ವಿಶಿಷ್ಟವಾದುದು. ರಾಸಲೀಲೆಯ ಶೃಂಗಾರ ಲಾಸ್ಯದ ಶ್ರೀಕೃಷ್ಣನ ರಂಗ ವ್ಯವಹಾರ, ರಸಿಕ ಕೀಚಕನ ರಸೋತ್ಕೃಷ್ಟ ಕಲಾ ಚಮತ್ಕಾರ, ಅರ್ಜುನ, ಸುಧನ್ವ, ದೇವವ್ರತ, ಚಂದ್ರಹಾಸ, ಭೂಮಿಕೆಗಳ ಪೌರುಷೇಯ ವಿಲಾಸ, ಜರಾಸಂಧ, ಕೌರವ, ಕಂಸ, ದುಷ್ಟಬುದ್ಧಿ, ಕಾರ್ತವೀರ ಮೊದಲಾದ ಪಾತ್ರಗಳ ಚಿತ್ರತರ ಸೊಗಸಿನ ಪ್ರತಿಭಾವಿಶೇಷ ಜನಮನದಲ್ಲಿ ಸ್ಥಾಯಿಯಾಗಿದೆ.

ಪತ್ನಿ ಸುಜಾತ ಹೆಗಡೆ, ಗೌರೀಶ ಹೆಗಡೆ ಸುಪುತ್ರ ಮಾಸ್ಕೋಡು ಜಗದೀಶ ಹೆಗಡೆ ನಾಡಿನ ಹಲವಾರು ಸಂಘ-ಸಂಸ್ಥೆಗಳ ಗೌರವ ಸಂಮಾನಕ್ಕೆ ಭಾಜನರಾಗಿದ್ದಾರೆ.



ಜಗನ್ನಾಥ ಆಚಾರಿ, ಎಳ್ಳಂಪಳ್ಳಿ

*'ಶ್ರೀ ದುರ್ಗಾನುಗ್ರಹ', ಎಳ್ಳಂಪಳ್ಳಿ, ದೀವಾನ್ ಗುಡ್ಡೆ,*
*ಅಂಚೆ : ನೀಲಾವರ, ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 98458 67488*

ಸಾಂಪ್ರದಾಯಿಕ ವರ್ಣರಂಜಿತ ವ್ಯಕ್ತಿತ್ವದಿಂದ ಸಮರ್ಥ ಬಣ್ಣದ ವೇಷಧಾರಿಯಾಗಿ ರೂಪುಗೊಂಡ ಹಿರಿಯ ಕಲಾವಿದ ಎಳ್ಳಂಪಳ್ಳಿ ಜಗನ್ನಾಥ ಆಚಾರಿ.

ಉಡುಪಿ ತಾಲೂಕಿನ ಎಳ್ಳಂಪಳ್ಳಿ ಎಂಬ ಹಳ್ಳಿಯಲ್ಲಿ 9-7-1956ರಲ್ಲಿ ಹುಟ್ಟಿಬೆಳೆದ ಶ್ರೀಯುತರು ಶೀನ ಆಚಾರ್-ಅಕ್ಕಯ್ಯ ದಂಪತಿಯ ಸುಪುತ್ರ. ಕಡುಬಡತನದಿಂದಾಗಿ ಐದನೇ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ ತನ್ನ 14ರ ಹರೆಯದಲ್ಲೇ ಬಣ್ಣದ ಬದುಕು ಕಂಡವರು ಜಗನ್ನಾಥ ಆಚಾರಿ.

ಇವರ ತಂದೆ ಹವ್ಯಾಸಿ ಯಕ್ಷಗಾನ ಕಲಾವಿದರು. ಮದ್ದಳೆಗಾರಿಕೆ ಹಾಗೂ ಭಾಗವತಿಕೆಯನ್ನೂ ಬಲ್ಲವರಾಗಿದ್ದರು. ಹಾಗಾಗಿ ಜಗನ್ನಾಥ ಆಚಾರರಿಗೆ ಯಕ್ಷ-ಗಾನದ ಮೇಲಣ ಅನ್ಯಾದೃಶ ಆಸಕ್ತಿ ಪ್ರೇರಣೆಗೆ ರಕ್ತಗುಣವೇ ಬಳುವಳಿಯಾಯಿತು.

ಉಡುಪಿ ಯಕ್ಷಗಾನ ಕೇಂದ್ರದಲ್ಲಿ ನೀಲಾವರ ರಾಮಕೃಷ್ಣಯ್ಯ, ವೀರಭದ್ರ ನಾಯಕ್, ಹಿರಿಯಡಕ ಗೋಪಾಲರಾವ್, ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗರಿಂದ ಸಶಕ್ತ ಕಲಾವಿದ್ಯೆಯನ್ನು ಆರ್ಜಿಸಿಕೊಂಡ ಆಚಾರರಿಗೆ ಉಡುಪಿ ಬಸವ, ವಂಡ್ಸೆ ನಾರಾಯಣ ಗಾಣಿಗರ ಗುರುತನವೂ ದೊರಕಿದೆ.

ಕೋಟ ಶಿವರಾಮ ಕಾರಂತರ 'ಯಕ್ಷರಂಗ'ದ ಕಲಾವಿದರಾಗಿ, ಕಾರಂತರ ಕಟ್ಟುನಿಟ್ಟಿನ ಕ್ರಮಬದ್ಧ ಮಾರ್ಗದರ್ಶನಕ್ಕೆ ಒಳಗಾಗಿ ವಿಶೇಷ ಕಲಾನುಭವ ಸಂಪಾದಿಸಿದರು. ಕಾರಂತರೊಂದಿಗೆ ಯಕ್ಷರಂಗದ ಮೂಲಕ ಹಾಂಕಾಂಗ್, ಸ್ವಿಟ್ಸರ್‌ಲ್ಯಾಂಡ್, ರಷ್ಯಾ, ಫ್ರಾನ್ಸ್ ಮುಂತಾದ ವಿದೇಶೀ ನೆಲದಲ್ಲೂ ಬಣ್ಣದ ವೈಭವವನ್ನು ತೋರಿದರು.

ಸಾಂಪ್ರದಾಯಿಕ ಶೈಲೀಕೃತ ಮುಖವರ್ಣಿಕೆ, ವೇಷಾಲಂಕಾರ, ನೃತ್ಯಾಭಿನಯ, ರಂಗನಡೆ, ವ ಚೋಚ ಮತ್ಕಾರದಲ್ಲಿ ಬಡಗು ಬಣ್ಣಕ್ಕೆ ರಂಗುತುಂಬಿದ ಶ್ರೀಯುತರು ಮಂದಾರ್ತಿ 24, ಪೆರ್ಡೂರು 1, ಸಾಲಿಗ್ರಾಮ 3, ಹೀಗೆ 28 ವರ್ಷ ಮೇಳ ತಿರುಗಾಟ, ಸರಿಸುಮಾರು 38 ವರ್ಷಗಳ ರಂಗಕೃಷಿ ಇವರದ್ದು.

ಶೂರ್ಪನಖಿ, ರಾವಣ, ಹಿಡಿಂಬ, ಹಿಡಿಂಬೆ, ರಕ್ತಜಂಘಾಸುರ, ಕಾಲಜಂಘ, ಕಾಲನೇಮಿ, ಬಕಾಸುರ, ಕಿಮ್ಮಿರ, ವೃತ್ರಜ್ವಾಲೆ, ದುರ್ಜಯ ಮೊದಲಾದ ಬಣ್ಣದವೇಷಗಳು ಇವರಿಗೆ ಕೀರ್ತಿ ದೊರಕಿಸಿ ಕೊಟ್ಟಿವೆ.

ಜಗನ್ನಾಥ ಆಚಾರರ ಸಹಧರ್ಮಿಣಿ ಜಯಂತಿ. ನಾಲ್ಕು ಮಂದಿ ಮಕ್ಕಳು. ಪ್ರಸ್ತುತ ಮಂದಾರ್ತಿ ಮೇಳದ ಬಣ್ಣದ ವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಶ್ರೀಯುತರ ದೈತ್ಯಪ್ರತಿಭೆಗೆ ರಾಂಪುರ, ಉಡುಪಿ ಮತ್ತು ನೀಲಾವರ ಅಲ್ಲದೆ ಹಲವಾರು ಸಂಘಸಂಸ್ಥೆಗಳು ಗೌರವಿಸಿವೆ.



## ಜನಾರ್ದನ ಆಚಾರ್ಯ, ಹಳ್ಳಾಡಿ

*ಅಂಚೆ ಹಳ್ಳಾಡಿ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ 99454 14816*

ಕಲಾವಿದನ ಪಾತ್ರ ಸ್ವಭಾವಪೂರ್ಣ ಅಭಿವ್ಯಕ್ತಿಗೆ, ಸ್ಫೂರ್ತಿಯಾಗುವ, ಭಾಗವತರ ಗಾನ ಸಾಹಿತ್ಯ ರಸಭಾವಕ್ಕೆ ಸಾರಥಿಯಾಗುವ ಸಮರ್ಥ ಚಂಡೆಗಾರ ಹಳ್ಳಾಡಿ ಜನಾರ್ದನ ಆಚಾರ್.

ಕುಂದಾಪುರ ತಾಲೂಕಿನ ಹಳ್ಳಾಡಿಯಲ್ಲಿ 1964ರಲ್ಲಿ ಜನಿಸಿದ ಜನಾರ್ದನ ಆಚಾರರು ಶ್ರೀನಿವಾಸ ಆಚಾರ್ - ಜಾನಕಿ ಆಚಾರ್ ದಂಪತಿಯ ಪತ್ರ, 17ನೇ ವರ್ಷದಲ್ಲೇ ಯಕ್ಷಗಾನಕ್ಷೇತ್ರವನ್ನು ಪ್ರವೇಶಿಸಿದ ಜನಾರ್ದನ ಅವರಿಗೆ ಖ್ಯಾತ ಚಂಡೆವಾದಕ ರಾಮಕೃಷ್ಣ ಮಂದಾರ್ತಿ ಅವರೇ ಗುರುಗಳು.

ಭಾಗವತರ ಪದ್ಯಗಾರಿಕೆಯೊಂದಿಗೆ ಹದವಾಗಿ ಬೆರೆತ ಸುಮಧುರ ನುಡಿ ತತ್ಕಾರ. ಹುರುಪು ನೀಡುವ ಸ್ವರ ಝೇಂಕಾರ, ಇವರ ಚಂಡೆಗಾರಿಕೆಯಲ್ಲಿ ಕೇಳಬೇಕು. ಇವರ ಕಲಾನುಭವವೂ ಗರಿಷ್ಠಮಟ್ಟದ್ದು. ಪ್ರತೀ ಪ್ರಸಂಗಗಳ ನಡೆಯೂ ಇವರಿಗೆ ಪರಿಪೂರ್ಣ ಸಿದ್ಧಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಯಾವ ಪಾತ್ರ-ಗಳನ್ನು ಎಷ್ಟು ಕುಣಿಸಬೇಕು ಗಾನ ಕರ್ಣರಸಾಯನಕಾರಕವಾಗಿ, ಭಾವಪೋಷಕವಾಗಿ ಅಭಿವ್ಯಕ್ತಿಯಾಗಬೇಕಿದ್ದರೆ, ಹಿಮ್ಮೇಳ ಸ್ಥಾನದಲ್ಲಿರುವ ಚಂಡೆವಾದಕ ಹೇಗೆ ವಾದನಾನುಕೂಲಿಯಾಗಬೇಕು, ಎಲ್ಲಿ ಕಥಾನಕವನ್ನು ಹಿಗ್ಗಿಸಬೇಕು- ಕುಗ್ಗಿಸಬೇಕು, ಹೇಗೆ ರಂಗಸ್ಥಳಕ್ಕೆ ಬಿಸಿ ನೀಡಬೇಕು.... ಎಂಬೆಲ್ಲಾ ಸಮರ್ಥ ವಾದಕನೊಬ್ಬನ ಧನಾತ್ಮಕ ಗುಣಶೀಲಗಳು ಆಚಾರರಲ್ಲಿ ಪ್ರತಿಭಾಪೂರ್ಣವಾಗಿ ಸದೃಢವಾಗಿ ಮೇಳೈಸಿವೆ. ಕೈಗೂಡಿವೆ.

ಮಂದಾರ್ತಿ 1, ಕಳವಾಡಿ 1, ಅಮೃತೇಶ್ವರಿ 1, ಹೀಗೆ ಮೂರು ವಿಭಿನ್ನ ಮೇಳಗಳ ತಿರುಗಾಟವಾದರೆ ಪ್ರಸ್ತುತ ಸೇವೆಯಲ್ಲಿರುವ ಮಾರಣಕಟ್ಟೆ ಮೇಳದಲ್ಲೇ ಇವರ ವ್ಯವಸಾಯದ ರಜತ ಸಂಭ್ರಮವಾಗಿದೆ. ಒಟ್ಟು 28 ವರ್ಷಗಳ ಕಲಾಸೇವೆ ಆಚಾರರದ್ದು.

ಸತಿ ಚಂದ್ರಾವತಿ, ಪ್ರಣಾಮ್, ಪವಿತ್ರ ಎಂಬ ಈಶ್ವರು ಮಕ್ಕಳ ಕಿರು ಸಂಸಾರ. ಚಂಡೆ ಮದ್ದಳೆ ವಾದನದಲ್ಲಿ ಅಪಾರ ಕಲಾಸಿದ್ಧಿಯನ್ನು ಕಂಡು ಪ್ರತಿಭೆಗೆ ಸಮುಚಿತವಾದ ಪ್ರಚಾರಕಾಣದಿರುವ ಜನಾರ್ದನ ಆಚಾರರನ್ನು ಕೆಲವು ಸಂಘಸಂಸ್ಥೆಗಳು ಸಂಮಾನಿಸಿವೆ.



**ಜನಾರ್ದನ ಗುಡಿಗಾರ, ಬಂಗಾಡಿ**

*ಅಂಚೆ : ಬಂಗಾಡಿ, ಇಂದಬೆಟ್ಟು ಗ್ರಾಮ 'ಯಕ್ಷಕೃಪಾ',*
*ಬೆಳ್ತಂಗಡಿ ತಾಲೂಕು*
*ದೂರವಾಣಿ : 99029 22358*

ಉಭಯತಿಟ್ಟುಗಳ ಕಲಾವೈವಿಧ್ಯವನ್ನು ರಂಗ ಜೀವನದಲ್ಲಿ ಸತ್ವಪೂರ್ಣವಾಗಿ ಜೀರ್ಣಿಸಿಕೊಂಡು ಸಾಂಪ್ರದಾಯಿಕ ಯಕ್ಷವಿಧಾನದಲ್ಲಿ ಸೃಷ್ಟಿಶೀಲ ಪ್ರತಿಭೆಯ ವಿಶಿಷ್ಟ ವಿನ್ಯಾಸ ಮೂಡಿಸುವ ಪ್ರಬುದ್ಧ ಕಲಾವಿದ ಜನಾರ್ದನ ಗುಡಿಗಾರ್, ಬಂಗಾಡಿ.

ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು, ಜನಾರ್ದನ ಗುಡಿಗಾರರು ಹುಟ್ಟಿದ ಸ್ಥಳ. ಬಾಬು ಗುಡಿಗಾರ-ದಿ.ಕುಸುಮಾ ದಂಪತಿಯ ಪುತ್ರನಾಗಿ 12-2-1960ರಲ್ಲಿ ಇವರ ಜನನ. ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ. 17ರ ಹರಯದಲ್ಲೇ ಬಾಲ್ಯದ ಕನಸಿನ ಕಲಾಗುಡಿಯೊಳಗೆ ಗುಡಿಗಾರರ ವಿಹಾರ, ಹಿರಿಯ ಯಕ್ಷಗಾನ ಕೃತಿಕಾರ ಅನಂತರಾಮ ಬಂಗಾಡಿ ಹಾಗು ರಾಜೀವ ಭಂಡಾರಿಯವರ ಪ್ರೇರಣೆ ಪ್ರೋತ್ಸಾಹದಿಂದ . ಬಣ್ಣದ ಬದುಕಿಗೆ ತೆರೆದುಕೊಂಡ ಜನಾರ್ದನ ಗುಡಿಗಾರರು ಬೆಳಾಲು ಶ್ರೀನಿವಾಸ ಆಚಾರ್, ಪಡ್ರೆ ಚಂದು ಅವರ ಶಿಷ್ಯನಾಗಿ ಸಶಕ್ತ ಯಕ್ಷವಿದ್ಯೆಯನ್ನು ಸಂಪಾದಿಸಿಕೊಂಡು ತೆಂಕಣದ ರಂಗಮಂಚಕ್ಕೆ ಹೆಜ್ಜೆ ಹಾಕಿದರು. ಹಂತಹಂತವಾಗಿ ಬೆಳೆದು ಸಮಷ್ಟಿ ಕಲೆಯ ಸಮುಜ್ವಲ ತಾರೆಯಾಗಿ ಬೆಳಗಿದರು.

ಸುಬ್ರಹ್ಮಣ್ಯ ಮೇಳ (ಒಂದುವರೆ ವರ್ಷ), ಸುವರ್ನಾಡು ಮೇಳ (ಒಂದುವರೆ ವರ್ಷ), ಸುರತ್ಕಲ್ ಮೇಳ 17, ಸಾಲಿಗ್ರಾಮ 4, ಮಂಗಳಾದೇವಿ 3, ಪೆರ್ಡೂರು 3, ಕಮಲಶಿಲೆ 4, ಹೀಗೆ 34 ವರ್ಷಗಳ ಶ್ರೀಯುತರ ರಂಗಕೃಷಿ ಸಾರ್ಥಕ್ಯ ಕಂಡಿದೆ. ಪ್ರಸ್ತುತ ಗುಡಿಗಾರರು ಕಮಲಶಿಲೆ ಮೇಳದ ಪ್ರಧಾನ ಕಲಾವಿದರು.

ಖಳನಾಯಕ, ಪ್ರತಿನಾಯಕ ಪಾತ್ರಗಳಲ್ಲಿ ಗುಡಿಗಾರರ ಕಲಾಪ್ರತಿಭೆ ಗಮನಾರ್ಹ, ಕಂಸ, ಜರಾಸಂಧ, ಶಿಶುಪಾಲ, ಭಸ್ಮಾಸುರ, ಶುಂಭಾಸುರ, ಮಹಿಷಾಸುರ, ಅರ್ಜುನ, ಕರ್ಣ, ರಕ್ತಬೀಜಾಸುರ ಪಾತ್ರಗಳ ಮೂಲಕ ಜನ-ಪ್ರಿಯತೆಯ ಉಚ್ಚ್ರಾಯ ಸ್ಥಿತಿ. ಅಪರೂಪಕ್ಕೆ ಸೀತೆ, ಮಾಯಾ ಶೂರ್ಪನಖಿ- ಯಂತಹ ಸ್ತ್ರೀ ಪಾತ್ರ ಮಾಡಿದ್ದೂ ಇದೆ.

ಶ್ರೀಯುತರ ನೂರಾರು ಶಿಷ್ಯರು ತೆಂಕುತಿಟ್ಟಿನ ಯಕ್ಷಲೋಕದಲ್ಲಿ ಹೆಸರಾಂತ ಕಲಾವಿದರಾಗಿ ದುಡಿಯುತ್ತಿದ್ದಾರೆ. ಬಾಳಸಂಗಾತಿ ಹರಿಣಾಕ್ಷಿ. ವಿದ್ಯಾವತಿ, ವಿನೋದ, ವಿನಯಾ, ಹರಿಹರ ಮಕ್ಕಳು

ಜನಾರ್ದನ ಗುಡಿಗಾರರು ಅರುವ ಪ್ರತಿಷ್ಠಾನ, ಹಿಂದೂ ಯುವಸೇನೆ ರಥಬೀದಿ, ಶೀರೂರು ಮಠ, ಕಲಾಭಿಮಾನಿ ಬಳಗ ಮುಂಬೈ ಹಾಗೂ ಬಂಗಾಡಿ ಸಂಪೂರ್ಣ ಸುರಕ್ಷಾ ಬಳಗ ವತಿಯಿಂದ ಸಂಮಾನಿತರಾಗಿದ್ದಾರೆ.



ಜಯರಾಮ ಶೆಟ್ಟಿ, ಹಳ್ಳಾಡಿ

*ಅಂಚೆ : ಹಳ್ಳಾಡಿ–ಹರ್ಕಾಡಿ, ಕುಂದಾಪುರ ತಾಲೂಕು*
*ದೂರವಾಣಿ : 08259 201616, 94480 93330*

ಯಕ್ಷಗಾನ ಪ್ರಪಂಚದಲ್ಲಿ 'ಹಳ್ಳಾಡಿ' ಎಂಬ ಹೆಸರು ಕೇಳಿದಾಕ್ಷಣ ನಗೆಯ ಕುಲುಕಾಟದಿಂದ ಕಲಾರಸಿಕರ ಹೊಟ್ಟೆ ಹುಣ್ಣಾಗುತ್ತದೆ. ಇದಕ್ಕೆ ಕಾರಣ ಆ ಊರಿನಲ್ಲಿ ಹುಟ್ಟಿ ಬೆಳೆದು ಸಮರ್ಥ ಹಾಸ್ಯಗಾರರಾಗಿ ರೂಪುಗೊಂಡ ಹಿರಿಯ ಕಲಾವಿದ ಹಳ್ಳಾಡಿ ಜಯರಾಮ ಶೆಟ್ಟಿ

ಕುಂದಾಪುರ ತಾಲೂಕಿನ ಹಳ್ಳಾಡಿ ಅಬ್ಬಿಮನೆ ಎಂಬಲ್ಲಿ 1-2-1956ರಲ್ಲಿ ಜನಿಸಿದ ಜಯರಾಮ ಶೆಟ್ಟರು ಅಣ್ಣಪ್ಪ ಶೆಟ್ಟಿ-ಅಕ್ಕಮ್ಮ ಶೆಡ್ತಿ ದಂಪತಿಯ ಸುಪುತ್ರ. ಎಳವೆಯಲ್ಲೇ ಯಕ್ಷಗಾನ ಕಲಾಸಕ್ತಿ ಮೈಗೂಡಿಸಿಗೊಂಡ ಶೆಟ್ಟರು ಐದನೇ ತರಗತಿಗೇ ಮಂಗಳ ಹಾಡಿ, ತನ್ನ 12ನೇ ವಯಸ್ಸಿನಲ್ಲೇ ಕಲಾಜೀವನ ಆರಂಭಿಸಿದರು.

ಅಮವಾಸೆಬೈಲು ಕಿಟ್ಟಪ್ಪ ಹೆಬ್ಬಾರ್ ಅವರು ಹಳ್ಳಾಡಿ ಅವರನ್ನು ವೃತ್ತಿಮೇಳಕ್ಕೆ ಪರಿಚಯಿಸಿದರೆ, ಹಳ್ಳಾಡಿ ಮಂಜಯ್ಯ ಶೆಟ್ಟರು ಮೇಳದಲ್ಲಿ ಇವರಿಗೆ ಗುರುವಾಗಿ ದೊರೆತರು. ಸತತ ಪ್ರಯತ್ನ, ಸ್ವಯಂ ಪ್ರತಿಭೆಯ ಮೂಲಕ ರಂಗದಲ್ಲಿ ಸಾರ್ಥಕ ಯಶಸ್ಸುಕಂಡ ಜಯರಾಮಶೆಟ್ಟರು ನಾರ್ಣಪ್ಪ ಉಪ್ಪರರ ನಿರ್ದೇಶನದಲ್ಲಿ ನಿರ್ದೇಶನದಲ್ಲಿ ಹಾಸ್ಯ ಭೂಮಿಕೆಯೊಂದನ್ನು ನಿರ್ವಹಿಸಿ ಗೆಲುವು ಕಂಡರು. ಮೊದಲ ಹಾಸ್ಯವೇಷವೇ ವಿಶೇಷ ಯಶಸ್ಸು ಕಂಡ ನಂತರ ಆ ವಿಭಾಗಕ್ಕೇ ಇವರು ಗಟ್ಟಿಯಾದರು.

ಹಳ್ಳಾಡಿ ಅವರ ಹಾಸ್ಯಗಾರಿಕೆಗೆ ಪಾರಂಪರಿಕತೆ ಹಾಗೂ ಸೃಜನಶೀಲತೆಯ ಸುಂದರ ಮೆರುಗು ಇದೆ. ಅವರದು ಹಾಸ್ಯಭೂಮಿಕೆಗೆ ಸಮುಚಿತವಾದ ಆಳಂಗ, ನೃತ್ಯ, ಅಭಿನಯ, ವೇಷವೈಖರಿ, ಮಾತುಗಾರಿಕೆ. ಹಳ್ಳಾಡಿ

ಜಯರಾಮಶೆಟ್ಟರ ಹಾಸ್ಯ ಪಾತ್ರಗಳಲ್ಲಿ ಹಾಲಾಡಿ ಕೊರ್ಗು ಹಾಸ್ಯಗಾರರ ಛಾಪು, ಕುಂಜಾಲು ಅವರ ರೂಪು, ವಿಟ್ಲ ಜೋಶಿಯವರ ನೆನಪು ಪಡಿ ಮೂಡುವುದನ್ನು ಕಲಾರಸಿಕರು ಗಮನಿಸಿದ್ದಾರೆ.

ಕಮಲಶಿಲೆ 1, ಮಂದಾರ್ತಿ 6, ಅಮೃತೇಶ್ವರಿ 2, ಮೂಲ್ಕಿ 3, ಪೆರ್ಡೂರು 6, ಕುಂಬಳೆ 2, ಸಾಲಿಗ್ರಾಮ 21, ಹೀಗೆ 41 ವರ್ಷಗಳ ಕಲಾ ವ್ಯವಸಾಯ ಅವರಿಗೆ ಸಾರ್ಥಕ ಕೀರ್ತಿ ತಂದಿತ್ತಿದೆ. ಶ್ರೀಯುತರು ಯುಗಳ ತಿಟ್ಟಿನಲ್ಲೂ ವಿಜೃಂಭಿಸಿದ ಶ್ರೇಷ್ಠ ಹಾಸ್ಯಕಲಾವಿದರು.

ಜಯರಾಮಶೆಟ್ಟರ ಕಂದರ, ಕಾಶೀಮಾಣಿ, ಬಾಹುಕ, ಚಂದಗೋಪ, ವಿಡೂರಥ, ದಾರುಕ, ಬ್ರಾಹ್ಮಣ, ರಜಕ. . ಮೊದಲಾದ ಭೂಮಿಕೆಗಳು ವಿಶೇಷ ರಂಜನೆಯಲ್ಲಿ ಕಲಾಪ್ರೇಮಿಗಳ ಮನಗೆದ್ದಿವೆ. ಕುಂದಾಪುರ ಕನ್ನಡ ಸೊಗಸನ್ನು ನಾಡಿನಾದ್ಯಂತ ಹಾಸ್ಯ ಪಾತ್ರಗಳಲ್ಲಿ ತೋರಿದ ಅನುಭವಿ ಹಾಸ್ಯಗಾರ ಜಯರಾಮ ಶೆಟ್ಟರ ಮಡದಿ ರೇಣುಕಾ ಶೆಟ್ಟಿ, ರತೀಶ್, ಸೌಮ್ಯಾ ಮಕ್ಕಳು.

ನಾಡಿನಾದ್ಯಂತ ನೂರಾರು ಸಂಮಾನಗಳು ಶ್ರೀಯುತರಿಗೆ ದೊರಕಿದೆ. ಮುಂಬಯಿ ಬಂಟರ ಸಂಘ, ಬೆಂಗಳೂರು ನಾಡವರ ಸಂಘ, ಬೆಂಗಳೂರು ಕರ್ನಾಟಕ ರಕ್ಷಣಾ ವೇದಿಕೆಯ ಗೌರವ ಸಂಮಾನವೂ ಇವರಿಗೆ ಲಭಿಸಿದೆ.



**ಜಯಾನಂದ, ಹೊಳೆಕೊಪ್ಪ**

*ಹಂದಿಗುಳಿ, ಅಂಚೆ : ಕುಂಜಾಲು, ಆರೂರು ಗ್ರಾಮ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 99011 99536.*

ಭಾವಭರಿತ ವಾಕ್‌ಸಂಪತ್ತು, ಸುಸಂಸ್ಕೃತ ನಾಟ್ಯ, ಅಭಿನಯ ಕಲಾ ಕರಾಮತ್ತು ಆಕರ್ಷಕ ವೇಷಾಲಂಕಾರ, ಪರಿಣಾಮಕಾರಿ ರಂಗವ್ಯವಹಾರ, ಎಲ್ಲವನ್ನೂ ಸಮರ್ಥ ಸ್ತ್ರೀವೇಷಧಾರಿಯಾಗಿ ಕಾಣಿಸುವವರು ಜಯಾನಂದ ಹೊಳೆಕೊಪ್ಪ.

ಜಯಾನಂದರ ಹುಟ್ಟೂರು ಶೃಂಗೇರಿ ತಾಲೂಕಿನ ಹೊಳೆ ಕೊಪ್ಪ. 19-4-1968ರಲ್ಲಿ ಶ್ರೀಯುತರ ಜನನ, ದೂಜ ಪೂಜಾರಿ ಜಲಜಮ್ಮ ಇವರ ತಂದೆ ತಾಯಿ, ಎಂಟನೇ ತರಗತಿಯ ನಂತರ ಯಕ್ಷಗಾನ ಕಲೆಯ ನಂಟು ಅಂಟಿಸಿ ಕೊಂಡ ಜಯಾನಂದ ಹದಿನಾಲ್ಕನೇ ವಯಸ್ಸಿನಲ್ಲಿ ರಂಗವೇರಿದವರು.

ಶಾಲಾ ಉಪಾಧ್ಯಾಯರಾಗಿದ್ದ ಜನಾರ್ದನ ಎಂಬವರು, ಖ್ಯಾತ ಸ್ತ್ರೀವೇಷಧಾರಿ ವೈಕುಂಠ ನಾಯ್ಕರು ಹಾಗೂ ಐರೋಡಿ ಗೋವಿಂದಪ್ಪನವರು ಜಯಾನಂದರ ಯಕ್ಷಗುರುಗಳಾಗಿ ಕಲಾವಿದ್ಯೆ ಬೋಧಿಸಿದವರು. ಅಮೃತೇಶ್ವರಿ 15, ಸೌಕೂರು 1, ಹಾಲಾಡಿ 3, ಮಡಾಮಕ್ಕಿ 1, ಮೇಗರವಳ್ಳಿ 2, ಹೀಗೆ 22 ವರ್ಷಗಳ ಯಕ್ಷಗಾನ ವ್ಯವಸಾಯ ಶ್ರೀಯುತರಿಗೆ ಸಾರ್ಥಕ ಹೆಸರು ನೀಡಿದೆ.

ಜಯಾನಂದ ಹೊಳೆ ಕೊಪ್ಪ ಅವರು ಮಹಾರಾಣಿ ಪಾತ್ರಗಳ ಸೌಮ್ಯ-ಗಂಭೀರ ನಡೆಯನ್ನು ಸ ಹ ಜವಾಗಿ ಸ್ತ್ರೀ ಮಿಕೆಗಳಲ್ಲಿ ಅಭಿವ್ಯಕ್ತಿಗೊಳಿಸಬಲ್ಲರು. ಅವರ ಕಸೆ ಸ್ತ್ರೀವೇಷಗಳೂ ನಿರ್ವಹಣಾ ಪಾತ್ರಗಳಿಗೆ ಜೀವ ಕಳೆ ನೀಡಿವೆ. ಶ್ರೀದೇವಿ, ಅಂಬೆ, ರುಚಿಮತಿ, ದಾಕ್ಷಾಯಿಣಿ, ಗುಣಸುಂದರಿ ಮೊದಲಾದ ಸ್ತ್ರೀ ಭೂಮಿಕೆಗಳಲ್ಲಿ ಅವರ ಪ್ರತಿಭಾವಿಲಾಸ ಕಲಾಪ್ರಿಯರ ಮನಮುದಗೊಳಿಸಿದೆ.

ಅಪಾರ ಪ್ರತ್ಯುತ್ಪನ್ನ ಮತಿತ್ವ, ಅಗಾಧ ಪೌರಾಣಿಕ ಹೊಂದಿದ ಜಯಾನಂದ ಅವರ ಪಾತ್ರ ಜ್ಞಾನವನ್ನುನಿರೂಪಣೆ ಸುಂದರ.

ಗೀತಾ ಪತ್ನಿ, ದೀಕ್ಷಿತ್, ಶಾಶ್ವತ್ ಮಕ್ಕಳು. ಪ್ರಬುದ್ಧ ಸ್ತ್ರೀವೇಷಧಾರಿಯಾದ ಜಯಾನಂದ ಹೊಳೆಕೊಪ್ಪ ಅವರು ಪ್ರಸ್ತುತ ಹಾಲಾಡಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಯುತರ ಕಲಾ ಪ್ರೌಢಿಮೆ ಮೆಚ್ಚಿ ಹಲವು ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



## ಜೋಗು ಕುಲಾಲ್

*ಮಾವಿನ ಕಾಡು. ಅಂಚೆ : ರಟ್ಟಾಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 99451 85975*

ಬಡಗಿನ ಶಾಸ್ತ್ರಸಮನ್ವಿತ ನೃತ್ಯ, ಅಭಿನಯ, ರಂಗ ವ್ಯವಹಾರ, ವೇಷ ವೈಖರಿಯಿಂದ ಕಲಾರಸಿಕರ ಮನಗೆದ್ದ ಪ್ರತಿಭಾನ್ವಿತ ಕಲಾವಿದ ಶ್ರೀ ಜೋಗು ಕುಲಾಲ್.

ಮಂಜು ಕುಲಾಲ್-ವೆಂಕಮ್ಮ ದಂಪತಿಯ ಸುಪುತ್ರರಾಗಿ 26-9-1960ರಲ್ಲಿ ಕುಂದಾಪುರ ತಾಲೂಕಿನ ರಟ್ಟಾಡಿ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಜೋಗು ಕುಲಾಲರು 6ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಆರ್ಥಿಕ ಅನಾನುಕೂಲತೆಯಿಂದ 15ರ ಹರೆಯದಲ್ಲೇ ಮುಖಕ್ಕೆ ಬಣ್ಣ ಹಚ್ಚಿದವರು.

ಕಲಾವಿದ ಕಟೀಲು ಮೇಳ ದ ಶಂಕರನಾರಾಯಣ ಸಂಜೀವ ಬಳೆಗಾರರೇ ಇವರಿಗೆ ಬಣ್ಣದ ಬದುಕಿಗೆ ಪ್ರೇರಣೆಯಾದವರು, ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಹೆರಂಜಾಲು ವೆಂಕಟರಮಣ, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲ- ರಾವ್, ಶ್ರೀಧರ ಹೆಬ್ಬಾರ್, ಮೊದಲಾದ ಯಕ್ಷಗುರುವರರಿಂದ ಕಲಾಶಿಕ್ಷಣವನ್ನು ಪಡೆದ ಜೋಗು ಕುಲಾಲರು ಇಡಗುಂಜಿ 3, ಸಾಲಿಗ್ರಾಮ 4, ಮೂಲ್ಕಿ 2, ಮಂದಾರ್ತಿ 10, ಸೌಕೂರು 11, ಕಮಲಶಿಲೆ 1, ಅಮೃತೇಶ್ವರಿ 1, ಮೇಳಗಳಲ್ಲಿ ಬಣ್ಣದ ಬದುಕು ನಡೆಡಸಿದವರು. ಸುಮಾರು 32ವರ್ಷಗಳ ಕಾಲದ ಇವರ ರಂಗಜೀವನ ಸಾರ್ಥಕವಾಗಿ ನಡೆದಿದೆ.

ಕೈಕೇಯಿ, ಸೀತೆ, ಮೀನಾಕ್ಷಿ, ಚಿತ್ರಾಂಗದೆ ಸುಭದ್ರೆ, ದಮಯಂತಿ, ಕಯಾದು, ದೇವಯಾನಿ, ಮೊದಲಾದ ಸ್ತ್ರೀಪಾತ್ರಗಳಿಗೆ ಪ್ರತಿಭಾ ಸಂಪನ್ನತೆಯಿಂದ ಪ್ರಾಣಗಳೆ - ನೀಡಿದ ಶ್ರೀಯುತರು ಗರತಿ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸು-ವವರು. ಗುಲಾಬಿ ಅವರನ್ನು ವರಿಸಿ ಆದರ್ಶ, ಆಶ್ರಿತಾ, ಆಮೋದ ಎಂಬ ಮೂವರು ಮಂದಿ ಮಕ್ಕಳನ್ನು ಪಡೆದ ಶ್ರೀಯುತರು ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ಸ್ತ್ರೀಪಾತ್ರಧಾರಿ, ಜೋಗು ಕುಲಾಲ್ ಅವರ ಕಲಾ ಶ್ರೀಮಂತಿಕೆಯನ್ನು ಗುರುತಿಸಿದ ಅನೇಕ ಸಂಘ ಸಂಸ್ಥೆಗಳು ಗೌರವ ಸಂಮಾನ ನೀಡಿವೆ.



**ತಿಮ್ಮಪ್ಪ ನಾರಾಯಣ ಹೆಗಡೆ, ಶಿರಳಗಿ**

*ಅಂಚೆ : ಶಿರಳಗಿ, ಸಿದ್ದಾಪುರ ತಾಲೂಕು (ಉ.ಕ)*

ಬಡಾಬಡಗಿನ ಪರಂಪರೆಯ ಸತ್ವ-ತತ್ವಗಳ ಪರಿಪೂರ್ಣ ಪರಿಪಾಕವಾಗಿ ಕಲಾ ಶ್ರೀಮಂತಿಕೆಯನ್ನು ಮೆರೆಯುವ ಶಿಷ್ಟ ಕಲಾವಿದರಲ್ಲಿ ಶಿರಳಗಿ ತಿಮ್ಮಪ್ಪ ನಾರಾಯಣ ಹೆಗಡೆ ಅವರೂ ಒಬ್ಬರು.

ಉತ್ತರ ಕನ್ನಡದ ಶಿರಳಗಿ ಎಂಬಲ್ಲಿ 1957ರ ಆಗಸ್ಟ್ 17 ರಂದು ನಾರಾಯಣ ತಿಮ್ಮಯ್ಯ ಹೆಗಡೆ-ಮಹಾಲಕ್ಷ್ಮೀ ಶ್ರೀ ಹೆಗಡೆ ದಂಪತಿಯ ಪುತ್ರರಾಗಿ ಜನಿಸಿದ ತಿಮ್ಮಪ್ಪ ಹೆಗಡೆಯವರು ಹತ್ತನೇ ತರಗತಿಯವರೆಗೆ ಓದು ನಡೆಸಿ, ತನ್ನ 22ನೇ ವರ್ಷದಲ್ಲೇ ಕಲಾ ಬದುಕು ಕಂಡವರು.

ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳ ನಿರಂತರ ವೀಕ್ಷಣೆಯೇ ತಿಮ್ಮಪ್ಪ ಹೆಗಡೆಯವರಿಗೆ ಕಲಾಪ್ರೇರಣೆ ನೀಡಿತು.

ಇವರ ತಂದೆ ಪ್ರಸಿದ್ಧ ಹವ್ಯಾಸಿ ವೇಷಧಾರಿಯಾದುದರಿಂದ ಕಲಾವಂತ ಮನೆತನದ ಹಿನ್ನೆಲೆ ಇವರಿಗಿತ್ತು. ಗೋಡೆ ನಾರಾಯಣ ಹೆಗಡೆಯವರ ಗುರುತನದಲ್ಲಿ ಸಶಕ್ತ ಕಲಾವಿದ್ಯಾ ಪ್ರೌಢಿಮೆ ಹೊಂದಿದ ತಿಮ್ಮಪ್ಪ ಹೆಗಡೆಯವರು, ಗುಂಡಬಾಳ 1, ಇಡಗುಂಜಿ 15, ಸಾಲಿಗ್ರಾಮ 9, ಶಿರಸಿ-ಪಂಚಲಿಂಗ 1, ಹೀಗೆ 26ವರ್ಷಗಳ ಕಲಾಕೃಷಿ ಪೂರೈಸಿದ್ದಾರೆ.

ಸಾಂಪ್ರದಾಯಿಕ ಕೆತ್ತನೆಯ ಪೌರಾಣಿಕ ಛಾಪಿನ ವೇಷಗಾರಿಕೆ, ಶ್ರುತಿನಿಷ್ಠವಾದ ಪಾಂಡಿತ್ಯಪೂರ್ಣ ನಿರರಳ ಮಾತುಗಾರಿಕೆ, ಔಚಿತ್ಯವರಿತ ಪ್ರಮಾಣಬದ್ಧ ನೃತ್ಯಗಾರಿಕೆ ಮೈಗೂಡಿಸಿಕೊಂಡು ನಿರ್ವಹಣಾ ಭೂಮಿಕೆಗಳಿಗೆ ಸಮುಚಿತ ರಂಗಸ್ವರೂಪ ನೀಡುವ ತಿಮ್ಮಪ್ಪ ಹೆಗಡೆಯವರು ಪುರಾಣ ಪ್ರಸಂಗಗಳ ಅಗಾಧ ಜ್ಞಾನ ಸಂಪನ್ನರು.

ಕೃಷ್ಣ ಸಂಧಾನದ ಧರ್ಮರಾಯ, ಕರ್ಣಪರ್ವದ ಕೌರವ, 'ರಾಮ ನಿರ್ಯಾಣ'ದ ಲಕ್ಷ್ಮಣ, ಕಾರ್ತವೀರ'ದ ಕೃತವೀರ್ಯ, ಸುಭದ್ರಾಕಲ್ಯಾಣದ ಅರ್ಜುನ ಸನ್ಯಾಸಿ, 'ಕಂಸವಧೆ'ಯ ನಾರದ, ಅಕ್ರೂರ, 'ಹರಿಶ್ಚಂದ್ರ'ದ ನಕ್ಷತ್ರಿಕ, ವಸಿಷ್ಠ, ಮೊದಲಾದ ಪೌರಾಣಿಕ ಪಾತ್ರಗಳು ಇಂದಿಗೂ ಶಿರಳಗಿ ತಿಮ್ಮಪ್ಪ ಹೆಗಡೆಯವರ ಸಮರ್ಥ ಕಲಾವಂತಿಕೆಯನ್ನು ನೆನಪಿಸುತ್ತವೆ.

ಬಡಗುತಿಟ್ಟಿನ ಒಬ್ಬ ಸಮರ್ಥ ಪೀಠಿಕಾ ರಾಜವೇಷಧಾರಿಯಾಗಿ ಮೆರೆದ ಶಿರಳಗಿ ಪ್ರತಿಭಾನ್ವಿತ ಕಲಾವಿದರು. ಪತ್ನಿ ಶಾರದ ಹೆಗಡೆ, ಅರುಣ, ಅರ್ಚನಾ ಎಂಬ ಈಶ್ವರು ಮಕ್ಕಳು.

ಹಲವಾರು ಸಂಘ ಸಂಸ್ಥೆಗಳಿಂದ ಶ್ರೀಯುತರಿಗೆ ಸಂಮಾನ ದೊರಕಿದೆ.



**ದಯಾನಂದ, ನಾಗೂರು**

*ಹಳಗೇರಿ – ತೆಂಕುಬೆಟ್ಟು, ಅಂಚೆ : ಕಂಬದಕೋಣೆ,*
*ಕಡೇಮನೆ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಸಾಂಪ್ರದಾಯಿಕ ವರ್ಚಸ್ವೀ ಸ್ತ್ರೀಪಾತ್ರಧಾರಿ ಶ್ರೀ ದಯಾನಂದ ನಾಗೂರು, ಕುಂದಾಪುರ ತಾಲೂಕಿನ ಹಳಗೇರಿ-ತೆಂಕಬೆಟ್ಟು ಎಂಬಲ್ಲಿ ಹುಟ್ಟಿ ಬೆಳೆದ ದಯಾನಂದ ನಾಗೂರು ಶ್ರೀ ಮಹಾಬಲ ಬಳೆಗಾರ ಲಕ್ಷ್ಮೀ ಬಳೆಗಾರಿ ದಂಪತಿಯ ಸುಪುತ್ರ, 25-11- 1952ರಲ್ಲಿ ಜನಿಸಿದ ಶ್ರೀಯುತರು ಆರನೇ ತರಗತಿಯವರೆಗೆ ಶಾಲಾ ಶಿಕ್ಷಣವನ್ನು ಪಡೆದವರು. ಎಳವೆಯಲ್ಲಿಯೇ ಕಲಾಸಕ್ತಿ ಮೈಗೂಡಿಸಿಕೊಂಡ ನಾಗೂರರಿಗೆ ಪರಿಸರದ ಹೂವಿನ ಕೋಲು ತಿರುಗಾಟವೇ ಕಲಾಬದುಕಿಗೆ ಹುಮ್ಮಸ್ಸು ನೀಡಿತು. ಗುರು ಹೆರಂಜಾಲು ವೆಂಕಟರಮಣ ಗಾಣಿಗರೇ ಪ್ರೇರಣಾ ಶಕ್ತಿಯಾದರು.

ತನ್ನ 15ನೇ ವಯಸ್ಸಿನಲ್ಲಿಯೇ ಯಕ್ಷರಂಗಭೂಮಿಗೆ ಚರಣವಿರಿಸಿದ ದಯಾನಂದರಿಗೆ ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಸಶಕ್ತ ಯಕ್ಷಶಿಕ್ಷಣ ದೊರಕಿತು. ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ದಶಾವತಾರಿ ಗುರು ವೀರಭದ್ರನಾಯಕರ ಪ್ರಬಲ ಗುರುಬಲ ಪ್ರಾಪ್ತವಾಯಿತು.

ಇಡಗುಂಜಿ, ಅಮೃತೇಶ್ವರಿ, ಸಾಲಿಗ್ರಾಮ, ಮಂದಾರ್ತಿ, ಮಾರಣಕಟ್ಟೆ, ಗುಂಡಬಾಳ ಮೇಳಗಳಲ್ಲಿ ವ್ಯವಸ್ಥಿತ ಕಲಾವ್ಯವಸಾಯ ನಡೆಸಿದ ನಾಗೂರರ ಕಲಾಬಾಳುವೆ ನಾಲ್ಕು ದಶಕಗಳ ಕಾಲ ನಿಚ್ಚಳವಾಗಿ ನಡೆದಿದೆ.

ಪ್ರೊ. ಬಿ. ವಿ ಆಚಾರ್ ತಂಡದೊಂದಿಗೆ ಅಮೆರಿಕಾ, ಜರ್ಮನಿ, ಕೆನಡಾ, ಜಪಾನ್ ಹಾಗೂ ಡಾ| ಶಿವರಾಮ ಕಾರಂತರ ಯಕ್ಷಗಾನ ನೃತ್ಯ ನಾಟಕ ತಂಡದೊಂದಿಗೆ ರಷ್ಯಾ, ಲಂಡನ್ ದೇಶಗಳನ್ನು ಸಂಚರಿಸಿ ಕಲಾಪ್ರತಿಭೆಯನ್ನು ಪಸರಿಸಿದ ಕಲಾವಿದರಿವರು.

ಸ್ತ್ರೀವೇಷಕ್ಕೊಪ್ಪುವ ಶರೀರ ಸೌಷ್ಠವ, ಮಾಧುರಮಯ ಕಂಠಸಂಪತ್ತು, ಪ್ರೌಢ ಪಾಂಡಿತ್ಯ, ಸಶಕ್ತ ರಂಗನಡೆ, ಸುಪುಷ್ಟ ಪ್ರಸಂಗಾನುಭವ ಸಂಪನ್ನ ದಯಾನಂದ ನಾಗೂರರ ಸುಭದ್ರೆ, ದೌಪದಿ, ಅಂಬೆ, ದಾಕ್ಷಾಯಿಣಿ, ದಮಯಂತಿ, ಚಂದ್ರಮತಿ, ಸೀತೆ, ಮಾಯಾಹಿಡಿಂಬೆ, ಮೊದಲಾದ ಸ್ತ್ರೀಪಾತ್ರಗಳು ಇಂದಿಗೂ ರಂಗಲೋಕದಲ್ಲಿ ಹಚ್ಚಹಸುರಾಗಿ ಉಳಿದುಕೊಂಡಿವೆ.

ಪತ್ನಿ ಲಲಿತಾ ಅವರಲ್ಲಿ ಅಚ್ಯುತ, ಗಣೇಶ, ಮಾಧವ, ಮಮತಾ ಎಂಬ ನಾಲ್ಕು ಮಂದಿ ಮಕ್ಕಳನ್ನು ಪಡೆದ ನಾಗೂರರ ಓರ್ವ ಸುಪುತ್ರ ಮಾಧವ ನಾಗೂರು ಭರವಸೆಯ ಸ್ತ್ರೀಪಾತ್ರಧಾರಿಯಾಗಿ ವೃತ್ತಿರಂಗದಲ್ಲಿದ್ದಾರೆ. ಶ್ರೀಯುತರಿಗೆ ಉಡುಪಿಯ 'ಯಕ್ಷಗಾನ ಕಲಾರಂಗ'ದ ಪ್ರಶಸ್ತಿ, ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ ದೊರಕಿರುತ್ತದೆ.



ದಿವಾಕರ, ಆವರ್ಸೆ

ಆವರ್ಸೆ ಲಿಂಗನ ಮನೆ, ಮೂಡುಬೆಟ್ಟು,
ಅಂಚೆ : ಆವರ್ಸೆ, ಉಡುಪಿ ತಾಲೂಕು/ಜಿಲ್ಲೆ
ದೂರವಾಣಿ : 96323 81715

ಬಡಗಿನ ಬೆಡಗಿನ ಯಕ್ಷತಾರೆ ದಿವಾಕರ ಆವರ್ಸೆ, ಸುಂದರ ರೂಪಸಿರಿ, ಸುಸ್ಪಷ್ಟ ವಾಕ್ ವೈಖರಿ, ಲಾಸ್ಯಪೂರ್ಣ ನೃತ್ಯಾಭಿನಯದ ಸೊಬಗು, ಮುಕ್ಕಾಗದ ರಂಗಾವರಣದ ಮೆರುಗು ಕಲಾವಿದ ದಿವಾಕರ ಆವರ್ಸೆ ಅವರಲ್ಲಿ ಗುರುತಿಸಬಹುದಾಗಿದೆ.

ಆವರ್ಸೆಯ ಕೃಷ್ಣಪೂಜಾರಿ-ಪದ್ದು ಪೂಜಾರಿ ದಂಪತಿಯ ಪುತ್ರರಾಗಿ 14-05-1974ರಲ್ಲಿ ಆವರ್ಸೆಯಲ್ಲಿ ಜನಿಸಿದ ದಿವಾಕರ ಅವರು 7ನೇ ತರಗತಿಗೆ ಶರಣು ಹೊಡೆದು, ತನ್ನ 13ರ ಹರೆಯದಲ್ಲೇ ಕಲಾಬದುಕು ಪ್ರಾರಂಭಿಸಿದರು.

ಪ್ರಸಿದ್ಧ ವೇಷಧಾರಿ ವಂಡಾರು ಬಸವನಾಯಿರಿ ಅವರ ಹೂವಿನ ಕೋಲು ತಿರುಗಾಟದ ಬಾಲಕಲಾವಿದನಾಗಿ ಅರ್ಥಜ್ಞಾನವನ್ನು ಹೆಚ್ಚಿಸಿಕೊಂಡು ಯಕ್ಷಗಾನರಂಗಕ್ಕೆ ಮುಖಮಾಡಿದ ಆವರ್ಸೆ ದಿವಾಕರ, ಆವರ್ಸೆ ಚಂದ್ರಕುಲಾಲರ ಗುರುತನದಲ್ಲಿ ಯಕ್ಷ ಶಿಕ್ಷಣ ಪಡೆದರು. ಅಮೃತೇಶ್ವರಿ ಮೇಳದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ ಇವರು ಪ್ರಸ್ತುತ ಅದೇ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ಕಲಾವ್ಯವಸಾಯದಲ್ಲಿದ್ದಾರೆ. ಅಮೃತೇಶ್ವರಿ, ಬಚ್ಚಗಾರು, ಸಾಲಿಗ್ರಾಮ, ಗೋಳಿಗರಡಿ, ಪೆರ್ಡೂರು, ಕಳವಾಡಿ, ಮೇಳಗಳಲ್ಲಿ ಇವರ ಕಲಾಕೃಷಿ ನಡೆದಿದೆ. 23ವರ್ಷಗಳ ರಂಗವ್ಯವಸಾಯ ಇವರದ್ದಾಗಿದೆ.

ಪುರಾಣ ಕಥಾನಕಗಳಲ್ಲಿರುವ ಚಿತ್ರಾಂಗದೆ, ಶಶಿಪ್ರಭೆ, ದ್ರೌಪದಿ, ಮೀನಾಕ್ಷಿ, ರುಚಿಮತಿ, ರತ್ನಾವತಿ, ಪ್ರಭಾವತಿ, ರುಕ್ಮಿಣಿ, ಭ್ರಮರಕುಂತಳೆ, ಮೊದಲಾದ ಭೂಮಿಕೆಗಳಿಂದ ಅಪಾರ ಜನಮನ್ನಣೆ ಗಳಿಸಿದ್ದಾರೆ. ರಂಗಮಂಚದಲ್ಲಿ ಹುರುಪು-ಹುಮ್ಮಸ್ಸಿನಲ್ಲಿ ಯಕ್ಷಗಾನದ ಹೆಣ್ಣನವನ್ನು ಸಾಕಾರಗೊಳಿಸುವ ಅನುಭವಿ ಕಲಾವಿದ ದಿವಾಕರ ಆವರ್ಸೆ ಪತ್ನಿ ಜ್ಯೋತಿ. ರಂಜಿತ್, ರಜತ್, ಅಜಿತ್ ಮಕ್ಕಳು.

ಪ್ರತಿಭಾವಂತ ಕಲಾವಿದ ದಿವಾಕರ ಆವರ್ಸೆ ಇವರು ಬೆಂಗಳೂರು-ಉಡುಪಿ ಮುಂತಾದೆಡೆ ಹಲವಾರು ಗೌರವ ಸಂಮಾನ ಪಡೆದಿರುತ್ತಾರೆ.



**ದೇವದಾಸ ಶೆಣೈ, ಆರ್ಗೋಡು**

*ಅಂಚೆ : ಕಮಲಶಿಲೆ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*

ಬಡಗುತಿಟ್ಟಿನ ಅನುಬವ ಬದ್ಧ ಮದ್ದಳೆವಾದನದಲ್ಲಿ ಸಾರ್ಥಕ ಹೆಸರುಗಳಿಸಿದವರು ದೇವದಾಸ ಶೆಣೈ,

ಆರ್ಗೋಡು, ಕುಂದಾಪುರ ತಾಲೂಕಿನ ಆರೋಡು ಎಂಬಲ್ಲಿ 27-9-1952ರಲ್ಲಿ ಜನಿಸಿದ ದೇವದಾಸ ಶೆಣೈ ಅವರು ಹಿರಿಯ ವೇಷಧಾರಿ ನರಸಿಂಹ ಶಾನುಭಾಗ್-ಭಾಗೀರಥಿ ದಂಪತಿಯ ಸುಪುತ್ರ, ಹತ್ತರವರೆಗೆ ಅಕ್ಷರಕಲಿಕೆ ನಡೆಸಿ, ಇಪ್ಪತ್ತರಲ್ಲಿ ಯಕ್ಷಗಾನ ಪ್ರಪಂಚವನ್ನು ಪ್ರವೇಶಿಸಿದ ದೇವದಾಸ ಶೆಣೈಯವರಿಗೆ ಕೌಟುಂಬಿಕ ವಾಗಿ ಆನುವಂಶೀಯತೆಯ ಕಲಾ ಬಳುವಳಿಯಿದೆ. ಇವರ ತಂದೆ ಸಮರ್ಥ ವೇಷಧಾರಿಯಾದರೆ, ಚಿಕ್ಕಪ್ಪ ಗೋವಿಂದರಾಯ ಶೆಣೈ ಪ್ರಬುದ್ಧ ಭಾಗವತರಾಗಿದ್ದರು. ಹಾಗಾಗಿ ಕಲಾವಂತಿಕೆಯೆಂಬುದು ಶ್ರೀಯುತರಿಗೆ ಎಳವೆಯಲ್ಲೇ ಮೈಗೂಡುವಂತಾಯಿತು.

ಕಮಲಶಿಲೆ 5, ಪೆರ್ಡೂರು 3, ಹಿರಿಯಡಕ 2, ಹಾಲಾಡಿ 1, ಅಮೃತೇಶ್ವರಿ 4, ಸೌಕೂರು 5, ಮಂದಾರ್ತಿ 5, ಹೀಗೆ ರಜತ ವರ್ಷವನ್ನು ಕಲಾಯಾತ್ರೆಯಲ್ಲಿ ಕಳೆದಿದ್ದಾರೆ. ಪ್ರಸ್ತುತ ಶೆಣೈಯವರು ಮಂದಾರ್ತಿ ಮೇಳದ ಮದ್ದಳೆ ವಾದಕರಾಗಿ ದುಡಿಯುತ್ತಿದ್ದಾರೆ. ಪ್ರಸಂಗಗಳ ಪ್ರತೀ ಪಾತ್ರಗಳ, ಸಂದರ್ಭ-ಸನ್ನಿವೇಶಗಳ ಔಚಿತ್ಯವನ್ನು ಮನಸ್ವೀ ಅರಿತು, ಗಾನಪೂರಕವಾಗಿ ಮದ್ದಳೆ ನುಡಿಸುವ ದೇವದಾಸ ಶೆಣೈಯವರು ಅಗಾಧ ಕಲಾನುಭವ ಹೊಂದಿದವರು.

ಶ್ರೀಯುತರು ಚಂಡೆವಾದನ ಕಲೆಯನ್ನೂ ಬಲ್ಲವರು. ಗೀತಾ ಶೆಣೈ ಎಂಬುವವರು ಇವರ ಧರ್ಮಪತ್ನಿ, ಗುರುಪ್ರಸಾದ ಶೆಣೈ, ಮಾಧವ ಶೆಣೈ, ಹರ್ಷ, ಭಾಗ್ಯಶ್ರೀ ಇವರ ನಾಲ್ಕು ಮಂದಿ ಮಕ್ಕಳು. ಶ್ರೀಯುತರನ್ನು ಹಲವಾರು ಸಂಘಸಂಸ್ಥೆಗಳು, ಸಾಂಸ್ಕೃತಿಕ ಸಂಘಟನೆಗಳು ಗುರುತಿಸಿ ಗೌರವಿಸಿವೆ.



ನರಸಿಂಹ ನಾಯ್ಕ, ಬೆದ್ರಾಡಿ

*ಅಂಚೆ : ಅಂಪಾರು, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಶ್ಲಾಘಿಯೋಗ್ಯ ಪಾತ್ರ ಚಿತ್ರಣ, ಸದೃಢ ಆಳನದಲ್ಲಿ ಕಂಗೊಳಿಸುವ ವೇಷಗಾರಿಕೆ, ತೂಕದ ರಸಾತ್ಮಕ ಮಾತುಗಾರಿಕೆ, ಖಚಿತ ಲಯಗಾರಿಕೆ ಹಾಗೂ ಸುಪುಷ್ಟ ಪ್ರಸಂಗ ನಡೆಯನ್ನು ರಂಗಮುಖದಲ್ಲಿ ನಿಚ್ಚಳವಾಗಿ ಗುರುತಿಸುವಂತೆ ಮಾಡುವ ಅನುಭವಿ ಕಲಾವಿದ ಬೆದ್ರಾಡಿ ನರಸಿಂಹ ನಾಯ್ಕ.

ಕುಂದಾಪುರ ತಾಲೂಕಿನ ಬೆದ್ರಾಡಿ ಎಂಬಲ್ಲಿ ರಾಮನಾಯ್ಕ-ಸಂಕಮ್ಮ ಮೊಗೇರ್ತಿ ದಂಪತಿಯ ಸುಪುತ್ರರಾಗಿ 12-7-1965ರಲ್ಲಿ ಜನಿಸಿದ ನರಸಿಂಹ ನಾಯ್ಕ ಅವರ ಅಕ್ಷರಶಿಕ್ಷಣ ಐದಕ್ಕೆ ಕೈದಾಯಿತು. 15ನೇ ವಯಸ್ಸಿನಲ್ಲೇ ಅವರನ್ನು ಬಣ್ಣದ ಬದುಕು ಕೈ ಬೀಸಿ ಕರೆಯಿತು. ಹಿರಿಯ ಕಲಾವಿದ ಆಲೂರು ತೇಜನವರ ಪ್ರೇರಣೆಯಂತೆ ಯಕ್ಷಗಾನ ವೃತ್ತಿರಂಗಭೂಮಿಗೆ ಮನಸ್ವೀ ಅರ್ಪಣೆಯಾದ ಇವರು, ಹಾರಾಡಿ ಸರ್ವೋತ್ತಮ ಗಾಣಿಗರ ಶಿಷ್ಯನಾಗಿ ಸಶಕ್ತ ಕಲಾನುಭವ ದ್ರವ್ಯವನ್ನು ಸಂಪಾದಿಸಿಕೊಂಡರು.

ಯಕ್ಷಗಾನ ಕಥಾನಕಗಳ ಯಾವುದೇ ನಡೆಯ ಗಂಡುಭೂಮಿಕೆಗಳನ್ನು ಸಮರ್ಥವಾಗಿ ಪೋಷಿಸಬಲ್ಲ ಕಲಾವಂತಿಕೆ ಹೊಂದಿದ ಬೆದ್ರಾಡಿಯವರ ನಾಯಕ, ಪ್ರತಿನಾಯಕ, ಹಾಗೂ ಖಳನಾಯಕ ಪಾತ್ರಗಳ ಯಕ್ಷಗಾನೀಯ ರಂಗ ಚಿತ್ರಣ ಮನ ಮೆಚ್ಚುವಂತಾದ್ದು.

ಮಂದಾರ್ತಿ 8, ಸೌಕೂರು 15, ಹಾಲಾಡಿ 2, ಹೀಗೆ ವೃತ್ತಿ ಜೀವನದಲ್ಲಿ ಶ್ರೀಯುತರ ಸಂಪನ್ನ ಯಕ್ಷಕೃಷಿ ಬೆಳ್ಳಿ ಹಬ್ಬವನ್ನು ಯಶಸ್ವಿಯಾಗಿ ಪೂರೈಸಿದೆ. ಪ್ರಸ್ತುತ ಬೆದ್ರಾಡಿಯವರು ಮಂದಾರ್ತಿ ಮೇಳದ ಕಲಾವಿದರು.

ಕೀಚಕ, ಭೀಮ, ಅರ್ಜುನ, ಕೌರವ, ಕಂಸ, ಭಸ್ಮಾಸುರ, ದುಷ್ಟಬುದ್ಧಿ, ವಿಭೀಷಣ, ವೀರಮಣಿ, ರಾವಣ, ಬಲರಾಮ ಮೊದಲಾದ ಪೌರಾಣಿಕ. ಪಾತ್ರಗಳಲ್ಲಿ ಬೆದ್ರಾಡಿಯವರ ಕಲಾಭಿವ್ಯಕ್ತಿ ಮನೋಜ್ಞ

ಧರ್ಮಪತ್ನಿ ಸರೋಜಾ, ಪ್ರಶಾಂತ, ಪ್ರದೀಪ, ಪ್ರವೀಣ, ಪಧ್ವಿ ಮಕ್ಕಳು, ಪ್ರಬುದ್ಧ ಕಲಾವಿದ ಬೆದ್ರಾಡಿ ನರಸಿಂಹ ನಾಯ್ಕರು ಉಡುಪಿ-ಕುಂದಾಪುರದಲ್ಲಿ ಸಂಪನ್ನಗೊಂಡ ಮೊಗವೀರ ಕಲೋತ್ಸವ ಸೇರಿದಂತೆ ಅನೇಕ ಸಮಾರಂಂಭಗಳಲ್ಲಿ ಸಂಘ-ಸಂಸ್ಥೆಗಳಲ್ಲಿ ಸಂಮಾನಿತರಾಗಿದ್ದಾರೆ.



ನರಸಿಂಹ, ಮಾನ್ಯ

ಕಲ್ಲೆಟ್ಟು ಶಿರಿಯಾರ ಗ್ರಾಮ,
ಅಂಚೆ : ಸ್ಯಾಬರಕಟ್ಟೆ, ಉಡುಪಿ ಜಿಲ್ಲೆ
ದೂರವಾಣಿ : 94810 27368

ರಾಜವೇಷ, ಮುಂಡಾಸುವೇಷ, ಕಿರಾತವೇಷ, ಬಣ್ಣದ ವೇಷ, ಹೀಗೆ ವರ್ಣರಂಜಿತ ಕಲಾವ್ಯಕ್ತಿತ್ವದಲ್ಲಿ ವಿಜೃಂಭಿಸುವ ಸಂಪನ್ನ ಕಲಾವಿದ ಮಾನ್ಯ ನರಸಿಂಹ.

ಉಡುಪಿ ತಾಲೂಕಿನ ಮಾನ್ಯ ಎಂಬ ಹಳ್ಳಿಯಲ್ಲಿ ಕುಷ್ಠ ಮರಕಾಲ-ಲಚ್ಚಮ್ಮ ದಂಪತಿಯ ಪುತ್ರನಾಗಿ 12-06-1960ರಲ್ಲಿ ಜನಿಸಿದ ನರಸಿಂಹ ಅವರು ಆರನೇ ತರಗತಿಯವರೆಗಿನ ಶೈಕ್ಷಣಿಕ ಹಂತದ ಬಳಿಕ 20ನೇ ವಯಸ್ಸಿನಲ್ಲೇ ಯಕ್ಷಗಾನ ಬಣ್ಣದ ಪ್ರಪಂಚಕ್ಕೆ ಮೊಗವೊಡ್ಡಿದರು. ಹಿರಿಯ ಸ್ತ್ರೀವೇಷಧಾರಿ ವಂಡ್ಸೆ ನಾರಾಯಣ ಗಾಣಿಗರ ಪ್ರೇರಣೆಯನ್ನು ಪಡೆದ ನರಸಿಂಹ ಅವರು 1980ರಲ್ಲಿ ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ, ಮಹಾಬಲ ಕಾರಂತ, ಶ್ರೀಧರ ಹೆಬ್ಬಾರರ ಗುರುತನದಲ್ಲಿ ಶಾಸ್ತ್ರೋಕ್ತ ಯಕ್ಷವಿದ್ಯೆಯನ್ನು ಗಳಿಸಿದರು.

ಮಂದಾರ್ತಿ 10, ಪೆರ್ಡೂರು 1, ಇಡಗುಂಜಿ 1, ಸೌಕೂರು 8, ಹಾಲಾಡಿ 6, ಮಡಾಮಕ್ಕಿ 2, ಕಮಲಶಿಲೆ 1, ಗೋಳಿಗರಡಿ 1, ಹೀಗೆ ಮೂರು ದಶಕಗಳ ಕಾಲ ರಂಗಕೃಷಿಯಲ್ಲಿ ಸಾರ್ಥಕ್ಯ ಕಂಡ ಶ್ರೀಯುತರು ಪ್ರಸ್ತುತ ಮಂದಾರ್ತಿ ಮೇಳದ ಬಣ್ಣದ ವೇಷಧಾರಿಯಾಗಿ ಕಲಾಸೇವೆ ನಡೆಸುತ್ತಿದ್ದಾರೆ.

ಅನನ್ಯ ಅನುಭವವನ್ನು ಹೊಂದಿದ ಮಾನ್ಯ ಅವರ ಪ್ರತೀ ಪಾತ್ರಗಳೂ ಸಹೃದಯ ಕಲಾಪ್ರೇಮಿಗಳಿಂದ ಮಾನ್ಯತೆ ಪಡೆದಿವೆ. ಒಂದು ಸುಸೂತ್ರವಾದ ರಂಗ ಚೌಕಟ್ಟಿನಲ್ಲೇ ಯಕ್ಷಗಾನ ಕಲಾಕರ್ಮವನ್ನು ನಡೆಸುವ ಮಾನ್ಯ ನರಸಿಂಹ, ದೇವೇಂದ್ರ, ಧರ್ಮರಾಯ ಮೊದಲಾದ ಪೋಷಕ ರಾಜವೇಷಗಳನ್ನೂ, ಕೌಂಡ್ಲಿಕ, ದಕ್ಷ, ವೀರಮಣಿಯಂತಹ ಮುಂಡಾಸುವೇಷಗಳನ್ನೂ, ವಿಂಧ್ಯಕೇತ, ವಿದ್ಯುಲ್ಲೋಚನ, ಏಕಲವ್ಯ ಮೊದಲಾದ ಪ್ರತಿನಾಯಕ ಪಾತ್ರಗಳನ್ನು, ಬಕಾಸುರ, ಕಿಮ್ಮಿರ, ಹಿಡಿಂಬಾಸುರ, ಶೂರ್ಪನಖಾ, ಹಿಡಿಂಬೆ ವೃತ್ರಜ್ವಾಲೆಯಂತಹ ಗಂಡು-ಹೆಣ್ಣು ಬಣ್ಣದ ವೇಷಗಳನ್ನು ಸಮರ್ಥವಾಗಿ ನಿರ್ವಹಿಸಿ ಗೆಲುವುಕಂಡವರು.

ಪತ್ನಿ ಗೀತಾ, ವಸಂತ, ಪ್ರಶಾಂತ, ವಸಂತಿ ಮಕ್ಕಳು. ಹಿರಿಯ ಪ್ರತಿಭಾಶಾಲಿ ಕಲಾವಿದ ಮಾನ್ಯ ನರಸಿಂಹ ಅವರನ್ನು ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಗೌರವಪೂರ್ವಕವಾಗಿ ಸಮ್ಮಾನಿಸಲಾಗಿದೆ.



## ನರಸಿಂಹ ಶೆಟ್ಟಿ, ಮತ್ಯಾಡಿ

*ಅಂಚೆ : ಯಡಾಡಿ–ಮತ್ಯಾಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ: 97406 89427*

ಬಡಗುತಿಟ್ಟಿನ ಸಾಂಪ್ರದಾಯಿಕ ಶೈಲಿಯ ಭಾಗವತರಲ್ಲಿ ಮತ್ಯಾಡಿ ನರಸಿಂಹ ಶೆಟ್ಟಿ ಅವರದು ಬಲು ದೊಡ್ಡ ಹೆಸರು. 40ಕ್ಕೂ ಹೆಚ್ಚು ಪೌರಾಣಿಕ ಪ್ರಸಂಗಗಳನ್ನು ಕಂಠಸ್ಥ ಮಾಡಿಕೊಂಡಿರುವ ಶೆಟ್ಟರು ಈ ತಿಟ್ಟಿನ ಪರಂಪರೆಯ ಪ್ರತಿನಿಧಿಯಂತೆ ಕಾಣುವ ಅನುಭವಿ ಭಾಗವತರು.

27-6-1927ರಂದು ಕುಂದಾಪುರ ತಾಲೂಕಿನ ಯಡಾಡಿ ಮತ್ಯಾಡಿ ಎಂಬಲ್ಲಿ ಜಿ. ರಾಮಣ್ಣ ಶೆಟ್ಟಿ-ಮುತ್ತಕ್ಕ ಶೆಡ್ತಿ ದಂಪತಿಯ ಸುಪುತ್ರನಾಗಿ ಜನಿಸಿದ ನರಸಿಂಹ ಶೆಟ್ಟಿ ಅವರಿಗೆ ಬಾಲ್ಯದಿಂದಲೇ ಯಕ್ಷಗಾನದ ಗೀಳು. 8ನೇ ತರಗತಿಗೇ ಅಕ್ಷರ ವಿದ್ಯೆಗೆ ಮಂಗಳ ಹಾಡಿ, 25ನೇ ವರ್ಷದಲ್ಲಿ ಗಾನಬದುಕಿಗೆ ಶ್ರೀಕಾರ ಹಾಡಿದ ಶೆಟ್ಟರು, ನಾರ್ಣಪ್ಪ ಉದ್ದೂರರ ಶಿಷ್ಯರಾಗಿ ತಾಳದೀಕ್ಷೆ, ಪ್ರಸಂಗನಡೆ, ರಾಗಾನುಭವ, ರಂಗಪರಿಣತಿಯನ್ನು ಕಲಿತುಕೊಂಡರು

ಕೊಡವೂರು, ಪೆರ್ಡೂರು, ಅಮೃತೇಶ್ವರಿ, ಮಂದಾರ್ತಿ, ಮಾರಣಕಟ್ಟೆ, ಕಳುವಾಡಿ, ಮೇಳಗಳಲ್ಲಿ ತಿರುಗಾಟ ಮಾಡಿದ ಶೆಟ್ಟರು ವೃತ್ತಿರಂಗದಲ್ಲಿ ಸುದೀರ್ಘ 45 ವರ್ಷ ಪೂರೈಸಿ 1992ರಿಂದ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಪತ್ನಿ ಸಾಧಮ್ಮ ಶೆಡ್ತಿ, ಸುಲೋಚನಾ, ಚಂದ್ರಶೇಖರ, ರತ್ನಾವತಿ, ಜ್ಯೋತಿ ಎಂಬ 4 ಮಂದಿ ಮಕ್ಕಳನ್ನು ಪಡೆದ ಶೆಟ್ಟರು ಅನನ್ಯ ಕಲಾನುಭವವನ್ನು ಹೊಂದಿದ ಪ್ರೌಢ ಭಾಗವತರು.

ಇವರಿಗೆ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಅಲ್ಲದೆ ಉಡುಪಿ ಯಕ್ಷಗಾನ ಕಲಾರಂಗವು 'ಭಾಗವತ ನಾರ್ಣಪ್ಪ ಉಳ್ಳೂರ ಪ್ರಶಸ್ತಿ' ನೀಡಿ ಗೌರವಿಸಿದೆ. 'ನಾರಾಯಣ ಕಿಲ್ಲೆ' ಪ್ರಶಸ್ತಿ, ಬಂಟರ ಕಲೋತ್ಸವ' ಸಮ್ಮಾನ ದೊರಕಿರುತ್ತದೆ.



**ನಾಗಪ್ಪ ಗೋವಿಂದ ಗೌಡ, ಗುಣವಂತೆ**

*ಅಂಚೆ : ಗುಣವಂತೆ, ಹೆಬ್ಬಾರಹಿತ್ಲು, ಹೊನ್ನಾವರ*
*ತಾಲೂಕು, ಉ. ಕ.*
*ದೂರವಾಣಿ : 08387 234482*

ಬಡಾಬಡಗಿನ ಪಾರಂಪರಿಕ ರಂಗನಡೆಯನ್ನು ಸುಪುಷ್ಟವಾಗಿ ರೂಢಿಸಿಕೊಂಡು, ಪ್ರೌಢ ಪ್ರತಿಭೆಯ ಪ್ರಭಾವಳಿಯಲ್ಲಿ ಪೌರಾಣಿಕ ಯಕ್ಷಜಗತ್ತನ್ನು ಬೆಳಗಿದ ಹಿರಿಯ ವೇಷಧಾರಿ ನಾಗಪ್ಪ ಗೋವಿಂದ ಗೌಡ ಗುಣವಂತೆ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಹೆಬ್ಬಾರ ಹಿತ್ತು ಎಂಬಲ್ಲಿ 01-10-1944ರಲ್ಲಿ ಗೋವಿಂದ ಗೌಡ-ಗಣಪಿ ಗೌಡ ದಂಪತಿಯ ಮಗನಾಗಿ ಜನಿಸಿದ ನಾಗಪ್ಪ ಗೌಡರು, ಹತ್ತನೇ ಇಯತ್ತೆಯವರೆಗೆ ಅಕ್ಷರ ಕಲಿಕೆ ನಡೆಸಿ, 18ನೇ ವಯಸ್ಸಿನಲ್ಲಿ ಕಲಾಬದುಕಿಗೆ ಹೆಜ್ಜೆಯಿಟ್ಟರು.

ಕೆರೆಮನೆ ಶಂಭುಹೆಗಡೆಯವರ ಅಪ್ರತಿಮ ಕಲಾಸಿದ್ಧಿಯೇ ನಾಗಪ್ಪ ಗೌಡರಿಗೆ ಬಣ್ಣದ ಬದುಕಿಗೆ ಪ್ರೇರಣೆಯಾಯಿತು. ವಿಶೇಷವೆಂದರೆ ಶ್ರೀಯುತರಿಗೆ ಶಂಭು ಹೆಗಡೆಯವರ ಗುರುತನವೂ, ಪ್ರೋತ್ಸಾಹವೂ, ಸಮರ್ಪಕವಾಗಿ ದೊರಕಿತು. ಮಲಗದ್ದೆ ಗಣೇಶಯ್ಯ ಅವರ ರಂಗ ತರಬೇತಿ ಶ್ರೀಯುತರನ್ನು ಸುಯೋಗ್ಯ ಕಲಾವಿದರನ್ನಾಗಿ ರೂಪಿಸುವಲ್ಲಿ ಶಕ್ತವಾಯಿತು. ನಾಗಪ್ಪ ಗೌಡರ ವೇಷಗಾರಿಕೆ, ರಂಗನಡೆ, ನೃತ್ಯಾಭಿನಯ ಹಾಗೂ ಮಾತುಗಾರಿಕೆ ಸಾಮೃದ್ಧಿಕ ಸೊಗಸು - ಬಿಂಬಿಸುತ್ತವೆ. ಸಾಮಾನ್ಯವಾಗಿ ಪೌರಾಣಿಕ ಪ್ರಸಂಗಗಳಲ್ಲಿ ಬರುವ ಎಲ್ಲಾ ವಿಧದ ಪೋಷಕ ಪಾತ್ರಗಳನ್ನೂ ನಿರ್ವಹಿಸಿ ಸೈ ಅನ್ನಿಸಿ ಕೊಂಡಿದ್ದಾರೆ. ಬಬ್ರುವಾಹನ, ವೃಷಸೇನ, ಧರ್ಮಾಂಗದ ಮೊದಲಾದ ಮೂರನೇ ವೇಷಗಳನ್ನು ಯಶಸ್ವಿಯಾಗಿ ನಿರ್ವಹಿಸಿದವರು ಗೌಡರು.

ನಾಗಪ್ಪ ಗೌಡರಿಗೆ ವಿಶೇಷ ಮಾನ್ಯತೆಯನ್ನು ತಂದಿತ್ತ ವೇಷವೆಂದರೆ ಕಿರಾತ, ಶಬರ ದೊರೆಯಾಗಿ ವಿಶಿಷ್ಟ ನೃತ್ಯಾಭಿನಯ ವೈಖರಿ, ವಾಕ್‌ಚಮತ್ಕಾರ, ವೇಷಾಲಂಕರಣದಲ್ಲಿ ರಂಗಮಂಚದಲ್ಲಿ ವಿಜೃಂಭಿಸಿ ಜನಪ್ರಿಯತೆ ಕಂಡಿದ್ದಾರೆ. ಅವರ ಕುಳಿಂದ, ಏಕಲವ್ಯ, ವಿಂಧ್ಯಕೇತ, ಸುನೇತ್ರ, ಮೊದಲಾದ ಭೂಮಿಕೆಗಳು ಜೀವಂತವಾಗಿ ಮೈದಾಳಿವೆ.

ಇಡಗುಂಜಿ ಮೇಳವೊಂದರಲ್ಲೇ ಸುಮಾರು 36ವರ್ಷಗಳ ರಂಗಸೇವೆಯನ್ನು ಸಲ್ಲಿಸಿ ದಾಖಲಾರ್ಹ ಕಲಾವಿದರಾಗಿ ಕಾಣುವ ಗೌಡರು ಪ್ರಸ್ತುತ ನಿವೃತ್ತ ಜೀವನದಲ್ಲಿದ್ದಾರೆ. ಪತ್ನಿ ಮಂಜಿ ಗೌಡ, ರಾಧಾ, ಸದಾನಂದ, ಕಲ್ಪನಾ, ಸವಿತಾ ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳು ಗೌಡರನ್ನು ಗುರುತಿಸಿ ಸಂಮಾನಿಸಿವೆ.



ನಾಗಪ್ಪ ಹಾಸ್ಯಗಾರ, ಹೊಳೆಮಗೆ

ಪಡೂರು ಕಂಬಳಗದ್ದೆಮನೆ, ಅಂಚೆ: ಕೆಂಚನೂರು,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ವಿದುಷ ವಿದೂಷಕರಾಗಿ ಬಡಗುತಿಟ್ಟಿನ ಯಕ್ಷಗಾನ ರಂಗದಲ್ಲಿ ನಗೆ ವ್ಯಂಜನದ ರಂಜನೆಯನ್ನು ಕಲಾರಸಿಕರಿಗೆ ಉಣಬಡಿಸುವ ಹಿರಿಯ ಹಾಸ್ಯಕಲಾವಿದ ಹೊಳೆಮಗೆ ನಾಗಪ್ಪ ಹಾಸ್ಯಗಾರ,

ಕುಂದಾಪುರ ತಾಲೂಕಿನ ಕಳವಿನ ಬಾಗಿಲು- ಹೊಳೆಮಗೆ ಎಂಬ ಹಳ್ಳಿಯಲ್ಲಿ ದೊಟ್ಟನಾಯ್ಕ-ಚಂದು ಮೊಗೇರಿ ದಂಪತಿಯ ಮಗನಾಗಿ ಜನಿಸಿದ ನಾಗಪ್ಪ ಇದೀಗ ಅರವತ್ನಾಲ್ಕರ ಹರಯದಲ್ಲಿರುವ ವೃತ್ತಿನಿಷ್ಠ ಕಲಾವಿದರು.

ಕಡುಬಡತನದ ಕುಟುಂಬದ ನಾಗಪ್ಪ ಅವರು ಎಳವೆಯಲ್ಲೇ ಅನ್ಯಾದೃಶ ಯಕ್ಷಗಾನ ಕಲಾಸಕ್ತಿ ಹೊಂದಿದವರು. ಪರಿಸರದಲ್ಲಿ ನಡೆಯುತ್ತಿದ್ದ ಬಯಲಾಟದ ಆಕರ್ಷಣೆಯಿಂದ ಯಕ್ಷಗಾನ ವೃತ್ತಿ ಬದುಕಿಗೆ ಮನ ಮಾಡಿದ ಶ್ರೀಯುತರು, 13ರ ಹರೆಯದಲ್ಲೇ ಕಾಲಿಗೆ ಗೆಜ್ಜೆ ಕಟ್ಟಿದರು. ನಾಗಪ್ಪ ಅವರಿಗೆ ಬೇಲೂರು ಕುಷ್ಠ ನಾಯ್ಕ ಅವರು ಪ್ರಥಮ ಹೆಜ್ಜೆ ಗುರುವಾದರು. ಹಿರಿಯ ಹಾಸ್ಯಗಾರ ವಂಡ್ಸೆ ನಾಗಯ್ಯ ಶೆಟ್ಟರು ಇವರನ್ನು ಮೇಳಕ್ಕೆ ಸೇರಿಸಿದರು. ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಗುರು ವೀರಭದ್ರನಾಯಕ್, ನೀಲಾವರ ರಾಮಕೃಷ್ಣಯ್ಯ ಹಿರಿಯಡಕ ಗೋಪಾಲರಾಯರಲ್ಲಿ ಪಾರಂಪರಿಕ ಯಕ್ಷಶಿಕ್ಷಣ ಪಡೆದು ಸಂಪನ್ನ ಕಲಾವಿದರಾದರು.

ಮಾರಣಕಟ್ಟೆ 11, ಅಮೃತೇಶ್ವರಿ 10, ಸೌಕೂರು 2, ಗೋಳಿಗರಡಿ 7, ಕಮಲಶಿಲೆ 10, ಹಾಲಾಡಿ 2, ಮೇಗರವಳ್ಳಿ 1, ಕಳವಾಡಿ 1, ಮಡಾಮಕ್ಕಿ 1, ಧರ್ಮಸ್ಥಳ 2, ಪೆರ್ಡೂರು 2, ಬಗ್ವಾಡಿ 2, ಹೀಗೆ 51 ವರ್ಷಗಳ

ಸುದೀರ್ಘ ರಂಗಕೃಷಿಯನ್ನು ಸಾರ್ಥಕ ವಾಗಿ ಪೂರೈಸಿದ ನಾಗಪ್ಪ ಹೊಳೆಮಗೆಯವರು ಯುಗಳ ತಿಟ್ಟಿನ ಸಮರ್ಥ ಹಾಸ್ಯಗಾರರಾಗಿ ಜನಪ್ರಿಯರಾಗಿದ್ದಾರೆ.

ಹಾಸ್ಯಭೂಮಿಕೆಗಳಿಗೊಪ್ಪುವ ಆಳಂಗ, ಭಾಷೆ, ಧ್ವನಿ, ಹಾವ-ಭಾವ, ನೃತ್ಯ-ಅಭಿನಯದಿಂದ ಸೊಗಯಿಸುವ ನಾಗಪ್ಪನವರು ರಂಗವೇರಿದರೆ ಸಾಕು ಅಪಾರ ಪ್ರೇಕ್ಷಕ ವಲಯದೊಂದಿಗೆ ಇದಿರು ಪಾತ್ರಧಾರಿಯೂ ಥಕ್ಕನೆ ತುಟಿಯರಳಿಸಿ ನಕ್ಕುಬಿಡುವ ಸನ್ನಿವೇಶ ಸೃಷ್ಟಿಯಾಗುತ್ತದೆ. ಜೋಡಾಟಗಳಲ್ಲೂ ಇವರ ಹಾಸ್ಯಮಯ ರಂಗತಂತ್ರ ವಿಶಿಷ್ಟವಾದದ್ದು.

ಶ್ರೀಯುತರ ಕಂದರ, ವಿಜಯ, ಪಾಪಣ್ಣ, ಕಾಶೀಮಾಣಿ, ಬಾಹುಕ, ಕೊರವಂಜಿ, ಬ್ರಾಹ್ಮಣ, ವಿದ್ಯುಜ್ಜಿಹ್ವ, ಮಂಥರೆ ಪಾತ್ರಗಳು ಜನಪ್ರಿಯ. ಪತ್ನಿ ಪದ್ದುಮೊಗೇರ್ತಿ, ಜ್ಯೋತಿ, ಸುಜಾತ ಮಕ್ಕಳು.

ನಾಗಪ್ಪ ಹಾಸ್ಯಗಾರರು ಹಲವು ಸಂಘ- ಸಂಸ್ಥೆಗಳಿಂದ ಸಂಮಾನಿತ-ರಾಗಿದ್ದಾರೆ. ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಗೌರವ, ಯಶಸ್ವಿ ಕಲಾವೃಂದ, ತೆಕ್ಕಟ್ಟೆ ಇದರ ದಶಮಾನೋತ್ಸವ ಪುರಸ್ಕಾರ ಪಡೆದಿರುತ್ತಾರೆ.



**ನಾಗಯ್ಯ ಶೆಟ್ಟಿ, ವಂಡ್ಸೆ**

*ಅಂಚೆ : ವಂಡ್ಸೆ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 98801 52747*

ಯಕ್ಷಗಾನ ಪೌರಾಣಿಕ ಪ್ರಪಂಚದ ಸತ್ವನಿಷ್ಠ, ಸುಸಂಸ್ಕೃತ ಹಾಸ್ಯಗಾರಿಕೆಗೆ ಪ್ರಜ್ಞಾವಂತ ಯಕ್ಷರಸಿಕರ ತೋರು ಬೆರಳಿನಲ್ಲಿ ತೋರುವ ಹಿರಿಯ ಹಾಸ್ಯಗಾರ ವಂಡ್ಸ್ ನಾಗಯ್ಯ ಶೆಟ್ಟಿ.

ಕುಂದಾಪುರ ತಾಲೂಕಿನ ವಂಡ್ಸೆಯಲ್ಲಿ ರಾಮಣ್ಣ ಶೆಟ್ಟಿ – ಸದಿಯಮ್ಮ ಶೆಡ್ತಿ ದಂಪತಿಯ ಮಗನಾಗಿ ಜನಿಸಿದ ನಾಗಯ್ಯಶೆಟ್ಟರು 81ರ ಹರೆಯದಲ್ಲಿರುವ ಶ್ರೇಷ್ಠ ಕಲಾವಿದರು.

ನಾಗಯ್ಯಶೆಟ್ಟರ ಓದು ಎರಡನೇ ತರಗತಿ. 12ರ ಹರೆಯದಲ್ಲೇ ಯಕ್ಷಗಾನದ ಬಾಳುವೆ ಕಂಡ ಶೆಟ್ಟರು ಸ್ವಯಂ ಇಚ್ಛೆಯಿಂದಲೇ ಈ ಕ್ಷೇತ್ರವನ್ನು ನೆಚ್ಚಿಕೊಂಡರು. ಬಣ್ಣವನ್ನು ಮುಖಕ್ಕೆ ಹಚ್ಚಿಕೊಂಡರು. ವೀರಭದ್ರನಾಯಕ್

ಹಾಗೂ ಆನಗಳ್ಳಿ ಹಾಸ್ಯಗಾರ ನಾರಾಯಣ ನಾಯ್ಕರ ಶಿಷ್ಯನಾಗಿ ಸಾಂಪ್ರದಾಯಿಕ ಯಕ್ಷಶಿಕ್ಷಣ ಪಡೆದ ನಾಗಯ್ಯ ಶೆಟ್ಟರು ಹಾಸ್ಯಭೂಮಿಕೆಗಳನ್ನೂ, ಪ್ರಸಂಗದ ಪುರುಷ ಪಾತ್ರಗಳನ್ನೂ ಯಶಸ್ವಿಯಾಗಿ ಚಿತ್ರಿಸಿದವರು.

ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆಕಟ್ಟಿ ಅಲ್ಲಿ 25 ವರ್ಷಗಳ ಕಾಲ ಕಲಾ ವ್ಯವಸಾಯ ನಡೆಸಿದ ಶೆಟ್ಟರು, ಕೊಡವೂರು ಮೇಳದಲ್ಲಿ 1 ವರ್ಷ, ಹೆಗ್ಗೋಡು ಮೇಳದಲ್ಲಿ 1 ವರ್ಷ, ಅಮೃತೇಶ್ವರಿ ಮೇಳದಲ್ಲಿ 3ವರ್ಷ, ಪೆರ್ಡೂರು ಮೇಳದಲ್ಲಿ 4ವರ್ಷ, ಕಮಲಶಿಲೆ ಮೇಳದಲ್ಲಿ 4ವರ್ಷ, ಸೌಕೂರು ಮೇಳದಲ್ಲಿ 2 ವರ್ಷ, ಕೊಲ್ಲೂರು ಮೇಳದಲ್ಲಿ 1 ವರ್ಷ, ಇತರೇ ಮೇಳಗಳಲ್ಲಿ 4 ವರ್ಷ, ಕಲಾ ತಿರುಗಾಟ ನಡೆಸಿದ್ದಾರೆ. ಹೀಗೆ ಶೆಟ್ಟರ ರಂಗಜೀವನ 45 ವರ್ಷ ಕಂಡಿದೆ.

ಪುರಾಣ ಪ್ರಸಂಗಗಳ ಹಾಸ್ಯಭೂಮಿಕೆಗಳನ್ನು ಭಾವಪೂರ್ಣವಾಗಿ ರಂಗದ ಮೇಲೆ ತೆರೆದಿಡುವ ನಾಗಯ್ಯಶೆಟ್ಟರ ಪ್ರಖರ ಪ್ರತಿಭೆಗೆ ಕಪ್ಪ ಕೊಡಲೇಬೇಕು. ಅವರು ನಿರ್ವಹಿಸಿದ ಬಾಹುಕ, ವಾಲ್ಮೀಕಿ, ತಾಮ್ರಧ್ವಜಕಾಳಗದ ಬ್ರಾಹ್ಮಣ, ರತಿಕಲ್ಯಾಣದ ದ್ವಾರಪಾಲಕ, ಕಾಶಿಮಾಣಿ, ಮೊದಲಾದ ಪಾತ್ರಗಳು ಅವರದ್ದೇ ವಿಶಿಷ್ಟ ಕಲ್ಪನೆಯಲ್ಲಿ ರಂಗಸ್ಥಳದಲ್ಲಿ ಮೈದಾಳಿ ಕಲಾರಸಿಕರ ಮನ ಮೆಚ್ಚಿಸಿವೆ.

ಅಗಾಧ ಪೌರಾಣಿಕ ಜ್ಞಾನ, ಸಮರ್ಪಕ ರಂಗನಡೆಯನ್ನು ಬಲ್ಲ ಧೀಮಂತ ಕಲಾವಿದ ಶೆಟ್ಟರು, ಅನೇಕಾನೇಕ ಹಾಸ್ಯ ಪಟುಗಳನ್ನು ರಂಗಭೂಮಿಗೆ ನೀಡಿದ್ದಾರೆ.

ಪತ್ನಿ ಪಾರ್ವತಿ ಶೆಡ್ತಿ, ಕುಶಲ ಶೆಟ್ಟಿ, ಜಯರಾಮ ಶೆಟ್ಟಿ, ಮಹಾದೇವಿ, ಚಂದ್ರಮತಿ ಮಕ್ಕಳು. ನಾಗಯ್ಯಶೆಟ್ಟರು ಪ್ರಸ್ತುತ ವಿಶ್ರಾಂತ ಜೀವನದಲ್ಲಿದ್ದು ಕೃಷಿ ಕಾರ್ಯದಲ್ಲಿ ನಿರತರಾಗಿದ್ದಾರೆ.

ಶ್ರೀಯುತರಿಗೆ ಉಡುಪಿ ಯಕ್ಷಗಾನ ಕಲಾರಂಗದ ಬಿ. ವಿ. ಆಚಾರ್ಯ ಪ್ರಶಸ್ತಿ, ಎಂ. ಎಂ. ಹೆಗ್ಡೆ ಪ್ರಶಸ್ತಿ, ಬೈಂದೂರು ಬಂಟರ ಸಂಘದ ಗೌರವ ಸಹಿತ ಹಲವಾರು ಸಂಘ-ಸಂಸ್ಥೆಗಳಲ್ಲಿ ಸಂಮಾನ ದೊರಕಿದೆ.



**ನಾಗು ಗೌಡ, ಕೆಂಜಿಮನೆ**

*ಅಂಚೆ: ನಾಗೂರು, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 08254 268146, 94812 20250*

ಶುದ್ಧ ಯಕ್ಷಗಾನೀಯ ಶೈಲಿಯಲ್ಲಿ ಕಲಾಸೇವೆಗೆ ಬದ್ಧರಾದ ನಾಗುಗೌಡರು ಕುಂದಾಪುರ ತಾಲೂಕಿನ ಕೆಂಜಿಮನೆಯವರು.

ವೆಂಕಟಯ್ಯಗೌಡ-ಮರ್ಲಿಗೌಡ್ತಿ ದಂಪತಿಯ ಸುಪುತ್ರರಾಗಿ ಕೆಂಜಿಮನೆ ಎಂಬಲ್ಲಿ ಜನಿಸಿದ ನಾಗು ಗೌಡರು 62 ವರ್ಷಗಳ ಜೀವನ ರಂಗಸ್ಥಳದಲ್ಲಿದ್ದಾರೆ. ಕೀರ್ತಿಶೇಷರಾದ ಗುರು ವೀರಭದ್ರ ನಾಯಕ್‌ರ ಶಿಷ್ಯರಾಗಿ ಕಲಾವಿದ್ಯೆಯನ್ನು ಗಳಿಸಿದ ಗೌಡರಿಗೆ ಹಿರಿಯ ಕಲಾವಿದ ಕೊಪ್ಪಾಟೆ ಮುತ್ತ ಗೌಡರು ವೃತ್ತಿಕ್ಷೇತ್ರಕ್ಕೆ ಪ್ರೇರಣಾಶಕ್ತಿಯಾದವರು. ರಾಜವೇಷ, ಮುಂಡಾಸುವೇಷಗಳನ್ನು ಸಮರ್ಥವಾಗಿ ಪೋಷಿಸುವ ಇವರ ಕಲಾಭಿ ವ್ಯಕ್ತಿ ಸಾಂಪ್ರದಾಯಿಕವಾಗಿ ಗಮನೀಯವಾಗುತ್ತದೆ.

ಚಿಕ್ಕಂದಿನಿಂದಲೇ ಯಕ್ಷಗಾನಕಲೆಯ ಮೇಲಣ ತೀವ್ರ ಆಸಕ್ತಿ ಮೈಗೂಡಿಸಿಕೊಂಡ ಗೌಡರ ಓದು ಎರಡ ಕ್ಕೇ ಸೀಮಿತ ವಾಯಿತು. ವಯೋಮಾನದಲ್ಲೇ ಯಕ್ಷಗಾನ ಬಣ್ಣದ ಲೋಕದತ್ತ ಆಕರ್ಷಿತರಾದರು. ಮಾರಣಕಟ್ಟೆ 14, ಗೋಳಿಗರಡಿ 1, ಕಮಲಶಿಲೆ 2, ಹಾಲಾಡಿ 2, ಹಿರಿಯಡಕ (ಹಳೆ) 1, ಕಳವಾಡಿ 5, ಬಗ್ವಾಡಿ 5, ಹೀಗೆ 30 ವರ್ಷಗಳ ರಂಗಕೃಷಿ ನಾಗು ಗೌಡರನ್ನು ಸಂಪನ್ನ ಕಲಾವಿದರನ್ನಾಗಿಸಿದೆ.

ಧರ್ಮರಾಯ, ದೇವೇಂದ್ರ, ವಿಭೀಷಣ, ಸುಬುದ್ಧಿ, ಹಂಸಧ್ವಜ, ಶುಕ್ರಾಚಾರ್ಯ, ಮೊದಲಾದ ಪೌರಾಣಿಕ ಭೂಮಿಕೆಗಳಿಗೆ ತನ್ನ ತುಂಬು ಪ್ರತಿಭಾ ಪ್ರೌಢಿಮೆಯಲ್ಲಿ ಜೀವ ತುಂಬಿದ ನಾಗು ಗೌಡರು ಪ್ರಸ್ತುತ ಮಾರಣಕಟ್ಟೆ ಮೇಳದ ಕಲಾವಿದರು. ಸತಿ ಲೀಲಾವತಿ, ಸುಕಾಂತ, ವಾಸುದೇವ, ಶರಾವತಿ, ಪ್ರದೀಪ ಮಕ್ಕಳು. ಸಹೃದಯಿ ಕಲಾವಿದ ನಾಗು ಗೌಡರು ಹಳತರ ಹಿರಿಮೆಯಲ್ಲಿ ಹಾಗೂ ಸಾಂಪ್ರದಾಯಿಕ ಕಲಾಗರಿಮೆಯಲ್ಲಿ ಬಣ್ಣದ ಬಾಳುವೆಯನ್ನು ಸಾಗಿಸುತ್ತಿರುವವರು. ಇವರನ್ನು ಈಗಾಗಲೇ ಹಲವಾರು ಸಂಘ-ಸಂಸ್ಥೆಗಳು ಸಮ್ಮಾನಿಸಿ ಗೌರವಿಸಿವೆ.



**ನಾಗೇಶ್ ಎ. ಎಸ್, ಕಮ್ಮರಡಿ**

*ಕಾಸನಗುಂದ, ಮಣೂರು ಅಂಚೆ,*
*ಉಡುಪಿ ತಾಲೂಕು/ಉಡುಪಿ ಜಿಲ್ಲೆ*
*ದೂರವಾಣಿ : 97409 40679*

ರಸಪರಿಪ್ಲುತ ಪ್ರಗಲ್ಭ ವಾಕ್‌ಚಾತುರ, ಗರಿಷ್ಠ ಮಟ್ಟದ ಭಾವದರ್ಶನ ಕೌಶಲ, ಪಾತ್ರನಿಷ್ಠ ನೃತ್ಯ, ಅಭಿನಯದ ಅಭಿವ್ಯಕ್ತಿ, ಅನುಭವ ಭರಿತ ರಂಗಮಾಹಿತಿ ಪರಿಪಕ್ವವಾಗಿ ರಂಗನೆಲದಲ್ಲಿ ಕಾಣಿಸುವ ಹಿರಿಯ ಕಲಾವಿದ ಎ. ಎಸ್. ನಾಗೇಶ್ ಕಮ್ಮರಡಿ.

ಕಮ್ಮರಡಿ-ಅರೆಹಳ್ಳಿ ಎಂಬಲ್ಲಿ ಸಿದ್ದಪ್ಪ-ಮಂಜುಳ ದಂಪತಿಯ ಸುಪುತ್ರರಾಗಿ 1956ರಲ್ಲಿ ಜನಿಸಿದ ನಾಗೇಶ್ ನಾಲ್ಕನೇ ತರಗತಿಗೆ ವಿದಾಯ ಹೇಳಿ 16ನೇ ವಯಸ್ಸಿನಲ್ಲಿ ಗೆಜ್ಜೆ ಕಟ್ಟಿದರು. ಬಾಲ್ಯದಲ್ಲಿಯೇ ಬೆಸೆದುಕೊಂಡ ಯಕ್ಷ ಕಲಾಸಕ್ತಿಯೇ ಇವರ ರಂಗಬಾಳುವೆಗೆ ಪ್ರೇರಣಾ ಶಕ್ತಿಯಾಯಿತು. ಸುಪ್ರಸಿದ್ಧ ಸ್ತ್ರೀವೇಷಧಾರಿ ಎಂ. ಎ. ನಾಯ್ಕ ಹಾಗೂ ಹಿರಿಯ ಅರ್ಥಧಾರಿ ಕಲಾವಿದ ಮಲ್ಪೆ ವಾಸುದೇವ ಸಾಮಗರ ಗುರುತನವನ್ನು ಪಡೆದ ಕಮ್ಮರಡಿ ನಾಗೇಶ್ ಅವರು ಯಕ್ಷಗಾನ ರಂಗಭೂಮಿಯಲ್ಲಿ ಹಂತ-ಹಂತವಾಗಿ ಬೆಳೆದು ಬೆಳಗಿದವರು.

ಉತ್ತಮ ಸ್ತ್ರೀವೇಷಧಾರಿಯಾಗಿ ಪ್ರಧಾನ ಸ್ಥಾನ ಮಾನ್ಯತೆಯಲ್ಲಿ ಕಲಾರಸಿಕರ ಮನ ಮೆಚ್ಚಿಸಿದ ಶ್ರೀಯುತರು ತದನಂತರ ಪುರುಷವೇಷ ಸ್ಥಾನದಲ್ಲಿ ನಿಂತು ಕಲಾವಂತಿಕೆಯನ್ನು ಮೆರೆದರು. ಸೀತೆ, ದೌಪದಿ, ರುಕ್ಮಿಣಿ, ಶ್ರೀದೇವಿ, ಕಯಾದು, ಸಾವಿತ್ರಿ, ಪ್ರಭಾವತಿ, ಮೊದಲಾದ ಸ್ತ್ರೀ ಪಾತ್ರಗಳಿಗೆ ಜೀವ ತುಂಬಿದ ನಾಗೇಶರು ಚೈತನ್ಯ ಪುರುಷಪಾತ್ರಧಾರಿಯಾಗಿ ಶ್ರೀರಾಮ, ಭೀಷ್ಮ, ದಶರಥ, ದೇವವ್ರತ, ವತ್ಸಾಕ್ಷ್ಯ, ಪುಷ್ಕಳ, ಉಗ್ರಸೇನ, ವಿಕ್ರಮಾದಿತ್ಯ, ಪಾತ್ರಗಳನ್ನು ರಂಗಮಂಚದಲ್ಲಿ ಮೆರೆಸಿದವರು. ಹಾಸ್ಯ ಕಲಾವಿದನಾಗಿ ಬಾಹುಕ, ವಿಜಯ, ಕಾಶೀಮಾಣಿ ಮೊದಲಾದ ಭೂಮಿಕೆಗಳಿಗೆ ವೈನೋದಿಕ ರಂಗು ತುಂಬಿಸಿದವರು. ಪ್ರಸಂಗಕರ್ತರಾಗಿ ನಾಲ್ಕು ಪ್ರಸಂಗ ರಚಿಸಿದವರು.

ಅಮೃತೇಶ್ವರಿ 4, ಮಂದಾರ್ತಿ 7, ಮಾರಣಕಟ್ಟೆ 6, ಮಡಾಮಕ್ಕಿ 3, ಮೂಲ್ಕಿ 3, ಹಾಲಾಡಿ 6, ಸೌಕೂರು 4, ಶಿವರಾಜಪುರ 3, ಹೀಗೆ 36 ವರ್ಷಗಳ ಕಲಾಯಾತ್ರೆಯಲ್ಲಿ ಸಾರ್ಥಕ ಹೆಸರು ಗಳಿಸಿದ್ದಾರೆ.

ಕಮ್ಮರಡಿ ನಾಗೇಶರ ಕೈ ಹಿಡಿದ ಸಂಗಾತಿ ಗುಣವತಿ, ಭಾಗ್ಯಲಕ್ಷ್ಮೀ, ಆದಿತ್ಯ ಅವರ ಉಭಯ ಮಕ್ಕಳು. ಮಳೆಗಾಲದ ಯಕ್ಷಗಾನ ತಿರುಗಾಟದಲ್ಲಿ ಯಕ್ಷಮ್ಮ ದೇವಿ ಪ್ರವಾಸೀ ಯಕ್ಷಗಾನ ಮಂಡಳಿಯ ಯಜಮಾನರಾಗಿಯೂ, ಕಲಾವಿದರಾಗಿಯೂ ಶ್ರೀಯುತರು ಯಕ್ಷಕೃಷಿಯಲ್ಲಿ ತೊಡಗುತ್ತಾರೆ. ಕಮ್ಮರಡಿ, ಹಣಗೇರಿ, ಪೇತ್ರಿ, ಕೀರ್ತಿನಗರ, ಹಾಗೂ ಮಾರಣಕಟ್ಟೆಯಲ್ಲಿ ನಾಗೇಶ್ ಅವರನ್ನು ಕಲಾಭಿಮಾನಿಗಳು ಸಂಮಾನಿಸಿದ್ದಾರೆ.



ನಾಗೇಶ ಕುಲಾಲ

*ನಾಗರಕೊಡಿಗೆ, ಹೊಸನಗರ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 99020 33057*

ಸುಖವಾದ ಸ್ವರತ್ರಾಣದ ಶ್ರವಣಮಂಜುಳ ಗಾನ ವಿಧಾನದಲ್ಲಿ ಗುರುತಿಸಿಕೊಂಡ ಯುವಭಾಗವತ ನಾಗೇಶ ಕುಲಾಲ್.

ನಾಗರ ಕೊಡಿಗೆಯೇ ನಾಗೇಶ ಕುಲಾಲರ ಹುಟ್ಟೂರು. ಶಂಕರಕುಲಾಲ-ಲಚ್ಚಮ್ಮ ದಂಪತಿಯ ಸುಪುತ್ರರಾದ ನಾಗೇಶ ಕುಲಾಲರಿಗೆ ಪ್ರಸ್ತುತ 39ರ ಹರೆಯ.

7ನೇ ತರಗತಿಯ ವಿದ್ಯಾಭ್ಯಾಸದ ಬಳಿಕ ತನ್ನ ಆಸಕ್ತಿದಾಯಕ ಕ್ಷೇತ್ರವಾದ ಯಕ್ಷಗಾನವನ್ನೇ ಬದುಕಿಗೆ ವೃತ್ತಿಯಾಗಿಸಿ ಕೊಂಡ ನಾಗೇಶ ಕುಲಾಲ ಅವರು 17ನೇ ವಯಸ್ಸಿನಲ್ಲೇ ಯಕ್ಷಗಾಯನ ಲೋಕವನ್ನು ಪ್ರವೇಶಿಸಿದರು.

ನಾಗರಕೊಡಿಗೆ ರಾಮಕೃಷ್ಣಯ್ಯ ಅವರಲ್ಲಿ ಪ್ರಾಥಮಿಕ ಕಲಾಶಿಕ್ಷಣವನ್ನು ಪಡೆದ ಇವರು ಕೆ. ಪಿ. ಹೆಗಡೆ ಅವರಲ್ಲಿ ಭಾಗವತಿಕೆ ಶಿಕ್ಷಣವನ್ನು ಪಡೆದರು. ಹಿರಿಯ ವೇಷಧಾರಿಗಳಾಗಿದ್ದ ನಾಗರಕೊಡಿಗೆಯ ರಾಮಕೃಷ್ಣಯ್ಯ ಅವರೇ ಇವರಿಗೆ ಕಲಾಜೀವನಕ್ಕೆ ಪ್ರೇರಣಾಶಕ್ತಿಯಾದರು. ಉತ್ತಮ ರಂಗತಂತ್ರದೊಂದಿಗೆ ರಂಗನಟನ ಕ್ರಿಯಾಶೀಲ ಕಲಾಭಿವ್ಯಕ್ತಿಗೆ ಗಾನ ಸಾರಥಿಕೆಯನ್ನು ನೀಡುವ ಭಾಗವತ ನಾಗೇಶ ಕುಲಾಲರ ಪೌರಾಣಿಕ ಜ್ಞಾನವೂ ಪ್ರಶಂಸನೀಯ. ನಾಗರಕೊಡಿಗೆ 2, ಕಮಲಶಿಲೆ 5, ಬಗ್ವಾಡಿ 1, ಮಾರಣಕಟ್ಟೆ 1, ಹಾಲಾಡಿ 5, ಮಂದಾರ್ತಿ 8, ಹೀಗೆ

22 ವರ್ಷಗಳ ಕಲಾವ್ಯವಸಾಯ ಪೂರೈಸಿದ ಕುಲಾಲರು ಪ್ರಸ್ತುತ ಮಂದಾರ್ತಿ ಮೇಳದ ಭಾಗವತರಾಗಿ ಕಲಾಸೇವೆಯಲ್ಲಿದ್ದಾರೆ.

ಪತ್ನಿ ಜ್ಯೋತಿ, ಸುಮಂತ, ಸುಚೇತಾ ಮಕ್ಕಳು. ನಾಗೇಶ ಕುಲಾಲರನ್ನು ಹಲವು ಸಂಘ-ಸಂಸ್ಥೆಗಳು ಸಂಮಾನಿಸಿವೆ; ನಾಗರಕೊಡಿಗೆ ಯಕ್ಷಗಾನ ಕಲಾಸಂಘ, ಜಕ್ಕನಗದ್ದೆ ಹತ್ತು ಸಮಸ್ತರು, ಕಾರಣಗಿರಿ ಮಹಾಗಣಪತಿ ದೇವಸ್ಥಾನ, ಮುಂಬೈ ಸಚ್ಚಿದಾನಂದ ಸರಸ್ವತಿ ಸಂಘದ ವತಿಯಿಂದ ಗೌರವ ಸಂಮಾನ ದೊರಕಿದೆ.



ನಾಗೇಶ ಗಾಣಿಗ, ಕೋಣ್ಕಿ

ಅಂಚೆ: ನಾಡಗುಡ್ಡೆ ಅಂಗಡಿ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 08254 203361

ಯಕ್ಷಗಾನದ ರಂಗಾವರಣದ ನಿಚ್ಚಳ ನಿಯಮ, ನಿರ್ದಿಷ್ಟ ನೀತಿ ಪೂರ್ಣತೆಯನ್ನು ಗಾಢವಾಗಿ ಬೆಸೆದುಕೊಂಡು, ಅನುಭವಿ ಬಣ್ಣದ ವೇಷಧಾರಿಯಾಗಿ ಬೆಳೆದವರು ಕೋಣಿ ನಾಗೇಶ ಗಾಣಿಗ,

ಕುಂದಾಪುರ ತಾಲೂಕಿನ ಕೋಡ್ಕ ಎಂಬಲ್ಲಿ ಗಣಪಯ್ಯ ಗಾಣಿಗ-ವೆಂಕಮ್ಮ ದಂಪತಿಯ ಸುಪುತ್ರನಾಗಿ 5-3-1950ರಲ್ಲಿ ಜನಿಸಿದ ನಾಗೇಶ ಗಾಣಿಗರು ಚಿಕ್ಕಂದಿನಿಂದಲೇ ಬಣ್ಣದ ಗೀಳು ಹೊಂದಿದ್ದರು.

7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ . ಇವರು ತನ್ನ 23ನೇ ವಯಸ್ಸಿನಲ್ಲಿ ಬಣ್ಣದ ಬದುಕಿಗೆ ಅರ್ಪಣೆಯಾದರು. ಆಗಿನ ಮಾರಣಕಟ್ಟೆ ಮೇಳದ ಯಜಮಾನರಾಗಿದ್ದ ಕುಶಲ ಹೆಗ್ಡೆಯವರ ಹಾರ್ದಿಕ ಪ್ರೋತ್ಸಾಹ, ನಾಗೇಶ ಗಾಣಿಗರ ಕಲಾಜೀವನ ಯಾನಕ್ಕೆ ಪ್ರೇರಣೆಯಾಯಿತು.

ಪೆರ್ಡೂರು ರಾಮ ಶೇರಿಗಾರರ ಶಿಷ್ಯನಾಗಿ ಅನನ್ಯ ಯಕ್ಷಕಲಾ ವಿದ್ಯಾನುಭವವನ್ನು ಸಿದ್ಧಿಸಿಕೊಂಡ ಗಾಣಿಗರು ಮಾರಣಕಟ್ಟೆ 18, ಪೆರ್ಡೂರು 12, ಸೌಕೂರು 4, ಸಾಲಿಗ್ರಾಮ 2, ಕುಮಟಾ 1, ಹೀಗೆ 37 ವರ್ಷಗಳ ಸಾರ್ಥಕ ಕಲಾಕೃಷಿ ಕಂಡಿದ್ದಾರೆ. ಮಹಿರಾವಣ, ಮಹಿಷಾಸುರ, ರಾವಣ, ಘಟೋತ್ಕಚ, ಕಾಲಜಂಘ, ಶೂರ್ಪನಖಿ,

ಹಿಡಿಂಬೆ, ತಾಟಕಿ, ಮೊದಲಾದ ಗಂಡು-ಹೆಣ್ಣು ಬಣ್ಣಗಳಿಗೆ ಪರಂಪರೆಯ ಬಣ್ಣತುಂಬಿದ ನಾಗೇಶ ಗಾಣಿಗರ ವೇಷವೈಖರಿ, ಪಾತ್ರ ಚಿತ್ರಣ, ವಾಕ್‌ಶೈಲಿ ಪ್ರಶಂಸಾತ್ಮಕ.

ಸಹಧರ್ಮಿಣಿ ಪಾರ್ವತಿ, ಸುರೇಶ, ದಿನೇಶ, ಜಯಂತಿ ಮಕ್ಕಳು. ಹಿರಿಯ ಬಣ್ಣದ ವೇಷಧಾರಿ ಗಾಣಿಗರು ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ದುಡಿಯುತ್ತಿದ್ದಾರೆ.

ಶ್ರೀಯುತರಿಗೆ ಹುಟ್ಟೂರ ಸನ್ಮಾನ, ಬೆಂಗಳೂರು - ದ.ಕ. ಜಿಲ್ಲಾ ಸೋಮಕ್ಷತ್ರಿಯ ವೈಷ್ಣವ ಸಮಾಜದ ವತಿಯಿಂದ ಗೌರವ, ಹಾರಾಡಿ ರಾಮ ಗಾಣಿಗ ಪ್ರಶಸ್ತಿ ದೊರಕಿರುತ್ತದೆ.



ನಾಗೇಂದ್ರ ರಾವ್, ಉಪ್ಪುಂದ

ಅಂಚೆ : ನಾಯ್ಕನ ಕಟ್ಟೆ, ಕೆರ್ಗಾಲ್ ಗ್ರಾಮ,
ಉಡುಪಿ ಜಿಲ್ಲೆ.

ರಂಗಸ್ಥಳದ ಹುರುಪು-ಹುಮ್ಮನಸ್ಸಿನ ಯಕ್ಷಚೇತನ ಉಪ್ಪುಂದ ನಾಗೇಂದ್ರ ರಾವ್, ಪೌರಾಣಿಕ ಪಾತ್ರಗಳ ಸಾಂಪ್ರದಾಯಿಕ ಅಂತಃಸತ್ವವನ್ನು ಗಂಭೀರವಾಗಿ ಹೀರಿಕೊಂಡು ಸೃಷ್ಟ್ಯಾತ್ಮಕ ರೂಪ ರೇಖೆಯಲ್ಲಿ ಭೂಮಿಕೆಗಳನ್ನು ಸಚೇತನ ಸೌಂದರ್ಯ್ಯದಿಂದ ರಂಗನೆಲದಲ್ಲಿ ಪ್ರತಿಷ್ಠಾಪಿಸುವ ಪ್ರೌಢ ಪ್ರತಿಭಾಶೀಲತೆ ನಾಗೇಂದ್ರರಾವ್ ಅವರಲ್ಲಿ ಗುರುತಿಸಬಹುದಾಗಿದೆ.

ನಡುತಿಟ್ಟಿನ ನವಿರಾದ ರಸಪಾಕ ತೂಕದಲ್ಲಿ ಬಡಾಬಡಗಿನ ಬೆಡಗನ್ನೂ ಬಡಗಲ್ಲಿ ತೋರುವ ನಾಗೇಂದ್ರರಾವ್ ನಾಯಕ, ಖಳನಾಯಕ ಪಾತ್ರಗಳೆರಡರಲ್ಲೂ ಸಮಾನ ಪ್ರಭುತ್ವ, ಪ್ರಸಿದ್ಧಿ, ಜನಪ್ರಿಯತೆ ಕಂಡವರು. ಸ್ಪಷ್ಟವಾದ ನೃತ್ಯ, ಅಭಿನಯ ರಂಗನಡೆ, ಯಕ್ಷಗಾನೀಯವಾದ ಸಾಹಿತ್ಯಕ ಸ್ವರಭಾರ ನಾಗೇಂದ್ರರಾವ್ ಅವರ ಕಲಾಗುಣಗಳಾಗಿ ಗಣನೀಯವಾಗುತ್ತದೆ.

ಕುಂದಾಪುರ ತಾಲೂಕಿನ ಉಪ್ಪುಂದ ಎಂಬಲ್ಲಿ ಪುಟ್ಟಯ್ಯ ಸುಬ್ಬಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ನಾಗೇಂದ್ರ ಅವರಿಗೆ ಪ್ರಸ್ತುತ 46ವರ್ಷ ಪ್ರಾಯ. ಸಣ್ಣತನದಲ್ಲೇ ಬಣ್ಣದ ಗೀಳು ಅಂಟಿಸಿಕೊಂಡ ನಾಗೇಂದ್ರರ ಓದು ಐದಕ್ಕೇ ಕೈದಾಯಿತು. 14ನೇ ವರ್ಷದಲ್ಲೇ ಇವರು ಯಕ್ಷಗಾನ ಬಣ್ಣದ ಲೋಕಕ್ಕೆ ಮುಖ ಮಾಡಿದ್ದರು. ತಂದೆಯವರ ಪ್ರೇರಣೆ, ಹೆರಂಜಾಲು ಸುಬ್ಬಣ್ಣ ಅವರ ಗುರುಬಲದ ಹಿನ್ನೆಲೆಯಲ್ಲಿ ಯಕ್ಷಬಾಳುವೆ ಕಂಡ ನಾಗೇಂದ್ರರಾವ್ ಅವರ

ಸುಧನ್ವ, ಅರ್ಜುನ, ಕಂಸ, ಸಾಲ್ವ, ದಕ್ಷ, ಕೌರವ, ರುದ್ರಕೋಪ, ಜರಾಸಂಧ ಭೂಮಿಕೆಗಳು ಜನಮನದಲ್ಲಿ ಹಚ್ಚ ಹಸುರಾಗಿ ಉಳಿದುಕೊಂಡಿವೆ.

ನಾಗೇಂದ್ರರ ಸದೃಢವಾದ ಆಳಂಗದಲ್ಲಿ ಪರಿಶೋಭಿಸುವ ಪೌರಾಣಿಕ ಪಾತ್ರಗಳ ರಮ್ಯ ಮನೋಹರ ಕಲಾವೈಭವ ಕಲಾರಸಿಕರ ಕಣ್ಮನ ಸೆಳೆದಿದೆ. ಮಾರಣಕಟ್ಟೆ 2, ಇಡಗುಂಜಿ 2, ಸಾಲಿಗ್ರಾಮ 4, ಕಮಲಶಿಲೆ 2, ಮಂದಾರ್ತಿ 8, ಪೆರ್ಡೂರು 12, ಹೀಗೆ ಮೂರು ದಶಕಗಳ ಕಾಲದ ಅವರ ಕಲಾಸೇವೆ ಮುಂದುವರಿದಿದೆ.

ಮಡದಿ ಸವಿತಾ, ವಸುಂಧರಾ, ಮೇಖಲಾ, ವಿದ್ಯಾಶ್ರೀ ಎಂಬ ಮೂವರು ಪುತ್ರಿಯರು. ಶ್ರೇಷ್ಠ ಯಕ್ಷನಟ ಉಪ್ಪುಂದ ಅವರನ್ನು ನಾಡಿನ ಹಲವು ಸಂಘ-ಸಂಸ್ಥೆಗಳು ಗೌರವಿಸಿವೆ.



**ನಾರಾಯಣ ಗಾಣಿಗ, ವಂಡ್ಸೆ**

*ಅಂಚೆ : ವಂಡ್ಸೆ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ: 93410 49117*

ಪರಂಪರೆಯ ಯಕ್ಷಗಾನ ರಂಗ ಸಂವಿಧಾನದಲ್ಲಿ ಪುರಾಣ ಪ್ರಪಂಚದ ಸ್ತ್ರೀಯರನ್ನು ಪಾತ್ರಗಳ ಮೂಲಕ ಸಚೇತನ ರಂಗಶಿಲ್ಪವಾಗಿಸಿದ ಹಿರಿಯ ಕಲಾವಿದ ವಂಡ್ಸೆ ನಾರಾಯಣ ಗಾಣಿಗ,

ಕುಂದಾಪುರ ತಾಲೂಕಿನ ವಂಡ್ಸೆಯ ಶೇಷಗಾಣಿಗ-ಫಣಿಯಮ್ಮ ಗಾಣಿಗ ಇವರ ಸುಪುತ್ರ ನಾರಾಯಣ ಗಾಣಿಗರು 1937ನೇ ಇಸವಿಯ ಜೂನ್ ಆರರಂದು ಜನಿಸಿದರು. ಎಳವೆಯಲ್ಲಿಯೇ ಯಕ್ಷಗಾನ ಕಲೆಯ ಮೇಲಣ ಅನ್ಯಾದೃಶ ಆಸಕ್ತಿ ಮೈಗೂಡಿಸಿಕೊಂಡಿದ್ದ ನಾರಾಯಣ ಗಾಣಿಗರಿಗೆ ಪ್ರಸಿದ್ಧ ಹಿರಿಯ ಕಲಾವಿದ ಅಣ್ಣ ವಂಡ್ಸೆ ಮುತ್ತಗಾಣಿಗರ ಪ್ರೋತ್ಸಾಹವೇ ಕಲಾ ಬದುಕಿಗೆ ಪ್ರೇರಣೆಯಾಯಿತು. ಊರಿನ ಕಲಾಭಿಮಾನಿಗಳ ಹಾರ್ದಿಕ ಸಹಕಾರ ಸ್ಫೂರ್ತಿ ನೀಡಿತು. ಗಾಣಿಗರ ಅಕ್ಷರಾಭ್ಯಾಸ ಐದಕ್ಕೇ ಕೈದಾಯಿತು. 12ನೇ ವಯಸ್ಸಿನಲ್ಲೇ ಅವರಿಗೆ ಬಣ್ಣದ ಬದುಕು ಪ್ರಾಪ್ತವಾಯಿತು.

ದಶಾವತಾರಿ ಗುರು ವೀರಭದ್ರನಾಯಕ್ ಹಾಗೂ ಮಟಪಾಡಿ ಶ್ರೀನಿವಾಸ ನಾಯಕರ ಗುರುತನದಲ್ಲಿ ಯಕ್ಷಗಾನ ಕಲಾವಿದ್ಯೆಯನ್ನು ಆರ್ಜಿಸಿಕೊಂಡ ನಾರಾಯಣ ಗಾಣಿಗರು, ತನ್ನ ಆಕರ್ಷಕ ರೂಪ, ಸ್ತ್ರೀ ಸಹಜ ಕಂಠಶ್ರೀ, ಪಾಂಡಿತ್ಯಪೂರ್ಣ ವಚೋವೈಖರಿ, ಲಾಲಿತ್ಯಮಯ ನೃತ್ಯ, ಅಭಿನಯ, ಉತ್ಕೃಷ್ಟ ರಂಗವ್ಯವಹಾರಗಳಿಂದ ಸಮಷ್ಟಿಕಲೆಯ ಸಮರ್ಥ ಸ್ತ್ರೀವೇಷಧಾರಿಯಾಗಿ ಸಾರ್ಥಕ ಹೆಸರು ಗಳಿಸಿದರು.

ಮಾರಣಕಟ್ಟೆ 9, ಮಂದಾರ್ತಿ 3, ಕೊಲ್ಲೂರು 2, ಧರ್ಮಸ್ಥಳ 2, ಕುಂಡಾವು 2, ಕೂಡ್ಲು 2, ಸುರತ್ಕಲ್ 2, ಪೆರ್ಡೂರು 1, ಸಾಲಿಗ್ರಾಮ 1, ಇಡಗುಂಜಿ 4 ಮೊದಲಾದ ಮೇಳಗಳಲ್ಲಿ 28 ವರುಷಗಳ ಕಾಲ ಕಲಾಕೃಷಿ ನಡೆಸಿ ಪ್ರಸಿದ್ಧಿಯ ಶೃಂಗ ಸಾರ್ಥಕ್ಯವನ್ನು ಕಂಡ ವಂಡ್ಸೆ ನಾರಾಯಣ ಗಾಣಿಗರು ಡಾ. ಶಿವರಾಮ ಕಾರಂತರ 'ಯಕ್ಷರಂಗ'ದ ಕಲಾವಿದನಾಗಿಯೂ 5ವರ್ಷ ಕಲಾ ಸೇವೆ ನಡೆಸಿದವರು.

ಗಾಣಿಗರ ದ್ರೌಪದಿ, ಶಶಿಪ್ರಭೆ, ಚಿತ್ರಾಂಗದೆ, ದೇವಯಾನಿ, ಚಿತ್ರಾಕ್ಷಿ, ಮಂಡೋದರಿ, ಮೀನಾಕ್ಷಿ ತಾರೆ, ಸಾವಿತ್ರಿ, ದಮಯಂತಿ, ಸೀತೆ, ಕೈಕೇಯಿ, ಮೊದಲಾದ ಪಾತ್ರಗಳು ಪೌರಾಣಿಕ ಪಾತ್ರ ನ್ಯಾಯದಲ್ಲಿ ಅಜರಾಮರವಾಗಿ ಉಳಿದುಕೊಂಡಿದೆ.

ಯುಗಳ ತಿಟ್ಟಿನ ಪ್ರತಿಭಾಸಂಪನ್ನ ಮೇರು ಕಲಾವಿದ ವಂಡ್ಸೆ ನಾರಾಯಣ ಗಾಣಿಗರ ಅವರು ಶಕುಂತಲಾ ಗಾಣಿಗ ಅವರನ್ನು ವರಿಸಿ ನಾಲ್ಕು ಮಕ್ಕಳನ್ನು ಪಡೆದಿದ್ದಾರೆ.

ಗಾಣಿಗರ ಕಲಾ ಶ್ರೀಮಂತಿಕೆಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಹಾರಾಡಿ ರಾಮಗಾಣಿಗ ಪ್ರಶಸ್ತಿ, 'ಯಕ್ಷಗಾನ ಕಲಾರಂಗದ ರಜತೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ಸಂಮಾನ, ಗೌರವಗಳು ಸಂದಿವೆ.



ನಾರಾಯಣ ದೇವಾಡಿಗ, ಚಿತ್ತೂರು

ಚಿತ್ತೂರು, ಹೆಗ್ಗಡೆಗದ್ದೆ ಮನೆ, ಅಂಚೆ : ಚಿತ್ತೂರು,
ಕುಂದಾಪುರ ತಾಲೂಕು
ದೂರವಾಣಿ : 08254-320952

ಸಾಂಪ್ರದಾಯಿಕ ರಂಗ ಸತ್ವ-ತತ್ವಗಳನ್ನು ಸುಪುಷ್ಟವಾಗಿ ಮೈಗೂಡಿಸಿಕೊಂಡು ಸಮರ್ಥ ಕಲಾವಿದರಾಗಿ ರೂಪುಗೊಂಡವರು ಚಿತ್ತೂರು ನಾರಾಯಣ ದೇವಾಡಿಗರು,

ಕುಂದಾಪುರ ತಾಲೂಕಿನ ಹಲ್ನಾಡು ಎಂಬ ಹಳ್ಳಿಯಲ್ಲಿ 26-11-1951ರಲ್ಲಿ ಜನಿಸಿದ ನಾರಾಯಣ ದೇವಾಡಿಗ ಅವರು ಮುತ್ತದೇವಾಡಿಗ-ಶೇಷಮ್ಮ ದಂಪತಿಯ ಸುಪುತ್ರ ಐದನೇ ತರಗತಿಯವರೆಗಿನ ಶಿಕ್ಷಣದ ಬಳಿಕ, ಅಂದರೆ ತನ್ನ ಹದಿನಾಲ್ಕರ ಹರೆಯದಲ್ಲೇ ಗೆಜ್ಜೆ ಕಟ್ಟಿ, ರಂಗಮಂಚಕ್ಕೆ ಹೆಜ್ಜೆ ಹಾಕಿದ ದೇವಾಡಿಗರು ಸ್ವಯಂ ಕಲಾಸಕ್ತಿಯನ್ನು ಪ್ರವರ್ಧಿಸಿಕೊಂಡು ಅದನ್ನೇ ರಂಗಬಾಳುವೆಗೆ ಪ್ರೇರಣೆಯಾಗಿಸಿ ಮುನ್ನಡೆದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಗುರು ವೀರಭದ್ರನಾಯಕ್, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲರಾವ್, ಅವರಲ್ಲಿ ಶಾಸ್ತ್ರೋಕ್ತ ರಂಗಶಿಕ್ಷಣವನ್ನು ಪಡೆದ ನಾರಾಯಣ ದೇವಾಡಿಗರು ಈ ರಂಗಭೂಮಿಯಲ್ಲಿ ಪ್ರಧಾನ ಸ್ತ್ರೀವೇಷಧಾರಿಯಾಗಿ ಪ್ರಸಿದ್ಧಿ ಪಡೆದರು.

ಪಾತ್ರೋಚಿತ ನೃತ್ಯ, ಅಭಿನಯ, ಹಾವ-ಭಾವ, . ವಾಚಿಕ, ರಂಗವೈಖರಿ, ವೇಷವೈಭವದಲ್ಲಿ ಪೌರಾಣಿಕ ಪಾತ್ರಪ್ರಪಂಚವನ್ನು ಕಣ್ಮುಂದಿರಿಸುವ ಅನುಭವಿ ಕಲಾವಿದ ದೇವಾಡಿಗರು ಮಾರಣಕಟ್ಟೆ 4, ಕಮಲಶಿಲೆ 12, ಸಾಲಿಗ್ರಾಮ 1, ಕಳವಾಡಿ 1, ಪೆರ್ಡೂರು 1, ಮಡಾಮಕ್ಕಿ 2, ಅಮೃತೇಶ್ವರಿ 1, ಗೋಳಿಗರಡಿ 4, ಸೌಕೂರು 6, ಮಾರಣಕಟ್ಟೆ 10, ಹೀಗೆ 42ವರ್ಷಗಳ ಕಲಾಯಾತ್ರೆ ಗೈದಿದ್ದಾರೆ. ಪ್ರಸ್ತುತ ಮಾರಣಕಟ್ಟೆ ಮೇಳದ ಕಲಾವಿದರು.

ಅಂಬೆ, ಮೀನಾಕ್ಷಿ, ದೌಪದಿ, ದಮಯಂತಿ, ಚಿತ್ರಾಂಗದೆ, ಮೊದಲಾದ ಸ್ತ್ರೀಭೂಮಿಕೆಗಳನ್ನೂ ಭೀಷ್ಮ, ಕೃಷ್ಣ, ದ್ರೋಣ, ರಾಮ, ರಾವಣ, ಈಶ್ವರ, ಅರ್ಜುನ ಮೊದಲಾದ ಪುರುಷವೇಷಗಳನ್ನೂ ಚಿತ್ತೂರು ಅವರು ಯಶಸ್ವಿಯಾಗಿ ನಿರ್ವಹಿಸುತ್ತಾರೆ.

ಪತ್ನಿ ಗಿರಿಜಾ, ನಾಗರತ್ನಾ, ನಾಗೇಂದ್ರ, ನಾಗಾಂಬಿಕಾ ಮಕ್ಕಳು. ಶ್ರೀಯುತರನ್ನು ಹಲವಾರು ಸಂಘ-ಸಂಸ್ಥೆಗಳು ಸಂಮಾನಿಸಿವೆ.



ನಾರಾಯಣ ಭಾಗವತ್, ನೆಬ್ಬೂರು

*ಅಂಚೆ: ಜಾನ್ಮನೆ, ಶಿರಸಿ ತಾಲೂಕು, (ಉ.ಕ)*
*ದೂರವಾಣಿ 08384-263574*

ಅಗಾಧ ಪೌರಾಣಿಕಜ್ಞಾನ ಸಂಪತ್ತಿಕೆಯ ಭಾವಪೂರ್ಣ ಭಾಗವತಿಕೆಯಲ್ಲಿ ಪಾರಂಪರಿಕ ಮೆರುಗು, ಪ್ರಯೋಗಶೀಲ ಬೆರಗು ತೋರುವ ಪ್ರಬುದ್ಧ, ಪ್ರಸಿದ್ಧ ಭಾಗವತ ನೆಟ್ಟೂರು ನಾರಾಯಣ ಹೆಗಡೆ.

ಉತ್ತರಕನ್ನಡದ ಶಿರಸಿಯ ನೆಲ್ಲೂರು ಇವರ ಹುಟ್ಟೂರು. ತಂದೆ ದೇವರು ಹೆಗಡೆ, ತಾಯಿ ಗಣಪಿ ಹೆಗಡೆ. ಇವರ ಅಕ್ಷರ ಶಿಕ್ಷಣ ನಾಲ್ಕನೇ ತರಗತಿಯ ವರೆಗೆ ಮಾತ್ರ. 20ನೇ ವಯಸ್ಸಿನಲ್ಲೇ ಶ್ರೀಯುತರು ಗಾನಬದುಕಿಗೆ ಶ್ರೀಕಾರ ಹಾಡಿದವರು. ಶ್ರೀಯುತರ ತಂದೆ ಭಾಗವತರಾಗಿದ್ದರು ಹಾಗಾಗಿ ಗಾನ ಕಲೆ ಇವರಿಗೆ ಎಳವೆಯಲ್ಲಿಯೇ ದೊರಕುವಂತಾಯಿತು. ಭಾಗವತ ಗಣಪತಿ ಹೆಗಡೆ ಕೊಡ್ಡಿ ಪಾಲು ಅವರ ಪ್ರೇರಣೆ ಇವರನ್ನು ಈ ರಂಗಭೂಮಿಗೆ ಎಳೆದು ತಂದಿತು. ಶ್ರೇಷ್ಠ ಕಲಾವಿದ ಕೆರೆಮನೆ ಶಿವರಾಮ ಹೆಗಡೆಯವರ ಗುರುತನವೂ ಇವರಿಗೆ ದೊರಕಿತು.

ಕೆರೆಮನೆ ಕುಟುಂಬದ ಕಲಾ ಪರಂಪರೆಯಲ್ಲಿ ಶ್ರೀಯುತರ ಗಾನವಾಹಿನಿ ದೇಶ ವಿದೇಶಗಳಲ್ಲಿ ಪಸರಿಸುವಂತಾಗಿದೆ. ಶ್ರೀಯುತರು ಸಾಲಿಗ್ರಾಮ-2, ಅಮೃತೇಶ್ವರಿ-1, ಪಂಚಲಿಂಗೇಶ್ವರ-1, ಮೂರೂರು ದೇವರು ಹೆಗಡೆ ಮೇಳ-1, ದಲ್ಲಿ ಕಲಾವ್ಯವಸಾಯ ನಡೆಸಿದ್ದಾರೆ. ಇಡಗುಂಜಿ ಮೇಳದಲ್ಲೇ ಸುಮಾರು 35 ವರ್ಷಗಳ ಕಾಲ ಭಾಗವತರಾಗಿ ಅನನ್ಯ ಕಲಾಸೇವೆ ಸಲ್ಲಿಸಿದ್ದಾರೆ. ಒಟ್ಟು ಐದು ದಶಕಗಳ ಸಾರ್ಥಕ ರಂಗಜೀವನ ಶ್ರೀಯುತರದ್ದು.

ನೆತ್ತೂರು ನಾರಾಯಣ ಹೆಗಡೆಯವರು ಸುಮಧುರ ಕಂಠಸಿರಿ ಹಾಗೂ ಅಸಾಧಾರಣ ರಂಗ ತಂತ್ರದಲ್ಲಿ ಮೆರೆದ ಮೇರು ಭಾಗವತರು. ನೆಲ್ಲೂರರ ಪುರಾಣ ಜ್ಞಾನವಂತೂ ಅಪಾರ. ಭಾವನಿರ್ಭರ ಯಕ್ಷಗಾನ ಭಾಗವತಿಕೆಯಲ್ಲಿ 'ನೆಲ್ಲೂರು ಶೈಲಿ'ಯನ್ನು ರಂಗದಲ್ಲಿ ಉದ್ಘಾಟಿಸಿದ ಹಿರಿಮೆ ಇವರದ್ದಾಗಿದೆ.

ನಾರಾಯಣ ಭಾಗವತರ ಅಪ್ರತಿಮ ಕಲಾ ಶ್ರೀಮಂತಿಕೆಗೆ ಮಾರುಹೋದ ನಾಡಿನ ಅನೇಕಾನೇಕ ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ಶ್ರೀಯುತರಿಗೆ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಪ್ರೊ. ಬಿ. ವಿ ಆಚಾರ ಪ್ರಶಸ್ತಿ, ಕೆರೆಮನೆ ಶಿವರಾಮ ಪ್ರಶಸ್ತಿ ದೊರಕಿರುತ್ತದೆ. 'ನೆಲ್ಲೂರು ನಿನಾದ' ಎಂಬ ಅಭಿನಂದನಾ ಗ್ರಂಥವು ಬಿಡುಗಡೆಯಾಗಿದೆ.

ಪತ್ನಿ ಶರಾವತಿ ಹೆಗಡೆ, ವಿನಾಯಕ, ಶಕುಂತಲಾ ಎಂಬ ಮಕ್ಕಳನ್ನು ಪಡೆದಿದ್ದಾರೆ. ಉಡುಪಿಯ ಯಕ್ಷಗಾನ ಕಲಾರಂಗ ಸಾಕ್ಷಚಿತ್ರದ ಸಿ.ಡಿ. ಪ್ರಕಟಿಸಿದೆ.



ನಾರಾಯಣ, ಸುಳಗೋಡು

*ಶಿರಿಯಾರ, ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ 98800 09537*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಸದಭಿರುಚಿಯ ಹಾಸ್ಯನಟ ಸುಳಗೋಡು ನಾರಾಯಣ ಹಾಸ್ಯಗಾರ, ಔಚಿತ್ಯಪೂರ್ಣ ಕುಣಿತ, ಅಭಿನಯ, ವೈನೋದಿಕ ರಸಪರಿಪೂರ್ಣ ಪ್ರಬುದ್ಧ ವಾಗ್ವೈಖರಿ. ಪಾತ್ರಗಳ ನಾಡಿ ಮಿಡಿತವನ್ನರಿತ ಅನುಭವಪೂರ್ಣ ಕಲಾಭಿವ್ಯಕ್ತಿ ಈ ಹಿರಿಯ ಹಾಸ್ಯ ಕಲಾವಿದನ ಪ್ರತಿಭಾ ಸೊತ್ತಾಗಿ ಗಮನೀಯವಾಗುತ್ತವೆ.

ಕುಂದಾಪುರ ತಾಲೂಕಿನ ಸುಳಗೋಡು ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನಾರಾಯಣ ಹಾಸ್ಯಗಾರರು ಕುಷ್ಠ ಮರಕಾಲ-ಕೃಷ್ಣ ದಂಪತಿಯ ಸುಮತ್ರ ಹಳ್ಳಿ ಹೊಳೆ - ಚಕ್ರಮೈದಾನ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ, ತನ್ನ 15ರ ಹರೆಯದಲ್ಲೇ ಕಮಲಶಿಲೆ ಮೇಳದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದರು. ಹೆರಂಜಾಲು ಸುಬ್ಬಣ್ಣ, ಕೋಡಿ ಶಂಕರಗಾಣಿಗ, ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯನವರ ಗುರುತನ, ಎಂ. ಎಂ ಹಗ್ದೆಯವರ ಸಮರ್ಥ ಮಾರ್ಗದರ್ಶನ ಈ ಕಲಾವಿದನ ರಂಗಜೀವನಕ್ಕೆ ಸಮರ್ಪಕ ಪ್ರೇರಣಾ ಶಕ್ತಿಯಾಯಿತು.

ಸುಳಗೋಡು ಅವರು ಹಾಸ್ಯಗಾರನಾಗುವ ಮೊದಲು ವೃತ್ತಿಮೇಳಗಳ ಸಮರ್ಥ ಪುರುಷ ವೇಷಧಾರಿಯಾಗಿ ವಿಜೃಂಭಿಸಿದ್ದರು. ಭಸ್ಮಾಸುರ, ಕೌರವ, ಭೀಮ, ಅರ್ಜುನ, ಅಶ್ವತ್ಥಾಮ, ಕೋಟೆಯ ಕರ್ಣ ಮೊದಲಾದ ಭೂಮಿಕೆಗಳು ಅವರಿಗೆ ಹೆಸರು ತಂದಿತ್ತಿವೆ. ಅದೊಂದು ಸಂದರ್ಭ ಮುತ್ತಯ್ಯ ಹೆಗ್ಡೆಯವರ ಆಶಯದಂತೆ 'ರತಿ ಕಲ್ಯಾಣ'ದ ವಿದೂಷಕನಾಗಿ ರಂಜಿಸಿದ್ದೇ ತಡ ಸುಳಗೋಡು ಹಾಸ್ಯಭೂಮಿಕೆಗಳಿಗೆ ಕಾಯಂ ಆದರು.

ಶ್ರೀಯುತರ ಭೀಷ್ಮ ಪ್ರತಿಜ್ಞೆಯ ಕಂದರ... 'ವಿಜಯ'ದ ಬ್ರಾಹ್ಮಣ, ಚಂದ ಗೋಪ, ಬಾಹುಕ, ಪಾಪಣ್ಣ.... ವಿದ್ಯುಜ್ಜಿಹ್ವ.. ಮೊದಲಾದ ಭೂಮಿಕೆಗಳು ಜನಪ್ರಿಯವಾಗಿವೆ. ಕಮಲಶಿಲೆ 1, ಮಾರಣಕಟ್ಟೆ 10, ಸೌಕೂರು 19,

ಹಾಲಾಡಿ 3, ಮಂದಾರ್ತಿ 2, ಹೀಗೆ 35ವರ್ಷಗಳ ಕಲಾವ್ಯವಸಾಯ ಇವರದ್ದು. ಪತ್ನಿ ಗಿರಿಜಾ, ಉದಯ, ಉಮಾ, ಉಷಾ ಮಕ್ಕಳು.

ಅನುಭವಿ ಹಾಸ್ಯಗಾರ ಸುಳಗೋಡು ಅವರನ್ನು . ದೆಹಲಿಯ ಗಣರಾಜ್ಯೋತ್ಸವ ಸಮಾರಂಭದ 'ಫೂಲ್ ವಾಲೋಂಕಿ ವಾರ್'ನಲ್ಲಿ ಸಮ್ಮಾನಿಸಲಾಗಿದೆ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ವತಿಯಿಂದ ಗೌರವಿಸಲಾಗಿದೆ.



ನಾರಾಯಣ ಹೆಗಡೆ, ಗೋಡೆ

ಅಪೂರ್ವ ಕಲಾವಂತಿಕೆಯಿಂದ ಬಡಗುತಿಟ್ಟಿನ ಯಕ್ಷಗಾನ ರಂಗದಲ್ಲಿ ಸಿದ್ಧಿಯ ಶಿಖರವೇರಿದ ಶ್ರೇಷ್ಠ ಕಲಾವಿದ ಗೋಡೆ ನಾರಾಯಣ ಹೆಗಡೆ.

ಪ್ರಧಾನ ಪುರುಷ ಪಾತ್ರಕ್ಕೊಪ್ಪುವ ಆಳಂಗ, ನಾಜೂಕಿನ ನೃತ್ಯಾಭಿನಯ ವೈಖರಿ, ಪ್ರೌಢ ಪೌರಾಣಿಕ ಅನುಭವದ ವ್ಯಾಕರಣಬದ್ಧ ರಸಾತ್ಮಕ ವಾಗಿತೆ, ಪಾತ್ರಗಳ ನಾಡಿಮಿಡಿತವನ್ನರಿತ ಗರಿಷ್ಠಮಟ್ಟದ ಕಲಾಭಿವ್ಯಕ್ತಿ ಮೈಗೂಡಿಸಿಕೊಂಡ ನಾರಾಯಣ ಹೆಗಡೆಯವರು, ಉತ್ತರ ಕನ್ನಡ ಸಿದ್ದಾಪುರ ತಾಲೂಕಿನ ಕೊರ್ಲಕೈ ಎಂಬಲ್ಲಿ 1940ರಲ್ಲಿ ಫೆಬ್ರವರಿ 2ರಂದು ಜನಿಸಿದರು. ಶ್ರೀಯುತರ ತಂದೆ ಗೋಡೆ ತಿಮ್ಮಯ್ಯ ಹೆಗಡೆ ಮತ್ತು ತಾಯಿ ಗೌರಮ್ಮ ತಿಮ್ಮಯ್ಯ ಹೆಗಡೆ,

ಸುತ್ತಮುತ್ತಲಿನ ಯಕ್ಷಗಾನ ಪರಿಸರದ ಪ್ರಭಾವ ಹಾಗೂ ಕೊಳಗಿ ಸೀತಾರಾಮ ಹೆಗಡೆಯವರ ಪ್ರೇರಣೆಯಿಂದ ಕಲಾಬದುಕು ಕಂಡ ಗೋಡೆಯವರು 5ನೇ ತರಗತಿಯವರೆಗಿನ ಅಕ್ಷರ ಶಿಕ್ಷಣದ ಬಳಿಕ ಯಕ್ಷಲೋಕ ಕಂಡವರು.

ಕೊಳಗಿ ಸೀತಾರಾಮ ಹೆಗಡೆ, ಮಲ್ಲ ಗಣೇಶಯ್ಯ ಅವರ ಗುರುತನವನ್ನು ಪಡೆದ ಗೋಡೆಯವರು, ಆರಂಭಿಕ ವೃತ್ತಿಬದುಕಿನಲ್ಲಿ ಸ್ತ್ರೀವೇಷಧಾರಿಯಾಗಿ ಮೆರೆದವರು. ಶ್ರೀಯುತರ ತಾರೆ, ದಮಯಂತಿ, ಸೈರೇಂಧ್ರಿ, ದಾಕ್ಷಾಯಿಣಿ, ಪ್ರಭಾವತಿ ಪಾತ್ರಗಳು ಜನಮನ ರಂಜಿಸಿವೆ.

ಹಂತ ಹಂತ ವಾಗಿ ತ ದ ನಂತರ ಪುರುಷವೇಷಧಾರಿಯಾಗಿ, ಎರಡನ ವೇಷಧಾರಿಯಾಗಿ ಬೆಳೆಯುತ್ತ ಬಂದ ಗೋಡೆ 'ಗದಾಯುದ್ಧ'ದ ಕೌರವನ ಪಾತ್ರದ ಮೂಲಕ ತಾರಾಮೌಲ್ಯದ ವರ್ಚಸ್ಸು ಪಡೆದರು.

ಶ್ರೀಯುತರ ಕೌರವ, ರಾವಣ, ಋತುಪರ್ಣ, ಬ್ರಹ್ಮ, ಲಕ್ಷ್ಮಣ, ಅರ್ಜುನ, ಸಾಲ್ವ, ಜಾಂಬವ, ಕಾರ್ತವೀರ, ಕೀಚಕ, ಸುಧನ್ವ ಪಾತ್ರಗಳು ಯಕ್ಷಗಾನದ ಸೃಜನಶೀಲ ಕಲಾ ಸ್ವರೂಪದ ಜೀವಂತ ಯಕ್ಷಶಿಲ್ಪಗಳಾಗಿವೆ.

ಇಡಗುಂಜಿ 9, ಅಮೃತೇಶ್ವರಿ 6, ಮೂಲ್ಕಿ 1, ಪೆರ್ಡೂರು 1, ಪಂಚಲಿಂಗ 4, ಶಿರಸಿ ಮಾರಿಕಾಂಬಾ 4, ಹೀಗೆ ಗೋಡೆಯವರ ಕಲಾಕೃಷಿಗೆ ಸುವರ್ಣ- ಸಂಭ್ರಮ, ಪ್ರಸ್ತುತ ಗೋಡೆ ವಿಶ್ರಾಂತ ಜೀವನದಲ್ಲಿದ್ದಾರೆ.

ಧರ್ಮಪತ್ನಿ ಲಕ್ಷ್ಮಿ. ವತ್ಸಲ, ಪ್ರಶಾಂತ, ಪ್ರಸಾದ, ಭವ್ಯ, ದಿವ್ಯ, ಎಂಬ ಐವರು ಮಕ್ಕಳು. ಇವರ ಸುಪುತ್ರ ಗೋಡೆ ಪ್ರಸಾದ ಹೆಗಡೆ ಭರವಸೆಯ ಭಾಗವತರು.

ಶ್ರೀಯುತರಿಗೆ “ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಮವಿಠಲ ಪ್ರಶಸ್ತಿ, ಅಖಿಲ ಹವ್ಯಕ ಮಹಾಸಭಾ ಸಂಮಾನ, ಸಿದ್ಧಾಪುರ ಸಾಹಿತ್ಯ ಸಮ್ಮೇಳನದ ಗೌರವ, ಕಲಾಗಂಗೋತ್ರಿ ಗೌರವ, ಉಡುಪಿ ಯಕ್ಷಗಾನ ಕಲಾರಂಗದ ದಶಾವತಾರಿ ಮಾರ್ವಿ ಹೆಬ್ಬಾರ್ ಪ್ರಶಸ್ತಿಯೂ ಸೇರಿದಂತೆ ಹಲವು ಪುರಸ್ಕಾರಕ್ಕೆ ಸಂದಿದೆ.



## ಪದ್ಮನಾಭ ಶೆಟ್ಟಿಗಾರ್, ಬೇಗಾರು

*ಮಠದಗದ್ದೆ (ಮನೆ), ಅಂಚೆ: ಹೊಸಗದ್ದೆ,*
*ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ*
*ದೂರವಾಣಿ : 958181 202018*

ಅಪೂರ್ವ ಯಕ್ಷಗಾನ ವರ್ಚಸ್ಸಿನ ಸಂಪದ್ಭರಿತ ಕಲಾಪ್ರತಿಭೆಯಾಗಿ ರಂಗಸ್ಥಳದಲ್ಲಿ ವಿಜೃಂಭಿಸುವ ಹಿರಿಯ ಕಲಾವಿದ ಬೇಗಾರು ಪದ್ಮನಾಭ ಶೆಟ್ಟಿಗಾರ್.

ಉಡುಪಿ ತಾಲೂಕಿನ ಚೇರ್ಕಾಡಿ ಗ್ರಾಮದ ಪಡುವಾರಣಾಸಿಮನೆ ಎಂಬಲ್ಲಿ ಹುಟ್ಟಿ ಬೆಳೆದ ಶೆಟ್ಟಿಗಾರರು ತಿಮ್ಮ ಶೆಟ್ಟಿಗಾರ-ನರಸಮ್ಮ ದಂಪತಿಯ ಸುಪುತ್ರ, 5ನೇ ತರಗತಿಯವರೆಗಿನ ಶಾಲಾ ಕಲಿಕೆಯ ತರುವಾಯ, ಅಂದರೆ ತನ್ನ 16ರ ಹರೆಯದಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಅಡಿಯಿರಿಸಿದ ಇವರು ಮತ್ತೆ ಹಿಂದಿರುಗಿ ನೋಡಲಿಲ್ಲ. ಮಟಪಾಡಿ ಕೃಷ್ಣ ಶೆಟ್ಟಿಗಾರ್ ಹಾಗೂ ಬ್ರಹ್ಮಾವರ ಶ್ರೀನಿವಾಸ ನಾಯಕ್ ಅವರ ಪ್ರೇರಣೆಯಿಂದ ಬಣ್ಣದ ಬಾಳುವೆ ಕಂಡ ಪದ್ಮನಾಭ ಶೆಟ್ಟಿಗಾರರು ಗೋಪಾಲಕೃಷ್ಣ ಮಾಸ್ತರರ ಗುರುತನದಲ್ಲಿ ಯಕ್ಷವಿದ್ಯೆಯನ್ನು ತನ್ನದಾಗಿಸಿಕೊಂಡರು.

ಬೇಗಾರರ ಪಾತ್ರಪೋಷಣೆ ಅಚ್ಚುಕಟ್ಟು. ರಂಗಾನುಭವ ಗಟ್ಟಿಮುಟ್ಟು, ಪ್ರಬುದ್ಧವಾದ ಭಾಷಾ ಚಮತ್ಕಾರ, ಭಾವಾನುಕೂಲಕರವಾದ ನೃತ್ಯ, ಅಭಿನಯ, ಹಾವ-ಭಾವಗಳ ಸಾಕಾರ... ಇವರ ಪ್ರತೀ ಬ ಮಿಕೆಗಳಲ್ಲು ರಸಾತ್ಮಕ ವಾಗಿ ಗುರುತಿಸಬಹುದಾಗಿದೆ. ಬಡಗುತಿಟ್ಟಿನ ಒಬ್ಬ ಸರ್ವಶ್ರೇಷ್ಠ ಪುರುಷವೇಷಧಾರಿ-ಯಾಗಿ, ಈ ರಂಗಭೂಮಿಯ ಆಡುನುಡಿಯಲ್ಲಿ ಪ್ರಧಾನ ಕಲಾವಿದ ಸೂಚಿತ ಎರಡನೇ ವೇಷಧಾರಿಯಾಗಿ ಸ್ಥಾನ ಮಾನ್ಯತೆಯನ್ನು ಕಂಡು ಕೊಂಡ ಕಲಾವಿದರಿವರು.

ಪೆರ್ಡೂರು, ಸಾಲಿಗ್ರಾಮ, ಮಂದಾರ್ತಿ, ಸುರತ್ಕಲ್, ಕಮಲಶಿಲೆ, ಶಿರಸಿ, ಕರ್ನಾಟಕ, ಹಾಲಾಡಿ ಹೀಗೆ ತೆಂಕು ಬಡಗಿನ ಮೇಳಗಳ ಸಾರ್ಥಕ ಕಲಾವ್ಯವಸಾಯದಲ್ಲಿ ನಾಲ್ಕು ದಶಕಗಳನ್ನು ಯಶಸ್ವಿಯಾಗಿ ಪೂರೈಸಿ ಇದೀಗ ವಿಶ್ರಾಂತ ಜೀವನದಲ್ಲಿದ್ದಾರೆ. ವರುಷ ಅರವತ್ತನಾಲ್ಕಾದರೂ ಇಂದಿಗೂ ಅವರು ಗೆಜ್ಜೆ ಕಟ್ಟಿದರೆ ರಂಗಸ್ಥಳದ ದಣಿವರಿಯದ ಧಣಿಯಾಗಿ ಕುಣಿಯಬಲ್ಲ ಕಲೋತ್ಸಾಹ ಮೈಗೂಡಿಸಿಕೊಂಡಿದ್ದಾರೆ.

ಯಾವುದೇ ಪೌರಾಣಿಕ ಪ್ರಸಂಗಗಳಲ್ಲಿ ಅವರ ಸಾಲಿನ ವೇಷಗಳು ರಂಗಮಂಚದಲ್ಲಿ ಪಾರಂಪರಿಕ ವೈಭವ ಮೆರೆದಿವೆ. ಕೀಚಕ, ಕಂಸ, ಹಿರಣ್ಯಕಶಿಪು, ಕರ್ಣ, ಸುಧನ್ವ ಮೊದಲಾದ ಭೂಮಿಕೆಗಳಿಗೆ ಬೇಗಾರರು ತನ್ನದೇ ಕಲಾವಂತಿಕೆಯ ವಿಶಿಷ್ಟ ಆಯಾಮ ನೀಡಿ ಜನಪ್ರಿಯರಾಗಿದ್ದಾರೆ.

ಪತ್ನಿ ಸುಂದರಿ. ಮಾಧವ, ದಯಾನಂದ, ಮೋಹನ ಮಕ್ಕಳು. ಹಿರಿಯ ಕಲಾವಿದ ಪದ್ಮನಾಭ ಶೆಟ್ಟಿಗಾರರನ್ನು ಬೇಗಾರು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಮ್ಮಾನಿಸಲಾಗಿದೆ. ಬೆಂಗಳೂರಿನಲ್ಲಿ 'ಗಾನ ಸೌರಭ' ಪ್ರಶಸ್ತಿಯೂ ಇವರಿಗೆ ದೊರಕಿರುತ್ತದೆ.



ಪರಮೇಶ್ವರ ನಾಯ್ಕ, ಕಾನಗೋಡ

ಸಾಲಿಕೇರಿ, ಕಾಸನ ಹಿತ್ಲು, ಉಡುಪಿ ತಾಲೂಕು
ದೂರವಾಣಿ : 90083 88465

ಸುಶ್ರಾವ್ಯ ಕಂಠಸಿರಿ, ಅನನ್ಯ ರಂಗತಂತ್ರಗಳ ಮೂಲಕ ರಂಗಸ್ಥಳಕ್ಕೆ ಗಾಯನದ ಸಾಥ್ ನೀಡುವವರು ಭಾಗವತ ಪರಮೇಶ್ವರ ನಾಯ್ಕ.

ಉತ್ತರಕನ್ನಡದ ಮಂಕೋಡ ಎಂಬಲ್ಲಿ 20- 10-1969ರಲ್ಲಿ ಜನ್ಮ ತಾಳಿದ ಪರಮೇಶ್ವರ ನಾಯ್ಕರು ಕೆರಿಯನಾಯ್ಕ ಗೌರಿ ದಂಪತಿಯ ಸುಪುತ್ರ 3ನೇ ತರಗತಿಗೆ ಅಕ್ಷರ ಶಿಕ್ಷಣಕ್ಕೆ ತಿಲಾಂಜಲಿಯಿತ್ತು ತನ್ನ 24ನೇ ವಯಸ್ಸಿನಲ್ಲೇ ಯಕ್ಷಗಾನರಂಗವನ್ನು ಪ್ರವೇಶಿಸಿ ದವರು. ಸಿದ್ಧಾಪುರ ಮಂಜುನಾಥ ಹೆಗಡೆ ಎನ್ನುವ ಹಿರಿಯ ಹವ್ಯಾಸೀ ಭಾಗವತರ ಪದ್ಯಗಳನ್ನು ಕೇಳಿಸಿಕೊಂಡು ಯಕ್ಷಗಾನದ ಗೀಳು ಹೆಚ್ಚಿಸಿಕೊಂಡ ಪರಮೇಶ್ವರ ನಾಯ್ಕರು ಕಾಲ್ಮನೆಯ ಕೃಷ್ಣತಮ್ಮ ಗೌಡ ಎಂಬ ಹವ್ಯಾಸಿ ಕಲಾವಿದರ ಪ್ರೇರಣೆಯಂತೆ ಕೃಷ್ಣ ಜಿ.ಬೇಡ್ಕಣಿಯವರ ತರಭೇತಿ ಕೇಂದ್ರಕ್ಕೆ ತೆರಳಿ ಅಲ್ಲಿಯೇ ಯಕ್ಷದೀಕ್ಷೆ ಪಡೆದರು. ಕಾವೂರು ಹನುಮಂತಗೌಡರು ಇವರಿಗೆ ಕಲಾಜೀವನ ಪಾದಾರ್ಪಣೆಗೆ ಹಾರ್ದಿಕ

ಸಹಕಾರ ನೀಡಿದರು. ಮುಂದೆ ಹಂಗಾರಕಟ್ಟೆ ಯಕ್ಷಗಾನ ಕೇಂದ್ರವನ್ನು ಸೇರಿ ಅಲ್ಲಿ ಕೆ.ಪಿ.ಹೆಗಡೆಯವರಲ್ಲಿ ಸಮರ್ಪಕ ಭಾಗವತಿಕೆ ಶಿಕ್ಷಣ ಪಡೆದರು.

ಪ್ರಥಮವರ್ಷದಲ್ಲೇ ಶಿರಸಿ ಮೇಳದಲ್ಲಿ ಸಂಗೀತಗಾರನಾಗಿ ಅವಕಾಶ ಪಡೆದುಕೊಂಡ ಇವರು ಅಲ್ಲಿ ಸಾಕಷ್ಟು ಪೌರಾಣಿಕ ಜ್ಞಾನ ಸಂಪಾದಿಸಿದರು. ಅಂತರಂಗದ ಅನನ್ಯ ಗಾನಪ್ರತಿಭೆಯನ್ನು ಸತತ ಪರಿಶ್ರಮ, ಸಾಧನೆಯಿಂದ ಸಾಣೆ ಹಿಡಿದು ಭಾಗವತನಾಗಿ ರೂಪುಗೊಂಡರು.

ಶಿರಸಿ 2, ಅಮೃತೇಶ್ವರಿ 3, ಬಗ್ವಾಡಿ 1, ಮಡಾಮಕ್ಕಿ 5, ಮಂದಾರ್ತಿ 5, ಹೀಗೆ 16ವರ್ಷಗಳ ಕಲಾಕೃಷಿ ಇವರದ್ದು. ಪ್ರಸ್ತುತ ಶ್ರೀಯುತರು ಮಂದಾರ್ತಿ ಮೇಳದ ಭಾಗವತರಾಗಿ ದುಡಿಯುತ್ತಿದ್ದಾರೆ. ಕಾನಗೋಡು, ಹಳ್ಳಿಬೈಲು, ಕಕ್ಕುಂಜೆ, ಮೊದಲಾದ ಕಡೆಯ ಸಂಘ- ಸಂಸ್ಥೆಗಳಿಂದಲೂ, ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಗೌರವವೂ ದೊರಕಿದೆ.

ಮಡದಿ ಸುಶೀಲಾ, ನವ್ಯಶ್ರೀ ಮಗಳು. ಪ್ರತಿಭಾನ್ವಿತ ಭಾಗವತ ಪರಮೇಶ್ವರ ನಾಯ್ಕ ಅವರು ಪೌರಾಣಿಕ ನವ್ಯ ಕಥಾನಕಗಳೆರಡರಲ್ಲೂ ವಿಜೃಂಭಿಸುವ ಭಾಗವತರು.



ಪರಮೇಶ್ವರ ಪ್ರಭಾಕರ ಭಂಡಾರಿ, ಕರ್ಕಿ

ಅಂಚೆ : ಕರ್ಕಿ, ಹೊನ್ನಾವರ ತಾಲೂಕು (ಉ.ಕ)
ದೂರವಾಣಿ : 99809 83438

ರಂಗನಟನ ಚೈತನ್ಯಶೀಲ ಕಲಾಭಿವ್ಯಕ್ತಿಗೆ ಹಾಗೂ ಭಾಗವತರ ಗಾನಾನು ಕೂಲಕರವಾದ ಮದ್ದಳೆಯ ಮಸ್ತಕ ನುಡಿಸಾಣಿಕೆಗೆ ಎತ್ತಿದ ಕೈ - ಪರಮೇಶ್ವರ ಪ್ರಭಾಕರ ಭಂಡಾರಿ, ಮಾಧುರಮಯವಾದ ನುಡಿತದ ಝೇಂಕಾರದಲ್ಲಿ ಮದ್ದಳೆಯ ಮಸ್ತಕದಲ್ಲಿ ಬೆರಳುಗಳ ನರ್ತನ ಕಾಣಿಸುವ ಸೃಜನಶೀಲ ಸಿದ್ಧಹಸ್ತ ಪರಮೇಶ್ವರ ಮಕ್ಕಳು. ಭಂಡಾರಿಯವರು.

ಹೆಸರಾಂತ ಮದ್ದಳೆಗಾರ ಕರ್ಕಿ ಪ್ರಭಾಕರ ಭಂಡಾರಿ - ಶಾರದಾ ದಂಪತಿಯ ಸುಪುತ್ರ. ಉತ್ತರಕನ್ನಡದ ಕರ್ಕಿ ಎಂಬಲ್ಲಿ 2-5-1971ರಲ್ಲಿಜನಿಸಿದ ಪರಮೇಶ್ವರ ಅವರಿಗೆ ಮದ್ದಳೆವಾದನದ ವಿದ್ಯೆ, ಯಕ್ಷ ಕಲಾಸಕ್ತಿ ಎಂಬುದು ಮನೆತನದಿಂದ ಬಂದ ಬಳುವಳಿ ಎನ್ನಬಹುದಾಗಿದೆ.

ತಂದೆ ಪ್ರಭಾಕರ ಭಂಡಾರಿಯವರೇ ಇವರ ಮದ್ದಳೆಯ ಗುರುಗಳಾದುದ-ರಿಂದ ಮದ್ದಳೆವಾದನ ಕಲೆ ಎಂಬುದು ಅಭಿಜಾತ, ಸುಬ್ರಾಯ ಹೆಗಡೆ ಕಪ್ಪೆಕೆರೆ-ಯವರೂ ಗುರುಸ್ಥಾನದಲ್ಲಿ ನಿಂತು ಪರಮೇಶ್ವರರಿಗೆ ಕಲಾನುಭವ ದ್ರವ್ಯವನ್ನು ಧಾರೆಯೆರೆದರು. ತೀವ್ರತರವಾದ ನುಡಿಗಾರಿಕೆಯಲ್ಲಿ ಮಿಳಿತವಾದ ಪ್ರಮಾಣ ಪೂರ್ವಕವಾದ ಲಯಗಾರಿಕೆ, ಶ್ರವಣೀಯವಾದ ವಾದನಕಲಾ ಶ್ರೀಮಂತಿಕೆ ಹಸ್ತಗತವಾಗಿಸಿಕೊಂಡ ಪರಮೇಶ್ವರ ಭಂಡಾರಿಯವರು ಮದ್ದಳೆಗಾರಿಕೆಯಲ್ಲಿ ತಾರಾಮೌಲ್ಯವನ್ನು ತಂದುಕೊಂಡ ವಿದ್ವತ್ ಶೀಲ ಮದ್ದಳೆವಾದಕರು.

ಗುಂಡಬಾಳ 9, ಶಿರಸಿ 1, ಭಾಸ್ಕರಜೋಶಿ ಮೇಳ 1, ಸಾಲಿಗ್ರಾಮ 12, ಹೀಗೆ 23ವರ್ಷಗಳ ಕಲಾವಸಂತದಲ್ಲಿ ಪರಮೇಶ್ವರರ ಮದ್ದಳೆ ಮಧುರಮಯವಾಗಿ ಮಾತನಾಡಿದೆ. ಚಂಡೆವಾದನ ಕಲೆಯ ಪರಿಣತಿಯನ್ನೂ ಹೊಂದಿದ ಶ್ರೀಯುತರು ಹಳೆತರ ಮಟ್ಟನ್ನೂ, ಹೊಸತರ ಗುಟ್ಟನ್ನೂ ಮದ್ದಳೆಯ ಪೆಟ್ಟಿನಲ್ಲಿ ಕಾಣಿಸುವವರು. ಶ್ರಾವಕರಿಗೆ ಕೇಳಿಸುವವರು.

ಬಾಳಸಂಗಾತಿ ಭಾರತಿ, ಪುನೀತ್, ಪ್ರಜ್ಞಾ ಶ್ರೀಯುತರು ಪ್ರಸ್ತುತ ಸಾಲಿಗ್ರಾಮ ಮೇಳದ ಪ್ರಧಾನ ಮದ್ದಳೆವಾದಕರು. ದಕ್ಷಿಣೋತ್ತರ ಕನ್ನಡಜಿಲ್ಲೆಯ ಹಲವಾರು ಸಂಘ-ಸಂಸ್ಥೆಗಳಲ್ಲಿ ಗೌರವ ಸಮ್ಮಾನವನ್ನು ಪಡೆದ ಪರಮೇಶ್ವರ ಭಂಡಾರಿಯವರನ್ನು ಹೈದರಾಬಾದ್ ಕರಾವಳಿ ಕರ್ನಾಟಕ ಸಂಘವು ಗೌರವಿಸಿದೆ.



ಪ್ರಭಾಕರ ಪಾಂಡುರಂಗ ಭಂಡಾರಿ, ಕರ್ಕಿ

ಅಂಚೆ: ಕರ್ಕಿ, ಹೊನ್ನಾವರ ತಾಲೂಕು,
'ಭೂಸ್ವರ್ಗ ಕೇರಿ', ಉ.ಕ.
ದೂರವಾಣಿ: 08387-236133

ಮದ್ದಳೆಯ ಮೃದುಮಧುರ ನುಡಿ ಸಾಣಿಕೆಗೆ ಹೆಸರಾದ ಪ್ರಭಾಕರ ಭಂಡಾರಿ ಅವರು ಬಡಗುತಿಟ್ಟಿನ ಶ್ರೇಷ್ಠ ಮದ್ದಳೆ ವಾದಕರು. ಪರಂಪರೆಯ ಅಂತಃಸ್ಸತ್ವವನ್ನು ನಾದರೂಪದಲ್ಲಿ ಪ್ರಕಟಿಸುವ ಪ್ರತಿಭಾವಂತರು.

ಕರ್ಕಿಯ ಪಾಂಡುರಂಗ ಭಂಡಾರಿ- ಹೊನ್ನಮ್ಮ ದಂಪತಿಯ ಸುಪುತ್ರರಾದ ಶ್ರೀಯುತರು 1942ನೇ ಇಸವಿಯ ಮೇ ಎಂಟರಂದು ಹೊನ್ನಾವರ ತಾಲೂಕಿನ ಕರ್ಕಿ ಎಂಬಲ್ಲಿ ಜನಿಸಿದರು. 5ನೇ ಇಯತ್ತೆಯ ವರೆಗೆ ಅಕ್ಷರಾಭ್ಯಾಸ ಮಾಡಿದ ಭಂಡಾರಿಯವರು 14ರ ಹರೆಯದಲ್ಲೇ ಯಕ್ಷಲೋಕ ಪ್ರವೇಶಿಸಿದರು.

ಪ್ರಭಾಕರ ಭಂಡಾರಿಯವರ ತಂದೆಯವರು ಪ್ರಸಿದ್ಧ ಮದ್ದಳೆಗಾರ-ರಾಗಿದ್ದು, ಮಗನಿಗೆ ಅವರೇ ಗುರುವಾಗಿ ಕಲಾಶಿಕ್ಷಣ ನೀಡಿ ಪ್ರೋತ್ಸಾಹಿಸಿದರು.

ಸ್ಫುಟವಾದ ಪೆಟ್ಟು, ನವಿರಾದ ಸ್ಪಷ್ಟ ಬೆರಳುಗಾರಿಕೆಯ ಹೊರಳಿಕೆ, ಗಾನ ಪೋಷಕ ವಾದನ ಪ್ರಭಾಕರ ಪಾಂಡುರಂಗ ಭಂಡಾರಿ, ಕರ್ಕಿ ಸಾಂಗತ್ಯದಲ್ಲಿ ನಟನ ಕ್ರಿಯಾಶೀಲ ಅಭಿವ್ಯಕ್ತಿಗೆ ಸಾರಥ್ಯ ನೀಡುವ ಪ್ರಭಾಕರ ಭಂಡಾರಿಯವರು ವಿಶೇಷ ರಂಗಪರಿಣತಿಯನ್ನು ಹೊಂದಿದವರು.

ಗುಂಡ ಬಾಳ -8, ಕುಮಟಾ-4, ಅಮೃತೇಶ್ವರಿ-3, ಕೊಳಗಿಬೀಸ್-2, ಇಡಗುಂಜಿ- 16, ಸಾಲಿಗ್ರಾಮ-12, ಹೀಗೆ 6 ಮೇಳಗಳಲ್ಲಿ 45ವರ್ಷಗಳ ಸುದೀರ್ಘ ಕಲಾಜೀವನ ನಡೆಸಿ ಅಪಾರ ಜನಮೆಚ್ಚುಗೆ ಗಳಿಸಿದ್ದಾರೆ.

ಮಡದಿ ಶಾರದಾ. ಮಂಜುನಾಥ, ಪರಮೇಶ್ವರ, ಉಮೇಶ ಎಂಬ ಮೂವರು ಪುತ್ರರು. ಪ್ರಭಾಕರ ಭಂಡಾರಿಯವರ ಪುತ್ರರೂ ಮದ್ದಳೆಗಾರರಾಗಿ ಹೆಸರು ಗಳಿಸಿದ್ದಾರೆ.

ಮೃಣ್ಮಯ ಗಣಪತಿ ಮೂರ್ತಿ ತಯಾರಿಕೆ ಹಾಗೂ ಶಹನಾಯಿ ನುಡಿಸುವುದು ಸದ್ಯ ಇವರ ಉಪವೃತ್ತಿ. ಇವರ ಪರಮೋಚ್ಚ ಕಲಾಸಾಧನೆಗೆ 2002ರಲ್ಲಿ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ ದೊರಕಿದೆ. ಉಡುಪಿ 'ಯಕ್ಷಗಾನ ಕಲಾರಂಗ'ದ ಭಾಗವತ ನಾರ್ಣಪ್ಪ ಉಳ್ಳೂರ ಪ್ರಶಸ್ತಿ, ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ - ಹೀಗೆ ಹಲವು ಪುರಸ್ಕಾರಗಳಿಗೆ ಭಾಜನರು.



ಪ್ರಶಾಂತ ವೆಂಕಟರಮಣ ಭಂಡಾರಿ

*ಹೊಸಾಕುಳಿ ಗ್ರಾಮ, ಅಂಚೆ : ಸಂತೆಗುಳಿ,*
*ಹೊನ್ನಾವರ ತಾಲೂಕು, ಕಾರವಾರ ಜಿಲ್ಲೆ*

ರಂಗಕ್ಕೆ ಕಾವು ನೀಡುವ, ಪ್ರಸಂಗವನ್ನು ಉಠಾವು ಮಾಡುವ ಬಡಗಿನ ಚಂಡೆವಾದನ ಪ್ರವೀಣ ಪ್ರಶಾಂತ ವೆಂಕಟರಮಣ ಭಂಡಾರಿ.

ಹೊನ್ನಾವರ ತಾಲೂಕಿನ ಹೊಸಾಕುಳಿ ಎಂಬಲ್ಲಿ ಜನಿಸಿದ 35 ಹರೆಯದ ಪ್ರಶಾಂತ ಭಂಡಾರಿ ಅವರು ವೆಂಕಟರಮಣ ಭಂಡಾರಿ ಸರಸ್ವತಿ ದಂಪತಿಯ ಸುಪುತ್ರ.

ಎಸ್.ಎಸ್.ಎಲ್.ಸಿ. ಪ್ರೌಢಶಿಕ್ಷಣ ಪಡೆದ ಶ್ರೀಯುತರು ಚಂಡೆಗಾರರಾಗುವ ಕನಸು ಕಂಡರು. ಇವರ ತಂದೆ ವೆಂಕಟರಮಣ ಭಂಡಾರಿಯವರು ಯಕ್ಷಗಾನ ವೇಷಧಾರಿಯಾಗಿದ್ದರು. ಹಾಗಾಗಿ ಕಲೆಯೆಂಬುದು ಆನುವಂಶೀಯ ಬಳುವಳಿ- ಯಾಯಿತು. ತಂದೆಯವರ ಪ್ರೋತ್ಸಾಹ, ಮಾರ್ಗದರ್ಶನ, ಕಲಾಬದುಕಿಗೆ ಪ್ರೇರಣೆಯಾಯಿತು. ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯರಾಗಿ ಯಕ್ಷಗಾನ ಶಾಸ್ರೋಕ್ತ ಶಿಕ್ಷಣವನ್ನು ಪಡೆದು ಯಕ್ಷಲೋಕ ಪ್ರವೇಶಿಸಿದ ಭಂಡಾರಿಯವರು ಸಾಲಿಗ್ರಾಮ 5, ಕಮಲಶಿಲೆ 1, ಮಂದಾರ್ತಿ 11, ಸೌಕೂರು 1, ಮೇಳಗಳಲ್ಲಿ 18ವರ್ಷಗಳ ಸಾರ್ಥಕ ರಂಗಯಾತ್ರೆ ಪೂರೈಸಿದ್ದಾರೆ. ಪ್ರಸ್ತುತ ಶ್ರೀಯುತರು ಮಂದಾರ್ತಿ ಮೇಳದ ಪ್ರಧಾನ ಚಂಡೆವಾದಕರು.

ರಂಗನಟನ ಭಾವನುಶೀಲವೂ, ಭಾಗವತರ ಗಾನಾನುಕೂಲವೂ ಆದಂತಹ ಅವರ ಚಂಡೆವಾದನ ಕೌಶಲ ಪ್ರಶಂಸಾತ್ಮಕವಾದದ್ದು. ನಯವಾದ ಕಿರುಪೆಟ್ಟು, ದಸ್ತನ್ನೇ ಧ್ವನಿಸುವ ನುಡಿಸಾಣಿಕೆ, ಸ್ಪುಟವಾದ ಹೊರಳಿಕೆ ಅವರ ಚಂಡೆಯ ಗುಂಡಿಗೆಯಿಂದ ಕೇಳಿ ಆಸ್ವಾದಿಸಬಹುದಾಗಿದೆ.

ಸಮರ್ಥ ಚಂಡೆವಾದಕರಾದ ಅವರು ಮದ್ದಳೆಗಾರರೂ ಹೌದು. ಭಾಗವತಿಕೆಯಲ್ಲೂ ಪ್ರಾವಿಣ್ಯತೆ ಸಾಧಿಸಿದವರು. ಪ್ರಶಾಂತ ಭಂಡಾರಿಯವರು ಚಂಡಗಾರಿಕೆಯೆಂದರೆ ಅವರ ಹೆಸರಿಗೇ ಅನ್ವರ್ಥವಾದಂತಿದೆ. ಅವರ ವಾದನ ಕ್ರಮದಲ್ಲಿ ಕಾರ್ಕಶ್ಯವಿಲ್ಲ. ಭಾಗವತರ ಪದ್ಯಗಳನ್ನೇ ನುಂಗಿ ಹಾಕುವ ಸ್ವಯಂ ಪ್ರತಿಷ್ಠೆಯ ಹಿಮ್ಮೇಳ ಬೇಧನಾಗುಣವಿಲ್ಲ. ಹಾಗಾಗಿ ಅವರು ಚಂಡೆ ಬಾರಿಸ ತೊಡಗಿದರೆ ಹಿಮ್ಮೇಳಕ್ಕೂ ಸುಖ. ನಟರಿಗಂತೂ ಪರಮಾನಂದ.

ಪ್ರಶಾಂತ ಭಂಡಾರಿಯವರ ಸಹಧರ್ಮಿಣಿ ವೀಣಾ, ಸುದೀಪ ಹಾಗೂ ಪ್ರದೀಪ ಮಕ್ಕಳು. ಶ್ರೀಯುತರ ಉನ್ನತ ಪ್ರತಿಭೆಗೆ ನಾಡಿನ ಅನೇಕ ಸಂಘ- ಸಂಸ್ಥೆಗಳಿಂದ ಗೌರವ ಸಂಮಾನ, ಅಭಿನಂದನೆ ಪ್ರಾಪ್ತವಾಗಿದೆ.



**ಪುರಂದರ ಹೆಗಡೆ .ಎಚ್.ಜಿ**

*ಹುಕ್ಲು, ಅಂಚೆ : ನಾಗರಕೊಡಿಗೆ, ಹೊಸನಗರ*
*ತಾಲುಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 95815 295048*

ಪ್ರೌಢ, ಪೌರಾಣಿಕ ಜ್ಞಾನದೊಂದಿಗೆ ಗತ್ತು, ಗಾಂಭೀರದ ನೃತ್ಯ, ಅಭಿನಯ ಶೈಲಿಯನ್ನು ರೂಢಿಸಿಕೊಂಡ, ಹಿರಿಯ ಕಲಾವಿದ ಪುರಂದರ ಹೆಗಡೆ.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹುಕ್ಕು ಎಂಬ ಹಳ್ಳಿಯೇ ಪುರಂದರ ಹೆಗಡೆಯವರ ಹುಟ್ಟೂರು. ಗಣೇಶಯ್ಯ-ಮೂಕಾಂಬಿಕಾ ದಂಪತಿಯ ಸುಪುತ್ರರಾಗಿ 27-5-1958ರಲ್ಲಿ ಜನಿಸಿದ ಹೆಗಡೆಯವರು, ಪಿ.ಯು.ಸಿ. ವ್ಯಾಸಂಗವನ್ನು ಮುಗಿಸಿ, ತನ್ನ 22ರ ಹರೆಯದಲ್ಲೇ ಯಕ್ಷಗಾನ ಲೋಕವನ್ನು ಪ್ರವೇಶಿಸಿದರು.

ಇವರ ತಂದೆ ತಾಳ ಮದ್ದಳೆ, ಅರ್ಥಧಾರಿಯಾಗಿದ್ದರು. ಕಲಾಗುಣವೆನ್ನುವುದು ಎಳವೆಯಲ್ಲೇ ಮೈಗೂಡಿತು. ಸಂಪ ಶೇಷಗಿರಿ ರಾಯರ ಪ್ರೇರಣೆಯಂತೆ ಕಲಾಬದುಕು ಕಂಡ ಪುರಂದರ ಹೆಗಡೆಯವರು ಹಿರಿಯ ಕಲಾವಿದ ಗೋಡೆ ನಾರಾಯಣ ಹೆಗಡೆ ಬಿಳಿಯೂರು ಕೃಷ್ಣಮೂರ್ತಿ ಅವರಶಿಷ್ಯನಾಗಿ ಕಲಾಶಿಕ್ಷಣವನ್ನು ಪಡೆದವರು, ಪೆರ್ಡೂರು, ನಾಗರಕೊಡಿಗೆ, ಕಳವಾಡಿ, ಗುಂಡಬಾಳ, ಅಮೃತೇಶ್ವರಿ, ಕಮಲಶಿಲೆ, ಮೇಗರವಳ್ಳಿ, ಕುಮಟಾ, ಸಿಗಂಧೂರು, ಮಡಾಮಕ್ಕಿ, ಗುತ್ಯಮ್ಮ, ಮೊದಲಾದ ಮೇಳಗಳಲ್ಲಿ ಶ್ರೀಯುತರ 28ವರ್ಷಗಳ ಸಾರ್ಥಕ ಕಲಾಕೃಷಿ ಸಂಪನ್ನಗೊಂಡಿದೆ.

ಅನುಭವಪೂರ್ಣ ರಂಗನಡೆ, ಪ್ರಸಂಗಮಾಹಿತಿ, ಅಭಿನಯ ಪ್ರಧಾನ, ಭಾವಾಭಿವ್ಯಕ್ತಿ, ಎರಡನೇ ವೇಷಕ್ಕೊಪ್ಪುವ ಆಳಂಗ, ಗಂಭೀರ ಸ್ವರ, ಉತ್ಕೃಷ್ಟ ಮಟ್ಟದ ಸಾಹಿತ್ಯಕ ವಚೋಚಮತ್ಕಾರ ಹೆಗಡೆಯವರ ಕಲಾವ್ಯಕ್ತಿತ್ವದಲ್ಲಿ ಕಂಡು ಬರುತ್ತದೆ. ಭೀಷ್ಮ, ಪರಶುರಾಮ, ವಾಲಿ, ಕರ್ಣ, ಕಮಲಭೂಪ, ಹರಿಶ್ಚಂದ್ರ, ಬಾಹುಕ, ಋತುಪರ್ಣ, ವಿಕ್ರಮಾದಿತ್ಯ, ದುಷ್ಟಬುದ್ಧಿ, ಭೀಮ ಮೊದಲಾದ ಪೌರಾಣಿಕ ಪಾತ್ರಗಳು ಪುರಂದರ ಹೆಗಡೆಯವರಿಗೆ ಕೀರ್ತಿ ತಂದಿತ್ತಿವೆ.

ಇವರ ಮಡದಿ ಶೈಲಜಾ ಹೆಗಡೆ, ಅರ್ಪಣಾ, ಅಕ್ಷತಾ ಮಕ್ಕಳು. ಹುಟ್ಟೂರಿನ ಯುವಕ ಮಂಡಲದ ವತಿಯಿಂದ ಶ್ರೀಯುತರಿಗೆ ಗೌರವ ಸಂಮಾನ ದೊರಕಿದೆ.



**ಪೂವಪ್ಪ, ಕಡಬ**

*ಮೂಡು ಬಾರಾಳಿ, ಹೆಗ್ಗುಂಜೆ, ಅಂಚೆ: ಮಂದಾರ್ತಿ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 94804 69137*

ಯಕ್ಷಗಾನ ರಂಗದ ಯುಗಳ ತಿಟ್ಟಿನ ಸನಾತನ- ಸಮಕಾಲೀನ ಸುಸಂಸ್ಕೃತ ಹಾಸ್ಯಗಾರಿಕೆಯಲ್ಲಿ ವಿಶೇಷ ಗೆಲುವು ಕಂಡ ಹಾಸ್ಯಕಲಾವಿದ ಕಡಬ ಪೂವಪ್ಪ.

ಪುತ್ತೂರು ತಾಲೂಕಿನ ಕಡಬ ಎಂಬ ಊರಿನಲ್ಲಿ 5-5-1965ರಲ್ಲಿ ಗುಡ್ಡಪ್ಪ ಮಡಿವಾಳ-ಮಾಯಿಲು ದಂಪತಿಯ ಸುಪುತ್ರನಾಗಿ ಜನಿಸಿದ ಪೂವಪ್ಪ ಅವರು 8ನೇ ತರಗತಿಯವರೆಗಿನ ಓದಿನ ಬಳಿಕ, ತನ್ನ 18ನೇ . ವಯಸ್ಸಿನಲ್ಲೇ ಯಕ್ಷಕ್ಷೇತ್ರಕ್ಕೆ ಹೆಜ್ಜೆ ಹಾಕಿದರು.

ಇವರ ಅಣ್ಣ, ಕಡಬ ಈಶ್ವರ ಅವರು ಯಕ್ಷಗಾನ ಮದ್ದಳೆಗಾರರು. ಅವರ ಸಂಪೂರ್ಣ ಪ್ರೋತ್ಸಾಹ, ಪ್ರೇರಣೆ ಪೂವಪ್ಪನವರ ಕಲಾಬದುಕಿನ ಪಯಣಕ್ಕೆ ದೊರಕಿತು. ಹಾಗೆಯೇ ಮೋಹನ ಬೈಪಾಡಿತ್ತಾಯ, ಪದ್ಯಾಣ ಗಣಪತಿಭಟ್ಟರ ಸಹಕಾರವೂ ಲಭಿಸಿತು.

ಕೆ. ಗೋವಿಂದಭಟ್, ಸರಪಾಡಿ ಅಶೋಕಶೆಟ್ಟರ ಗುರುತನದಲ್ಲಿ ಕಲಾವಿದ್ಯೆಯನ್ನು ಗಳಿಸಿದ ಕಡಬ ಪೂವಪ್ಪನವರು ಕದ್ರಿಮೇಳದಲ್ಲಿ 6, ಮದವೂರು ಮೇಳದಲ್ಲಿ 2, ಹಾಗೂ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಮಂದಾರ್ತಿ ಮೇಳದಲ್ಲಿ 20ವರುಷಗಳ ಕಲಾತಿರುಗಾಟವನ್ನು ಯಶಸ್ವಿಯಾಗಿ ಪೂರೈಸಿದ್ದು ಶ್ರೀಯುತರ ಒಟ್ಟು ರಂಗಕೃಷಿ 28ವರ್ಷ.

ಹಾಸ್ಯಭೂಮಿಕೆಗೊಪ್ಪುವ ವಿಭಿನ್ನ ನೃತ್ಯ, ಅಭಿನಯ, ಪಾತ್ರೋಚಿತ ರಂಗನಡೆ, ಅಪಾರ ಪ್ರತ್ಯುತ್ಪನ್ನಮತಿತ್ವದ ರಂಜಿಸುವ ಪೂವಪ್ಪನವರು ಬಾಹುಕ, ಕಂದರ, ವಿದ್ಯುಜ್ಜಿಹ್ವ, ಚಂದಗೋಪ, ಕಾಶೀಮಾಣಿ, ಬ್ರಾಹ್ಮಣ, ಮೊದಲಾದ ಪೌರಾಣಿಕ ಭೂಮಿಕೆಗಳಿಗೆ ಸ್ವಯಂ ಪ್ರತಿಭೆಯ ಮೂಲಕ ವಿಶಿಷ್ಟ ಆಯಾಮ ನೀಡಿದ್ದಾರೆ.

ಪತ್ನಿ ರಾಧಿಕಾ, ರಂಜಿತಾ, ರಶ್ಮಿತಾ, ಪೂಜಿತಾ ಮಕ್ಕಳು, ಪೌರಾಣಿಕ ಹಾಸ್ಯ ಪಾತ್ರಗಳನ್ನು ಸಾಂಪ್ರದಾಯಿಕ ಸ್ವರೂಪದಲ್ಲಿಟ್ಟು ಹೊಸತನದ ನವಿರಾದ ಕಳೆಯಲ್ಲಿ ಮೆರೆಯಿಸುವ ಕಲಾವಿದ ಕಡಬ ಪೂವಪ್ಪನವರನ್ನು ಹಲವು ಸಂಘ-ಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ.



**ಬಾಲಕೃಷ್ಣ ಗಾಣಿಗ, ಹೆರಂಜಾಲು**

*ಕಿರಿಮಂಜೇಶ್ವರ ಗ್ರಾಮ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 98804 30387*

ಸಾಂಪ್ರದಾಯಿಕ ಹಾಗೂ ಸೃಜನಾತ್ಮಕ ನುಡಿ ಸಾಣಿಕೆಯಲ್ಲಿ ಸುಸಮರ್ಥ ಚಂಡೆ-ಮದ್ದಳೆಗಾರರಾಗಿ ರೂಪುಗೊಂಡ ಸಂಪನ್ನ ಪ್ರತಿಭೆ ಹೆರಂಜಾಲು ಬಾಲಕೃಷ್ಣ ಗಾಣಿಗ.

ಸುಪ್ರಸಿದ್ಧ ಕಲಾವಿದ ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಶ್ರೀಮತಿ ಗಣಪು ಗಾಣಿಗ ಅವರ ಸುಪುತ್ರರಾಗಿ 17-2-1972ರಲ್ಲಿ ಕುಂದಾಪುರ ತಾಲೂಕಿನ ನಾಗೂರು ಎಂಬಲ್ಲಿ ಜನಿಸಿದ ಬಾಲಕೃಷ್ಣ ಅವರು 8ನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ಮಾಡಿದವರು.

ತಂದೆ ವೆಂಕಟರಮಣ ಗಾಣಿಗ ಹಾಗೂ ಅಣ್ಣ ಹೆರಂಜಾಲು ಗೋಪಲ ಗಾಣಿಗ ಅವರಲ್ಲಿ ಕಲಾಶಿಕ್ಷಣವನ್ನು ಪಡೆದ ಅವರು 18ನೇ ವಯಸ್ಸಿನಲ್ಲೇ ಯಕ್ಷಲೋಕ ಪ್ರವೇಶಿಸಿದರು. ಪ್ರಬುದ್ಧ ಮದ್ದಳೆಗಾರರಾಗಿಯೇ ಕಲಾ ವಲಯದಲ್ಲಿ

ಜನಪ್ರಿಯರಾದ ಬಾಲಕೃಷ್ಣ ಗಾಣಿಗರು, ಮಂದಾರ್ತಿ 2, ಸೌಕೂರು 1, ಹಾಲಾಡಿ 1, ಕಮಲಶಿಲೆ 1, ಬಗ್ವಾಡಿ 1 ಮೇಳಗಳಲ್ಲಿ ಕಲಾವ್ಯವಸಾಯ ನಡೆಸಿ 13 ವರ್ಷಗಳಿಂದ ಮಾರಣಕಟ್ಟೆ ಮೇಳದ ಪ್ರಧಾನ ಮದ್ದಳೆಗಾರರಾಗಿ ರಂಗಸೇವೆ -ಯನ್ನು ಮುಂದುವರಿಸುತ್ತಿದ್ದಾರೆ.

ಬಾಲ್ಯದಿಂದಲೇ ಸಿಕ್ಕ ಪಾರಂಪರಿಕ ರಂಗಶಿಕ್ಷಣದ ನೆರಳಿನಲ್ಲಿ ಸ್ವಯಂ ಪ್ರತಿಭೆಯ ಚಾತುರವನ್ನು ವಾದನ ಪದ್ಧತಿಯಲ್ಲಿ ಅವರು ಕಾಣಿಸಿದ್ದಾರೆ. ಸುಮಧುರವಾದದ ಗುಂಗುಗಾನವನ್ನು ರಸಿಕ ಶ್ರಾವಕರಿಗೆ ಕೇಳಿಸಿದ್ದಾರೆ.

ಕಲಾವಿದರ ಚೇತನಪೂರ್ಣ ಕಲಾಭಿವ್ಯಕ್ತಿಗೆ ಅವರ ಮದ್ದಳೆ ವಾದನ ಸುಯೋಗ್ಯ ಸಾಂಗತ್ಯವಾಗುತ್ತದೆ. ಭಾಗವತರ ರಸರಂಜಿತ ಭಾಗವತಿಕೆಗೆ ಮದ್ದಳೆಯ ನುಡಿಗಾರಿಕೆ ಸಶಕ್ತ ಸಾರಥ್ಯವಾಗುತ್ತದೆ. ಉತ್ತಮ ರಂಗತಂತ್ರ, ಪುರಾಣ ಪ್ರಜ್ಞೆಯನ್ನು ಹೊಂದಿದ ಮದ್ದಳೆ-ಚಂಡೆವಾದಕರಾದ ಇವರಿಗೆ ಭಾಗವತಿಕೆಯ ಪರಿಣಿತಿಯೂ ಇದೆ. ಪತ್ನಿ ಪ್ರೇಮಾ, ಸೌಜನ್ಯ ಹಾಗೂ ಅಕ್ಷಯ ಮಕ್ಕಳು. ಬಾಲಕೃಷ್ಣ ಗಾಣಿಗರು ಸಮೃದ್ಧ ರಂಗಪ್ರತಿಭೆಗೆ ಹಲವು ಸಂಘ-ಸಂಸ್ಥೆಗಳು ಗೌರವ ಸಂಮಾನ ನೀಡಿವೆ.



ಭಾಸ್ಕರ ಜೋಶಿ, ಶಿರಳಗಿ

ಅಂಚೆ : ಶಿರಳಗಿ, ಸಿದ್ದಾಪುರ ತಾಲೂಕು (ಉ. ಕ)
ದೂರವಾಣಿ: 08389 – 230045

ಸುಮಧುರ ಶಾರೀರ, ಮನೋಹರ ಶರೀರ, ಗರಿಷ್ಠ ರಂಗವ್ಯವಹಾರ, ಉತ್ಕೃಷ್ಟ ವಚೋಚಮತ್ಕಾರ, ಸುಪುಷ್ಟ ನೃತ್ಯಾಭಿನಯ ಸಾಕಾರ.... ಪ್ರಸಿದ್ಧ ಸ್ತ್ರೀಪಾತ್ರಧಾರಿ, ಭಾಸ್ಕರ ಜೋಶಿ ಕರಾವಳಿ ಕಲೆಯ ಕಮನೀಯ ಪ್ರತಿಭೆ.

ಉತ್ತರಕನ್ನಡ ಜಿಲ್ಲೆಯ ಶಿರಳಗಿ ಎಂಬಲ್ಲಿ 30- 4-1956ರಲ್ಲಿ ಜನಿಸಿದ ಭಾಸ್ಕರ ಜೋಶಿಯವರು ನಾರಾಯಣ ಸುಬ್ರಾಯ ಜೋಶಿ-ಗಂಗಾ ನಾರಾಯಣ ಜೋಶಿಯವರ ಸುಪುತ್ರ.

ಎಸ್.ಎಸ್.ಎಲ್.ಸಿ. ಪೂರೈಸಿ ತನ್ನ 17ರ ಹರಯದಲ್ಲಿ ಕಲಾಲೋಕಕ್ಕೆ ಕಾಲಿರಿಸಿದ ಭಾಸ್ಕರ ಜೋಶಿಯವರಿಗೆ ಶಾಲಾ ದಿನಗಳಲ್ಲಿ ನಾಟಕಾಭಿರುಚಿಯಿತ್ತು. ಅಂತಹ ಬಣ್ಣದ ಗೀಳು ಮುಂದೆ ಬಣ್ಣದ ಲೋಕಕ್ಕೆ ಕಾರಣವಾಯಿತು. ಕೊಳಗಿ ಅನಂತ ಹೆಗಡೆ, ಕೆರೆಮನೆ ಗಜಾನನ ಹೆಗಡೆಯವರ ಒತ್ತಾಯ, ಪ್ರೋತ್ಸಾಹದಿಂದ ಯಕ್ಷರಂಗಮಂಚದಲ್ಲಿ ಹೆಜ್ಜೆ ಹಾಕಿದ ಜೋಶಿ ಅವರಿಗೆ ಹೊಸ್ತೋಟ ಮಂಜುನಾಥ ಭಾಗವತ, ಕೆರೆಮನೆ ಗಜಾನನ ಹೆಗಡೆ ಹಾಗೂ ಡಾ. ಕೋಟ ಶಿವರಾಮ ಕಾರಂತರು ಕಲಾ ಗುರುವರರು.

ಇಡಗುಂಜಿ, ಸಾಲಿಗ್ರಾಮ, ಅಮೃತೇಶ್ವರಿ, ಪೆರ್ಡೂರು, ಶಿರಸಿ-ಪಂಚಲಿಂಗ, ಶಿರಸಿ- ಮಾರಿಕಾಂಬಾ ಮೇಳಗಳಲ್ಲಿ ಸುಮಾರು ಮೂವತ್ತೈದು ವರುಷಗಳ ಕಾಲ ಕಲಾತಿರುಗಾಟ ಪೂರೈಸಿದ ಜೋಶಿಯವರು ಡಾ. ಕಾರಂತರ 'ಯಕ್ಷರಂಗ' ತಂಡದ ಕಲಾವಿದನಾಗಿಯೂ ಎಂಟುವರ್ಷ ಕಲಾಸೇವೆ ನಡೆಸಿದವರು. ಭುವನಗಿರಿಯ ಭುವನೇಶ್ವರಿ ಯಕ್ಷಗಾನ ಮೇಳ ಸಂಘಟಿಸಿ ಮೂರು ವರುಷಗಳ ಕಾಲ ಸಮಯಮಿತಿ ಯಕ್ಷಗಾನ ಕಾರ್ಯಕ್ರಮ ನೀಡಿದ ಅನುಭವವೂ ಶ್ರೀಯುತರಿಗಿದೆ.

ಭಾವನಾತ್ಮಕ ಪಾತ್ರಪೋಷಣೆಯಲ್ಲಿ ಜೋಶಿಯವರು ಶಿಖರಸ್ಥಾನದಲ್ಲಿ ನಿಲ್ಲುವವರು. 'ಗ ರ ತಿ' ಭೂಮಿಕೆಗಳಂತ ಅವರಿಗೆ ಸಮುಚಿತವಾಗುತ್ತದೆ. ದಾಕ್ಷಾಯಿಣಿ, ಅಂಬೆ, ಪ್ರಭಾವತಿ, ದೇವಯಾನಿ, ಕಯಾದು, ಚಂದ್ರಮತಿ, ಶಾರದೆ.... ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಕಲಾರಸಿಕರ ಅಭಿಮಾನಕ್ಕೆ ಪಾತ್ರರಾದವರು.

ಬಾಳಸಂಗಾತಿ ಮಾಲಿನಿ, ಸ್ಫೂರ್ತಿ, ರಘುರಾಮ ಈಶ್ವರು ಮಕ್ಕಳು, ಶ್ರೇಷ್ಠ ಸ್ತ್ರೀವೇಷಧಾರಿ ಭಾಸ್ಕರ ಜೋಶಿ ಅವರಿಗೆ ಉತ್ತರಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್‌ವತಿಯಿಂದ ಥಾಣೆ, ಮುಂಬೈ, ಬೆಂಗಳೂರು ಸೇರಿದಂತೆ ಹಲವು ಕಡೆಗಳಲ್ಲಿ ಗೌರವ ಸಂಮಾನ ದೊರಕಿರುತ್ತದೆ.



ಭಾಸ್ಕರ ದೇವಾಡಿಗ, ಕುಪ್ಪಾರುಜಡ್ಡು

ಅಂಚೆ : ಶಂಕರನಾರಾಯಣ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ
ದೂರವಾಣಿ : 93410 26063


ಯಕ್ಷಗಾನ ಪೌರಾಣಿಕ ಪ್ರಸಂಗಗಳ ಖಳಭೂಮಿಕೆಗಳನ್ನು ಸುಪುಷ್ಟವಾಗಿ ಪೋಷಿಸುವ ಕಲಾವಂತಿಕೆಯನ್ನು ಹೊಂದಿದ ಪ್ರಬುದ್ಧವೇಷಧಾರಿ ಭಾಸ್ಕರ ದೇವಾಡಿಗ.

ಕುಂದಾಪುರ ತಾಲೂಕಿನ ಕುಪ್ಪಾರುಜಡ್ಡು ಎಂಬಲ್ಲಿ ನಾರಾಯಣ ದೇವಾಡಿಗ ಹಾಗೂ ಪದ್ದು ದಂಪತಿಯ ಪುತ್ರರಾದ ಭಾಸ್ಕರ ದೇವಾಡಿಗ ಅವರು ಇದೀಗ 37ನೇ ವರ್ಷದಲ್ಲಿದ್ದಾರೆ. ಮೂರನೇ ತರಗತಿಗೆ ಶರಣುಹೊಡೆದು, 12ನೇ ವಯಸ್ಸಿನಲ್ಲೇ ಯಕ್ಷಗಾನ ರಂಗ ಪ್ರವೇಶಿಸಿದ ಶ್ರೀಯುತರು ಜಯಂತನಾಯ್ಕರ ಶಿಷ್ಯನಾಗಿ ಸಮರ್ಪಕ ನೃತ್ಯ, ಅಭಿನಯ ರಂಗನಡೆಯನ್ನು ಕಲಿತುಕೊಂಡವರು.

ರಂಜದಕಟ್ಟೆ 2, ಹಾಲಾಡಿ 4, ಮಡಾಮಕ್ಕಿ 3, ಗೋಳಿಗರಡಿ 7, ಮಾರಣಕಟ್ಟೆ 4, ಕಮಲಶಿಲೆ 4, ಹೀಗೆ 24ವರ್ಷಗಳ ಯಕ್ಷಗಾನದ ಕಲಾದುಡಿಮೆಯಲ್ಲಿ ಭಾಸ್ಕರದೇವಾಡಿಗ ಯೋಗ್ಯ ಹೆಸರುಗಳಿಸಿದ್ದಾರೆ.

ಭಾಸ್ಕರ ದೇವಾಡಿಗ ಅವರ ಸಮೃದ್ಧ ವಾಕ್ ಚಮತ್ಕಾರ, ಹುರುಪುಗೂಡಿದ ನಾಟ್ಯಾಭಿನಯ, ಗಮನೀಯವೆನಿಸಬಹುದಾದ ಪ್ರಸಂಗಮಾಹಿತಿ, ಪೌರಾಣಿಕ ಪಾತ್ರಗಳಿಗೆ ಸಮುಚಿತ ನ್ಯಾಯ ಕಲ್ಪಿಸಿಕೊಟ್ಟಿವೆ. ಕಥಾನಕಗಳ ಎಲ್ಲಾ ಬಗೆಯ ಪಾತ್ರಗಳನ್ನು ನಿರ್ವಹಿಸುವ ಕಲಾಯೋಗ್ಯತೆ ಹೊಂದಿದ ದೇವಾಡಿಗರು ಖಳಭೂಮಿಕೆಗಳಿಗೇ ಹೆಚ್ಚು ಆಪ್ತವಾಗುವವರು. ಸಾಂದರ್ಭಿಕವಾಗಿ ಅವರು ಹಾಸ್ಯ ಪಾತ್ರಗಳನ್ನು ರಂಜನೀಯವಾಗಿ ಮಾಡಿ ತೋರಿಸಬಲ್ಲರು.

ಶ್ರೀಯುತರು ಸಾಲ್ವ, ಕಂಸ, ವೃಷಕೇತು, ಶಲ್ಯ, ವಿಭಿಷಣ, ವೀರಮಣಿ, ದಮನ, ದುರ್ಜಯ ಮೊದಲಾದ ಪಾತ್ರಗಳು ಕಲಾರಸಿಕರ ಮನ ಮೆಚ್ಚಿಸಿವೆ. ಪ್ರಸ್ತುತ ಭಾಸ್ಕರ ದೇವಾಡಿಗರು ಕಮಲಶಿಲೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ. ಪತ್ನಿ ಯಶೋಧಾ, ರಕ್ಷಕ, ಕೌಶಿಕ, ಆಶಿಕಾ ಮಕ್ಕಳು. ಪ್ರತಿಭಾನ್ವಿತ ಕಲಾವಿದ ಭಾಸ್ಕರ ದೇವಾಡಿಗರು ಸ್ಥಳೀಯ ಸಂಘ-ಸಂಸ್ಥೆಗಳ ಗೌರವ ಸಂಮಾನ ಪಡೆದಿರುತ್ತಾರೆ.



ಭಾಸ್ಕರ ತುಂಬ್ರಿ, ಎಚ್. ಬಿ.

*ಹೆಸಿಗೆ, ಚದರವಳ್ಳಿ ಪೋಸ್ಟ್, ಸಾಗರ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 94491 00872*

ಪೌರಾಣಿಕ ಕಲಾಜಗತ್ತಿನ ಯಾವುದೇ ನಡೆಯ ಪುರುಷ ರಾಜ, ಮುಂಡಾಸು ವೇಷಗಳನ್ನು ತನ್ನದೇ ಶೈಲಿಯಲ್ಲಿ ನಿರೂಪಿಸುವ ಕಲಾವಿದ ಎಚ್.ಬಿ.ಭಾಸ್ಕರ ತುಂಬಿ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ತುಂಬ್ರಿ-ಹೆಸಿಗೆ ಎಂಬಲ್ಲಿ 13-10-1965ರಲ್ಲಿ ಜನಿಸಿದ ಭಾಸ್ಕರ ಅವರು ಬಸವನಾಯ್ಕ ಮತ್ತು ಮಂಜಮ್ಮ ದಂಪತಿಯ ಸುಪುತ್ರ

7ನೇ ತರಗತಿಯವರೆಗಿನ ವಿದ್ಯಾಭ್ಯಾಸ, ತರುವಾಯ ತನ್ನ ಅಣ್ಣಂದಿರ ಸಹಕಾರ, ಸ್ವಯಂ ಕಲಾಸಕ್ತಿಯಿಂದ 18ನೇ ವಯಸ್ಸಿನಲ್ಲೇ ಯಕ್ಷಗಾನ ಪ್ರಪಂಚವನ್ನು ಪ್ರವೇಶ ಮಾಡಿದ ತುಂಬ್ರಿ ಮತ್ತೆ ಹಿಂದಿರುಗಿ ಕಾಣಲಿಲ್ಲ. ಭಾವಪೂರ್ಣ ರಾಜವೇಷಗಳನ್ನು, ಧೀರೋದ್ಧತ ಖಳಭೂಮಿಕೆಗಳನ್ನೂ ಸಮರ್ಥವಾಗಿ ನಿರ್ವಹಿಸುವ ಭಾಸ್ಕರ ತುಂಬ್ರಿ ಉತ್ತಮ ವಾಸ್ಪಟುತ್ವವನ್ನು ಹೊಂದಿದವರು. ಪಾತ್ರೋಚಿತ ನೃತ್ಯಾಭಿನಯ, ವೇಷ ವೈಖರಿಯಲ್ಲೂ ಕಲಾವಂತಿಕೆ ಕಾಣಿಸುವವರು.

ಸೌಕೂರು 1, ಕಮಲಶಿಲೆ 1, ಬಚ್ಚಗಾರು 3, ಕುಮಟಾ 2, ಶಿರಸಿ 3, ಪೆರ್ಡೂರು 15, ಹೀಗೆ ವೃತ್ತಿರಂಗದಲ್ಲಿ ಸಾರ್ಥಕ ರಜತ ಸಂಭ್ರಮ ಕಂಡಿದ್ದಾರೆ. ಪ್ರಸ್ತುತ ತುಂಬ್ರಿ ಅವರು ಪೆರ್ಡೂರು ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಕೌರವ, ಕರ್ಣ, ಅರ್ಜುನ, ಹನುಮಂತ, ಶಲ್ಯ ವೀರಮಣಿ, ಜಯದ್ರಥ ಮೊದಲಾದ ಭೂಮಿಕೆಗಳು ಭಾಸ್ಕರ ತುಂಬ್ರಿ ಅವರಿಗೆ ಹೆಸರು ನೀಡಿದ ಪೌರಾಣಿಕ ಪಾತ್ರಗಳು, ಪತ್ನಿ ಜಯಶ್ರೀ. ಶ್ರುತಿ, ಶಶಾಂಕ ಮಕ್ಕಳು.

ಶ್ರೀಯುತರನ್ನು ಹಲವಾರು ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



**ಭೋಜರಾಜ ಶೆಟ್ಟಿ, ನರಾಡಿ**

*'ಶ್ರೀ ದುರ್ಗಾ ಗಣೇಶ ಕೃಪಾ' –ಹಳ್ನಾಡಿ,*
*ಅಂಚೆ : ಹಳ್ನಾಡಿ–ಹರ್ಕಾಡಿ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಬಡಗುತಿಟ್ಟು ಯಕ್ಷಗಾನದ ಸಾಂಪ್ರದಾಯಿಕ ನಡೆಯನ್ನು ದೃಢವಾಗಿ ಮೈಗೂಡಿಸಿಕೊಂಡು, ಪೌರಾಣಿಕ ಪಾತ್ರ ಪ್ರತಿಮೆಗಳನ್ನು ರಂಗಸ್ಥಳದಲ್ಲಿ ಸಚೇತನವಾಗಿಡುವ ಪ್ರೌಢ ಪ್ರತಿಭೆಯ ಕಲಾವಿದ ನರಾಡಿ ಭೋಜರಾಜ ಶೆಟ್ಟಿ.

ಕುಂದಾಪುರ ತಾಲೂಕಿನ ಅಚ್ಚಾಡಿ ಎಂಬಲ್ಲಿ 1957ನೇ ಇಸವಿಯ ಆಗಸ್ಟ್ ಇಪ್ಪತ್ತೊಂಬತ್ತರಂದು ಜನಿಸಿದ ಭೋಜರಾಜ ಶೆಟ್ಟರು ಸುಬ್ಬಣ್ಣ ಶೆಟ್ಟಿ- ನರಸಮ್ಮ ದಂಪತಿಯ ಸುಪುತ್ರ, 5ನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ಮಾಡಿ 13ನೇ ವಯಸ್ಸಿನಲ್ಲೇ ಯಕ್ಷಕಲಾಲೋಕ ಪ್ರವೇಶಿಸಿದ ಭೋಜರಾಜಶೆಟ್ಟರಿಗೆ ಪರಿಸರದ ಯಕ್ಷಗಾನ ಹೂವಿನಕೋಲು ತಿರುಗಾಟದಲ್ಲಿ ಬಾಲಕಲಾವಿದನಾಗಿ ಅರ್ಥ ಹೇಳಿದ ಅನುಭವವೇ ಕಲಾಸಕ್ತಿಗೆ

ಪ್ರೇರಣೆಯಾಯಿತು. ಕೀರ್ತಿಶೇಷರಾದ ಮೇರು ಕಲಾವಿದ ಶಿರಿಯಾರ ಮಂಜುನಾಯ್ಕ, ಕೋಟ ವೈಕುಂಠ ಅವರ ಗುರುತನದಲ್ಲಿ ಯಕ್ಷವಿದ್ಯೆಯನ್ನು ಗಳಿಸಿದ ಇವರಿಗೆ ಹಳ್ಳಾಡಿ ಮಂಜಯ್ಯಶೆಟ್ಟರು ಸುಯೋಗ್ಯ ಕಲಾಮಾರ್ಗದರ್ಶನ ನೀಡಿದರು.

ಅಮೃತೇಶ್ವರಿ ಮೇಳದಲ್ಲಿ ಗೆಜ್ಜೆಕಟ್ಟಿ ಹೆಜ್ಜೆ ಹಾಕಿದ ಶೆಟ್ಟರು ಅಮೃತೇಶ್ವರಿ, ಸಾಲಿಗ್ರಾಮ, ಪೆರ್ಡೂರು, ಶಿರಸಿ, ಹಾಲಾಡಿ, ಸೌಕೂರು, ಕಮಲಶಿಲೆ, ಮಾರಣಕಟ್ಟೆ, ಮಂದಾರ್ತಿ, ಮೇಳಗಳಲ್ಲಿ ಕಲಾಸೇವೆ ಸಲ್ಲಿಸಿ ಯಕ್ಷಗಾನ ರಂಗದಲ್ಲಿ ಸುದೀರ್ಘ ನಾಲ್ಕು ದಶಕಗಳನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

1994ರಲ್ಲಿ ಶ್ರೀ ಅಮೃತೇಶ್ವರಿ ಮೇಳದ ಸಂಚಾಲಕತ್ವವನ್ನು ಕೈಗೊಂಡ ಶೆಟ್ಟರು, ಪುರುಷವೇಷ ಹಾಗೂ ಎರಡನೇ ವೇಷವನ್ನು ಸಮರ್ಥವಾಗಿ ನಿರ್ವಹಿಸುವವರು. ತನ್ನ 25 ನೇ ವರ್ಷದಲ್ಲಿಯೇ ಎರಡನೇ ವೇಷಧಾರಿಯಾದ ಶೆಟ್ಟರು ಸದೃಢ ಆಳಂಗ, ಶ್ರುತಿನಿಷ್ಠ ಗಂಭೀರ-ವಚೋವೈಖರಿ, ಅಪಾರ ಪ್ರತ್ಯುತ್ಪನ್ನಮತಿತ್ವದಿಂದ ಪಾತ್ರಗಳಿಗೆ ಪಾರಂಪರಿಕ ವರ್ಚಸ್ಸು ನೀಡುವರು. ತೂಕದ ಹೆಜ್ಜೆಗಾರಿಕೆ, ಪಾತ್ರೋಚಿತ ಹಾವಭಾವಗಳಿಂದ ಕಲಾರಸಿಕರ ಮನಸೆಳೆವ ಶೆಟ್ಟರ ಭೀಷ್ಮ, ಕರ್ಣ, ಅರ್ಜುನ, ಋತುಪರ್ಣ, ದಶರಥ, ವಾಲಿ, ರಾವಣ, ಮಾರ್ತಾಂಡತೇಜ, ಮೊದಲಾದ ಪಾತ್ರಗಳು ಅಭಿಮಾನಿಗಳ ಹಾರ್ದಿಕ ಪ್ರಶಂಸೆಗೆ ಪಾತ್ರವಾಗಿವೆ.

ಪತ್ನಿ ಚಂದ್ರಮತಿ, ರೇಖಾ, ವಿವೇಕ, ರೇಷ್ಮಾ ಮಕ್ಕಳು. ಶ್ರೀಯುತರು ಮಂದಾರ್ತಿ ಮೇಳದ ಪ್ರಧಾನಕಲಾವಿದರಾಗಿ ಕಲಾಸೇವೆ ನಡೆಸುತ್ತಿದ್ದಾರೆ.

ಅನೇಕ ಕಡೆಗಳಲ್ಲಿ ಅಭಿಮಾನಿಗಳಿಂದ ಸಮ್ಮಾನ ಪಡೆದ ನರಾಡಿಯವರಿಗೆ ಮಂಗಳೂರು ಜಾಗತಿಕ ಬಂಟ ಪ್ರತಿಷ್ಠಾನದ ಪ್ರಶಸ್ತಿಯೂ ದೊರಕಿದೆ. ಹಾರಾಡಿ ರಾಮಗಾಣಿಗ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.



**ಮಹಾದೇವ ಈಶ್ವರ ಹೆಗಡೆ, ಕಪ್ಪೆಕೆರೆ**

*ಹರಡಸೆ – ಅಂಚೆ : ಮುಟ್ಟಾ,*
*ಹೊನ್ನಾವರ ತಾಲೂಕು, (ಉ.ಕ)*
*ದೂರವಾಣಿ : 08387–296270*

ಅಪ್ರತಿಮ ಕಲಾಸಿದ್ಧಿ, ಸಾಧನೆಯಿಂದ ಸುಪ್ರಸಿದ್ಧ ಯಕ್ಷನಟನಾಗಿ ಗುರುತಿಸಿ-ಕೊಂಡವರು ಮಹಾದೇವ ಈಶ್ವರ ಹೆಗಡೆ.

ಹೊನ್ನಾವರ ತಾಲೂಕಿನ ಹಡಿನ ಬಾಳ ಎಂಬಲ್ಲಿ 6-1-1950ರಲ್ಲಿ ಜನಿಸಿದ ಮಹಾದೇವ ಹೆಗಡೆಯವರ ಈಶ್ವರ ಹೆಗಡೆ ಗೋಪಿ ದಂಪತಿಯ ಸುಪುತ್ರ ಹತ್ತನೆ ತರಗತಿಯವರೆಗೆ ಪ್ರೌಢ ಶಿಕ್ಷಣ ಪಡೆದ ಶ್ರೀಯುತರು 18ನೇ ವಯಸ್ಸಿನಲ್ಲಿ ಬಣ್ಣದ ಲೋಕ ಪ್ರವೇಶಿಸಿದ ಗಣ್ಯ ಕಲಾವಿದ. ಮಹಾದೇವ ಹೆಗಡೆಯವರ ಮಾತೃಕುಟುಂಬ ಯಕ್ಷಕಲಾವಂತಿಕೆಯಿಂದ ಕೂಡಿತ್ತು. ಇವರ ತಾಯಿಯ ತಂದೆ ಯಕ್ಷಗಾನ ಕಲಾವಿದರಾಗಿದ್ದರು. ಹಾಗಾಗಿ ಅಜ್ಜನ ಯಕ್ಷ ವರ್ಚಸ್ಸು ಮೊಮ್ಮಗನ ಮೇಲೆ ಗಾಢ ಪ್ರಭಾವ ಬೀರಿತು. ಮಹಾದೇವ ಹೆಗಡೆ-ಯವರ ಅಣ್ಣ ಹಿರಿಯ ಭಾಗವತ ಕಪ್ಪೆಕೆರೆ ಸುಬ್ರಾಯ ಹೆಗಡೆಯವರು. ಅವರೇ ಇವರಿಗೆ ಗುರುಗಳು ಹಾಗೂ ರಂಗಜೀವನ ಪ್ರೇರಣಾಶಕ್ತಿ,

ದಿ. ಕೆರೆಮನೆ ಮಹಾಬಲ ಹೆಗಡೆಯವರ ಗರಡಿಯಲ್ಲಿ ಪಳಗಿದ ಮಹಾ-ದೇವ ಹೆಗಡೆಯವರು ಗುಂಡಬಾಳ, ಕಮಲಶಿಲೆ, ಅಮೃತೇಶ್ವರಿ, ಇಡಗುಂಜಿ, ಶಿರಸಿ, ಪಂಚಲಿಂಗ ಹಾಗೂ ಮಂದಾರ್ತಿ ಮೇಳಗಳಲ್ಲಿ ಕಲಾಸೇವೆ ನಡೆಸಿ ಸುದೀರ್ಘ 39 ವರ್ಷಗಳನ್ನು ಬಣ್ಣದ ಬದುಕಿನಲ್ಲಿ ಕಳೆದಿದ್ದಾರೆ. ಶಿರಸಿ ಮೇಳವನ್ನು 2 ವರ್ಷವೇಷದಾರಿಯಾಗಿಯ ಸಂಚಾಲಕರಾಗಿಯೂ ನಡೆಸಿದ್ದಾರೆ. ಪ್ರಸ್ತುತ ಹೆಗಡೆ ಅವರು ವೃತ್ತಿ ಮೇಳಗಳಿಂದ ನಿವೃತ್ತರಾಗಿ ಆಸುಪಾಸಿನ ಯಕ್ಷಗಾನ ಸಂಘ ಸಂಸ್ಥೆಗಳಲ್ಲಿ ಅಪರೂಪಕ್ಕೆ ವೇಷ ಹಾಕುತ್ತಾರೆ.

ಪ್ರಖರ ಪ್ರತ್ಯುತ್ಪನ್ನ ಮತಿತ್ವದಿಂದ ರಾರಾಜಿಸುವ ಪಗಲ್ಸ ಪಾಂಡಿತ್ಯದ ಅಪೂರ್ವ ಅರ್ಥವಿನ್ಯಾಸದಿಂದ ರಂಜಿಸುವ ಹೆಗಡೆಯವರದು ಪಟುತೆ ಕಾಣುವ ಪಟ್ಟು, ಪಾತ್ರ ಪಂಚಾಂಗ ಗಟ್ಟಿಮುಟ್ಟು, ರಂಗನೈರ್ಮಲ್ಯ ಅಚ್ಚುಕಟ್ಟು, ಪುರಾಣ ಪಾತ್ರಗಳಲ್ಲೂ ಹೊಸ ಹುಟ್ಟು, ಕಲಾರಸಿಕರ ಮನ ಮೆಚ್ಚಿಸಿದೆ.

ನಾಯಕ, ಪ್ರತಿನಾಯಕ, ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಹೆಗಡೆಯವರ ಭೀಮ, ವಲಲ, ಸುಗ್ರೀವ, ವಾಲಿ, ಶ್ರೀರಾಮ, ಶತ್ರುಘ್ನ, ಮಹೋಗ್ರ, ಜಮದಗ್ನಿ, ರಾವಣ, ಮಾಗಧ, ಹರಿಶ್ಚಂದ್ರ, ಭೀಷ್ಮ, ವಿಶ್ವಾಮಿತ್ರ ಪಾತ್ರಗಳು ಜನಪ್ರಿಯ.

ಶ್ರೀಯುತರು ಹೆಣ್ಣು ಬಣ್ಣದ ವೇಷಗಳನ್ನು, ಸ್ತ್ರೀವೇಷಗಳನ್ನೂ ಮಾಡಿದ್ದಿದೆ. ಪ್ರಬುದ್ಧ ವೇಷಧಾರಿ ಹೆಗಡೆಯವರು ಗುರುಗಳಾಗಿ ಅನೇಕ ಕಲಾವಿದರನ್ನು ರೂಪಿಸಿ ರಂಗಭೂಮಿಗೆ ನೀಡಿದ್ದಾರೆ.

ಶ್ರೀಮತಿ ಶಾರದೆ ಪತ್ನಿ, ಗಣಪತಿ, ನಾಗೇಂದ್ರ, ರವೀಂದ್ರ, ನರೇಂದ್ರ ಮಕ್ಕಳು. ಇವರ ನಾಲ್ಕು ಮಂದಿ ಗಂಡುಮಕ್ಕಳು. ಕಪ್ಪೆಕೆರೆ ಮಹಾದೇವ ಹೆಗಡೆ-ಯವರ ಮಹೋನ್ನತ ಕಲಾಸಿರಿಗೆ ಹಲವು ಸಂಘ-ಸಂಸ್ಥೆಗಳ - ಸಂಮಾನದ ಗರಿಯೂ ದೊರಕಿದೆ.



**ಮಹಾದೇವ ನಾಯ್ಕ, ಅರಳಗೋಡು**

*ಅರಳಗೋಡು ಪೋಸ್ಟ್, ಸಾಗರ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 08186 210109*

ರಾಜವೇಷ, ಪುರುಷವೇಷ, ಹಾಗೂ ಮುಂಡಾಸುವೇಷಗಳಲ್ಲಿ ವಿಶೇಷ ಪ್ರತಿಭೆಯಿಂದ ಗುರುತಿಸಿಕೊಳ್ಳುವ ಹಿರಿಯ ಕಲಾವಿದ ಮಹಾದೇವ ನಾಯ್ಕ ಅರಳಗೋಡು.

ಸಾಗರ ತಾಲೂಕಿನ ನೆಲ್ಲಿಮಕ್ಕಿ - ಅರಳಗೋಡು ಎಂಬ ಕುಗ್ರಾಮದಲ್ಲಿ ಕೃಷ್ಣನಾಯ್ಕ ತಿಪ್ಪಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಶ್ರೀಯುತರು 61ರ ಹಿರಿತನದಲ್ಲಿರುವ ಶಿಷ್ಟ ಕಲಾವಿದ.

ಕಡುಬಡತನದ ಕುಟುಂಬದ ಮಹಾದೇವ ನಾಯ್ಕರು ಶಾಲಾ ಮೆಟ್ಟಿಲನ್ನೇ ತುಳಿಯದವರು. ಅವರ ಬಾಲ್ಯದ ಆಸಕ್ತಿ ಕ್ಷೇತ್ರವೇ ಯಕ್ಷಗಾನರಂಗವಾಗಿತ್ತು. 18ರ ಹರೆಯದಲ್ಲಿ ಯಕ್ಷಗಾನಕ್ಕೆ ಮುಖ ಮಾಡಿದ ಶ್ರೀಯುತರು ಹಿರಿಯ ಪ್ರಸಂಗಕರ್ತ ಗುಂಡು ಸೀತಾರಾಮು ರಾವ್ ತಲವಾಟ ಅವರ ಗುರುತನವನ್ನೂ, ಪ್ರೇರಣೆ-ಯನ್ನೂ ಪಡೆದು ಕಲಾಲೋಕದಲ್ಲಿ ನೆಲೆ ಕಂಡರು. ಶೇಷಗಿರಿ ಸಂಪ ಎಂಬವರೂ ಇವರಿಗೆ ಯಕ್ಷಕಲಾವಿದ್ಯಾ ಬೋಧಕರು.

ಸಾಲಿಗ್ರಾಮ 10, ಮೂಲ್ಕಿ 3, ಹಿರಿಯಡಕ 4, ಅಮೃತೇಶ್ವರಿ 8, ಗೋಳಿಗರಡಿ 7, ರಂಜದಕಟ್ಟೆ 2, ಸಿಗಂಧೂರು 1, ಹೀಗೆ ಯಕ್ಷವ್ಯವಸಾಯದಲ್ಲಿ 35 ವರ್ಷಗಳನ್ನು ಶ್ರೀಯುತರು ಯಶಸ್ವಿಯಾಗಿ ಪೂರೈಸಿ, ಪ್ರಸ್ತುತ ಸಿಗಂಧೂರು ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಯಕ್ಷಗಾನದ ಪೀಠಿಕಾ ರಾಜ ವೇಷಗಳನ್ನು ಸಮರ್ಥವಾಗಿ ಪೋಷಿಸುವ ಕಲಾ ಸಂಪನ್ನತೆ ಇವರದ್ದು. ಹಾಗೆಯೇ ಭಿನ್ನ ಭಿನ್ನ ನಡೆಯ ಪಾತ್ರಾಭಿವ್ಯಕ್ತಿಯಲ್ಲೂ ಇವರ ರಂಗ ಹಿರಿಮೆ ಮೆಚ್ಚುವಂತಹುದು. ಉತ್ತಮ ಅರ್ಥಗಾರಿಕೆಯನ್ನು ಬಲ್ಲ ಶ್ರೀಯುತರು ಕೌರವ, ದೇವೇಂದ್ರ, ಹನುಮಂತ,, ಶನೀಶ್ವರ, ದಕ್ಷ, ಯಮ, ವಿಭೀಷಣ, ಮೊದಲಾದ ಪಾತ್ರಗಳನ್ನು ಸರ್ವಸಮರ್ಥವಾಗಿ ನಿರ್ವಹಿಸಿರುವರು. ಪತ್ನಿ ಭಾನುಮತಿ, ಗೋಪಾಲ, ಶೋಭಾ, ಗಣೇಶ ಮಕ್ಕಳು. ಶ್ರೀಯುತರಿಗೆ ಹವ್ಯಾಸೀ ಸಂಘ-ಸಂಸ್ಥೆಗಳ ಸಂಮಾನ ದೊರಕಿದೆ.



ಮಹಾಬಲ ಗಾಣಿಗ, ನಾವುಂದ

*ಗಾಣಿಗರ ಕೇರಿ ರಸ್ತೆ, ಅಂಚೆ : ನಾವುಂದ,*
*ನಾವುಂದ ಗ್ರಾಮ, ಕುಂದಾಪುರ ತಾಲೂಕು – 576 224*
*ದೂರವಾಣಿ: 9945329841*

ಸಂಪ್ರದಾಯಶೀಲ ಹಿರಿಯ ಪ್ರತಿಭೆ ನಾವುಂದ ಮಹಾಬಲ ಗಾಣಿಗ, ಕುಂದಾಪುರ ತಾಲೂಕಿನ ನಾವುಂದ ಇವರ ಹುಟ್ಟೂರು. ವಾಸು ಗಾಣಿಗ- ಕಾವೇರಿ ದಂಪತಿಯ ಸುಪುತ್ರರಾದ ಗಾಣಿಗರ ಜನನ 12-12-1929ರಲ್ಲಿ. 5ನೇ ಇಯತ್ತೆಯವರೆಗೆ ವಿದ್ಯಾಭ್ಯಾಸ ಮಾಡಿ 17ನೇ ವಯಸ್ಸಿನಲ್ಲಿ ಬಣ್ಣದ ಬಾಳುವೆ ಕಂಡ ಮಹಾಬಲ ಗಾಣಿಗರು ದಶಾವತಾರಿ ಗುರು ವೀರಭದ್ರ ನಾಯಕರಲ್ಲಿ ಹೆಜ್ಜೆ ಗಾರಿಕೆ, ಮರವಂತೆ ನರಸಿಂಹದಾಸ ಭಾಗವತರಿಂದ ಅರ್ಥಗಾರಿಕೆ ಕಲಿತು, ನಾವುಂದ ದೇವಪ್ಪಗಾಣಿಗರ ಪ್ರೇರಣೆಯೊಂದಿಗೆ ಶ್ರೀ ಸೌಕೂರು ಮೇಳದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದರು.

ನಾವುಂದ ಮಹಾಬಲ ಗಾಣಿಗರು ಗಂಡುವೇಷದ ಭಿನ್ನ ಭಿನ್ನ ಸ್ಥಾನಗಳಿಗೂ ನ್ಯಾಯ ಕಲ್ಪಿಸಿ ಕೊಟ್ಟವರು. ಮೊದಮೊದಲು ದೇವೇಂದ್ರ, ಕೌರವ, ಸತ್ರಾಜಿತ -ನಂತ ಹ ಪೀಠಿ ಕಾ ರಾಜವೇಷಗಳನ್ನೂ ವೃಷಸೇನ, ಬಬ್ರುವಾಹನ, ಅಭಿಮನ್ಯು, ಮೊದಲಾದ ಮೂರನೇ ವೇಷಗಳನ್ನೂ ತದನಂತರ ಎರಡನೇ ವೇಷಗಳನ್ನೂ ಧರಿಸಿ ಖ್ಯಾತಿವೆತ್ತರು.

ವೀರಮಣಿ, ಅರ್ಜುನ, ಪುಷ್ಕಳ, 'ಮೀನಾಕ್ಷಿ ಕಲ್ಯಾಣ'ದ ನಂದಿ, 'ಜಾಂಬವತಿ'ಯ ಕೃಷ್ಣ, ಅವರಿಗೆ ಅಪಾರ ಜನಪ್ರಿಯತೆ ತಂದು ಕೊಟ್ಟ ಪಾತ್ರಗಳು. ಹಾಗೆಯೇ ಶ್ರೀಯುತರ ರಾವಣ, ಕೌಂಡ್ಲಿಕ, ಈಶ್ವರ, ಜಾಂಬವ ಪಾತ್ರಗಳೂ ಜನಮೆಚ್ಚುಗೆ ಗಳಿಸಿವೆ.

ಸೌಕೂರು 4, ಮಾರಣಕಟ್ಟೆ 10, ಅಮೃತೇಶ್ವರಿ 3, ಮಂದಾರ್ತಿ 4, ರಾಜರಾಜೇಶ್ವರಿ 1, ಹಾಲಾಡಿ 1, ಸಾಲಿಗ್ರಾಮ 3, ಮಡಾಮಕ್ಕಿ 2, ಹೊನ್ನೇಸರ 2, ಕೊಲ್ಲೂರು 3, ಕಳವಾಡಿ 2, ಕಮಲಶಿಲೆ 4, ಪೆರ್ಡೂರು 2, ಹಿರಿಯಡಕ 1, ಹೀಗೆ 42 ವರ್ಷಗಳ ವೃತ್ತಿ ಮೇಳದ ರಂಗಕೃಷಿ, ಡಾ. ಶಿವರಾಮ ಕಾರಂತರ 'ಯಕ್ಷರಂಗ' ವ್ಯವಸಾಯಿ ಮೇಳದಲ್ಲಿ 8 ವರ್ಷ ಕಾಲ ದುಡಿಮೆ. ಒಟ್ಟು ಐದು ದಶಕಗಳ ಸಾರ್ಥಕ ರಂಗಜೀವನ ಗಾಣಿಗರದ್ದು.

ಕಾರಂತರೊಂದಿಗೆ ಹಾಂಕಾಂಗ್, ಜಪಾನ್, ಲಂಡನ್, ಇಟಲಿ, ಬಲ್ಗೇರಿಯಾ, ಮುಂತಾದ ವಿದೇಶಗಳಲ್ಲೂ, ಗಾಣಿಗರ ಉನ್ನತ ಪ್ರತಿಭೆ ಹರಡಿದೆ.

ಪತ್ನಿ ತುಂಗಮ್ಮ, ಅವರಲ್ಲಿ 6 ಮಂದಿ ಮಕ್ಕಳನ್ನು ಪಡೆದಿದ್ದಾರೆ. ಶ್ರೀಯುತರಿಗೆ ಸೋಮಕ್ಷತ್ರಿಯ ಗಾಣಿಗ ಸಮಾಜ ಬೆಂಗಳೂರು, ಅಜಪುರ ಕರ್ನಾಟಕ ಸಂಘ ಬ್ರಹ್ಮಾವರ, ಉಡುಪಿ ಯಕ್ಷಗಾನ ಕಲಾರಂಗದ ಗೌರವ ಸಂಮಾನ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಎರಡನೇಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸಂಮಾನ ದೊರಕಿರುತ್ತದೆ.



ಮಹಾಬಲ ನಾಯ್ಕ, ಬೇಳಂಜೆ

ಸಮೃದ್ಧಿ ಸದನ, ಧೂಪದ ಕಟ್ಟೆ, ಅಂಚೆ : ಬೇಳಂಜೆ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಪುಂಡುವೇಷದ ಗಂಡುಗಲಿಯೆಂಬ ಖ್ಯಾತಿಗೆ ಪಾತ್ರರಾದ ಬೇಳಂಜೆ ಮಹಾಬಲ ನಾಯ್ಕರು ಗಂಡುಕಲೆಯಲ್ಲಿ ತಮ್ಮ ಕಲಾಪ್ರತಿಭೆಯ ಮೂಲಕ ಪಾತ್ರಗಳಿಗೆ ಜೀವ ತುಂಬುವ ಕಲಾವಿದರು.

ಹಿರಿಯ ಮದ್ದಳೆಗಾರ ಬೇಳಂಜೆ ತಿಮ್ಮಪ್ಪ ನಾಯ್ಕ ಹಾಗೂ ವೇದಾವತಿ ಅವರ ಸುಪುತ್ರನಾಗಿ 13-7-1958ರಲ್ಲಿ ಕಾರ್ಕಳ ತಾಲೂಕಿನ ಬೇಳಂಜೆ ಎಂಬಲ್ಲಿ ಹುಟ್ಟಿದ ಮಹಾಬಲ ಅವರು ಆರಕ್ಕೇ ಓದು ನಿಲ್ಲಿಸಿ, ಹನ್ನೆರಡರಲ್ಲೇ ಬಣ್ಣದ ಬದುಕು ಕಂಡವರು. ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ದಶಾವತಾರಿ ಗುರು ವೀರಭದ್ರನಾಯಕ್, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲರಾಯರ ಶಿಷ್ಯನಾಗಿ ಯಕ್ಷಗಾನ

ರಂಗಕಲೆಯ ಪರಿಣತಿ ಸಾಧಿಸಿದ ಮಹಾಬಲ ನಾಯ್ಕರಿಗೆ ಅವರ ತೀರ್ಥರೂಪ-ರಿಂದಲೂ ಅಪಾರ ಅನುಭವ ದೊರಕಿತು.

ಹಿರಿಯಡಕ, ಪೆರ್ಡೂರು 1, ಮಾರಣಕಟ್ಟೆ 10, ಅಮೃತೇಶ್ವರಿ 5, ಸೌಕೂರು 2, ಮಡಾಮಕ್ಕಿ 2, ಮಂದಾರ್ತಿ 19, ಹೀಗೆ ನಾಲ್ಕು ದಶಕಗಳ ನಿರಂತರ ಕಲಾವ್ಯವಸಾಯದಲ್ಲಿ ಸಾರ್ಥಕ್ಯ ಕಂಡ ಮಹಾಬಲ ನಾಯ್ಕರು ಪರಿಸ್ಫುಟ ನೃತ್ಯಾಭಿನಯ ಬದ್ಧತೆ ಖಚಿತಲಯಗಾರಿಕೆಯ ಶುದ್ಧತೆಯಲ್ಲಿ ಪಾತ್ರಗಳನ್ನು ಪೋಷಿಸುವವರು. ಆಳಂಗ, ತಾರಕಸ್ವರತ್ರಾಣ, ಚುರುಕಿನ ಪದಗತಿ, ಈ ಎಲ್ಲಾ ಅಂಶಗಳಿಂದ ಪುಂಡುವೇಷಗಳಲ್ಲಿ ವಿಜೃಂಭಿಸುವ ಮಹಾಬಲ ನಾಯ್ಕರ ಬಭ್ರುವಾಹನ, ಅಭಿಮನ್ಯು, ವೃಷಸೇನ, ಲವ-ಕುಶ, ಶ್ರೀಕೃಷ್ಣ, ವಿದ್ಯುನ್ಮಾಲಿ ಆಂಜನೇಯ ಮೊದಲಾದ ಪಾತ್ರಗಳು ಕಲಾಪ್ರೇಕ್ಷಕರಿಂದ ಸೈ ಅನ್ನಿಸಿಕೊಂಡಿವೆ.

ಸಹಧರ್ಮಿಣಿ ಬೇಬಿ. ದೀಪಾ, ದಿವ್ಯಾ, ದಿವಾಕರ ಮಕ್ಕಳು, ಶ್ರೀಯುತರು ಪ್ರಸ್ತುತ ಮಂದಾರ್ತಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಶ್ರೀಯುತರನ್ನು ಕಾರ್ಕಳ ಜೇಸೀ ಸಪ್ತಾಹ, ಹೆಬ್ರಿ ಮರಾಠಿ ಸಂಘದ ವತಿಯಿಂದ ಸನ್ಮಾನಿಸಲಾಗಿದೆ.



**ಮಹಾಬಲ ದೇವಾಡಿಗ, ಕಮಲಶಿಲೆ**

*'ಶ್ರೀ ಬ್ರಾಹ್ಮಿ ಕಲಾಮಾತೆ', ಹೊಸಾಕಳಿ, ಅಂಚೆ :*
*ಕಟ್‌ಬೇಲ್ತೂರು, ಕುಂದಾಪುರ ತಾಲೂಕು*
*ದೂರವಾಣಿ : 99022 96077*

ಬಡಗಿನ ಸಂಪ್ರದಾಯನಿಷ್ಠ ರಾಜ ಹಾಸ್ಯಗಾರಿಕೆಯಲ್ಲಿ ವಿಶೇಷ ಮಾನ್ಯತೆ ಕಂಡುಕೊಂಡ ಹಿರಿಯ ಹಾಸ್ಯಗಾರ ಕಮಲಶಿಲೆ ಮಹಾಬಲ ದೇವಾಡಿಗ.

ಕುಂದಾಪುರ ತಾಲೂಕಿನ ಕಮಲಶಿಲೆಯಲ್ಲಿ ಮಂಜುದೇವಾಡಿಗ-ಅಕ್ಕಯ್ಯ ದೇವಾಡಿಗ ಅವರ ಪುತ್ರನಾಗಿ ಜನಿಸಿದ ಶ್ರೀಯುತರು 53ರ ಹಿರಿತನಕ್ಕೆ ಬೆಳೆದು ನಿಂತವರು.

ನಾಲ್ಕನೇ ತರಗತಿಗೆ ವಿದಾಯ ಹೇಳಿ, ತನ್ನ 13ರ ಹರೆಯದಲ್ಲಿ ಕಲಾ ಜೀವನ ಆರಂಭಿಸಿದ ಮಹಾಬಲ ದೇವಾಡಿಗರು 1974ರಲ್ಲಿ ಉಡುಪಿ ಯಕ್ಷಗಾನ ಕೇಂದ್ರಕ್ಕೆ ಸೇರಿ ಗುರು ವೀರಭದ್ರನಾಯ್ಕ, ನೀಲಾವರ ರಾಮಕೃಷ್ಣಯ್ಯ ಹಿರಿಯಡಕ ಗೋಪಾಲರಾಯರ ಶಿಷ್ಯನಾಗಿ ಶಾಸ್ತ್ರೀಯ ರಂಗಶಿಕ್ಷಣ ತನ್ನದಾಗಿಸಿಕೊಂಡರು.

ಆ ಕಾಲದಲ್ಲಿ ಕು. ಶಿ. ಹರಿದಾಸ ಭಟ್ ಹಾಗೂ ಡಾ. ಶಿವರಾಮ ಕಾರಂತರೊಂದಿಗೆ ದೆಹಲಿಗೆ ಹೋಗಿ ಲವ-ಕುಶ ಕಾಳಗ, ಅಭಿಮನ್ಯು ವಧೆ ಪ್ರಸಂಗಗಳಲ್ಲಿ ಪಾತ್ರ ನಿರ್ವಹಿಸಿ ಸೈ ಅನ್ನಿಸಿಕೊಂಡರು.

ರಸಭಾವ ಪುಷ್ಟಿಕರ ನೃತ್ಯ-ಅಭಿನಯ, ಹಾಸ್ಯಭಾವ ಪರಿಷ್ಕೃತ ವಾಕ್ಸರಣಿ, ಅನನ್ಯ ಪಾತ್ರ ತದಾತ್ಮ ನೈಚ್ಯ ರಹಿತ ರಂಗವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಕಮಲಶಿಲೆ . ಮಹಾಬಲದೇವಾಡಿಗರು ಹಿರಿಯ ಕಲಾವಿದರಾದ ನಾಗಯ್ಯ ಶೆಟ್ಟಿ, ದೇವಪ್ಪ ಗಾಣಿಗ ಹಾಗೂ ಕಕ್ಕುಂಜೆ ಶಂಕರ ಆಚಾರರಿಂದ ಹಾಸ್ಯಗಾರಿಕೆಯ ಸಮಗ್ರ ಮಾಹಿತಿ ಪಡೆದವರು.

ಬಡಗಿನ ಸುಪ್ರಸಿದ್ಧ ಹಾಸ್ಯಕಲಾವಿದ ಹಾಲಾಡಿ ಕೊರ್ಗು ಅವರ ಛಾಪು' ಉಳಿಸಿಕೊಂಡ ಮಹಾಬಲ ದೇವಾಡಿಗರ 'ಬಾಹುಕ'ನ ಪಾತ್ರವಂತೂ ಇಂದಿಗೂ ಅಪಾರ ಜನಪ್ರಿಯತೆ ಉಳಿಸಿಕೊಂಡಿದೆ. ಹಾಗೆಯೇ ಚಂದಗೋಪ, ಕೈಲಾಸ ಶಾಸ್ತ್ರಿ, ಕಂದರ, ದಾರುಕ, ವಿದ್ಯುಜ್ಜಿಹ್ವ ಮೊದಲಾದ ಭೂಮಿಕೆಗಳೂ ಕಲಾರಸಿಕರ ಮನರಂಜಿಸಿವೆ.

ಮಂದಾರ್ತಿ ಮೇಳದಲ್ಲಿ 21 ವರ್ಷ, ಕಮಲಶಿಲೆ ವರ್ಷ, ಹೀಗೆ ಮಹಾಬಲ ದೇವಾಡಿಗರ ಒಟ್ಟು ಮೇಳದಲ್ಲಿ 7 ವರ್ಷ, ಮಾರಣಕಟ್ಟೆ ಮೇಳದಲ್ಲಿ 10 ರಂಗಕೃಷಿಯ ಅವಧಿ 38 ವರ್ಷ, ಕಮಲಾ ಎಂಬವರನ್ನು ವರಿಸಿ, ಅರುಣ, ವೀಣಾ, ಕಿರಣ, ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಶ್ರೀಯುತರನ್ನು ಹಲವಾರು ಸಂಘ-ಸಂಸ್ಥೆಗಳು ಸಂಮಾನಿಸಿವೆ.




**ಮಹಾಬಲ ಶೆಟ್ಟಿ, ನೀಲಾವರ**

*ಕೆದೂರು, ಹಾನಾಡಿ.*
*ಕುಂದಾಪುರ ತಾಲೂಕು ಉಡುಪಿ ಜಿಲ್ಲೆ*
*ದೂರವಾಣಿ: 08259 202652, 97310 83664*


ಬಡಗುತಿಟ್ಟು ಯಕ್ಷಗಾನರಂಗದಲ್ಲಿ ಸ್ತ್ರೀವೇಷ, ಪುರುಷವೇಷ, ಎರಡನೇ ವೇಷ, ಕಿರಾತ ವೇಷ, ಬಣ್ಣದವೇಷ ಹೀಗೆ ವರ್ಣರಂಜಿತ ಕಲಾವ್ಯಕ್ತಿತ್ವದಲ್ಲಿ ಕಂಗೊಳಿಸುವ ಪರಂಪರೆಯ ಹಿರಿಯ ವೇಷಧಾರಿ ನೀಲಾವರ ಮಹಾಬಲ ಶೆಟ್ಟಿ.

ನೀಲಾವರ ಗ್ರಾಮದ ಮಧ್ಯಸ್ಥರಬೆಟ್ಟು ಎಂಬಲ್ಲಿ 1955ರಲ್ಲಿ ಹಂದಾಡಿ ಕೃಷ್ಣಯ್ಯ ಶೆಟ್ಟಿ-ರಾಧಮ್ಮ ಶೆಟ್ಟಿ ದಂಪತಿಯ ಪುತ್ರರಾಗಿ ಜನಿಸಿದ ಇವರು ಓದಿದ್ದು 5ನೇ ತರಗತಿ. ಇವರ ತಂದೆ ಸುಪ್ರಸಿದ್ಧ ವೇಷಧಾರಿಯಾಗಿದ್ದರು. ಮಕ್ಕಳು ಯಕ್ಷಗಾನಕ್ಕೆ ಸೇರಬಾರದೆಂಬ ತಂದೆಯ ವಿರೋಧದ ನಡುವೆಯೂ

ಅಣ್ಣ ಅನಂತ ಶೆಟ್ಟರ ಪ್ರೇರಣೆಯೊಂದಿಗೆ ಕಲಾಬದುಕಿಗೆ ಹೆಜ್ಜೆ ಹಾಕಿದ ಶೆಟ್ಟರು ಮತ್ತೆ ಹಿಂದಿರುಗಿ ಕಂಡದ್ದಿಲ್ಲ. ತನ್ನ 16ರ ಹರೆಯದಲ್ಲೇ ಕಲಾಲೋಕ ಪ್ರವೇಶಿಸಿದ ಶೆಟ್ಟರು ಉಡುಪಿ ಯಕ್ಷಗಾನಕೇಂದ್ರದಲ್ಲಿ ಗುರುವೀರಭದ್ರನಾಯ್ಕರ ಶಿಷ್ಯನಾಗಿ ಯಕ್ಷಗಾನ ನೃತ್ಯಕಲೆ ಸಿದ್ಧಿಸಿಕೊಂಡರು. ಹಿರಿಯ ಕಲಾವಿದ ಹಳ್ಳಾಡಿ ಕೃಷ್ಣಪನವರಲ್ಲೂ ಶಿಷ್ಯವೃತ್ತಿಯನ್ನು ಕೈಗೊಂಡು ವಿಶೇಷ ರಂಗಾನುಭವವನ್ನು ಗಳಿಸಿದರು.

ಮಾರಣಕಟ್ಟೆ ಮೇಳದಲ್ಲಿ ಎಂ.ಎಂ.ಹೆಗ್ಡೆಯವರ ಸಹಕಾರದಿಂದ ಹಂತ-ಹಂತವಾಗಿ ಮೇಲೇರಿ ಸತತ 28ವರ್ಷಗಳ ಕಾಲ ಪ್ರಸಿದ್ಧ ಸ್ತ್ರೀವೇಷಧಾರಿಯಾಗಿ ರಂಗವಾಳಿದರು. ಪೆರ್ಡೂರು 3, ಮಂದರ್ತಿ3, ಸಾಲಿಗ್ರಾಮ 1, ಕಮಲಶಿಲೆ 1, ಮಾರಣಕಟ್ಟೆ 33, ಹಾಲಾಡಿ 1, ಹೀಗೆ 42ವರುಷಗಳ ಸಾರ್ಥಕ ಯಕ್ಷಕೃಷಿ ಶೆಟ್ಟರದ್ದು.

ಹಾರಾಡಿ-ಮಟಪಾಡಿ ಶೈಲಿಯ ಹದವಾದ ಎರಕವನ್ನು ಶ್ರೀಯುತರಲ್ಲಿ ಗುರುತಿಸಬಹುದಾಗಿದ್ದು, ಆರಂಭದಲ್ಲಿ ಇವರು ಸ್ತ್ರೀವೇಷಧಾರಿಯಾಗಿ ರಂಗದುಡಿಮೆ ನಡೆಸಿದವರು. ಪ್ರಧಾನ ಕಸ ಸ್ತ್ರೀವೇಷಗಳಾದ ಮೀನಾಕ್ಷಿ, ದೌಪದಿ, ಪ್ರಮೀಳೆ, ಮೊದಲಾದ ಇವರ ಭೂಮಿಕೆಗಳು ಜೋಡಾಟಗಳಲ್ಲಿ ವಿಶೇಷ ಗೆಲುವು ಕಂಡಿವೆ. ಹಾಗೆಯೇ ಇವರ ಶಶಿಪ್ರಭೆ, ಶ್ರೀದೇವಿ, ಭ್ರಮರಕುಂತಳೆ, ಅಂಬೆಯಂತಹ ಪಾತ್ರಗಳೂ ಜನಪ್ರಿಯ.

ವಿರಾಟ, ಸತ್ರಾಜಿತ, ಧರ್ಮರಾಯ, ಕೌರವ, ಪುಷ್ಕಳ, ಅರ್ಜುನ, ಮೊದ ಲಾದ ಗಂಡುಭೂಮಿಕೆಗಳಿಗೂ ಶ್ರೀಯುತರು ಜೀವ ತುಂಬಿದ್ದಾರೆ. ಬಣ್ಣದ ವೇಷಗಳಾದ ಮೈರಾವಣ, ವಿದ್ಯುಲ್ಲೋಚನ, ಕಾಲಜಂಘ, ರಕ್ತಕೇಶಿ, ವೃತ್ತಜ್ವಾಲೆ ಪಾತ್ರಗಳಲ್ಲೂ ತನ್ನತನವನ್ನು ಮೆರೆದಿದ್ದಾರೆ.

ಉಡುಪಿ ಯಕ್ಷಗಾನ ಕಲಾರಂಗದ ಮೂಲಕ ಅಮೆರಿಕಾದ ವಿಶ್ವಕನ್ನಡ ಸಮ್ಮೇಳನದಲ್ಲೂ ಭಾಗವಹಿಸಿ ಕಲಾಪ್ರತಿಭೆ ಮೆರೆದಿದ್ದಾರೆ. ಜರ್ಮನ್, ಫ್ರಾನ್ಸ್, ದೇಶಗಳಲ್ಲೂ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ್ದಾರೆ. ಶ್ರೀಯುತರು ಪತ್ನಿ ಗುಲಾಬಿ. ಪೂರ್ಣಿಮಾ, ಪ್ರತಿಮಾ, ವಸಂತ, ಮಮತಾ ನಾಲ್ಕು ಮಂದಿ ಮಕ್ಕಳು. ನೀಲಾವರ ಮಹಾಬಲ ಶೆಟ್ಟರಿಗೆ ಸೀತಾನದಿ ಗಣಪಯ್ಯ ಶೆಟ್ಟಿ ಪ್ರತಿಷ್ಠಾನದ ಪ್ರಶಸ್ತಿ, ಎಂ. ಎಂ. ಹೆಗ್ಡೆ ಪ್ರಶಸ್ತಿ ಸೇರಿದಂತೆ ಹಲವಾರು ಗೌರವ ಸಂಮಾನ ಸಂದಿದೆ.



ಮಾಧುನಾಯ್ಕ, ಪೇತ್ರಿ

ಚೇರ್ಕಾಡಿ ಗ್ರಾಮ, ಅಂಚೆ : ಪೇತ್ರಿ,
ಉಡುಪಿ ತಾಲೂಕು/ಜಿಲ್ಲೆ 576 215
ದೂರವಾಣಿ : 0820 2566484

ಉನ್ನತ ಪ್ರತಿಭಾಸಂಪತ್ತಿನಿಂದ ಯಕ್ಷಗಾನ ರಂಗದಲ್ಲಿ ಸಾಂಪ್ರದಾಯಿಕ ಹೆಜ್ಜೆ ಮೂಡಿಸಿದ ಹಿರಿಯ ಕಲಾವಿದ ಪೇತ್ರಿ ಮಾಧುನಾಯ್ಕ.

ಉಡುಪಿ ತಾಲೂಕಿನ ಹಳುವಳ್ಳಿ ಎಂಬ ಹಳ್ಳಿಯಲ್ಲಿ ವಾಮನ ನಾಯ್ಕ-ಮೈರು ಬಾಯಿ ದಂಪತಿಯ ಸುಪುತ್ರರಾಗಿ 11-9-1940ರಲ್ಲಿ ಜನಿಸಿದ ಮಾಧು ನಾಯ್ಕರು 6ನೇ ತರಗತಿಗೆ ಶರಣು ಹೊಡೆದು, ಪ್ರಸಿದ್ಧ ಮದ್ದಳೆಗಾರ ಸೋದರಮಾವ ಬೇಳಂಜೆ ತಿಮ್ಮಪ್ಪ ನಾಯ್ಕ ಅವರ ಪ್ರೇರಣೆಯಿಂದ ಬಣ್ಣದ ಬದುಕು ಕಂಡರು. ಗುರು ವೀರಭದ್ರ ನಾಯಕ್, ಹೆರಂಜಾಲು ವೆಂಕಟರಮಣ ಗಾಣಿಗ ಅವರ ಶಿಷ್ಯನಾಗಿ ಸಮರ್ಪಕ ಯಕ್ಷಶಿಕ್ಷಣವನ್ನು ಪಡೆದ ನಾಯ್ಕರು ತನ್ನ 14ರ ಹರೆಯದಲ್ಲಿ ಮಾರಣ ಕಟ್ಟೆ ಮೇಳದಲ್ಲಿ ಗೆಜ್ಜೆ ಕಟ್ಟಿದರು.

ಮಾರಣಕಟ್ಟೆ 1, ಮಂದಾರ್ತಿ 13, ಪೆರ್ಡೂರು 3, ಸಾಲಿಗ್ರಾಮ 2, ಅಮೃತೇಶ್ವರಿ 2, ಕೊಲ್ಲೂರು 1, ಮೂಲ್ಕಿ 1 ಹೀಗೆ ವೃತ್ತಿ ಮೇಳಗಳಲ್ಲಿ ಸುಮಾರು 23ವರ್ಷಗಳ ಕಲಾಕೃಷಿ ನಡೆಸಿದ್ದಾರೆ. ಉಡುಪಿ ಯಕ್ಷಗಾನ ಕೇಂದ್ರದ


'ಯಕ್ಷರಂಗ'ದ ಕಲಾವಿದನಾಗಿ ಡಾ. ಶಿವರಾಮಕಾರಂತರ ಗರಡಿಯಲ್ಲಿ ಪಳಗಿ 30ವರ್ಷಗಳ ಸಾರ್ಥಕ ರಂಗಜೀವನ ನಡೆಸಿದ್ದಾರೆ.

'ಯಕ್ಷರಂಗ' ತಂಡದ ಮೂಲಕ ದುಬೈ, ಕೆನಡಾ, ಜಪಾನ್, ರಷ್ಯಾ, ಇಟಲಿ ಮೊದಲಾದ ವಿದೇಶಗಳಲ್ಲೂ ತನ್ನ ಕಲಾಪ್ರತಿಭೆಯನ್ನು ಮೆರೆದ ಶ್ರೀಯುತರು 53ವರ್ಷಗಳ ಸಾರ್ಥಕ ಕಲಾವ್ಯವಸಾಯ ಪೂರ್ಣಗೊಳಿಸಿ ಪ್ರಸ್ತುತ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಸ್ತ್ರೀವೇಷ ಒಂದನ್ನುಳಿದು ಎಲ್ಲಾ ಬಗೆಯ ವೇಷಗಳನ್ನೂ ನಿರ್ವಹಿಸಿದ ಕಲಾವಿದರಿವರು. ಬಡಗಿನ ಘಟಾನುಘಟಿ ಕಲಾವಿದರ ಒಡನಾಟದಲ್ಲಿ ವಿಶೇಷ ಕಲಾನುಭವ ಹೊಂದಿದ ಮಾಧು ನಾಯ್ಕರು ರಾಜವೇಷಗಳಾದ ಹಂಸಧ್ವಜ, ಶತ್ರುಘ್ನ ಮೊದಲಾದ ಪಾತ್ರಗಳಿಗೆ ಜೀವ ತುಂಬಿದವರು. ವೃತ್ತಿಮೇಳಗಳಲ್ಲಿ ಇವರ ಮುಂಡಾಸು ವೇಷಗಳು ಅಪಾರ ಜನಪ್ರಿಯತೆ ಕಂಡುಕೊಂಡಿದ್ದವು.

ಇವರ ಬಣ್ಣದ ವೇಷ ಯಕ್ಷಗಾನ ಕಲಾಜಗತ್ತಿನಲ್ಲಿ ವಿಶೇಷ ಖ್ಯಾತಿ ಪಡೆದಿವೆ. ರಾವಣ, ಘಟೋತ್ಕಚ, ಹಿಡಿಂಬಾಸುರ, ತಾರಕಾಸುರ, ಮೊದಲಾದ ಗಂಡುಬಣ್ಣ, ಶೂರ್ಪನಖೆ, ಹಿಡಿಂಬೆ ಲಂಕಿಣಿ ವೃತ್ರಜ್ವಾಲೆ ಮೊದಲಾದ ಹೆಣ್ಣುಬಣ್ಣ ಶ್ರೀಯುತರ ಅದ್ಭುತ ಕಲಾಪ್ರತಿಭೆಗೆ ಸಾಕ್ಷಿಯಾಗಿವೆ.

ಪತ್ನಿ ನೇತ್ರಾವತಿ. ಒಬ್ಬಳು ಹೆಣ್ಣು, ಐವರು ಗಂಡು ಮಕ್ಕಳನ್ನು ಪಡೆದಿದ್ದಾರೆ. ಉಡುಪಿ ತಾಲೂಕು ಸಾಹಿತ್ಯ ಸಮ್ಮೇಳನ ಸಂಮಾನ, ಉಡುಪಿ ಯಕ್ಷಗಾನ ಕೇಂದ್ರದ ಸಂಮಾನ, ಕು. ಶಿ. ಹರಿದಾಸ ಭಟ್ಟ ಜಾನಪದ ಪ್ರಶಸ್ತಿ ಹಾಗೂ 'ಯಕ್ಷಗಾನ ಕಲಾರಂಗ'ದ ಪ್ರೊ. ಬಿ. ವಿ. ಆಚಾರ ಪ್ರಶಸ್ತಿ ದೊರಕಿರುತ್ತದೆ.



ಮುಖ್ಯಪ್ರಾಣ, ಕಿನ್ನಿಗೋಳಿ

*ಉದಯಗಿರಿ, ಪುಸರೂರು, (ದ.ಕ)*
*ದೂರವಾಣಿ: 0824-2295834*

ಉಭಯತಿಟ್ಟಿನ ಹಾಸ್ಯಗಾರಿಕೆಯಲ್ಲಿ ಪ್ರಖ್ಯಾತಿಯನ್ನು ಕಂಡ ಹಿರಿಯ ಕಲಾವಿದ ಕಿನ್ನಿಗೋಳಿ ಮುಖ್ಯಪ್ರಾಣ.

ಸನಾತನ ಯಕ್ಷಗಾನ ಪರಂಪರೆಯ ಮಟ್ಟನ್ನೂ, ಸಮಕಾಲೀನ ರಂಗಭೂಮಿಯ ವಿನೂತನದಗುಟ್ಟನ್ನೂ ಬಲ್ಲ ಕಲಾವಿದ ಮುಖ್ಯಪ್ರಾಣ ಅವರು 12-3- 1941ರಲ್ಲಿ ರುಕ್ಕಯ್ಯ ಶೆಟ್ಟಿಗಾರ್ - ಶೇಷಿ ದಂಪತಿಯ ಸುಪುತ್ರರಾಗಿ ತಾಳಿಪಾಡಿ ಎಂಬಲ್ಲಿ ಜನಿಸಿದರು.

ಐದನೇಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪೂರೈಸಿರುವ ಇವರು, ಚಿಕ್ಕಂದಿನಿಂದಲೇ ಯಕ್ಷಗಾನ ಕಲೆಯ ಕುರಿತು ವಿಶೇಷ ಆಸಕ್ತಿ ಹೊಂದಿದವರು. ಸುಪ್ರಸಿದ್ಧ ಹಾಸ್ಯ ಕಲಾವಿದ ಮಿಜಾರು ಅಣ್ಣಪ್ಪ ಹಾಗೂ ಡಾ. ಎನ್. ನಾರಾಯಣ ಶೆಟ್ಟಿ ಅವರ ಶಿಷ್ಯನಾಗಿ ಯಕ್ಷಗಾನ ಕಲಾನುಭವ ದ್ರವ್ಯವನ್ನು ಗಳಿಸಿದ ಮುಖ್ಯ ಪ್ರಾಣರು ತನ್ನ 19ನೇ ವಯಸ್ಸಿನಲ್ಲೇ ಯಕ್ಷಲೋಕದತ್ತ ಹೆಜ್ಜೆ ಹಾಕಿದರು.

ಮುಖ್ಯಪ್ರಾಣ ಅವರ ಆಳಂಗ, ಭಾಷೆ, ಭಾವ, ರಂಗನಡೆ ಎಲ್ಲವೂ ಹಾಸ್ಯಭೂಮಿಕೆಗೆ ಸಮುಚಿತವಾಗಿ ಕಲಾರಸಿಕರ ಮನ ಗೆದ್ದಿದೆ. ಸುಸಂಸ್ಕೃತವಾದ ರಾಜ ಹಾಸ್ಯಗಾರಿಕೆಯಲ್ಲಿ ಪ್ರೇಕ್ಷಕರ ಮೊಗದಲ್ಲಿ ನಗೆಯಚಿತ್ತಾರ ಬಿಡಿಸುವ ಕಿನ್ನಿಗೋಳಿಯವರು, ಅಪಾರ ರಂಗಾನುಭವವನ್ನು ಹೊಂದಿ, ಗರಿಷ್ಠಮಟ್ಟದಲ್ಲಿ ಹಾಸ್ಯ ಪಾತ್ರಗಳನ್ನು ಪೋಷಿಸುವವರು.

ಭೀಷ್ಮಪ್ರತಿಜ್ಞೆಯ ಕಂದರ, ಭೀಷ್ಮವಿಜಯದ ವೃದ್ಧಭೂಸುರ, ಚಂದ್ರಾವಳಿ ವಿಲಾಸದ ಚಂದಗೋಪ, ಶ್ರೀಕೃಷ್ಣ ಲೀಲೆಯ ವಿಜಯ, ದಮಯಂತಿಯ ಬಾಹುಕ, ಗದಾಯುದ್ಧದ ಬೇಹುಚಾರಕ...., ಹಾಸ್ಯಭೂಮಿಕೆಗಳಿಗೆ ತನ್ನದೇ ಶೈಲೀಕೃತ ವೈನೋದಿಕ ಛಾಪು ಮೂಡಿಸಿದ ಕಿನ್ನಿಗೋಳಿ ಮುಖ್ಯಪ್ರಾಣ ಅವರು ಸಾಂಪ್ರದಾಯಿಕ ಸೊಗಡು, ಸೊಬಗಿಗೆ ಮೊದಲ ಮಣೆ ಹಾಕುವವರು.

ಕಟೀಲು 6, ಇರಾ ಸೋಮನಾಥೇಶ್ವರ 3, ಸುಬ್ರಹ್ಮಣ್ಯ 1, ಮಂತ್ರಾಲಯ 2, ಸಾಲಿಗ್ರಾಮ 14, ಪೆರ್ಡೂರು 8, ಕುಮಟಾ 1, ಕದ್ರಿ 3, ಮಂದಾರ್ತಿ 11, ಹೀಗೆ 9 ಮೇಳಗಳಲ್ಲಿ ಸುದೀರ್ಘವಾದ 49ವರ್ಷಗಳ ಕಲಾವ್ಯವಸಾಯವನ್ನು ಪೂರೈಸಿದ್ದಾರೆ. ಪ್ರಸ್ತುತ ಕಿನ್ನಿಗೋಳಿಯವರು ಮಂದಾರ್ತಿ ಮೇಳದ ಪ್ರಧಾನ ಹಾಸ್ಯಗಾರರಾಗಿ ಸೇವೆ ಸಲ್ಲಿಸುತ್ತಿರುವವರು.

ಸತಿ ದುರ್ಗಾವತಿ, ಓರ್ವ ಸುಪುತ್ರ ಯಶವಂತ ಕಂಪ್ಯೂಟರ್ ಇಂಜಿನಿಯರ್, ಮೂಡಬಿದ್ರಿ ಅಭಿಮಾನಿಬಳಗ, ಸಿದ್ಧಾಪುರ ಗೆಳೆಯರ ಬಳಗ, ಮಂಗಳೂರು ಸಾಹಿತ್ಯ ಸಮ್ಮೇಳನ, 'ಕಲಾರಂಗ'ದ ನಿಟ್ಟೂರು ಸುಂದರ ಶೆಟ್ಟಿ ಪ್ರಶಸ್ತಿ, ಪದ್ಮಶಾಲಿ ಕೂಟ - ಬೆಂಗಳೂರು ವತಿಯಿಂದ ಗೌರವ, ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಡಾ. ಜಿ. ಶಂಕರ್ ಟ್ರಸ್ಟ್ ಗೌರವ ಸಮಾನ, ಯಕ್ಷಗಾನ ಅಕಾಡೆಮಿ ಪ್ರಶಸ್ತಿಯೂ ಶ್ರೀಯುತರಿಗೆ ದೊರಕಿರುತ್ತದೆ.



**ಮೋಹನದಾಸ ಶೆಣೈ, ಆಗೋ೯ಡು**

*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ: 08259-203827*

ಸಾಂಪ್ರದಾಯಿಕ ಆವರಣದಲ್ಲಿ ಪಾತ್ರಗಳನ್ನು ತನ್ನದೇ ವರ್ಚಸ್ಸಿನಿಂದ ಬೆಳಗಿಸುವ ಹಿರಿಯ ಕಲಾವಿದ ಆರ್ಗೋಡು ಮೋಹನದಾಸ ಶೆಣೈ,

ಕುಂದಾಪುರ ತಾಲೂಕಿನ ಆರ್ಗೋಡು ಎಂಬಲ್ಲಿ ಕೆ. ಗೋವಿಂದರಾಯ ಶೆಣೈ, ಮುಕ್ತಾ ಬಾಯಿ ದಂಪತಿಯ ಸುಪುತ್ರರಾಗಿ 10-2-1950ರಂದು ಜನಿಸಿದ ಶೆಣೈಯವರು ಪಿ.ಯು.ಸಿ ವಿದ್ಯಾಭ್ಯಾಸದ ಬಳಿಕ ಅಂದರೆ ತನ್ನ 26ನೇ ವಯಸ್ಸಿನಲ್ಲಿ ತಂದೆಯವರ ಪ್ರೇರಣೆ ಹಾಗೂ ಆಗಿನ ಹಿರಿಯಡಕ ಮೇಳದ ಯಜಮಾನ ಪೆರ್ಡೂರು ಮಹಾಬಲ ಶೆಟ್ಟರ ಒತ್ತಾಯದ ಮೇರೆಗೆ ಸ್ವಯಂ ಆಸಕ್ತಿಯಿಂದ ಯಕ್ಷಗಾನಕ್ಕೆ ಮುಖ ಮಾಡಿದರು. ಇವರ ತಂದೆ ಗೋವಿಂದರಾಯ ಶೆಣೈ ಪ್ರಸಿದ್ಧ ಭಾಗವತರಾಗಿದ್ದರು.

ದೊಡ್ಡಪ್ಪಂದಿರೀರ್ವರು ಉತ್ತಮ ವೇಷಧಾರಿಗಳು, ಹಾಗಾಗಿ ಶೆಣೈಯವರಿಗೆ ಕಲಾ ಹಿನ್ನೆಲೆ ಬಲಿಷ್ಠವಾಗಿಯೇ ಸಿಕ್ಕಿತು. ಹಾಸ್ಯಗಾರ ಕಮಲಶಿಲೆ ಮಹಾಬಲ ದೇವಾಡಿಗರಲ್ಲಿ ಕುಣಿತವನ್ನು ಕಲಿತ ಇವರು ಹವ್ಯಾಸಿಯಾಗಿ 2ವರ್ಷ ಯಕ್ಷಗಾನ ರಂಗಸೇವೆ ಮಾಡಿದ್ದರು.

ಕುಂದಾಪುರ ಲಕ್ಷ್ಮೀವೆಂಕಟೇಶ ಮೇಳದಲ್ಲಿ ಒಂದು ವರ್ಷ, ಹಿರಿಯಡಕ 3, ಹಳೇ ಪೆರ್ಡೂರು 1, ಕಮಲಶಿಲೆ 8, ಸಾಲಿಗ್ರಾಮ 4, ಮೂಲ್ಕಿ 1, ಹೊಸಪೆರ್ಡೂರು 13, ಮಂದಾರ್ತಿ 1, ಶಿರಸಿ ಮೇಳಗಳಲ್ಲಿ ಸೇವೆ ಸಲ್ಲಿಸಿ ಇದೀಗ ಕಮಲಶಿಲೆ ಮೇಳದ ಪ್ರಧಾನ ಕಲಾವಿದರಾಗಿ 35ನೇ ವರ್ಷದ ತಿರುಗಾಟದಲ್ಲಿದ್ದಾರೆ.

ಸಮರ್ಥ ಪುರುಷವೇಷಧಾರಿಯಾಗಿ ಎರಡನೇ ವೇಷಧಾರಿಯಾಗಿ ಪ್ರತಿಭಾ ಪ್ರೌಢತೆಯಿಂದ ಪಾತ್ರಗಳಿಗೆ ನ್ಯಾಯ ಕಲ್ಪಿಸಿದ ಶೆಣೈಯವರು ಶ್ರೀರಾಮ, ಭೀಷ್ಮ, ಸುಧನ್ವ, ಜಾಂಬವ, ಬಲರಾಮ, ಕರ್ಣ, ಅರ್ಜುನ, ಪರಶುರಾಮ, ಹನೂಮಂತ, ವಿಕ್ರಮಾದಿತ್ಯ, ಮೈತ್ರೇಯ, ಕೌರವ, ಭೀಮ, ಋತುಪರ್ಣ ಮೊದಲಾದ ಪೌರಾಣಿಕ ವ್ಯಕ್ತಿ-ಶಕ್ತಿಗಳನ್ನು ಪಾತ್ರಗಳ ಮೂಲಕ ಜೀವಂತವಾಗಿರಿಸಿದ್ದಾರೆ.

ಪ್ರಗಲ್ಭ ಪಾಂಡಿತ್ಯದ ಖಜಾನೆಯಂತಿರುವ ಶೆಣೈಯವರು ಕಸ್ತೂರಿ ಎಂಬುವರನ್ನು ವರಿಸಿ, ಸಾವಿತ್ರಿ, ರಾಧಿಕಾ, ಪೂರ್ಣಿಮಾ ವಾಮನ, ವಿಷ್ಣು ಎಂಬ 5 ಮಂದಿ ಮಕ್ಕಳನ್ನು ಪಡೆದಿದ್ದಾರೆ.

ದಿ. ಕೆ. ಎಸ್. ನಿಡಂಬೂರು ಪ್ರಶಸ್ತಿಯೂ ಸೇರಿದಂತೆ ಶೆಣೈಯವರನ್ನು ಅನೇಕ ಸಂಘಸಂಸ್ಥೆಗಳು ಸಮ್ಮಾನಿಸಿವೆ.



**ಮಂಜಯ್ಯ ಶೆಟ್ಟಿ, ಹಳ್ಳಾಡಿ**


*ಮಧು ಬೀಡಾ ಸ್ಟಾಲ್, ಸಂತೆಪೇಟೆ,*
*ಚಿತ್ರದುರ್ಗ – 577501*
*ದೂರವಾಣಿ: 94481 72402*


ಬಡತುತಿಟ್ಟಿನ ಪರಂಪರೆಯ ವರ್ಚಸ್ವೀ ವೇಷಧಾರಿಯಾಗಿ ಗುರುತಿಸಿಕೊಂಡ ಶಿಷ್ಟ ಕಲಾವಿದ ಹಳ್ಳಾಡಿ ಮಂಜಯ್ಯ ಶೆಟ್ಟಿ,

ಕುಂದಾಪುರ ತಾಲೂಕಿನ ಹಳ್ಳಾಡಿ ಎಂಬಲ್ಲಿ 12-4-1932ರಲ್ಲಿ ಜನಿಸಿದ ಮಂಜಯ್ಯ ಶೆಟ್ಟರು ಗೋವಿಂದ ಶೆಟ್ಟಿ-ದೇವಮ್ಮ ದಂಪತಿಯ ಸುಪುತ್ರ. ಶ್ರೀಯುತರ ವಿದ್ಯಾಭ್ಯಾಸ 5ನೇ ತರಗತಿಯ ವರೆಗೆ ಮಾತ್ರ 16ರ ಹರೆಯದಲ್ಲೇ ಇವರ ಕಲಾ ಜೀವನ ಆರಂಭ.

ಗುರುವೀರಭದ್ರನಾಯಕ್ ಹಾಗೂ ಮಾರ್ಗೋಳಿ ಗೋವಿಂದ ಸೇರೆಗಾರ್ ಅವರಲ್ಲಿ ನೃತ್ಯಾಭಿನಯ ಶಿಕ್ಷಣ ಪಡೆದ ಮಂಜಯ್ಯ ಶೆಟ್ಟರು ಶಿರಿಯಾರ ಸಂಜೀವ ಅವರಲ್ಲಿ ತಾಳ, ಲಯಗಾರಿಕೆಯನ್ನು ಕಲಿತರು. ಬೇಳಂಜೆ ತಿಮ್ಮಪ್ಪ ನ್ಯಾಕರಿಂದ ಚೆಂಡೆ, ಮದ್ದಳೆ ವಾದನವನ್ನು ಶ್ರೀಯುತರು ಕರಗತಮಾಡಿಕೊಂಡರು.

ಅಮೃತೇಶ್ವರಿ, ಸಾಲಿಗ್ರಾಮ, ಮಾರಣಕಟ್ಟೆ, ಕೊಲ್ಲೂರು, ಪೆರ್ಡೂರು ಸೌಕೂರು ಮೇಳಗಳಲ್ಲಿ ಸುಮಾರು 45 ವರ್ಷ ಕಲಾಸೇವೆ ಸಲ್ಲಿಸಿದವರು.

ವೇಷಗಾರಿಕೆ ಹಾಗೂ ಮಾತುಗಾರಿಕೆಯ ಮೋಡಿಯಲ್ಲಿ ಶಿರಿಯಾರ ಮಂಜುನಾಯ್ಕರ ಶೈಲಿಯನ್ನು ನೆನಪಿಸುವ ಪ್ರಬುದ್ಧ ಕಲಾವಿದ ಮಂಜಯ್ಯಶೆಟ್ಟರು ಮಟಪಾಡಿ ರಂಗನಡೆಯನ್ನು ಕರಾರುವಾಕ್ಕಾಗಿ ತೋರಿಸುವವರು.

ಪರಿಶುದ್ಧ ವ್ಯಾಕರಣಬದ್ಧ, ಪಾಂಡಿತ್ಯಪೂರ್ಣ ವಾಕ್ ವೈಖರಿ, ಪರಿಣಾಮಕಾರಿ ಪಾತ್ರಾಭಿವ್ಯಕ್ತಿಯಲ್ಲಿ ಯಕ್ಷಗಾನೀಯವಾದ ಸೊಗಸು ಮೆರೆಯುವ ಶೆಟ್ಟರ ಸುಧನ್ವ, ಪುಷ್ಕಳ, ಲವ-ಕುಶ, ಯಯಾತಿ, ಅರ್ಜುನ ಪಾತ್ರಗಳು ಜನಪ್ರಿಯ, ದೇವವೃತ, ಋತುಪರ್ಣ, ಪಾರಿಜಾತದ ಕೃಷ್ಣ, ಧರ್ಮಾಂಗದ ಭೂಮಿಕೆಗಳಿಗೆ ಅವರದ್ದೇ ವಿಶೇಷ ಛಾಪು ಮೂಡಿಸಿದ್ದಾರೆ.

ಮಂಜಯ್ಯಶೆಟ್ಟರ ರಂಗದ ನಡೆ, ನುಡಿ, ನಿಲವು, ವೇಷ, ಎಲ್ಲವೂ ನೂರಕ್ಕೆ ನೂರು ಯಕ್ಷಗಾನೀಯವಾದದ್ದು. ಪಾತ್ರಗಳ ಅಂತರಂಗದ ಭಾವವನ್ನು ಅರಿತು ವ್ಯವಹರಿಸುವ ಅದ್ಭುತ ಕಲಾಪ್ರತಿಭೆ ರಂಗಭೂಮಿಗೆ ನೀಡಿದ ಹಿರಿಮೆಯೂ ಅವರಿಗಿದೆ. ಅವರದ್ದು. ಗುರುವಾಗಿ ಹಲವು ಶಿಷ್ಯರನ್ನು

ಶ್ರೀಯುತರ ಸಹಧರ್ಮಿಣಿ ರಾಧಮ್ಮ ಶೆಡ್ತಿ. ಓರ್ವ ಸುಪುತ್ರ ಹರ್ಷ ಶೆಟ್ಟಿ, ಪ್ರಸ್ತುತ ಮಂಜಯ್ಯಶೆಟ್ಟರು ಚಿತ್ರದುರ್ಗದಲ್ಲಿ ಅಂಗಡಿ ಉದ್ಯಮಿ.

ಶ್ರೀಯುತರಿಗೆ ಹಾರಾಡಿ ರಾಮಗಾಣಿಗ ಪ್ರಶಸ್ತಿ, ಎಂ. ಎಂ. ಹೆಗ್ಡೆ ಪ್ರಶಸ್ತಿ, ಯಕ್ಷಗಾನ ಕಲಾರಂಗದ ಮಾರ್ವಿ ಹೆಬ್ಬಾರ್ ಪ್ರಶಸ್ತಿ, ಯಕ್ಷದೇಗುಲ ಪುರಸ್ಕಾರ, ಮಂಗಳೂರು ಬಂಟರಸಂಘದ 'ಚೌಟ' ಪ್ರಶಸ್ತಿ, ಯಶಸ್ವೀ ಕಲಾವೃಂದ ತೆಕ್ಕಟ್ಟೆಯ ವತಿಯಿಂದ ಗೌರವ ಸಂಮಾನ, ಚಿತ್ರದುರ್ಗದ ವಿವಿಧ ಸಂಘ- ಸಂಸ್ಥೆಗಳಿಂದ ಸಂಮಾನ ದೊರಕಿರುತ್ತದೆ.



ಮಂಜುನಾಥ, ಅರಾಟೆ

'ಯಕ್ಷ ಕುಟೀರ' ಗಾವಳಿ, ಅಂಚೆ: ಹಳ್ನಾಡಿ–ಹರ್ಕಾಡಿ
ಕುಂದಾಪುರ ತಾಲೂಕು 576210
ದೂರವಾಣಿ 08259–270272,
ಮೊಬೈಲ್: 94492 72539

ತೆಂಕು-ಬಡಗುತಿಟ್ಟಿನ ಅಗ್ರಮಾನ್ಯ ಸ್ತ್ರೀವೇಷಧಾರಿ ಅರಾಟೆ ಮಂಜುನಾಥ. ಸ್ತ್ರೀಭೂಮಿಕೆಗೊಪ್ಪುವ ಅಂಗಸೌಷ್ಠವ, ಕಂಠಸಂಪತ್ತು, ಲಾಲಿತ್ಯಪೂರ್ಣ ನೃತ್ಯ, ಅಭಿನಯ ಕೌಶಲ, ಸುಮಪ್ಪ ರಂಗನಡೆ, ಪ್ರಗಲ್ಭ ಪಾಂಡಿತ್ಯದ ವಾಚಿಕವಿಲಾಸ ಮೈ ತುಂಬಿಕೊಂಡ ಮೇರು ಕಲಾವಿದ ಅರಾಟೆಯವರು ಯಕ್ಷಗಾನ ಪರಂಪರೆಯ ನಿಜ ಸತ್ವವನ್ನು ಹೀರಿಕೊಂಡು ಬೆಳೆದವರು.

ಕುಂದಾಪುರ ತಾಲೂಕಿನ ಗುಲ್ವಾಡಿ ಎಂಬಲ್ಲಿ ರಾಮನಾಯ್ಕ-ಮಂಜಮ್ಮ ದಂಪತಿಯ ಸುಪುತ್ರರಾಗಿ 1942ರಲ್ಲಿ ಜನಿಸಿದ ಅರಾಟೆಯವರ ಓದು ನಾಲ್ಕಕ್ಕೇ ಸೀಮಿತವಾಯಿತು. 13ನೇ ವಯಸ್ಸಿನಲ್ಲೇ ಅವರು ರಂಗಮಂಚಕ್ಕೆ ಹೆಜ್ಜೆ ಹಾಕಿದರು. ಹಿರಿಯ ಕಲಾವಿದರಾದ ಮಟಪಾಡಿ ಶ್ರೀನಿವಾಸ ನಾಯಕ್ ಹಾಗೂ ಗುರು ವೀರಭದ್ರನಾಯ್ಕರ ಶಿಷ್ಯನಾಗಿ ಸಂಪ್ರದಾಯಶೀಲ ಕಲಾಶಿಕ್ಷಣ ಪಡೆದ ಕಲಾವಿದರಿವರು.

ಸಾಲಿಗ್ರಾಮ, ಮಂದಾರ್ತಿ, ಮಾರಣಕಟ್ಟೆ, ಕಮಲಶಿಲೆ, ಕೆರೆಮನೆ, ರಾಜರಾಜೇಶ್ವರಿ, ಸುರತ್ಕಲ್, ಮೂಲ್ಕಿ, ಕೊಲ್ಲೂರು, ಪೊಳಲಿ, ಕುಂಡಾವು ಮೇಳಗಳಲ್ಲಿ ಸುದೀರ್ಘ 55 ವರ್ಷಗಳ ಕಾಲ ಕಲಾ ತಿರುಗಾಟ ನಡೆಸಿ ಅಪಾರ ಜನಮನ್ನಣೆಯನ್ನು ಪಡೆದರು. ಅರಾಟೆಯವರು ಓರ್ವ ಅತ್ಯುತ್ತಮ ವೇಷಧಾರಿ ಮಾತ್ರವಲ್ಲದೆ ಸಮರ್ಥ ಸಂಘಟಕರೂ ಹೌದು, ಗಣೇಶ ಪ್ರವಾಸೀ ಯಕ್ಷಗಾನ ಸಂಸ್ಥೆಯ ಸ್ಥಾಪಕರಾಗಿ ಅನೇಕ ಹಿರಿಯ ಕಲಾವಿದರನ್ನು ಗುರುತಿಸಿ ಗೌರವಿಸಿದವರು. ಕಿರಿಯ ಕಲಾವಿದರಿಗೆ ಮಾರ್ಗದರ್ಶಿಯಾದವರು.

ಪೌರಾಣಿಕ ಸ್ತ್ರೀಪಾತ್ರಗಳ ಅಂತಸ್ಸತ್ವವನ್ನು ಗಂಭೀರವಾಗಿ ಅರ್ಥೈಸಿಕೊಂಡು ಶಾಸ್ತ್ರೀಯ ಸಂವಿಧಾನದಲ್ಲಿ ಪಾತ್ರಗಳನ್ನು ಕೆತ್ತಿಡುವ ಅದ್ಭುತ ಪ್ರತಿಭೆ, ಅರಾಟೆಯವರ ಅಂಬೆ, ದಮಯಂತಿ, ಶಶಿಪ್ರಭೆ, ದಾಕ್ಷಾಯಿಣಿ, ಚಂದ್ರಮತಿ, ಸುಭದ್ರೆ, ಸೀತೆ, ಮೀನಾಕ್ಷಿ, ಮೋಹಿನಿ, ಪ್ರಭಾವತಿ, ಶ್ರೀದೇವಿ ಮೊದಲಾದ ಭೂಮಿಕೆಗಳು ಇಂದಿಗೂ ಅಜರಾಮರವಾಗಿವೆ. ಹಾಗೆಯೇ ಶ್ರೀಯುತರ ಕೃಷ್ಣ, ಅಶ್ವತ್ಥಾಮ, ಮೊದಲಾದ ಪುರುಷಪಾತ್ರಗಳೂ ಜನಪ್ರಿಯ.

ಗರತಿಪಾತ್ರಗಳಲ್ಲಿ ಕಾಣಿಸುವ ಹೆಣ್ಣನದ ಸಹಜ ಲಾಲಿತ್ಯ, ಕಸೆ ಪಾತ್ರಗಳಲ್ಲಿ ತೋರುವ ಗಂಭೀರ ಸ್ತ್ರೀಯ ರಂಗಔಚಿತ್ಯ ಸಾಟಿಯಿಲ್ಲದ್ದು. ಇವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿದ್ದರು. ಎರಡು ವರ್ಷಗಳ ಹಿಂದೆ ದೈಹಿಕ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ.

ರಂಗಸಾಧನೆಯ ಶೃಂಗಸಾರ್ಥಕ್ಯ ಕಂಡ ಶ್ರೇಷ್ಠ ಕಲಾವಿದ ಅರಾಟೆ ಮಂಜುನಾಥರ ಧರ್ಮಪತ್ನಿ ಜಲಾಜಾಕ್ಷಿ ಎಮ್. ಅರಾಟೆ, ಶ್ರೀಮತಿ ಜಯಶ್ರೀ, ಗಣೇಶ ಪ್ರಸಾದ್ ಅರಾಟೆ, ವಾಣಿಶ್ರೀ ಇವರ ಮೂವರು ಮಕ್ಕಳು. ಶ್ರೀಯುತರಿಗೆ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಪರಿಷತ್ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಪ್ರೊ| ಬಿ. ವಿ. ಆಚಾರ ಪ್ರಶಸ್ತಿ, ನಿಟ್ಟೂರು ಭೋಜಪ್ಪ ಸುವರ್ಣ ಪ್ರಶಸ್ತಿ, ರಾಮವಿಠಲ ಪ್ರಶಸ್ತಿ ಸೇರಿದಂತೆ ಅನೇಕ ಸಂಮಾನ ದೊರೆತಿದೆ.



## ರಘುರಾಮ ಎಂ. ಮಡಿವಾಳ

*ಹೆಗ್ಗುಂಜೆ ಗ್ರಾಮ, ಅಂಚೆ : ಮಂದಾರ್ತಿ*
*ದೂರವಾಣಿ 94499 61734*

ಬಡಗುತಿಟ್ಟಿನ ಯಕ್ಷಶಿಕ್ಷಣವನ್ನು ಪಡೆದು ಯಕ್ಷರಂಗ ಮಂಚದಲ್ಲಿ ಹೆಜ್ಜೆ ಹಾಕಿ, ಗೆಲುವು ಕಂಡ ಪ್ರತಿಭಾಸಂಪನ್ನ ಕಲಾವಿದ ಶ್ರೀ ಎಂ. ರಘುರಾಮ ಮಡಿವಾಳ,

ಕುಷ್ಠ ಮಡಿವಾಳ-ಲಚ್ಚು ಮಡಿವಾಳಿ ದಂಪತಿಯ ಸುಪುತ್ರರಾದ ರಘುರಾಮ ಮಡಿವಾಳರ ಹುಟ್ಟೂರು ಮಂದಾರ್ತಿ-ಹೆಗ್ಗುಂಜೆ. ಹಿರಿಯ ಕಲಾವಿದ ಉಡುಪಿ ಬಸವನಾಯ್ಕರ ಪ್ರೇರಣೆ, ಪ್ರೋತ್ಸಾಹವನ್ನು ಪಡೆದು ಯಕ್ಷಗಾನ ರಂಗಕ್ಕೆ ಧುಮುಕಿದ ರಘುರಾಮ ಅವರು ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರುವೀರಭದ್ರ ನಾಯಕ್ ಹಿರಿಯಡಕ ಗೋಪಾಲರಾವ್, ನೀಲಾವರ ರಾಮಕೃಷ್ಣಯ್ಯ ಅವರ ಶಿಷ್ಯರಾಗಿ ಸಶಕ್ತ ಯಕ್ಷವಿದ್ಯೆಯನ್ನು ಆರ್ಜಿಸಿಕೊಂಡವರು.

5ನೇ ತರಗತಿವರೆಗೆ ವಿದ್ಯಾಭ್ಯಾಸ. ಬಳಿಕ ಯಕ್ಷಗಾನ ರಂಗಕಲೆಯನ್ನು ಬದುಕಾಗಿಸಿಕೊಂಡ ರಘುರಾಮ ಮಡಿವಾಳರು ಪಾತ್ರೋಚಿತ ನೃತ್ಯಾಭಿನಯ, ಪ್ರೌಢ ರಂಗನಡೆ, ಗರಿಷ್ಠಮಟ್ಟದ ಪ್ರಸಂಗಾನುಭವದಲ್ಲಿ ಗುರುತಿಸಲ್ಪಡುವ ಕಲಾವಿದರು. ಇವರ ನಿರ್ವಹಣೆಯ ವಾಲಿ, ಜಾಂಬವ, ವೀರಮಣಿ, ಕೌಂಡ್ಲಕ, ಕಮಲಭೂಪ, ಕೌರವ, ಅರ್ಜುನ ಮೊದಲಾದ ಪಾತ್ರಗಳು ಕಲಾಭಿಮಾನಿಗಳ ಪ್ರಶಂಸೆಗೆ ಪಾತ್ರವಾಗಿವೆ.

ಕಮಲಶಿಲೆ 5, ಪೆರ್ಡೂರು 2, ಸೌಕೂರು 3, ಇಡಗುಂಜಿ 1, ಕಳವಾಡಿ 1, ಮೇಳಗಳಲ್ಲಿ ಕಲಾಸೇವೆ ಸಲ್ಲಿಸಿದ ರಘುರಾಮ ಅವರು 22 ವರ್ಷಗಳಿಂದ ಮಂದಾರ್ತಿ ಮೇಳದ ಪ್ರಧಾನಕಲಾವಿದರಾಗಿ ಕಲಾರಂಗದಲ್ಲಿ ಸಾರ್ಥಕ 34 ವರ್ಷಗಳನ್ನು ಪೂರೈಸಿ ಜನಪ್ರಿಯರಾಗಿದ್ದಾರೆ.

ಪತ್ನಿ ಬೇಬಿ, ಸುಪ್ರೀತ, ಸುಚಿತ್ರ, ಸುದರ್ಶನ, . ಸುರಾಜ್ ಮಕ್ಕಳು. ಯಕ್ಷಗಾನ ಕ್ಷೇತ್ರದಲ್ಲಿ ವ್ಯವಸ್ಥಿತ ಕಲಾಪ್ರಗತಿ, ಬೆಳವಣಿಗೆಯನ್ನು ಕಂಡ ರಘುರಾಮ ಮಡಿವಾಳರನ್ನು ದೆಹಲಿ ಕನ್ನಡ ಸಂಘ, ಬೆಂಗಳೂರು ಕನ್ನಡ ವಾರ್ತಾ ಇಲಾಖೆ, ಉಡುಪಿ ರಜಕ ಸಂಘ ಸಮ್ಮಾನಿಸಿವೆ.



**ರಮೇಶ ಆಚಾರ್ಯ ಎಂ. ಕೆ.**

*ಮಂಗಳಗಾರ್ ಮನೆ, ಅಂಚೆ: ಕಟ್ಟೆಹಕ್ಕಲು,*
*ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ*
*ದೂರವಾಣಿ : 94800 22806*

ತೆಂಕು-ಬಡಗಿನ ಸರ್ವ ಸಮರ್ಥ ಸ್ತ್ರೀವೇಷಧಾರಿಯಾಗಿ ಗುರುತಿಸಿಕೊಂಡ ಹಿರಿಯ ಕಲಾವಿದ ಎಂ. ಕೆ. ರಮೇಶ ಆಚಾರ್ಯ, ಉನ್ನತ ಪ್ರತಿಭಾವ್ಯಕ್ತಿತ್ವದಿಂದ ಸಾಂಪ್ರದಾಯಿಕ ಸೀಮೆಯಲ್ಲಿಯೇ ಪುರಾಣ ಭೂಮಿಕೆಗಳನ್ನು ರಂಗನೆಲದಲ್ಲಿ ಕಡೆದಿಡುವ ಕಲಾಕೌಶಲವನ್ನು ಹೊಂದಿದ ರಮೇಶ ಆಚಾರ್ಯರು ಈ ರಂಗ ಭೂಮಿಯ ನಿಚ್ಚಳ ನೀತಿ, ನಿಯಮಪೂರ್ಣ ಬದ್ಧತೆಯನ್ನು ಮೈಗೂಡಿಸಿ-ಕೊಂಡವರು.

1949ರ ಅಕ್ಟೋಬರ್ ಮೂವತ್ತರಂದು ಕೃಷ್ಣಯ್ಯ ಆಚಾರ್ ಮಂಗಳಗಾರ್, ರುಕ್ಮಿಣೀಯಮ್ಮ ದಂಪತಿಯ ಸುಪುತ್ರರಾಗಿ ಆಲ್ಮನೆ ಗ್ರಾಮದ ಮಂಗಳಗಾರ್ ಎಂಬಲ್ಲಿ ಹುಟ್ಟಿದ ಆಚಾರ್ಯರು ಐದನೇ ತರಗತಿಯವರೆಗೆ ಅಕ್ಷರಾಭ್ಯಾಸ ನಡೆಸಿ ತನ್ನ 11ನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಕಾಲಿರಿಸಿದರು. ತಂದೆ ಕೃಷ್ಣಯ್ಯ ಆಚಾರ್ಯರು ಶ್ರೀ ಜಗದಂಬಾ ಕೃಪಾಪೋಷಿತ ಯಕ್ಷಗಾನ ಮಂಡಳಿ-ಮಹಿಷಿ ಇದರ ಸಂಸ್ಥಾಪಕರಾಗಿದ್ದರು. ಇವರ ದೊಡ್ಡ ತಂದೆಯವರ ಮಗ, ಅಣ್ಣ ನರಸಿಂಹ ಆಚಾರರು ಶ್ರೀಯುತರ ಅನ್ಯಾದೃಶ ಕಲಾಸಕ್ತಿಗೆ ನೀರೆರೆದರು. ಕಲಾವಂತರ ಮನೆತನದಲ್ಲಿ ಹುಟ್ಟಿ ಬೆಳೆದ ಆಚಾರರಿಗೆ ಇಂತಹ ರಂಗಜೀವನ ಬಾಲ್ಯದಲ್ಲೇ ಬಳುವಳಿಯಾಯಿತು.

ಸ್ತ್ರೀಪಾತ್ರಕ್ಕೊಪ್ಪುವ ರೂಪ, ಮಧುರಕಂಠ, ಆಂಗಿಕ ಲಾಲಿತ್ಯ, ಪಗಲ್ಬ ಪಾಂಡಿತ್ಯ, ಸಶಕ್ತ ರಂಗನಡೆ, ಸುಪುಷ್ಟ ಪ್ರಸಂಗನಡೆಯನ್ನು ಹೊಂದಿದ ಆಚಾರರು ಬಹುಬೇಗನೆ ಸ್ತ್ರೀಪಾತ್ರಧಾರಿಯಾಗಿ ಖ್ಯಾತನಾಮವನ್ನು ಗಳಿಸಿದರು. ಬಡಗುತಿಟ್ಟಿನಲ್ಲಿ ಗುರು ವೀರಭದ್ರನಾಯಕ್‌ರಿಂದಲೂ, ತೆಂಕುತಿಟ್ಟಿನಲ್ಲಿ ಕುರಿಯ ವಿಠಲ ಶಾಸ್ತ್ರಿಗಳಿಂದಲೂ ಯಕ್ಷವಿದ್ಯೆ ಬೋಧಿಸಿಕೊಂಡ ಆಚಾರರಿಗೆ ಬಲಿಷ್ಠ ಗುರುಬಲ ದೊರಕುವಂತಾಯಿತು.

ಮಂದಾರ್ತಿ 5, ಧರ್ಮಸ್ಥಳ 3, ಸುರತ್ಕಲ್ 24, ಸಾಲಿಗ್ರಾಮ 3, ಸೌಕೂರು 4, ಪೆರ್ಡೂರು 3, ಮಂಗಳಾದೇವಿ 3, ಹೀಗೆ ವೃತ್ತಿರಂಗದಲ್ಲಿ ಸರಿಸುಮಾರು 45 ವರ್ಷ ತಿರುಗಾಟ ಕಂಡವರು. ತಂದೆಯವರ ಜಗದಂಬಾ ಮೇಳ ಮಹಿಷಿ ಕೃಪಾ- ಪೋಷಿತ ಯಕ್ಷಗಾನ ಮಂಡಳಿಯಲ್ಲೂ ದುಡಿದ ಶ್ರೀಯುತರು ಪ್ರಸ್ತುತ

ಮಂಗಳಾದೇವಿ ಮೇಳದ ಕಲಾವಿದರಾಗಿ ಕಲಾಸೇವೆ ಸಲ್ಲಿಸುತ್ತಿದ್ದಾರೆ. ಎಂ.ಕೆ.ಆರ್ ಅವರ ಚಂದ್ರಮತಿ, ದೌಪದಿ, ರುಕ್ಕಿಣಿ, ಶಾಂತಲೆ, ಸೀತೆ, ಮೇನಕೆ, ಸೈರೇಂದ್ರಿ ಮೊದಲಾದ ಸ್ತ್ರೀಪಾತ್ರಗಳು ಸಹೃದಯ ಕಲಾರಸಿಕರ ಹಾರ್ದಿಕ ಶ್ಲಾಘನೆಗೆ ಪಾತ್ರವಾಗಿವೆ.

ಉತ್ತಮ ಅರ್ಥಧಾರಿಯಾಗಿಯೂ, ಪ್ರಸಂಗಕರ್ತರಾಗಿಯೂ ಗುರುತಿಸಿ-ಕೊಂಡ ಆಚಾರರು ಅಪಾರ ರಂಗಾನುಭವದ ಕಲಾ ಖಜಾನೆಯಾಗಿ ಗೋಚ ರಿಸುವವರು. ಮಡದಿ ವಿಶಾಲಾಕ್ಷಿ, ಆಶಾಲತಾ, ಮನೋಜ, ತನುಜ ಮಕ್ಕಳು. ಪ್ರತಿಭಾನ್ವಿತ ಕಲಾವಿದ ಎಂ. ಕೆ. ರಮೇಶ ಆಚಾರ್ಯರಿಗೆ ಪಟ್ಲಾಜೆ ಸ್ಮಾರಕ ಪ್ರಶಸ್ತಿ, ಯಕ್ಷಜ್ಯೋತಿ ಪ್ರಶಸ್ತಿ, ಶೇಣಿ ಗೋಪಾಲಕೃಷ್ಣ ಭಟ್ ವಿಶ್ವಸ್ಥಮಂಡಳಿ ಸಂಸ್ಮರಣ ಪ್ರಶಸ್ತಿ, ವಿಠಲಶಾಸ್ತ್ರಿ ಪ್ರಶಸ್ತಿ ಪ್ರತಿಷ್ಠಾನದ ಪ್ರಶಸ್ತಿ ದೊರಕಿರುತ್ತದೆ. ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿಯೂ ಶ್ರೀಯುತರ ಮುಡಿಗೇರಿದೆ.



ರಮೇಶ್, ಬೇಲ್ತೂರು

'ಸತ್ಯ ಕುಟೀರ', ಅಂಚೆ : ಕಟ್‌ಬೇಲ್ತೂರು,
ಕುಂದಾಪುರ ತಾಲೂಕು
ದೂರವಾಣಿ : 93414 18162

ಬಡ ಗುತಿಟ್ಟು ಯಕ್ಷಬಾಂದಳದ ಸಿಡಿಲುಮರಿಯಂತೆ ಕಂಗೊಳಿಸುವ ಹಿರಿಯ ಕಲಾವಿದ ಬೇಲ್ತೂರು ರಮೇಶ್ ಪರಂಪರೆಯ ರಂಗಸ್ಥಳದಲ್ಲಿ ವಿಷ್ಣುಲಿಂಗದಂತೆ ಮೆರೆಯುವ ಪ್ರಬುದ್ಧ ಪುಂಡುವೇಷಧಾರಿ.

ಕುಂದಾಪುರ ತಾಲೂಕಿನ ಕಟ್ ಬೇಲ್ತೂರು ಎಂಬ ಪುಟ್ಟ ಹಳ್ಳಿಯಲ್ಲಿ ರಾಮ ನಾಯ್ಕ-ರುಕ್ಕು ದಂಪತಿಯ ಸುಪುತ್ರರಾಗಿ ಜನಿಸಿದ ರಮೇಶ್ ಇದೀಗ 59ರ ಹರೆಯದಲ್ಲೂ ಕ್ರಿಯಾಶಿಲರಾಗಿ ವೃತ್ತಿರಂಗಭೂಮಿಯಲ್ಲಿದ್ದು ಯಕ್ಷಕಲೆಯನ್ನೇ ಬದುಕಿನ ಬಂಡವಾಳವಾಗಿರಿಸಿಕೊಂಡ ಶಿಷ್ಟ ಕಲಾವಿದರು.

ಬೇಲ್ತೂರು ರಮೇಶ ಅವರ ವಿದ್ಯಾರ್ಹತೆ 5ನೇ ತರಗತಿ ಮಾತ್ರ. ಬೇಲೂರು ಬಣ್ಣದ ವೇಷಧಾರಿ ರಾಮ ಬಳೆಗಾರರ ಪ್ರೇರಣೆಯಂತೆ ತನ್ನ 15ರ ಹರೆಯದಲ್ಲೇ ಮುಖಕ್ಕೆ ಬಣ್ಣ ಹಚ್ಚಿದ ಇವರು ಮತ್ತೆ ಹಿಂದಿರುಗಿ ಕಂಡದ್ದಿಲ್ಲ. ದಶಾವತಾರಿ ಗುರುವೀರಭದ್ರನಾಯಕ್, ಶಿರಿಯಾರ ಮಂಜುನಾಯ್ಕ, ಹೆರಂಜಾಲು ವೆಂಕಟರಮಣ ಗಾಣಿಗ ಅವರ

ಸಶಕ್ತ ಗುರು ಬಲವನ್ನು ಪಡೆದ ಬೇಲೂರು ಅವರು ಡಾ. ಕೋಟ ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಉನ್ನತ ರಂಗ ಪ್ರಾವೀಣ್ಯತೆ ಪಡೆದವರು.

ಮಾರಣಕಟ್ಟೆ 7, ಹಾಲಾಡಿ 5, ಸಾಲಿಗ್ರಾಮ 10, ಕಳವಾಡಿ 4, ಬಗ್ವಾಡಿ 5, ಮಡಾಮಕ್ಕಿ 7, ಮಂದಾರ್ತಿ 3, ಅಮೃತೇಶ್ವರಿ 1, ಆಜಿ-ಶನೀಶ್ವರ ಮೇಳ 2, ಹೀಗೆ 44ವರ್ಷಗಳ ಸುದೀರ್ಘ ರಂಗ ವ್ಯವಸಾಯದಲ್ಲಿ ಸಾರ್ಥಕ ಕೀರ್ತಿಗಳಿಸಿದ ರಮೇಶ್ ಪ್ರಸ್ತುತ ಆಜಿ ಮೇಳದ ಪ್ರಧಾನ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಶ್ರೀಯುತರ ಆಳಂಗ, ಎತ್ತರದ ಶ್ರುತಿನಿಷ್ಠ ಸ್ವರ ತ್ರಾಣ, ಖಚಿತ ಲಯಗಾರಿಕೆಯಲ್ಲಿ ಅಭಿವ್ಯಕ್ತವಾಗುವ ಚುರುಕಿನ ನೃತ್ಯಗತಿ, ಪ್ರೌಢ ರಂಗ ಪರಿಣತಿ ಮೂರನೇ ವೇಷಕ್ಕೆ ಸಮುಚಿತವಾಗುತ್ತದೆ. ಅವರು ನಿರ್ವಹಿಸುವ ಬಭ್ರುವಾಹನ, ಅಭಿಮನ್ಯು, ಭೂಮಿಕೆಗಳಿಗೆ ಅವರಿಗೆ ಅವರೇ ಸರಿಸಾಟಿ, ರಮೇಶ್ ಪುಷ್ಕಳ, ಶ್ರೀಕೃಷ್ಣ, ದೇವವೃತ, ಧ್ರುವ, ಮೊದಲಾದ ಅವರ ಪುರಾಣ ಅನುಭವವಂತೂ ಸಾಮೃದ್ಧಿಕ. ಇವರ ಅನೇಕ ಶಿಷ್ಯರು ರಂಗಭೂಮಿಯಲ್ಲಿ ವ್ಯವಸಾಯ ನಿರತರು. ಸಂಪ್ರದಾಯಬದ್ಧ ಬೇಲ್ಲೂರು ರಮೇಶ್ ಅವರು ಭಾರತದಾದ್ಯಂತವಲ್ಲದೆ ದೂರದ ಅಮೆರಿಕಾ, ಜರ್ಮನಿ, ಹಾಂಕಾಂಗ್, ಇಸ್ರೇಲ್, ಕೆನಡಾ ಮೊದಲಾದ ವಿದೇಶಗಳಲ್ಲೂ ಕಲಾಪ್ರತಿಭೆ ಮೆರೆದು ಕಲಾರಸಿಕರ ಪ್ರೀತಿಗೆ ಪಾತ್ರರಾಗಿದ್ದಾರೆ. ಧರ್ಮಪತ್ನಿ ಮುತ್ತು, ನಾಗರತ್ನಾ, ಪ್ರೇಮ, ಪ್ರಮೋದಿನಿ ಮಕ್ಕಳು.

ಶ್ರೀಯುತರಿಗೆ ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಸಂಮಾನ, ಹಿರಿಯಡ್ಕ, ಮಣಿಪುರ, ಬೇಲೂರು ಸುಳ್ಯ ಮೊದಲಾದ ಕಡೆಗಳಲ್ಲಿ ಗೌರವ ಪುರಸ್ಕಾರ ದೊರಕಿರುತ್ತದೆ.



**ರಮೇಶ ಶಂಕರ ಭಂಡಾರಿ, ಕಡತೋಕ**

*ಅಂಚೆ : ಕಡತೋಕ, ಹೊನ್ನಾವರ ತಾಲೂಕು, (ಉ. ಕ)*

ಬಡಗುತಿಟ್ಟು ಯಕ್ಷಗಾನರಂಗಭೂಮಿಯಲ್ಲಿ ಶಾಸ್ತ್ರಸಮನ್ವಿತ ಮದ್ದಳೆವಾದನ ವಿದ್ಯೆಯನ್ನು ಗುರುಮುಖೇನ ಶ್ರದ್ಧೆ, ಸಾಧನೆಯಿಂದ ಸಿದ್ಧಿಸಿಕೊಂಡ ಪ್ರಬುದ್ಧ ಮದ್ದಳೆವಾದಕ ಕಡತೋಕ ರಮೇಶ ಶಂಕರ ಭಂಡಾರಿ.

ಹೊನ್ನಾವರ ತಾಲೂಕಿನ ಕಡತೋಕ ಎಂಬಲ್ಲಿ ಶಂಕರ ಭಂಡಾರಿ ಪಾರ್ವತಿ ದಂಪತಿಯ ಸುಪುತ್ರರಾಗಿ ಜನಿಸಿದ ರಮೇಶ ಭಂಡಾರಿಯವರೆಗೆ ಪ್ರಸ್ತುತ ನಲವತ್ತರ ಹರಯ.

ಎಂಟನೇ ತರಗತಿಯವರೆಗಿನ ಶೈಕ್ಷಣಿಕ ಸಂಸ್ಕಾರ ಪಡೆದ ಶ್ರೀಯುತರು ಉಡುಪಿ ಯಕ್ಷಗಾನ ಕೇಂದ್ರಕ್ಕೆ ಸೇರ್ಪಡೆಯಾಗಿ ಗುರು ಮಹಾಬಲ ಕಾರಂತ, ವಿದ್ವಾನ್ ಗಣಪತಿ ಭಟ್ಟರ ಗುರುತನದಲ್ಲಿ ಸಮರ್ಪಕ ಯಕ್ಷ ಶಿಕ್ಷಣ ಸಂಪನ್ನರಾದವರು. ರಮೇಶ ಭಂಡಾರಿ ಮದ್ದಳೆಯನ್ನು ತೊಡೆಯೇರಿಸಿ ಕುಳಿತರೆ ಮೂಕಕೋಗಿಲೆಗೆ ಬಾಯಿ ಬಂದ ದಿವ್ಯಾನುಭವ. ಮದ್ದಳೆಯ ಎಡ-ಬಲದಲ್ಲಿ ಅವರ ಬೆರಳುಗಳ ಕುಣಿತದಿಂದ ಹೊರಹೊಮ್ಮುವ ಸುಮಧುರ ನಾದಲಹರಿ ರಸಿಕ ಶ್ರಾವಕರನ್ನು ತನ್ಮಯರನ್ನಾಗಿಸಿ ಬಿಡುತ್ತದೆ.

ನವಿರಾದ ಬೆರಳುಗಾರಿಕೆ, ಸಶಕ್ತ ಲಯಗಾರಿಕೆ, ಕಲಾವಿದರ ಹೆಜ್ಜೆ-ಗೆಜ್ಜೆಗೆ ಪೂರಕವಾದ ನುಡಿಸಾಣಿಕೆ, ಗಾನಪೂರಕವಾದ ಹಿಮ್ಮೇಳ ಹೊಂದಾಣಿಕೆ.... ಇವರ ವಾದನಕ್ರಮದಲ್ಲಿ ಗುರುತಿಸಬಹುದಾಗಿದೆ.

ಸೌಕೂರು 4, ಹಾಲಾಡಿ 1, ಮಂದಾರ್ತಿ 20 ಹೀಗೆ ಯಕ್ಷಲೋಕದಲ್ಲಿ ಬೆಳ್ಳಿಹಬ್ಬದ ತಿರುಗಾಟದಲ್ಲಿ ಯಶಸ್ಸು ಕಂಡವರು ಭಂಡಾರಿಯವರು. ಪ್ರತಿಭಾನ್ವಿತ ಮದ್ದಳೆಗಾರರಾದ ಅವರಿಗೆ ಚಂಡೆವಾದನದ ಪರಿಣಿತಿಯೂ ಇದೆ. ಮಾತ್ರವಲ್ಲ ಭಾಗವತಿಕೆಯೂ ತಿಳಿದಿದೆ. ವೃತ್ತಿಬದುಕಿನ ಬಿಡುವಿನ ವೇಳೆಯಲ್ಲಿ ಮಂಗಲವಾದ್ಯ ಕಲಾವಿದರಾಗಿಯೂ ಅವರು ಭಾಗವಹಿಸುತ್ತಾರೆ.

ಮಡದಿ ಉಷಾ, ಆಶಿಕಾ, ಅಮೂಲ್ಯ ಮಕ್ಕಳು. ಶ್ರೀಯುತರ ಎತ್ತರದ ಪ್ರತಿಭಾ ಪ್ರಭಾವಳಿಗೆ 'ಕೋಟ ಮಹಾಬಲ ಕಾರಂತ' ಪ್ರಶಸ್ತಿಯೂ ದೊರಕಿರುತ್ತದೆ.



**ರವಿಕುಮಾರ್, ಸೂರಾಲು**

*ಅಂಚೆ : ಕೊಕ್ಕರ್ಣೆ, ಉಡುಪಿ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 97416 39093*

ಪರಿಶುದ್ಧ ರಾಗ ಪರಿಣತಿ, ಕೋಮಲ ಶಾರೀರ, ಸಶಕ್ತ ರಂಗತಂತ್ರ, ಹಾಗೂ ಸಮರ್ಪಕ ಪೌರಾಣಿಕ ಜ್ಞಾನದೊಂದಿಗೆ ಗುರುತಿಸಿಕೊಂಡ ಬಡಗಿನ ಯುವ ಭಾಗವತ ಸೂರಾಲು ರವಿಕುಮಾರ್.

ಉಡುಪಿ ತಾಲೂಕಿನ ಇತಿಹಾಸ ಪ್ರಸಿದ್ಧ ಸುರಾಲು ಎಂಬಲ್ಲಿ ಗುಂಡು ದೇವಾಡಿಗ - ಕಮಲಾ ದಂಪತಿಯ ಸುಪುತ್ರರಾಗಿ 1972ರಲ್ಲಿ ಜನಿಸಿದ ರವಿ ಕುಮಾರ್ 8ನೇ ತರಗತಿ ಪೂರೈಸಿ, ತನ್ನ 14ನೇ ವಯಸ್ಸಿನಲ್ಲಿ ಯಕ್ಷ ಬದುಕಿಗೆ ಅಂಟಿಕೊಂಡರು. ಎಳ ವಯಲ್ಲೇ ಯಕ್ಷಗಾನ ಕಲಾಸಕ್ತಿ ಮೈಗೂಡಿಸಿಕೊಂಡಿದ್ದ ಇವರಿಗೆ ತಾಯಿ ಹಾಗೂ ಮಾವನ ಪ್ರೋತ್ಸಾಹ ನೆರವು ನೀಡಿತು. ಪೇತ್ರಿ. ಕೃಷ್ಣರಾಯ ಪ್ರಭು ಅವರಲ್ಲಿ ಆರಂಭಿಕ ಯಕ್ಷ ಶಿಕ್ಷಣ ಪಡೆದ ರವಿಕುಮಾರ್, ಕೆ. ಪಿ. ಹೆಗಡೆ ಅವರಲ್ಲಿ ವ್ಯವಸ್ಥಿತ ಭಾಗವತಿಕೆ ಶಿಕ್ಷಣ ಪಡೆದರು.

ಅಮೃತೇಶ್ವರಿ, ಸಾಲಿಗ್ರಾಮ, ಕುಮಟಾ, ಮಂದಾರ್ತಿ, ಮಾರಣಕಟ್ಟೆ, ಬಗ್ವಾಡಿ, ಕಮಲಶಿಲೆ, ಸೌಕೂರು ಮೇಳಗಳಲ್ಲಿ ಕಲಾಸೇವೆಗೈದ ರವಿಕುಮಾರರು ಸಾರ್ಥಕ ರಂಗಜೀವನದಲ್ಲಿ ರಜತವರ್ಷಗಳನ್ನು ಕಳೆದಿದ್ದಾರೆ. ಪ್ರಸ್ತುತ ಶ್ರೀಯುತರು ಸೌಕೂರು ಮೇಳದ ಪ್ರಧಾನ ಭಾಗವತರಾಗಿ ದುಡಿಯುತ್ತಿದ್ದಾರೆ.

ವಾದ್ಯ ಸಂಗೀತದ ಕಲಾವಿದರು ಇವರಾದುದರಿಂದ ಯಕ್ಷಗಾಯನದ ರಾಗ ನಿರೂಪಣೆಯಲ್ಲಿ ಪರಿಶುದ್ಧತೆ ಪ್ರಕಟಿಸುವ ರವಿಕುಮಾರರ ಸುಸ್ವರದಿಂಪಿಗೆ ಯಕ್ಷ ಕಲಾ ರಸಿಕರು ಮನಸ್ವೀ ಮಣಿಯುತ್ತಾರೆ. ಇವರ ಧರ್ಮ ಪತ್ನಿ ಸುಶೀಲಾ, ಶಶಾಂಕ ಹಾಗೂ ಶರಣ್ಯ ಇವರ ಉಭಯ ಮಕ್ಕಳು.

ಯಕ್ಷಗಾನ ನೃತ್ಯ ಕಲೆಯನ್ನು ಬಲ್ಲ ಭಾಗವತರಿವರು. ಶ್ರೀಯುತರನ್ನು ಅನೇಕ ಸಂಘ- ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



**ರಾಕೇಶ ಮಲ್ಯ, ಹಳ್ಳಾಡಿ**

*ಅಂಚೆ : ಹಳ್ಳಾಡಿ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*

ಶ್ರವಣಮಂಜುಳಕರ, ರಂಗಸ್ಥಳ ಝೇಂಕಾರದ ನುಡಿತ-ಭಣಿತಗಳ ಚಂಡೆವಾದನದಲ್ಲಿ ಸಿದ್ಧಿ- ಪ್ರಸಿದ್ಧಿಯನ್ನು ಕಂಡ ಯುವ ಚಂಡೆಗಾರ ಹಳ್ಳಾಡಿ ರಾಕೇಶ ಮಲ್ಯ

ಉಡುಪಿ ಜಿಲ್ಲೆಯ ಹಳ್ಳಾಡಿ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ರಾಕೇಶ ಮಲ್ಯರು, ಹಳ್ಳಾಡಿ ಸುಬ್ರಾಯ ಮಲ್ಯ, ಶೋಭಾ ಮಲ್ಯ ದಂಪತಿಯ ಸುಪುತ್ರರಾಗಿ 18-02-1970ರಲ್ಲಿ ಜನಿಸಿದರು.

ಎಸ್.ಎಸ್.ಎಲ್.ಸಿ. ಪ್ರೌಢಶಿಕ್ಷಣದ ಬಳಿಕ ಯಕ್ಷಗಾನರಂಗಕ್ಕೆ ಪಾದಾರ್ಪಣೆ ಮಾಡಿದ ರಾಕೇಶ ಮಲ್ಯರಿಗೆ ಚಂಡೆ ವಾದನ ಕಲೆ ರಕ್ತಗತವಾಗಿ ಪ್ರಾಪ್ತಿಯಾಯಿತು. ಇವರ ತಂದೆ ಹಳ್ಳಾಡಿ ಸುಬ್ರಾಯ ಮಲ್ಯರು ಹವ್ಯಾಸೀ ಸಂಘ ಸಂಸ್ಥೆಗಳ ಶ್ರೇಷ್ಠ ಯಕ್ಷಗಾನಗುರುಗಳಾದುದರಿಂದ ರಾಕೇಶರಿಗೆ ವಾದನ ಕಲೆ, ಯಕ್ಷಗಾನ ಬಾಂಧವ್ಯ, ಅಭಿಜಾತವಾಗಿ ಒಲಿಯಿತು. 16ರ ಹರೆಯದಲ್ಲೇ ಕಲಾಪ್ರಪಂಚ ಪ್ರವೇಶಿಸಿದ ರಾಕೇಶರು ಶಾಲಾದಿನಗಳಲ್ಲೇ ಚಂಡೆವಾದನ ಕಲೆಯನ್ನು ಸಿದ್ಧಿಸಿಕೊಂಡವರು. ಇವರಿಗೆ ತಂದೆಯವರೇ ಗುರುಗಳು.

ಪದ್ಯ ಸಾಹಿತ್ಯ ಭ್ರಷ್ಠವಾಗದಂತೆ ನುಣುಪು ನವಿರಾದ ನುಡಿಸಾಣಿಕೆಯನ್ನು ಕರಗತ ಮಾಡಿಕೊಂಡ ರಾಕೇಶ ಮಲ್ಯರು ಒಳ್ಳೆಯ ಅನುಭವ ಪೂರ್ಣ - ಕಲಾವಿದ. ಪ್ರತೀ ಪ್ರಸಂಗಗಳ ನಡೆಯೂ ಅವರಿಗೆ ಲೀಲಾಜಾಲ. ಪದ್ಯಗಾರಿಕೆಯೂ ಅವರಿಗೆ ತಿಳಿದಿರುವುದರಿಂದ ಚಂಡೆಯ ನುಡಿಗಾರಿಕೆಯೂ ಸುಸಂಬದ್ಧ, ಸಾಂಗ, ಸುಶ್ರಾವ್ಯ.

ಮಾರಿಕಾಂಬಾ-ಶಿರಸಿ 7, ಮಂದಾರ್ತಿ 3, ಸೌಕೂರು 10, ಪೆರ್ಡೂರು 4, ಮೇಳಗಳಲ್ಲಿ ಸುಮಾರು 24 ವರ್ಷ ಕಲಾಕೃಷಿ ನಡೆಸಿದ ಶ್ರೀಯುತರು ಹಲವು ಚಂಡೆಗಾರ ಶಿಷ್ಯರನ್ನು ರೂಪಿಸಿದ್ದಾರೆ. ಪತ್ನಿ ರಶ್ಮಿ ಮಲ್ಯ, ಸುರಕ್ಷಾ, ಶ್ರೀನಿಧಿ ಮಕ್ಕಳು. ರಾಕೇಶ ಮಲ್ಯರು ಪ್ರಸ್ತುತ ಪೆರ್ಡೂರು ಮೇಳದ ಪ್ರಧಾನ ಚಂಡೆಗಾರರು.

ಶ್ರೀಯುತರನ್ನು ಹಲವು ಸಂಘ-ಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ. ರಾಜ್ಯ, ಹೊರರಾಜ್ಯಗಳ ಹಲವಾರು ಸಾಂಸ್ಕೃತಿಕ ಸಂಘಟನೆಗಳಿಂದಲೂ ರಾಕೇಶ ಮಲ್ಯರು ಸಂಮಾನಿತರಾಗಿದ್ದಾರೆ.




ರಾಘವೇಂದ್ರ ಮಯ್ಯ ಜಿ.

*76–ಹಾಲಾಡಿ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ,*
*ದೂರವಾಣಿ 99453 77281*


ತುಂಬುಗೊರಳಿನ ಭಾವನಿರ್ಭರ, ರಸಮಧುರ, ಶ್ರವಣಮಂಜುಳ ಯಕ್ಷಗಾಯನದಲ್ಲಿ ಬಡಗುತಿಟ್ಟಿನ ಯಕ್ಷಲೋಕದಲ್ಲಿ ಜನಪ್ರಿಯರಾದ ಭಾಗವತ ಜಿ. ರಾಘವೇಂದ್ರಮಯ್ಯ.

ಕುಂದಾಪುರ ತಾಲೂಕಿನ ಹಾಲಾಡಿ ಎಂಬಲ್ಲಿ 15-10-1968ರಲ್ಲಿ ನಾಗಪ್ಪ ಮಯ್ಯ – ಸರಸ್ವತಿ ಮಯ್ಯ ದಂಪತಿಯ ಸುಪುತ್ರರಾಗಿ ಜನಿಸಿದ ರಾಘವೇಂದ್ರ ಮಯ್ಯ ಅವರು 10ನೇ ತರಗತಿಯವರೆಗೆ ಶಿಕ್ಷಣಾಭ್ಯಾಸ ಪೂರೈಸಿ, ತನ್ನ 16ರ ಹರಯದಲ್ಲೇ ಯಕ್ಷಬದುಕಿಗೆ ಓಂಕಾರ ಹಾಡಿದವರು.

ಗಾನ ಗಾರುಡಿಗ ಕಾಳಿಂಗ ನಾವಡರ ಭಾಗವತಿಕೆಯೇ ರಾಘವೇಂದ್ರ ಮಯ್ಯ ಅವರಿಗೆ ಯಕ್ಷಗಾನ ಕಲಾ ಆಕರ್ಷಣೆಗೆ ಇಂಬು ನೀಡಿತು. ಪ್ರೇರಣೆ-ಸ್ಫೂರ್ತಿ ಆಯಿತು. ಪ್ರಾಚಾರ ನಾರ್ಣಪ್ಪ ಉಪ್ಪರರಲ್ಲಿ ತಾಳದೀಕ್ಷೆ ಪಡೆದ ಮಯ್ಯ ಅವರಿಗೆ ಕೆ. ಪಿ. ಹೆಗಡೆಯವರ ಗುರುಬಲವೂ ದೊರಕಿ ಸಶಕ್ತ ಭಾಗವತಿಕೆಗೆ ಸಹಕಾರಿ-ಯಾಯಿತು.

ಮಧುರಕಂಠದ ಮಯ್ಯ ಅವರ ಯಕ್ಷಗಾಯನದಲ್ಲಿ ಕಲಾಬದುಕಿನ ಸ್ಫೂರ್ತಿಯ ಚಿಲುಮೆ ಕಾಳಿಂಗನಾವಡರ ಕಂಠಸಿರಿಯ ಭಾವಪೂರ್ಣ ಇಳಿತ ಮಿಳಿತವಾಗುವುದನ್ನು ಗಮನಿಸಬಹುದಾಗಿದೆ. ರಂಗ ತುಂಬುವ, ನಟನ, ಕಲಾಭಿವ್ಯಕ್ತಿಗೆ ಆನುಕೂಲ್ಯವಾಗುವ ಅವರ ಭಾಗವತಿಕೆ ಎಂಥವರನ್ನು ಸೆರೆ ಹಿಡಿಯಬಲ್ಲುದು. ಸ್ಫುಟವಾದ, ಪರಿಶುದ್ಧವಾದ ರಾಗಜ್ಞಾನ, ಖಚಿತ ತಾಳ- ಲಯಗಾರಿಕೆ, ಸಮೃದ್ಧ ಪ್ರಸಂಗಾನುಭವ, ಎಲ್ಲಕ್ಕೂ ಮಿಗಿಲಾಗಿ ಅವರು ಸಾಧಿಸಿದ ರಂಗತಾಂತ್ರಿಕತೆ ರಂಗಸ್ಥಳದಲ್ಲಿ ಎದ್ದು ಕಾಣುತ್ತದೆ.

ಪುರಾಣ ಪ್ರಸಂಗಗಳ ಆಳ ಅನುಭವವನ್ನು ಹೊಂದಿದ, ಸಮಕಾಲೀನ ರಂಗಭೂಮಿಯ ನವೀನ ಪ್ರಸಂಗಗಳಿಗೆ ಅನಿವಾರವೆನಿಸುವ ಭಾಗವತ ಮಯ್ಯ ಅವರು ಅತ್ಯಲ್ಪ ಕಾಲದಲ್ಲೇ ತಾರಾಮೌಲ್ಯ ಸಿದ್ಧಿಸಿಕೊಂಡವರು. ದೂರದರ್ಶನ, ಆಕಾಶವಾಣಿಯ ಕಲಾವಿದರ ಆಗಿರುವ ಮಯ್ಯ ಚಲನಚಿತ್ರನಟನಾಗಿಯೂ ಅನೇಕ ಸಿನೇಮಾಗಳಲ್ಲಿ ಪಾತ್ರನಿರ್ವಹಿಸಿದ್ದಾರೆ. ಯಕ್ಷಗಾನ, 'ಹಾಸ್ಯಾಯಣ' ಆಡಿಯೋ ವೀಡಿಯೋಗಳ ಮೂಲಕ ಜನಪ್ರಿಯತೆಯ ತುತ್ತತುದಿಗೇರಿದ ಮಯ್ಯ, ಕುಂದಗನ್ನಡ ಸೊಗಸನ್ನು ತನ್ನ ಭಾಗವತಿಕೆಯ 'ಹಾಸ್ಯಾಯಣ' ಪ್ರಸಂಗಗಳಲ್ಲಿ ಗೊತ್ತುಗೊಳಿಸಿ ಗೆಲುವು ಕಂಡವರು.

ಅಮೃತೇಶ್ವರಿ, ಹಾಲಾಡಿ ಪೆರ್ಡೂರು, ಸೌಕೂರು, ಸಾಲಿಗ್ರಾಮ, ಮೇಳಗಳಲ್ಲಿ ಸೇವೆ ಸಲ್ಲಿಸಿದ ಮಯ್ಯ ಅವರ ಕಲಾಬದುಕು 26 ವರ್ಷ ಕಂಡಿದೆ. ಪತ್ನಿ ಪಲ್ಲವಿ, ಪುತ್ರ ದೀ ಷಣ್ ಕುಮಾರ್‌ರನ್ನೊಳಗೊಂಡ ಪುಟ್ಟ ಸಂಸಾರ ಅವರದು. ಅಪಾರ ಅಭಿಮಾನಿಬಳಗವನ್ನು ಹೊಂದಿದ ರಾಘವೇಂದ್ರ ಮಯ್ಯ ಅವರು ರಾಜ್ಯ, ಹೊರರಾಜ್ಯಗಳಲ್ಲಿ ಸಮ್ಮಾನಿತರಾಗಿದ್ದಾರೆ.



**ರಾಜೀವ ಶೆಟ್ಟಿ, ಹೊಸಂಗಡಿ**

*ಅಂಚೆ : ಹೊಸಂಗಡಿ, ಬಾಗಿಮನೆ,*
*ಸುಮಾರಾಜ ಹೌಸ್, ಕುಂದಾಪುರ ತಾಲೂಕು 576 282*
*ದೂರವಾಣಿ : 99727 65523*

ಹೆಂಗಳೆಯರನ್ನೂ ನಾಚಿಸಬಲ್ಲ ಆಕರ್ಷಕ ಮೈಮಾಟ, ಬಾಗು-ಬಳುಕು, ಮಧುರ ಕಂಠಸಿರಿಯಿಂದ ಮನಮೋಹಕ ಸ್ತ್ರೀವೇಷಧಾರಿಯಾಗಿ ಸಾರ್ಥಕ ಹೆಸರು ಗಳಿಸಿದ ಪ್ರತಿಭಾವಂತ ಕಲಾವಿದ ಹೊಸಂಗಡಿ ರಾಜೀವ ಶೆಟ್ಟಿ.

ಕುಂದಾಪುರ ತಾಲೂಕಿನ ಹಳ್ಳಿ ಹೊಳೆ-ವಾಟೆ ಬಚ್ಚಲು ಎಂಬ ಗ್ರಾಮೀಣ ಪ್ರದೇಶದಲ್ಲಿ 19-5- 1961ರಲ್ಲಿ ಕರಿಯಣ್ಣ ಶೆಟ್ಟಿ-ಶೇಷಮ್ಮ ಶೆಡ್ತಿ ದಂಪತಿಯ ಪುತ್ರನಾಗಿ ಜನಿಸಿದ ರಾಜೀವ ಶೆಟ್ಟರು ಐದನೇ ತರಗತಿಗೆ ಶರಣು ಹೊಡೆದು ತನ್ನ 15ರ ಹರೆಯದಲ್ಲೇ ಬಣ್ಣದ ಬದುಕು ಕಂಡರು.

ಪರಿಸರದ ಯಕ್ಷಗಾನ ಬಯಲಾಟಗಳೇ ಇವರಿಗೆ ಕಲಾ ಆಕರ್ಷಣೆಗೆ ಇಂಬು ನೀಡಿದವು. ನಾರ್ಣಪ್ಪ ಉಪ್ಪೂರ, ಕೋಟ ವೈಕುಂಠ ಅವರಶಿಷ್ಯನಾದ ರಾಜೀವ ಶೆಟ್ಟರು ಪ್ರಸ್ತುತ ಐವತ್ತು ದಾಟಿದರೂ ಸ್ತ್ರೀ ಸಹಜವಾದ ಎಂದಿನ ರೂಪಸಿರಿ, ಕಂಠಸಿರಿಯನ್ನು ಉಳುಹಿಕೊಂಡಿರುವುದು ವಿಶೇಷವೆನಿಸುತ್ತದೆ.

ಕಮಲಶಿಲೆ 1, ಪೆರ್ಡೂರು 1, ಅಮೃತೇಶ್ವರಿ 3, ಸೌಕೂರು 1, ಸಾಲಿಗ್ರಾಮ 7, ಬಚ್ಚಗಾರು, ಮಂದಾರ್ತಿ, ಮೇಳಗಳಲ್ಲಿ ಸುಮಾರು 35ವರುಷಗಳ ರಂಗವ್ಯವಸಾಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಶ್ರೀಯುತರು ಮಂದಾರ್ತಿ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಶ್ರೀಯುತರ ನೃತ್ಯಾಭಿನಯದ ಲಾಲಿತ್ಯಪೂರ್ಣತೆ, ಮಾಧುರ ಸ್ವರ ಭೇದಕ ಮಾತುಗಾರಿಕೆ ಸ್ತ್ರೀ ಸಹಜ ಕಲಾಭಿವ್ಯಕ್ತಿಗೆ ಪುಷ್ಠಿ ನೀಡುತ್ತದೆ. ಎಲ್ಲಾ ಗುಣಧರ್ಮದ ಸ್ತ್ರೀ ಮಿಕೆಗಳ ಇವರು ನಿರ್ವಹಿಸುವವರಾದರೂ ಶೃಂಗಾರ, ಸೌಮ್ಯ, ಸ್ತ್ರೀವೇಷಗಳಲ್ಲಿ ಇವರು ಹೆಚ್ಚು ಗಮನೀಯವಾಗುತ್ತಾರೆ.

ಶ್ರೀಯುತರ ಪ್ರಭಾವತಿ, ಸುಗರ್ಧೆ, ಚಿತ್ರಾಂಗದೆ, ಕೈಕೇಯಿ, ಆಲೋಲಿಕೆ, ದೌಪದಿ, ರುಕ್ಕಿಣಿ, ಯೋಜನಗಂಧಿ, ಸುಭದ್ರೆ, ಶಕುಂತಲೆ ಮೊದಲಾದ ಪಾತ್ರಗಳು ಕಲಾಪ್ರೇಮಿಗಳ ಮನಸೂರೆಗೊಂಡಿವೆ. ಕುಸುಮಾ ಆರ್. ಶೆಟ್ಟಿ, ಇವರ ಸಹಧರ್ಮಿಣಿಯಾಗಿದ್ದಾರೆ. ಹರೀಶ್, ಗಣೇಶ್, ಅನುಸೂಯಾ ಇವರ ಮೂವರು ಮಕ್ಕಳು. ಶ್ರೀಯುತರನ್ನು ಹಲವು ಸಂಘ ಸಂಸ್ಥೆಗಳು ಸಂಮಾನಿಸಿವೆ.



ರಾಧಾಕೃಷ್ಣ ನಾಯ್ಕ, ಚೇರ್ಕಾಡಿ

S/o ಗೋವಿಂದನಾಯ್ಕ, 'ಶ್ರೀದೇವಿ ಕೃಪಾ',
ಚೇರ್ಕಾಡಿ ಬಾಳ್ಕಟ್ಟು
ಅಂಚೆ ಪೇತ್ರಿ, ಉಡುಪಿ ಜಿಲ್ಲೆ,
ದೂರವಾಣಿ 0820 2001465

ಪೌರಾಣಿಕ ಕಲಾವಿಗ್ರಹಗಳನ್ನು ಸಾಂಪ್ರದಾಯಿಕ ಸೊಗಡಿನಲ್ಲಿ ಸಚೇತನಗೊಳಿಸಿದ ಶ್ರೀಮಂತ ಯಕ್ಷಪ್ರತಿಭೆ ರಾಧಾಕೃಷ್ಣ ನಾಯ್ಕ ಚೇರ್ಕಾಡಿ,

ಉಡುಪಿ ಜಿಲ್ಲೆಯ ಚೇರ್ಕಾಡಿ-ಬಾಳಟ್ಟು ಎಂಬಲ್ಲಿ 2-5-1951ರಲ್ಲಿ ಜನಿಸಿದ ರಾಧಾಕೃಷ್ಣ ನಾಯ್ಕರು ಗೋವಿಂದ ನಾಯ್ಕ-ರಾಧಾ ದಂಪತಿಯ ಸುಪುತ್ರ, ನಾಕಕ್ಕೇ ಓದು ಸಾಕೆನಿಸಿಕೊಂಡ ನಾಯ್ಕರು 17ನೇ ವಯಸ್ಸಿನಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದವರು.

ಎಳವೆಯಲ್ಲೇ ರಾಧಾಕೃಷ್ಣ ನಾಯ್ಕರಿಗೆ ಅನ್ಯಾದೃಶ ಕಲಾಸಕ್ತಿ, ತಂದೆಯವರೇ ಶ್ರೀಯುತರ ರಂಗಬದುಕಿಗೆ ಪ್ರೇರಣಾಶಕ್ತಿ, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲ ರಾವ್, ಹಾರಾಡಿ ಕೃಷ್ಣಗಾಣಿಗ, ಹಾಗೂ ಪೇತ್ರಿ ಮಾಧು ನಾಯ್ಕ ಅವರ ಗುರುಬಲವನ್ನು ಸಂಪಾದಿಸಿದ ರಾಧಾಕೃಷ್ಣ ನಾಯ್ಕರು ಸನಾತನ ಯಕ್ಷರಂಗದ ನಿಜಸತ್ವವನ್ನು ಗಂಭೀರವಾಗಿ ಹೀರಿಕೊಂಡು ಬೆಳೆದವರು.

ಮಂದಾರ್ತಿ 14, ಅಮೃತೇಶ್ವರಿ 3, ಸಾಲಿಗ್ರಾಮ 1, ಪೆರ್ಡೂರು 1, ಹಿರಿಯಡಕ 1, ಹೀಗೆ ಯಕ್ಷಗಾನ ವ್ಯವಸಾಯದಲ್ಲಿ ಸಾರ್ಥಕ ವಿಂಶತಿ ವರ್ಷವನ್ನು ಪೂರೈಸಿದ್ದಾರೆ.

ವೇಷ, ಭಾಷೆ, ನೃತ್ಯ, ಅಭಿನಯ, ಪ್ರಸಂಗಮಾಹಿತಿ ಹಾಗೂ ರಂಗವ್ಯವಹಾರದಲ್ಲಿ ಗರಿಷ್ಠ ಮಟ್ಟವನ್ನು ಕಾಯ್ದುಕೊಂಡ ಶ್ರೀಯುತರು ಪುರುಷವೇಷ, ಮೂರನೇವೇಷ ಹಾಗೂ ಸ್ತ್ರೀವೇಷ ನಿರ್ವಹಣೆಯಲ್ಲಿ ಕಲಾಪ್ರತಿಭೆ ಮೆರೆದವರು.

ಶ್ರೀಕೃಷ್ಣ, ಮೈಂದ, ಲವ, ಲೋಹಿತನೇತ್ರ, ವಾಸಂತಿ, ಕರಾಳನೇತ್ರ, ರತ್ನಾವತಿ, ನಾರದ, ಭ್ರಮರಕುಂತಳೆ, ಬಬ್ರುವಾಹನ, ಮೋಹಿನಿ, ಅಯ್ಯಪ್ಪ, ಹೀಗೆ ಎಲ್ಲಾ ವಿಧದ ವೇಷಗಳನ್ನೂ ನಿರ್ವಹಿಸಿ ಕಲಾರಸಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಮಡದಿ ಯಶೋದಾ. ಉಮಾಶ್ರೀ, ಸುಮಾಶ್ರೀ ಮಕ್ಕಳು. ಪ್ರಸ್ತುತ ಮೇಳ ಜೀವನದಿಂದ ನಿವೃತ್ತರಾಗಿದ್ದು ಯಕ್ಷಗಾನ ಪ್ರಸಾಧನ ರಂಗಕರ್ಮಿಯಾಗಿ ಕಲಾಕಾಯಕ ನಡೆಸುತ್ತಾರೆ. ಶ್ರೀಯುತರನ್ನು ಹಲವಾರು ಸಂಘ ಸಂಸ್ಥೆಗಳು ಸಂಮಾನಿಸಿವೆ.



**ರಾಮಕೃಷ್ಣ ಕುಂಜಾಲು**

*ನೀಲಾವರ ಗ್ರಾಮ, ಅಂಚೆ: ಕುಂಜಾಲು,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ 99641 42965*

ಪರಂಪರೆಯ ಪರಿಶುದ್ಧ ಹಾಸ್ಯಗಾರಿಕೆಗೆ 'ಕುಂಜಾಲು' ಅನ್ನುವ ಪದ ಪರ್ಯಾಯ ನಾಮವೇ ಆಗಿ ಹೋಗಿದೆ. ಕಾಲಮಹಿಮೆಯ ಒತ್ತಡದಲ್ಲಿ ಸುಸಂಸ್ಕೃತ ಯಕ್ಷವೈನೋದಿಕತೆ ಸ್ವರೂಪ ಕಳೆದುಕೊಳ್ಳುವ ಮಧ್ಯೆ ಕುಂಜಾಲು ರಾಮಕೃಷ್ಣ ಹಾಸ್ಯಗಾರರು, ಸಾಂಪ್ರದಾಯಿಕ ಸೀಮೆ ತುಳಿದು, ಬಡಗಿನ ಹಾಸ್ಯ ಚಕ್ರವರ್ತಿಯಾಗಿ ಕಂಗೊಳಿಸಿದರು.

ಉಡುಪಿ ಜಿಲ್ಲೆಯ ಕುಂಜಾಲು ಎಂಬಲ್ಲಿ ಪದ್ಮನಾಭ ನಾಯಕ್-ಶಾರದಾ ಬಾಯಿ ದಂಪತಿಯ ಸುಪುತ್ರನಾಗಿ ಜನಿಸಿದ ರಾಮಕೃಷ್ಣರು ಇದೀಗ 65ರ ಹರೆಯದಲ್ಲಿರುವ ವಿಶ್ರಾಂತ ಕಲಾವಿದರು. ಕಡುಬಡತನದ ಕುಟುಂಬದಲ್ಲಿ ಹುಟ್ಟಿ ಬೆಳೆದ ಕುಂಜಾಲು ಅವರಿಗೆ ಬಾಲ್ಯದಿಂದಲೂ ಯಕ್ಷಗಾನ ಕಲಾಸಕ್ತಿ, ಏಳನೇ ಇಯತ್ತೆಗೆ ಶರಣುಹೊಡೆದು ತನ್ನ 15ರ ಹರೆಯದಲ್ಲಿ ಯಕ್ಷಗಾನ ಲೋಕ ಪ್ರವೇಶಿಸಿದ ಇವರಿಗೆ ಗೋರ್ಪಾಡಿ ವಿಠಲಪಾಟೀಲರ ಪ್ರೇರಣೆ- ಮಾರ್ಗದರ್ಶನ ದೊರಕಿತು.

ಗುರುವೀರಭದ್ರನಾಯಕ್, ಹಾಸ್ಯಗಾರ ಹಾಲಾಡಿ ಕೊರಗಪ್ಪದಾಸ್ ಅವರ ಗುರುತನವನ್ನು ಪಡೆದ ರಾಮಕೃಷ್ಣ ನಾಯಕ್ ಅವರು ಕೊಲ್ಲೂರು, ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಸಾಲಿಗ್ರಾಮ, ಇಡಗುಂಜಿ ಮೇಳಗಳಲ್ಲಿ ಸಾರ್ಥಕ 36ವರ್ಷಗಳ ಕಾಲ ಕಲಾಯಾತ್ರೆಯಲ್ಲಿ ಅಪಾರ ಕೀರ್ತಿಗೆ ಭಾಜನರಾಗಿದ್ದಾರೆ.

ಕುಂಜಾಲು ಅವರ ದೇಹಾಕೃತಿಯೇ ಹಾಸ್ಯ ಭೂಮಿಕೆಗೆ ಹೇಳಿಸಿದಂತಿದೆ. ನೃತ್ಯ, ಅಭಿನಯ, ವೇಷ, ಭಾಷೆ, ಅಂಗಚಲನೆ, ರಂಗದುಡಿಮೆಯಲ್ಲಿ, ಗರಿಷ್ಠಮಟ್ಟದ ಸಾಧ್ಯತೆಯನ್ನು ತೋರಿದ ಹಾಸ್ಯ ಕಲಾವಿದರಿವರು. ಪಾತ್ರಗಳ ಆಳಕ್ಕೆ ಇಳಿದು ಅದನ್ನೊಂದು ಸಾಮಾಜಿಕ ಸಂವಹನದ ನೆಲೆಯಾಗಿ, ತನ್ನ ವ್ಯಂಗ್ಯಕ್ತಿ, ಚಾಟೂಕ್ತಿಗಳಿಂದ ಭಾವಪೂರ್ಣವಾಗಿ ಕಡೆದು ನಿಲ್ಲಿಸುವುದು ಕುಂಜಾಲು ಅವರ ಅನನ್ಯ ರಂಗಧಾಟಿಯಾಗಿ ಗಮನ ಸೆಳೆಯುತ್ತದೆ.

ಹಾಸ್ಯ ಕಲೆಯ ಕುರಿತು ಸ್ವಯಂಕಲ್ಪನೆ, ಸತತ ಚಿಂತನೆ ನಡೆಸಿ ತನ್ನದೇ ವಿಶಿಷ್ಟ ಶೈಲೀಕೃತ ಮೆರುಗಿನಲ್ಲಿ ಪೌರಾಣಿಕ ಹಾಸ್ಯಭೂಮಿಕೆಗಳಿಗೆ ರಾಜ ಹಾಸ್ಯದ ಪೋಷಾಕು ತೊಡಿಸಿದ ಕುಂಜಾಲು ಅವರ ಹಾಸ್ಯಗಾರಿಕೆಗೆ ಸುಸಂಸ್ಕೃತ ಧರ್ಮವಿದೆ. ವೈಚಾರಿಕ ಮರ್ಮವಿದೆ.

'ಕಾಶೀ ವಾಣಿ ' ಪಾತ್ರ ಇಂದಿಗೂ, ಮುಂದೆಂದಿಗೂ ಅವರ ಹೆಸರನ್ನು ನೆನಪಿಸುತ್ತಾ, ಹೋಗುತ್ತದೆ. ಹಾಗೆಯೇ ಬಾಹುಕ, ಬೇಹುಚಾರಕ, ಗುರುಮಠದ ದಡ್ಡ, ವಿಡೂರಥ, ಭೀಷ್ಮವಿಜಯದ ಬ್ರಾಹ್ಮಣ, ಕಪ್ಪದೂತ, ವಿಜಯ ಮೊದಲಾದ ಪಾತ್ರಗಳಿಗೆ ಕುಂಜಾಲು ಒತ್ತಿದ ಕಲಾಮುದ್ರೆ ಅಜರಾಮರ.

ಪತ್ನಿ ಜಲಜಾ, ಪ್ರಕಾಶ, ಶಶಿಕಲಾ, ಇವರ ಉಭಯ ಮಕ್ಕಳು. ಶ್ರೀಯುತರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಉಡುಪಿಯ ಯಕ್ಷಗಾನ ಕಲಾರಂಗದ ಡಾ| ಬಿ. ಬಿ. ಶೆಟ್ಟಿ ಪ್ರಶಸ್ತಿ, ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ, ಯಕ್ಷದೇಗುಲ ಪ್ರಶಸ್ತಿ... ಸೇರಿದಂತೆ ಹಲವಾರು . ಸಂಮಾನ, ಪುರಸ್ಕಾರಗಳು ದೊರಕಿವೆ.



# ರಾಮಕೃಷ್ಣ, ಮಂದಾರ್ತಿ

*(ಮಂದಾರ್ತಿ ದೇವಸ್ಥಾನ ವಠಾರ),*
*ಅಂಚೆ : ಮಂದಾರ್ತಿ, ಉಡುಪಿ ಜಿಲ್ಲೆ*
*ದೂರವಾಣಿ: 94488 12249*

ಗಾಯನದ ಭಾವಪೋಷಕ, ರಸಪ್ರೇರಕ, ಸಾಹಿತ್ಯಪೂರಕ, ಚಂಡೆ ವಾದನದಲ್ಲಿ ಪ್ರಸಿದ್ಧಿಯ ಹೆಸರು ರಾಮಕೃಷ್ಣ ಮಂದಾರ್ತಿ,

ಬಡಗುತಿಟ್ಟಿನ ಚಂಡೆ ಗಾರಿಕೆಯ ತಾರಾಮೌಲ್ಯಪೂರ್ಣ ಕಲಾವಿದರಾದ ರಾಮಕೃಷ್ಣ ಅವರು ಪದ್ಮನಾಭ ಕಾಮತ್-ರಾಧಾ ಬಾಯಿ ದಂಪತಿಯ ಸುಪುತ್ರರಾಗಿ 14-07-1960ರಲ್ಲಿ ಮಂದಾರ್ತಿಯಲ್ಲಿ ಹುಟ್ಟಿದರು.

ಇವರ ತಂದೆಯವರಿಗೆ ಭಾಗವತಿಕೆ, ಮದ್ದಳೆಗಾರಿಕೆ ತಿಳಿದಿತ್ತು. ಆ ಕಾರಣದಿಂದಲೇ ಮಗನಿಗೆ ಇಂತಹ ಕಲಾವಿದ್ಯೆ ರಕ್ತಗತ ಬಳುವಳಿಯಾಯಿತು. 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ರಾಮಕೃಷ್ಣರು ತನ್ನ 12ನೇ ವಯಸ್ಸಿನಲ್ಲೇ ಯಕ್ಷಲೋಕವನ್ನು ಪ್ರವೇಶಿಸಿದರು. ಶ್ರೀ ಎಂ. ಎಂ. ಹೆಗ್ದೆಯವರು ಇವರಿಗೆ ವೃತ್ತಿರಂಗದಲ್ಲಿ ಪ್ರೇರಣಾಶಕ್ತಿಯಾಗಿ ಪ್ರೋತ್ಸಾಹ ನೀಡಿದರು.

ಮಂದಾರ್ತಿ ಮೇಳದಲ್ಲಿ ಕೋಡಂಗಿ, ನಿತ್ಯವೇಷದಲ್ಲಿ ತಿರುಗಾಟ ಆರಂಭಿಸಿದ ರಾಮಕೃಷ್ಣ ಅವರು ಮಾರಣಕಟ್ಟೆ ಮೇಳದಲ್ಲಿ ಚಂಡೆಗಾರರಾಗಿ ಗುರುತಿಸಿಕೊಂಡರು. ಪ್ರಖ್ಯಾತ ಚಂಡೆಗಾರ ಕೆಮ್ಮಣ್ಣು ಆನಂದ ಅವರಲ್ಲಿ ಚಂಡೆವಾದನ ಶಿಕ್ಷಣವನ್ನು ಪಡೆದ ಇವರಿಗೆ ಕೊಗ್ಗ ಆಚಾದ್ಯರು ವಾದನ ಕಲೆಯ ಅನುಭವವನ್ನು ಬೋಧಿಸಿದರು. ಸುರಗಿಕಟ್ಟೆ ಬಸವಗಾಣಿಗರೇ ಇವರಿಗೆ ತಾಳ ದೀಕ್ಷೆಯನ್ನು ನೀಡಿದ ಗುರುಗಳು.

ಮಂದಾರ್ತಿ 2, ಮಾರಣಕಟ್ಟೆ 7, ಮತ್ತೆ ಮಂದಾರ್ತಿ 1, ಸಾಲಿಗ್ರಾಮ 10, ಮಂದಾರ್ತಿ 5, ಹೀಗೆ ಇವ ರ ಕಲಾವ್ಯವ ಸಾಯ. ವೃತ್ತಿರಂಗಭೂಮಿಯಲ್ಲಿ ರಜತವರ್ಷ ಪೂರೈಸಿ ಪ್ರಸ್ತುತ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸನಿಹವಿರುವ ತನ್ನ ಮನೆಯಲ್ಲಿ ಹಣ್ಣುಕಾಯಿ ಅಂಗಡಿ ವ್ಯವಹಾರ ನಡೆಸುತ್ತಿದ್ದಾರೆ. ಅನೇಕ ಆಟ-ಕೂಟಗಳಲ್ಲಿ ಭಾಗವಹಿಸುವ ಶ್ರೀಯುತರು ಚಂಡೆಗಾರಿಕೆಯಲ್ಲಿ ಈಗಲೂ ಪ್ರವೃತ್ತರು. ಮದ್ದಳೆವಾದನದ ಪರಿಣತಿಯೂ ಇರುವ ರಾಮಕೃಷ್ಣರು ಕಾಳಿಂಗನಾವಡರ ಮಧುರ ಕಂಠದ ಯಕ್ಷಗೀತ ಗಾಯನಕ್ಕೆ ಚಂಡೆ ನುಡಿಸಿ ಮನೆ ಮಾತಾದ ಜನಪ್ರಿಯ ಕಲಾವಿದರು. ಕೋಟ ಶಿವಾನಂದ, ಹಳ್ಳಾಡಿ ರಾಕೇಶಮಲ್ಯ, ಹಳ್ಳಾಡಿ ಜನಾರ್ದನ ಆಚಾರ್ ರಂತಹ ಪ್ರಸಿದ್ಧ ಚಂಡೆವಾದಕರ ಗುರುವಾಗಿಯೂ ಗುರುತಿಸಿಕೊಂಡವರು.

ಅಪಾರ ರಂಗತಂತ್ರ, ಪ್ರಸಂಗನಡೆಯಲ್ಲಿ ಗರಿಷ್ಟಮಟ್ಟದ ಅನುಭವವನ್ನು ಹೊಂದಿದ ಇವರು ಚಂಡೆಗಾರಿಕೆಗೆ ಪ್ರತ್ಯೇಕ ಕೇಳುಗ-ಪ್ರೇಕ್ಷಕರನ್ನು ಸೃಷ್ಟಿಸಿದ ಪ್ರತಿಭಾನ್ವಿತ ಚಂಡೆಗಾರರು.

ಬಾಳ ಸಂಗಾತಿ ಸುಮಾ, ರೂಪಕಲಾ, ರಾಧಿಕಾ, ರಾಜೇಶ್ ಎಂಬ ಮೂರು ಮಂದಿ ಮಕ್ಕಳು. ರಾಮಕೃಷ್ಣ ಮಂದಾರ್ತಿಯವರು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ ಸಂಮಾನ, ಯಕ್ಷಗಾನ ಕಲಾಕ್ಷೇತ್ರ ಗುಂಡಿಬೈಲು ಸಂಸ್ಥೆಯ ನಿಟ್ಟೂರು ಭೋಜಪ್ಪ ಸುವರ್ಣ ಪ್ರಶಸ್ತಿ, ದಿ. ಕಾಳಿಂಗ ನಾವಡ ಸ್ಮಾರಕ ಪ್ರಶಸ್ತಿಯನ್ನು ಪಡೆದ ಶ್ರೇಷ್ಠ ಕಲಾವಿದರು.



ರಾಮ ಚಂದನ್, ಹೆಮ್ಮಾಡಿ

ಪೂಜಾರಿ ಮನೆ, ಅಂಚೆ ಹೆಮ್ಮಾಡಿ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 98454 44271

ಪುರಾಣಲೋಕದ ರಮಣೀಯ ದೃಶ್ಯಕಾವ್ಯವನ್ನು ವಿದ್ವತ್ ಪೂರ್ಣ ಮಾತಿನ ಮಂಟಪದಲ್ಲಿ ದರ್ಶಿಸುವ ವಚೋಸಂಪದ್ಭರಿತ ಹಿರಿಯ ಕಲಾವಿದ ಹೆಮ್ಮಾಡಿ ರಾಮ ಚಂದನ್.

ಕುಂದಾಪುರ ತಾಲೂಕಿನ ಹೆಮ್ಮಾಡಿ ಎಂಬ ಊರಿನಲ್ಲಿ 20-6-1950ರಲ್ಲಿ ಜನಿಸಿದ ರಾಮಚಂದನ್, ಮಂಜಪೂಜಾರಿ ಹಾಗೂ ಚಿಕ್ಕಮ್ಮ ದಂಪತಿಯ ಸುಪುತ್ರ ಹತ್ತನೇ ತರಗತಿಯವರೆಗೆ ಓದಿ, ಹತ್ತೊಂಬತ್ತನೇ

ವಯಸ್ಸಿನಲ್ಲಿ ಬಣ್ಣದ ಬದುಕು ಕಂಡ ಇವರಿಗೆ ಕೀರ್ತಿಶೇಷ ರಾಮ ಗಾಣಿಗರ ಅದ್ಭುತ ಕಲಾವಂತಿಕೆಯಲ್ಲಿ ರಂಗದಲ್ಲಿ ಸಾಕಾರಗೊಳ್ಳುತ್ತಿದ್ದ ಪೌರಾಣಿಕ ವೇಷಗಳ ಕಲಾಜೀವನ ದ ಪ್ರೇರಣಾಶಕ್ತಿಯಾಗಿ ಯಕ್ಷಪಥ ತೋರಿದವು. ಹಿರಿಯ ಕಲಾವಿದ ಐರೋಡಿ ಗೋವಿಂದಪ್ಪನವರ ತುಂಬು ಪ್ರೋತ್ಸಾಹವೂ ಕಲೆಯಲ್ಲಿ ನೆಲೆಯಾಗು-ವುದಕ್ಕೆ ಸ್ಫೂರ್ತಿಯ ಸೆಲೆಯಾಯಿತು.

ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಹೆಮ್ಮಾಡಿ ನಡುಬೆಟ್ಟು ಕೃಷ್ಣನವರ ಗುರುತನದ ಹಿರಿಮೆಯಲ್ಲಿ ಸಮೃದ್ಧ ಯಕ್ಷ ಕಲಾವಿದರಾಗಿ ರೂಪು ಗೊಂಡ ರಾಮ ಚಂದನ್ ಬಡಗಿನತಿಟ್ಟು-ಮಟ್ಟುಗಳ ಸಾಂಪ್ರದಾಯಿಕ ಹುಟ್ಟು-ಗುಟ್ಟುಗಳನ್ನು ಸಮರ್ಪಕವಾಗಿ ಗಟ್ಟಿಗೊಳಿಸಿಕೊಂಡರು.

ಕಳವಾಡಿ 1, ಗೋಳಿಗರಡಿ 14, ಅಮೃತೇಶ್ವರಿ 1, ಹಾಲಾಡಿ 1, ಕಮಲಶಿಲೆ 1, ಬಗ್ವಾಡಿ 1, ಹೀಗೆ 19ವರ್ಷಗಳನ್ನು ಯಶಸ್ವಿ ತಿರುಗಾಟದಲ್ಲಿ ಪೂರೈಸಿದ ಹೆ ಮಾಡಿ ರಾಮ ಅವರು ಉತ್ತಮ ಅರ್ಥಧಾರಿಯಾಗಿಯೂ ಪ್ರಸಿದ್ಧರು.

ಶ್ರೀಯುತರು ನಿರ್ವಹಿಸುವ ಕರ್ಣ, ಅರ್ಜುನ, ಭೀಷ್ಮ, ಪರಶುರಾಮ, ಪೆರುಮಾಳ ಬಲ್ಲಾಳ, ಯಮ, ಶ್ರೀರಾಮ, ವಿಕ್ರಮಾದಿತ್ಯ, ಋತುಪರ್ಣ, ಪಾತ್ರಗಳು ಅವರದೇ ವಿಶಿಷ್ಟ ಶೈಲಿಯಲ್ಲಿ ನಿರೂಪಿತವಾಗಿ ಜನಮೆಚ್ಚುವ ಯಕ್ಷರಂಗಸ್ಥಳದ ಜೀವಂತ ಕಲಾವಿಗ್ರಹಗಳು, ಪ್ರಧಾನ ವೇಷಧಾರಿಯಾಗಿ ಅಚ್ಚುಕಟ್ಟಾದ ವೇಷಾಲಂಕಾರದಲ್ಲಿ ಕಾಣಿಸಿಕೊಳ್ಳುವ ಹೆ ಮಾಡಿ ರಾಮ ಕುಣಿತ ವಿಭಾಗವನ್ನು ದ್ವಿತೀಯವಾಗಿಟ್ಟು, ಭಾವಪೂರ್ಣ ಅಭಿನಯ, ವಚೋವಿಲಾಸದಿಂದ ಅದ್ವಿತೀಯ ರಂಗವೈಭವ ಕಾಣಿಸುವವರು. ಯಕ್ಷಗಾನ ವೇಷಭೂಷಣ ತಯಾರಿ, ಯಕ್ಷಗಾನ ಗೊಂಬೆಗಳ ರಚನೆ, ಗೊಂಬೆಯಾಟಗಳಿಗೆ ಕಂಠದಾನ ನೀಡುವ ಪ್ರವೃತ್ತಿ ಶ್ರೀಯುತರ ಉಪವೃತ್ತಿಯಾಗಿದೆ.

ಮಡದಿ ಸಾಕು. ವರದ, ವನಜ, ವಸಂತಿ, ವಸಂತ ಮಕ್ಕಳು. ಶ್ರೀಯುತರು ಹಲವು ಸಂಘ- ಸಂಸ್ಥೆಗಳ ಗೌರವ ಸಂಮಾನ ಪಡೆದಿರುತ್ತಾರೆ.



**ರಾಮಚಂದ್ರ ಶಾನುಭಾಗ, ಜಂಬೂರು**

*ಶಿರಿಯಾರ ಗ್ರಾಮ, ಅಂಚೆ : ಸ್ಯಾಬರಕಟ್ಟೆ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ: 94800 53474*

ಉಡುಪಿ ತಾಲೂಕಿನ ಶಿರಿಯಾರ ಗ್ರಾಮದ ಜಂಬೂರು ಎಂಬ ಪುಟ್ಟ ಹಳ್ಳಿಯ ರಾಮಚಂದ್ರ ಶಾನುಭಾಗರು ಯಕ್ಷಗಾನ ಬಡಗುತಿಟ್ಟು ಕಂಡ ಪ್ರೌಢ ಪ್ರತಿಭೆಯ, ಸಾಂಪ್ರದಾಯಿಕ ಶಿಷ್ಟ ಕಲಾವಿದ.

ರಾಮಚಂದ್ರ ಶಾನುಭಾಗರ ತಂದೆ ಶ್ರೀನಿವಾಸ ಶಾನುಭಾಗ, ತಾಯಿ ಲಕ್ಷ್ಮೀಯಮ್ಮ, ಎಂಟನೇಯ ತರಗತಿಯ ನಂತರ ಯಕ್ಷಗಾನ ಬಣ್ಣದ ಬದುಕಿಗೆ ಅಂಟಿಕೊಂಡ ಶಾನುಭಾಗರು ಪರಂಪರೆಯ ಪ್ರತಿನಿಧಿಯಂತೆ ಕಾಣುವ ಶ್ರೇಷ್ಠ ಕಲಾವಿದರು.

16ನೇ ವಯಸ್ಸಿಗೆ ಯಕ್ಷಲೋಕ ಪ್ರವೇಶಿಸಿದ ಶಾನುಭಾಗರು 'ಕೇಳಿ-ತಿಳಿ, ನೋಡಿ-ಕಲಿ' ಎಂಬುದನ್ನೇ ವೃತ್ತಿ ಬದುಕಿಗೆ ಪಾಠವಾಗಿಸಿಕೊಂಡು ರಂಗಸ್ಥಳವನ್ನೇ ರಂಗಶಾಲೆಯಾಗಿಸಿಕೊಂಡು ಕಲಾವಿದ್ಯೆಯನ್ನು ಸಂಪಾದಿಸಿದ ಕಲಾವಿದರು.

ಜಂಬೂರು ರಾಮಚಂದ್ರಶಾನುಭಾಗರು ಯಕ್ಷಗಾನ ಪುರಾಣಲೋಕದ ಪೋಷಕಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿ ಗೆಲುವು ಕಂಡವರು. ಇವರ ಅಪಾರ ಅನುಭವಪೂರ್ಣತೆ, ರಂಗನೆಲದಲ್ಲಿನ ಗರಿಷ್ಠಮಟ್ಟದ ಕಲಾಭಿವ್ಯಕ್ತತೆ, ಪಾತ್ರನಿಷ್ಠವಾದ ನೃತ್ಯ ಅಭಿನಯಶೀಲತೆ ಮೇಲಾಗಿ ಸಾಹಿತ್ಯ ಶುದ್ಧತೆಯ ವಚೋವೈವಿಧ್ಯತೆ.... ಕಲಾಭಿಮಾನಿಗಳ ಮನ ಗೆದ್ದಿದೆ.

ಧರ್ಮರಾಯ, ದೇವೇಂದ್ರ, ಶ್ರೀರಾಮ, ವಸಿಷ್ಠ, ಅರ್ಜುನ, ಬಭ್ರುವಾಹನ, ಶ್ರೀಕೃಷ್ಣ, ಪಾತ್ರಗಳಲ್ಲಿ ತನ್ನದೇ ವಿಶಿಷ್ಟವಾದ ಛಾಪು ಮೂಡಿಸಿದ ಜಂಬೂರು ಶಾನುಭಾಗರು, ಅನುಭವದ ಖಜಾನೆಯಾಗಿ ಗುರುತಿಸಲ್ಪಟ್ಟವರು.

ಮಂದಾರ್ತಿ 20, ಮಾರಣಕಟ್ಟೆ 3, ಅಮೃತೇಶ್ವರಿ 2, ಇಡಗುಂಜಿ 12, ಪೆರ್ಡೂರು 2, ಹಾಲಾಡಿ 2, ಬಗ್ವಾಡಿ 2, ಕಮಲಶಿಲೆ 3, ಗುಂಡಬಾಳ 4, ಮೇಳಗಳಲ್ಲಿ ಸುಮಾರು 55ವರ್ಷಗಳ ಕಾಲ ದೀರ್ಘಕಾಲೀನ ರಂಗವ್ಯವಸಾಯ ನಡೆಸಿ, ಪ್ರಸ್ತುತ ವಿಶ್ರಾಂತ ಜೀವನದಲ್ಲಿದ್ದಾರೆ. ಶ್ರೀಯುತರಿಗೆ ಈಗ 71ರಹರೆಯ.

ಪತ್ನಿ ಶಾರದ. ಶ್ರೀನಿವಾಸ, ಶ್ರೀಕೃಷ್ಣ, ಸರಸ್ವತಿ ಮೂವರು ಮಕ್ಕಳು.

ಶ್ರೀಯುತರನ್ನು ಉಡುಪಿ ಯಕ್ಷಗಾನ ಕಲಾರಂಗ, ಯಕ್ಷದೇಗುಲ, ಬೆಂಗಳೂರು, ಹಾಗೂ ಹಲವಾರು ಸಂಘ ಸಂಸ್ಥೆಗಳು ಸಂಮ್ಮಾನಿಸಿವೆ.



ರಾಮಚಂದ್ರ ಹೆಗಡೆ, ಕೊಂಡದಕುಳಿ

'ಪೂರ್ಣಚಂದ್ರ' 'ಕುಂಭಾಶಿ', ಕುಂದಾಪುರ ತಾಲೂಕು,
ಅಂಚೆ : ಕುಂಭಾಶಿ, ಉಡುಪಿ ಜಿಲ್ಲೆ 576 257
ದೂರವಾಣಿ: 08254 261918, 94480 00471

ಬಡಗುತಿಟ್ಟಿನ ಪರಿಮಾಣಯುಕ್ತ ನೃತ್ಯಾಭಿನಯ ಸತ್ವ ಸಮನ್ವಿತ, ಪರಿಪುಷ್ಟ ಸಾಹಿತ್ಯಕ ವಿಚಾರಚೋದಿತ, ಸರ್ವಾಂಗ ಸುಂದರ ಶ್ರೇಷ್ಠ ಯಕ್ಷನಟ ಕೊಂಡದಕುಳಿ ರಾಮಚಂದ್ರ ಹೆಗಡೆ,

ಉತ್ತರ ಕನ್ನಡದ ಹೊನ್ನಾವರ ತಾಲೂಕಿನ ಕೊಂಡದಕುಳಿ ಎಂಬಲ್ಲಿ 26-6-1961ರಲ್ಲಿ ಗಣೇಶ ಹೆಗಡೆ-ಕಮಲಾ ಹೆಗಡೆ ದಂಪತಿಯ ಸುಪುತ್ರನಾಗಿ ಜನಿಸಿದ ಹೆಗಡೆಯವರು ಎಸ್.ಎಸ್.ಎಲ್.ಸಿ ತನಕ ವ್ಯಾಸಂಗ ಮಾಡಿ ತನ್ನ 16ನೇ ವಯಸ್ಸಿನಲ್ಲಿ ಗುಂಡಬಾಳ ಮೇಳಕ್ಕೆ ಪಾದಾರ್ಪಣೆ ಮಾಡುವ ಮೂಲಕ ಯಕ್ಷಪ್ರಪಂಚಕ್ಕೆ ದಾಖಲಾದರು.

ಮೇರು ಕಲಾವಿದರಾದ ಕೊಂಡದಕುಳಿ ರಾಮ ಹೆಗಡೆ-ಲಕ್ಷಣ ಹೆಗಡೆ ಅವರು ರಾಮಚಂದ್ರ ಹೆಗಡೆಯವರ ಅಜ್ಜಂದಿರು. ತಂದೆ ಗಣೇಶ ಹೆಗಡೆ - ಮಹಾನ್ ಯಕ್ಷಕಲಾಭಿಮಾನಿ. ಹೀಗೆ ಕಲಾವಂತರ ಮನೆತನದಿಂದ ಬಂದ ಕೊಂಡದಕುಳಿ ಅವರಿಗೆ ಯಕ್ಷಕಲೆ ರಕ್ತಗತ ಬಳುವಳಿ,

ಗುಂಡಬಾಳ ಮೇಳ, ಸಾಲಿಗ್ರಾಮ ಮೇಳ, ಶಿರಸಿ ಪಂಚಲಿಂಗ ಮೇಳಗಳಲ್ಲಿ ಸಾರ್ಥಕ ಸೇವೆ ಸಲ್ಲಿಸಿದ ಕೊಂಡದಕುಳಿ ಪ್ರಸ್ತುತ ತಾವೇ ಸ್ಥಾಪಿಸಿದ 'ಕುಂಭಾಶಿ ಪೂರ್ಣಚಂದ್ರ ಮೇಳ'ದಲ್ಲಿ ಕಲಾವಿದರಾಗಿ ದುಡಿಯುತ್ತಿದ್ದಾರೆ. ಒಟ್ಟು ಅವರ ರಂಗವ್ಯವಸಾಯ 34 ವರ್ಷ.

ತಾನು ನಿರ್ವಹಿಸುವ ಪ್ರತೀ ಪಾತ್ರಗಳ ಅಂತರಂಗದ ಕಲಾಗೋಳದೊಳಗೆ ಚಕ್ರದೃಷ್ಟಿ ಹರಿಸಿ, . ಪಾತ್ರದ ಮೂಲಸೊಗಡನ್ನು ಎತ್ತಿ ಹಿಡಿದು ತನ್ನ ಸೃಜನಾತ್ಮಕ ಕಲಾ ವೈಖರಿಯಲ್ಲಿ ಪ್ರಸ್ತುತ ಪಡಿಸುವ ಕೊಂಡದಕುಳಿ ಅವರು ಪೌರಾಣಿಕ ಅಖ್ಯಾನಕ್ಕೂ ಒಪ್ಪುವ, ನವೀನ ಕಥಾನಕಗಳಿಗೂ ಒಗ್ಗುವ ಕಲಾವಿದರು.

ಶ್ರೀಯುತರ ಶ್ರೀ ರಾಮ, ಕೃಷ್ಣ, ರಾವಣ, ಹರಿಶ್ಚಂದ್ರ, ಈಶ್ವರ, ಸುಧನ್ವ, ಅರ್ಜುನ, ದಶರಥ, ಹನೂಮಂತ, ವಾಲಿ, ಕಾರ್ತವೀರ, ದುಷ್ಟಬುದ್ಧಿ, ಭೀಷ್ಮ, ಮಾಗಧ, ಮೊದಲಾದ ಪಾತ್ರಗಳು ಪರಕಾಯಪ್ರವೇಶದ ಪ್ರೌಢ ಕಳೆಯಲ್ಲಿ ಕಲಾರಸಿಕರ ಹೃದಯದಲ್ಲಿ ಚಿರಸ್ಥಾಯಿಯಾಗುಳಿದಿವೆ. ನಾಯಕ, ಖಳನಾಯಕ, ಪ್ರತಿನಾಯಕ, ಪಾತ್ರಗಳ ಸರದಾರರಾದ ಕೊಂಡದಕುಳಿ ಪಾತ್ರಗಳಿಗೆ ಜೀವ-ಭಾವ ನೀಡುವ ಅಪ್ರತಿಮ ಕಲಾವಿದರು.

ಪತ್ನಿ ಪೂರ್ಣಿಮಾ, ಅಶ್ವಿನಿ, ಅಕ್ಷತಾ ಎಂಬ ಈಶ್ವರು ಮಕ್ಕಳು. ಶ್ರೀ ಪೇಜಾವರ ಶ್ರೀಪಾದರ ಶ್ರೀರಾಮವಿಠಲ ಪ್ರಶಸ್ತಿ ಸೇರಿದಂತೆ ಕೊಂಡದ ಕುಳಿ ಅವರ ಮಹಾನ್ ಪ್ರತಿಭೆಗೆ ಹಲವು ಪುರಸ್ಕಾರಗಳು ಸಂದಿವೆ.



ರಾಮಚಂದ್ರ ಹೆಗಡೆ, ಚಿಟ್ಟಾಣಿ

ಅಂಚೆ: ಹೆರಂಗಡಿ, ಹೊನ್ನಾವರ ತಾಲೂಕು (ಉ.ಕ)
ದೂರವಾಣಿ 08387-261816

ಬಡಗುತಿಟ್ಟು ಯಕ್ಷಗಾನ ಕಲಾರಂಗದಲ್ಲಿ ಅದ್ಭುತ ಪ್ರತಿಭಾ ಪಾರಮ್ಯದಲ್ಲಿ ಸಾರ್ವಭೌಮತ್ವ ಸಾಧಿಸಿದ ಮೇರು ಕಲಾವಿದ ಚಿಟ್ಟಾಣಿ ರಾಮಚಂದ್ರ ಹೆಗಡೆ. ಆರು ದಶಕಗಳ ಸುದೀರ್ಘ ರಂಗಸೇವೆಯಲ್ಲಿ ಸಾಧನೆಯ ಶಿಖರವೇರಿದ ಚಿಟ್ಟಾಣಿಯವರು 76ರ ಇಳಿವಯಸ್ಸಿನಲ್ಲೂ ಗೆಜ್ಜೆಕಟ್ಟಿ ರಂಗಮಂಚವೇರಿದರೆ ಇಪ್ಪತ್ತರ ತರುಣರನ್ನೂ ನಾಚಿಸಿಬಿಡುತ್ತಾರೆ.

ಉತ್ತರಕನ್ನಡದ ಹೊನ್ನಾವರ-ಹೊಸಾಕುಳಿಯ ಚಿಟ್ಟಾಣಿಯೇ ಅವರ ಹುಟ್ಟೂರು. ಸುಬ್ರಾಯ ಹೆಗಡೆ- ಗಣಪಿ ಹೆಗಡೆ ದಂಪತಿಗಳ ಸುಪುತ್ರರಾಗಿ 20-3-1934ರಲ್ಲಿ ಜನಿಸಿದರು. ಚಿಟ್ಟಾಣಿಯವರು ಓದಿದ್ದು ಬಾಳೆಗದ್ದೆ ಕೇವಲ ಎರಡನೇ ತರಗತಿ. ರಾಮಕೃಷ್ಣಭಟ್ ಇವರ ಆರಂಭಿಕ ಗುರುಗಳು. ಕೊಂಡದಕುಳಿ ರಾಮ ಹೆಗಡೆ-ಲಕ್ಷ್ಮಣ ಹೆಗಡೆ ಅವರಿಂದ ಇವರ ಕಲಾಸಕ್ತಿ ಕುದುರಿತು. ಮೂಡಣಿ ನಿಲುಕುವುದಿಲ್ಲ. ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಯಕ್ಷಗಾನ ನಾರಾಯಣ ಹೆಗಡೆ ಹಾಗೂ ಕೆರೆಮನೆ ಶಿವರಾಮ ಹೆಗಡೆಯವರ ಕಲಾವರ್ಚಸ್ಸು ಇವರ ಮೇಲೆ ವಿಶೇಷ ಪ್ರಭಾವ ಬೀರಿತು.

ತನ್ನ 14ರ ಹರಯದಲ್ಲಿ 'ಶ್ರೀ ಕೃಷ್ಣ ಪಾರಿಜಾತ'ದ ಅಗ್ನಿ ಪಾತ್ರದಲ್ಲಿ ರಂಗವೇರಿದ ಚಿಟ್ಟಾಣಿ ಮತ್ತೆ ಹಿಂತಿರುಗಿ ನೋಡಲಿಲ್ಲ. ಯಕ್ಷಲೋಕದಲ್ಲಿ 'ಅಗ್ನಿ'ಯಂತೆಯೇ ಬೆಳಗಿದರು. ಗುಂಡಬಾಳ, ಅಮೃತೇಶ್ವರಿ, ಸಾಲಿಗ್ರಾಮ, ಪಂಚಲಿಂಗ-ಶಿರಸಿ, ಕೊಳಗಿಬೀಸ್, ಮೂರೂರು, ಶಿರಸಿ-ಮಾರಿಕಾಂಬಾ, ಬಚ್ಚಗಾರು, ಪೆರ್ಡೂರು ಮೇಳಗಳಲ್ಲಿ ಅರವತ್ತು ವರ್ಷಗಳ ಅವರ ಕಲಾವ್ಯವಸಾಯ ಸಾರ್ಥಕವಾಗಿದೆ.

ಯಕ್ಷಗಾನ ವೇಷಕ್ಕೆ ಹೇಳಿ ಮಾಡಿಸಿದಂತಹ ಮೈಕಟ್ಟು, ವಿಶಾಲ ಹಣೆ, ಹೊಳಪಿನ ಕಣ್ಣುಗಳು ಅವರಿಗೆ ದೈವದತ್ತವಾಗಿದೆ. ಚಿಟ್ಟಾಣಿಯವರದು ಯಕ್ಷಗಾನ ನೃತ್ಯವೈಖರಿಗೆ ಹೊಸ ಆಯಾಮ ನೀಡಿ, ತನ್ನದೇ 'ಶೈಲಿ' ಹುಟ್ಟು ಹಾಕಿದ ಸಂಪನ್ನ ಪ್ರತಿಭೆ. ಅವರ ಲಯ ಪ್ರಜ್ಞೆ, ರಂಗನಿಲುವು, ಆಂಗಿಕವಿನ್ಯಾಸ, ಮಾತಿನ ಶೈಲಿ ಪಾತ್ರ ಚಿತ್ರಣ ಎಲ್ಲವೂ ವಿಭಿನ್ನ. ಅಸಾಧಾರಣ.

ಶ್ರೀಯುತರ ಪಾತ್ರ ತಾದಾತ್ಮ್ಯ ಅನನ್ಯ. ರಂಗಕರ್ಮದಲ್ಲೆಲ್ಲೂ ರಾಜಿ ಮಾಡಿಕೊಳ್ಳದ ನಿಷ್ಕಪಟ ಕಲಾವಿದ. ಚಿಟ್ಟಾಣಿ ನಿರ್ವಹಿಸಿದ ಭಸ್ಮಾಸುರ, ಕೀಚಕ, ಮಾಗಧ, ಕಂಸ, ಕೌರವ, ದುಷ್ಟಬುದ್ಧಿ, ರುದ್ರಕೋಪ... ಪಾತ್ರಗಳಿಗೆ ಎಂದೂ ಸಾವಿಲ್ಲ. ಅವರಿಗೆ ಅವರೇ ಸಾಟಿ, ಅಮೇರಿಕಾದಲ್ಲೂ ತನ್ನ ಅಪೂರ್ವ ಪ್ರತಿಭೆಯನ್ನು ಪ್ರಕಟಿಸಿ ರ ಸಿಕರ . ಮನಸೂರೆಗೊಂಡಿದ್ದಾರೆ.

ಚಿಟ್ಟಾಣಿಯವರ ಧರ್ಮಪತ್ನಿ ಸುಶೀಲಾ. “ಲಲಿತಾ, ಸುಬ್ರಹ್ಮಣ್ಯ, ನಾರಾಯಣ, ನರಸಿಂಹ', ಇವರ ನಾಲ್ವರು ಮಕ್ಕಳು. ಇವರ ಸುಪುತ್ರರಾದ ಸುಬ್ರಹ್ಮಣ್ಯ ಚಿಟ್ಟಾಣಿ ಹಾಗೂ ನರಸಿಂಹ ಚಿಟ್ಟಾಣಿ ವೃತ್ತಿರಂಗದ ಭರವಸೆಯ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ. ಶ್ರೀಯುತರ ಮೇರು ಕಲಾಪ್ರತಿಭೆಗೆ ದೊರಕಿದ ಸಂಮಾನ ಗಣಿತಕ್ಕೆ ನಿಲುಕುವುದಿಲ್ಲ. ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಜಾನಪದಶ್ರೀ ಪ್ರಶಸ್ತಿ ಸೇರಿದಂತೆ ಅನೇಕ ಗೌರವಕ್ಕೆ ಅವರು ಭಾಜನರಾಗಿದ್ದಾರೆ. 'ರಸರಾಜ' ಇವರಿಗೆ ಅರ್ಪಿಸಿದ ಅಭಿನಂದನ ಗ್ರಂಥ. 'ನಮ್ಮ ಚಿಟ್ಟಾಣಿ' ಆತ್ಮಕಥನ. ಶ್ರೀಯುತರು ಪ್ರಸ್ತುತ ಶ್ರೀವೀರಾಂಜನೇಯ ಯಕ್ಷಮಿತ್ರ ಮಂಡಳಿಯ ಪ್ರಧಾನ ಕಲಾವಿದರಾಗಿ ಕಲಾಸೇವೆಗೈಯುತ್ತಿದ್ದಾರೆ.



## ರಾಮದಾಸ್, ಮರವಂತೆ


*'ಶ್ರೀನಿವಾಸ ಕೃಪಾ', ಅಂಚೆ : ಮರವಂತೆ,*
*ಕುಂದಾಪುರ ತಾಲೂಕು, ಉಡುಪಿ*
*ದೂರವಾಣಿ : 08254 255068, 94806 26885*


ಮದ್ದಳೆ, ಚಂಡೆ, ಭಾಗವತಿಕೆಯೆಂಬ ಹಿಮ್ಮೇಳದ ಸರ್ವಾಂಗೀಣ ಕಲಾ ಪ್ರತಿಭೆಯಾಗಿ ಗುರುತಿಸಿಕೊಂಡ ಅನುಭವಿ ಕಲಾವಿದ ರಾಮದಾಸ್ ಮರವಂತೆ.

ಉಡುಪಿಜಿಲ್ಲೆಯ ಕುಂದಾಪುರ ತಾಲೂಕಿನ ಮರವಂತೆಯ ಹಿರಿಯ ಭಾಗವತ ಶ್ರೀನಿವಾಸ ದಾಸ್ ಮಹಾಲಕ್ಷ್ಮೀದಾಸ್ ದಂಪತಿಯ ಸುಪುತ್ರರಾಗಿ 29-11-1967ರಲ್ಲಿ ಜನಿಸಿದ ರಾಮದಾಸ್ ಅವರು ಎಂಟನೇ ತರಗತಿಯವರೆಗಿನ ಅಕ್ಷರ ಶಿಕ್ಷಣದ ಬಳಿಕ ಅಂದರೆ ತನ್ನ ಹನ್ನೆರಡರ ಹರೆಯದಲ್ಲೇ ಯಕ್ಷಗಾನ ರಂಗ ಪ್ರವೇಶಿಸಿದರು. ಇವರ ತಂದೆ ಹಾಗೂ ದೊಡ್ಡಪ್ಪ ನರಸಿಂಹ ದಾಸರು ಬಡಗುತಿಟ್ಟು ರಂಗಭೂಮಿ ಕಂಡ ಪರಂಪರೆಯ ಶ್ರೇಷ್ಠ ಭಾಗವತರಾಗಿದ್ದರು. ಅಂತಹ ಕಲಾ ಕುಟುಂಬದ ಕುಡಿಯಾದ ಇವರಿಗೆ ಕಲೆಯೆಂಬುದು ಜನ್ಮಜಾತ ಬಳುವಳಿ-ಯಾಯಿತು. ಅಪ್ಪ ಹಾಗೂ ದೊಡ್ಡಪ್ಪನವರೇ ಇವರಿಗೆ ಯಕ್ಷಗುರುವರರಾಗಿ ಸುಯೋಗ್ಯ ರಂಗಶಿಕ್ಷಣ ನೀಡಿದರು.

ಸೌಕೂರು 5, ಹಾಲಾಡಿ 2, ಕಳುವಾಡಿ 3, ಕಮಲಶಿಲೆ 5, ಮಾರಣಕಟ್ಟೆ 14, ಹೀಗೆ ಕಲಾಯಾತ್ರೆಯಲ್ಲಿ ಸಾರ್ಥಕ 29 ವರ್ಷಗಳನ್ನು ಕಳೆದವರು ರಾಮದಾಸರು. ರಾಮದಾಸರ ಮದ್ದಳೆವಾದನ ಹಾಗೂ ಚಂಡೆವಾದನ ಶಾಸ್ತ್ರ ಚೌಕಟ್ಟಿನಲ್ಲಿಯೇ ಇರುವಂತದ್ದು. ಅವರ ನವಿರಾದ ನುಡಿತ ಭಣಿತಗಳು ಗಾನ ಪೋಷಕವೂ ರಂಗಕಲಾವಿದರ ನೃತ್ಯ, ರಸಭಾವ ಪೂರಕವೂ ಆಗಿದೆ. ಖಚಿತ ಲಯಸಿದ್ಧಿ, ತೀವ್ರ ವಿಲಂಬಗತಿಯಲ್ಲಿಯ ಬೆರಳುಗಾರಿಕೆಯ ಕೌಶಲ ಅದ್ಭುತವಾದದ್ದು. ಶ್ರೀಯುತರ ರಂಗಪ್ರಜ್ಞೆಯೂ ಅಸಾಧರಣ.

ಬಿಡುವಿನ ವೇಳೆಯಲ್ಲಿ ಚಂಡೆ-ಮದ್ದಳೆ ತಯಾರಿಕೆಯ ಕಾಯಕದಲ್ಲಿ ಶ್ರೀರಾಮದಾಸ್ ತೊಡಗಿಕೊಳ್ಳುತ್ತಾರೆ. ಆ ವಿಭಾಗದಲ್ಲಿ ಸದ್ಯ ಬಡಗುತಿಟ್ಟಿನಲ್ಲಿ ಅವರು ಜನಪ್ರಿಯ ಕಲಾಕರ್ಮಿ, ಮಡದಿ ಸುಗುಣ. ದರ್ಶನ ಸಿಂಚನ ಮಕ್ಕಳು.

ಇವರ ಉನ್ನತ ಕಲಾವ್ಯಕ್ತಿತ್ವವನ್ನು ಗುರುತಿಸಿದ ನಾಡಿನ ಹಲವು ಸಂಘ-ಸಂಸ್ಥೆಗಳು ಗೌರವಿಸಿವೆ.



**ರಾಮಭಂಡಾರಿ, ಕರ್ಕಿ**

*ಅಂಚೆ ಕರ್ಕಿ, ಹೊನ್ನಾವರ ತಾಲೂಕು (ಉ.ಕ)*

*ದೂರವಾಣಿ 94488 43892*

ಸ್ಪುಟವಾದ ಹೊರಳಿಕೆ, ನಯವಾದ ನುಡಿಸಾಣಿಕೆಯಲ್ಲಿ ಕಲಾವಿದನ ಭಾವಪೂರ್ಣ ಅಭಿವ್ಯಕ್ತಿಯನ್ನು ಅರ್ಥೈಸಿಕೊಂಡ ಚಂಡೆವಾದನ ಶೈಲಿಯಲ್ಲಿ ಗುರುತಿಸಲ್ಪಡುವ ಚಂಡೆಗಾರ ಕರ್ಕಿ ರಾಮಭಂಡಾರಿ.

ಉತ್ತರಕನ್ನಡದ ಕರ್ಕಿ ಎಂಬಲ್ಲಿ 6-7-1966ರಲ್ಲಿ ಸತ್ಯನಾರಾಯಣ ಭಂಡಾರಿ-ಪಾರ್ವತಿ ದಂಪತಿಯ ಸುಪುತ್ರನಾಗಿ ಜನಿಸಿದ ರಾಮಭಂಡಾರಿ ಅವರು 7ನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ನಡೆಸಿ ತನ್ನ 23ನೇ ವಯಸ್ಸಿನಲ್ಲಿ ಯಕ್ಷಲೋಕವನ್ನು ಪ್ರವೇಶಿಸಿದರು.

ಶ್ರೀಯುತರದ್ದು ಕಲಾವಂತ ಮನೆತನ. ಇವರ ತಂದೆ, ಚಿಕ್ಕಪ್ಪ, ಅಣ್ಣ ತಮ್ಮ ಎಲ್ಲರೂ ಯಕ್ಷಗಾನರಂಗಭೂಮಿಯ ಹಿಮ್ಮೇಳದ ವಾದನ ಕಲಾವಿದರು. ಹಾಗಾಗಿ ಇಂತಹ ಬಲಿಷ್ಠ ಕಲಾಹಿನ್ನೆಲೆಯೊಂದಿಗೆ ಸ್ವಯಂ ಆಸಕ್ತಿಯನ್ನು ಮುಂದಿಟ್ಟು-ಕೊಂಡು ಯಕ್ಷಗಾನ ವಾದನ ಪ್ರಪಂಚವನ್ನು ಸೇರಿ ಗೆಲುವು ಕಂಡರು.

ತಂದೆ ಸತ್ಯನಾರಾಯಣ ಭಂಡಾರಿ ಹಾಗೂ ಚಿಕ್ಕಪ್ಪ ಕರ್ಕಿ ಪ್ರಭಾಕರ ಭಂಡಾರಿ ಅವರು ರಾಮಭಂಡಾರಿಯವರಿಗೆ ಗುರುಗಳಾಗಿ ಸುಯೋಗ್ಯ ಚಂಡೆ ಮದ್ದಳೆವಾದನ ಕಲೆಯನ್ನು ಬೋಧಿಸಿದರು.

ಗೋಳಿಗರಡಿ 1, ಬಚ್ಚಗಾರು 4, ಸೌಕೂರು 4, ಹಾಲಾಡಿ 2, ಮಾರಣಕಟ್ಟೆ 9, ಹೀಗೆ ಕಲಾಪ್ರಪಂಚದಲ್ಲಿ ಸಾರ್ಥಕ 'ವಿಂಶತಿ' ವರ್ಷದ ಕಲಾಕೃಷಿ ಪೂರೈಸಿದ್ದಾರೆ. ಪ್ರಸ್ತುತ ಮಾರಣಕಟ್ಟೆ ಮೇಳದ ಚಂಡೆವಾದಕರಾಗಿ ದುಡಿಯುತ್ತಿದ್ದಾರೆ.

ಉಪವೃತ್ತಿಯಾಗಿ ಮಣ್ಣಿನಗಣೇಶ ಮೂರ್ತಿ ರಚನೆ ಹಾಗೂ ಸಮಾರಂಭ-ಗಳಿಗೆ ಮಂಗಲವಾದ್ಯ ಕಲಾವಿದರಾಗಿ ಭಾಗವಹಿಸುತ್ತಿದ್ದಾರೆ. ಮಡದಿ ಪಾರ್ವತಿ, ರತನ್, ರಮ್ಯ ಮಕ್ಕಳು. ಶ್ರೀಯುತರನ್ನು ಅನೇಕ ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



ಲಕ್ಷ್ಮಣ ಭಂಡಾರಿ, ಹೊಸಂಗಡಿ

*ಹೊಸಂಗಡಿ – ಕೊಡ್ಲು ಗುಡ್ಡೆ ಮನೆ, ಅಂಚೆ: ಕನ್ಯಾನ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 93425 09546*

ಪೌರಾಣಿಕ ರಂಗಾನುಭವದೊಂದಿಗೆ, ಸದಭಿರುಚಿಯ ಹಾಸ್ಯಗಾರಿಕೆಯಲ್ಲಿ ರಂಜಿಸುವ ಹಿರಿಯ ಹಾಸ್ಯನಟ ಹೊಸಂಗಡಿ ಲಕ್ಷ್ಮಣ ಭಂಡಾರಿ.

ಕುಂದಾಪುರ ತಾಲೂಕಿನ ಹೊಸಂಗಡಿಯ ಬಾಳೆಜಡ್ಡು ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಲಕ್ಷಣ ಭಂಡಾರಿಯವರು ಕೊರಗು ಭಂಡಾರಿ- ಕಲ್ಯಾಣಿಬಾಯಿ ದಂಪತಿಯ ಸುಪುತ್ರ, ಶ್ರೀಯುತರ ಪ್ರಾಯ 46. ಮೂರನೇ ತರಗತಿಯವರೆಗಿನ ಶೈಕ್ಷಣಿಕ ಬಲವನ್ನಷ್ಟೇ ಕಂಡ ಭಂಡಾರಿ ಅವರು ತನ್ನ 13ರ ಕಿರು ಹರೆಯದಲ್ಲೇ ಯಕ್ಷಗಾನ ಬಣ್ಣದ ಬದುಕು ಕಂಡವರು.

ಸುಪ್ರಸಿದ್ಧ ಹಾಸ್ಯಗಾರ ಕುಂಜಾಲು ರಾಮಕೃಷ್ಣ ಅವರು ಇವರಿಗೆ ಸಂಬಂಧದಲ್ಲಿ ಬಾವ, ಹಾಗಾಗಿ ಕುಂಜಾಲು ಅವರ ಹಾಸ್ಯ ಅನುಭವವೂ ಭಂಡಾರಿಯವರಿಗೆ ದಕ್ಕಿದೆ. ಕುಂಜಾಲು ಹಾಗೂ ಪದ್ಮನಾಭ ಭಂಡಾರಿ ಅವರು ಲಕ್ಷಣ ಭಂಡಾರಿ ಅವರ ಕಲಾಬದುಕಿಗೆ ಪ್ರೇರಣೆಯಾದವರು. ಹಾರಾಡಿ ಸರ್ವೋತ್ತಮ ಗಾಣಿಗ ಹಾಗೂ ಪದ್ಮನಾಭ ಭಂಡಾರಿ ಅವರಲ್ಲಿ ನೃತ್ಯ, ಅಭಿನಯ, ರಂಗಾನುಭವವನ್ನು ಪಡೆದ ಲಕ್ಷಣ ಭಂಡಾರಿ ಅವರು ವೃತ್ತಿರಂಗ ಭೂಮಿಯಲ್ಲಿ ಹಾಸ್ಯಗಾರಿಕೆಯನ್ನು ಆಶ್ರಯಿಸಿ ಗೆಲವು ಕಂಡರು.

ಹಾಲಾಡಿ, ಸೌಕೂರು, ಕಮಲಶಿಲೆ, ಗೋಳಿಗರಡಿ, ಅಮೃತೇಶ್ವರಿ, ಕಳವಾಡಿ, ಶಿರಸಿ, ಹಿರಿಯಡಕ, ಮೇಳಗಳಲ್ಲಿ 29ವರುಷಗಳ ಕಾಲ ಕಲಾಯಾತ್ರೆ ನಡೆಸಿದ ಭಂಡಾರಿ ಅವರು ಪ್ರಸ್ತುತ ಹಿರಿಯಡಕ ಮೇಳದ ಪ್ರಧಾನ ಹಾಸ್ಯಕಲಾವಿದರಾಗಿ ದುಡಿಯುತ್ತಿದ್ದಾರೆ.

ಪೌರಾಣಿಕ ಪ್ರಸಂಗಗಳಲ್ಲಿ ಬರುವ ಪಾಪಣ್ಣ, ಬಾಹುಕ, ಚಂದಗೋಪ, ನಕ್ಷತ್ರಿಕ, ದಾರುಕ, ವಿಜಯ, ಕಾಳಿದಾಸ, ಮೊದಲಾದ ಭೂಮಿಕೆಗಳನ್ನು ಸಮರ್ಥ ವಾಗಿ ಪೋಷಿಸುವ ಅನುಭವಿ ಹಾಸ್ಯಗಾರ ಲಕ್ಷ್ಮಣಭಂಡಾರಿಯವರು, ವೃತ್ತಿ ಬದುಕಿನ ಬಿಡುವಿನ ವೇಳೆಯಲ್ಲಿ ಯಕ್ಷಗಾನ ವೇಷಭೂಷಣ ತಯಾರಿಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಪತ್ನಿ ಸರೋಜ ಭಂಡಾರಿ, ಸುಬ್ರಹ್ಮಣ್ಯ, ರಾಧಿಕಾ, ವಿಜಯಲಕ್ಷ್ಮೀ ಮಕ್ಕಳು. ಶ್ರೀಯುತರನ್ನು ಕೋಟ ಅಮೃತೇಶ್ವರಿ ಯಕ್ಷಗಾನ ಮಂಡಳಿವತಿಯಿಂದ ಸಮ್ಮಾನಿಸಲಾಗಿದೆ.



ಲಕ್ಷ್ಮೀನಾರಾಯಣಯ್ಯ, ಸಕ್ಕಟ್ಟು

'ಲಕ್ಷ್ಮೀ ನಿಲಯ', ಅಂಚೆ : ಗುಲ್ವಾಡಿ, ಕುಂದಾಪುರ
ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ 08254 – 271390

ಬಡಗುತಿಟ್ಟಿನ 'ಬಣ್ಣದ ವೇಷ'ಕ್ಕೆ ಪರ್ಯಾಯ ಪದ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ, ಪರಂಪರೆಯ ಬಲಿಷ್ಠ ಚೌಕಟ್ಟಿನಲ್ಲಿ ದೈತ್ಯ ಪ್ರತಿಭೆಯನ್ನು ಪ್ರದರ್ಶಿಸಿ ಅಪಾರ ಪ್ರೇಕ್ಷಕರ ಮನಸೂರೆಗೊಂಡು ಬಣ್ಣ ಭಯಂಕರನಾಗಿ ಮೆರೆದ ಹಿರಿಯ ಕಲಾವಿದ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ,

ಉಡುಪಿ ತಾಲೂಕಿನ ಶಿರಿಯಾರ ಗ್ರಾಮದ ಸಕ್ಕಟ್ಟು ಎಂಬಲ್ಲಿ 26-03-1925 ರಂದು ಸಕ್ಕಟ್ಟು ಸುಬ್ಬಣ್ಣಯ್ಯ-ರಾಜಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಲಕ್ಷ್ಮೀ-ನಾರಾಯಣಯ್ಯನವರಿಗೆ ಓದು ನಾಕಕ್ಕೇ ಸಾಕಾಯಿತು ! ತನ್ನ 13ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಸಕ್ಕಟ್ಟು ಅವರಿಗೆ ಸ್ವಯಂ ಪ್ರೇರಣೆಯೇ ಕಲಾ ಜೀವನಕ್ಕೆ ಕಾರಣವಾಯಿತು. ಇವರ ತಂದೆ ವೇಷಧಾರಿಯಾಗಿದ್ದುದರಿಂದ ರಂಗಜೀವನಕ್ಕೆ ಅದೇ ರಕ್ತಗುಣವಾಯಿತು. ಜಂಬೂರು ಶ್ರೀನಿವಾಸ ಭಾಗವತ, ಪಾಂಡೇಶ್ವರ ಸದಾಶಿವಯ್ಯನವರ ಗುರುತನದಲ್ಲಿ ಯಕ್ಷಗಾನ ಕಲಾವಿದ್ಯೆ ಸುಸಾಂಗವಾಗಿ ದೊರಕಿತು. ಹೂವಿನಕೋಲು ಚಿಕ್ಕಮೇಳ ತಿರುಗಾಟವೂ ಪುರಾಣ ಅನುಭವವಕ್ಕೆ ಪೂರಕ-ಪ್ರೇರಕವಾಯಿತು. ಮಂದಾರ್ತಿ ಮೇಳದಲ್ಲೇ ಸುದೀರ್ಘ 38ವರ್ಷಗಳ ಕಲಾಸೇವೆಗೈದ ಲಕ್ಷ್ಮೀನಾರಾಯಣಯ್ಯನವರು ಸಾಲಿಗ್ರಾಮ, ಪೆರ್ಡೂರು, ಸೌಕೂರು, ಅಮೃತೇಶ್ವರಿ, ಹೊನ್ನೇಸರ ಮೇಳ ಸೇರಿದಂತೆ ಇವರ ಒಟ್ಟು ಕಲಾ ವ್ಯವಸಾಯ 54 ವರ್ಷ. ಖ್ಯಾತ ಕಲಾವಿದ ಕೊಳ್ಳೆಬೈಲು ಕುಷ್ಠ ಅವರಿಂದ ಮುಖವರ್ಣಿಕೆಯ ವಿಧಾನವನ್ನು ಕರಗತವಾಗಿಸಿಕೊಂಡ ಸಕ್ಕಟ್ಟು ಅವರು ವೇಷಕಟ್ಟಿ ರಂಗಕ್ಕೆ ಬಂದರೆ ಪ್ರತ್ಯಕ್ಷ 'ರಾಕ್ಷಸ'ನೇ ಕಣ್ಣೆದುರು ನಿಂತಂತೆ! ಇವರು ರಾವಣ, ಮೈರಾವಣ, ವೀರಭದ್ರ, ಘಟೋತ್ಕಚ, ಉಗ್ರನರಸಿಂಹ, ಹಿಡಿಂಬ, ಶೂರಪದ್ಮಾಸುರ ಮೊದಲಾದ ಗಂಡು ಬಣ್ಣದ ವೇಷಗಳನ್ನು,

ಶೂರ್ಪನಖಾ, ಹಿಡಿಂಬೆ, ವೃತ್ರಜ್ವಾಲೆ, ಮೊದಲಾದ ಹೆಣ್ಣುಬಣ್ಣದ ವೇಷಗಳನ್ನೂ ನಿರ್ವಹಿಸಿ ರಸಿಕರನ್ನು ಬೆರಗುಗೊಳಿಸಿದ ವ ರು. ಬಣ್ಣದವೇಷಗಳಲ್ಲದೆ, ದಶರಥ, ಮಯೂರಧ್ವಜ, ಹಂಸಧ್ವಜ ಮೊದಲಾದ ರಾಜವೇಷಗಳನ್ನು ಧರಿಸಿ ರಂಗವಲ್ಲಿ ಮೆರೆದವರು.

ಪತ್ನಿ ಲಕ್ಷ್ಮಿ, ಭಾಗೀರಥಿ, ಮಂಜುನಾಥಯ್ಯ, ಜಾನಕಿ, ಜಯರಾಮ, ರಮೇಶ, ಶಾರದಾ, ಶ್ಯಾಮಲ, ಶಕುಂತಲಾ, ರಾಘವೇಂದ್ರ ಎಂಬ 9 ಮಂದಿ ಮಕ್ಕಳನ್ನು ಪಡೆದು ತುಂಬು ಸಂಸಾರಸ್ಥರಾದ ಸಕಟ್ಟು ಲಕ್ಷ್ಮೀನಾರಾಯಣಯ್ಯ-ನವರ ಕಿರಿಯ ಪುತ್ರ ರಾಘವೇಂದ್ರ ಸಕ್ಕಟ್ಟು ಯುವ ಮದ್ದಳೆವಾದಕರಾಗಿ ಯಕ್ಷಗಾನ ರಂಗಭೂಮಿಯಲ್ಲಿ ಸೇವಾತತ್ಪರರಾಗಿದ್ದಾರೆ. ಸಕ್ಕಟ್ಟು ಅವರನ್ನು ಅನೇಕಾನೇಕ ಪ್ರಶಸ್ತಿ ಗೌರವಗಳೂ ಅರಸಿ ಬಂದಿವೆ. ಇವರನ್ನು ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರೂ ಹಾಗೂ ರಾಷ್ಟ್ರಪತಿ ರಾಜೇಂದ್ರ ಪ್ರಸಾದ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಶಿವರಾಮ ಕಾರಂತರ ಯಕ್ಷರಂಗ ತಂಡದ ಮೂಲಕ ದೇಶ-ವಿದೇಶಗಳಲ್ಲಿ ಕಲಾಪ್ರತಿಭೆಯನ್ನು ಮೆರೆದ ಲಕ್ಷ್ಮೀನಾರಾಯಣಯ್ಯನವರಿಗೆ 1986ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, 1993ರಲ್ಲಿ ಮುಂಬಯಿ ಪದವೀಧರ ಯಕ್ಷಗಾನ ಪ್ರಶಸ್ತಿ ಶ್ರೀರಾಮ-ವಿಠಲಪ್ರಶಸ್ತಿ, ನಿಟ್ಟೂರು ಭೋಜಪ್ಪ ಸುವರ್ಣ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಡಾ. ಬಿ. ಬಿ. ಶೆಟ್ಟಿ ಪ್ರಶಸ್ತಿ, ಹಾರಾಡಿ ರಾಮ ಗಾಣಿಗ ಪ್ರಶಸ್ತಿಯೂ ದೊರಕಿರುತ್ತದೆ.



ಲಕ್ಷ್ಮೀನಾರಾಯಣ ಹೆಗಡೆ. ಎಸ್. ವಿ.

*ಸಂಪ, ಅಂಚೆ : ಅರಳಗೋಡು,*
*ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 08186 243008, 94802 80608*

ಪ್ರಸಂಗಗಳ ಸಮಗ್ರಭಾವ ಭಂಗವಾಗದಂತೆ, ಪಾತ್ರಗಳ ಗುಣಧರ್ಮವನ್ನು ಸಂಪೂರ್ಣ ಅರ್ಥೈಸಿಕೊಂಡು ಪದ್ಯಸಾಹಿತ್ಯದ ಕಟ್ಟು ಕೆಡದಂತೆ ಗಾನಪೂರಕವಾಗಿ ಚಂಡೆ ನುಡಿಸುವ ಅನುಭವಿ ಚಂಡೆವಾದಕ ಶ್ರೀ ಎಸ್. ವಿ. ಲಕ್ಷ್ಮೀನಾರಾಯಣ ಹೆಗಡೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಸಂಪ ಸರಸ್ವತಿ, ಸೌಮ್ಯ, ಸಂದೇಶ ಮಕ್ಕಳು. ಶ್ರೀಯುತರಿಗೆ ಎಂಬಲ್ಲಿ 25-5-1960ರಲ್ಲಿ ಜನಿಸಿದ ಲಕ್ಷ್ಮೀನಾರಾಯಣ ಹೆಗಡೆ ವಿಶ್ವೇಶ್ವರಯ್ಯ-ಲಕ್ಷ್ಮಮ್ಮ ದಂಪತಿಯ ಸುಪುತ್ರ, 7ನೇ ತರಗತಿಯ ವರೆಗಿನ ವಿದ್ಯಾಭ್ಯಾಸದ ತರುವಾಯ, 15ನೇ ವಯಸ್ಸಿನಲ್ಲಿ ಮನದಲ್ಲಿ ಯಕ್ಷಗಾನ ಪ್ರಪಂಚ ಹೊಕ್ಕ ಲಕ್ಷ್ಮೀನಾರಾಯಣ ಹೆಗಡೆ ಸಮರ್ಥ ಚಂಡೆಗಾರರಾಗಿ ಖ್ಯಾತಿ ಪಡೆದವರು.

ಸಂಪ ಲಕ್ಷ್ಮೀನಾರಾಯಣ ಅವರ ಅಜ್ಜ ಭಾಗವತರು, ಚಿಕ್ಕಪ್ಪ ವೇಷಧಾರಿ-ಯಾಗಿದ್ದರು. ಹಾಗಾಗಿ ಕಲಾಸಂಸ್ಕಾರವೆನ್ನವುದು ಶ್ರೀಯುತರಿಗೆ ಕೌಟುಂಬಿಕ ಹಿನ್ನೆಲೆಯಲ್ಲಿ ಎಳವೆಯಲ್ಲೇ ಮೈಗೂಡಿತು. ಪ್ರಸಂಗಕರ್ತ ಗುಂಡು ಸೀತಾರಾಮ ತಲವಾಟ ಹಾಗೂ ಮನೆಯವರ ಸಂಪೂರ್ಣ ಸಹಕಾರ, ಪ್ರೇರಣೆಯಿಂದ ಕಲಾಜೀವನದ ಹಾದಿ ಹಿಡಿದ ಸಂಪ ಅವರು ಗೋಡೆ ನಾರಾಯಣ ಹೆಗಡೆ-ಯವರಲ್ಲಿ ನೃತ್ಯ ಕಲೆಯನ್ನು ಗಜಾನನ ಭಂಡಾರಿ ಗುಣವಂತೆ ಅವರಲ್ಲಿ ಚಂಡೆ-ಮದ್ದಳೆ ವಾದನದ ತರಬೇತಿಯನ್ನು ವ್ಯವಸ್ಥಿತವಾಗಿ ಪಡೆದವರು.

ಅಮೃತೇಶ್ವರಿ 2, ಸಾಲಿಗ್ರಾಮ 4, ಹಿರಿಯಡಕ 1, ಮೂಲ್ಕಿ 1, ಶಿರಸಿ-ಪಂಚಲಿಂಗ 2, ಬಚ್ಚಗಾರು 5, ಪೂರ್ಣಚಂದ್ರಮೇಳ 10, ಹೀಗೆ ಕಲಾ ವ್ಯವಸಾಯದಲ್ಲಿ ಬೆಳ್ಳಿ ವಸಂತವನ್ನು ಕಂಡಿದ್ದಾರೆ. ಪ್ರತಿಭಾನ್ವಿತ ಕಲಾವಿದರಾದ ಲಕ್ಷ್ಮೀನಾರಾಯಣ ಹೆಗಡೆ ಅವರು ಹಿಮ್ಮೇಳದಲ್ಲಿ ಸಮರ್ಥ ಪ್ರಭುತ್ವ ಕಂಡುಕೊಂಡಂತೆ, ಮುಮ್ಮೇಳದಲ್ಲೂ ಸಮರ್ಥ ಕಲಾವಂತಿಕೆ ಹೊಂದಿದವರು. ವೃತ್ತಿ ಬದುಕಿನ ಮೊದಲವರ್ಷ ವೇಷಧಾರಿಯಾಗಿಯೇ ಸೇವೆ ಸಲ್ಲಿಸಿರುವವರು. ಪುಂಡುವೇಷಗಳನ್ನೂ, ಸ್ತ್ರೀವೇಷಗಳನ್ನೂ ಮಾಡಿ ಸೈ ಅನ್ನಿಸಿಕೊಂಡಿದ್ದಾರೆ.

ಸಂಪ ಲಕ್ಷ್ಮೀನಾರಾಯಣ ಬಾಳಿನ ಜೊತೆಗಾತಿ ಸರಸ್ವತಿ. ಸೌಮ್ಯ ಸಂದೇಶ ಮಕ್ಕಳು. ಶ್ರೀಯುತರಿಗೆ ದಿ. ಕೊಂಡದಕುಳಿ ರಾಮಹೆಗಡೆ ಪ್ರಶಸ್ತಿ, ರಾಘವೇಶ್ವರ ಪ್ರಶಸ್ತಿ, ಮಧ್ಯಪ್ರದೇಶದ ನೊರೊನಾದಲ್ಲಿ ಪುರಸ್ಕಾರ ದೊರಕಿರುತ್ತದೆ.



**ವಾಸುದೇವ ವಿಷ್ಣು ಭಟ್**

*ಗುಂಡಿಬೈಲು, ಅಂಚೆ : ಚಿಕ್ಕನ ಕೋಡ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 93437 12305*

ಪ್ರೌಢ ಪುರಾಣಜ್ಞಾನಸಂಪನ್ನ ಹಿರಿಯ ಚಂಡೆವಾದಕ ವಾಸುದೇವ ವಿಷ್ಣು ಭಟ್. ಉತ್ತರಕನ್ನಡದ ಗುಂಡಿಬೈಲು ವಾಸುದೇವಭಟ್ಟರ ಹುಟ್ಟೂರು. 15-8-1940ರಲ್ಲಿ ವಿಷ್ಣು ರಾಮ ಭಟ್ಟ- ಭಾಗೀರಥಿ ದಂಪತಿಯ ಪುತ್ರನಾಗಿ ಜನಿಸಿದ ಶ್ರೀಯುತರ ಅಕ್ಷರ ಶಿಕ್ಷಣ ನಾಲ್ಕನೇ ತರಗತಿಯವರೆಗೆ ಮಾತ್ರ ವಾಸುದೇವ ಭಟ್ಟರ ಅಜ್ಜ ವೇಷಧಾರಿ. ಹೀಗಾಗಿ ಯಕ್ಷಗಾನ ಕಲಾಸಕ್ತಿ ಎಳವೆಯಲ್ಲಿಯೇ ಮೈಗೂಡಿತು. ತನ್ನ 16 ಹರೆಯದಲ್ಲಿ ಬಣ್ಣದ ಬಾಳುವೆಗೆ ಮನಮಾಡಿದ ಭಟ್ಟರು ಹಿಮ್ಮೇಳದ ಚಂಡೆವಾದನ ಕಲಾವಿದರಾಗಿ ಗುರುತಿಸಿಕೊಂಡರು. ಶ್ರೀಯುತರಿಗೆ ಚಂಡೆವಾದನ ಕಲೆ, 'ಏಕಲವ್ಯ ಪ್ರಯೋಗ'ದಂತೆ ಸ್ವಯಂ ಸಿದ್ಧಿಯಾದುದು ನಿಜಕ್ಕೂ ವಿಶೇಷ ವೆನಿಸುತ್ತದೆ.

ಅಮೃತೇಶ್ವರಿ 1, ಹಾಲಾಡಿ 1, ಮಾರಣಕಟ್ಟೆ 19, ಕಮಲಶಿಲೆ 4, ಇಡಗುಂಜಿ 2, ಬಚ್ಚಗಾರು 1, ಸಾಲಿಗ್ರಾಮ 1, ಗುಂಡಬಾಳ 20 ಹೀಗೆ ವಾಸುದೇವಭಟ್ಟರು 49 ವರ್ಷ ಪೂರೈಸಿದ್ದಾರೆ. ಅನುಭವಿ ಚಂಡೆಗಾರರಾದ ಭಟ್ಟರ ವಾದನ ಪದ್ಧತಿ ಪಾರಂಪರಿಕವಾದದ್ದು. ಚಂಡೆಯ ಗುಂಡಿಗೆಯಿಂದ ನಾದಪೂರ್ಣ ನುಡಿಮಿಡಿತದಿಂದ ಯಕ್ಷನಟನ ಪಾತ್ರಾಭಿವ್ಯಕ್ತಿಗೆ, ಭಾಗವತರ ಗಾನ ಪ್ರಸ್ತುತಿಗೆ ಸುಯೋಗ್ಯ ಸಾಂಗತ್ಯ ಒದಗಿಸುವ ವಿಶೇಷ ಕಲಾವಂತಿಕೆ ಇವರಲ್ಲಿ ನಿಚ್ಚಳವಾಗಿ ಗುರಿತಿಸಬಹುದಾಗಿದೆ. ಹಿರಿಯ ಚಂಡೆವಾದಕರಾದ ವಾಸುದೇವ ಭಟ್ಟರ ಗರಡಿಯಲ್ಲಿ ಪಳಗಿದ ಅನೇಕ ಚಂಡೆವಾದಕರು ವೃತ್ತಿರಂಗದಲ್ಲಿ ಪ್ರತಿಭಾವಂತರಾಗಿ ಬೆಳಗುತ್ತಿದ್ದಾರೆ.

ಶ್ರೀಯುತರ ಸಹಧರ್ಮಿಣಿ ಲಕ್ಷ್ಮಿ, ಈಗಲೂ ಗುಂಡಬಾಳ ಮೇಳದಲ್ಲಿ ಶ್ರೀಯುತರು ಕಲಾಸೇವಾತತ್ಪರರು. ಅನೇಕ ಸಂಘ ಸಂಸ್ಥೆಗಳು ಇವರನ್ನು ಸಂಮಾನಿಸಿವೆ.



ವಿದ್ಯಾಧರ, ಜಲವಳ್ಳಿ

*ಅಂಚೆ : ಜಲವಳ್ಳಿ, ಹೊನ್ನಾವರ ತಾಲೂಕು,*
*ಕಾರವಾರ ಜಿಲ್ಲೆ*

ಗಂಡುಕಲೆಯ ಪ್ರಚಂಡ ಕಲಾಪ್ರತಿಭೆ ವಿದ್ಯಾಧರ ಜಲವಳ್ಳಿ, ನಿರ್ವಹಣಾ ಭೂಮಿಕೆಗಳಿಗೆ ತನ್ನದೇ ವಿಶಿಷ್ಟ ಕಲಾ ನೈಪುಣ್ಯದಿಂದ ಜೀವಕಳೆ ನೀಡುವ ಪ್ರಬುದ್ಧ ಕಲಾವಿದ, ನಾಯಕ, ಖಳನಾಯಕ, ಪಾತ್ರಗಳೆರಡಲ್ಲೂ ಸಮಾನ ಪ್ರಭುತ್ವ ಕಂಡುಕೊಂಡ ವಿದ್ಯಾಧರ ಜಲವಳ್ಳಿ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡ ಸಂಪನ್ನ ಪ್ರತಿಭೆ.

ಉತ್ತರಕನ್ನಡದ ಜಲವಳ್ಳಿಯೇ ಇವರ ಹುಟ್ಟೂರು, ಪ್ರಖ್ಯಾತ ಕಲಾವಿದ ಜಲವಳ್ಳಿ ವೆಂಕಟೇಶ ರಾವ್ ಇವರ ತಂದೆ. ತಾಯಿ ಕಲ್ಯಾಣಿ, 12-7- 1972ರಲ್ಲಿ ಜನಿಸಿದ ವಿದ್ಯಾಧರ ಜಲವಳ್ಳಿಯವರ ಓದು ಎಂಟನೇ ತರಗತಿಯವರೆಗೆ ಮಾತ್ರ. 16ರ ಹರೆಯದಲ್ಲೇ ಇವರ ರಂಗಪ್ರವೇಶ.

ತಂದೆಯವರ ವೇಷಗಳು ಹಾಗೂ ಪ್ರಸಿದ್ಧಿಯೇ ಅವರಿಗೆ ಕಲಾಪ್ರೇರಣೆ, ಪಾತ್ರ ಸ್ವಭಾವವನ್ನರಿತ ನೃತ್ಯಾಭಿನಯ, ಗತ್ತು-ಗಾಂಭೀರದ ರಂಗವೈಖರಿ, ಆಕರ್ಷಕ ವೇಷಗಾರಿಕೆ, ತೂಕದ ಸ್ವರಭಾರ, ಜಲವಳ್ಳಿಯವರ ಕಲಾಸಂಕೇತಗಳು, ಪುರಾಣ ಪಾತ್ರಗಳ ಪರಿಣಾಮಕಾರಿ ರಂಗಾಭಿವ್ಯಕ್ತಿಯೊಂದಿಗೆ, ವಚೋವೈಭವದ ರಸಗಡಲಿನಲ್ಲಿ ವರ್ತಮಾನದ ವೈಚಾರಿಕತೆಯ ರಂಗತರಂಗಗಳನ್ನು ಸೃಷ್ಟಿಸುವ ಸೃಜನಶೀಲಕಲಾವಿದ ಜಲವಳ್ಳಿ ವಿದ್ಯಾದರ ಪ್ರತೀ ಪಾತ್ರಗಳಿಗೂ ಅವರದ್ದೇ ಆದ ಸ್ಪಷ್ಟ ಸ್ವರೂಪ ನೀಡಿದ್ದಾರೆ.

ಸುಧನ್ವ, ಅರ್ಜುನ, ಕೌರವ, ಮಾಗಧ, ವಿಶ್ವಾಮಿತ್ರ, ವೀರಮಣಿ, ಕೀಚಕ, ಬಲರಾಮ, ಭದ್ರಸೇನ, ಕಂಸ, ವಾಖ್ಯ, ಕೌಂಡ್ಲಕ ಮೊದಲಾದ ಪೌರಾಣಿಕ ಭೂಮಿಕೆಗಳಿಗೆ ವಿಶಿಷ್ಟ ಮೆರುಗು ನೀಡಿದ ಪ್ರತಿಭಾ ಶಾಲಿ ಕಲಾವಿದರಿವರು.

ಬಾಳಿನ ಜೊತೆಗಾತಿ ಜಾಹ್ನವಿ ಜಲವಳ್ಳಿ, ಪುತ್ರ ಕಲಾಧರ. ಬಡಗುತಿಟ್ಟಿನಲ್ಲಿ ನಡುಬಡುಗು ಹಾಗೂ ಬಡಾಬಡಗು ಎರಡೂ ಇವರಲ್ಲಿ ಸುಪುಷ್ಟವಾಗಿ ಮೇಲ್ಯೆಸಿ ಕಲಾರಸಿಕರಿಗೆ ವಿಶೇಷ ಮುದವನ್ನು ನೀಡಿದೆ.

ಗುಂಡಬಾಳ 1, ಗೋಳಿಗರಡಿ 2, ಕಮಲಶಿಲೆ 5, ಸಾಲಿಗ್ರಾಮ 2, ಪೆರ್ಡೂರು 12, ಹೀಗೆ 22ವರ್ಷಗಳ ಸಾರ್ಥಕ ಕಲಾ ತಿರುಗಾಟದಲ್ಲಿ ಯಶಸ್ಸು ಸಂಪಾದಿಸಿದ್ದಾರೆ.

ಶ್ರೀಯುತರು ಹಲವು ಸಂಘ-ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ. ವರ್ತಮಾನದ ಯಕ್ಷಗಾನ ರಂಗಭೂಮಿಯ ಬಹುಬೇಡಿಕೆಯ ಕಲಾವಿದರಾಗಿ ರೂಪುಗೊಂಡಿದ್ದಾರೆ.



ವಿಶ್ವನಾಥ ಗಾಣಿಗ, ಕೋಡಿ

*ಅಂಚೆ: ಕೋಡಿ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*

ಮಧ್ಯಮ ಬಡಗಿನ ಸೊಗಸು ತುಂಬಿದ ವೇಷಗಾರಿಕೆ, ಗಂಭೀರ ಸ್ವರಭಾರದ ಅರ್ಥಗಾರಿಕೆ, ಗತ್ತು-ಗೈರತ್ತಿನ ಪರಿಸುಟ ಅಭಿನಯಯುಕ್ತ ನೃತ್ಯಗಾರಿಕೆ ಹಾಗೂ ಅಗಾಧ ಪೌರಾಣಿಕ ಜ್ಞಾನ ಪೂರ್ಣತೆ ಕಲಾಬದುಕಿನಲ್ಲಿ ಕಾಣಿಸುವ ಸಂಪನ್ನ ಕಲಾವಿದ ಕೋಡಿ ವಿಶ್ವನಾಥ ಗಾಣಿಗ,

ಕುಂದಾಪುರ ತಾಲೂಕಿನ ಕೋಡಿ ಎಂಬಲ್ಲಿ 10-8-1962ರಲ್ಲಿ ಶ್ರೀನಿವಾಸ ಗಾಣಿಗ-ಲಕ್ಷ್ಮೀ ಗಾಣಿಗ ದಂಪತಿಯ ಸುಪುತ್ರನಾಗಿ ಜನಿಸಿದ ವಿಶ್ವನಾಥ ಗಾಣಿಗರು 5ನೇ ಇಯತ್ತೆಗೆ ಶಿಕ್ಷಣ ಮೊಟಕುಗೊಳಿಸಿ ತನ್ನ 14ರ ಹರೆಯದಲ್ಲೇ ಕಲಾಪ್ರಪಂಚಕ್ಕೆ ಅಡಿಯಿರಿಸಿದರು.

ಹಾರಾಡಿ ರಾಮಗಾಣಿಗ, ಕೃಷ್ಣಗಾಣಿಗ, ನಾರಾಯಣ ಗಾಣಿಗ, ಮೊದಲಾದ ಹಾರಾಡಿ ಮನೆತನದ ಶ್ರೇಷ್ಠ ಕಲಾಪರಂಪರೆಯ ಹಿನ್ನೆಲೆಯನ್ನು ಹೊಂದಿದ ಗಾಣಿಗರು ಪ್ರಸಿದ್ಧ ಕಲಾವಿದ ಕೋಡಿಶಂಕರಗಾಣಿಗರ ಸೋದರಳಿಯ. ಕೋಡಿ ಶಂಕರ ಗಾಣಿಗರ ಗುರುತನದಲ್ಲಿ ಸಾರ್ಥಕ ಕಲಾವಿದ್ಯೆಯನ್ನು ಪಡೆದ ಕೋಡಿ ವಿಶ್ವನಾಥ ಗಾಣಿಗರು ಪೌರಾಣಿಕ ಕಥಾನಕಗಳ ನಾಯಕ, ಪ್ರತಿನಾಯಕ, ಖಳನಾಯಕ ಭೂಮಿಕೆಗಳಿಗೆ ಸಮರ್ಪಕ ಪೋಷಣೆ ಒದಗಿಸುವವರು.

ಕಮಲಶಿಲೆ 2, ಹಾಲಾಡಿ 5, ಗೋಳಿಗರಡಿ 2, ಸಾಲಿಗ್ರಾಮ 1, ಅಮೃತೇಶ್ವರಿ 2, ಸೌಕೂರು 22, ಹೀಗೆ ಕಲಾಪ್ರಪಂಚದಲ್ಲಿ 34ವರ್ಷಗಳ ವ್ಯವಸಾಯ ಪೂರೈಸಿ ಸೌಕೂರು ಮೇಳದ ಪ್ರಧಾನ ವೇಷಧಾರಿಯಾಗಿ ದುಡಿಯುತ್ತಿದ್ದಾರೆ. ವಿಶ್ವನಾಥ ಗಾಣಿಗರ ಕರ್ಣ, ಭಸ್ಮಾಸುರ, ಅರ್ಜುನ, ಕೀಚಕ, ವೀರಮಣಿ, ಶನೀಶ್ವರ, ಕೌಂಡ್ಲಿಕ, ಸುಧನ್ವ, ರಾವಣ, ಜಮದಗ್ನಿ... ಮೊದಲಾದ ಭೂಮಿಕೆಗಳು ರಸಿಕ ಜನಮನದಲ್ಲಿ ಚಿರಸ್ಥಾಯಿಯಾಗಿವೆ.

ಹಾರಾಡಿ ಪರಂಪರೆಯ ಮುಂಡಾಸು ವೇಷಗಳನ್ನು ಸರ್ವಾಂಗೀಣ ಶೋಭೆಯಲ್ಲಿ ರಂಗದಲ್ಲಿ ತೆರೆದಿಡುವ ಕಲಾವಿದ ಕೋಡಿಯವರು ಪತ್ನಿ ಸುಜಾತ ಗಾಣಿಗ, ನಾಲ್ವರು ಪುತ್ರಿಯರ ತುಂಬಿದ ಸಂತೃಪ್ತ ಕುಟುಂಬ ಹೊಂದಿದವರು. ಶ್ರೀಯುತರನ್ನು ಹೆಬ್ಬಾಡಿ ಕೊಂಡಳಬೆಟ್ಟು, ಅನಂತಶೆಟ್ಟರ ಸ್ಮರಣಾರ್ಥ ಸಮಾರಂಭದಂದು ಶೀರೂರು ಎಂಬಲ್ಲಿ ಗೌರವಪೂರ್ವಕ ಸಮ್ಮಾನಿಸಲಾಗಿದೆ.



ವಿಶ್ವೇಶ್ವರ ಸೋಮಯಾಜಿ. ಎಂ.

*ಸಿದ್ಧಾಪುರ ಗ್ರಾಮ, ಅಂಚೆ: ಜನಸಾಲೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08259 203055, 94480 83022*

ಬಡಗುತಿಟ್ಟಿನ ಹಿಮ್ಮೇಳದ ಸರ್ವಾಂಗವನ್ನೂ ಸಂಪೂರ್ಣಬಲ್ಲ, ಮುಮ್ಮೇಳದ ಕುರಿತೂ ಪರಿಣತಿ ಹೊಂದಿದ ಹಿರಿಯ ಭಾಗವತ ಎಂ. ವಿಶ್ವೇಶ್ವರ ಸೋಮಯಾಜಿ.

ಕುಂದಾಪುರ ತಾಲೂಕಿನ ಬೆಳ್ವಾಲ ಗ್ರಾಮದ ಮೋರ್ಟು ಎಂಬಲ್ಲಿ 24-12-1951ರಲ್ಲಿ ಎಂ. ಶಿವರಾಮ ಸೋಮಯಾಜಿ, ಮೀನಾಕ್ಷಿಯಮ್ಮ ದಂಪತಿಯ ಪುತ್ರರಾಗಿ ವೈದಿಕ ಮನೆತನದಲ್ಲಿ ಜನಿಸಿದ ಸೋಮಯಾಜಿಯವರು 5ನೇ ಇಯತ್ತೆಯವರೆಗಿನ ಶೈಕ್ಷಣಿಕ ಹಂತಪೂರೈಸಿ, ತನ್ನ 15ನೇ ವರ್ಷದಲ್ಲಿ ಯಕ್ಷಗಾನ ಪ್ರಪಂಚವನ್ನು ಪ್ರವೇಶಿಸಿದವರು.

ಬೆಳ್ವಾಲ ವೆಂಕಟಾಚಲ ಹೆಬ್ಬಾರ್ ಅವರಲ್ಲಿ ತಾಳದೀಕ್ಷೆ ಪಡೆದು, ಜನ್ಸಾಲೆ ನಾಗಪ್ಪಯ್ಯ ಶ್ಯಾನುಭಾಗರು, ಮಾರ್ವಿ ವಾದಿರಾಜ ಹೆಬ್ಬಾರರಿಂದ ಭಾಗವತಿಕೆಯ ತಂತ್ರವನ್ನು ಸಿದ್ದಿಸಿಕೊಂಡು, ನಾರ್ಣಪ್ಪ ಉಪ್ಪರರ ಶಿಷ್ಯನಾಗಿ ಪರಿಪೂರ್ಣ ಗಾನವಿದ್ಯೆಯನ್ನು ತನ್ನದಾಗಿಸಿಕೊಂಡರು.

ಕೊಡವೂರು 1, ಪೆರ್ಡೂರು 2, ಮಾರಣಕಟ್ಟೆ 2, ಶಿವರಾಜಪುರ 2, ಮಂದಾರ್ತಿ 1, ಹಿರಿಯಡಕ 1, ಕಳವಾಡಿ 1, ಅಮೃತೇಶ್ವರಿ 1, ನಾಗರಕೊಡಿಗೆ 3, ಕಮಲಶಿಲೆ 11, ಸೌಕೂರು 3, ಹಾಲಾಡಿ 1, ಸೀತೂರು 1, ಹೀಗೆ 30ವರ್ಷ ಸುದೀರ್ಘ ಕಲಾವ್ಯವಸಾಯ ಮಾಡಿದ ಸೋಮಯಾಜಿಯವರು ಪ್ರಸ್ತುತ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಹವ್ಯಾಸಿ ಸಂಘ-ಸಂಸ್ಥೆಗಳ ಗುರುಗಳಾಗಿ ಕಲಾಸೇವೆ ಸಲ್ಲಿಸುತ್ತಿದ್ದಾರೆ.

ಸೋಮಯಾಜಿಯವರು ಕೇವಲ ಭಾಗವತರಷ್ಟೇ ಅಲ್ಲದೆ ಮದ್ದಳೆ, ಚಂಡೆ ವಾದಕರೂ ಕೂಡ. ಪ್ರಾರಂಭಿಕ ವೃತ್ತಿರಂಗಭೂಮಿಯ ಕೊಡವೂರು ಮೇಳದಲ್ಲಿ ಒಡ್ಡೋಲಗ ಸಹಿತ ಅನೇಕ ವೇಷಗಳನ್ನೂ ಮಾಡಿದ್ದೂ ಇದೆ. ಪ್ರಸಂಗಕರ್ತರೂ ಆಗಿರುವ ಸೋಮಯಾಜಿಯವರ 'ಕಮಲಶಿಲೆ ಕ್ಷೇತ್ರಮಹಾತ್ಮ್ಯ ಹಾಗೂ 'ರಾಜಾ ರತ್ನಸೇನ' ಅಮೂಲ್ಯ ಕಲಾಕೃತಿಗಳಾಗಿ ಗಮನಸೆಳೆಯುತ್ತವೆ.

ಸಹಧರ್ಮಿಣಿ ಸುಶೀಲ. ಸುಮಶ್ರೀ, ಸೌಮ್ಯಶ್ರೀ ಮಕ್ಕಳು. ಶ್ರೀಯುತರನ್ನು ಹಲವು ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



**ವಿಷ್ಣುಭಟ್, ಮೂರೂರು**

*ಅಂಚೆ : ಮೂರೂರು., ಕುಮಟಾ ತಾಲೂಕು (ಉ. ಕ)*
*ದೂರವಾಣಿ: 08386  268517*

ಪೌರಾಣಿಕ ರಂಗಸಿದ್ಧಾಂತದಲ್ಲಿ ಯಕ್ಷಗಾನ ಸ್ತ್ರೀಭೂಮಿಕೆಗಳಿಗೆ ಪ್ರಾಣ ಚೈತನ್ಯ ನೀಡುವ ರಂಗಸ್ಥಳದ ಗರತಿ, ಮೂರೂರು ವಿಷ್ಣುಭಟ್.

ಉತ್ತರಕನ್ನಡದ ಮೂರೂರು ಎಂಬಲ್ಲಿ ಗಜಾನನ ಪರಮೇಶ್ವರ ಭಟ್ಟ ಭಾಗೀರಥಿ ದಂಪತಿಯ ಸುಪುತ್ರರಾಗಿ 24-01-1958ರಲ್ಲಿ ಜನಿಸಿದ ವಿಷ್ಣುಭಟ್ ಎಸ್ಸೆಸ್ಸೆಲ್ಸಿಯ ವರೆಗಿನ ಪ್ರೌಢವ್ಯಾಸಂಗದ ಬಳಿಕ, ತನ್ನ 22ನೇ ವಯಸ್ಸಿನಲ್ಲೇ ಯಕ್ಷಲೋಕದ ಹೆಣ್ಣಾದರು.

ಮೂರೂರು ರಾಮ ಹೆಗಡೆಯವರ ಗುರುತನದಲ್ಲಿ ಪ್ರಬಲ ಕಲಾವಿದ್ಯೆಯನ್ನು ಸಂಪಾದಿಸಿದ ವಿಷ್ಣುಭಟ್ಟರು ಸಮರ್ಥ ಸ್ತ್ರೀವೇಷಧಾರಿಯಾಗಿ ಖ್ಯಾತನಾಮವನ್ನು ಗಳಿಸಿದರು. ಪಿ.ವಿ. ಹಾಸ್ಯಗಾರ್ ಕರ್ಕಿ, ಅವರು ಶ್ರೀಯತರಿಗೆ ಯಕ್ಷಗಾನ ರಂಗಾನುಭವ ಬೋಧಿಸಿದರು.

ಭಾವನಾತ್ಮಕ ಸ್ತ್ರೀಪಾತ್ರಗಳಲ್ಲಿ ತನ್ಮಯರಾಗುವ ಭಟ್ಟರು, ಸಾತ್ವಿಕ ಭೂಮಿಕೆಯ ಸಾಮ್ರಾಜ್ಞೆಯಾಗಿ ಗುರುತಿಸಲ್ಪಟ್ಟವರು. ಭಟ್ಟರ ಸ್ತ್ರೀಪಾತ್ರಗಳೆಂದರೆ ಗಂಡು ಜೀವದಲ್ಲಿ ಹೆಣ್ಣು ಹೊಕ್ಕಂತೆ. ಅವರ ದಾಕ್ಷಾಯಿಣಿ, ಸೀತೆ, ಅಂಬೆ, ಮಂಡೋದರಿ, ಮೇನಕೆ, ಚಂದ್ರಮತಿ, ದಮಯಂತಿ, ಪ್ರಭಾವತಿ, ಸಾವಿತ್ರಿ, ಶಕುಂತಲೆ, ಮೊದಲಾದ ಭೂಮಿಕೆಗಳು ಈಗಲೂ ಜನಮನದಲ್ಲಿ ಹಸಿರಾಗಿ ಉಳಿದುಕೊಂಡಿದ್ದರೆ, ಅವರ ಮೇರು ಪ್ರತಿಭೆಗೆ ಪ್ರತ್ಯೇಕ ಪುರಾವೆ ಬೇಕಾಗಲಾರದು.

ನಿರರಳ ವಚೋಸಂಪತ್ತು, ಪಾತ್ರೋಚಿತ ಹಾವ- ಭಾವ, ಪ್ರೌಢ ನೃತ್ಯಾಭಿನಯದ ಎರಕದಲ್ಲಿ ಪಾತ್ರಗಳನ್ನು ಕೆತ್ತಿಡುವ ಕಲೆ ವಿಷ್ಣುಭಟ್ಟರನ್ನು ಗಾಢವಾಗಿ ಬೆಸೆದುಕೊಂಡಿದೆ.

ಗುಂಡಬಾಳ-2, ಅಮೃತೇಶ್ವರಿ 2, ಕೋಟ ಹಿರೇಮಹಾಲಿಂಗೇಶ್ವರ ಮೇಳ 1, ಶಿರಸಿ ಪಂಚಲಿಂಗೇಶ್ವರ 1, ಪೆರ್ಡೂರು 9, ಇಡಗುಂಜಿ 1, ಶಿರಸಿ ಮಾರಿಕಾಂಬಾ 2, ಮಂದಾರ್ತಿ 1, ಸಾಲಿಗ್ರಾಮ 2, ಪೂರ್ಣಚಂದ್ರಮೇಳ 10, ಹೀಗೆ ಕಲಾಲೋಕದಲ್ಲಿ ಭಟ್ಟರ ಯಕ್ಷವ್ಯವಸಾಯ 31 ವರ್ಷ ಸಾರ್ಥಕ್ಯ ಸಾಧನೆಯಾಗಿ ಪ್ರಶಂಸೆ ಪಡೆದಿದೆ.

ಇವರ ಶ್ರೀಮತಿಯೇ ಶ್ರೀಮತಿ. ಆದರ್ಶ, ಸೌಮ್ಯ ಶ್ರೀಯುತರ ಈಶ್ವರು ಮಕ್ಕಳು. ಪ್ರಸ್ತುತ ವಿಷ್ಣುಭಟ್ಟರು ಪೂರ್ಣಚಂದ್ರಮೇಳ, ಕುಂಭಾಶಿ ಇದರ ಕಲಾವಿದರು.

ವಿಷ್ಣುಭಟ್ಟರ ಪ್ರೌಢ ಪ್ರತಿಭೆಗೆ ಬೆಂಗಳೂರಿನ ಅಭಿಮಾನಿ ಬಳಗದಿಂದ ಗೌರವ ಸಂಮಾನ, ಗಂಗೊಳ್ಳಿ, ಮುದ್ರಾಡಿ, ಹಳ್ಳಿಹೊಳೆ ಮೊದಲಾದ ಕಡೆಗಳಲ್ಲಿ ಆದರಣೀಯ ಗೌರವಸಂಮಾನ ದೊರಕಿರುತ್ತದೆ.



ವಿಷ್ಣುಮೂರ್ತಿ ಬಾಸ್ರಿ ಕೆ. ಎಸ್.

*ಕೆಳಕುಂಜಾಲು, ಅಂಚೆ: ನೀಲಾವರ,*
*ಉಡುಪಿ ತಾಲೂಕು*
*ದೂರವಾಣಿ : 99020 08744*

ಆಕರ್ಷಕ ಅಂಗಸೌಷ್ಠವ, ಸುಮಧುರ ಸ್ವರಸಿರಿ, ಲಾಲಿತ್ಯಪೂರ್ಣ ನೃತ್ಯರೇಖೆ, ಅನುಭವಬದ್ಧ ರಂಗವೈಖರಿ, ಕಮನೀಯ ಕಲಾಭಿನಯ, ಗಮನೀಯ ರಸಾನುಭವ ಕಲ್ಪಿಸಿಕೊಡಬಲ್ಲ ಸಮರ್ಥ ಸ್ತ್ರೀವೇಷಧಾರಿ ಕೆ. ಎಸ್. ವಿಷ್ಣುಮೂರ್ತಿ ಬಾಸ್ತಿ.

ಉಡುಪಿ ಜಿಲ್ಲೆಯ ಕುಂಜಾಲು ಬಾಸಿ ಅವರ - * ಹುಟ್ಟೂರು. ಇವರ ಜನನ 1968ರಲ್ಲಿ. ಕೆ. ವೈ ಶ್ರೀನಿವಾಸ ಬಾಸ್ತಿ, ಸರಸ್ವತಿ ಅವರ ಸುಪುತ್ರರಾದ ಶ್ರೀಯುತರು ಎಸ್.ಎಸ್.ಎಲ್.ಸಿ ವ್ಯಾಸಂಗದ ಬಳಿಕ, ತನ್ನ 18ನೇ ವಯಸ್ಸಿನಲ್ಲಿ ಯಕ್ಷಗಾನ ರಂಗಭೂಮಿಗೆ 030003202 ಹೆಜ್ಜೆಯಿರಿಸಿದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ, ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಸದೃಢ ಕಲಾಶಿಕ್ಷಣ ಪಡೆದರು.

ಮೂಲ್ಕಿ 1, ಅಮೃತೇಶ್ವರಿ 2, ಹಿರೇಮಹಾಲಿಂಗೇಶ್ವರ ಕೋಟ 1, ಶಿರಸಿ 5, ಕಮಲಶಿಲೆ 5, ಮಂದಾರ್ತಿ 7, ಸೌಕೂರು 3, ಹೀಗೆ 24 ವರ್ಷಗಳ ಕಲಾ ವ್ಯವಸಾಯ ಯಶಸ್ವಿಯಾಗಿ ಪೂರೈಸಿದ್ದಾರೆ. ಉತ್ತಮ ಪೌರಾಣಿಕ ಜ್ಞಾನ, ರಂಗಾ- ನುಭವವನ್ನು ಹೊಂದಿದ ಬಾಸಿ ಅವರು ಹಿಮ್ಮೇಳದಲ್ಲೂ ಪರಿಣತಿ ಸಾಧಿಸಿದವರು. ಶ್ರೀಯುತರ ಅಂಬೆ, ಚಿತ್ರಾಂಗದೆ, ದ್ರೌಪದಿ, ಸುಭದ್ರೆ, ಶಶಿಪ್ರಭೆ, ಮೋಹಿನಿ, ಮೀನಾಕ್ಷಿ ಮೊದಲಾದ ಸ್ತ್ರೀಪಾತ್ರಗಳು ಜನಾಕರ್ಷಣೆ ಗೊಂಡಿವೆ.

ಇವರ ಧರ್ಮಪತ್ನಿ ಹೇಮಾ. ಪುತ್ರ ಕಾರ್ತಿಕ್ - ಬಾಸಿ, ಪ್ರತಿಭಾನ್ವಿತ ಸ್ತ್ರೀವೇಷಧಾರಿ ವಿಷ್ಣುಮೂರ್ತಿ ಬಾಸಿ ಅವರನ್ನು ಹಲವು ಸಂಘ ಸಂಸ್ಥೆಗಳು ಸಂಮಾನಿಸಿವೆ.



**ವಿಷ್ಣು ಸುಬ್ರಾಯ ಹೆಗಡೆ, ಹಿರೇಮಕ್ಕಿ**

*ಹಿರೇಮಕ್ಕಿ ಗ್ರಾಮ, ಅಂಚೆ : ಹೊಸಾಕುಳಿ,*
*ಹೊನ್ನಾವರ ತಾಲೂಕು(ಉ.ಕ)*

ಯಕ್ಷಗಾನದ ಸಾಂಪ್ರದಾಯಿಕ ನಡೆಯನ್ನು "ಉಪ್ಪರ ಶೈಲಿ'ಯಲ್ಲಿ ಪ್ರತಿಧ್ವನಿಸುವ, ಪರಂಪರೆಯನ್ನು ಪ್ರತಿನಿಧಿಸುವ ಮಧುರ ಕಂಠಸಿರಿಯ ಹಿರಿಯ ಭಾಗವತ ವಿಷ್ಣು ಸುಬ್ರಾಯ ಹೆಗಡೆ ಹಿರೇಮಕ್ಕಿ,

ಉತ್ತರಕನ್ನಡ ಜಿಲ್ಲೆಯ ಹಿರೇಮಕ್ಕಿ ಎಂಬಲ್ಲಿ 1949ರಲ್ಲಿ ಸುಬ್ರಾಯ ಮಹಾಬಲೇಶ್ವರ ಹೆಗಡೆ- ಭಾಗೀರಥಿ ಹೆಗಡೆ ದಂಪತಿಯ ಸುಪುತ್ರರಾಗಿ ಜನಿಸಿದ ವಿಷ್ಣು ಹೆಗಡೆಯವರು ಒಂಭತ್ತಕ್ಕೆ ಓದು ಮುಗಿಸಿ, ಯಕ್ಷಗಾನದ ತುಂಬು ಹಂಬಲದಿಂದ ಕಲಾಶಿಕ್ಷಣ ಪಡೆಯಲು ಮುಂದಾದರು. ತಂದೆ ಸುಬ್ರಾಯ ಹೆಗಡೆಯವರು ಅರ್ಥಧಾರಿಯಾಗಿದ್ದರು. ತೀರ್ಥರೂಪರ ಪ್ರೋತ್ಸಾಹ, ಪ್ರೇರಣೆಯಿಂದ 24ನೇ ವರ್ಷದಲ್ಲಿ ಕಲಾವ್ಯವಸಾಯ ಕೈಗೊಂಡ ಹೆಗಡೆಯವರು ನಾರ್ಣಪ್ಪ ಉಳ್ಳೂರ, ಕಪ್ಪೆಕೆರೆ ಭಾಗವತರಿಂದ ಗಾನಕಲೆಯನ್ನು ಸಂಪಾದಿಸಿದರು.

ಪೌರಾಣಿಕ ಪ್ರಸಂಗ ನಡೆಯನ್ನು ಸುಪುಷ್ಟವಾಗಿ ಬಲ್ಲ ಹೆಗಡೆಯವರ ಶೈಲೀಕೃತ ಮಂಜುಳ ಯಕ್ಷರಸಗಾನ ಪ್ರೇಕ್ಷಕ-ಶ್ರಾವಕರ ಮನಗೆದ್ದಿದೆ.

ಹಾಲಾಡಿ, ಕಮಲಶಿಲೆ, ಕಳುವಾಡಿ, ಬಗ್ವಾಡಿ, ಮಾರಣಕಟ್ಟೆ, ಮಂದಾರ್ತಿ, ಪೆರ್ಡೂರು, ಗುಂಡಬಾಳ, ಬಚ್ಚಗಾರು, ಅಮೃತೇಶ್ವರಿ, ಮೇಳಗಳಲ್ಲಿ ಸಾರ್ಥಕ ಕಲಾಸೇವೆ ನಡೆಸಿದ ವಿಷ್ಣು ಹೆಗಡೆಯವರ 22ವರ್ಷದ ತಿರುಗಾಟ ಯಶಸ್ವಿಯಾಗಿದೆ. ಪ್ರಸ್ತುತ ಹೆಗಡೆಯವರು ಅಮೃತೇಶ್ವರಿ ಮೇಳದ ಪ್ರಧಾನ ಭಾಗವತರಾಗಿದ್ದಾರೆ.

ಸಹಧರ್ಮಿಣಿ ಗಿರಿಜಾ ವಿಷ್ಣುಹೆಗಡೆ, ಓರ್ವ ಸುಪುತ್ರ ಗಣಪತಿ. ವಿಷ್ಣು ಹೆಗಡೆಯವರಿಗೆ ಕೋಟ ಅಮೃತೇಶ್ವರಿ ಮೇಳದವತಿಯಿಂದ ಹಾಗೂ ಹುಟ್ಟೂರ ಗೌರವ, ಸಂಮಾನ ದೊರಕಿರುತ್ತದೆ.



**ವೆಂಕಟೇಶ ರಾವ್, ಜಲವಳ್ಳಿ**

*ಅಂಚೆ : ಜಲವಳ್ಳಿ, ಹೊನ್ನಾವರ ತಾಲೂಕು,*
*ಕಾರವಾರ ಜಿಲ್ಲೆ (ಉ.ಕ)*
*ದೂರವಾಣಿ: 08387 247263*

ಬಡಗುತಿಟ್ಟಿನ ಯಕ್ಷಗಾನ ಕ್ಷೇತ್ರದಲ್ಲಿ ತನ್ನದೇ ವಿಶಿಷ್ಟ ಛಾಪು ಮೂಡಿಸಿ ಗೆಲುವಿನ ಗಿರಿಯೇರಿದ ಧೀಮಂತ ಕಲಾವಿದ ಜಲವಳ್ಳಿ ವೆಂಕಟೇಶ ರಾವ್.

ಅಗ್ರಮಾನ್ಯ ಕಲಾವಿದ ಜಲವಳ್ಳಿ ವೆಂಕಟೇಶ ರಾವ್ ಅವರು ಹೊನ್ನಾವರ ತಾಲೂಕಿನ ಜಲವಳ್ಳಿ ಎಂಬ ಪುಟ್ಟ ಹಳ್ಳಿಯಲ್ಲಿ ಬೊಮ್ಮ ಮಡಿವಾಳ ಶ್ರೀದೇವಿ ದಂಪತಿಯ ಪುತ್ರರಾಗಿ 1-11-1933ರಲ್ಲಿ ಜನಿಸಿದರು.

ಕಾಡುವ ಕಡುಬಡತನದಿಂದ ಎರಡನೇ ಇಯತ್ತೆಗೆ ಶಿಕ್ಷಣ ಮೊಟಕು-ಗೊಳಿಸಿ ತನ್ನ 16ರ ಹರೆಯದಲ್ಲೇ ಕಲಾಲೋಕಕ್ಕೆ ಹೆಜ್ಜೆ ಹಾಕಿದರು. ರಾಮನಾಗಪ್ಪ ಎಂಬವರ ಭಾಗವತಿಕೆ ಹಾಗೂ ಅರ್ಥಗಾರಿಕೆ ಇವರಿಗೆ ರಂಗಭೂಮಿಗೆ ಪ್ರೇರಣೆಯಾಯಿತು. ಹಡಿನಬಾಳ ಸತ್ಯನಾರಾಯಣ ಹೆಗಡೆಯವರು ಇವರನ್ನು ಗುಂಡುಬಾಳ ಮೇಳಕ್ಕೆ ಸೇರಿಸಿದವರು. ಸ್ವಯಂ ಪ್ರತಿಭೆಯನ್ನು ಸತತ ಸಾಧನೆಯ ಮೂಲಕ ಜಾಹೀರು ಗೊಳಿಸಿದ ಜಲವಳ್ಳಿ, ಈ ರಂಗದಲ್ಲಿ ತನ್ನ ಮೇರು ಕಲಾವಂತಿಕೆಯಿಂದ ಅಪಾರ ಜನಮನ್ನಣೆ ಗಳಿಸಿದರು.


ಗುಂಡಬಾಳ 10, ಇಡಗುಂಜಿ 2, ಕೊಂಡದಕುಳಿ : 2, ಕೊಳಗಿಬೀಸ್ 2, ಸುರತ್ಕಲ್ 4, ಸಾಲಿಗ್ರಾಮ 24, ಪೆರ್ಡೂರು 4, ಕಮಲಶಿಲೆ 1, ಗೋಳಿಗರಡಿ 1, ಹೀಗೆ ಆರು ದಶಕ ಸುದೀರ್ಘ-ಸಾರ್ಥಕ ರಂಗಯಾತ್ರೆ ಪೂರೈಸಿದ ಜಲವಳ್ಳಿಯವರು ಪ್ರಸ್ತುತ ಪೆರ್ಡೂರು ಮೇಳದ ಪ್ರಧಾನಕಲಾವಿದರಾಗಿ ಈಗಲೂ ಗೆಜ್ಜೆಕಟ್ಟಿ ಹೆಜ್ಜೆ ಹಾಕುತ್ತಿದ್ದಾರೆ.

ಆರಂಭದಲ್ಲಿ ಸ್ತ್ರೀಪಾತ್ರಗಳನ್ನೂ ಇವರು ನಿರ್ವಹಿಸಿದ್ದರು. ಶನೀಶ್ವರ ಮಹಾತ್ಮೆಯ 'ಶನೀಶ್ವರನ ಪಾತ್ರ ಅವರಿಗೆ ಸಾರ್ಥಕ ಹೆಸರು ತಂದಿತ್ತಿದೆ. ರಂಗಸ್ಥಳದಲ್ಲಿ ಎರಡು ಸುತ್ತು-ಮೂರು ಗತ್ತು' ಎಂಬುದು ಜಲವಳ್ಳಿಯವರ ಸೃಷ್ಟಿಶೀಲ- ಯಕ್ಷಗಾನೀಯ ಶೈಲಿಗೆ ಸಂದ ಕಲಾಮರ್ಯಾದೆ. ಅವರ ಭಾಷಾ ಸಂಪತ್ತು ಅಗಾಧ, ವ್ಯಾಕರಣಬದ್ಧ, ಪಾಂಡಿತ್ಯ ಭರಿತ, ಪಾತ್ರಗಳ ಘನತೆ, ಗೌರವ ಮುಕ್ಕಾಗದಂತೆ ಪೌರಾಣಿಕ ರಂಗಾವರಣದಲ್ಲಿ ನಿರೂಪಿಸುವ ಕಲಾಛಾತಿ ಅವರದ್ದು, ಭಸ್ಮಾಸುರ, ಶನೀಶ್ವರ, ಈಶ್ವರ, 'ಕಾರ್ತವೀರ' ದ ರಾವಣ, ಕಂಸ, ಸುಭದ್ರಾ ಕಲ್ಯಾಣದ

ಬಲರಾಮ, ವಲಲ ಭೀಮ, ಗದಾಯುದ್ಧದ ಭೀಮ, ದುಷ್ಟಬುದ್ಧಿ, ರಕ್ತಜಂಘ ಅವರದೇ ವಿಶಿಷ್ಟ ಶೈಲಿಯಲ್ಲಿ ಅಮರವಾದ ಪಾತ್ರಗಳು,

ಪತ್ನಿ ಕಲ್ಯಾಣಿ. ಮಾರುತಿ, ಮಂಜುನಾಥ, ವಿದ್ಯಾಧರ ಇವರ ಮೂವರು ಸುಪುತ್ರರು. ಇವರ ಪುತ್ರ ವಿದ್ಯಾಧರ ಜಲವಳ್ಳಿ ಸಮರ್ಥ ಕಲಾವಿದ.

ಶ್ರೀಯುತರ ಮೇರು ಪ್ರತಿಭೆಗೆ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊಕಿದೆ. ಅಭಿಮಾನಿ ಬಳಗದಿಂದ ಗೌರವ ಅಭಿನಂದನೆಯೂ ಬ್ರಹ್ಮಾವರದಲ್ಲಿ ನಡೆದಿದೆ. ಯಕ್ಷಗಾನ 'ಕಲಾರಂಗ'ದ ಪ್ರೊ. ಬಿ. ವಿ. ಆಚಾರ ಪ್ರಶಸ್ತಿ ದೊರಕಿದೆ.



ವೆಂಕಟರಮಣ ಗಾಣಿಗ, ಹೇರಂಜಾಲು

'ಹರಿಕೃಪಾ', ನಾಗೂರು,
ಅಂಚೆ : ಕಿರಿಮಂಜೇಶ್ವರ, ಉಡುಪಿ ಜಿಲ್ಲೆ
ದೂರವಾಣಿ : 08254 254560, 99808 66150

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಶಾಸ್ತ್ರೋಕ್ತ ಕಲಾಪದ್ಧತಿಯನ್ನು ಪರಿಪೂರ್ಣ ಬಲ್ಲ ಪರಂಪರೆಯ ಅಗ್ರಮಾನ್ಯ ವೇಷಧಾರಿ ಹೇರಂಜಾಲು ವೆಂಕಟರಮಣ ಗಾಣಿಗ,

ಕುಂದಾಪುರ ತಾಲೂಕಿನ ಹೇರಂಜಾಲು ಎಂಬ ಪುಟ್ಟ ಹಳ್ಳಿಯಲ್ಲಿ 16-2-1930ರಲ್ಲಿ ಜನಿಸಿದ ವೆಂಕಟರಮಣ ಗಾಣಿಗರು ಗಣಪಯ್ಯ ಗಾಣಿಗ ನಾಗಮ್ಮ ಗಾಣಿಗ ದಂಪತಿಯ ಸುಪುತ್ರ.

ಶ್ರೀಯುತರ ವಿದ್ಯಾರ್ಹತೆ 5ನೇ ತರಗತಿಯ ವರೆಗೆ ಮಾತ್ರ ವೆಂಕಟರಮಣ ಗಾಣಿಗರ ತಂದೆ ಯಕ್ಷಗಾನ ವೇಷಧಾರಿಯಾಗಿದ್ದುದರಿಂದ ಕಲೆಯೆಂಬುದು ಇವರಿಗೆ ಜನ್ಮದತ್ತವಾಯಿತು. ಎಳವೆಯಲ್ಲೇ ಅನ್ಯಾದೃಶ ಕಲಾಸಕ್ತಿ ಮೈ ತುಂಬಿ ಕೊಂಡಿದ್ದ ಇವರನ್ನು ಶಾಲಾ ಅಧ್ಯಾಪಕರು ನೇರ್ಪುಗೊಳಿಸಿದರು. ಅದೇ ಇವರ ರಂಗ ಪ್ರಯಾಣಕ್ಕೆ ಪ್ರೇರಣೆ.

14ರ ಹರಯದಲ್ಲಿ ಯಕ್ಷಗಾನ ಲೋಕ ಪ್ರವೇಶಿಸಿದ ಗಾಣಿಗರು ದಶಾವತಾರಿ ಗುರು ವೀರಭದ್ರನಾಯ್ಕ ಹಾಗೂ ಬೇಳಂಜೆ ತಿಮ್ಮಪ್ಪ ನಾಯ್ಕರನ್ನು ಗುರುಗಳಾಗಿ ಸ್ವೀಕರಿಸಿ ಸಮರ್ಪಕ ಯಕ್ಷವಿದ್ಯಾ ಸಂಪನ್ನರಾದರು.

ಮಾರಣಕಟ್ಟೆ 10, ಕೊಲ್ಲೂರು 2, ಅಮೃತೇಶ್ವರಿ 5, ಸಾಲಿಗ್ರಾಮ 8, ಕುಂಡವು 1, ಇಡಗುಂಜಿ 7, ಹೀಗೆ 33 ವರ್ಷಗಳ ಕಲಾವ್ಯವಸಾಯವನ್ನು ಸುಸಾಂಗವಾಗಿ ಪೂರೈಸಿ ವಿಶ್ರಾಂತ ಜೀವನದಲ್ಲಿದ್ದಾರೆ.

ಉಡುಪಿ ಯಕ್ಷಗಾನ ಕೇಂದ್ರದ ಗುರುಗಳಾಗಿ ಡಾ. ಶಿವರಾಮ ಕಾರಂತರ 'ಯಕ್ಷರಂಗ'ದ ಕಲಾವಿದರಾಗಿ ಅನನ್ಯ ಕಲಾಕೈಂಕರವನ್ನು ಗೈದ ಹಿರಿಮೆಯೂ ಇವರಿಗಿದೆ. ದೇಶ-ವಿದೇಶಗಳಲ್ಲಿ ಇವರ ಕಲಾಪ್ರತಿಭೆ ಮೆರೆದಿದೆ. ಇವರ ನೂರಾರು ಮಂದಿ ಶಿಷ್ಯರು ವೃತ್ತಿರಂಗದಲ್ಲಿ ಹೆಸರಾಂತ ಕಲಾವಿದರಾಗಿ ಖ್ಯಾತಿ ಪಡೆದಿದ್ದಾರೆ.

ಶ್ರೀಯುತರ ನೃತ್ಯಾಭಿನಯ, ರಂಗನಡೆ, ವಾಚಿಕತೆ, ವೇಷಕ್ರಮ, ಎಲ್ಲವೂ ನೂರಕ್ಕೆ ನೂರು ಯಕ್ಷಗಾನೀಯವಾದದ್ದು. ಸ್ತ್ರೀವೇಷಧಾರಿಯಾಗಿಯೂ, ಪುರುಷವೇಷಧಾರಿಯಾಗಿಯೂ ಗಾಣಿಗರು ಸುಪ್ರಸಿದ್ಧರು. ಇವರ ಶಶಿಪ್ರಭಾ, ಮೀನಾಕ್ಷಿ, ದೌಪದಿ, ದಾಕ್ಷಾಯಿಣಿ, ಮೊದಲಾದ ಸ್ತ್ರೀಭೂಮಿಕೆಗಳು ಹಾಗೂ ಸುಧನ್ವ, ಅರ್ಜುನ, ಭೀಷ್ಮ, ದ್ರೋಣ, ಮೊದಲಾದ ಗಂಡುವೇಷಗಳು ಜನಪ್ರಿಯ.

ಧರ್ಮಪತ್ನಿ ಗಣಪು, ಗೋಪಾಲಗಾಣಿಗ, ನಾರಾಯಣ ಗಾಣಿಗ, ಬಾಲಕೃಷ್ಣ ಗಾಣಿಗ ಮಕ್ಕಳು. ಇವರ ಪುತ್ರರಾದ ಗೋಪಾಲ ಗಾಣಿಗ ಭಾಗವತರು. ಬಾಲಕೃಷ್ಣ ಗಾಣಿಗ ಮದ್ದಳೆವಾದಕರು. ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿ, ಕರ್ಗಲ್ಲು ಪ್ರಶಸ್ತಿ, ಶ್ರೀನಿವಾಸ ಉಡುಪ ಪ್ರಶಸ್ತಿ, ಕೋಟ ವೈಕುಂಠ ಪ್ರಶಸ್ತಿ, ಜಿ. ಶಂಕ ಗೌರವಧನ ಲಭಿಸಿದೆ. ಮಾನ್ಯ ಗಾಣಿಗರು ಈ ಗ್ರಂಥ ಅಚ್ಚು ಹಾಕಿಸುವ ಕಾಲಾವಧಿಯಲ್ಲಿ ಕಾಲನ ಕರೆಗೆ ಓಗೊಟ್ಟು ಜೀವನರಂಗಸ್ಥಳದಿಂದ ನಿರ್ಗಮಿಸಿದ್ದಾರೆ.



**ಶಶಿಕಾಂತ ಶೆಟ್ಟಿ, ಕಾರ್ಕಳ**

*ದೇವಿ ಕೃಪಾ, ನೆಲ್ಲಾಚೆ ಶ್ರೀ ಕಾಳಿಕಾಂಬಾ ದೇವಸ್ಥಾನದ*
*ಬಳಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 94817 50788, 98800 20073*

ಕರಾವಳಿ ಕಲೆಯ ಕಮನೀಯ ಪ್ರತಿಭೆಯಾಗಿ ರಮಣೀಯ ಜೀವ ಪ್ರತಿಮೆಯಾಗಿ, ಗಮನೀಯ ರಂಗವೈಭವದಲ್ಲಿ ಕಂಗೊಳಿಸುವ ಯಕ್ಷಮೋಹಕ ತಾರೆ ಶಶಿಕಾಂತ ಶೆಟ್ಟಿ ಕಾರ್ಕಳ.

ಕಾರ್ಕಳದ ಧರ್ಮಪ್ಪ ಶೆಟ್ಟಿ-ಲಲಿತಾ ದಂಪತಿಯ ಸುಪುತ್ರನಾಗಿ 8-1-1980ರಲ್ಲಿ ಜನಿಸಿದ ಶಶಿಕಾಂತ ಶೆಟ್ಟರು, ಬಾಲ್ಯದಿಂದ ಬಡತನದಲ್ಲಿ ಬೆಳೆದವರು. ಹೀಗಾಗಿ ಅವರ ಶಾಲಾ ಶೈಕ್ಷಣಿಕ ಓದು 9ಕ್ಕೇ ಸೀಮಿತವಾಯಿತು. ಜೀವನೋಪಾಯಕ್ಕಾಗಿ ಟೈಲರಿಂಗ್ ವೃತ್ತಿ ಹತ್ತಿರ ಕರೆಯಿತು. ಎಳವೆಯಲ್ಲೇ ಬೇರುಬಿಟ್ಟಿದ್ದ ಯಕ್ಷಗಾನ ಕಲಾಸಕ್ತಿ ಕಾರ್ಕಳದ ಮಾರಿಗುಡಿಯಲ್ಲಿ ನಡೆಯುತ್ತಿದ್ದ ಸಾಪ್ತಾಹಿಕ ಯಕ್ಷಗಾನತರಗತಿಗೆ ಎಳೆದು ತಂದಿತು. ಕಾರ್ಕಳದ ಸತೀಶ್ ಎಂ. ಅವರ ಶಿಷ್ಯನಾಗಿ ತೆಂಕುತಿಟ್ಟಿನ ಹೆಜ್ಜೆಗಾರಿಕೆ ಕಲಿತ ಶಶಿಕಾಂತರಿಗೆ ಕಲಾಸಿದ್ಧಿ ಕ್ಷಿಪ್ರಗತಿಯಲ್ಲಿ ಕೈವಶವಾಯಿತು.

ಯಕ್ಷಗಾನದಲ್ಲಿ ಕ್ರಮೇಣ ಬೆಳೆಯುತ್ತಾ ಸಾಗಿದ ಶಶಿಕಾಂತ್ ಕರ್ಗಲ್ಲು ವಿಶ್ವೇಶ್ವರ ಭಟ್, ಬನ್ನಂಜೆ ಸಂಜೀವಸುವರ್ಣ ಹಾಗೂ ಕೋಳ್ಯೂರು ರಾಮಚಂದ್ರ 20) ಭಾರತವನ್ನು ರಾಯರ ಗುರುತನದಲ್ಲಿ ಉನ್ನತ ಕಲಾವಿದ್ಯೆಯನ್ನು ತನ್ನದಾಗಿಸಿಕೊಂಡರು.

ಕರ್ನಾಟಕ, ಬಪ್ಪನಾಡು, ಭಗವತಿ ಮೇಳಗಳಲ್ಲಿ ಹವ್ಯಾಸಿಯಾಗಿ ಮೂರು ವರ್ಷ ಕಲಾಕೃಷಿ ನಡೆಸಿದ ಶೆಟ್ಟರು ಬಡಗಿನ ಮಂದಾರ್ತಿ ಮೇಳಕ್ಕೆ ಸೇರ್ಪಡೆ- ಗೊಂಡು ತನ್ನ ಶ್ರೀಮಂತ ಕಲಾಸಿರಿಯಲ್ಲಿ ಪುರಾಣ ಪಾತ್ರಗಳಿಗೆ ಪ್ರಾಣಪ್ರತಿಷ್ಠೆ ನೀಡಿದರು. ಅಲ್ಲಿ ಎಂ. ಎ. ನಾಯ್ಕರ ರಂಗಮಾಹಿತಿ, ಅನುಭವವೂ ಶ್ರೀಯುತರಿಗೆ ಸುಪುಷ್ಟವಾಗಿ ದೊರಕಿತು. ತದನಂತರ ಹೆರಂಜಾಲು ಗೋಪಾಲಗಾಣಿಗರ ಸಹಕಾರದಲ್ಲಿ ಸಾಲಿಗ್ರಾಮ ಮೇಳ ಸೇರಿದರು. ಅಲ್ಲಿಂದಲೇ ಶಶಿಕಾಂತರ ಶುಕ್ರದೆಸೆ ಪ್ರಾರಂಭ, ಜನಪ್ರಿಯ ಸ್ತ್ರೀವೇಷಧಾರಿಯಾಗಿ ರಂಗಬದುಕಿನ ಶೃಂಗ ಸಾರ್ಥಕ್ಯ. ವಿಶೇಷ ತಾರಾಮೌಲ್ಯ ಇಲ್ಲಿ ಸಂಪ್ರಾಪ್ತವಾಯಿತು. ಶಶಿಪ್ರಭೆಯಾಗಿ, ಅಂಬೆಯಾಗಿ, ದಾಕ್ಷಾಯಿಣಿಯಾಗಿ, ಚಂದ್ರಮತಿಯಾಗಿ, ದಮಯಂತಿಯಾಗಿ, ಶುಕುಂತಲೆಯಾಗಿ, ಕೈಕೇಯಿಯಾಗಿ, ಸತ್ಯಭಾಮೆಯಾಗಿ ತನ್ನೆಲ್ಲಾ ಕಲಾ ಸತ್ವವನ್ನು ಪಾತ್ರಗಳ ಮೂಲಕ ರಂಗಮಂಚದಲ್ಲಿ ಹರಳುಗಟ್ಟಿಸಿದರು. ಸಾಂಪ್ರದಾಯಿಕ ಕತೆಯೊಂದಿಗೆ ಸೃಜನ ಶೀಲತೆಯನ್ನೂ ಸೇರಿಸಿ ಯಕ್ಷಗಾನೀಯ ಚೌಕಟ್ಟಿನಲ್ಲಿ ಶುದ್ಧ ಹವಳವಾಗಿ ಕಳೆದರು. ಆಕರ್ಷಕ ವೇಷ, ಪರಿಶುದ್ಧ ವಾಗಿತೆ, ಸತ್ವಪೂರ್ಣ ನೃತ್ಯಾಭಿನಯ, ಭಾವಯುಕ್ತ ಪಾತ್ರಚಿತ್ರಣದಲ್ಲಿ ವಿಜೃಂಭಿಸುವ ಸಮರ್ಥ ಸ್ತ್ರೀವೇಷಧಾರಿ ಶಶಿಕಾಂತ ಶೆಟ್ಟರು ಉತ್ತಮ ಅರ್ಥಧಾರಿಯೂ ಹೌದು.

ಈಗಾಗಲೇ ದೇಶ, ವಿದೇಶಗಳಲ್ಲಿ ಶ್ರೀಯುತರ ಕಲಾ ಪ್ರತಿಭೆಯ ಕಂಪು ಸೂಸಿದೆ. ಬಾಳ ಸಂಗಾತಿ ದೇವಿಕಾ, ಶಿವರಂಜನ್ ಸುಪುತ್ರ. ಇವರಿಗೆ ಹೈದರಾಬಾದ್, ಕಾರ್ಕಳ, ಉಡುಪಿ ಮುಂತಾದೆಡೆ ಸಂಮಾನ ದೊರಕಿದೆ. ದೂರದ ದುಬ್ಬಾಯಲ್ಲೂ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.



## ಶಂಕರ ಗಾಣಿಗ, ಕೋಡಿ

*ನಂ. 383, 7ನೇ ಕ್ರಾಸ್, ವೀವರ್ಸ್ ಕಾಲೋನಿ,*
*ಬನ್ನೇರು ಘಟ್ಟಾ ರೋಡ್, ಬೆಂಗಳೂರು 83*
*ದೂರವಾಣಿ : 98445 76637, 96635 43754*

ಸಾಂಪ್ರದಾಯಿಕ ರಂಗಸಂವಿಧಾನಕ್ಕೆ ಸ್ವಯಂ ಪ್ರತಿಭೆಯ ಮೆರುಗು ನೀಡಿ ಪ್ರಸಿದ್ಧ ಹಾರಾಡಿತಿಟ್ಟಿನ ಸಮರ್ಥ ಪ್ರತಿಪಾದಕರಾಗಿ ಗುರುತಿಸಿಕೊಂಡ ಹಿರಿಯ ಕಲಾವಿದ ಕೋಡಿ ಶಂಕರಗಾಣಿಗ,

31-05-1932ರಲ್ಲಿ ಬಚ್ಚ ಗಾಣಿಗ-ಕಾವೇರಮ್ಮ ದಂಪತಿಯ ಸುಪುತ್ರರಾಗಿ ಉಡುಪಿ ತಾಲೂಕಿನ ಹಾರಾಡಿಯಲ್ಲಿ ಜನಿಸಿದ ಶಂಕರಗಾಣಿಗರು ಬಡಗಿನ ಯಕ್ಷಗಾನದ ದಂತಕತೆ ಹಾರಾಡಿ ರಾಮಗಾಣಿಗರ ಅಣ್ಣನ ಮಗ, ಹಾರಾಡಿ ಕುಷ್ಠ ಗಾಣಿಗರ ಸೋದರಳಿಯ, ಹಾಗೂ ಮಗಳ ಗಂಡ, ಹೀಗಾಗಿ ಹಾರಾಡಿ ಮನೆತನದ ಬಂಧುತ್ವ ಹಾಗೂ ಅಪ್ರತಿಮ ಕಲಾವ್ಯಕ್ತಿತ್ವ ಶಂಕರಗಾಣಿಗ ಅವರಿಗೆ ನಿಚ್ಚಳವಾಗಿ ಒಲಿದು ಒದಗಿತು. 5ನೇ ತರಗತಿಯವರೆಗೆ ಶಾಲಾಭ್ಯಾಸ ಮಾಡಿದ ಗಾಣಿಗರು ದಶಾವತಾರಿ ಮಾರ್ವಿ ರಾಮಕೃಷ್ಣ ಹೆಬ್ಬಾರ್ ಹಾಗೂ ಮಾವಂದಿರಾದ ಹಾರಾಡಿ ಕುಷ್ಠ ಗಾಣಿಗ, ನಾರಾಯಣ ಗಾಣಿಗರ ಗುರುತನದಲ್ಲಿ ಪರಂಪರೆಯ ಪರಿಪಕ್ವ ಫಲವಾಗಿ ಯಕ್ಷವೃಕ್ಷದಲ್ಲಿ ನಳನಳಿಸಿದರು.

ಸೌಕೂರು ಮೇಳದಲ್ಲಿ ಗೆಜ್ಜೆ ಕಟ್ಟಿದ ಗಾಣಿಗರು ಅಮೃತೇಶ್ವರಿ, ಮಾರಣಕಟ್ಟೆ, ಕಮಲಶಿಲೆ, ಪೆರ್ಡೂರು, ಇಡಗುಂಜಿ ಮೇಳಗಳಲ್ಲಿ 55ವರ್ಷಗಳ ಸಾರ್ಥಕ ಕಲಾಬದುಕು ಕಂಡಿದ್ದಾರೆ. ಪ್ರಸ್ತುತ ಶಂಕರಗಾಣಿಗರು ಬೆಂಗಳೂರಿನಲ್ಲಿ ವಿಶ್ರಾಂತ ಜೀವನದಲ್ಲಿದ್ದಾರೆ. ನಾಯಕ, ಖಳನಾಯಕ ಪಾತ್ರಗಳಲ್ಲಿ ಪೌರಾಣಿಕತೆಯ

ಅಂತಃಸತ್ವವನ್ನು ಎತ್ತಿಹಿಡಿಯುವ ಶಂಕರಗಾಣಿಗರು ಎರಡನೇ ವೇಷಧಾರಿಯಾಗಿ ವಿಜೃಂಭಿಸುವ ಪೂರ್ವದಲ್ಲಿ ಸುಮಾರು ಹದಿನೈದು ವರ್ಷ ಪ್ರಧಾನ ಸ್ತ್ರೀವೇಷಧಾರಿಯಾಗಿ ರಂಗಸ್ಥಳವನ್ನು ಬೆಳಗಿದವರು.

ಹಾರಾಡಿ ಶೈಲಿಯಲ್ಲಿ ನಿರೂಪಿತವಾದ ಕರ್ಣ, ಅರ್ಜುನ, ಜಾಂಬವ, ಋತುಪರ್ಣ, ಹಿರಣ್ಯಕಶಿಪು ಮೊದಲಾದ ಪಾತ್ರಗಳ ಶಾಸ್ತ್ರೋಕ್ತ ರಂಗಚಿತ್ರಣ ಸ್ಮರಣೀಯ, ಹಾಗೆಯೇ ಭಸ್ಮಾಸುರ, ಶಬರ, ಕಣ್ಣಪ್ಪ, ವಿಭಿಷಣ, ಯಮ, ಜಮದಗ್ನಿ ಮೊದಲಾದ ಪುರಾಣ ಪಾತ್ರಗಳನ್ನು ರಂಗದಲ್ಲಿ ಮೆರೆದ ಪರಿ ಅವರ್ಣನೀಯ. ಮುಂಡಾಸು ಹಾಗೂ ಪಾರ್ಟಿನ ವೇಷಗಳಲ್ಲಿ ಗಾಣಿಗರ ವಿಶೇಷ ಪ್ರತಿಭೆ ರಂಗ ರಮಣೀಯ.

ಕೋಡಿ ಶಂಕರಗಾಣಿಗರ ಅರ್ಧಾಂಗಿ ಶ್ರೀಮತಿ ಕನಕಾಂಗಿ, ಸುಮಿತ್ರ, ದಾಮೋದರ, ಅಂಬಿಕಾ, ಸಂತೋಷ, ಶ್ರೀಧರ ಮಕ್ಕಳು.

ಶ್ರೀ ಶಂಕರ ಗಾಣಿಗರಿಗೆ 2004ರಲ್ಲಿ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ, ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗ'ದ ಮಾರ್ವಿ ಹೆಬ್ಬಾರ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ-ಪುರಸ್ಕಾರ- ಸಂಮಾನ-ಗೌರವ ದೊರಕಿವೆ.



**ಶಂಕರ ದೇವಾಡಿಗ, ಉಳ್ಳೂರು**

*'ಕಾಳಿಕಾ ನಿಲಯ', ಅಂಚೆ : ಮೂಡು ಮಠ,*
*ಉಳ್ಳೂರು 11, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ 99011 48358*

ಬಳುಕುವ ಲತಾಂಗಿಯಾಗಿ, ಸಾಹಿತ್ಯಪೂರ್ಣ ಸ್ವಚ್ಛಮಾತಿನ ಯಕ್ಷ ಶುಭಾಂಗಿಯಾಗಿ ಕಾಣುವ ಉಳ್ಳೂರು ಶಂಕರ ದೇವಾಡಿಗರು ಉನ್ನತ ಪ್ರತಿಭೆಯ ಸಮರ್ಥ ಸ್ತ್ರೀವೇಷಧಾರಿ.

ಕುಂದಾಪುರ ತಾಲೂಕಿನ ಉಳ್ಳೂರು 11 ಎಂಬಲ್ಲಿ ನಾರಾಯಣ ದೇವಾಡಿಗ-ಚಂದ್ರಾವತಿ ದೇವಾಡಿಗರಿಗೆ ದಂಪತಿಯ ಸುಪುತ್ರರಾಗಿ ಜನಿಸಿದ ಶಂಕರ ಈಗ ನಲವತ್ತು ವರ್ಷ ಪ್ರಾಯ. ನಾಕಕ್ಕೇ ಓದು ಸಾಕೆನಿಸಿಕೊಂಡ ಶಂಕರ

ಅವರು ತನ್ನ 18ರ ಹರೆಯದಲ್ಲೇ ಯಕ್ಷಗಾನಕ್ಕೆ ಮುಖ ಮಾಡಿದರು. ಹೆರಂಜಾಲು ಗೋಪಾಲ ಗಾಣಿಗ,ನಾಗೂರು ಶ್ರೀನಿವಾಸ ದೇವಾಡಿಗರೇ ಇವರ ಗುರುಗಳು.

ಶೃಂಗಾರ, ಸೌಜನ್ಯ, ಗರತಿ ಪಾತ್ರಗಳಲ್ಲಿ ತನ್ನ ಕಲಾಪ್ರತಿಭಾ ಸಿರಿವಂತಿಕೆಯನ್ನು ಸಾದರ ಪಡಿಸುವ ಉಳ್ಳೂರು ಅವರ ಸೀತೆ, ಶ್ರೀದೇವಿ, ಸುಭದ್ರೆ, ಕುಂತಿ, ವಿಷಯ ಮೊದಲಾದ ಪಾತ್ರಗಳು ಜನ ಮನ ರಂಜಿಸುವಲ್ಲಿ ಗೆಲುವು ಕಂಡಿವೆ.

ಸುಪುಷ್ಟ ಭಾಷಾಚಮತ್ಕಾರ, ಸ್ತ್ರೀಸಹಜ ಕಂಠಶ್ರೀ, ಲಾಲಿತ್ಯಪೂರ್ಣ ಹಾವ-ಭಾವ, ನೃತ್ಯ ಅಭಿನಯ ಕೌಶಲ, ಪಾತ್ರ ತಾದಾತ್ಮ್ಯ, ಆಕರ್ಷಕ ವೇಷವೈಭವ ಉಳ್ಳೂರುಶಂಕರರ ಗಮನೀಯ ಅಂತರ್ಬಹಿರಂಗದ ಕಲಾಂಶಗಳಾಗಿ ಗುರುತಿಸ-ಲ್ಪಡುತ್ತದೆ.

ಮಾರಣಕಟ್ಟೆ 9, ಶಿರಸಿ ಮಾರಿಕಾಂಬಾ 1, ಅಮೃತೇಶ್ವರಿ 1, ಬಗ್ವಾಡಿ 1, ಪೆರ್ಡೂರು 10, ಸಾಲಿಗ್ರಾಮ 1, ಹೀಗೆ 2 3ವರ್ಷಗಳ ರಂಗಕೃಷಿ ಅವರದ್ದು. ಪ್ರಸ್ತುತ ಶಂಕರ ದೇವಾಡಿಗ ಸಾಲಿಗ್ರಾಮ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ. ಮಡದಿ ಶಾರದಾ, ಶಶಾಂಕ, ಶಾರ್ವರಿ, ಶರಣ್ಯ ಮಕ್ಕಳು. ಕಲಾವಿದ ಶಂಕರ ದೇವಾಡಿಗರನ್ನು ಹಲವು ಸಂಘಸಂಸ್ಥೆಗಳು ಗೌರವಿಸಿವೆ. ರಾಜ್ಯ, ಹೊರರಾಜ್ಯದ ಅನೇಕ ಸಂಘಟನೆಗಳು ಗುರುತಿಸಿ ಗೌರವಿಸಿವೆ.



ಶಂಕರ ಭಾಗವತ, ಯಲ್ಲಾಪುರ

*ಕೋವೆಸರ ಬಿಲ್ಡಿಂಗ್, ಶಿರಸಿ, ಚೌಕಿ ಮಠ,*
*(ಕದಂಬ ಆಫೀಸ್ ಬಳಿ) ಉ. ಕ.*
*ದೂರವಾಣಿ: 96869 09177*

ಮದ್ದಳೆಯ ನಾದಲೋಕದ ನಿಧಿಯಂತೆ ಕಂಗೊಳಿಸುವ ಯಲ್ಲಾಪುರ ಶಂಕರ ಭಾಗವತರು ವಿದ್ವತ್‌ಶೀಲ ಪ್ರತಿಭೆಯಾಗಿ ಗುರುತಿಸಿಕೊಂಡ ಸಮರ್ಥ ಮದ್ದಳೆವಾದಕರು.

ಉತ್ತರಕನ್ನಡದ ಯಲ್ಲಾಪುರ ಎಂಬಲ್ಲಿ 1-5- 1955ರಲ್ಲಿ ಜನಿಸಿದ ಶಂಕರ ಭಾಗವತರು ರಾಮಚಂದ್ರ ಭಾಗವತ್-ಕಮಲಾ ಭಾಗವತ್ ದಂಪತಿಯ ಪುತ್ರ

ಎಳವೆಯಲ್ಲೇ ಕಲಾಸಕ್ತಿಯನ್ನು ಗಂಭೀರವಾಗಿ ಮೈಗೂಡಿಸಿಕೊಂಡಿದ್ದ ಶಂಕರಭಾಗವತ ಅವರಿಗೆ ಖ್ಯಾತ ಮದ್ದಳೆಗಾರ ಬೇಳಂಜೆ ತಿಮ್ಮಪ್ಪ ನಾಯ್ಕರೇ ಬಣ್ಣದ ಬದುಕಿನ ನಾದಲೀಲೆಗೆ ಪ್ರೇರಕ-ಪ್ರೋತ್ಸಾಹಕ ವ್ಯಕ್ತಿ - ಶಕ್ತಿ.

7ನೇ ತರಗತಿಯವರೆಗೆ ವಿದ್ಯಾಭ್ಯಾಸ ನಡೆಸಿದ ಶ್ರೀಯುತರು, ಬೇಳಂಜೆ ತಿಮ್ಮಪ್ಪ ನಾಯ್ಕ, ನಾರ್ಣಪ್ಪ ಉಪ್ಪರ, ಗೋರ್ಪಾಡಿ ವಿಠಲ ಪಾಟೀಲ್, ವೀರಭದ್ರನಾಯ್ಕ, ಮಹಾಬಲ ಕಾರಂತ, ಮರವಂತೆ ನರಸಿಂಹದಾಸ್, ಕಡತೋಕ ಮಂಜುನಾಥ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ.. ಮೊದಲಾದವರ ಗುರುತನವನ್ನು ಮನಸ್ವೀ ಸ್ವೀಕರಿಸಿದವರು.

ಶಾಸ್ತ್ರೀಯ ಸಂಗೀತ, ತಬಲಾವಾದನ, ಚಂಡೆವಾದನವನ್ನು ಬಲ್ಲ ಈ ಮದ್ದಳೆಗಾರರ ಮದ್ದಳೆಯ ಮೃದು ನುಡಿತ ಗಾನ ಪೋಷಕ, ನಟನ ಚೇತನಶೀಲ ಅಭಿವ್ಯಕ್ತಿಗೆ ಪೂರಕವಾದದ್ದು. ಶಾಸ್ತ್ರೀಯ ಮಟ್ಟು-ಪೆಟ್ಟುಗಳೂ, ನವ್ಯತೆಯ ಸೃಷ್ಟಿಶೀಲ ನುಡಿತ- ಭಣಿತದ ಗುಟ್ಟುಗಳೂ ಅವರಿಗೆ ಹಸ್ತಗತವಾಗಿದೆ. ಕಾಳಿಂಗ ನಾವಡರ ಕಂಠಸಿರಿಯಲ್ಲಿ ಶಂಕರಭಾಗವತರ ಮದ್ದಳೆಯ ಮಾಂತ್ರಿಕ ಶಕ್ತಿ ಯಕ್ಷಲೋಕ ತುಂಬಿಕೊಂಡಿದೆ.

ಭಾವಾನುಕೂಲ್ಯಕರವಾದ ಮದ್ದಳೆಯ ನುಡಿಗಾರಿಕೆ-ನುಡಿಸಾಣಿಕೆಯಲ್ಲಿ ರಂಗಮಂಚಕ್ಕೆ ನಾದಪೂರ್ಣ ಗುಂಗು ತುಂಬಿಸುವ ಶಂಕರ ಭಾಗವತರು ಪೆರ್ಡೂರು 2, ಕೆರೆಮನೆ 1, ಅಮೃತೇಶ್ವರಿ ಡೇರೆ 4, ಶಿರಸಿ ಪಂಚಲಿಂಗ 4, ಸಾಲಿಗ್ರಾಮ ಮೇಳ ಹೀಗೆ 35ವರ್ಷ ಸೇವೆ ಸಲ್ಲಿಸಿದ್ದಾರೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಹಿರಿ-ಕಿರಿಯ ಶ್ರೇಷ್ಠ ಭಾಗವತರ, ಕಲಾವಿದರ ಹಿಮ್ಮೇಳ-ಮುಮ್ಮೇಳಕ್ಕೆ ಸೂಕ್ತವಾದನ ಸಾಂಗತ್ಯ ನೀಡಿದ ಮೇರು ಪ್ರತಿಭಾನ್ವಿತ ಮದ್ದಳೆಗಾರ ಶಂಕರಭಾಗವತರು ಪ್ರಸ್ತುತ ಅತಿಥಿ ಮದ್ದಳೆಗಾರರಾಗಿ ದುಡಿಯುತ್ತಿದ್ದಾರೆ.

ಮದ್ದಳೆಯ ವಾದನಕ್ಕೆ ತಾರಾಮೌಲ್ಯ ತಂದುಕೊಟ್ಟ ಸಂಪನ್ನಶೀಲ ಪ್ರತಿಭೆ ಶಂಕರಭಾಗವತರು ಪತ್ನಿ ವಿನೋದ ಭಾಗವತ್, ದರ್ಶನ್, ಪೂಜಾ ಮಕ್ಕಳು. ಶಿರಸಿ ಟಿ.ಎಸ್.ಎಸ್ ಅಭಿಮಾನಿ ಸಂಘ, ಬೆಂಗಳೂರು, ಮುಂಬೈ ಅಭಿ ಮಾನಿಗಳ ಬಳಗದಿಂದಲೂ ಶ್ರೀಯುತರು ಸಂಮಾನ ಪಡೆದಿರುತ್ತಾರೆ.



ಶಿವರಾಮ ಶೆಟ್ಟಿ, ಕಟ್ಟಿನಬೈಲು

ಅಂಚೆ : ಉಳ್ಳೂರು (74),
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 96324 76264

ಬಡಗುತಿಟ್ಟಿನ ಸಂಪ್ರದಾಯ ಸಾರವನ್ನು ಘನೀಕರಿಸಿಕೊಂಡು ಪೌರಾಣಿಕ ಪಾತ್ರಗಳಲ್ಲಿ ತನ್ನದೇ ವಿಶೇಷ ಕಲಾಪ್ರೌಢಿಮೆ ಕಾಣಿಸುವ ಕಲಾವಿದ ಸಂಪನ್ನ ಕಟ್ಟಿನ ಬೈಲು ಶಿವರಾಮ ಶೆಟ್ಟಿ,

ಕುಂದಾಪುರ ತಾಲೂಕಿನ ಕಟ್ಟಿನಬೈಲು ಎಂಬ ಹಳ್ಳಿಯಲ್ಲಿ 1963ರಲ್ಲಿ ಜನಿಸಿದ ಶಿವರಾಮ ಶೆಟ್ಟರು, ಕುಷ್ಟಪ್ಪ ಶೆಟ್ಟಿ – ಚಂದಮ್ಮ ಶೆಡ್ತಿ ದಂಪತಿಯ ಸುಪುತ್ರ

ಸುತ್ತಮುತ್ತಲಿನ ಬಯಲಾಟಗಳ ಪ್ರೇರಣೆಯಿಂದ ಕಲಾಜೀವನದ ಕನಸುಕಂಡ ಶಿವರಾಮಶೆಟ್ಟರು, 5ನೇ ಇಯತ್ತೆಯನಂತರ 14ನೇ ವಯಸ್ಸಿನಲ್ಲೇ ಯಕ್ಷ ಹಂಸಂ ಜಗತ್ತಿಗೆ ಹೆಜ್ಜೆಯೂರಿದರು.

ಐರಬೈಲು ಆನಂದ ಶೆಟ್ಟರ ಪ್ರೇರಣೆಯಿಂದ ಕಲಾಬದುಕಿನ ಮಾರ್ಗವನ್ನು ಸುಸಾಂಗವಾಗಿಸಿಕೊಂಡ ಶಿವರಾಮ ಶೆಟ್ಟರು, ಸರ್ವೋತ್ತಮ ಗಾಣಿಗ ಹಾರಾಡಿ ಹಾಗೂ ಐರಬೈಲು ಆನಂದ ಶೆಟ್ಟರ ಶಿಷ್ಯನಾಗಿ ಉನ್ನತ ಕಲಾವಿದ್ಯೆಯನ್ನು ಮೈಗೂಡಿಸಿಕೊಂಡರು.

ಶ್ರೀಯುತರ ಗತ್ತು-ಗಾಂಭೀರದ ರಂಗನಡೆ, ತೂಕದ ವಾಕ್‌ವೈಖರಿ, ನಡುತಿಟ್ಟಿನ ಸೊಗಡು ಮೆರೆಯುವ ವೇಷವೈಭವ ಮನಮೆಚ್ಚುವಂತಹುದು. ಪಾತ್ರ ಮೆರೆಸುವಂತಾದ್ದು. ಮುಂಡಾಸುವೇಷಗಳ ನಿರ್ವಹಣೆಯಲ್ಲಂತೂ ಶ್ರೀಯುತರ ಕಲಾಪ್ರತಿಭೆ ಉತ್ಕೃಷ್ಟಮಟ್ಟದ್ದು ಎನ್ನಬಹುದಾಗಿದೆ.

ಮಾರಣಕಟ್ಟೆ 3, ಕಮಲಶಿಲೆ 7, ಕಳವಾಡಿ 1, ಮಡಾಮಕ್ಕಿ 8, ಸೌಕೂರು 7, ಹಾಲಾಡಿ 6, ಹೀಗೆ 32ವರ್ಷಗಳ ಕಲಾ ವ್ಯವಸಾಯವನ್ನು ಯಶಸ್ವಿಯಾಗಿ ಪೂರೈಸಿದ ಶೆಟ್ಟರು ಪ್ರಸ್ತುತ ಹಾಲಾಡಿ ಮೇಳದ ಕಲಾವಿದರು.

ಶ್ರೀಯುತರ ಕೌಂಡ್ಲೀಕ, ದಮನ, ವೀರಮಣಿ, ಸುಲೋಚನಾ, ವಿಭೀಷಣ, ವೃಷಕೇತು ಮೊದಲಾದ ಮುಂಡಾಸುವೇಷಗಳು ಪ್ರೇಕ್ಷಕರ ಮನೋಭೂಮಿಕೆಗಳಲ್ಲಿ ಗಟ್ಟಿಸ್ಥಾನಪಡೆದಿವೆ. ಕಸ್ತೂರಿ ಶೆಟ್ಟಿ ಶ್ರೀಯುತರ ಬಾಳ ಸಂಗಾತಿ. ನವೀನ, ನಯನ ಮಕ್ಕಳು. ಅನುಭವಪೂರ್ಣ, ಕಲಾವಿದ ಕಟ್ಟಿನಬೈಲು ಶಿವರಾಮ ಶೆಟ್ಟರು ಹಲವು ಸಂಘ-

ಸಂಸ್ಥೆಗಳಿಂದ ಸಂಮಾನ ಪಡೆದಿದ್ದಾರೆ. ಮಂಗಳೂರಿನ ಜಾಗತಿಕ ಬಂಟಪ್ರತಿಷ್ಠಾನದ ಗೌರವ ಪ್ರಶಸ್ತಿಯೂ ಇವರಿಗೆ ದೊರಕಿರುತ್ತದೆ.



ಶಿವಾನಂದ, ಕೋಟ

ಅಂಚೆ : ಕೋಟ, ಗಿಳಿಯಾರು ಗ್ರಾಮ, ಉಡುಪಿ ಜಿಲ್ಲೆ
ದೂರವಾಣಿ : 0820 2565533, 98457 60157

ಬಡಗುತಿಟ್ಟು ಯಕ್ಷಗಾನದ ಚಂಡೆವಾದನದಲ್ಲಿ ಸಿದ್ಧಿ ಪ್ರಸಿದ್ಧಿಯನ್ನು ಕಂಡ ಪ್ರಬುದ್ಧ ಚಂಡೆವಾದಕ ಶಿವಾನಂದ ಕೋಟ,

ಉಡುಪಿ ಜಿಲ್ಲೆಯ ಗಿಳಿಯಾರು ಗ್ರಾಮದ ಕೋಟದ ರಾಮಕೃಷ್ಣ ಮೆರಟ-ಜಲಜಾಕ್ಷಿ ದಂಪತಿಯ ಸುಪುತ್ರರಾಗಿ 10-9-1967ರಲ್ಲಿ ಜನಿಸಿದ ಶಿವಾನಂದ ಕೋಟ ಅವರು 7ನೇ ತರಗತಿಯ ವರೆಗೆ ಅಕ್ಷರಾಭ್ಯಾಸ ಮಾಡಿ 13ರ ಹರೆಯದಲ್ಲೇ ಯಕ್ಷಲೋಕ ಪ್ರವೇಶಿಸಿದ ಸಂಪನ್ನ ಪ್ರತಿಭೆ.

ಕೋಟದ 'ಯಕ್ಷತರಂಗ' ಬಾಲಕರ ಮೇಳದ ಬಾಲಕಲಾವಿದನಾಗಿ ಎಂ. ಎನ್. ಮಧ್ಯಸ್ಥರ ಯಕ್ಷಗಾನ ತರಬೇತಿಯ 'ಗಣೇಶೋತ್ಪತ್ತಿ' ಪ್ರಸಂಗದಲ್ಲಿ 'ಭಂಗಿ'ಯಾಗಿ ರಂಗಮಂಚವೇರಿದ ಶಿವಾನಂದ ಮತ್ತೆ ಯಕ್ಷಗಾನವನ್ನೇ ವೃತ್ತಿಯಾಗಿಸಿಕೊಂಡರು. ಯಕ್ಷಗಾನದ ವೀರವಾದ್ಯವೆನಿಸಿದ ಚಂಡೆಯ ನಾದ ಮಾಧುರಕ್ಕೆ ಮನಸೋತ ಶಿವಾನಂದರಿಗೆ ಎಳವೆಯಲ್ಲಿ 'ಹಳೇ ಪಾತ್ರೆ-ಹಳೇ ಡಬ್ಬಿ'ಯೇ ಚಂಡೆಯಾಗಿದ್ದುವು! ಇಂತಹ ವಾದನಾಸಕ್ತಿ ಮುಂದೆ ಇವರ ಕೈ ಚುರುಕಾಗಿಸಿತು. ಸುತ್ತಮುತ್ತಲಿನ ಬಯಲಾಟಗಳ ಚಂಡೆಯ ಗಂಡುಧ್ವನಿ ಇವರ ಗುಂಡಿಗೆಯನ್ನು ತುಂಬಿಕೊಂಡಿತು. ಚಂಡೆವಾದನ ಕಲಿಕೆಯಲ್ಲಿ ಇವರದ್ದು ಆರಂಭಿಕ 'ಏಕಲವ್ಯ ಪ್ರಯೋಗವಾಯಿತು. ತದನಂತರ ಸುಪ್ರಸಿದ್ಧ ಚಂಡೆಗಾರ ಮಂದಾರ್ತಿ ರಾಮಕೃಷ್ಣರ ಗುರುತನ, ಹೊಳೆಗದ್ದೆ ಗಜಾನನ ಭಂಡಾರಿಯವರ ಮಾರ್ಗದರ್ಶನ ದೊರಕಿ, ಚಂಡೆಗಾರಿಕೆಯಲ್ಲಿ ಸ್ಪಷ್ಟ ಆಯಾಮವನ್ನು ಕಂಡು ಕೊಳ್ಳುವುದಕ್ಕೆ ಸುಲಭಸಾಧ್ಯವಾಯಿತು.

ಮೊದಲು ವೃತ್ತಿರಂಗಭೂಮಿಯಲ್ಲಿ ವೇಷಧಾರಿಯಾಗಿ ಗುರುತಿಸಿಕೊಂಡ ಶಿವಾನಂದರನ್ನು ಹಿರಿಯ ಭಾವಗವತ ನಾರ್ಣಪ್ಪ ಉಪ್ಪರರೇ ಅಮೃತೇಶ್ವರಿ ಮೇಳಕ್ಕೆ ಸೇರ್ಪಡೆ ಗೊಳಿಸಿದರು. ಆಮೇಳಕಲ್ಲಿ

ಬಾಲಗೋಪಾಲನಾಗಿ ಕುಣಿಯುತ್ತಿದ್ದ  ಶಿವಣ್ಣ ಮುಂದೆ ಶಿರಸಿ ಪಂಚಲಿಂಗೇಶ್ವರ ಮೇಳದಲ್ಲಿ ಸಹ ಚಂಡೆವಾದಕರಾಗಿ ಕಲಾವಿದರನ್ನು ಕುಣಿಸಿ, ಜನಮನ ತಣಿಸಿದರು.

ಅಮೃತೇಶ್ವರಿ ಮೇಳದಲ್ಲಿ 3ವರ್ಷ ವೇಷಧಾರಿಯಾಗಿ, ಶಿರಸಿ ಪಂಚಲಿಂಗ 1, ಕೋಟ ಹಿರೇಮಹಾಲಿಂಗೇಶ್ವರ ಮೇಳ 1, ಸಾಲಿಗ್ರಾಮ ಮೇಳ 25 ಹೀಗೆ 30ವರ್ಷಗಳ ಕಲಾ ತಿರುಗಾಟದಲ್ಲಿ ಶಿವಾನಂದ ಕೋಟ ಅನುಭವಿ ಚಂಡೆಗಾರರಾಗಿ ಖ್ಯಾತಿ ಪಡೆದಿದ್ದಾರೆ.

ಪ್ರಸಂಗದ ಅಂತರಂಗ ಭಾವ, ಪಾತ್ರಗಳ ಸ್ವಭಾವ, ಸನ್ನಿವೇಶ ಅರ್ಥೈಸಿಕೊಂಡು ನವಿರಾದ ನುಡಿಸಾಣಿಕೆಯಲ್ಲಿ ಮೆರೆಯುವ ಶಿವಾನಂದ ಕೋಟ ಅವರ ಕಾಶೀಮಾಣಿ ಪಾತ್ರ ಜನಪ್ರಿಯ. ಪತ್ನಿ ಸುರೇಖಾ, ಸಂಧ್ಯಾ ಶಶಿಧರ ಮಕ್ಕಳು. ಉತ್ಸಾಹಿ ಚಂಡೆವಾದಕ ಕೋಟ ಶಿವಾನಂದ ಅವರು ನವದೆಹಲಿಯಲ್ಲಿ 1992ರಲ್ಲಿ ನಡೆದ 'ಫೂಲ್‌ವಾಲೋಂಕಿ ಸೈರ್' ಮಹೋತ್ಸವದಲ್ಲಿ ಗೌರವ ಸಂಮಾನ ಸ್ವೀಕರಿಸಿದ್ದಾರೆ. ಹೈದರಾಬಾದ್-ಕರ್ನಾಟಕ ಸಂಘವತಿಯಿಂದ ಬೆಂಗಳೂರು, ಮುಂಬೈ, ಕುಮಟಾ, ಮೊದಲಾದ ಕಡೆಗಳಲ್ಲಿ ಗೌರವ ಸಂಮಾನ ಪಡೆದಿದ್ದಾರೆ.



**ಶಿವಾನಂದ ಹೆಗಡೆ, ಕೆರೆಮನೆ**

*ಅಂಚೆ : ಗುಣವಂತೆ, ಕೆರೆಮನೆ,*
*ಹೊನ್ನಾವರ ತಾಲೂಕು (ಉ. ಕ)*
*ದೂರವಾಣಿ: 08387-234144/188*

ಬಡಾಬಡಗಿನ ಪ್ರಸಿದ್ಧ ಕೆರೆ ಮನೆಯ ಕಲಾಕುಟುಂಬದ ಮೂರನೇ ಪೀಳಿಗೆಯ ಪ್ರಬುದ್ಧಕಲಾವಿದ ಕೆರೆಮನೆ ಶಿವಾನಂದ ಹೆಗಡೆ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಗುಣವಂತೆಯಲ್ಲಿ 24-10-1961ರಲ್ಲಿ ಜನಿಸಿದ ಶಿವಾನಂದ ಹೆಗಡೆ, ಯಕ್ಷಗಾನ ವರನಟ ಕೆರೆಮನೆ ಶಂಭು ಹೆಗಡೆ ಹಾಗೂ ಗೌರಿ ಶಂಭು ಹೆಗಡೆ ದಂಪತಿಯ ಸುಪುತ್ರ.

ಮನೆತನದ ಕಲಾಪರಂಪರೆಯ ಪ್ರಭಾವದಿಂದ ತನ್ನ 12ರ ಹರೆಯದಲ್ಲೇ ಇವರು ಬಣ್ಣ ಹಚ್ಚಿದರು. ಅಪ್ರತಿಮ ಕಲಾವಿದ ಅಜ್ಜ ಶಿವರಾಮ ಹೆಗಡೆ ಹಾಗೂ ತಂದೆ ಶಂಭು ಹೆಗಡೆಯವರ ಸಮರ್ಥ ಮಾರ್ಗದರ್ಶನ ಇವರನ್ನು ಸಮರ್ಥ ಕಲಾವಿದನನ್ನಾಗಿ ರೂಪಿಸುವಲ್ಲಿ ಶಕ್ತವಾಯಿತು.

ಅಜ್ಜ, ತಂದೆ, ದೊಡ್ಡಪ್ಪ (ಕೆರೆಮನೆ ಮಹಾಬಲ ಹೆಗಡೆ), ಚಿಕ್ಕಪ್ಪ (ಕೆರೆಮನೆ ಗಜಾನನ ಹೆಗಡೆ), ಎಲ್ಲರೂ ಈ ರಂಗದ ಶ್ರೇಷ್ಠ ಕಲಾವಿದರಾಗಿ ಸಾರ್ಥಕ ಕೀರ್ತಿ ಸಂಪಾದಿಸಿದ್ದರು. ಹಾಗಾಗಿ ಆನುವಂಶೀಯ ಕಲಾಬಳುವಳಿ ಇವರನ್ನು ಗಾಢವಾಗಿಬೆಸೆದುಕೊಂಡಿದೆ.

ಅಜ್ಜ ಶಿವರಾಮಹೆಗಡೆ ಹಾಗೂ ಕುಟುಂಬದ ಎಲ್ಲಾ ಹಿರಿಯ ಕಲಾವಿದರು, ಹೊಸ್ತೋಟ ಮಂಜುನಾಥ ಭಾಗವತರು, ಹೆರಂಜಾಲು ವೆಂಕಟರಮಣ, ಮಲ್ಲದೆ ಗಣೇಶ ಹೆಗಡೆ, ಕರ್ಕಿ ನಾರಾಯಣ ಹಾಸ್ಯಗಾ ಇವರಿಗೆ ಗುರುಬಲವಾದರು.

ಶಿವಾನಂದ ಹೆಗಡೆಯವರು ಪುರುಷ ವೇಷ ಹಾಗೂ ಸ್ತ್ರೀವೇಷಗಳನ್ನು ಸಮರ್ಥವಾಗಿ ನಿರ್ವಹಿಸುವವರು. ಶ್ರೀಯುತರ ಶ್ರೀಕೃಷ್ಣ, ಕಾರ್ತವೀರ, ರಾವಣ, ಸುಧೇಷ್ಣೆ, ದೌಪದಿ, ಕೌರವ, ಜರಾಸಂಧ, ಭೀಮ, ಬಲರಾಮ, ಶ್ರೀರಾಮ, ಸಾಲ್ವ, ಭೀಷ್ಮ, ಸುಧನ್ವ, ಅರ್ಜುನ, ಧರ್ಮಾಂಗದ, ಹನುಮಂತ ಪಾತ್ರಗಳು ಜನಪ್ರಿಯ.

ಗುಂಡಬಾಳ ಮೇಳದಲ್ಲಿ 2 ವರ್ಷ, ಪಂಚಲಿಂಗ-ಇಡಗುಂಜಿ ಮೇಳದಲ್ಲಿ ಕಲಾಸೇವೆ ನಡೆಸಿದ ಶಿವಾನಂದ ಹೆಗಡೆ ಸ್ವಯಂಸಂಚಾಲಕತ್ವದ ಇಡಗುಂಜಿ ಮೇಳದ ಪ್ರಧಾನ ಕಲಾವಿದರು. ಇಡಗುಂಜಿ ಯಕ್ಷಗಾನ ಕೇಂದ್ರದ ನಿರ್ದೇಶಕರು.

ದೇಶ-ವಿದೇಶಗಳಲ್ಲಿ ಇವರ ಕಲಾಪ್ರತಿಭೆ ಮೆರೆದಿದೆ. ಬಿ.ಎ. ಪೂರೈಸಿದ ಇವರು ಶ್ರೀಮತಿ ಮಾಯಾ ರಾವ್ ಅವರ ನಿರ್ದೇಶನದಲ್ಲಿ ಕೊರಿಯೋಗ್ರಫಿ ಡಿಪ್ಲೋಮಾ ಮಾಡಿದರು. ಕಥಕ್ ಮತ್ತಿತರ ಜಾನಪದ ನೃತ್ಯಕಲೆಯನ್ನು ಬಲ್ಲರು. ಶ್ರೀಯುತರು ಅನೇಕ ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ. ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಧರ್ಮಪತ್ನಿ ರಾಜೇಶ್ವರಿ ಹೆಗಡೆ. ಶ್ರೀಧರ ಹೆಗಡೆ, ಶಶಿಧರ ಹೆಗಡೆ ಇವರ ಮಕ್ಕಳು. ಇವರಿಗೆ ಭಾರತ ಸರಕಾರದ ಶಿಷ್ಯವೇತನ ಹಾಗೂ ನೂರಾರು ಸಂಮಾನ ದೊರಕಿದೆ. ಹಲವು ಬಾರಿ ವಿದೇಶ ಪ್ರಯಾಣ ಮಾಡಿ ಅಲ್ಲೂ ಕಲೆಯ ಪ್ರಸಾರಕ್ಕೆ ನೆರವಾಗಿದ್ದಾರೆ.



## ಶೀನ ಕುಲಾಲ್, ಗಾವಳಿ

*ಹಳ್ನಾಡಿ-ಹರ್ಕಾಡಿ ಗ್ರಾಮ, ಅಂಚೆ : ಹಳ್ನಾಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 92426 09560*

ನೀಳವಾದ ಆಳಂಗ, ಗತ್ತು ಗೈರತ್ತಿನ ನೃತ್ಯ ವೈಖರಿ, ಗಂಭೀರ ಸ್ವರಭಾರ, ಸಾಂಪ್ರದಾಯಿಕ ಪಾತ್ರ ಕಟ್ಟೋಣ. ಇಂತಹ ರಂಗಾಂಗ ಶೋಭಿತ ಹಿರಿಯ ವೇಷಧಾರಿ ಶೀನ ಕುಲಾಲ್ ಗಾವಳಿ.

ಕುಂದಾಪುರ ತಾಲೂಕಿನ ಪುಟ್ಟ ಹಳ್ಳಿಯೆನಿಸಿದ ಗಾವಳಿ ಎಂಬಲ್ಲಿ 19-3-1949ರಲ್ಲಿ ಬಚ್ಚ ಕುಲಾಲ್- ಕೊಲ್ಲು ಕುಲಾಲ್ತಿ ದಂಪತಿಯ ಸುಪುತ್ರನಾಗಿ ಜನಿಸಿದ ಶೀನ ಕುಲಾಲರು 2ನೇ ತರಗತಿಗೆ ಶರಣು ಹೊಡೆದು, ತನ್ನ 25ನೇ ವಯಸ್ಸಿನಲ್ಲಿ ಯಕ್ಷಗಾನ ರಂಗ ಜೀವನಕ್ಕೆ ಮುಂದಾದರು.

ಆರ್ಥಿಕ ಅನಾನುಕೂಲತೆಯಿಂದ ಸಂಕಟ ಪಡುತ್ತಿದ್ದ ಕುಟುಂಬ ನಿರ್ವಹಣೆಗೆ ಯಕ್ಷಗಾನ ಬಣ್ಣ- ನೂಪುರದ ಸಾಂಗತ್ಯ ಲೇಸೆಂದು ಬಗೆದ ಶೀನ ಕುಲಾಲರು ಸ್ವಯಂ ಪ್ರೇರಣೆ ಆಸಕ್ತಿಯಿಂದ ಈ ರಂಗಬದುಕಿಗೆ ಜೊತೆಯಾದರು. ಬಾಬು ಕುಲಾಲ ಗಾವಳಿ ಹಾಗೂ ಮಜ್ಜಿಗೆ ಬೈಲು ಚಂದಯ್ಯ ಶೆಟ್ಟರ ಗುರುತನದಲ್ಲಿ ವ್ಯವಸ್ಥಿತ ಕಲಾವಿದ್ಯೆಯನ್ನು ಗಳಿಸಿದ ಶ್ರೀಯುತರು ಹಂತ ಹಂತವಾಗಿ ಬೆಳೆದು ಸುಯೋಗ್ಯ ಕಲಾವಿದರಾಗಿ ರೂಪುಗೊಂಡರು.

ಮಾರಣಕಟ್ಟೆ 7, ಕಮಲಶಿಲೆ 7, ಹಾಲಾಡಿ 7, ಬಗ್ವಾಡಿ 1, ಮಂದಾರ್ತಿ 8, ಕಳವಾಡಿ 1, ಸೌಕೂರು 1, ಪೆರ್ಡೂರು 1, ಅಮೃತೇಶ್ವರಿ, ಸಾಲಿಗ್ರಾಮ 1, ಹೀಗೆ 35 ವರ್ಷಗಳ ನಿರಂತರ ಕಲಾವ್ಯವಸಾಯದಲ್ಲಿ ಯಶಸ್ಸು ಸಂಪಾದಿಸಿದರು.

ಪೌರಾಣಿಕ ಕಥಾನಕಗಳ ಪ್ರಧಾನ ರಾಜವೇಷಗಳನ್ನೂ ಮುಂಡಾಸು ವೇಷಗಳನ್ನು ಸುಪುಷ್ಟವಾಗಿ ಪೋಷಿಸುವ ಶ್ರೀಯುತರ ರಂಗವಾಗಿತೆ ಪ್ರೌಢವಾದುದು.

ಕರ್ಣ, ಶಲ್ಯ, ಶಂತನು, ಕೌರವ, ಜಾಂಬವ, ಬಲರಾಮ, ವೀರಮಣಿ ಶತ್ರುಘ್ನ, ಭಗದತ್ತ, ಶನೀಶ್ವರ ಮೊದಲಾದ ಪಾತ್ರಗಳಿಗೆ ತನ್ನದೇ ಕಲಾಮೆರುಗು ನೀಡಿರುವರು.

ಪತ್ನಿ ಪಾರ್ವತಿ, ಸೌಮ್ಯ, ಗೀತಾ, ಉದಯ, ಸುರೇಂದ್ರ ಮಕ್ಕಳು, ಹಿರಿಯ ಕಲಾವಿದ ಶೀನ ಕುಲಾಲರನ್ನು ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್, ಯಶಸ್ವೀ ಕಲಾವೃಂದ ತೆಕ್ಕಟ್ಟೆ ಮೊದಲಾದ ಸಂಘ- ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



**ಶೀನ ನಾಯ್ಕ್, ಜಮದಗ್ನಿ**

*ಯಡಾಡಿ-ಮತ್ಯಾಡಿ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08254 202784*

ಬಡಗುತಿಟ್ಟ ಯಕ್ಷಗಾನ ರಂಗದ ಪೂರ್ವಾನುಗತವಾದ ಕಲಾಶ್ಶೈಲಿಯನ್ನು ಬಣ್ಣದ ಬದುಕಿನುದ್ದಕ್ಕೂ ಪಾಲಿಸಕೊಂಡು ಬಂದ ಅಗ್ರಮಾನ್ಯ ವೇಷಧಾರಿ ಜಮದಗ್ನಿ ಶೀನ ನಾಯ್ಕ

'ಜಮದಗ್ನಿ ಶೀನ' ಅನ್ನುವ ಅನ್ವರ್ಥ ನಾಮದಿಂದಲೇ ಚಿರಪರಿಚಿತರಾದ ಶ್ರೀಯುತರು ಇದೀಗ 69ರ ಹರೆಯದಲ್ಲಿರುವ ಹಿರಿಯ ಪ್ರತಿಭೆ. ಇವರ ಹುಟ್ಟೂರು ಕುಂದಾಪುರ ತಾಲೂಕಿನ ಜನ್ನಾಡಿ, ತಂದೆ ಕುಷ್ಠ ಮೊಗವೀರ, ತಾಯಿ ಶ್ರೀಮತಿ ಲಚ್ಚಿ. ಮನೆಯಲ್ಲಿ ಕಿತ್ತು ತಿನ್ನುವ ಬಡತನ ಶೀನ ಅವರನ್ನು ಶಾಲಾ ಶಿಕ್ಷಣವನ್ನು ಎರಡನೇ ತರಗತಿಗಷ್ಟೇ ಸೀಮಿತಗೊಳಿಸಿತು. ಸುತ್ತಮುತ್ತ ನಡೆಯುತ್ತಿದ್ದ ಯಕ್ಷಗಾನ ಆಟ-ಕೂಟಗಳ ಆಕರ್ಷಣೆ ವೃತ್ತಿ ಬದುಕಿಗೆ ಪ್ರೇರೇಪಿಸಿತು. ಬಣ್ಣದ ಸಂಜೀವಯ್ಯನವರಲ್ಲಿ ಪ್ರಾಥಮಿಕ ಯಕ್ಷ ಶಿಕ್ಷಣ ಪಡೆದ ಅವರು ತನ್ನ 13ರ ಹರೆಯದಲ್ಲೇ ರಂಗಮಂಚಕ್ಕೆ ಹೆಜ್ಜೆ ಹಾಕಿದರು. ಗುರು ವೀರಭದ್ರ ನಾಯಕ್, ಬಿ. ಶ್ರೀನಿವಾಸ ನಾಯ್ಕ, ವಂಡಾರು ಬಸವ ಹಾಗೂ ಪೆರ್ಡೂರು ರಾಮನವರ ಶಿಷ್ಯನಾಗಿ ಶಾಸ್ತ್ರೀಯ ಕಲಾವಿದ್ಯೆಯನ್ನು ಸಮರ್ಪಕವಾಗಿ ಸಂಪಾದಿಸಿದ ಜಮದಗ್ನಿ ಶೀನನಾಯ್ಕರಿಗೆ ವೃತ್ತಿ ಮೇಳದಲ್ಲಿ ಶೇಷಗಿರಿ ಭಾಗವತರು, ಹಿರಿಯಡಕ ಗೋಪಾಲರಾಯರು ಹಾಗೂ ಚಂಡೆ ಕಿಟ್ಟನವರ ಪ್ರೋತ್ಸಹ, ಮಾರ್ಗದರ್ಶನ ಸುಪುಷ್ಟವಾಗಿ ದೊರಕಿತು.

ಮಂದಾರ್ತಿ, ಮಾರಣಕಟ್ಟೆ, ಪೆರ್ಡೂರು, ಅಮೃತೇಶ್ವರಿ, ಸಾಲಿಗ್ರಾಮ, ಪೊಳಲಿ, ಕೊಡವೂರು, ಗೋಳಿಗರಡಿ, ಹಾಲಾಡಿ, ಬಗ್ವಾಡಿ, ಕಮಲಶಿಲೆ, ಮೇಳಗಳಲ್ಲಿ ಸುದೀರ್ಘ ಐವತ್ತು ವರುಷಗಳ ಕಾಲ ಕಲಾಸೇವೆ ನಡೆಸಿದ ಶೀನನಾಯ್ಕರು ಉಭಯ ತಿಟ್ಟುಗಳಲ್ಲೂ ವಿಜೃಂಭಿಸಿ ಗೆಲುವು ಕಂಡವರು.

ಶೀನನಾಯ್ಕರು ಆರಂಭಿಕ ವೃತ್ತಿಬದುಕಿನಲ್ಲಿ ಪ್ರಧಾನ ಸ್ತ್ರೀವೇಷಧಾರಿಯಾಗಿ ಖ್ಯಾತನಾಮರಾದವರು. ಇವರ ಶಶಿಪ್ರಭೆ, ಮೀನಾಕ್ಷಿ, ದೌಪದಿ, ಸೀತೆ, ಚಿತ್ರಾಂಗದೆ, ಪ್ರಮೀಳೆ, ಮಂಡೋದರಿ, ಪಾತ್ರಗಳು

ಜನಪ್ರಿಯವಾಗಿವೆ. ಒಮ್ಮೆ ಮಾರಣಕಟ್ಟೆ ಮೇಳದಲ್ಲಿ ಪರಿಸ್ಥಿತಿಯ ಒತ್ತಡದಿಂದ 'ರೇಣುಕಾ ಮಹಾತ್ಮ'ಯ ಜಮದಗ್ನಿ ಪಾತ್ರ ನಿರ್ವಹಿಸಬೇಕಾಗಿ ಬಂದಿತು. ಅಂದು ನಿರ್ವಹಿಸಿದ ಆ ಪಾತ್ರ ಅದೆಷ್ಟು ಜನ ಮೆಚ್ಚುಗೆ ಗಳಿಸಿತೆಂದರೆ ರಾತ್ರಿ ಬೆಳಗಾಗುವುದರೊಳಗೆ ಜನ್ನಾಡಿ ಶೀನನಾಯ್ಕರು 'ಜಮದಗ್ನಿ ಶೀನ'ರಾಗಿಬಿಟ್ಟರು !

ಆನಂತರ ಪುರುಷವೇಷಧಾರಿಯಾಗಿ, ಎರಡನೇ ವೇಷಧಾರಿಯಾಗಿ ಪೌರಾಣಿಕ ಭೂಮಿಕೆಗಳಿಗೆ ಜೀವ ತುಂಬಿದರು. ಅರ್ಜುನ, ಜಾಂಬವ, ಭೀಮ, ಕೌರವ, ವಿಶ್ವಾಮಿತ್ರ, ಋತುಪರ್ಣ, ಪಾತ್ರಗಳಿಗೆ ತನ್ನದೇ ಶೈಲೀಕೃತ ವಿಶೇಷ ಮೆರುಗ ನೀಡಿದರು.

ಮಡದಿ ಕೊಲ್ಲು ಮೊಗೇರ್ತಿ, ಪ್ರಕಾಶ, ಪ್ರತಾಪ, ಮಹೇಶ, ದಿನೇಶ, ಮಾಲಿನಿ, ಶಾಲಿನಿ ಮಕ್ಕಳು. ಪ್ರಬದ್ಧ ಕಲಾವಿದ ಜಮದಗ್ನಿ ಶೀನನಾಯ್ಕರು, ಹಲವಾರು ಸಂಘ ಸಂಸ್ಥೆಗಳ ಸಂಮಾನ ಪಡೆದಿದ್ದಾರೆ.



**ಶೀನ ನಾಯ್ಕ, ಬ್ರಹ್ಮೇರಿ**

*ಕೆರೆಮುಲ್ಲೆಮನೆ, ಅಂಚೆ : ಹಳ್ಳಿ ಹೊಳೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ 08259  277466*

ಪಾರಂಪರಿಕ ಶೈಲಿಯಲ್ಲಿ ಬಣ್ಣಗಾರಿಕೆ, ನಾಟ್ಯಗಾರಿಕೆ, ಹಾಗೂ ಮಾತುಗಾರಿಕೆಯನ್ನು ರೂಢಿಸಿಕೊಂಡು ಮಾರಣಕಟ್ಟೆ ಮೇಳದ ಬಣ್ಣದ ವೇಷಧಾರಿಯಾಗಿ ಮನ್ನಣೆಯನ್ನು ಪಡೆದ ಹಿರಿಯ ಕಲಾವಿದರು ಶ್ರೀ ಬ್ರಹ್ಮರಿ ಶೀನನಾಯ್ಕ.

ಸುಬ್ಬಯ್ಯ ನಾಯ್ಕ-ಗಿರಿಜಾ ದಂಪತಿಯ ಪುತ್ರರಾಗಿ ಕುಂದಾಪುರ ತಾಲೂಕಿನ ಬ್ರಹ್ಮರಿ ಎಂಬಲ್ಲಿ ಜನಿಸಿದ ಶೀನನಾಯ್ಕರು 52ವರ್ಷದ ಹಿರಿತನದ ಕಲಾವಂತರು. ಎಳವೆಯಲ್ಲಿ ಮೈಮನ ತುಂಬಿದ ಅನ್ಯಾದೃಶ ಯಕ್ಷಗಾನ ಕಲಾಸಕ್ತಿಯೇ ಇವರ ವೃತ್ತಿರಂಗಭೂಮಿಗೆ ಪ್ರೇರಣೆಯಾಯಿತೆನ್ನಬಹುದಾಗಿದೆ. ಗುರುವೀರಭದ್ರನಾಯಕರ ಶಿಷ್ಯರಾದ ಬ್ರಹ್ಮರಿ ಶೀನನಾಯ್ಕರು ಯಕ್ಷಕಥಾನಕಗಳ ರಾಜವೇಷ, ಮುಂಡಾಸುವೇಷಗಳನ್ನು ನಿರ್ವಹಿಸುತ್ತಾ, ಬಣ್ಣದವೇಷದಲ್ಲಿ ಖ್ಯಾತನಾಮವನ್ನು ಪಡೆದವರು.

ಶೀನನಾಯ್ಕರು 4ನೇ ತರಗತಿಗೆ ಶರಣು ಹೊಡೆದು, ತನ್ನ 18ನೇ ವಯಸ್ಸಿನಲ್ಲಿ ಯಕ್ಷಗಾನ ಪ್ರಪಂಚವನ್ನು ಪ್ರವೇಶಿಸಿದವರು. ಮಾರಣಕಟ್ಟೆ ಮೇಳ 12, ಸೌಕೂರು 8, ಕಮಲಶಿಲೆ 4, ಹಾಲಾಡಿ 6, ಹೀಗೆ ಇವರ ಕಲಾವ್ಯವಸಾಯದ ಒಟ್ಟು ತಿರುಗಾಟ ಮೂವತ್ತು. ಮಹಿಷಾಸುರ, ಹಿಡಿಂಬಾಸುರ, ಕೌಂಡ್ಲಿಕ, ಶೂರಸೇನ, ಶೂರ್ಪನಖಾ, ಘಟೋತ್ಕಚ ಮೊದಲಾದ ಭೂಮಿಕೆಗಳು ಶೀನನಾಯ್ಕರ ಉನ್ನತ ಪ್ರತಿಭೆಯಿಂದ ರಂಗಸ್ಥಳದಲ್ಲಿ ಮೆರೆದು ಕಲಾರಸಿಕರ ಶ್ಲಾಘನೆಗೆ ಪಾತ್ರವಾಗಿವೆ.

ಇವರ ಶ್ರೀಮತಿ ರತ್ನನಾಯ್ಕ, ಮಂಜುನಾಥ, ವಿಶ್ವನಾಥ, ಜಗನ್ನಾಥ ಎಂಬ ಮೂವರು ಗಂಡುಮಕ್ಕಳು ಪ್ರಸ್ತುತ ಮಾರಣಕಟ್ಟೆ ಮೇಳದ ಬಣ್ಣದ ವೇಷಧಾರಿ-ಯಾಗಿ ಸಾರ್ಥಕ ಹೆಸರು ಗಳಿಸಿದ್ದಾರೆ.

ಪ್ರೌಢ ಕಲಾನುಭವದೊಂದಿಗೆ ಸಾಂಪ್ರದಾಯಿಕ ಆವರಣದಲ್ಲಿ ವಿಜೃಂಭಿಸುವ ಬ್ರಹ್ಮರಿ ಶೀನನಾಯ್ಕ ಅವರನ್ನು ಹಲವಾರು ಸಂಘಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ.



ಶ್ರೀಕಂಠ ಭಟ್ ಎಚ್. ಎಸ್.

ಎಲ್ಲು ಕುಡಿಗೆ, ಅಂಚೆ : ಗಂಡಘಟ್ಟ,
ಶೃಂಗೇರಿ ತಾಲೂಕು, ಶಿವಮೊಗ್ಗ ಜಿಲ್ಲೆ
ದೂರವಾಣಿ : 94499 61378

ಪೌರಾಣಿಕ ಜ್ಞಾನ ಸಂಪತ್ತಿನಲ್ಲಿ ವ್ಯಾಕರಣ ಶುದ್ಧವಾಗಿ ಹೊರಹೊಮ್ಮುವ ಮಾತುಗಾರಿಕೆ, ಪಾತ್ರೋಚಿತವಾದ ನಾಟ್ಯ, ಅಭಿನಯ ಪದ್ಧತಿ, ಸುಂದರವಾದ ವೇಷವಿನ್ಯಾಸ, ಹೃದಯಸ್ಪರ್ಶಿ ಭಾವ ವಿಲಾಸ.... ನಿರ್ವಹಣಾ ಭೂಮಿಕೆಗಳಲ್ಲಿ ಸಮೃದ್ಧವಾಗಿ ಸಾಕಾರಗೊಳಿಸುವ ಪುರುಷವೇಷಧಾರಿ ಶ್ರೀಕಂಠ ಭಟ್ ಎಚ್.ಎಸ್.

ಚಿಕ್ಕಮಂಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಎಲ್ಲುಕುಡಿಗೆ ಎಂಬಲ್ಲಿ 30-7-1961ರಲ್ಲಿ ಶೇಷಗಿರಿ ಅಯ್ಯ-ವಿಶಾಲಾಕ್ಷಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಶ್ರೀಕಂಠ ಭಟ್ ಅವರು, 7ನೇ ತರಗತಿಯವರೆಗಿನ ಅಕ್ಷರಾಭ್ಯಾಸದ ಬಳಿಕ, ತನ್ನ 15ರ ಹುಸಿ ಹರೆಯದಲ್ಲಿ ಯಕ್ಷಗಾನ ರಂಗ ಪ್ರವೇಶಿಸಿದರು.

ಚಿಕ್ಕಂದಿನಿಂದಲೇ ಯಕ್ಷಗಾನ ಕಲೆಯ ಕುರಿತ ವಿಶೇಷ ಆಸಕ್ತಿ, ಆಕರ್ಷಣೆ ಹೊಂದಿದ ಶ್ರೀಕಂಠ ಭಟ್ಟರು ಉಡುಪಿ ಯಕ್ಷಗಾನ ಕೇಂದ್ರದಲ್ಲಿ ನೀಲಾವರ ರಾಮ ಕೃಷ್ಣಯ್ಯ, ಶ್ರೀಧರ ಹೆಬ್ಬಾರ್ ಅವರ ಗುರುತನದಲ್ಲಿ ಸಶಕ್ತ ಯಕ್ಷಶಿಕ್ಷಣ ಪಡೆದವರು. ಎಚ್.ಎಸ್. ಗೋಪಾಲ ಕೃಷ್ಣಯ್ಯನವರಲ್ಲಿ ಪ್ರಸಂಗಮಾಹಿತಿ ರಂಗನಡೆಯನ್ನು ಸುಪುಷಯವಾಗಿ ಸಂಪಾದಿಸಿದರು.

ಸಾಲಿಗ್ರಾಮ 1, ಪೆರ್ಡೂರು 1, ಶೃಂಗೇರಿ 1, ಕಮಲಶಿಲೆ 2, ಸೌಕೂರು 1, ಮಾರಣಕಟ್ಟೆ 4, ಅಮೃತೇಶ್ವರಿ 2, ನಾಗರಕೊಡಿಗೆ 1, ಮಂದಾರ್ತಿ 13, ಗುತ್ತಿಯೆಡೆ ಹಳ್ಳಿ 4, ಹೀಗೆ ಮೂರು ದಶಕಗಳ ಕಲಾಯಾತ್ರೆಯಲ್ಲಿ ಶ್ರೀಕಂಠ ಭಟ್ಟರು ಸಾರ್ಥಕ ಕೀರ್ತಿ ಸಂಪಾದಿಸಿದ್ದಾರೆ. ಪ್ರಸ್ತುತ ಹಿರಿಯಡಕ ಮೇಳದ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಎಲ್ಲಾಬಗೆಯ ಗಂಡು ಪಾತ್ರಗಳನ್ನು ಭಟ್ಟರು ನಿರ್ವಹಿಸಬಲ್ಲರು. ಸುಧನ್ವ, ಅರ್ಜುನ, ಬಭ್ರುವಾಹನ, ಶ್ವೇತಕುಮಾರ, ಶ್ರೀರಾಮ, ಶ್ರೀಕೃಷ್ಣ, ವಿಷ್ಣು, ಚಂಡ- ಮುಂಡ, ಮಹಿಷಾಸುರ ಹನುಮಂತ, ಪರಶುರಾಮ ಮೊದಲಾದ ಪಾತ್ರಗಳು ಶ್ರೀಯುತರಿಗೆ ಜನಪ್ರಿಯತೆ ತಂದಿತ್ತಿವೆ. ಅನೇಕ ಶಿಷ್ಯರಿಗೆ ನೃತ್ಯಶಿಕ್ಷಣ ನೀಡಿ ಕಲಾ- ವಿದರನ್ನಾಗಿ ರೂಪಿಸಿದ ಶ್ರೀಕಂಠಭಟ್ಟರಿಗೆ ಚಂಡೆ ಮದ್ದಳೆವಾದನ ಪರಿಣತಿಯೂ ಇದೆ. ಪತ್ನಿ ಶಕುಂತಲಾ, ಶ್ರೀರಕ್ಷಾ, ಶ್ರೀಲತಾ, ಶ್ರೀನಿಧಿ ಮಕ್ಕಳು. ಹಲವಾರು ಸಂಘ ಸಂಸ್ಥೆಗಳು ಶ್ರೀಯುತರನ್ನು ಸಂಮಾನಿಸಿವೆ.



ಶ್ರೀಧರ ನಾರಾಯಣ ಹೆಗಡೆ, ಚಪ್ಪರಮನೆ

ಕುಂಬ್ರಿಮನೆ, ಈಶ್ವರ ದೇವಸ್ಥಾನ,
ಅಂಚೆ : ಹುಟ್ಟಿನ ಮನೆ, ಶಿರಸಿ ತಾಲೂಕು (ಉ. ಕ)
ದೂರವಾಣಿ : 08384 223458, 94810 49721

ಯಕ್ಷಗಾನದ ಕಲಾರಸಿಕರು ಚಪ್ಪರಿಸಿ ಚೇತೋಹಾರಿಗೊಳ್ಳಬಹುದಾದ ವಿನೋದ ವ್ಯಂಜನವನ್ನುಣಿಸುವ ದಕ್ಷ ಹಾಸ್ಯನಟ ಚಪ್ಪರಮನೆ ಶ್ರೀಧರ ನಾರಾಯಣ ಹೆಗಡೆ, ಸಾಂಪ್ರದಾಯಿಕ ಸಮಕಾಲೀನ ಸ್ಥಿತಿ-ಗತಿಗನುಸಾರವಾದ ಪ್ರೌಢ ಹಾಸ್ಯಗಾರಿಕೆ ಶ್ರೀಧರ ಹೆಗಡೆಯವರ ಹೆಚ್ಚುಗಾರಿಕೆ.

6-11-1965ರಲ್ಲಿ ಸಿದ್ದಾಪುರ (ಉ.ಕ)ದ ಚಪ್ಪರಮನೆ ಎಂಬಲ್ಲಿ ನಾರಾಯಣ ಹೆಗಡೆ-ಸೀತಾ ಹೆಗಡೆ ದಂಪತಿಯ ಮಗನಾಗಿ ಜನಿಸಿದ ಶ್ರೀಧರ ಹೆಗಡೆಯವರು ಎಂಟರ ಅಕ್ಷರ ಶಿಕ್ಷಣದ ತರುವಾಯ ಹದಿನೆಂಟಕ್ಕೇ ಯಕ್ಷಗಾನ ಕಲೆಯ ನೆಂಟತನ ಬಯಸಿದರು. ಇವರ ತಂದೆ ವೇಷಧಾರಿ. ಚಿಕ್ಕತಂದೆ ಭಾಗವತರು, ಹಾಗಾಗಿ ಶ್ರೀಧರ ಹೆಗಡೆಯವರಿಗೆ ಕಲೆ ಅಭಿಜಾತವಾಗಿ ಒದಗಿತು.

ಸಾಲಿಗ್ರಾಮ 2, ನಾಗರಕೊಡಿಗೆ 3, ಶಿರಸಿ 4, ಪೆರ್ಡೂರು 1, ಹೀಗೆ ಕಲಾಲೋಕದಲ್ಲಿ 10ವರುಷ ಸೇವೆ ಸಲ್ಲಿಸಿದವರು. ಅನೇಕಾನೇಕ ವೃತ್ತಿಮೇಳಗಳ ಅತಿಥಿ ಕಲಾವಿದರಾಗಿಯೂ ಕಲಾ ಕಾರ ತತ್ಪರರು.

ಕುಂಜಾಲು ರಾಮಕೃಷ್ಣಯ್ಯ ಅವರ ಶಿಷ್ಯನಾದ ಶ್ರೀಧರ ಹೆಗಡೆಯವರಿಗೆ ಕುಂಜಾಲು ಅವರೊಂದಿಗೆ 4ವರ್ಷಗಳ ಒಡನಾಟವೂ ಇದೆ. ಹಾಗಾಗಿ ಕುಂಜಾಲು ಅವರ ಹಾಸ್ಯದ ಛಾಪು ಇವರ ಕೆಲವು ಪಾತ್ರಗಳಲ್ಲಿ ನಿಚ್ಚಳವಾಗಿ ಪ ಡಿ ಮೂಡುವುದನ್ನು ಗುರುತಿಸಬಹುದಾಗಿದೆ. ಹವ್ಯಾಸಿ ತಾಳಮದ್ದಳೆ ಅರ್ಥಧಾರಿಯೂ ಆಗಿರುವ

ಶ್ರೀಧರ ಹೆಗಡೆಯವರ ಪ್ರಹ್ಲಾದ ಚರಿತ್ರೆಯ ದಡ್ಡ, ದಮಯಂತಿಯ ಬಾಹುಕ, ಚಂದ್ರಾವಳಿಯ ಚಂದಗೋಪ, ಬೇಡರಕಣ್ಣಪ್ಪದ ಕಾಶೀಮಾಣಿ ಗದಾಯುದ್ಧದ ಬೇಹುಚಾರಕ ಕಲಾ ಪ್ರಿಯರ ಮನ ಮೆಚ್ಚಿಸಿವೆ.

ಸುಸಂಸ್ಕೃತವಾದ ಹಾಸ್ಯಗಾರಿಕೆಯಲ್ಲಿ ಪೌರಾಣಿಕ ವೈಚಾರಿಕತೆಯ ರಸವೈಶಿಷ್ಟ್ಯಗಳನ್ನು ನವಿರಾಗಿ ಪ್ರಸ್ತುತಿಸುವ ಶ್ರೀಧರ ಹೆಗಡೆಯವರು ಕಲಾವರಣ ಮೀರದ ಸಮರ್ಥ ಹಾಸ್ಯಗಾರ.

ಪತ್ನಿ ಸಾವಿತ್ರಿ, ಶ್ರೀಪಾದ, ಸಂದೇಶ ಈಶ್ವರು ಪುತ್ರರು. ಇವರನ್ನು ಕನ್ನಡ ಸಾಹಿತ್ಯ ಸಮ್ಮೇಳನ, ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ.



ಶ್ರೀನಿವಾಸ ದೇವಾಡಿಗ, ನಾಗೂರು

*ಚಿತ್ರಾಡಿ 'ಬ್ರಹ್ಮಲಿಂಗೇಶ್ವರ ಕೃಪಾ', ಅಂಚೆ : ನಾಗೂರು,*
*ಕುಂದಾಪುರ ತಾಲೂಕು*
*ದೂರವಾಣಿ : 96326 59483*

ಇರಾಣ ಭೂಮಿಕೆಗಳಲ್ಲಿ ತನ್ನದೇ ಗತ್ತು ಗಾಂಭೀರಪೂರ್ಣ ಕಲಾವೈಭವವನ್ನು ಮೆರೆಯುವ ಪ್ರತಿಭಾವಂತ ಕಲಾವಿದ ನಾಗೂರು ಶ್ರೀನಿವಾಸ ದೇವಾಡಿಗ.

ಕುಂದಾಪುರ ತಾಲೂಕಿನ ನಾಗೂರು ಎಂಬಲ್ಲಿ ತಿಮ್ಮ ದೇವಾಡಿಗ-ಕಾವೇರಿ ದಂಪತಿಯ ಸುಪುತ್ರರಾಗಿ ಜನಿಸಿದ ಶ್ರೀಯುತರಿಗೆ ಪ್ರಾಯ ನಲವತ್ನಾಲ್ಕು, ಎಂಟರ ವಿದ್ಯಾಭ್ಯಾಸ ಬಳಿಕ ಹದಿನೆಂಟರ ಹರೆಯದಲ್ಲೇ ಬಣ್ಣದ ಲೋಕದ ನಂಟು ಅಂಟಿಸಿಕೊಂಡ ಶ್ರೀನಿವಾಸ ದೇವಾಡಿಗರು ಗುರು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಸಾಂಪ್ರದಾಯಿಕ ಕಲಾ ಶಿಕ್ಷಣವನ್ನು ಪಡೆದರು.

ಯಾವುದೇ ಪುರುಷ ಪಾತ್ರಗಳಿಗೆ ಜೀವ ಚೈತನ್ಯ. ನೀಡುವ ಕಲಾವಂತಿಕೆ ಹೊಂದಿದ ದೇವಾಡಿಗರು ಖಳಪಾತ್ರಗಳಲ್ಲೂ ವಿಶೇಷವಾಗಿ ಗುರುತಿಸಲ್ಪಡುತ್ತಾರೆ. ಮುಂಡಾಸು ವೇಷಗಳಲ್ಲೂ ಇವರ ಕಲಾಪ್ರತಿಭೆ ಗಮನೀಯವಾದ್ದೇ. ಸ್ವರಭಾರ, ನೃತ್ಯ, ಅಭಿನಯ, ರಂಗ ನಡೆ, ವೇಷಗಾರಿಕೆ, ಎಲ್ಲದರಲ್ಲೂ ಯಕ್ಷಗಾನೀಯ, ಸೊಗಡು ತೋರುವ ಶ್ರೀಯುತರ ಕರ್ಣ, ಶಲ್ಯ, ಭೀಮ, ಕೌರವ, ಕಂಸ, ಕಾಲನೇಮಿ, ರಾವಣ, ವಿಭೀಷಣ, ವೀರಮಣಿ ಪಾತ್ರಗಳು ಕಲಾರಸಿಕರ ಪ್ರೀತಿಗೆ ಪಾತ್ರವಾಗಿವೆ.

ಮಾರಣಕಟ್ಟೆ ಮೇಳವೊಂದರಲ್ಲೇ 26 ವರ್ಷಗಳ ಕಾಲ ರಂಗ ವ್ಯವಸಾಯ ಪೂರೈಸಿ ಅದೇ ಮೇಳದಲ್ಲಿ ಸಾರ್ಥಕ ಕಲಾ ಬದುಕು ನಡೆಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿರುತ್ತಾರೆ..

ಪತ್ನಿ ಪಾರ್ವತಿ, ಕಿರಣ್, ಕೀರ್ತನ್ ಮಕ್ಕಳು. ಶ್ರೀಯುತರನ್ನು ಹಲವಾರು ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



ಶ್ರೀನಿವಾಸ ಭಟ್, ನಾಗರಕೊಡಿಗೆ

*ಅಂಚೆ : ನಾಗರಕೊಡಿಗೆ, ಹೊಸನಗರ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ: 08185-290058, 94805 43202*

ಆಕರ್ಷಣೀಯ ರೂಪ, ಮಾಧುರತೆಯ ಕಂಠ, ಲಾಲಿತ್ಯಪೂರ್ಣ ಹಾವ-ಭಾವ, ಸ್ಫುಟವಾದ ನೃತ್ಯಾಭಿನಯ ಸುಸಂಸ್ಕೃತ ವಾಚಿಕ ವೈಖರಿ. ಇವೆಲ್ಲವನ್ನೂ ಸುಪುಷ್ಟವಾಗಿ ಮೈತುಂಬಿಕೊಂಡು ಯಕ್ಷಗಾನ ರಂಗಮಂಚದ ಹೆಣ್ಣಾಗಿ ಕಣ್ಮನ ಸೆಳೆಯುವ ಪ್ರಬುದ್ಧ ಸ್ತ್ರೀವೇಷಧಾರಿ ಶ್ರೀನಿವಾಸಭಟ್ ನಾಗರಕೊಡಿಗೆ.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಾಗರಕೊಡಿಗೆಯೇ ಶ್ರೀನಿವಾಸಭಟ್ಟರ ಹುಟ್ಟೂರು. ದಿನಾಂಕ 1-6-1969ರಲ್ಲಿ ಜನಿಸಿದ ಭಟ್ಟರು ಶ್ರೀ ಶಂಕರಯ್ಯ-ಜಯಮ್ಮ ದಂಪತಿಯ ಸುಪುತ್ರ. 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಪೂರೈಸಿ, ಯಕ್ಷಗಾನ ರಂಗಭೂಮಿಗೆ ಧುಮುಕಿದ ಶ್ರೀನಿವಾಸಭಟ್ಟರಿಗೆ ನಾಗರಕೊಡಿಗೆ ರಾಮಕೃಷ್ಣಮೂರ್ತಿಯವರೇ ರಂಗಪ್ರೇರಣಾಶಕ್ತಿ, ನಾಗರಕೊಡಿಗೆ ರಾಮಕೃಷ್ಣ ಮೂರ್ತಿ-ಬೆಳಿಯಾರು ಕೃಷ್ಣಮೂರ್ತಿ ಇವರ ಯಕ್ಷಗುರುಗಳು.

ಪೆರ್ಡೂರು 1, ಹಾಲಾಡಿ 1, ಕಳವಾಡಿ 1, ನಾಗರಕೊಡಿಗೆ 5, ಕಮಲಶಿಲೆ 7, ಸೌಕೂರು 6, ಸಾಲಿಗ್ರಾಮ 1, ಮಾರಣಕಟ್ಟೆ 5, ಹೀಗೆ 27ವರ್ಷಗಳ ಕಲಾಕೃಷಿಯಲ್ಲಿ ಭಟ್ಟರು ಧನ್ಯತೆ ಕಂಡವರು. ಯಾವುದೇ ಗುಣಸ್ವಭಾವದ ಸ್ತ್ರೀಭೂಮಿಕೆಗಳನ್ನು ತನ್ನ ಪ್ರತಿಭಾಶಕ್ತಿಯಿಂದ ಸಂಪನ್ನಶೀಲಗೊಳಿಸುವ ಕಲಾವಂತಿಕೆ ಹೊಂದಿದ ಶ್ರೀನಿವಾಸ ಭಟ್ಟರು ನಿರ್ವಹಿಸಿದ ದೌಪದಿ, ಮೀನಾಕ್ಷಿ, ಶಶಿಪ್ರಭೆ, ಕಯಾದು, ಚಂದ್ರಾವಳಿ, ತಿಲೋತ್ತಮೆ, ದೇವಯಾನಿ ಮೊದಲಾದ ಪಾತ್ರಗಳು ಕಲಾರಸಿಕ ಜನಮನವನ್ನು ಸಂತೃಪ್ತಿಗೊಳಿಸುವಲ್ಲಿ ಯಶಸ್ವಿಯಾಗಿವೆ.

ಪತ್ನಿ ಶೈಲಜಾ. ನಾಗೇಂದ್ರ, ನರೇಂದ್ರ ಮಕ್ಕಳು. ಪ್ರಸ್ತುತ ಪ್ರಧಾನ ಸ್ತ್ರೀವೇಷಧಾರಿಯಾಗಿ ಮಾರಣಕಟ್ಟೆ ಮೇಳದಲ್ಲಿ ಸೇವಾನಿರತರಾಗಿದ್ದಾರೆ.

ಶ್ರೀಯುತರನ್ನು ಹಲವು ಸಂಘ-ಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ.



ಶ್ರೀಪಾದ ಭಟ್, ಥಂಡಿಮನೆ

*ಅಂಚೆ : ಕೋಳಿಗಾರ್, ಶಿರಸಿ ತಾಲೂಕು (ಉ.ಕ)*
*ದೂರವಾಣಿ 08283 260246, 94812 67580*

ಯಕ್ಷಕಲಾ ಶ್ರೀಮದ್ಗಾಂಭೀರದ ಸಂಪನ್ನ ಪ್ರತಿಭೆ ಥಂಡಿಮನೆ ಶ್ರೀಪಾದ ಭಟ್. ಉತ್ತರಕನ್ನಡದ ಶಿರಸಿಯ ಕೋಳಿಗಾರ್ ಇವರ ಹುಟ್ಟೂರು. ತಂದೆ ತಿಮ್ಮಣ್ಣ ಭಟ್ಟ ಥಂಡಿಮನೆ ತಾಯಿ ಗಿರಿಜಾ ತಿಮ್ಮಣ್ಣ ಭಟ್ಟ, 20-07-1963ರಲ್ಲಿ ಜನಿಸಿದ ಶ್ರೀಪಾದ ಭಟ್ಟರು ಬಾಲ್ಯದಲ್ಲಿಯೇ ಯಕ್ಷಕಲೆಗೆ ವಶವಾದರು.

ತನ್ನ 20ನೇ ವಯಸ್ಸಿನಲ್ಲಿಯೇ ಯಕ್ಷರಂಗಕ್ಕೆ ಹೆಜ್ಜೆ ಹಾಕಿದ ಭಟ್ಟರಿಗೆ ವೇಷಧಾರಿಯಾಗಿದ್ದ ತಂದೆ ತಿಮ್ಮಣ್ಣಭಟ್ಟರೇ ಪ್ರೋತ್ಸಾಹಕ ಚೈತನ್ಯವಾದರು. ಹಿರಿಯ ಭಾಗವತ, ಯಕ್ಷಗಾನ ರಸಋಷಿ ಹೊಸ್ತೋಟ ಮಂಜುನಾಥ ಭಾಗವತರ ಬಲಿಷ್ಠವಾದ ಗುರುತನ ಇವರನ್ನು ಕಲಾವಿದನನ್ನಾಗಿ ರೂಪಿಸಿತು. ಯಾವುದೇ ಪಾತ್ರಗಳ ಆಂತರಿಕ ಭಾವ ವೈವಿಧ್ಯವನ್ನು ಸಮೂಲ ಅರ್ಥೈಕ್ಯೆಯೊಂದಿಗೆ ಪ್ರೌಢ ಪ್ರತಿಭಾವಿಲಾಸದಲ್ಲಿ ರಂಗಸ್ಥಳದಲ್ಲಿ ಪ್ರಸ್ತುತ ಪಡಿಸುವ ಥಂಡಿಮನೆಯವರು ಪಾತ್ರನಿಷ್ಠೆಯಲ್ಲಿ ಎದ್ದು ಕಾಣುವ ಕಲಾವ್ಯಕ್ತಿತ್ವವನ್ನು ರೂಢಿಸಿಕೊಂಡವರು. ಅವರ ಗತ್ತು-ಗೈರತ್ತು, ವಚೋವೈಖರಿ ಸುಪುಷ್ಟ ನೃತ್ಯಾಭಿನಯದ ಹದವಾದ ಎರಕ ಪೌರಾಣಿಕ ಭೂಮಿಕೆಗಳನ್ನು ಸಚೇತನವಾಗಿ ರಂಗದಲ್ಲಿ ತೆರೆದಿಡುತ್ತದೆ. ನಾಯಕ, ಪ್ರತಿನಾಯಕ, ಖಳನಾಯಕ ಭೂಮಿಕೆಗಳನ್ನು ಸಾಂಪ್ರದಾಯಿಕ ಹೊಳಪು, ಸೃಜನಶೀಲ ಛಾಪಿನೊಂದಿಗೆ ಕಾಣಿಸುವ ಥಂಡಿಮನೆಯವರು ರಂಗವೇರಿದರೆ ಯಾವತ್ತೂ ಥಂಡಿಯಲ್ಲ! ಬಿಸುಪು ಬಿರುಸಿನ ಉಠಾವು, ಕಾವು.

ಶಿರಸಿ-ಪಂಚಲಿಂಗ ಮೇಳ 5, ಶಿರಸಿ ಮಾರಿಕಾಂಬಾ ಮೇಳ 3, ಸಾಲಿಗ್ರಾಮ 8, ಮಂದಾರ್ತಿ 6, ಪೆರ್ಡೂರು 3, ಹೀಗೆ ರಜತವರ್ಷದ ಸುದೀರ್ಘ ತಿರುಗಾಟ ಥಂಡಿಮನೆಯವರದ್ದು, ಈಶ್ವರ, ದಶರಥ, ಭೀಷ್ಮ, ಸಾಲ್ವ,

ಕಾರ್ತವೀರ, ಯಯಾತಿ, ಅರ್ಜುನ, ಕೀಚಕ, ಕಂಸ, ಭರತ, ತ್ರಿಶಂಕು, ರಾವಣ, ವಾಲಿ, ಭಸ್ಮಾಸುರ, ಶುಂಭಾಸುರ, ದುರ್ಜಯ, ಮಾಗಧ, ಕೌರವ ಹೀಗೆ ಪೌರಾಣಿಕ ವ್ಯಕ್ತಿ-ಶಕ್ತಿಗಳ ರಮ್ಯಾದ್ಭುತ ಕಲಾಸಂಪನ್ನತೆ ಥಂಡಿಮನೆಯವರಲ್ಲಿ ಕಾಣಬಹುದಾಗಿದೆ.

ಪತ್ನಿ ಸುನೀತಾ ಶ್ರೀಪಾದ ಭಟ್, ಪುತ್ರ ಶ್ರೀಕಾಂತ ಭಟ್, ಸಂತೃಪ್ತ ಕಿರು ಸಂಸಾರ, ಬೆಂಗಳೂರು ಸೇರಿ ಹಲವೆಡೆ ಇವರನ್ನು ಅಭಿಮಾನಿಗಳು ಸಮ್ಮಾನಿಸಿದ್ದಾರೆ.



ಶ್ರೀಪಾದ ಹೆಗಡೆ, ಹಡಿನಬಾಳ

ಅಂಚೆ : ಹಡಿನಬಾಳ, ಹೊನ್ನಾವರ ತಾಲೂಕು (ಉ.ಕ)
ದೂರವಾಣಿ: 08387 279926, 90199 39414

ಪ್ರಗಲ್ಭ ಪಾಂಡಿತ್ಯಪೂರ್ಣ ಪ್ರೌಢ ಪ್ರತಿಭೆಯಲ್ಲಿ ವಿಜೃಂಭಿಸುವ ಹಿರಿಯ ಕಲಾವಿದ ಶ್ರೀಪಾದ ಹೆಗಡೆಯವರು

ಉತ್ತರ ಕನ್ನಡದ ಮಾಳಕೋಡು ಎಂಬಲ್ಲಿ ಹುಟ್ಟಿ ಬೆಳೆದ ಧೀಮಂತರು. ಇವರ ತಂದೆ ಗಣೇಶ ಹೆಗಡೆ, ತಾಯಿ ಮಹಾಲಕ್ಷ್ಮಿ ಹೆಗಡೆ. 30-9-1953ರಲ್ಲಿ ಜನಿಸಿದ ಶ್ರೀಪಾದ ಹೆಗಡೆಯವರು, 10ನೇ ತರಗತಿಯ ಬಳಿಕ ಯಕ್ಷಗಾನ ರಂಗ ಪ್ರವೇಶಿಸಿದರು. 26ನೇ ವಯಸ್ಸಿನಲ್ಲಿ ಬಣ್ಣದ ಬದುಕು ಕಂಡ ಶ್ರೀಪಾದ ಹೆಗಡೆಯವರಿಗೆ ಶ್ರೀ ಕ್ಷೇತ್ರ ಗುಂಡಬಾಳದಲ್ಲಿ ಬಾಲ್ಯದಲ್ಲಿ ನೋಡಿದ ಆಟಗಳು, ಮೇರು ತಾರೆಗಳಾದ ಕೆರೆಮನೆ ಮಹಾಬಲ ಹೆಗಡೆ, ಚಿಟ್ಟಾಣಿ, ಜಲವಳ್ಳಿಯವರ ವೇಷಗಳು ಪ್ರೇರಣೆ ನೀಡಿದುವು.

ಕೆರೆಮನೆ ಮಹಾಬಲ ಹೆಗಡೆಯವರ ಶಿಷ್ಯರಾದ ಇವರಿಗೆ ಸೋದರಮಾವ ಸತ್ಯ ಹೆಗಡೆ ಹಡಿನಬಾಳ ಅವರೂ ಗುರುವಾದರು.

ಗುಂಡ ಬಾಳ, ಅಮೃತೇಶ್ವರಿ, ಹಿರೇಮಹಾಲಿಂಗೇಶ್ವರ ಮೇಳ ಕೋಟ, ಪೆರ್ಡೂರು, ಬಚ್ಚಗಾರು, ಸಾಲಿಗ್ರಾಮ ಕೆರೆಮನೆ ಮಂದಾರ್ತಿ ಮೇಳಗಳಲ್ಲಿ ಸಾರ್ಥಕ ಕಲಾಕೃಷಿ ಸಾಗಿಸಿದ ಹಡಿನಬಾಳ ಅವರು ಈ ರಂಗಭೂಮಿಯಲ್ಲಿ 31ವರ್ಷ ತಿರುಗಾಟ ನಡೆಸಿದ್ದಾರೆ.

ಪಟ್ಟು ತೋರುವ ಮಾತಿನ ಪಟುತ್ವ, ಪಾತ್ರಕ್ಕೊಪ್ಪುವ ಕಲಾಭಿವ್ಯಕ್ತಿಯ ಸತ್ವ-ತತ್ವ, ನ್ಯಾಯೋಚಿತ ನೃತ್ಯಾಭಿನಯದ ಸಶಕ್ತತೆ, ಗಂಭೀರ ಕಳೆಯಲ್ಲಿ ಪುರಾಣ ವ್ಯಕ್ತಿ-ಶಕ್ತಿಗಳ ಅನಾವರಣ. ವೈಶಿಷ್ಟ್ಯತೆ ಹಡಿನಬಾಳ ಅವರಲ್ಲಿ ನಿಚ್ಚಳವಾಗಿ ಗುರುತಿಸಬಹುದಾಗುತ್ತದೆ.

ದಕ್ಷ, ಈಶ್ವರ, ಶ್ರೀರಾಮ, ಆಂಜನೇಯ, ಅರ್ಜುನ, ಭೀಮ, ರಕ್ತಜಂಘ, ಮಾಗಧ, ಕಂಸ, ಶತ್ರುಘ್ನ, ಭೀಷ್ಮ, ಪರಶುರಾಮ ಮೊದಲಾದ ಪಾತ್ರಗಳಿಗೆ ತನ್ನದೇ ಛಾಪು ನೀಡಿದ ಶ್ರೀಯುತರು ಅಂಬೆ, ಚಿತ್ರಾಂಗದೆಯಂತಹ ಸ್ತ್ರೀಭೂಮಿಕೆಗಳನ್ನೂ ನಿರ್ವಹಿಸಿದ್ದಾರೆ. ಕೈಲಾಸ ಶಾಸ್ತ್ರಿಯೂ ಹೆಗಡೆಯವರ ಲಲಿತ ಗಂಭೀರ ಪಾತ್ರಗಳಲ್ಲೊಂದಾಗಿ ಜನಪ್ರಿಯತೆ ಪಡೆದಿದೆ.

ಉಪವೃತ್ತಿಯಾಗಿ ಮೃಣ್ಮಯ ಗಣೇಶಮೂರ್ತಿ ರಚನೆಯಲ್ಲಿ ತೊಡಗಿಕೊಳ್ಳುವ ಹೆಗಡೆಯವರು ವಿಜಯಲಕ್ಷ್ಮೀ ಹೆಗಡೆಯವರನ್ನು ವರಿಸಿ, ಶ್ರೀಶ, ಜಗದೀಶ ಈಶ್ವರು ಪುತ್ರರನ್ನೂ ಪಡೆದಿದ್ದಾರೆ.

ಮೇರು ಪ್ರತಿಭೆಯ ಹಡಿನ ಬಾಳ ಶ್ರೀಪಾದಹೆಗಡೆಯವರನ್ನು ಬೆಂಗಳೂರಿನ ಅಗ್ನಿ ಸೇವಾಟ್ರಸ್ಟ್‌ನ ಯಕ್ಷಗಾನ ಯೋಗಕ್ಷೇಮ ಸಂಸ್ಥೆಯ ವತಿಯಿಂದ ಗೌರವ ಪೂರ್ಣವಾಗಿ ಸಮಾನಿಸಲಾಗಿದೆ. ಯಾಜಿ ಯಕ್ಷಮಿತ್ರ ಮಂಡಳಿಯಿಂದ ಸಮ್ಮಾನಿಸಲ್ಪಟ್ಟಿದ್ದಾರೆ. ಹಲವು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ.



ಶೇಖರ ಶೆಟ್ಟಿ, ಎಳಬೇರು

ತವಟೆ ಹಕ್ಲು ಮನೆ, ಅಂಚೆ: ಕಮಲಶಿಲೆ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 99802 23525

ಪ್ರಸನ್ನ ಚಿತ್ರದ ಮಡಿಮನಸ್ಸಿನ ಸುಂದರ ಲಕ್ಷಣವಾಗಿ ಮನುಷ್ಯನಿಗೆ ಸಹಜಧರ್ಮವಾದ ನಗುವನ್ನು ಸೊಗಸಾಗಿ ಕಲಾರಸಿಕರ ಮೊಗದಲ್ಲಿ ಅರಳಿಸುವ ಬಗೆಯನ್ನು ಬಲ್ಲ ಯಕ್ಷ ವಿನೋದ ವಿಶಾರದ ಶೇಖರ ಶೆಟ್ಟಿ ಎಳಬೇಕು.

ಕುಂದಾಪುರ ತಾಲೂಕಿನ ಎಳಬೇರು ಎಂಬ ಹಳ್ಳಿಯಲ್ಲಿ 28-12-1968ರಲ್ಲಿ ಜನಿಸಿದ ಶೇಖರ ಶೆಟ್ಟರು ಗಣಪಯ್ಯ ಶೆಟ್ಟಿ-ಲಚ್ಚಮ್ಮ ಶೆಡ್ತಿ ದಂಪತಿಯ - ಸುಪುತ್ರ. ಎಳವೆಯಲ್ಲಿಯೇ ಯಕ್ಷಲೋಕದ ನಗೆಗಾರರಾಗುವ ಕನಸು

ಕಂಡ ಶ್ರೀಯುತರು 7ನೇ ಇಯತ್ತೆಗೆ ಶರಣು ಹೊಡೆದು ಹಿರಿಯ ಹಾಸ್ಯ ಕಲಾವಿದ ಕಮಲಶಿಲೆ ಮಹಾಬಲ ದೇವಾಡಿಗರ ಶಿಷ್ಯತ್ವ ಸ್ವೀಕರಿಸಿ 12ನೇ ವಯಸ್ಸಿನಲ್ಲೇ ಗೆಜ್ಜೆ ಕಟ್ಟಿ ರಂಗಮಂಚದಲ್ಲಿ ಹೆಜ್ಜೆ ಹಾಕಿದರು.

ಖಚಿತಲಯಗಾರಿಕೆ, ಉಚಿತ ಮಾತುಗಾರಿಕೆ, ಹಾಸ್ಯಯುಕ್ತ ನೃತ್ಯಗಾರಿಕೆ, ಗಂಭೀರತೆಯ ರೂಕ್ಷ ವಿಚಾರ-ವೈವಿಧ್ಯತೆಯನ್ನು ರಂಜನೀಯವಾಗಿ ನಿರೂಪಿಸುವ ರಂಗಪ್ರಾವೀಣ್ಯತೆ, ಪಾತ್ರವರಿತು ನಡೆವ ಕಲಾ ಪ್ರೌಢತೆ ಶೇಖರ ಶೆಟ್ಟರಲ್ಲಿ ಹಾಸು ಹೊಕ್ಕಾಗಿದೆಯೆನ್ನಬಹುದು. ಬಗ್ವಾಡಿ ಮೇಳದಲ್ಲಿ 2ವರ್ಷ ಕಲಾವ್ಯವಸಾಯ ನಡೆಸಿದ ಶ್ರೀಯುತರು ಮಾರಣಕಟ್ಟೆ ಮೇಳದಲ್ಲಿ 24ವರ್ಷಗಳಿಂದ ರಂಗಕೃಷಿಯಲ್ಲಿದ್ದಾರೆ. ಶೆಟ್ಟರ ಒಟ್ಟು ತಿರುಗಾಟದ ಅವಧಿ ಇಪ್ಪತ್ತಾರು ವರ್ಷ

ಬಾಹುಕ, ಪಾಪಣ್ಣ, ಚಂದಗೋಪ, ವಿಜಯ, ನಂದಿಶೆಟ್ಟಿ, ದಾರುಕ, ಕಂದರ, ಮೊದಲಾದ ಪಾತ್ರಗಳಿಗೆ ಎಳಬೇರು ಅವರು ಯಕ್ಷಗಾನದ ಹಳೆಬೇರಿನಲ್ಲಿ ಹೊಸ ಚಿಗುರು ಮೂಡಿಸಿದ್ದಾರೆ. ಶ್ರೀಯುತರ ಬಾಳ ಸಂಗಾತಿ ಸರಸ್ವತಿ ಶೆಟ್ಟಿ, ಪ್ರಸನ್ನ ಹಾಗೂ ಪ್ರಗತಿ ಮಕ್ಕಳು. ಪ್ರತಿಭಾನ್ವಿತ ಹಾಸ್ಯಗಾರ, ಎಳೆಬೇರು ಶೇಖರ ಶೆಟ್ಟರನ್ನು ನಾಡಿನ ಹಲವಾರು ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



**ಸತ್ಯನಾರಾಯಣ ಪಾಂಡುರಂಗ ಭಂಡಾರಿ**

*'ಭೂಸ್ವರ್ಗ ಕೇರಿ', ಅಂಚೆ : ಕರ್ಕಿ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 08387-236530*

ಸುಪುಷ್ಟ ಯಕ್ಷ ಕಲಾನುಭವದ್ರವ್ಯವನ್ನು ಗಂಭೀರವಾಗಿ ಹೀರಿಕೊಂಡು ಸಂಪನ್ನ ಪ್ರತಿಭೆಯಾಗಿ ರೂಪುಗೊಂಡ ಹಿರಿಯ ಚೆಂಡೆ ವಾದಕ ಸತ್ಯನಾರಾಯಣ ಭಂಡಾರಿ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಕರ್ಕಿ ಎಂಬಲ್ಲಿ 14-5-1934ರಲ್ಲಿ ಜನಿಸಿದ ಶ್ರೀಯುತರು ಅವರು ಪಾಂಡುರಂಗ ಭಂಡಾರಿ ಹೊನ್ನಮ್ಮ ದಂಪತಿಯ ಸುಪುತ್ರ ಕುಟುಂಬ ನಿರ್ವಹಣೆಯ ಗುರುತರವಾದ ಹೊಣೆಗಾರಿಕೆ ಸತ್ಯನಾರಾಯಣ ಭಂಡಾರಿ ಅವರಿಗೆ ಎಳವೆಯಲ್ಲೇ ಹೆಗಲೇರಿ ಇವರ ಓದು ಒಂದನೇ ತರಗತಿಗಷ್ಟೇ

ಸೀಮಿತವಾಯಿತು. ಮದ್ದಳೆಗಾರರಾಗಿದ್ದ ತಂದೆ ಪಾಂಡುರಂಗ ಭಂಡಾರಿಯವರೇ ಇವರಿಗೆ ಗುರುವಾಗಿ ಶಾಸ್ತ್ರೋಕ್ತ ಚಂಡೆವಾದನ ಕಲೆಯನ್ನು ಬೋಧಿಸಿದರು.

ತಂದೆಯವರ ಪ್ರೋತ್ಸಾಹ ಪ್ರೇರಣೆಯಂತೆ ತನ್ನ 14ರ ಹರೆಯದಲ್ಲಿ ವೃತ್ತಿಬದುಕಿಗೆ ಯಕ್ಷಗಾನ ರಂಗವನ್ನು ಆಯ್ದುಕೊಂಡ ಭಂಡಾರಿಯವರು ಚಂಡೆವಾದನದಲ್ಲಿ ಬಹುಬೇಗನೆ ಕಲಾಸಿದ್ದಿ ಪಡೆದರು.

ಕರ್ಕಿ ಹಾಸ್ಯಗಾರರ ಮೇಳದಲ್ಲಿ 10 ವರ್ಷ, ಕುಮಟಾ ಮೇಳದಲ್ಲಿ 5ವರ್ಷ, ಕೊಳಗಿಬೀಸ್ ಮೇಳದಲ್ಲಿ 3 ವರ್ಷ, ಅಮೃತೇಶ್ವರಿ ಮೇಳದಲ್ಲಿ 7 ವರ್ಷ, ಇಡಗುಂಜಿ ಮೇಳದಲ್ಲಿ 10 ವರ್ಷ, ಗುಂಡಬಾಳ ಮೇಳದಲ್ಲಿ 6 ವರ್ಷ, ಹೀಗೆ 41 ವರ್ಷಗಳ ಸುದೀರ್ಘ ವೃತ್ತಿ ತಿರುಗಾಟದಲ್ಲಿ ಭಂಡಾರಿಯವರ ಕಲಾಬದುಕು ಸಾರ್ಥಕ್ಯವನ್ನು ಕಂಡುಕೊಂಡಿದೆ.

ಸಂಪ್ರದಾಯಶೀಲ ರಂಗಪದ್ಧತಿಗೆ ಶ್ರೀಯುತರ ಚಂಡೆಗಾರಿಕೆ ಪರಿಪೂರ್ಣ ಸಾಂಗತ್ಯ ನೀಡಿದೆ. ಸ್ಪಷ್ಟವಾದ ಹೊರಳಿಕೆಯಲ್ಲಿ ಅವರು ಚಂಡೆಯಲ್ಲಿ ನಾದ ಹೊಮ್ಮಿಸುವ ಪರಿ ಅಸಾಧಾರಣ. ಉತ್ತಮ ರಂಗತಂತ್ರ, ಸಶಕ್ತ ಪ್ರಸಂಗ ಮಾಹಿತಿಯನ್ನು ಬಲ್ಲ ಸತ್ಯನಾರಾಯಣ ಭಂಡಾರಿಯವರು ಸಮರ್ಥ ಮದ್ದಳೆಗಾರರೂ ಆಗಿದ್ದಾರೆ.

ಇವರ ಮಡದಿ ಪಾರ್ವತಿ, ಗಜಾನನ ಭಂಡಾರಿ, ರಾಮ ಭಂಡಾರಿ, ಹೊನ್ನಮ್ಮ, ರಮೇಶ ಭಂಡಾರಿ ಇವರ ನಾಲ್ಕು ಮಂದಿ ಮಕ್ಕಳು. ಇವರ ಪುತ್ರರಾದ ಗಜಾನನ ಭಂಡಾರಿ, ರಾಮ ಭಂಡಾರಿ, ವೃತ್ತಿ ಮೇಳದಲ್ಲಿ ಚಂಡೆ - ಮದ್ದಳೆಗಾರ ರಾಗಿ ಗುರುತಿಸಿಕೊಂಡಿದ್ದಾರೆ. ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿವೆ. ಉಡುಪಿ ಯಕ್ಷಗಾನ ಕಲಾರಂಗದ ಪ್ರಶಸ್ತಿಯನ್ನು ಪಡೆದಿರುತ್ತಾರೆ ಅಲ್ಲದೇ ಹಲವಾರು ಸಂಘಸಂಸ್ಥೆಗಳು ಇವರನ್ನು ಗೌರವಿಸಿವೆ.



ಸದಾನಂದ ಪ್ರಭು ವೈ.

ಏಳಜಿತ್, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ: 95914 63592

ಸಾಂಪ್ರದಾಯಿಕ ಚಂಡೆ-ಮದ್ದಳೆ ವಾದನ ಕಲೆಯನ್ನು ಪರಿಪುಷ್ಟವಾಗಿ ಕರಗತಮಾಡಿಕೊಂಡ ಹಿರಿಯ ಹಿಮ್ಮೇಳ ಕಲಾವಿದ ವೈ, ಸದಾನಂದ ಪ್ರಭು.

ಕುಂದಾಪುರ ತಾಲೂಕಿನ ಏಳಜಿತ ಎಂಬ ಹಳ್ಳಿಯಲ್ಲಿ ವೈ ರಾಮಚಂದ್ರಪ್ರಭು-ಸರಸ್ವತಿ ಬ್ಯಾ ದಂಪತಿಯ ಪುತ್ರರಾಗಿ 9-10-1935ರಲ್ಲಿ ಜನಿಸಿದ ಸದಾನಂದ ಪ್ರಭು ಅವರು ಎಂಟನೇ ಇಯತ್ತೆಯವರೆಗೆ ಶೈಕ್ಷಣಿಕ ಸಂಸ್ಕಾರ ಪಡೆದು, ತನ್ನ ಹದಿನಾರರ ಹರೆಯದಲ್ಲಿಯೇ ಯಕ್ಷಗಾನ ವಲಯವನ್ನು ಪ್ರವೇಶಿಸಿದರು.

ಶ್ರೀಯುತರ ತಂದೆ ಅರ್ಥಧಾರಿಯಾಗಿದ್ದರು. ದೊಡ್ಡಪ್ಪ ದಾಸಪ್ಪ ಪ್ರಭ ಅವರು ಮದ್ದಳೆವಾದಕರಾಗಿದ್ದರು. ಹಾಗಾಗಿ ಕಲಾವಂತ ಮನೆತನದ ಹಿನ್ನಲೆ ಇವರನ್ನು ಗಾಢವಾಗಿ ಬೆಸೆದುಕೊಂಡಿತು.

ಗುರು ವೀರಭದ್ರನಾಯಕ್‌ರಿಂದ ನೃತ್ಯ, ಅಭಿನಯ, ಕೆಮ್ಮಣ್ಣು ಆನಂದ ಅವರಲ್ಲಿ ಚೆಂಡೆವಾದನ, ನಾರ್ಣಪ್ಪ ಉಪ್ಪರರಲ್ಲಿ ಭಾಗವತಿಕೆ, ಬೇಳಂಜೆ ತಿಮ್ಮಪ್ಪ ನಾಯ್ಕರಲ್ಲಿ ಮದ್ದಳೆಗಾರಿಕೆ ಶಿಕ್ಷಣ ಪಡೆದ ಸಶಕ್ತ ಕಲಾವಿದ.

ಕೊಲ್ಲೂರು 6, ಮಾರಣಕಟ್ಟೆ 6, ಅಮೃತೇಶ್ವರಿ 3, ಕಮಲಶಿಲೆ 6, ಚಿಕ್ಕ ಹೊನ್ನೆಸರ 3, ಕಳವಾಡಿ 3, ಹೀಗೆ 27ವರ್ಷಗಳ ಸಾರ್ಥಕ ಕಲಾವ್ಯವಸಾಯ ಪೂರೈಸಿದ ಪ್ರಭುಗಳು ಪ್ರಸ್ತುತ ವೃತ್ತಿಜೀವನದಿಂದ ನಿವೃತ್ತರಾಗಿದ್ದಾರೆ. ಯಕ್ಷಗಾನ ಕಲಿಕಾಸ್ತಕರಿಗೆ ಗುರುವಾಗಿ ತನ್ನ ತನ್ನ ಕಲಾವಿದ್ಯೆಯನ್ನು ಧಾರೆಯೆರೆಯುತ್ತಿದ್ದಾರೆ.

ಶ್ರೀಯುತರ ಚಂಡೆ-ಮದ್ದಳೆ ವಾದನ ಪದ್ಧತಿ ಸಾಂಪ್ರದಾಯಿಕ ರಂಗ ಪದ್ಧತಿಯಲ್ಲೇ ನಿರೂಪಣೆಗೊಳ್ಳುವಂತಾದ್ದು. ನಾದೋತ್ಪಾದಕ ಹೊರಳಿಕೆ, ಸ್ಪುಟವಾದ ಪೆಟ್ಟು ಇವರ ಮದ್ದಳೆವಾದನದಲ್ಲಿ ಗುರುತಿಸಬಹುದಾಗಿದೆ. ನುಣುಪು ನವಿರಾದ ಗಾನ ಪೋಷಕ ಚಂಡೆವಾದನ ಕಲೆ ಇವರಿಗೆ ಪರಿಪೂರ್ಣವಾಗಿ ಸಿದ್ಧಿಸಿದೆ.

ಬಡಗುತಿಟ್ಟಿನ ಅನೇಕಾನೇಕ ಯಕ್ಷದಿಗ್ಗಜರನ್ನು ರಂಗಸ್ಥಳದಲ್ಲಿ ಕುಣಿಸಿದ ಅನುಭವಿ ಹಿಮ್ಮೇಳದ ಕಲಾವಿದ ಸದಾನಂದ ಪ್ರಭು ಅವರು ಪತ್ನಿ ಪದ್ಮಾವತಿ ಬ್ಯಾ, ಗೋದಾವರಿ, ಆಶಾಲತ, ಮಮತಾ, ಗಣಪತಿ ಎಂಬ ನಾಲ್ಕು ಮಂದಿ ಮಕ್ಕಳು.

ಶ್ರೀಯುತರಿಗೆ ನಾಲ್ಕು ವರುಷಗಳಿಂದ ಸರಕಾರದ ಮಾಸಾಶನ ಸಿಗುತ್ತಿದೆ. ಡಾ. ಜಿ. ಶಂಕ ಫ್ಯಾಮಿಲಿ ಟ್ರಸ್ಟ್‌ನ ಗೌರವ ಪುರಸ್ಕಾರವೂ ಲಭಿಸಿದೆ.



**ಸದಾಶಿವ ಹೆಗ್ಡೆ, ಇಳಲಿ**

*ಆಜ್ರಿ, ಇಳಲಿ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 96632 64803*

ಚುರುಕಿನ ನೃತ್ಯವಿಧಾನ, ಭಾವಪೂರ್ಣ ಪಾತ್ರ ಚಿತ್ರಣ, ಉತ್ತಮ ಭಾಷಾಪ್ರಜ್ಞೆ ಆಕರ್ಷಣೀಯ ವೇಷಗಾರಿಕೆ ಸುಪುಷ್ಟವಾಗಿ ರಂಗಮಂಚದಲ್ಲಿ ದರ್ಶಿಸುವ ಪ್ರಬುದ್ಧ ಪುರುಷವೇಷಧಾರಿ ಇಳಲಿ ಸದಾಶಿವ ಹೆಗ್ಡೆ.

ಕುಂದಾಪುರ ತಾಲೂಕಿನ ಆಜಿ, ಸನಿಹದ ಇಳಲಿ ಎಂಬಲ್ಲಿ 22-8-1967ರಲ್ಲಿ ಜನಿಸಿದ ಸದಾಶಿವ ಹೆಗ್ಡೆ -

ಅವರು ದಿ. ಶ್ರೀನಿವಾಸ ಹೆಗ್ಡೆ ಇಂದಿರಾ ಹೆಗ್ಡೆ ದಂಪತಿಯ ಸುಪುತ್ರ. 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಹೆಗ್ಡೆಯವರು 15ನೇ ವಯಸ್ಸಿನಲ್ಲೇ ರಂಗಲೋಕ ಪ್ರವೇಶಿಸಿದರು.

ಯಕ್ಷಗಾನ ಕಲೆಯ ಕುರಿತು ತೀವ್ರ ಆಸಕ್ತಿಯನ್ನು ಎಳವೆಯಲ್ಲೇ ಮೈಗೂಡಿಸಿಕೊಂಡ ಅವರು, ಆರ್ಗೋಡು ಗೋವಿಂದರಾಯ ಶೆಣೈಯವರ ಶಿಷ್ಯನಾಗಿ ಸಶಕ್ತ ಕಲಾಶಿಕ್ಷಣ ಪಡೆದರು. ಶೆಣೈಯವರ ಪ್ರೋತ್ಸಾಹ, ಪ್ರೇರಣೆಯಂತೆ ವೃತ್ತಿ ಜೀವನಕ್ಕೆ ಹೆಜ್ಜೆಯಿರಿಸಿದರು.

ಪೆರ್ಡೂರು 2, ಸೌಕೂರು 4, ಕಮಲಶಿಲೆ 7, ಮಡಾಮಕ್ಕಿ 2, ಅಮೃತೇಶ್ವರಿ 5, ಕಳವಾಡಿ 1, ಮಂದಾರ್ತಿ 1, ಬಗ್ವಾಡಿ 1, ಹಾಲಾಡಿ 3, ಸಿಗಂಧೂರು 2, ಹೀಗೆ 28ವರ್ಷಗಳ ಯಕ್ಷತಿರುಗಾಟ ಇಳಲಿಯವರಿಗೆ ಸಾರ್ಥಕ ಹೆಸರು ತಂದಿತ್ತಿದೆ. ಮೂರನೇ ವೇಷಧಾರಿಯಾಗಿಯೂ, ಪುರುಷ ವೇಷಧಾರಿಯಾಗಿಯೂ ಇಳಲಿಯವರು ಪ್ರಸಿದ್ಧರು. ಇವರ ಬಬ್ರುವಾಹನ, ಅಭಿಮನ್ಯು, ಸುಧನ್ವ, ಶ್ರೀಕೃಷ್ಣ, ಧರ್ಮಾಂಗದ ಪಾತ್ರಗಳ ರಂಗಚಿತ್ರಣ ಕಲಾರಸಿಕರ ಹಾರ್ದಿಕ ಮೆಚ್ಚುಗೆ ಗಳಿಸಿರುತ್ತದೆ.

ಜೋಡಾಟಗಳಲ್ಲಿ ಇವರ ಬಿರುಸಿನ ಮಂಡಿಕುಣಿತ ಬೆರಗು ಹುಟ್ಟಿಸುತ್ತದೆ. ಪೌರಾಣಿಕತೆಯ ಅಂತಸತ್ವವನ್ನು ಅರ್ಥಗಾರಿಕೆಯಲ್ಲಿ ಮನಮುಟ್ಟುವಂತೆ ನಿರೂಪಿಸುವ ಕಲಾವಂತಿಕೆ ಇವರಿಗಿದೆ. ಶ್ರೀಯುತರು ಪ್ರಸ್ತುತ ಮಡಾಮಕ್ಕಿ ಮೇಳದ ಪುರುಷವೇಷಧಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಹಲವು ಸಂಘ-ಸಂಸ್ಥೆಗಳ ಗೌರವ ಸಂಮಾನಕ್ಕೆ ಭಾಜನರಾಗಿದ್ದಾರೆ.



ಸರ್ವೋತ್ತಮ ಗಾಣಿಗ, ಹಾರಾಡಿ

ಹಾರಾಡಿ ಗ್ರಾಮ, ಅಂಚೆ ಸಾಲಿಕೇರಿ,
ಉಡುಪಿ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 99451 91441

ಸುಪ್ರಸಿದ್ಧ ಹಾರಾಡಿಯ ಯಕ್ಷಕಲಾಕುಟುಂಬದ ಸಮೃದ್ಧ ಪ್ರತಿಭೆಯಾಗಿ ಬೆಳಗುತ್ತಿರುವ ಅನುಭವಿ ಕಾಲವಿದ ಹಾರಾಡಿ ಸರ್ವೋತ್ತಮ ಗಾಣಿಗ,

ಉಡುಪಿ ತಾಲೂಕಿನ ಹಾರಾಡಿ ಎಂಬ ಹಳ್ಳಿಯಲ್ಲಿ 7-7-1955ರಲ್ಲಿ ಜನಿಸಿದ ಸರ್ವೋತ್ತಮ ಗಾಣಿಗರು ಕೃಷ್ಣ ಗಾಣಿಗ-ಗೋಪಮ್ಮ ದಂಪತಿಯ ಸುಪುತ್ರ. ಇವರ ವಿದ್ಯಾರ್ಹತೆ ನಾಲ್ಕನೇ ತರಗತಿ. ಆರ್ಥಿಕ ಅನಾನುಕೂಲತೆಯೇ ಶ್ರೀಯುತರಿಗೆ ಬಣ್ಣದ ಬದುಕಿನ ದಾರಿ ತೋರಿಸಿತು. ಮಾವ ಹಾರಾಡಿ ಮಹಾಬಲ ಗಾಣಿಗರ ಕಲಾ ಪ್ರೋತ್ಸಾಹ, ಪ್ರೇರಣೆಯೂ ದೊರಕಿತು. 14ನೇ ವರ್ಷದಲ್ಲಿ ರಂಗಪ್ರವೇಶ ಮಾಡಿದ ಸರ್ವೋತ್ತಮ ಗಾಣಿಗರು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ, ದಶಾವತಾರಿ ಗುರು ವೀರಭದ್ರ ನಾಯ್ಕ, ನೀಲಾವರ ರಾಮಕೃಷ್ಣಯ್ಯ, ಹಿರಿಯಡಕ ಗೋಪಾಲ ರಾಯರ ಶಿಷ್ಯವೃತ್ತಿಯಲ್ಲಿ ಡಿ ೧೧ ಶಾಸ್ತ್ರೋಕ್ತ ರಂಗ ಶಿಕ್ಷಣ ಪಡೆದುಕೊಂಡರು.

ಯಕ್ಷಲೋಕದ ದಂತಕತೆಗಳಾದ ಹಾರಾಡಿ ರಾಮಗಾಣಿಗ ಹಾಗೂ ಕುಷ್ಠ ಗಾಣಿಗರು ಶ್ರೀಯುತರಿಗೆ ಸಂಬಂಧದಲ್ಲಿ ಮಾವಂದಿರು. ಹಾಗಾಗಿ ಯಕ್ಷಕಲೆ ಎಂಬುದು ಇವರಿಗೆ ಜನ್ಮಜಾತವಾಗಿ ಒಲಿದು ಬಂದಿದೆ.

ಬಡಗುತಿಟ್ಟಿನ ಸಂಪ್ರದಾಯ ಚೌಕಟ್ಟಿನಲ್ಲೇ ಪೌರಾಣಿಕ ಪಾತ್ರಗಳನ್ನು ಸಹಜ ಕಲಾ ಸತ್ವಗಳಿಂದ ಕಡೆದಿಡುವ ವಿಶೇಷ ಕಲಾವಂತಿಕೆಯನ್ನು ಹೊಂದಿದ ಗಾಣಿಗರು ಮನೆತನದ ಹಾರಾಡಿ ತಿಟ್ಟನ್ನು, ಗುರುತನದ ಮಟಪಾಡಿತಿಟ್ಟನ್ನೂ ಸುಪುಷ್ಟವಾಗಿ ಕಲಾವ್ಯಕ್ತಿತ್ವದಲ್ಲಿ ನಿರೂಪಿಸುವ ಅಪರೂಪದ ಕಲಾವಿದರು.

ಆಕರ್ಷಕ ವೇಷಾಲಂಕಾರ, ಪರಿಶುದ್ಧ ಭಾಷಾ ಪ್ರೌಢಿಮೆ, ಗರಿಷ್ಠ ರಂಗಾ-ನುಭವ, ಸಶಕ್ತ ಪುರಾಣಪ್ರಜ್ಞೆ, ಖಚಿತ ಲಯಗಾರಿಕೆ, ಪಾರಂಪರಿಕ ನೃತ್ಯಾಭಿನಯ ಕೌಶಲದಿಂದ, ಕಂಗೊಳಿಸುವ ಬಡಗಿನ ಶ್ರೇಷ್ಠ ಪುರುಷವೇಷಧಾರಿಯಾದ ಶ್ರೀಯುತರು ಅಮೃತೇಶ್ವರಿ 1, ಮಂದಾರ್ತಿ 3, ಮಾರಣಕಟ್ಟೆ 5, ಮಂದಾರ್ತಿ 8, ಹೀಗೆ ನಾಲ್ಕು ದಶಕಗಳ ರಂಗ ಕೃಷಿ ಮಾಡಿದ್ದಾರೆ. ಶ್ರೀಯುತರ ಸುಧನ್ವ, ಪುಷ್ಕಳ, ಬಲರಾಮ, ಶ್ರೀಕೃಷ್ಣ, ಅರ್ಜುನ, ಕಂಸ, ಕೌರವ, ಮೊದಲಾದ ಭೂಮಿಕೆಗಳು ಜನಪ್ರಿಯ. ವೃತ್ತಿರಂಗದಲ್ಲಿ ಶ್ರೀಯುತರ ನೂರಾರು ಶಿಷ್ಯರು ಕಲಾಸೇವೆ

ಗೈಯುತ್ತಿದ್ದಾರೆ. ಮಡದಿ ಲಲಿತಾ ಪಯಸ್ವಿನಿ, ತೇಜಸ್ವಿನಿ, ಅಕ್ಷಯ, ಅಕ್ಷತಾ, ಅಜಯ ಮಕ್ಕಳು. ಹಲವಾರು ಸಂಘಸಂಸ್ಥೆಗಳು ಇವರನ್ನು ಗೌರವಿಸಿವೆ.



## ಸಂಜೀವ ಕೊಠಾರಿ

*ಅಂಚೆ : ಸಿದ್ಧಾಪುರ, ಜನತಾ ಕಾಲನಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 97315 31961*

ಲಲಿತ-ಗಂಭೀರ ಹಾಸ್ಯಗಾರಿಕೆಯಲ್ಲಿ ಕಲಾರಸಿಕರ ಮನಮುದಗೊಳಿಸುವ ಶಿಷ್ಟ ಕಲಾವಿದ ಶ್ರೀ ಸಂಜೀವ ಕೊಠಾರಿ,

1958ರ ಜನವರಿ 21ರಂದು ಕುಂದಾಪುರ ತಾಲೂಕಿನ ಮೂಡುಬಗೆ ಅಂಪಾರು ಎಂಬಲ್ಲಿ ಬಡಿಯಕೊಠಾರಿ-ಗಂಗಾ ದಂಪತಿಯ ಸುಪುತ್ರರಾಗಿ ಜನಿಸಿದ ಸಂಜೀವ ಕೊಠಾರಿಯವರು ಆರಕ್ಕೆ ಓದು ಮುಗಿಸಿ 15ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡವರು.

ಹಾಸ್ಯ ದಿಗ್ಗಜ ಕುಂಜಾಲು ರಾಮಕೃಷ್ಣ ಅವರ ಶಿಷ್ಯರಾದ ಸಂಜೀವ ಕೊಠಾರಿಯವರು ಸಮರ್ಪಕ ರಂಗ ತಾಂತ್ರಿಕತೆಯಲ್ಲಿ ವೈನೋದಿಕತೆಯನ್ನು ಸೃಷ್ಟಿಸುವ ಕಲಾವಿದರು. ಪ್ರೌಢ ಅಭಿನಯವನ್ನು ಬೆಳಗುವ ಸಂಪನ್ನಶೀಲತೆಯನ್ನು ಮೈಗೂಡಿಸಿಕೊಂಡವರು.

ನೈಚ್ಯವಿಲ್ಲದ ಸುಸಂಸ್ಕೃತ ರಂಗಧರ್ಮದೊಂದಿಗೆ ಹಾಸ್ಯಗಾರಿಕೆಯಲ್ಲಿ ವೈಚಾರಿಕತೆ ಪಡಿಮೂಡಿಸುವ ಸಂಜೀವ ಕೊಠಾರಿಯವರ ಶ್ರೀ ಕೃಷ್ಣ ಲೀಲೆಯ ವಿಜಯ, ದಮಯಂತಿಯ ಬಾಹುಕ, ಶ್ರೀರಾಮ ಪಟ್ಟಾಭಿಷೇಕದ ಮಂಥರೆ, ಕಾಶಿಮಾಣಿ, ಶಕುನಿ, ಸುದೇವ, ಕಂದರ.... ಮೊದಲಾದ ಭೂಮಿಕೆಗಳು ಕಲಾಭಿಮಾನಿಗಳ ಹೃನ್ಮನಸೂರೆಗೊಂಡು ನಗೆಯ ರಸವ್ಯಂಜನವನ್ನು ಪುಷ್ಕಳವಾಗಿ ಉಣಿಸಿವೆ.

ಕಮಲಶಿಲೆ, ಹಾಲಾಡಿ, ಹಿರಿಯಡಕ, ಪೆರ್ಡೂರು ಶಿರಸಿ, ಸೌಕೂರು, ಮಾರಣಕಟ್ಟೆ ಮಂದಾರ್ತಿ ಮೇಳಗಳಲ್ಲಿ ಸಾರ್ಥಕ 36ವರ್ಷಗಳ ಕಾಲ ಸಮರ್ಥ ಹಾಸ್ಯ ಕಲಾವಿದರಾಗಿ ಮೆರೆದ ಶ್ರೀಯುತರು ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ಹಾಸ್ಯಗಾರರು.

ಧರ್ಮಪತ್ನಿ ಜಲಜಾ, ಪ್ರತಿಮಾ, ಪ್ರಮೀಳಾ, ಮಾಧವಿ, ಪ್ರಸನ್ನ ಮಕ್ಕಳು. ಶ್ರೀಯುತರು ಸಮರ್ಥ ಹಾಸ್ಯ ಕಲಾವಿದರೂ ಮಾತ್ರವಲ್ಲ. ಸೃಜನಶೀಲ ಪೌರಾಣಿಕ ಪ್ರಸಂಗ ಸಂಯೋಜಕರೂ ಹೌದು.



ಸಂಜೀವ ಶೆಟ್ಟಿ, ಹೆನ್ನಾಬೈಲು

ಅಂಚೆ: ಹೊಸಂಗಡಿ, ಸಿದ್ದಾಪುರ ಗ್ರಾಮ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 99021 80155

ಕಲಾರಸಿಕ ಮನಮೋಹಕ ವೇಷಗಾರಿಕೆ, ಶ್ರುತಿನಿಷ್ಠ ಸುಮಧುರ ಅರ್ಥಗಾರಿಕೆ, ಒನಪು ತುಂಬಿದ ಸುಲಲಿತ ನೃತ್ಯಗಾರಿಕೆ, ಯಕ್ಷಗಾನ ಸ್ತ್ರೀಯಾಗಿ ದರ್ಶಿಸುವ ಪ್ರತಿಭಾಶಾಲಿ ಕಲಾವಿದ ಹೆನ್ನಾಬೈಲು ಸಂಜೀವ ಶೆಟ್ಟಿ.

ಕುಂದಾಪುರ ತಾಲೂಕಿನ ಹೆನ್ನಾಬೈಲು ಎಂಬ ಹಳ್ಳಿಯಲ್ಲಿ 20-6-1972ರಲ್ಲಿ ಜನಿಸಿದ ಸಂಜೀವಶೆಟ್ಟರು ಅಂತಯ್ಯ ಶೆಟ್ಟಿ-ಪಾರ್ವತಿ ಶೆಟ್ಟಿ ದಂಪತಿಯ ಸುಪುತ್ರ ಐದನೇ ಇಯತ್ತೆಯ ಬಳಿಕ, ಅಂದರೆ ತನ್ನ 11ರ ಹರೆಯದಲ್ಲೇ ಬಣ್ಣದ ಬಾಳುವೆಯನ್ನು ಸ್ವೀಕರಿಸಿದ ಶೆಟ್ಟರು, ಹಿರಿಯ ಸ್ತ್ರೀವೇಷಧಾರಿ ಅರಾಟೆ ಮಂಜುನಾಥ ಅವರ ಶಿಷ್ಯನಾಗಿ

ನೃತ್ಯ, ಅಭಿನಯ, ಅರ್ಥಗಾರಿಕೆ, ರಂಗನಡೆಯನ್ನು ಅಭ್ಯಸಿಸಿದರು. ಆರೋಡು ಮೋಹನದಾಸ ಶೆಣೈ ಅವರ ಗುರುತನವನ್ನೂ ಶ್ರೀಯುತರು ಪಡೆದು ಸುಯೋಗ್ಯ ಕಲಾವಿದನಾಗಿ ಗುರುತಿಸಿಕೊಂಡರು.

ಹಾಲಾಡಿ 1, ಕಮಲಶಿಲೆ 20, ಮಂದಾರ್ತಿ 2, ಸೌಕೂರು 2, ಹೀಗೆ ಯಕ್ಷಗಾನ ಯಾನದಲ್ಲಿ ಸಾರ್ಥಕ ಬೆಳ್ಳಿ ಹಬ್ಬವನ್ನು ಪೂರೈಸಿ, ಕಮಲಶಿಲೆ ಮೇಳದ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ. ಪೌರಾಣಿಕ ಸ್ತ್ರೀಭೂಮಿಕೆಗಳ ಲಲಿತ-ಗಂಭೀರ ನಡೆಯ ಭಾವಾಭಿವ್ಯಕ್ತಿಯಲ್ಲಿ ಗರಿಷ್ಠಮಟ್ಟದ ಪ್ರತಿಭೆಯನ್ನು ಮೆರೆಯುವ ಸಂಜೀವಶೆಟ್ಟರ ದೌಪದಿ, ಸುಭದ್ರೆ, ಚಿತ್ರಾಂಗದೆ, ಶಶಿಪ್ರಭೆ, ಮೀನಾಕ್ಷಿ, ಮೋಹಿನಿ, ಭ್ರಮರ ಕುಂತಳೆ, ಮೊದಲಾದ ಪಾತ್ರಗಳು ಕಲಾಪ್ರೇಕ್ಷಕರ ಮನಸೂರೆಗೊಂಡಿವೆ.

ಇವರ ಮಡದಿ ಕುಸುಮಾ ಶೆಟ್ಟಿ, ಪ್ರಶಾಂತ, ಪ್ರದೀಪ, ಪ್ರತೀಕ ಮಕ್ಕಳು. ಶ್ರೀಯುತರು ರಾಜ್ಯ, ಹೊರರಾಜ್ಯಗಳ ಅನೇಕ ಸಂಘ-ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.



**ಸಾಧುಕುಮಾರ್ ಸಿ. ಬಾರ್ಕೂರು**

*'ಯಕ್ಷಕೃಪಾ' ಹೇರಾಡಿ, ಅಂಚೆ : ಬಾರ್ಕೂರು,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 99022 07899*

ಯಕ್ಷಗಾನ ರಂಗಧರ್ಮಕ್ಕೆ ಚ್ಯುತಿ ಬಾರದಂತೆ ತನ್ನದೇ ವೈಶಿಷ್ಟ್ಯ ಪೂರ್ಣ ರಂಗನಡೆಯಲ್ಲಿ ಪೌರಾಣಿಕ ಪಾತ್ರಗಳಿಗೆ ಜೀವ ತುಂಬುವ ಸಮರ್ಥ ಕಲಾವಿದ ಸಿ, ಸಾಧುಕುಮಾರ್.

ಉಡುಪಿ ಜಿಲ್ಲೆಯ ಬಾರ್ಕೂರು-ಹೇರಾಡಿಯ ನಾರಾಯಣ ಕೊಠಾರಿ-ರಾಧಾಕೊಠಾರಿ ದಂಪತಿಯ ಪುತ್ರರಾಗಿ 1960ರಲ್ಲಿ ಹೇರಾಡಿಯಲ್ಲಿ ಜನಿಸಿದ ಸಾಧುಕುಮಾರ್ 5ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ, ತನ್ನ 15ನೇ ವಯಸ್ಸಿನಲ್ಲೇ ಮುಖಕ್ಕೆ ಬಣ್ಣ ಹಚ್ಚಿದವರು. ಬಿದ್ರಗೋಡು ವಾಸುದೇವ ಆಚಾದ್ಯರ ಚಿಕ್ಕ ಮೇಳ, ಹೂವಿನಕೋಲು ತಿರುಗಾಟವೇ ಇವರಿಗೆ ಈ ರಂಗಭೂಮಿಯ ಹೆಜ್ಜೆ ಗೆಜ್ಜೆಗೆ ಕಾರಣ, ಪ್ರೇರಣೆಯಾಯಿತು. ಪ್ರಸಂಗಕರ್ತರೂ, ಭಾಗವತರೂ ಆಗಿದ್ದ ವಾಸುದೇವ ಆಚಾದ್ಯರ ಸಶಕ್ತ ಗುರುತನ ಇವರನ್ನು ಸುಯೋಗ್ಯ ಕಲಾವಿದನನ್ನಾಗಿ ರೂಪಿಸಿತು.

ಸುದೃಢ ಶರೀರ, ಗಂಭೀರ ಶಾರೀರ, ರಸಪರಿಪ್ಲುತ ವಚೋಚಮತ್ಕಾರ, ಪಾತ್ರೋಚಿತ ರಂಗವ್ಯವಹಾರ, ಸುಪುಷ್ಟ ನೃತ್ಯ ಅಭಿನಯ ಸಾಕಾರ.... ಶ್ರೀಯುತರಲ್ಲಿ ನಾವು ಗುರುತಿಸಬಹುದಾಗಿದೆ. ಯಾವುದೇ ಪೌರಾಣಿಕ ಪ್ರಸಂಗಗಳ ಖಳ ಭೂಮಿಕೆಗಳಿಗೆ ಸಾಧು ಕುಮಾರರು ನೀಡುವ ಕಲಾವರ್ಚಸ್ಸು ಅವರದೇ ಶೈಲೀಕೃತ ಸೊಗಡಿನದ್ದು. ವೈನೋದಿಕವಾದ ಪಾತ್ರ ಚಿತ್ರಣ ಅವರ ವಿಶೇಷ ಕಲಾಚಾತುರಕ್ಕೆ ಸಾಕ್ಷಿಯಾಗಿದೆ.

ಕೌಂಡ್ಲೀಕ, ಕಮಲಭೂಪ, ಹನುಮಂತ, ಘಟೋತ್ಕಚ, ಬಲರಾಮ, ಕೌರವ, ರಕ್ತಜಂಘಾಸುರ, ಸುಂದರರಾವಣ, ಸಾಲ್ವ, ಭೀಮ ಶಲ್ಯ, ಅರ್ಜುನ, ಮೊದಲಾದ ಭೂಮಿಕೆಗಳಲ್ಲಿ ಸಾಧುಕುಮಾರರ ವಿಶಿಷ್ಟ ಛಾಪು ಪಡಿಮೂಡುತ್ತದೆ. ಈಗಾಗಲೇ ಗೋಳಿಗರಡಿ, ಸೌಕೂರು, ಕಳವಾಡಿ, ಕಮಲಶಿಲೆ, ಶಿವರಾಜಪುರ-

ತೀರ್ಥಹಳ್ಳಿ, ಹಾಲಾಡಿ, ಅಮೃತೇಶ್ವರಿ ಸಾಲಿಗ್ರಾಮ ಮೇಳಗಳಲ್ಲಿ ಸೇವೆ ಸಲ್ಲಿಸಿದ ಇವರು 19ವರ್ಷಗಳಿಂದ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಒಟ್ಟು ರಂಗಕೃಷಿ 35 ವರ್ಷ.

ಬಿಡುವಿನ ವೇಳೆಯಲ್ಲಿ ಶಾಲಾ ಮಕ್ಕಳಿಗೆ ತನ್ನ ಕಲಾವಿದ್ಯೆಯನ್ನು ನಿಸ್ವಾರ್ಥವಾಗಿ ಧಾರೆಯೆರೆಯುವ ಸಾಧುಕುಮಾರ್ ತನ್ನ ಜೀವನರಂಗದಲ್ಲಿ ಸುವರ್ಣ ವರ್ಷಕ್ಕೆ ನಿಕಟವಾಗಿದ್ದಾರೆ.

ಧರ್ಮಪತ್ನಿ ಶಕುಂತಲಾ. ಮಿಥುನ್, ಮಿಲಾಕ್ಷ, ಮಾಧುರಿ ಮೂರು ಮಂದಿ ಮಕ್ಕಳು. ಶ್ರೀಯುತರು ಹಲವಾರು ಸಂಘಸಂಸ್ಥೆಗಳ ಗೌರವ ಸಂಮಾನ ಪಡೆದಿದ್ದಾರೆ.



ಸೀತಾರಾಮ ಶ್ರೀಧರ ಹೆಗಡೆ, ಶಿರಗುಣಿ

ಅಂಚೆ : ಕಕ್ಕಳ್ಳಿ, ಶಿರಸಿ ತಾಲೂಕು, ಉತ್ತರ ಕನ್ನಡ

ಪುರಾಣಾಂತರಂಗದ ಸಾರ-ಸತ್ವವನ್ನು ಎತ್ತಿ ಹಿಡಿಯುವ ವೈಚಾರಿಕ ಅರ್ಥಗಾರಿಕೆ, ಹಸ್ತ, ಗ್ರೀವಾರೇಚಕದ ಸೊಗಸಿನಲ್ಲಿ ನಿರೂಪಿತವಾಗುವ ನೃತ್ಯಗಾರಿಕೆ, ಪ್ರಸಂಗ ಪದ್ಯಗಳ ಸಮಗ್ರ ಭಾವವನ್ನರಿತ ಜೀವಂತಿಕೆಯ ಅಭಿನಯ ಕಲಾವಂತಿಕೆ, ಹಿಮ್ಮೇಳೆಸುವ ಖಚಿತ ಲಯಗಾರಿಕೆ, ಧನಾತ್ಮಕವಾಗಿ ಯಕ್ಷರಂಗದಲ್ಲಿ ತೋರಿ ಗೊಡುವ ಅನುಭವಿ ಯಕ್ಷನಟ ಸೀತಾರಾಮ ಹೆಗಡೆ,

ಉತ್ತರಕನ್ನಡದ ಶಿರಸಿ ತಾಲೂಕಿನ ಶಿರಗುಣಿ ಎಂಬಲ್ಲಿ 2-11-1967ರಲ್ಲಿ ಜನಿಸಿದ ಸೀತಾರಾಮ ಹೆಗಡೆಯವರು, ಶ್ರೀಧರ ನಾರಾಯಣ ಹೆಗಡೆ ಹಾಗೂ ಮಹಾಂಕಾಳೀ ಹೆಗಡೆ ದಂಪತಿಯ ಸುಪುತ್ರ 6ನೇ ತರಗತಿವರೆಗೆ ಓದಿದ ಶ್ರೀಯುತರು ಕೆರೆಮನೆ ಶಂಭು ಹೆಗಡೆಯವರ ಗುರುತನ ಹಾಗೂ ಮಾರ್ಗ- ದರ್ಶನವನ್ನು ಪಡೆದು 22ನೇ ವಯಸ್ಸಿನಲ್ಲೇ ಯಕ್ಷಗಾನರಂಗ ಪ್ರವೇಶಿಸಿದರು.

ಸೀತಾರಾಮ ಹೆಗಡೆಯವರ ದೊಡ್ಡಪ್ಪ ವೇಷಧಾರಿ ಹಾಗೂ ಭಾಗವತರು. ಕೆರೆಮನೆ ಶ್ರೀಮಯಾ ಕಲಾಕೇಂದ್ರದಲ್ಲಿ ಹೆರಂಜಾಲು ವೆಂಕಟರಮಗಾಣಿಗರಲ್ಲಿ ಸುಸಂಬದ್ಧ ನೃತ್ಯ ಶಿಕ್ಷಣ ಪಡೆದ ಶ್ರೀಯುತರು ಅಲ್ಲಿ ಹಿರಿಯ ಚಂಡೆವಾದಕ ಕೃಷ್ಣಯಾಜಿ (ಕುಟ್ಟುಯಾಜಿ) ಇಡಗುಂಜಿ ಹಾಗೂ ಗುರುರಾಜ ಮಾರ್ಪಳ್ಳಿ ಅವರಿಂದ ಸಮರ್ಪಕ ರಂಗಮಾಹಿತಿ ಪಡೆದರು.

ಕಳವಾಡಿ, ಪೆರ್ಡೂರು, ಗುಂಡಬಾಳ, ಗೋಳಿಗರಡಿ, ಅಮೃತೇಶ್ವರಿ ಮೇಳಗಳಲ್ಲಿ ಶ್ರೀಯುತರ ವಿಂಶತಿ ಕಲಾವ್ಯವಸಾಯ ಸಾರ್ಥಕ ಕೀರ್ತಿ ತಂದಿತ್ತಿದೆ. ವೈವಿಧ್ಯಮಯ ನಡೆ, ಭಾವಗಳ ಗಂಡುಭೂಮಿಕೆಗಳಿಗೆ ಇವರು ಜೀವ ತುಂಬ ಬಲ್ಲರು. ರಾಜವೇಷ, ಮುಂಡಾಸುವೇಷ, ಪುರುಷವೇಷ, ಪುಂಡುವೇಷ, ಹೀಗೆ ಯಾವುದೇ ಪಾತ್ರಗಳಲ್ಲೂ ಅವರು ತನ್ನತನವನ್ನು ತೋರಬಲ್ಲರು. ಶತ್ರುಘ್ನ, ರಾವಣ, ವಿಷ್ಣು, ಶಿವ, ಕೌಂಡ್ಲಕ, ಕಮಲಭೂಪ, ವಿಕ್ರಮಾದಿತ್ಯ ಮೊದಲಾದ ಪಾತ್ರಗಳ ನಿರ್ವಹಣೆ ಅವರಿಗೆ ತೃಪ್ತಿ ನೀಡಿದೆ. ಪ್ರೇಕ್ಷಕರ ಮನ ಮೆಚ್ಚಿಸಿದೆ.

ಇವರು ಹಲವು ಸಂಘ-ಸಂಸ್ಥೆಗಳ ಗೌರವ ಸಂಮಾನ ಪಡೆದಿದ್ದಾರೆ.



ಸುಂದರ ನಾಯ್ಕ್, ಬೇಳಂಜೆ

ಕುಚ್ಚೂರು, ಶಾಸ್ತ್ರೀನಗರ, ಅಂಚೆ: ಕುಚ್ಚೂರು,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ : 94480 06337

ಪೌರಾಣಿಕತೆಯ ಗರ್ಭದಲ್ಲಿ ಅಡಗಿರುವ ಸತ್ವಾಂಶಗಳನ್ನು ಯಕ್ಷಗಾನ ಪಾತ್ರಗಳ ಮೂಲಕ ಗೊತ್ತುಗೊಳಿಸುವ ಸಮರ್ಥ ಸ್ತ್ರೀವೇಷಧಾರಿ ಬೇಳಂಜೆ ಸುಂದರ ನಾಯ್ಕ.

ಕಾಮಿ ನಾಯ್ಕ-ಸುಶೀಲಾ ಬಾಯಿ ದಂಪತಿಯ ಸುಪುತ್ರರಾದ ಸುಂದರ ನಾಯ್ಕರು 1963ರಲ್ಲಿ ಬೇಳಂಜೆ ಎಂಬಲ್ಲಿ ಜನಿಸಿದರು. 5ನೇ ತರಗತಿಯ ವರೆಗಿನ ಶೈಕ್ಷಣಿಕ ಹಂತ ಮುಗಿಸಿದ ಇವರು ತಂದೆಯವರ ಪ್ರೋತ್ಸಾಹ, ಶಂಕರನಾರಾಯಣ ಸಾಮಗರ ಪ್ರೇರಣೆಯಂತೆ ತನ್ನ 13ರ ಹರಯದಲ್ಲೇ ಯಕ್ಷಗಾನ ವೃತ್ತಿ ಜೀವನ ಆರಂಭಿಸಿದರು.

ಇವರ ತಂದೆ ಕಾಮಿ ನಾಯ್ಕರು ಮದ್ದಳೆ ವಾದಕರು. ದೊಡ್ಡಪ್ಪ ಬೇಳಂಜೆ ತಿಮ್ಮಪ್ಪನಾಯ್ಕರು ಯಕ್ಷಲೋಕದ ಚಿರಪರಿಚಿತ ಮದ್ದಳೆಗಾರರು. ಸಂಬಂಧದಲ್ಲಿ ಬಾವನಾಗಿರುವ ಪೇತ್ರಿ ಮಾಧುನಾಯ್ಕರು ಉತ್ತಮ ವೇಷಧಾರಿ. ಹೀಗಾಗಿ ಮನೆತನದ ಕಲಾವಂತಿಕೆ ಶ್ರೀಯುತರ ಕಲಾ ಬದುಕಿಗೆ ನಿಚ್ಚಳ ಸ್ಫೂರ್ತಿ ನೀಡಿತು.

ಇವರಿಗೆ ತಂದೆಯವರು ಹಾಗೂ ಬುಕ್ಕಿಗುಡ್ಡೆ ಮಹಾಬಲ ನಾಯ್ಕರು ಗುರುಗಳು, ಮಂದಾರ್ತಿ 18, ಪೆರ್ಡೂರು 9, ಸಾಲಿಗ್ರಾಮ 3, ಹಾಲಾಡಿ 2, ಕಮಲಶಿಲೆ 1, ಹಿರಿಯಡಕ 2, ಹೀಗೆ 35ವರ್ಷಗಳ ಕಲಾವ್ಯವಸಾಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ಗಂಭೀರ ಭಾವಾಭಿವ್ಯಕ್ತಿಯ ಸ್ತ್ರೀಭೂಮಿಕೆಗಳಲ್ಲಿ ಶ್ರೀಯುತರ ಪ್ರತಿಭೆ ಗಮನೀಯ. ಶ್ರೀಯುತರ ಆಂಗಿಕವಿನ್ಯಾಸ, ಸ್ವರ ನಿರೂಪಣೆ, ರಂಗನಡೆ, ಸ್ತ್ರೀವೇಷದ ಬಿರುಸು, ಸೆಡಕುಗಳಿಗೆ ಸಮುಚಿತವಾಗಿ ಪಾತ್ರವನ್ನು ಗೆಲ್ಲಿಸುತ್ತವೆ. ಕಸೆ ಸ್ತ್ರೀವೇಷಗಳ ವೀರತನದ ಕೆಚ್ಚು ಇವರಲ್ಲಿ ವಿಶೇಷವಾಗಿ ಗುರುತಿಸಲ್ಪಡುತ್ತದೆ. ಮೀನಾಕ್ಷಿ, ಪ್ರಮೀಳೆ, ದೌಪದಿ, ಶಶಿಪ್ರಭೆಯಂತಹ ಇವರ ಪಾತ್ರಗಳು ಜನಪ್ರಿಯ. ಅಂತೆಯೇ ದಮಯಂತಿ, ಅಂಬೆ, ಶ್ರೀದೇವಿ, ದೇವಯಾನಿ, ಕೈಕೇಯಿ ಪಾತ್ರಗಳೂ ಪ್ರಸಿದ್ಧ. ಶ್ರೀಯುತರು ಅನೇಕ ಪುರುಷವೇಷಗಳನ್ನೂ ನಿರ್ವಹಿಸಿದ್ದಾರೆ.

ಪತ್ನಿ ಆಶಾ, ಸತೀಶ್, ಶ್ಯಾಮಲಾ, ಅನಿಲ ಮಕ್ಕಳು. ಹಲವಾರು ಸಂಘಸಂಸ್ಥೆಗಳು ಇವರನ್ನುಸಂಮಾನಿಸಿವೆ.



ಸುಬ್ರಹ್ಮಣ್ಯ ಧಾರೇಶ್ವರ

ಕಿರಿಮಂಜೇಶ್ವರ, ನಾಗೂರು,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ದೂರವಾಣಿ: 08254-254356, 94483 21871

ಸಾಂಪ್ರದಾಯಿಕ ಯಕ್ಷಗಾಯನದ ಗಟ್ಟಿ ಹಿಡಿತ ದೊಂದಿಗೆವತಿಕೆಯಲ್ಲಿ ಪ್ರಯೋಗಶೀಲತೆಯನ್ನು ತಂದ ಹಿರಿಯ ಭಾಗವತ ಸುಬ್ರಹ್ಮಣ್ಯ ಧಾರೇಶ್ವರ.

ಪವಿತ್ರಕ್ಷೇತ್ರ ಗೋಕರ್ಣ ಧಾರೇಶ್ವರರ ಹುಟ್ಟೂರು. ಇವರ ತಂದೆ ಲಕ್ಷ್ಮೀನಾರಾಯಣ ಭಟ್, ತಾಯಿ ಲಕ್ಷ್ಮೀ, ಯಕ್ಷಗಾನದ ಯುಗಪ್ರವರ್ತಕ ಜಿ. ಆರ್. ಕಾಳಿಂಗ ನಾವಡರ ಪದ್ಯಗಾರಿಕೆ ಹಾಗೂ ಅವರ ಗಾಯನದಲ್ಲಿ ಇವರು ಕಂಡ ಹಿಂದೂ-ಸ್ಥಾನೀ ಸಂಗೀತದ ಬೀಜಗುಣವೆನ್ನುವುದು ಇವರನ್ನು ಗಾನಲೋಕಕ್ಕೆ ಎಳೆದು ತಂದಿತು.

ಪಿ.ಯು.ಸಿ. ವ್ಯಾಸಂಗದ ಬಳಿಕ, ತನ್ನ 21ನೇ ವಯಸ್ಸಿನಲ್ಲೇ ಯಕ್ಷಗಾನ ರಂಗವನ್ನು ಪ್ರವೇಶಿಸಿದ ಸುಬ್ರಹ್ಮಣ್ಯ ಧಾರೇಶ್ವರರು ನಾರ್ಣಪ್ಪ ಉಪ್ಪರರ ಶಿಷ್ಯನಾಗಿ ಗಾನ ದೀಕ್ಷೆಯನ್ನು ಪಡೆದರು. ಯುವಕರಾಗಿದ್ದಾಗಲೇ ಸುಗಮ ಸಂಗೀತ ಗಾಯನದ ಪರಿಣತಿ ಹೊಂದಿದ್ದ ಧಾರೇಶ್ವರರಿಗೆ ತಂದೆ ಹವ್ಯಾಸೀ ರಂಗದ ನಿಕಟ ಬಾಂಧವ್ಯ ಸಾಧ್ಯ-ವಾಯಿತು.

ಸುಗಮ ಸಂಗೀತ ಶೈಲಿ, ಶಾಸ್ತ್ರೀಯ ಶೈಲಿಯನ್ನು ಅಡಿಗೆ ಯಕ್ಷಗಾನ ಭಾಗವತಿಕೆ-ಯಲ್ಲಿ ನಿರೂಪಿಸುವ ಧಾರೇಶ್ವರರು ನವರಸಗಳನ್ನು ತನ್ನ ಸುಖ ಶಾರೀರದ ಮೂಲಕ ಸುಶ್ರಾವ್ಯವಾಗಿ ಭಾವಪೂರ್ಣವಾಗಿ ಹಾಡಿ ತೋರಿಸಬಲ್ಲರು. ರಂಗದ ಮೇಲೆ ಪ್ರಬಲ ಹಿಡಿತವನ್ನು ಸಾಧಿಸಿದ ಧಾರೇಶ್ವರರ ಪೌರಾಣಿಕ ರಂಗಪ್ರಜ್ಞೆ ಅಪಾರ, ಕತೆಯ ಶಾಖೋಪಶಾಖೆಗಳಲ್ಲಿ ವಿಹರಿಸಬಲ್ಲ ಕವಿತಾಶಕ್ತಿಯೂ ಹಾಗೆಯೇ.

ಖಚಿತ ಲಯಗಾರಿಕೆ, ತಾಳಪದ್ಧತಿ, ಸ್ಪುಟವಾದ ಸಾಹಿತ್ಯ ನಿರೂಪಣೆ, ಮಂಜುಳ ಸ್ವರಾಲಾಪನೆಯಿಂದ ಭಾಗವತಿಕೆಯಲ್ಲಿ ವಿಶೇಷ ಸಂಚಲನ ಮೂಡಿಸಿ, ಶಾಸ್ತೋಕ್ತ ಸಂಗೀತದ ಕವಚ ತೊಡಿಸಿ ಅಪಾರ ಪ್ರೇಕ್ಷಕ ವಲಯವನ್ನು ಸೃಷ್ಟಿಸಿಕೊಂಡ ಪ್ರಬುದ್ಧ ಭಾಗವತರಿವರು.

ಪುರಾಣ ಪ್ರಸಂಗಗಳ ಪದ್ಯಗಳ ತಿಟ್ಟು, ಮಟ್ಟುಗಳ ಗುಟ್ಟನ್ನು ಸಂಪೂರ್ಣ ಬಲ್ಲ ಶ್ರೀಯುತರು ಭಾಗವತಿಕೆಯ ಪಾರಂಪರಿಕತೆಗೆ ಹೊಸತನದ ಸ್ಪರ್ಶ ನೀಡಿ ಕ್ರಾಂತಿ ಮಾಡಿದವರು. ನಾವಡರ ನಿಧನ ಯಕ್ಷಗಾನಕ್ಷೇತ್ರದಲ್ಲಿ ಒಂದು ನಿರ್ವಾತವನ್ನೇ ಸೃಷ್ಟಿಸಿತ್ತು. ಧಾರೇಶ್ವರರ ಪ್ರಯೋಗಶೀಲತೆ ಆ ಕೊರತೆ ನೀಗಿಸಿತು.

ಧಾರೇಶ್ವರರು ಅಮೃತೇಶ್ವರಿ, ಹಿರೇಮಹಾಲಿಂಗೇಶ್ವರ ಮೇಳ ಕೋಟ, ಶಿರಸಿ ಪಂಚಲಿಂಗ ಮೇಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸುಮಾರು 24 ವರ್ಷಗಳಿಂದ ಪೆರ್ಡೂರು ಮೇಳದ ಪ್ರಧಾನಭಾಗವತರಾಗಿ ದುಡಿಯುತ್ತಿದ್ದಾರೆ. ಧಾರೇಶ್ವರರ ಒಟ್ಟು ರಂಗಕೃಷಿ 33 ವರ್ಷ.

ಪತ್ನಿ ಸುಧಾ. ಕಾರ್ತಿಕೇಯ, ತೇಜಶ್ರೀ ಈಶ್ವರು ಮಕ್ಕಳು. ನಾಡಿನಾದ್ಯಂತ ಇವರಿಗೆ ಅಭಿಮಾನಿಗಳಿಂದ ಅಗಣಿತ ಸಂಖ್ಯೆಯ ಅಭಿನಂದನೆ, ಸಂಮಾನಗಳು ಅರ್ಹವಾಗಿ ಲಭಿಸಿವೆ.



ಸುಬ್ರಹ್ಮಣ್ಯ ಭಟ್ಟ, ಗುಡ್ಡೆಹಿತ್ಲು

ಮಂಜಗಳಲೆ ಗ್ರಾಮ, ಅಂಚೆ: ನಿಟ್ಟೂರು,
ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ
ದೂರವಾಣಿ : 94491 46396

ಬಲಿಷ್ಠವಾದ ಗುರುಪರಂಪರೆಯ ಯಕ್ಷಶೈಕ್ಷಣಿಕ ಸಂಸ್ಕಾರ ಸಿದ್ಧಾಂತಗಳಿಗೆ ಬದ್ಧರಾಗಿ, ಗರಿಷ್ಠಮಟ್ಟದ ಕಲಾಭಿವ್ಯಕ್ತಿಯಲ್ಲಿ ವಿಜೃಂಭಿಸುವ ಉತ್ಕೃಷ್ಟ ಪ್ರತಿಭೆಯ ಶಿಷ್ಟ ಕಲಾವಿದ ಸುಬ್ರಹ್ಮಣ್ಯ ಭಟ್ಟ, ಗುಡ್ಡೆಹಿತ್ತು.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಿಟ್ಟೂರು - ಗುಡ್ಡೆಹಿಲ್ಲು ಎಂಬಲ್ಲಿ ಮಹಾಬಲ ಭಟ್ – ಪರಮಮ್ಮ ದಂಪತಿಯ ಪುತ್ರರಾಗಿ ಹುಟ್ಟಿದ ಭಟ್ಟರು 55ರ ಹಿರಿತನದಲ್ಲಿರುವ ಪ್ರತಿಭಾನ್ವಿತ ಕಲಾವಿದರು. ಏಳನೇ ತರಗತಿಗೆ ಶಾಲಾ ವಿದ್ಯಾಭ್ಯಾಸಕ್ಕೆ ಮಂಗಳ. ಹದಿನೆಂಟರ ಹರೆಯದಲ್ಲೇ ಯಕ್ಷಲೋಕಕ್ಕೆ ಗಮನ. ಬಾಲ್ಯದಲ್ಲಿ ಬಯಲಾಟಗಳನ್ನು ನೋಡಿ, ತಾಳಮದ್ದಳೆ ಅರ್ಥವನ್ನು ಕೇಳಿ ತಾನೂ ಕಲಾವಿದನಾಗಬೇಕೆಂಬ ಕನಸು ಕಟ್ಟಿಕೊಂಡ ಭಟ್ಟರು. ಸ್ವಯಂ ಆಸಕ್ತಿ, ಶ್ರದ್ಧೆ, ಪರಿಶ್ರಮ, ಅಧ್ಯಯನ ಶೀಲತೆಯಿಂದ ಬಾಲ್ಯದ ಕನಸುಗಳಿಗೆ ಬಣ್ಣ ತುಂಬಿದರು.

ದಶಾವತಾರಿ ಗುರು ವೀರಭದ್ರನಾಯಕ ಹಾಗೂ ನಾರ್ಣಪ್ಪ ಉಪ್ಪರರ ಗರಡಿಯಲ್ಲಿ ಪಳಗಿ ಶಾಸ್ತ್ರೀಯ ಯಕ್ಷ ವಿದ್ಯಾ ಸಂಪತ್ತನ್ನು ಸೂರೆ ಗೈದರು.

ಶಿವರಾಜಪುರ, ಅಮೃತೇಶ್ವರಿ, ಪೆರ್ಡೂರು, ಸಾಲಿಗ್ರಾಮ, ಕಮಲಶಿಲೆ, ಸೌಕೂರು, ಮಾರಣಕಟ್ಟೆ, ಮಂದಾರ್ತಿ, ಗುಂಡಬಾಳ, ಸೋಮವಾರ ಸಂತೆ, ಹಾಗೂ ಮಡಾಮಕ್ಕಿ ಮೇಳಗಳಲ್ಲಿ ಸುಬ್ರಹ್ಮಣ್ಯ ಭಟ್ಟರ ಯಶಸ್ವಿ ತಿರುಗಾಟ ಮೂರು ದಶಕ ಕಂಡಿದೆ. ಖಳನಾಯಕ, ಪ್ರತಿನಾಯಕ, ನಾಯಕ ಹಾಗೂ ಹಾಸ್ಯಭೂಮಿಕೆಗಳನ್ನು ನಿರ್ವಹಿಸುವ ಅಪೂರ್ವ ಕಲಾವ್ಯಕ್ತಿತ್ವ ಭಟ್ಟರದ್ದು. ಗತ್ತು ಗೈರತ್ತಿನ ರಂಗನಡೆ, ಸ್ಫುಟವಾದ ಅಭಿನಯ ಕೌಶಲ, ಪ್ರಧಾನ ಭೂಮಿಕೆಗಳಿಗೊಪ್ಪುವ ಆಳನ, ವೇಷವೈಖರಿ ಎಲ್ಲಕ್ಕೂ ಪ್ರಮುಖವಾಗಿ ವಿಶೇಷ ವಾಕ್‌ಸಿದ್ಧಿ ಸುಬ್ರಹ್ಮಣ್ಯ ಭಟ್ಟರ ಪ್ರಖರ ಪ್ರತಿಭೆಗೆ ಪುರಾವೆಯಾಗುತ್ತವೆ.

ವಿಜಯದ ಭೀಷ್ಮ, ಕಪಾಲದ ಬ್ರಹ್ಮ, ವೀರಮಣಿ, ಯಯಾತಿ, ಬಲರಾಮ, ಜಾಂಬವ, ದಕ್ಷ, ಅರ್ಜುನ, ದುರ್ಜಯ, ಹನುಮಂತ, ರಾವಣ, ಚಂದಗೋಪ, ಕಾಳಿದಾಸ, ಕಂದರ, ಬಾಹುಕ, ಮೊದಲಾದ ಪಾತ್ರಗಳಿಗೆ ತನ್ನದೇ ವಿಶೇಷ ಮೆರುಗು ನೀಡಿ ಜನಪ್ರಿಯರಾಗಿದ್ದಾರೆ. ಶ್ರೀಯುತರ ನೂರಾರು ಶಿಷ್ಯರು ವೃತ್ತಿರಂಗದಲ್ಲಿದ್ದಾರೆ. ಶ್ರೀಯುತರು ವೇಷಧಾರಿಯೂ ಹೌದು, ಭಾಗವತರೂ ಹೌದು, ಅರ್ಥಧಾರಿಯೂ ಹೌದು. ಬಾಳ ಸಂಗಾತಿ ಸಾವಿತ್ರಿ, ಗುರುದತ್ ಹಾಗೂ ವೃಂದಾ ಮಕ್ಕಳು. ಅನೇಕ ಸಂಘ ಸಂಸ್ಥೆಗಳಿಂದ ಗೌರವ ಸಂಮಾನ ಪಡೆದಿರುತ್ತಾರೆ.



## ಸುಬ್ರಹ್ಮಣ್ಯ ಹೆಗಡೆ, ಚಿಟ್ಟಾಣಿ

*ಅಂಚೆ : ಗೇರು ಸೊಪ್ಪ, ಹೊನ್ನಾವರ (ಉ.ಕ)*
*ದೂರವಾಣಿ : 08387-268436*

ಬಡಾಬಡಗಿನ ಯಕ್ಷ ಸಾಮೃದ್ಧಿಕತೆಯ ಸಹಜ ಕಲಾಪ್ರತಿಭೆ ಚಿಟ್ಟಾಣಿ ಸುಬ್ರಹ್ಮಣ್ಯ ಹೆಗಡೆ.

ಸುಪ್ರಸಿದ್ಧ ಯಕ್ಷಗಾನ ಕಲಾವಿದ ಚಿಟ್ಟಾಣಿ ರಾಮಚಂದ್ರ ಹೆಗಡೆ ಸುಶೀಲಾ ಹೆಗಡೆ ಅವರ ಸುಪುತ್ರರಾದ ಸುಬ್ರಹ್ಮಣ್ಯ ಹೆಗಡೆ 25-3-1962ರಲ್ಲಿ ಚಿಟ್ಟಾಣಿಯಲ್ಲಿ ಜನಿಸಿದರು. ಬಾಲ್ಯದಿಂದಲೇ ಯಕ್ಷಗಾನ ಕಲೆಯ ಮೇಲಣ ಅತೀವ ಆಸಕ್ತಿ ಹೊಂದಿದ್ದ ಸುಬ್ರಹ್ಮಣ್ಯ ಹೆಗಡೆಯವರಿಗೆ ತಂದೆಯವರ ಕಲಾಸಿದ್ಧಿ, ಪ್ರಸಿದ್ಧಿಯೇ ಪ್ರೇರಣೆಯಾಯಿತು. ರಕ್ತಗತವಾದ ಕಲಾವಿದ್ಯೆ ಹತ್ತನೇ ತರಗತಿಯ ಅಕ್ಷರವಿದ್ಯೆಗೆ ಶರಣು ಹೊಡೆಸಿತು. ತನ್ನ 13ನೇ ವರ್ಷದಲ್ಲಿ ಕಲಾಭ್ಯಾಸಕ್ಕೆ ತೊಡಗಿದ ಸುಬ್ರಹ್ಮಣ್ಯ ಹೆಗಡೆಯವರು 16ರ ಹರೆಯದಲ್ಲಿ ಯಕ್ಷಲೋಕಕ್ಕೆ ಚರಣವಿರಿಸಿದರು.

ಹೊನ್ನಾವರದ ಗೋವಿಂದ ಭಟ್ ಎಂಬವರ ಗುರುತನವನ್ನು ಹೊಂದಿದ ಸುಬ್ರಹ್ಮಣ್ಯ ಹೆಗಡೆಯವರು ಪರಿಶ್ರಮಿಕ ರಂಗಾಧ್ಯಯನದಿಂದ ಪರಿಪಕ್ವತೆಯನ್ನು ಸಾಧಿಸಿದವರು. ಸರ್ವಸಮರ್ಥ ಪುರುಷ ವೇಷಧಾರಿಯಾಗಿ ಗಮನ ಸೆಳೆದರು.

ಗುಂಡುಬಾಳ 3, ಸಾಲಿಗ್ರಾಮ 5, ಹಿರೇ ಮಹಾಲಿಂಗೇಶ್ವರ 2, ಶಿರಸಿ-ಪಂಚಲಿಂಗ 3, ಪೆರ್ಡೂರು 2, ಬಚ್ಚಗಾರು 5, ಶಿರಸಿ-ಮಾರಿಕಾಂಬಾ 2, ಮಂದಾರ್ತಿ 3, ವೀರಾಂಜನೇಯ 5, ಹೀಗೆ ಮೂರುದಶಕಗಳ ಯಶಸ್ವೀ ತಿರುಗಾಟದಲ್ಲಿ ಸುಯೋಗ್ಯ ಹೆಸರು ಗಳಿಸಿದ್ದಾರೆ.

ಯಕ್ಷಗಾನ ಕಥಾನಾಯಕ, ಖಳನಾಯಕ, ಪ್ರತಿನಾಯಕ, ಹಾಗೂ ಪೋಷಕ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಶ್ರೀಯುತರ ನೃತ್ಯಾಭಿನಯ ಸ್ಪಷ್ಟತೆ, ಪಾತ್ರ ತಲ್ಲೀನತೆ, ಆಕರ್ಷಕ ವೇಷಗಾರಿಕೆ, ಸಾಹಿತ್ಯಪೂರ್ಣ ವಾಚಿಕತೆ ಗುರುತಿಸಲ್ಪಡುವಂತಹುದು. ಧರ್ಮಾಂಗದ, ಶ್ರೀಕೃಷ್ಣ, ಅರ್ಜುನ, ಕಲಾಧರ, ಕೌರವ, ಕಂಸ, ವಾಖ್ಯ, ಹರಿಶ್ಚಂದ್ರ ಪಾತ್ರಗಳು ಜನಪ್ರಿಯ. ಪ್ರಸ್ತುತ ಬಂಗಾರಮಕ್ಕಿ ವೀರಾಂಜನೇಯ ಯಕ್ಷಮಿತ್ರ ಮಂಡಳಿಯ ನಿರ್ದೇಶಕರು.

ಶ್ರೀಯುತರ ಬಾಳ ಸಂಗಾತಿ ಪಾರ್ವತಿ ಹೆಗಡೆ, ಪ್ರೀತಿ ಹೆಗಡೆ, ಕಾರ್ತಿಕ ಹೆಗಡೆ ಮಕ್ಕಳು, ಹಲವಾರು ಸಂಘ-ಸಂಸ್ಥೆಗಳ, ಅಭಿಮಾನಿ ಬಳಗದಿಂದ ಸಂಮಾನ ದೊರಕಿರುತ್ತದೆ.



**ಸುಬ್ರಾಯ ಈಶ್ವರ ಹೆಗಡೆ, ಕಪ್ಪೆಕೆರೆ**

*ಕಪ್ಪೆಕೆರೆ, ಹಡಿನಬಾಳ, ಹೊನ್ನಾವರ ತಾಲೂಕು (ಉ.ಕ)*

ಪೂರ್ವ ಯಕ್ಷಗಾನದ ಗಾನ ಘರಾನವನ್ನು ಸಮೃದ್ಧವಾಗಿ ಪೋಷಿಸಿಕೊಂಡು, ಸಂಪನ್ನ ಪ್ರತಿಭೆಯಾಗಿ ಬೆಳೆದ ಹಿರಿಯ ತಲೆಮಾರಿನ ಅಗ್ರಮಾನ್ಯ ಭಾಗವತ ಕಪ್ಪೆಕೆರೆ ಸುಬ್ರಾಯ ಹೆಗಡೆ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಹಡಿನ ಬಾಳ ಎಂಬಲ್ಲಿ 1-8-1947ರಲ್ಲಿ ಈಶ್ವರ ಹೆಗಡೆ- ಗೋಪಿ ಹೆಗಡೆ ದಂಪತಿಯ ಸುಪುತ್ರರಾಗಿ ಜನಿಸಿದ ಸುಬ್ರಾಯ ಹೆಗಡೆಯವರ ವಿದ್ಯಾಭ್ಯಾಸ ಹತ್ತನೆ ತರಗತಿಯವರೆಗೆ, ಹದಿನಾರರ ಹರೆಯದಲ್ಲೇ ಯಕ್ಷಗಾನದ ಗಾನಬದುಕಿಗೆ ಮನ ಮಾಡಿದರು.

ತಂದೆ ತಾಯಿಗಳ ಪ್ರೋತ್ಸಾಹ-ಪ್ರೇರಣೆಯೇ ಸುಬ್ರಾಯಹೆಗಡೆಯವರ ರಂಗಜೀವನಕ್ಕೆ ಮಾರ್ಗಮಣಿದೀಪವಾಯಿತು. ವೃತ್ತಿ ಬದುಕಿನ ಗಾಯನ ದ್ರುಮಕ್ಕೆ ಮರವಂತೆ ನರಸಿಂಹದಾಸರು, ನಾರ್ಣಪ್ಪ ಉಪ್ಪರರು ಹಾಗೂ ಶಿವರಾಮ ಹೆಗಡೆಯವರು ನೀರೆರೆದು ಪೋಷಿಸಿದರು. ಗಣಪತಿ ಹೆಗಡೆ ಹಾಗೂ ಕೆರೆಮನೆ ಮಹಾಬಲ ಹೆಗಡೆಯವರು ಇವರಿಗೆ ಗುರುಗಳಾಗಿ ಬೆಂಬಲಿಸಿದರು.

ಗುಂಡುಬಾಳ 18, ಇಡಗುಂಜಿ 12, ಅಮೃತೇಶ್ವರಿ 8, ಕಮಲಶಿಲೆ 1, ಸಾಲಿಗ್ರಾಮ 1, ಬಚ್ಚಗಾರು 1, ಪಂಚಲಿಂಗ 4, ಹೀಗೆ 45 ವರ್ಷಗಳ ಸುದೀರ್ಘ ಕಲಾವ್ಯವಸಾಯದಲ್ಲಿ ಸುಬ್ರಾಯ ಹೆಗಡೆಯವರು ವಿಶೇಷ ಕೀರ್ತಿಗೆ ಭಾಜನ-ರಾಗಿದ್ದಾರೆ. ಶ್ರೀಯುತರು ಒಬ್ಬ ಶ್ರೇಷ್ಠ ಭಾಗವತ ಮಾತ್ರವಲ್ಲ. ಇವರಿಗೆ ಚಂಡೆ- ಮದ್ದಳೆವಾದನದ ಪರಿಣಿತಿಯೂ ನೃತ್ಯಾಭಿನಯದ ಕಲೆಯೂ ತಿಳಿದಿದೆ. ಹಾಗಾಗಿ ಇವರು ಯಕ್ಷಗಾನರಂಗದ ಸರ್ವಾಂಗೀಣ ಕಲಾವಿದರು. ವೇಷಧಾರಿಯಾಗಿ ಅರ್ಜುನ, ಬಲರಾಮ, ವಿಜಯವರ್ಮ, ನಾರದ ಮೊದಲಾದ ಪಾತ್ರಗಳನ್ನೂ ನಿರ್ವಹಿಸಿದವರು.

ಸುಬ್ರಾಯ ಹೆಗಡೆಯವರ ತಾಳಗತಿಯಲ್ಲಿನ ಪರಿಶುದ್ಧತೆ, ಎದ್ದು ಕಾಣುವ ಲಯಬದ್ಧತೆ, ಕಲಾವಿದರನ್ನು ರಂಗದಲ್ಲಿ ಬಳಸಿಕೊಳ್ಳುವ ಕಲಾ ತಾಂತ್ರಿಕತೆ, ಪ್ರಸಂಗ ನಿರ್ದೇಶನ ಶಕ್ತತೆ ಸುಯೋಗ್ಯ ಭಾಗವತನ ಸ್ಥಾನ-ಮಾನ್ಯತೆಯನ್ನು ಗೊತ್ತು ಪಡಿಸುತ್ತದೆ. ಇವರ ಪೌರಾಣಿಕ ಜ್ಞಾನ ಅಪಾರ. ಗಂಭೀರ ಸ್ವರಸಂಚಾರದಲ್ಲಿ ರಂಗಕ್ಕೆ ಬಿಸಿ ತುಂಬುವ ಅದ್ಭುತ ಚೈತನ್ಯ ಇವರಿಗಿದೆ. ಸುಬ್ರಾಯ ಭಾಗವತರ ನೂರಾರು ಶಿಷ್ಯರು ಯಕ್ಷಗಾನ ಕ್ಷೇತ್ರದಲ್ಲಿ ಮಹೋನ್ನತ ಪ್ರತಿಭೆಗಳಾಗಿ ವಿಜೃಂಭಿಸುತ್ತಿದ್ದಾರೆ. ಪ್ರಸ್ತುತ ಶ್ರೀಯುತರು ಉಮಾಮಹೇಶ್ವರ ಹಾಗೂ ಸದ್ಗುರು ದಯಾಶ್ರಿತ ಯಕ್ಷಗಾನ ಸಂಸ್ಥೆಗಳಲ್ಲಿ ತಾಳಮದ್ದಳೆ ಭಾಗವತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಧರ್ಮಪತ್ನಿ ಹೇಮಾ. ಈಶ್ವರಚಂದ್ರ, ಫಣೀಂದ್ರ ಮಕ್ಕಳು. ಶ್ರೀಯುತರನ್ನು ಹಲವಾರು ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ಉಡುಪಿ ಯಕ್ಷಗಾನ 'ಕಲಾರಂಗ'ದ ಭಾಗವತ ನಾರ್ಣಪ್ಪ ಉಳ್ಳೂರು ಪ್ರಶಸ್ತಿ ಸೇರಿದಂತೆ ಹಲವು ಸಮಾನ ದೊರಕಿರುತ್ತದೆ.



ಸುಕ್ರಪ್ಪ ನಾಯ್ಕ, ಬಾಡ

ಹುಬ್ಬಣಗೇರಿ – ಅಂಚೆ, ಕುಮಟಾ ತಾಲೂಕು,
ಕಾರವಾರ ಜಿಲ್ಲೆ
ದೂರವಾಣಿ : 08386 261821

ಯಕ್ಷಲೋಕದ ವೀರ ವಾದ್ಯವೆನಿಸಿದ ಚಂಡೆಯ ಮಾಧುರಪೂರ್ಣ ನುಡಿತದಲ್ಲಿ ಸಿದ್ಧ ಹಸ್ತರಾದ ಅನುಭವಿ ಹಿರಿಯ ಚಂಡೆವಾದಕ ಬಾಡ ಸುಕ್ರಪ್ಪ ನಾಯ್ಕ.

ಉತ್ತರಕನ್ನಡದ ಬಾಡ-ಹುಬ್ಬಣಗೇರಿ ಎಂಬಲ್ಲಿ 23-3-1945ರಲ್ಲಿ ನಾರಾಯಣ ನಾಯ್ಕ - ಮಹಾಸತಿ ದಂಪತಿಯ ಸುಪುತ್ರರಾಗಿ ಜನಿಸಿದ ಇವರು ಬಾಲ್ಯದಿಂದಲೇ ಕಲಾಸಕ್ತಿಯನ್ನು ಮೈಗೂಡಿಸಿಕೊಂಡವರು. ಏಳನೇ ತರಗತಿಯ ವರೆಗಿನ ಶೈಕ್ಷಣಿಕ ಹಂತವನ್ನು ಪೂರೈಸಿ ಕಡುಬಡತನದ ರೈತಾಪಿ ಕುಟುಂಬದ ಸುಕ್ರಪ್ಪನವರು 24ನೇ ವಯಸ್ಸಿನಲ್ಲಿ ಬಣ್ಣದ ಜೀವನಕ್ಕೆ ಮುಂದಾದರು.

ಇವರ ತಂದೆಯವರು ಹಾಗೂ ಅಣ್ಣ ಚಂಡೆ ಮದ್ದಳೆ ವಾದಕರಾಗಿದ್ದರು. ಅವರೇ ಇವರಿಗೆ ರಂಗಬದುಕಿಗೆ ಪ್ರೇರಣೆ ಪ್ರೋತ್ಸಾಹ ನೀಡಿದರು. ತಂದೆಯಿಂದಲೇ ಚಂಡೆವಾದನ ಕಲಿತ ಸುಕ್ರಪ್ಪನವರು 1973ರಲ್ಲಿ ಕೋಟ ಹಿರೇ ಮಹಾಲಿಂಗೇಶ್ವರ ದೇವಳದ ಕಲಾಗರಡಿಯನ್ನು ಸೇರಿ ಭಾಗವತ ನಾರ್ಣಪ್ಪ ಉಪ್ಪರ, ದುರ್ಗಪ್ಪ ಗುಡಿಗಾರರಿಂದ ಹೆಚ್ಚಿನ ರಂಗಪರಿಣತಿ ಸಾಧಿಸಿದರು. ಕಾಳಿಂಗನಾವಡರ ಮೂಲಕ ವೃತ್ತಿಮೇಳಕ್ಕೆ ಸೇರ್ಪಡೆಯಾದರು.

ಕುಮಟಾ 12, ಮೂಲ್ಕಿ 3, ಬಚ್ಚಗಾರು 3, ಕುಮಟಾ (ಡೇರೆ) 2, ಹಾಲಾಡಿ 2, ಕಮಲಶಿಲೆ 1, ಬಗ್ವಾಡಿ 3, ಗೋಳಿಗರಡಿ 2, ಕಳವಾಡಿ 3, ನಾಗರಕೊಡಿಗೆ 2, ಅಮೃತೇಶ್ವರಿ 7, ಹೀಗೆ ನಾಲ್ಕು ದಶಕಗಳ ಅವರ ರಂಗವ್ಯವಸಾಯ ಸಾರ್ಥಕವಾಗಿದೆ. ನಯವಾದ ನುಡಿತ ಶೈಲಿ, ಪ್ರಸಂಗದ ಸನ್ನಿವೇಶ ಸಂದರ್ಭ, ಕಾಲ-ಪಾತ್ರವರಿತ ಅವರ ವಾದನ ಕ್ರಮ, ಪದ್ಯಸಾಹಿತ್ಯ ಸ್ಪಷ್ಟವಾಗಿ ಕೇಳಿಸುವಂತೆ ಚಂಡೆಬಾರಿಸುವ ಗುಣ ಅವರ ಕಲಾವ್ಯಕ್ತಿತ್ವದಲ್ಲಿ ಕಂಡು ಬರುತ್ತದೆ. ಗಾಯನ ಹಾಗೂ ಮದ್ದಳೆವಾದನಕ್ಕೆ ನ್ಯೂನವಾಗದಂತೆ ಪೂರಕವಾಗಿದ್ದು, ಮಾರ್ದವತೆಯ ನರುಗಂಪು ಹೊರಸೂಸುವ ಅವರ ಚಂಡೆಗಾರಿಕೆ ಅನುಭವಿಕ- ವಾದದ್ದು.

ಉತ್ತಮ ಚಂಡೆವಾದಕರಾದ ಸುಕ್ರಪ್ಪನವರಿಗೆ ಮದ್ದಳೆಗಾರಿಕೆಯೂ ಗೊತ್ತು. ವೃತ್ತಿಜೀವನದ ಬಿಡುವಿನ ಅವಧಿಯಲ್ಲಿ ಅವರು ಕೃಷಿಕರ್ಮದಲ್ಲಿ ತೊಡಗುತ್ತಾರೆ. ಮಡದಿ ಮಹಾದೇವಿ, ರವಿಕಾಂತ, ವೀಣಾ, ವಿದ್ಯಾ, ಸರೋಜಾ, ಶ್ರೀಧರ ಮಕ್ಕಳು. ಶ್ರೀಯುತರು ಹುಟ್ಟೂರ ಸಂಮಾನ, ಅಮೃತೇಶ್ವರಿ ಮೇಳದಲ್ಲಿ ಗೌರವ ಪುರಸ್ಕಾರ ಪಡೆದಿರುತ್ತಾರೆ.



ಸುರೇಶ ಬಂಗೇರ, ಕೋಟ

*ಕೋಟತಟ್ಟು ಪೋಸ್ಟ್, ಮಣೂರು ಪಡುಕರೆ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ 98807 20810*

ಬಡಗುತಿಟ್ಟಿನ ಸಾಂಪ್ರದಾಯಿಕ ಶೈಲೀಕೃತ ಭವ್ಯತೆಯನ್ನು ಪಾತ್ರಗಳ ಮೂಲಕ ಜೀವಂತವಾಗಿ ತೆರೆದಿಡುವ ಮಧ್ಯಮತಿಟ್ಟಿನ ಸಮರ್ಥ ಕಲಾವಿದ ಕೋಟ ಸುರೇಶ ಬಂಗೇರ,

ಉಡುಪಿ ತಾಲೂಕಿನ ಮಣೂರು-ಪಡುಕರೆ ಎಂಬಲ್ಲಿ 1965ರಲ್ಲಿ ಜನಿಸಿದ ಸುರೇಶ ಬಂಗೇರ ಅವರು ಮಣೂರು ಬೇಡು ಮರಕಾಲ-ಅಕ್ಕಮ್ಮ ದಂಪತಿಯ ಸುಪುತ್ರ 5ನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ಮಾಡಿದ ಸುರೇಶ ಬಂಗೇರ ಅವರು ತನ್ನ 16ನ ಹರೆಯದಲ್ಲೇ ಬಣ್ಣದ ಬದುಕು ಕಂಡರು. ಪ್ರಸಿದ್ಧ ಕಲಾವಿದ ಶಿರಿಯಾರ ಮಂಜುನಾಯ್ಕರ ಹೂವಿನಕೋಲು ತಿರುಗಾಟದ ಬಾಲಕಲಾವಿದನಾಗಿ ಶಿರಿಯಾರರ ನಿಕಟಸಂಪರ್ಕವನ್ನು ಸಾಧಿಸಿ ಪ್ರೌಢ ಅರ್ಥಗಾರಿಕೆ, ರಂಗನಡೆ, ನೃತ್ಯಾಭಿನಯ ಕೌಶಲವನ್ನು ಕಂಡುಕೊಂಡು ತನ್ನ ಕಲಾನುಭವವನ್ನು ಗರಿಷ್ಠ ಮಟ್ಟದಲ್ಲಿಟ್ಟುಕೊಂಡ ಕಲಾವಿದ.

ಮೊಳಹಳ್ಳಿ ಹೆರಿಯನಾಯ್ಕರ ಗುರುತನವೂ ಶ್ರೀಯುತರನ್ನು ಸುಯೋಗ್ಯ ಕಲಾವಿದನನ್ನಾಗಿ ರೂಪಿಸುವಲ್ಲಿ ಶಕ್ತವಾಗಿದೆ. ಮಂದಾರ್ತಿ 7, ಸೌಕೂರು 17, ಸಾಲಿಗ್ರಾಮ 2, ಕಮಲಶಿಲೆ 3, ಅಮೃತೇಶ್ವರಿ 2, ಪೆರ್ಡೂರು 2, ಹೀಗೆ ಬಂಗೇರರ ಕಲಾವ್ಯವಸಾಯ 33 ವರ್ಷ ಪ್ರಸ್ತುತ ಸುರೇಶ ಬಂಗೇರರು ಸೌಕೂರು ಮೇಳದ ಕಲಾವಿದರು.

ಬಡಗುತಿಟ್ಟಿನ ಪುರುಷವೇಷಗಳ ಸಾಂಪ್ರದಾಯಿಕ ಸೊಗಸು ಮೈತುಂಬಿ ಕೊಂಡ ಸುರೇಶ ಅವರ ಪರಿಶುದ್ಧವಾದ ನೃತ್ಯಾಭಿನಯ ವೈಖರಿ, ಆಕರ್ಷಕ ಆಳಂಗ, ಪ್ರಗಲ್ಭ ಪಾಂಡಿತ್ಯ, ನಿರರಳ ವಚೋವಿಲಾಸ, ನಿರ್ವಹಣಾ ಭೂಮಿಕೆಗಳಿಗೆ ಪ್ರಾಣ ಶಕ್ತಿ ನೀಡುತ್ತವೆ.

ಶ್ರೀಯುತರ ಸುಧನ್ವ, ಪುಷ್ಕಳ, ಮಾರ್ತಾಂಡತೇಜ, ಅರ್ಜುನ, ದೇವವ್ರತ, ವತ್ಸಾಖ್ಯ ಚಂದ್ರಹಾಸ ಮೊದಲಾದ ಭೂಮಿಕೆಗಳು ಪೌರಾಣಿಕತೆಯ ಸಚೇತನ ರಂಗಪ್ರತಿಮೆಗಳಾಗುತ್ತವೆ.

ಪತ್ನಿ ಸುಶೀಲಾ, ಪುತ್ರ ಸುರಕ್ಷಾ ಅವರೊಂದಿಗೆ ಕೋಟ ಪಡುಕರೆಯಲ್ಲಿ ವಾಸವಾಗಿರುವ ಅನುಭವಿ ಯುವ ಕಲಾವಿದ ಸುರೇಶ ಬಂಗೇರ ಇವರಿಗೆ ಹಲವು ಸಂಮಾನಗಳು ದೊರಕಿವೆ.



**ಸುರೇಶ ಶೆಟ್ಟಿ, ಶಂಕರನಾರಾಯಣ**

*ಸಂಕಾಪುರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ 94800 34652*

ಇಂಪಾದ ಸುಖಸ್ವರಸಂಪತ್ತಿಕೆಯಲ್ಲಿ ಮುಮ್ಮೇಳದ ಕಲಾಭಿವ್ಯಕ್ತಿಗೆ ಸೊಂಪಾದ ಕಳೆನೀಡುವ ಯುವ ಭಾಗವತ ಸುರೇಶ ಶೆಟ್ಟಿ ಶಂಕರನಾರಾಯಣ.

ಕುಂದಾಪುರ ತಾಲೂಕಿನ ಶಂಕರನಾರಾಯಣ ಎಂಬ ಪುಟ್ಟ ಹಳ್ಳಿಯಲ್ಲಿ 17-02-1967 ರಲ್ಲಿ ಜನಿಸಿದ ಸುರೇಶ ಶೆಟ್ಟರು ಶಿವರಾಮಶೆಟ್ಟಿ-ಕುಸುಮಾವತಿ ದಂಪತಿಯ ಸುಪುತ್ರ 8ನೇ ಇಯತ್ತೆಗೆ, ಅಕ್ಷರ ಮಂಗಳ ಹಾಡಿ, 14ನೇ ವಯಸ್ಸಿನಲ್ಲೇ ಯಕ್ಷಗಾನ ಲೋಕದ ಜೀವನಯಾತ್ರೆಗೆ ಶ್ರೀಕಾರ ಹಾಡಿದ ಶೆಟ್ಟರು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಸಶಕ್ತ ಶಿಕ್ಷಣವನ್ನು ಪಡೆದರು.

ತಂದೆ ತಾಳ ಮದ್ದಳೆ ಅರ್ಥಧಾರಿಯಾಗಿರುವುದರಿಂದ ಬಾಲಕ ಸುರೇಶನಿಗೆ ಎಳವೆಯಲ್ಲೇ ಕಲಾಜ್ಞಾನ ಪ್ರಾಪ್ತವಾಯಿತು. ಹಿರಿಯ ಭಾಗವತ ಕೆ.ಪಿ.ಹೆಗಡೆಯವರ ಗುರುತನ, ಮಾರ್ಗದರ್ಶನದಲ್ಲಿ ಶ್ರೀಯುತರು ಸಮರ್ಥ ಭಾಗವತರಾಗಿ ರೂಪುಗೊಂಡರು. ಉತ್ತಮ ನೃತ್ಯಪಟುವೂ ಆಗಿರುವ ಸುರೇಶ ಶೆಟ್ಟರು ವೇಷ- ಧಾರಿಯಾಗಿ ರಂಗಮಂಚದಲ್ಲಿ ಕುಣಿದು ಮೆರೆದವರು. ಯಾವುದೇ ಶ್ರುತಿಯಲ್ಲೂ ಭಾವಪೂರ್ಣವಾಗಿ, ಲೀಲಾಜಾಲವಾಗಿ ಶಾರೀರ ತೊಡಗಿಸುವ ಶೆಟ್ಟರ ಮಧುರ ಗಾನಾಮೃತಧಾರೆ ನಾಡಿನಾದ್ಯಂತ ಪಸರಿಸಿದೆ. ಪೌರಾಣಿಕವಿರಲಿ, ನವ್ಯವಿರಲಿ ಸುರೇಶ ಶೆಟ್ಟರ ಭಾಗವತಿಕೆಯ ವೈಖರಿ ರಸಾತ್ಮಕವಾಗಿ ಸಾಗುತ್ತದೆ.

ಕಮಲಶಿಲೆ 2, ಸಾಲಿಗ್ರಾಮ 2, ಹಾಲಾಡಿ 1, ಪೆರ್ಡೂರು 20, ಹೀಗೆ ಬಣ್ಣದ ಲೋಕದಲ್ಲಿ ಬೆಳ್ಳಿ ಹಬ್ಬವನ್ನು ಯಶಸ್ವಿಯಾಗಿ ಪೂರೈಸಿ ಪ್ರಸ್ತುತ ಅತಿಥಿ ಭಾಗವತರಾಗಿ ಕಲಾಸೇವೆ ಮುಂದುವರಿಸುತ್ತಿದ್ದಾರೆ. ಪತ್ನಿ ಶೃಂಗಾರಿ. ಚಿರಾಗ್, ವಿಪುಲ್ ಮಕ್ಕಳು. ಪ್ರತಿಭಾನ್ವಿತ ಭಾಗವತ ಸುರೇಶ ಶೆಟ್ಟರನ್ನು ಹಲವಾರು ಸಂಘ-ಸಂಸ್ಥೆಗಳು ಗುರುತಿಸಿ ಸಂಮಾನಿಸಿವೆ.



ಸುರೇಂದ್ರ, ಆಲೂರು

*ಅಂಚೆ : ಆಲೂರು, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*

ಶಾಸ್ತ್ರೋಕ್ತ ಯಕ್ಷವಿದ್ಯಾ ಪ್ರೌಢಿಮೆಯಲ್ಲಿ ನಡುತಿಟ್ಟಿನ ದೃಢವಾದ ಶೈಲಿಯನ್ನು ರಂಗಮಂಚದಲ್ಲಿ ಪಡಿಮೂಡಿಸುವ ಪ್ರತಿಭಾನ್ವಿತ ಯಕ್ಷನಟ ಆಲೂರು ಸುರೇಂದ್ರ.

ಬಡಗಿನ ಸಮರ್ಥ ಪುರುಷವೇಷಧಾರಿಯಾಗಿ, ಪುಂಡು ವೇಷಧಾರಿಯಾಗಿ ಪೌರಾಣಿಕ ಪಾತ್ರಪ್ರಪಂಚವನ್ನು ಬೆಳಗಿದ ಆಲೂರು ಸುರೇಂದ್ರ ಅವರು ಅಪಾರ ಕಲಾನುಭವವನ್ನು ಕಲಾವ್ಯಕ್ತಿತ್ವದಲ್ಲಿ ಹರಳುಗಟ್ಟಿಸಿಕೊಂಡು ಪ್ರತೀ ಪಾತ್ರಗಳ ಜೀವನಾಡಿ ಮಿಡಿತವನ್ನು ಸಮಗ್ರವಾಗಿ ಅರಿತು ವ್ಯವಹರಿಸುವ ಸಂಪನ್ನ ಪ್ರತಿಭೆ.

ಕುಂದಾಪುರ ತಾಲೂಕಿನ ಆಲೂರು ಎಂಬಲ್ಲಿ 1960ರಲ್ಲಿ ಗೋಪಾಲ-ಸಿದ್ದು ದಂಪತಿಯ ಸುಕುಮಾರನಾಗಿ ಜನಿಸಿದ ಸುರೇಂದ್ರ ಬಾಲ್ಯದಲ್ಲಿಯೇ ಯಕ್ಷಕಲಾಸಕ್ತಿಯನ್ನು ಅನ್ಯಾದೃಶವಾಗಿ ಮೈತುಂಬಿಸಿಕೊಂಡವರು.

ಹಿರಿಯ ಕಲಾವಿದ ಕೊಪ್ಪಾಟೆ ಮುತ್ತಗೌಡರ ಗುರುತನ ಹಾಗೂ ಪ್ರೇರಣೆ ಪಡೆದು ತನ್ನ 13ರ ಹರೆಯದಲ್ಲೇ ಯಕ್ಷಗಾನ ಬಣ್ಣ-ನೂಪುರದ ಬೆಡಗಿಗೆ ಮನಸೋತ ಇವರು ಸೋದರ ಮಾವ ಆಲೂರು ತೇಜ ಅ ವ ರ ಹಾರ್ದಿಕ ಪ್ರೋತ್ಸಾಹ, ರಂಗಮಾರ್ಗದರ್ಶನದಲ್ಲಿ ಸಮರ್ಥ ಕಲಾವಿದನಾಗಿ ರೂಪು-ಗೊಂಡವರು.

ಮಾರಣಕಟ್ಟೆ 24, ಕಮಲಶಿಲೆ 8, ಸೌಕೂರು 3, ಹೀಗೆ ಮೂರು ಮೇಳಗಳಲ್ಲೇ 35 ವರ್ಷ ಕಲಾವ್ಯವಸಾಯ ಪೂರೈಸಿದ್ದಾರೆ. ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ದುಡಿಯುತ್ತಿದ್ದಾರೆ. ಐವತ್ತರ ವಯಸ್ಸಿನ ಆಲೂರು ಸುರೇಂದ್ರ ವೇಷಹಾಕಿದರೆ ರಂಗಮಂಚದಲ್ಲಿ ಹದಿನೆಂಟರ ತರುಣನಾಗಿ ಬೆರಗು ಹುಟ್ಟಿಸುತ್ತಾರೆ. ಪುಂಡುವೇಷಗಳಲ್ಲಿ ಅವರು ಕಾಣಿಸುವ ವಿಶೇಷ ಚುರುಕು ನಡೆಯ ನೃತ್ಯವೈಖರಿ, ಪುರುಷ ಪಾತ್ರಗಳಲ್ಲಿ ತೋರುವ ಪೌರುಷೇಯ ವರ್ಚಸ್ಸು ಕಲಾರಸಿಕರ ಮನ ತುಂಬಿದೆ.

ಶ್ರೀಯುತರ ಸುಧನ್ವ, ಪುಷ್ಕಳ, ದೇವವ್ರತ, ಬಬ್ರುವಾಹನ, ಅಭಿಮನ್ಯು, ಯಯಾತಿ, ಪಾತ್ರಗಳು ಜನಪ್ರಿಯ.

ಸುಸಮರ್ಥ ಗುರುವಾಗಿಯೂ ಅನೇಕ ಪ್ರತಿಭಾವಂತ ಶಿಷ್ಯಕಲಾವಿದರನ್ನು ಯಕ್ಷಲೋಕಕ್ಕೆ ನೀಡಿದ ಇವರ ಬಾಳ ಸಂಗಾತಿ ಸಿಂಗಾರಿ, ನಾಲ್ವರು ಮಕ್ಕಳು. ಆಲೂರು ಸುರೇಂದ್ರ ಅವರನ್ನು ಹಲವು ಸಂಘಸಂಸ್ಥೆಗಳು ಗೌರವಿಸಿವೆ.



ಹೆರಿಯ ನಾಯ್ಕ, ಮೊಗೆಬೆಟ್ಟು

ತಂತಿ: 'ಕಲಾವಿದ', ಬೇಳೂರು ಗ್ರಾಮ,
ಅಂಚೆ : ದೇವಸ್ಥಾನಬೆಟ್ಟು, ಕುಂದಾಪುರ ತಾಲೂಕು,
ದೂರವಾಣಿ : 99804 62985

ಕಲಾರಾಧನೆಯನ್ನೇ ಉಸಿರಾಗಿಸಿ, ಛಲವನ್ನೇ ಬದುಕಿನ ಬಂಡವಾಳ -ವಾರಿಸಿಕೊಂಡು ವರ್ಣರಂಜಿತ ವೇಷವೈವಿಧ್ಯದಲ್ಲಿ ಗುರುತಿಸಲ್ಪಟ್ಟ ಹಿರಿಯ ಕಲಾವಿದ ಮೊಗೆಬೆಟ್ಟು ಹೆರಿಯನಾಯ್ಕ.

ಯಕ್ಷಗಾನದ ಆಡುಂಬೊಲವಾದ ಕುಂದಾಪುರ ತಾಲೂಕಿನ ಬೇಳೂರು ಗ್ರಾಮವಾದ ಮೊಗೆಬೆಟ್ಟು ಎಂಬಲ್ಲಿ ಜನಿಸಿದ ಶ್ರೀಯುತರು 58ರ ಹಿರಿತನದಲ್ಲಿ ಬೆಳೆದು ನಿಂತಿದ್ದಾರೆ. ಇವರ ತಂದೆ ಮೊಗೆಬೆಟ್ಟು ವೀರ ನಾಯ್ಕ ತಾಯಿ ಚಂದಮ್ಮ ಮೊಗೇರ್ತಿ.

ಹೆರಿಯನಾಯ್ಕ ಅವರ ಹಸಿದಹೊಟ್ಟೆ ಅವರನ್ನು 3ನೇ ತರಗತಿಯಿಂದ ಹೊರದಬ್ಬಿತು. ಸುತ್ತ ಮುತ್ತ ಜರುಗುತ್ತಿದ್ದ ಯಕ್ಷಗಾನ ದೀವಟಿಗೆ ಬೆಳಕಿನಾಟ ಕೈಬೀಸಿ ಹತ್ತಿರ ಕರೆಯಿತು. ತನ್ನ 16ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ನಾಯ್ಕರು 1970ರ ದಶಕದಲ್ಲಿ ಕೋಟದ ಯಕ್ಷಗಾನ ಕಲಿಕಾಕೇಂದ್ರಕ್ಕೆ ಸೇರಿ ಅಲ್ಲಿ ನಾರ್ಣಪ್ಪ ಉಪ್ಪರರಿಂದ ತಾಳದೀಕ್ಷೆ ಪಡೆದರು. ಹಿರಿಯ ಮದ್ದಳೆಗಾರ ತಿಮ್ಮಪ್ಪ ನಾಯ್ಕರಲ್ಲಿ ಸಂಪ್ರದಾಯ ನೃತ್ಯ ಶಿಕ್ಷಣ ಹೊಂದಿದರು. ಕಿರಿಯ ವಯಸ್ಸಿನಲ್ಲೇ ಮಂದಾರ್ತಿ ಮೇಳಕ್ಕೆ ಸೇರಿದ ಹಿರಿಯನವರು ಅಲ್ಲಿ ಸಂಗೀತಗಾರರಾಗಿ ರಾಜ ವೇಷಧಾರಿಯಾಗಿ ಸೇವೆ ಸಲ್ಲಿಸಿದರು.

ಮಂದಾರ್ತಿ 4, ಮಾರಣಕಟ್ಟೆ 4, ಅಮೃತೇಶ್ವರಿ 5, ರಂಜದಕಟ್ಟೆ 3, ಹೀಗೆ 16 ವರ್ಷಗಳ ಕಾಲ ರಂಗಕೃಷಿ ನಡೆಸಿ ಪ್ರಸ್ತುತ ವಿಶ್ರಾಂತ ಜೀವನದಲ್ಲಿದ್ದಾರೆ. ದೈಹಿಕ ಅನಾರೋಗ್ಯದ ನಿಮಿತ್ತ ವೃತ್ತಿಮೇಳ ತೊರೆದ ನಾಯ್ಕರು ಕಲೆಯನ್ನು ಕೈ ಬಿಡಲಿಲ್ಲ. ಸುತ್ತ ಮುತ್ತಲಿನ ಕಲಾಸಕ್ತರನ್ನು ಸಂಘಟಿಸಿ, ಕಲಾಪ್ರತಿಭೆಯನ್ನು ನೇರ್ಮಗೊಳಸಿದರು. ಚಿಕ್ಕುಹ್ಯಾಗುಳಿ ಯಕ್ಷಗಾನ ಸಂಘ, ಮೊಗೆಬೆಟ್ಟು, ಸಕ್ಕಟ್ಟು ಮಹಾಗಣಪತಿ ಯಕ್ಷಗಾನ ಮಂಡಳಿ, ಚಟ್ಟರೆ ಕಲ್ಲು-ನೂಜಿ ಸಿದ್ಧಿವಿನಾಯಕ ಕಲಾಸಂಘ ಸ್ಥಾಪಿಸಿ ಅನೇಕ ಕಲಾವಿದರನ್ನು ಬೆಳಕಿಗೆ ತಂದರು.

ಯಕ್ಷಗಾನ ರಂಗಭೂಮಿಯಲ್ಲಿ ರಾಜವೇಷ, ಪುರುಷವೇಷ, ಬಣ್ಣದ ವೇಷ, ಸ್ತ್ರೀವೇಷ, ಕಿರಾತವೇಷ, ಹಾಸ್ಯ ಸೇರಿದಂತೆ ಸರ್ವವೇಷ ವೈವಿಧ್ಯದಲ್ಲೂ ಕಾಣಿಸಿ ಕೊಂಡ ನಾಯ್ಕರು ಶತ್ರುಘ್ನ, ದೇವೇಂದ್ರ, ಮಹಿಷಾಸುರ, ಶ್ರೀಕೃಷ್ಣ,

ಅರ್ಜುನ, ಕರಾಳನೇತ್ರೆ, ವೃತ್ರ ಜ್ವಾಲೆ, ಶೂರಪದ್ಮಾಸುರ, ಕುಳಿಂದ, ಕಮಲಭೂಪ, ಪರಶುರಾಮ ಮೊದಲಾದ ಪುರಾಣ ಭೂಮಿಕೆಗಳಿಗೆ ತನ್ನದೇ ಕಲಾವರ್ಚಸ್ಸು ನೀಡಿದ್ದಾರೆ. ಶ್ರೀಯುತರು ಸುಮಾರು 15 ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಕಲಾತ್ಮಕ ಪ್ರಸಂಗಕರ್ತರಾಗಿಯೂ ಪ್ರಸಿದ್ಧರು.

ಶ್ರೀಯುತರ ಧರ್ಮಪತ್ನಿ ಗುಲಾಬಿ, ಓರ್ವ ಸುಮತ್ರ ಎಂ. ಎಚ್. ಪ್ರಸಾದ್ ಕುಮಾರ್ ಇವರು ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಪ್ರತಿಭಾನ್ವಿತ ಕಲಾವಿದನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ| ಜಿ. ಶಂಕರ್ ಟ್ರಸ್ಟ್ ಪ್ರಶಸ್ತಿಯು ಸೇರಿ ಹಲವು ಗೌರವ ಸಂಮಾನ ದೊರಕಿರುತ್ತದೆ.



**ಹೆರಿಯ ನಾಯ್ಕ, ಮೊಳಹಳ್ಳಿ**

*ಅಂಚೆ : ಕೋಟತಟ್ಟು, ಮಣೂರು ಗ್ರಾಮ,*
*ಉಡುಪಿ ತಾಲೂಕ/ಜಿಲ್ಲೆ*
*ದೂರವಾಣಿ: 0820 2565658*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಪರಂಪರೆಯ ಹಿರಿತನದಲ್ಲಿ ಮೆರೆಯುವ ಪ್ರತಿಭಾಸಂಪನ್ನ ಹಿರಿಯ ಕಲಾವಿದ ಮೊಳಹಳ್ಳಿ ಹೆರಿಯ ನಾಯ್ಕ.

ಸಾಂಪ್ರದಾಯಿಕತೆಯ ಸೊಗಡಿನಲ್ಲಿ ಪುರಾಣ ಪಾತ್ರಗಳಿಗೆ ಪ್ರಾಣಪ್ರತಿಷ್ಠೆ ನೀಡುವ ಮೊಳಹಳ್ಳಿ ಹೆರಿಯನಾಯ್ಕರು, ಚಿಕ್ಕ ಮರಕಾಲ-ಮುತ್ತು ಮರಕಾಲ್ತಿ ದಂಪತಿಯ ಸುಪುತ್ರರಾಗಿ, ಕುಂದಾಪುರದ ಮೊಳಹಳ್ಳಿ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಇದೀಗ 73ವರ್ಷದ ಹಿರಿಯನಾಗಿ ಕಲಾಸೇವೆಯಲ್ಲಿದ್ದಾರೆ. ಶ್ರೀಯುತರ ಶೈಕ್ಷಣಿಕ ಹಂತ ಮೂರು. ಆದರೆ ಯಕ್ಷಗಾನ ರಂಗಭೂಮಿಯ ಇವರ ಮೇರು ಪ್ರತಿಭೆಗೆ ಸಲ್ಲುವ ಅಂಕ ನಿಜಕ್ಕೂ ನೂರಕ್ಕೆ ನೂರು!

ಬಾಲ್ಯದಿಂದಲೇ ಕಲೆಯ ನಂಟನ್ನು ಅಂಟಿಸಿಕೊಂಡ ಹೆರಿಯ ನಾಯ್ಕರಿಗೆ ಬಡತನವೇ ಕಲಾಬಾಳುವೆಗೆ ಪ್ರೇರಣೆಯಾಯಿತು. ಹಿರಿಯ ಭಾಗವತ ನಾರ್ಣಪ್ಪ ಉಪ್ಪರ, ಮದ್ದಳೆಗಾರ ಬೇಳಂಜೆ ತಿಮ್ಮಪ್ಪನಾಯ್ಕರ ಗುರುತನದಲ್ಲಿ ಕಲಾ ಮಾರ್ಗದರ್ಶನವಾಯಿತು.

ತನ್ನ 16ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ನಾಯ್ಕರು ಮತ್ತೆ ಹಿಂತಿರುಗಿ ಕಂಡದ್ದಿಲ್ಲ. ಮಂದಾರ್ತಿ (20) ಮಾರಣಕಟ್ಟೆ (16) ಸೌಕೂರು (3), ಹಾಲಾಡಿ (3) ಕಮಲಶಿಲಿ (1), ಅಮೃತೇಶ್ವರಿ (5), ಸಾಲಿಗ್ರಾಮ (1), ಪೆರ್ಡೂರು (1), ರಾಜರಾಜೇಶ್ವರಿ (1), ಕೊಲ್ಲೂರು (1), ಗೋಳಿಗರಡಿ (1), ಒಟ್ಟು ಇವರ ಮೇಳದ ತಿರುಗಾಟ ಸುಮಾರು 57 ವರ್ಷ. ಈಗಲೂ ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕುತ್ತಿರುವ ವೃತ್ತಿನಿಷ್ಠ ಶ್ರೇಷ್ಠ ಕಲಾವಿದ.

ಬಡಗಿನ ಘಟಾನುಘಟಿ ಕಲಾವಿದರ ಒಡನಾಟವನ್ನು ಹೊಂದಿದ ನಾಯ್ಕರು ಅಪಾರ ಕಲಾನುಭವದ ಯಕ್ಷಕಲಾ ಕಣಜ. ಇವರ ಸುಧನ್ವ, ಅರ್ಜುನ, ಯಯಾತಿ, ತಾಮ್ರಧ್ವಜ, ಋತುಪರ್ಣ, ಶ್ವೇತಕುಮಾರ, ಮಾರ್ತಾಂಡತೇಜ, ಮೊದಲಾದ ಪಾತ್ರಗಳು ಇಂದಿಗೂ ಅವರ ಛಾಪು ಮುದ್ರೆಯಲ್ಲಿ ಕಲಾಲೋಕದಲ್ಲಿ ಚಿರಸ್ಥಾಯಿ-ಯಾಗುಳಿದಿವೆ. ಮಧ್ಯಮತಿಟ್ಟಿನ, 'ಮಧ್ಯಮ ಪಾಂಡವಿ' ಎಂದೇ ಕರೆಯಬಹುದಾದ ಹೆರಿಯನಾಯ್ಕರ 'ಅರ್ಜುನ' ಪಾತ್ರವಂತೂ ಯಕ್ಷರಂಗದ ಅಮೂಲ್ಯ ಸೊತ್ತಾಗಿ ವಿಜೃಂಭಿಸುತ್ತದೆ.

ಪತ್ನಿ ಬುಡ್ಡು. ವೇದಾವತಿ, ಸುಶೀಲ, ಪ್ರಭಾಕರ, ಉದಯ, ಅಶೋಕ, ಅರುಣ, ಸುಮನಾ, ಪ್ರಕಾಶ, ನವೀನ ಎಂಬ ಒಂಭತ್ತು ಮಂದಿ ಮಕ್ಕಳನ್ನು ಪಡೆದಿದ್ದಾರೆ. ಇವರ ಪುತ್ರ ಉದಯ ಕುಮಾರ್ ಯಕ್ಷಗಾನ ವೃತ್ತಿರಂಗದ ಭರವಸೆಯ ಯುವ ಕಲಾವಿದರು.

ಇವರಿಗೆ 2009ನೇ ಸಾಲಿನ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಯಕ್ಷಗಾನ ಕಲಾರಂಗದ ಪ್ರೊ. ಬಿ. ವಿ. ಆಚಾರ ಪ್ರಶಸ್ತಿ, ಡಾ| ಜಿ. ಶಂಕರ್ ಟ್ರಸ್ಟ್ ಪ್ರಶಸ್ತಿಯೂ ಸೇರಿ ನೂರಾರು ಕಡೆ ಗೌರವ ಸಂಮಾನಗಳು ದೊರಕಿರುತ್ತದೆ.